ಸ್ಥಾಪನೆ : ೧೮೬೫

1918

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೮

ಶ್ರೀ.ಚನ್ನಬಸಪ್ಪನವರು.
(೧೮೬೩–೧೯೪೯)
ಮೊದಲ ಸಂಪುಟ

ಶತಮಾನೋತ್ತರ ಬೆಳ್ಳಿ ಹಬ್ಬ
(ಸಿಲ್ವರ್ ೧೯೮೮ ರಿಂದ)
ವರ್ಷ 1918

ಹೈಸ್ಕೂಲ್ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೫

ಸೂಚನೆ.

ವರ್ಗಣಿಯದರ:—ವರ್ಷಕ್ಕೆ ಮುಂಗಡ ಅಂಚೇ ವೆಚ್ಚ ಸೇರಿ ರೂ. ೧–೮–೦ ಬಿಡಿ ಸಂಚಿಕೆಗೆ ೨ ಆಣೆ.

ಜಾಹಿರಾತಿನ ದರಗಳು:—ಒಂದು ತಿಂಗಳಿನಿಂದ ಮೂರು ತಿಂಗಳುಗಳ ವರೆಗೆ ಇಟ್ಟರೆ ಪ್ರತಿ ತಿಂಗಳಿಗೆ ಒಂದು ಸಾಲಿಗೆ ನಾಲ್ಕು ಆಣೆ. ಆರು ತಿಂಗಳು ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಮೂರು ಆಣೆ, ಒಂದು ವರ್ಷ ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಎರಡು ಆಣೆ. ಜಾಹಿರಾತುಗಳು ಶಾಲಾಪತ್ರಿಕೆಕ್ಕೆ ಒಪ್ಪುವಂಥವಿರಬೇಕು.

ಪತ್ರವ್ಯವಹಾರ:—ಶಾಲಾಪತ್ರಿಕೆಯ ಸಂಬಂಧದ ಪತ್ರವ್ಯವಹಾರವನ್ನು 'ಮ್ಯಾನೇಜರ ಕನ್ನಡ ಶಾಲಾಪತ್ರಿಕೆ' ಈ ವಿಳಾಸದ ಮೇಲೆ ನಡಿಸಬೇಕು. ಬರೆಯತಕ್ಕ ಸಂಗತಿಯನ್ನು ಸುವಾಚ್ಯ ಅಕ್ಷರಗಳಿಂದ ಕಾಗದದ ಒಂದೇ ಮಗ್ಗಲು ಬರೆದು ಕಳಿಸಬೇಕು. ಹಳೇ ಗ್ರಂಥದೊಳಗಿನ ವಿಷಯವನ್ನೇ ಕಳಿಸುತ್ತ ಕೂಡ್ರಬಾರದು. ಅದನ್ನು ಕಳಿಸುವದಾದರೆ, ಹೊಸಪದ್ಧತಿಯಿಂದ ಕಲಸಲಿಕ್ಕೆ ಅನುಕೂಲವಾಗುವ ಹಾಗೆ ಅದಕ್ಕೆ ತಕ್ಕ ರೂಪವನ್ನು ಕೊಟ್ಟಿರಬೇಕು. ಶಿಕ್ಷಣ ಸಂಬಂಧದ ಪ್ರಚಲಿತ ವಿಷಯಗಳು, ಪಾಠದ ಟಿಪ್ಪಣಿಗಳು, ಅನುಭವಿಕ ಶಿಕ್ಷಕರ ಅನುಭವನಗಳು, ಹೊಸಹೊಸ ಶೋಧಗಳು, ಶಿಕ್ಷಣ ಸಂಬಂಧದ ಉಪಯುಕ್ತ ವರ್ತಮಾನಗಳು ಈ ಪತ್ರಿಕೆದಲ್ಲಿ ಬರಲಿಕ್ಕೆ ಅಡ್ಡಿ ಇಲ್ಲ.

ಓದಿರಿ! ತೀವ್ರವೇ!! ಓದಿರಿ!!!

ಉಪೇಂದ್ರಶರ್ಮಾ, ಭಟ್ಟಕೇಶವ, ಕನ್ನಡ ವಾಮನ, ಮೊದಲಾದವರ ನವನವೀನವಾದ ಗದ್ಯಪದ್ಯಕೃತಿಗಳನ್ನು ಒಮ್ಮೆ ಮಾಲಾ ರೂಪದಿಂದ ಮುದ್ರಿಸತಕ್ಕವನಿದ್ದೇನೆ ಬೇಕಾದವರು ಮುಂದಾಗಿ ಒಂದೇ ರೂಪಾಯಿಯನ್ನು ಕಳಿಸಿರಿ. ಇಲ್ಲವೆ ವ್ಹಿ. ಪಿ. ಯನ್ನು ಮಾಡಲು ಪತ್ರಬರೆಯಿರಿ. ಒಂದು ಮಾಲೆಯ ಮೂಲ್ಯವು ೨।೩ ಆಣೆಯಾಗ ಬಹುದು. ಪ್ರತಿಗಳು ಅಷ್ಟಕಷ್ಟೇ, ಹಿಂದಿನಿಂದ ದೂರೆಯಲಾರವು.

ಪತ್ತಾ:—ಕನ್ನಡ ಕೃತಿಮಾಲಾ ಪ್ರಕಾಶಕ, ಕೃ ರಾ. ಸ್ವಾದಿ.
ಕನ್ನಡ ಶಾಲಾ ನಂ॥ ೨. ಬಾಗಲಕೋಟ.

ನಮ್ಮ ಡಿಪೋದಲ್ಲಿ ಕನ್ನಡ ಕ್ರಮಿಕಪುಸ್ತಕಗಳು ಛೆಜ್ಜಿಕೃತ ಗಣಿತಗಳು ಮೂಲಿಕೃತ ನಿಂಬಾಳಕರಕೃತ ಮತ್ತು ನಾಡಿಗೇರಕೃತ ಪುಸ್ತಕಗಳು, ಬಾಲವ್ಯಾಕರಣ ಭೂಮಂಡಲಜ್ಯೋತಿನಿ, ಹಂಟರ ಇತಿಹಾಸ, ನಾಗವರ್ಮ ಛಂದಸ್ಸು, ಗಾಮ್ಬೋಟೇಯರ, ನಿಬಂಧರತ್ನಾವಲಿ, ವ್ಯಾಕರಣಾದಿಯಪಾಠಗಳು, ಮಂಗಳೂರ ಪುಸ್ತಕಗಳು, ಡ್ರಾಯಿಂಗ ಮತ್ತು ಎಕ್ಸರಸಾಯಿಜಪುಸ್ತಕಗಳು, ಡಾಯರಿ ಪಂಚಾಂಗಗಳು ಮುಂತಾದ ಎಲ್ಲತರದ ಪುಸ್ತಕಗಳು ನಮ್ಮಲ್ಲಿ ದೊರೆಯುವವು. ನಿಬಂಧ ಶಿಕ್ಷಣದ ಜೆಲಿ ಹಸ್ನೆರಡು ಆಣೆ ಇದ್ದು, ವಿದ್ಯಾರ್ಥಿಗಳಿಗೆ ಎಂಟು ಆಣೆ.

ಪತ್ತೆ:—ಭೀಮಾಚಾರ್ಯ ಹೊಸೂರು ಸಬ್‌ಸೆಲರ ಧಾರವಾಡ.

ಶಾಲಾಪತ್ರಿಕ.

ಪುಸ್ತಕ ೫೪. | ಜನವರಿ-ಫೆಬ್ರವರಿ. | ಸಂಚಿಕೆ ೧

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ 'ಅವರಡೇ' ಸಂಬಂಧದ ಉತ್ಸವಗಳು.

ತಾರೀಖು ೧೨ನೇ ದಿಸೆಂಬರ ದಿವಸ ಈ ಉತ್ಸವಗಳು ಒಳ್ಳೇ ಸಂಭ್ರಮದಿಂದ ನಡೆದವು. ಈ ದಿವಸ ಪ್ರಾತಃಕಾಲದ ೬ ಘಂಟೆಗೆ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಒಂದೇ ತರದ ಪೋಷಾಕುಗಳನ್ನು ಹಾಕಿಕೊಂಡು ಸಣ್ಣ ನಿಶಾನೆಯನ್ನು ತಮ್ಮ ಅಂಗಿಗೆ ಹಚ್ಚಿಕೊಂಡು ಸಿಂಗಾರಾಗಿ ಡ್ರಿಲ್ಲು ಮಾಡುತ್ತ ತಮ್ಮ ಗುರುಗಳೊಡನೆ ವ್ಯವಸ್ಥಿತ ರೀತಿಯಿಂದ ಮು. ಕಲೆಕ್ಟರ ಸಾಹೇಬರವರ ಬಂಗಲೆಗೆ ಹೋದರು. ಇದೇ ಪ್ರಕಾರ ಗವರ್ನಮೆಂಟ ಹಾಯುಸ್ಕೂಲ, ಫ್ರಿಕ್ವೋರಿಯಾ ಹಾಯುಸ್ಕೂಲ, ಮಿಶನ್ ಹಾಯುಸ್ಕೂಲುಗಳ ವಿದ್ಯಾರ್ಥಿಗಳೂ ತಮ್ಮ ತಮ್ಮ ಗುರುಗಳ ಸಮೇತ ಬಂದಿದ್ದರು. ಅಲ್ಲಿ ಬ್ರಿಟಿಶರ ಧ್ವಜಪಟವು ತೆರೆಯಲ್ಪಟ್ಟ ಕೂಡಲೆ, ಪೋಲೀಸರ ಬ್ಯಾಂಡದ ವಾದ್ಯರವದೊಡನೆ ರಾಷ್ಟ್ರಗೀತವಾಯಿತು. ಆನಂತರ ಎಲ್ಲ ಅಧಿಕಾರಸ್ಥರೂ, ಸದ್ಗೃಹಸ್ಥರೂ, ವಿದ್ಯಾರ್ಥಿಗಳೂ ಆರ್ಡಿಯಿಂದ ಬಾದಶಹರ ಸತಾಕೆಗೆ ಪ್ರಣಾಮ ಮಾಡಿದ ನಂತರ ಬ್ಯಾಂಡದ ಸ್ವರದೊಂದಿಗೆ ಮರಳಿ ಬಂಗಲೆಯು ಊರಲ್ಲಿ ಕಾಮನಕಟ್ಟೆಯ ವರೆಗೆ ಪ್ರವೇಶ ಮಾಡಿತು.

ಅಮೇಲೆ ಕಾಲೇಜದ ಎಂಟೆಂಟು ವಿದ್ಯಾರ್ಥಿಗಳ ಒಂದೊಂದು ಗುಂಪಿನವರು ತಮ್ಮ ಗುರುಗಳ ಮೇಲಧಿಕಾರದಿಂದ ಊರಲ್ಲಿ ತಮಗೆ ಕೊಡಲೇ ನಿಯಮಿಸಿದ ಕಿಣಿಗೆ ಹೋಗಿ, "ರೆಡ್‌ಕ್ರಾಸ" ಸಂಘಕ್ಕೆ ಜನರು ಉತ್ಸಾಹದಿಂದ ಕೊಡತಕ್ಕ ಹಣವನ್ನು ಎತ್ತಲು ಉಪಕ್ರಮಿಸಿದರು. ಇದೇ ಪ್ರಕಾರ ಉಳಿದ ಸಂಸ್ಥೆಗಳ ಎಲ್ಲ ವಿದ್ಯಾರ್ಥಿಗಳೂ ಸಹ ತಾವು ವಸೂಲು ಮಾಡಿ ತಂದ ಹಣವನ್ನು ೧೨ ಘಂಟೆಗೆ ನೇಟಿವ್ಹ ಜನರಲ್ ಲಾಯಬ್ರರಿಯಲ್ಲಿ ಆವುಗಳನ್ನು ಸಂಗ್ರಹಿಸಲು ನಿಯಮಿಸಲ್ಪಟ್ಟ ಅಧಿಕಾರಿಗಳಿಗೆ ಒಪ್ಪಿಸಿ ಕಮ್ಮಿ, ತನ್ನ ಬಿಡಾರಕ್ಕೆ ತೆರಳಿದರು.

ಮಧ್ಯಾಹ್ನದಲ್ಲಿ ಮೆ. ಕಲೆಕ್ಟರ ಸಾಹೇಬರ ಬಂಗಲೆಯ ಕಂಪಾ
ವುಂಡಿನಲ್ಲಿ ಅನೇಕ ಪ್ರಕಾರದ ಉತ್ಸವಗಳು ನಡೆದವು. ಅಲ್ಲಿ ಕಾಲೇಜಿನ
ವಿದ್ಯಾರ್ಥಿಗಳು ಮಲಖಂಬ, ಹಾರಿ ಹುಂಟಲ್ ಬಾರ, ಪ್ಯಾರಲಲ್ ಬಾರ
ಇವುಗಳ ಮೇಲಿನ ತಮ್ಮ ಅಂಗಸಾಧನದ ಚಮತ್ಕಾರಿಕವಾದ ಆಟಗಳನ್ನು
ಮಾಡಿ ತೋರಿಸಿ ಪ್ರೇಕ್ಷಕರನ್ನು ಆನಂದಗೊಳಿಸಿದರು.

ಶಾಲೆಗಳನ್ನು ಪರೀಕ್ಷಿಸುವ ಅಧಿಕಾರಿಗಳ ಕರ್ತವ್ಯಗಳು.

ಶಾಲೆಗಳ ಊರ್ಜಿತಸ್ಥಿತಿಯು ಶಾಲೆಯು ಇರುವ ಊರಿನ ಜನ
ರಲ್ಲಿರುವ ವಿದ್ಯೆಯ ಆಸ್ಥೆಯನ್ನೂ, ಶಾಲಾಶಿಕ್ಷಕನ ಕೆಲಸದ ಅಸಕ್ತಿಯನ್ನೂ
ಅವಲಂಬಿಸಿರುವಂತೆ ಅದಕ್ಕೂ ಕೆಲವು ಅಂಶದಿಂದ ಹೆಚ್ಚಾಗಿ ಶಾಲೆಯನ್ನು
ಪರೀಕ್ಷಿಸುವ ಅಧಿಕಾರಿಯು ಕರ್ತವ್ಯ ತತ್ಪರತೆಯನ್ನೂ ಅವಲಂಬಿಸಿರುತ್ತದೆ
ಇವನು ವರ್ಷದಲ್ಲಿ ಒಂದೆರಡು ಸಾರೆ ಮಾತ್ರ ಶಾಲೆಯನ್ನು ಕಾಣುವ
ದ್ದರೂ ಆಕಾಲದಲ್ಲಿ ಅವನು ತನ್ನಸ್ವಂತ ಆಚರಣೆಯನ್ನು, ಊರಿನ
ಸಂಗಡ ಹಾಗೂ ಶಾಲಾಧ್ಯಾಪಕನ ಸಂಗಡ ಯಾವರೀತಿಯಿಂದ ಇ
ವನೋ ಅದರ ಪರಿಣಾಮವು ಅವನು ತಿರುಗಿ ಆಶಾಲೆಗೆ ಬರುವವರೆಗೆ
ಸ್ಥಿರವಾಗಿ ಉಳಿಯುತ್ತದೆ. ಇವನು ವಿದ್ಯೆಯಿಂದಲೂ ಅಧಿಕಾರದಿಂದಲೂ
ಶಾಲಾಧ್ಯಾಪಕನಿಗಿಂತ ಹೆಚ್ಚಿನವನಾದ್ದರಿಂದ, ಇವನ ಬಗ್ಗೆ ಶಾಲಾಶಿಕ್ಷಕ
ನಲ್ಲಿ ಭಯಮಿಶ್ರಿತವಾದ ಸನ್ಮಾನವೂ ಭಕ್ತಿಯೂ ಇರುವದಲ್ಲದೆ ಊರ
ವರಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಅಡಚಣೆಗಳನ್ನು ದೂರಮಾಡುವನೆ
ಸಿಂಬ ಭಾವದಿಂದ ಪೂಜ್ಯಬುದ್ಧಿಯೂ ಇರುವದರಿಂದ, ಇವರು
ಪ್ರಸಂಗವನ್ನು ಬಹಳ ಉತ್ಸುಕತೆಯಿಂದ ಎದುರು ನೋಡುತ್ತಿರುವರು
ಆದ್ದರಿಂದ ಇವನ ಅಲ್ಪಕಾಲದ ವರ್ತನದ ಪರಿಣಾಮವು ಅವರ ಮ
ನಸಿನ ಮೇಲೆ ಸಂಪೂರ್ಣವಾಗಿ ಆಗುವದು. ಆಕಾಲದಲ್ಲಿ ಶಾಲಾಧಿಕ
ರಿಯು ಯಾವರೀತಿಯಿಂದ ವರ್ತಿಸಬೇಕೆಂಬದನ್ನು ಇಲ್ಲಿ ವಿವರಿಸುವೆನು.

ಊರಜನರಕೂಡ ವರ್ತನವು:— ಶಾಲೆಯು ಇರುವ ಊರ ಜನರು
ಅಂದರೆ ಸಭ್ಯಗೃಹಸ್ಥರು ಮತ್ತು ಪಂಚರು, ಶಾಲಾಧಿಕಾರಿಯು ಊರಿಗೆ
ಬಂದ ಕೂಡಲೆ ಶಾಲಾಧ್ಯಾಪಕನ ಸ್ತುತಿಯನ್ನಾಗಲಿ ನಿಂದೆಯನ್ನಾಗಲಿ ಮಾಡ
ಕೂಡದು. ಈ ಸ್ತುತಿನಿಂದೆಗಳು ಕೆಲಕೆಲವು ವೇಳೆ ಶಾಲೆಗೆ

ಕೆಲಸಕ್ಕೆ ಸಂಬಂಧಿಸದೆ ಅವರವರ ಸ್ವಂತ ವರ್ತನದಿಂದ ಪ್ರೇರಿತವಾದ ವುಗಳು ಇರುತ್ತವೆ. ಶಿಕ್ಷಕನು ತನ್ನ ಶಾಲೆಯ ಕೆಲಸವನ್ನು ಉತ್ತಮರೀತಿಯಿಂದ ಮಾಡುತ್ತಿದ್ದ ಪಕ್ಷದಲ್ಲಿ, ಊರ ಜನರ ಸ್ತುತಿನಿಂದೆಗಳ ಪರಿಣಾಮವು ಏನೂ ಆಗುವದಿಲ್ಲೆಂಬದೂ ಅವರಿಗೆ ಗೊತ್ತಿರುತ್ತದೆ. ಆದರೂ ಈ ವಿಷಯದಲ್ಲಿ ಮೇಲಧಿಕಾರಿಯು ಅಜಾಗರೂಕನಾದರೆ, ಶಾಲೆಯ ಮೇಲೆ ಕೆಟ್ಟ ಪರಿಣಾಮವಾಗುವದೆಂಬದಕ್ಕಾಗಿ ಅವನಿಗೆ ಎಚ್ಚರಿಕೆಯನ್ನು ಕೊಡುವದು ನಮಗೆ ಅವಶ್ಯವೆಂದು ಕಂಡುಬರುತ್ತದೆ. ಶಾಲಾಧಿಕಾರಿಯು ತಾನು ಸ್ವತಃ ಶಾಲೆಯ ಸ್ಥಿತಿಯನ್ನು ಮನಗಾಣುವವರೆಗೆ, ಊರಜನರ ಹೇಳಿಕೆಯಲ್ಲಿ ಎಳ್ಳಷ್ಟಾದರು ವಿಶ್ವಾಸವನ್ನು ಇಡಕೂಡದು. ಇಷ್ಟೇಅಲ್ಲ. ಅವರ ಹೇಳಿಕೆಯಲ್ಲಿ ಏನಾದರೂ ದ್ವೇಷ-ಈರ್ಷೆಗಳನ್ನು ಸಾಧಿಸುವ ಉದ್ದೇಶವಿರಬಹುದೆಂದು ಊಹಿಸಬಹುದು. ನಿಜವಾಗಿ ಶಾಲಾಧ್ಯಾಪಕನ ಕೆಲಸವೂ ಊರವರ ಕೂಡ ಆತನ ವರ್ತನವೂ ಪ್ರಶಂಸನೀಯವಾಗಿದ್ದರೆ, ಆ ಶಾಲೆಯನ್ನು ಪ್ರತ್ಯಕ್ಷ ಪರೀಕ್ಷಿಸುವದರಿಂದ ಮತ್ತು ವ್ಹಿಜಿಟಿಸ್ ಪುಸ್ತಕದಲ್ಲಿಯ ಶರಗಳನ್ನು ನೋಡುವದರಿಂದ ಆ ಮಾತು ಸಹಜವಾಗಿ ಸ್ಪಷ್ಟವಾಗುವದು.

ಔದಾಶೀನ್ಯವೆಂಬ ಮೂರನೇಯದೊಂದು ಭಾವವೂ ಎಷ್ಟೋ ಹಳ್ಳಿಯ ಶಾಲೆಗಳ ಸದ್ಗೃಹಸ್ಥರಲ್ಲಿಯೂ ಪಂಚರಲ್ಲಿಯೂ ಮೇಲಿಂದಮೇಲೆ ಕಂಡುಬರುವದು. ವಿದ್ಯೆಯ ಅನಾಸ್ಥೆಯೇ ಇದಕ್ಕೆ ಮೂಲಕಾರಣವಾಗಿರುವದರಿಂದ ಇಂಥಲ್ಲಿ ಶಾಲೆಗಳನ್ನು ಸುರಳೀತವಾಗಿ ನಡಿಸುವದು ಬಿಗಿಯೂದದ್ದು.

ಶಾಲೆಯ ಪಂಚರು ಭಟ್ಟಿಯಾದಕೂಡಲೆ, ಅಧಿಕಾರಿಯು ಅವರಿಗೆ ಶಾಲೆಗೆ ಬರಹೇಳಿ ತನ್ನ ಪರೀಕ್ಷೆಯ ಕೆಲಸವು ಮುಗಿದನಂತರ ಶಾಲೆಯ ಕುಂದುಕೊರತೆಗಳಬಗ್ಗೆ ಅವರ ಸಂಗಡ ಮಾತಾಡಬೇಕು. ಆದರೆ ಶಾಲೆಯ ಶಿಕ್ಷಕನ ಸ್ತುತಿನಿಂದೆಗಳಬಗ್ಗೆ ಮಾತಾಡಕೂಡದು. ಈ ಪ್ರಕಾರದ ವರ್ತನದಿಂದ ಪಂಚರ ಮನಸ್ಸಿನಲ್ಲಿ ಇರುವ ವ್ಯಕ್ತಿವಿಷಯಕವಾದ ಅಭಿಪ್ರಾಯವನ್ನು ಹೇಳುವದು ಕಟ್ಟಾಗುವದು. ಒಂದುವೇಳೆ ಅವರು ಹೇಳಿದಂತೆ ಶಾಲೆಯ ಸ್ಥಿತಿಯು ನಿಜವಾಗಿ ಚಲೋದು ಇಲ್ಲವೆ ಕೆಟ್ಟದ್ದು, ಆಗಿದ್ದರೆ ಶಾಲಾಧಿಕಾರಿಯು ವಿಚಾರ ಮಾಡಹತ್ತಿರುವೆನೆಂದು ಸಾಮಾನ್ಯ ಉತ್ತರವನ್ನು ಅವರಿಗೆ ಕೊಡಬಹುದು. ಜನರಲ್ಲಿ ಶಾಲೆಯ ಬಗ್ಗೆ ವಿಶೇಷ ಆಸಕ್ತಿಯು

ಇದ್ದದ್ದು ಕಂಡುಬಂದರೆ ಶಾಲೆಯ ಸುಧಾರಣೆಯ ಬಗ್ಗೆ ತನ್ನ ಸೂಚನೆಗಳನ್ನು ಅವರ ಮುಂದೆ ಆಡಿತೋರಿಸಬೇಕು. ಅಂದರೆ ಅವರು ಇವನ ಕಾರ್ಯಕ್ಕೆ ನೆರವಾಗಲಿಕ್ಕೆ ಸಿದ್ಧರಾಗುವರು.

(ಮುಂದೆ ಸಾಗುವದು.)

ಪ್ರಕೃತಿ ಪಾಠಗಳು.

(ಅಕ್ಟೋಬರ ತಿಂಗಳಿಂದ ಮುಂದೆಸಾಗಿದ್ದು.)

ಕಪ್ಪೆ

೨. ಕಪ್ಪೆಯ ಮರಿಯು ಮತ್ಸ್ಯರೂಪವನ್ನು ಬಿಟ್ಟು ಬೇರೆ ರೂಪವನ್ನು ಹೊಂದುತ್ತದೆ.

ಕಪ್ಪೆಯ ಮರಿಯು ಮತ್ಸ್ಯರೂಪದಿಂದ ನೀರಿನಲ್ಲಿ ಬೆಳೆಯುತ್ತಿರುವದಷ್ಟೇ. ಅದು ಹುಟ್ಟಿದ ಸುಮಾರು ೧೨ ದಿನಗಳಿಗೆ ಅದರ ಬಾಲದ ಹತ್ತರ ಎರಡು ಸಣ್ಣ ಗಂಟುಗಳು ಕಂಡುಬಂದು ಹಿಂಗಾಲುಗಳು ಹುಟ್ಟಲಾರಂಭಿಸುವುವು. ಕಪ್ಪೆಯ ಹಿಂಗಾಲುಗಳು ಅದರ ಮುಂಗಾಲುಗಳಿಗಿಂತ ದೊಡ್ಡವಾಗಿರಲು ಹಿಂಗಾಲುಗಳು ಮೊದಲು ಬರುವದೆ ಒಂದು ಕಾರಣವೆಂದೆಣಿಸಬಹುದು. ಕಪ್ಪೆಯ ಹಿಂಗಾಲುಗಳು ಬೆಳೆಯುತ್ತ ಬರುವಾಗ ಅದರ ಬಾಲವು ಸ್ವಲ್ಪಸ್ವಲ್ಪವಾಗಿ ಸುಕ್ಕಿಹೋಗುವುದು.

ಹಿಂಗಾಲುಗಳು ಬಂದ ಕೆಲವು ದಿನಗಳಲ್ಲಿ ಮುಂಗಾಲುಗಳು ಹುಟ್ಟುವುವು. ಇವು ಆರಂಭದಲ್ಲಿ ತಲೆಯ ಸಮೀಪದಲ್ಲಿ ಎರಡು ಗಂಟುಗಳಾಗಿ ಕಂಡುಬರುತ್ತವೆ.

ಈ ಪ್ರಾಣಿಯ ನಾಲ್ಕು ಕಾಲುಗಳು ಸರಿಯಾಗಿ ಏರ್ಪಡುವವೇಳೆಗೆ ಅದರ ಕಲ್ಲಿಗಳು ಕ್ರಮವಾಗಿ ಕ್ಷೀಣಿಸಿಹೋಗಿ ಅವುಗಳಿಗೆ ಬದಲಾಗಿ ಶ್ವಾಸಕೋಶಗಳು ಅಥವಾ ಪುಪ್ಪುಸಗಳು ಬರುತ್ತವೆ. ಅದರ ಬಾಲವು ನಿಶ್ಶೇಷವಾಗಿ ಸುಕ್ಕಿ ಹೋಗುತ್ತದೆ. ಕಲ್ಲಿಗಳು ಹೋದ ಮೇಲೆ ನೀರಿನಲ್ಲಿ ವಾಸಮಾಡುವದು ಕಷ್ಟವಾದುದರಿಂದ ಕಪ್ಪೆಯು ಶ್ವಾಸಕೋಶಗಳ (ಪುಪ್ಪುಸಗಳ) ಮೂಲಕ ಉಸುರಾಡಿಸಬೇಕೆಂದು ತಿಳಿದುಕೊಂಡು ನೀರಿನಿಂದ ಹೊರಗೆ ಬರುತ್ತದೆ. ಈಗ ಅದು ಪೂರ್ಣ ಕಪ್ಪೆಯಾಗಿರುವದೆಂದು ತಿಳಿಯಬೇಕು. ಇಷ್ಟುದಿನಗಳವರೆಗೂ ನೀರಿನಲ್ಲಿ ಬೆಳೆಯುವ ಸಸ್ಯಗಳೇ ಇದರ ಆಹಾರವಾಗಿರುತ್ತಿದ್ದವು. ನೀರಿನಿಂದ ಹೊರಗೆ ಬಂದಮೇಲೆ ಕಪ್ಪೆ

ಯು ಸಸ್ಯಾಹಾರವನ್ನು ಬಿಟ್ಟು ಕೀಡಿ ಮೊದಲಾದ ಪ್ರಾಣಿಗಳನ್ನು ತಿಂದು ಬದುಕುವುದು. ನೀರಿನಿಂದ ಹೊರಗೆ ಬಂದಮೇಲೂ ಅದು ಬೆಳೆಯುತ್ತಿರುತ್ತದೆ. ಅದು ಬೆಳೆಯುವಾಗ ಅದರ ಶರೀರದ ಮೇಲಿನ ಚರ್ಮವು ಆಗಾಗ್ಗೆ ಕಳೆದುಹೋಗುತ್ತಿರುತ್ತದೆ. ಈ ಚರ್ಮವು ಕಳೆಯಲಾರಂಭಿಸಿದಾಗ ಕಪ್ಪೆಗಳು ತಮ್ಮ ಕಾಲುಗಳಿಂದ ಅದನ್ನು ಹರಿದು ತುಂಡುತುಂಡುಗಳಾಗಿ ಮಾಡಿ ನುಂಗುತ್ತವೆ.

ಹೀಗೆ ಕಪ್ಪೆಯ ಜೀವಮಾನದಲ್ಲಿ ಅಂಡರೂಪ, ಮತ್ಸ್ಯರೂಪ, ಬಾಲವಿರುವಕಪ್ಪೆ, ಪೂರ್ಣಕಪ್ಪೆ ಎಂಬ ನಾಲ್ಕು ಅವಸ್ಥೆಗಳನ್ನು ಲಕ್ಷಿಸಬಹುದು.

ಪಾಠಗಳ ಟಿಪ್ಪಣಿ.

ವಿಷಯ:— ಕಪ್ಪೆಯ ಅಂಗರಚನೆ ಮತ್ತು ಸ್ವಭಾವಗಳು.

ಕಲಿಯುವ ಹುಡುಗರ ವಯಸ್ಸು—
ಮೇಳೆ ... .
ಉದ್ದೇಶ... ... ... } ಹಿಂದಿನ ಪಾಠಗಳಲ್ಲಿ ತಿಳಿಸಿರುವಂತೆ.

ಉಪಕರಣ— ಒಂದು ಕಪ್ಪೆ, ಅಗಲವಾಗಿರುವ ಒಂದು ಗಾಜಿನಪಾತ್ರೆ ಅಥವಾ ಪಂಜರ, ನೀರು ತುಂಬಿರುವ ಮತ್ತೊಂದು ಅಗಲವಾದ ಪಾತ್ರೆ.

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ಕಪ್ಪೆಯು ಅಂದಗೇಡಿಯಾದ ಪ್ರಾಣಿಯು. ಅದರ ಹಿಂಗಾಲುಗಳು ಮುಂಗಾಲುಗಳಿಗಿಂತ ದೊಡ್ಡವಾಗಿರುತ್ತವೆ. ಸಮವಾದ ನಾಲ್ಕು ಕಾಲುಗಳುಳ್ಳ ನಾಯಿ, ಬೆಕ್ಕು, ಆಕಳು, ಕುದುರೆ, ಮೊದಲಾದ ಪ್ರಾಣಿಗಳ ಚಲನವಲನಗಳಲ್ಲಿರುವ ಸೊಬಗು ಕಪ್ಪೆಯಲ್ಲಿಲ್ಲ.	ನೆಲದ ಮೇಲೆ ಓಡಾಡುತ್ತಿರುವ ಒಂದು ದೊಡ್ಡ ಕಪ್ಪೆಯನ್ನು ತಂದು ಒಂದು ಗಾಜಿನಪಾತ್ರೆಯನ್ನು ಅದರ ಮೇಲೆ ಕವಚಿಡಬೇಕು. ಅನಂತರ ಹುಡುಗರನ್ನು ಅದರ ಆಕಾರ ಅಂಗರಚನೆ ಮೊದಲಾದ ಸಂಗತಿಗಳನ್ನು ಕುರಿತು ಪ್ರಶ್ನೆ ಮಾಡಬೇಕು.

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ಕಪ್ಪೆಯ ಎದೆಗೂ ತಲೆಗೂ ನಡುವೆ ಪ್ರತ್ಯೇಕವಾದ ಕುತ್ತಿಗೆಯಿರುವದಿಲ್ಲ.	ಕಪ್ಪೆಯ ತಲೆಯು ಅದರ ಶರೀರಕ್ಕೆ ಹೇಗೆ ಹತ್ತಿಕೊಂಡಿರುತ್ತದೆ? ಈ ವಿಷಯದಲ್ಲಿ ಜಿಕ್ಕು, ನಾಯಿ ಮೊದಲಾದ ಪ್ರಾಣಿಗಳಿಗೂ ಕಪ್ಪೆಗೂ ಇರುವ ವ್ಯತ್ಯಾಸವೇನು?
ಕಪ್ಪೆಯ ಬಾಯಿ:— ಕಪ್ಪೆಯ ಬಾಯಿಯು ದೊಡ್ಡದು. ಅದರ ನಾಲಿಗೆಯು ಉದ್ದವಾಗಿದ್ದು ಬಾಯಿಯ ಮುಂಭಾಗದಲ್ಲಿ ಅಂಟಿಕೊಂಡಿರುತ್ತದೆ. ಈ ನಾಲಿಗೆಯ ಮೇಲೆ ಒಂದು ದ್ರವವಿರುತ್ತದೆ. ಕಪ್ಪೆಯ ಬಾಯಿಯಲ್ಲಿ ಸಣ್ಣ ಸಣ್ಣ ಹಲ್ಲುಗಳೂ ಕೂದಲುಗಳೂ ಇರುತ್ತವೆ.	ಕಪ್ಪೆಯ ಬಾಯಿಯೆಲ್ಲಿ ಒಂದು ಸಣ್ಣ ಕಡಿಯನ್ನು ಸಿಕ್ಕಿಸಿ ಮೆಲ್ಲಗೆ ಅದರ ಬಾಯಿಯನ್ನು ತೆಗೆಯಿಸಿ ನಾಲಿಗೆಯ ರಚನೆಯನ್ನೂ ಅದು ಹತ್ತಿರುವ ರೀತಿಯನ್ನೂ ತೋರಿಸಬೇಕು. ಅನಂತರ ಬಾಯಿಯಲ್ಲಿ ಕಾಣುವ ಸಣ್ಣ ಸಣ್ಣ ಹಲ್ಲುಗಳನ್ನೂ ಕೂದಲುಗಳನ್ನೂ ನೋಡಬೇಕು.
ಕಿವಿಗಳು:— ಕಪ್ಪೆಯ ಬಾಯಿಯ ಮೇಲ್ಭಾಗದಲ್ಲಿ ಎರಡು ಸಣ್ಣರಂಧ್ರಗಳು ಕಾಣುತ್ತವೆ. ಇವು ಎರಡೂ ಪಾರ್ಶ್ವಗಳಲ್ಲಿಯೂ ಒಂದೊಂದು ಕೊಳವೆಯಿಂದ ಕಿವಿಗಳಿಗೆ ಸೇರಿಕೊಂಡಿರುತ್ತವೆ. ಕಪ್ಪೆಯ ಕಣ್ಣುಗಳ ಹಿಂದೆ ಎರಡು ಚಿಕ್ಕೆಗಳು ಕಾಣುತ್ತವೆ. ಇವೇ ಕಪ್ಪೆಯ ಕರ್ಣಪಟಲಗಳು.	ಕಪ್ಪೆಯ ಬಾಯಿಯ ಮೇಲ್ಭಾಗದಲ್ಲಿ ಕಾಣುವ ಎರಡು ರಂಧ್ರಗಳನ್ನು ತೋರಿಸಿ ಇವುಗಳಿಗೂ ಕಪ್ಪೆಯ ತಲೆಯ ಹೊರಭಾಗದಲ್ಲಿ ಕಣ್ಣುಗಳ ಹಿಂದೆ ಕಾಣುವ ಚಿಕ್ಕೆಗಳಿಗೂ ಇರುವ ಸಂಬಂಧವನ್ನು ಸ್ಪಷ್ಟಿಸಬೇಕು.
ಕಣ್ಣು:— ಕಪ್ಪೆಯ ಕಣ್ಣುಗಳು ದೊಡ್ಡವಾಗಿ	ಕಪ್ಪೆಯ ಕಣ್ಣುಗಳನ್ನು ಹುಡುಗರು ನೋಡಿ ನಮ್ಮ ಕಣ್ಣುಗಳಿಗೂ ಅವುಗಳಿಗೂ ಇರುವ ವ್ಯತ್ಯಾಸಗಳನ್ನು

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ಯೂ ಎದ್ದುನಿಂತಿರುವಂತೆಯೂ ಕಾಣುತ್ತವೆ. ಎದೆ:— ಕಪ್ಪೆಯ ಶರೀರದಲ್ಲಿ ಪಕ್ಕೆಲುವುಗಳಿಲ್ಲ. ಅದು ಶ್ವಾಸವನ್ನು ತೆಗೆದುಕೊಳ್ಳುವಾಗ ನಮ್ಮ ಹಾಗೆ ಎದೆಯನ್ನು ಉಬ್ಬಿಸಲಾರದು. ಕಾಲುಗಳು:— ಕಪ್ಪೆಯ ಮುಂಗಾಲುಗಳು ಹಿಂಗಾಲುಗಳಿಗಿಂತ ಸಣ್ಣವಾಗಿರುತ್ತವೆ. ಒಂದೊಂದು ಕಾಲಿನಲ್ಲಿಯೂ ತೊಡೆ, ಮೊಣಕಾಲು, ಪಾದ ಎಂಬ ಮೂರು ಭಾಗಗಳಿರುತ್ತವೆ. ಮುಂಗಾಲುಗಳಲ್ಲಿ ನಾಲ್ಕು ಬೆರಳುಗಳೂ ಹಿಂಗಾಲುಗಳಲ್ಲಿ ಐದು ಬೆರಳುಗಳೂ ಇರುತ್ತವೆ. ಹಿಂಗಾಲುಗಳಲ್ಲಿ ಬೆರಳುಗಳುಗಳ ನಡುವೆ ತೆಳುವಾದ ತೊಗಲಿರುತ್ತದೆ. ಈ ತೊಗಲಿನಿಂದ ಕಪ್ಪೆಗೆ ಈಸುವಾಗ ಸಹಾಯವಾಗುತ್ತದೆ. ಚರ್ಮ:—ಕಪ್ಪೆಯ ಚರ್ಮವು ಬಹಳ ತಂಪಾಗಿರುತ್ತದೆ. ಅದರಿಂದ ಒಂದು ದ್ರವವು ಹೊರಡುತ್ತಿ	ಹೇಳಬೇಕು. ಕಣ್ಣುಗಳು ಹೀಗಿರುವದರಿಂದ ಅನುಕೂಲವೇನು? [ಕಪ್ಪೆಯು ನಮ್ಮ ಹಾಗೆ ತಲೆಯನ್ನು ತಿರುಗಿಸಲಾರದು. ಈ ಉಬ್ಬು ಕಣ್ಣುಗಳು ವಿಶ್ವದೃಷ್ಟಿಯನ್ನು ಹೊಂದಿರುತ್ತವೆ.] ಕಪ್ಪೆಯು ಉಸುರಾಡಿಸುವಾಗ ಎದೆಯ ಮುಂಭಾಗವು ನಮ್ಮ ಎದೆಯು ಹಾಗೆ ಉಬ್ಬದೆ ಇರಲು ಕಾರಣವೇನು? ಹುಡುಗರು ಕಪ್ಪೆಯ ಕಾಲುಗಳನ್ನು ನೋಡಿ ಹಿಂಗಾಲುಗಳಿಗೂ ಮುಂಗಾಲುಗಳಿಗೂ ಇರುವ ವ್ಯತ್ಯಾಸಗಳನ್ನೂ ಒಂದೊಂದು ಕಾಲಿನಲ್ಲಿರುವ ಭಾಗಗಳನ್ನೂ ಹೇಳಬೇಕು. ಕಪ್ಪೆಯ ಹಿಂಗಾಲಿನ ಬೆರಳುಗಳು ನಡುವೆ ಇರುವ ತೊಗಲಿನ ಉಪಯೋಗವೇನು? ಹುಡುಗರು ಕಪ್ಪೆಯ ಚರ್ಮವನ್ನು ಮುಟ್ಟಿ ಅದು ಸ್ಪರ್ಶಕ್ಕೆ ಹೇಗೆ ತೋರುತ್ತದೆಂಬುದನ್ನು ಹೇಳಬೇಕು. ಕಪ್ಪೆಯ ಚರ್ಮಕ್ಕೂ ನಮ್ಮ ಚರ್ಮಕ್ಕೂ ಇರುವ ವ್ಯತ್ಯಾಸವೇನು?

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.

ರುತ್ತದೆ. ಕಪ್ಪೆಗಳನ್ನು ಶೀತರಕ್ತವುಳ್ಳ ಪ್ರಾಣಿಗಳೆಂದು ಕರೆಯುತ್ತಾರೆ.

ಕಪ್ಪೆ ಹಲಗೆಯ ಮೇಲೆ ಬರೆಯುವ ಸಂಕ್ಷಿಪ್ತ ವಿವರಣೆ.

ಕಪ್ಪೆಯ ಅಂಗರಚನೆ.

೧. ಶರೀರ—ಅಂದಗೇಡಿಯಾವುದು. ಪ್ರತ್ಯೇಕವಾದ ಕುತ್ತಿಗೆಯಿಲ್ಲ.

೨. ಬಾಯಿ— ದೊಡ್ಡದು, ಯಾವಾಗಲೂ ಮುಚ್ಚಿರುತ್ತದೆ.

೩. ಕಣ್ಣುಗಳು— ದೊಡ್ಡವು, ಉಬ್ಬಿದವು.

೪. ಕಿವಿಗಳು— ಕಣ್ಣಿನ ಹಿಂಭಾಗದಲ್ಲಿರುವ ಚಿಕ್ಕೆಗಳು.

೫. ಮೂಗು— ಬಾಯಿಯ ಮೇಲೆ ಮೂಗಿನ ಹೊಳ್ಳೆಗಳು ಕಾಣುತ್ತವೆ.

೬. ಕಾಲುಗಳು— ಹಿಂಗಾಲುಗಳು ಮುಂಗಾಲುಗಳಿಗಿಂತ ದೊಡ್ಡವು. ಹಿಂಗಾಲುಗಳ ಬೆರಳುಗಳ ನಡುವೆ ತೊಗಲಿರುತ್ತದೆ.

೭. ಚರ್ಮ— ತಂಪಾಗಿರುತ್ತದೆ.

ಕಪ್ಪೆಯ ಸ್ವಭಾವಗಳು.

೧ ಬಾಯಿಯನ್ನು ಮುಚ್ಚಿಕೊಂಡು ಮೂಗಿನಿಂದ ಉಸುರಾಡಿಸುತ್ತದೆ.

೨ ಈಸುತ್ತದೆ. ಜಿಗಿಯುತ್ತದೆ. (ಹಾರುತ್ತದೆ)

೩ ನಾಲಿಗೆಯಿಂದ ಹುಳಗಳನ್ನು ಹಿಡಿಯುತ್ತದೆ.

೪ ಚಳಿಗಾಲದಲ್ಲಿ ನಿದ್ರೆ ಮಾಡುತ್ತಿರುತ್ತದೆ.

ಕಪ್ಪೆಯ ಉತ್ಪತ್ತಿ ಮತ್ತು ಬೆಳವಣಿಗೆ.

ಮಳೆಗಾಲವು ಆರಂಭಿಸಿದನಂತರ ಅಂದರೆ ಜೂನ ತಿಂಗಳಲ್ಲಿ ಕಪ್ಪೆಗಳು ನಿದ್ರೆಯಿಂದ ಎದ್ದು ತತ್ತಿಯನ್ನು ಹಾಕುವವು. ತತ್ತಿಗಳು ಕಾಣಿಸುವ ಸ್ಥಳಗಳನ್ನು ಗೊತ್ತು ಮಾಡಿ ಹುಡುಗರನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಕು. ತತ್ತಿಗಳ ಆಕಾರ ಬಣ್ಣ ಮೊದಲಾದ ಸಂಗತಿಗಳನ್ನು ಅವರು ನೋಡಬೇಕು. ೪,೫ ದಿನಗಳಾದ ಮೇಲೆ ಈ ತತ್ತಿಗಳಿಂದ ಹೊರಗೆ ಬರುವ ಮರಿಗಳನ್ನು ಲಕ್ಷಿಸಬೇಕು. ಶಾಲೆಯಲ್ಲಿ ಕೆಲವು ತತ್ತಿಗಳನ್ನಾ

ಗಲಿ ಮರಿಗಳನ್ನಾಗಲಿ ತಂದಿಟ್ಟು ಕಪ್ಪೆಯ ಮರಿಗಳ ಬೆಳವಣಿಗೆಯನ್ನು ನಿರೀಕ್ಷಿಸಬಹುದು.

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ತತ್ತಿ:– ಕಪ್ಪೆಯ ತತ್ತಿಗಳು ಕರೇ ಬಣ್ಣದವಾಗಿರುತ್ತವೆ. ಸಾಸಿವೆ ಕಾಳಿನಷ್ಟಿರುವ ಈ ತತ್ತಿಗಳು ಉದ್ದವಾದ ಬಿಳೇ ಬಣ್ಣದ ಕೊಳವೆಯಲ್ಲಿ ಸೇರಿಸಲ್ಪಟ್ಟು ನೀರಿನಲ್ಲಿ ತೇಲುತ್ತಿರುತ್ತವೆ. ಒಂದೊಂದು ಕಪ್ಪೆಯು ಅಸಂಖ್ಯವಾದ ತತ್ತಿಗಳನ್ನು ಹಾಕುತ್ತದೆ.	ಕಪ್ಪೆಯು ತತ್ತಿಗಳು ಸಿಕ್ಕುವ ಸ್ಥಳವನ್ನು ಸೇರಿದ ಮೇಲೆ ಈ ತತ್ತಿಗಳು ಎಲ್ಲಿರುತ್ತವೆ? ಮತ್ತು ಹೇಗೆ ಕಾಣುತ್ತವೆ? ಎಂಬ ಸಂಗತಿಗಳನ್ನು ಹುಡುಗರು ಹೇಳಬೇಕು. ಒಂದು ಕಪ್ಪೆಯು ಎಷ್ಟು ತತ್ತಿಗಳನ್ನು ಹಾಕುತ್ತದೆ? ಇಷ್ಟು ತತ್ತಿಗಳನ್ನು ಏತಕ್ಕೆ ಹಾಕುತ್ತದೆ? ತತ್ತಿಯಿಂದ ಕಪ್ಪೆಯ ಮರಿಗಳು ಹೊರಬಿದ್ದಾಗ ಅವುಗಳ ಆಕಾರವು ಹೇಗಿರುತ್ತದೆ? ಒಂದು ಪಕ್ಷಿಯ ಮರಿಗಳಿಗೂ ಕಪ್ಪೆಯ ಮರಿಗಳಿಗೂ ಈ ವಿಷಯದಲ್ಲಿ ಯಾವ ವ್ಯತ್ಯಾಸವಿರುತ್ತದೆ?
ಕಪ್ಪೆಯ ಮರಿಯ ಮೊದಲನೇ ರೂಪವು:—ತತ್ತಿಯಿಂದ ಹೊರಬೀಳುವ ಮರಿಯು ಎಷ್ಟು ಮಾತ್ರವೂ ಕಪ್ಪೆಯಂತಿರುವದಿಲ್ಲ. ಇದರ ಶರೀರದಲ್ಲಿ ತಲೆ, ಬಾಲವೆಂಬ ಎರಡೇ ಭಾಗಗಳಿರುತ್ತವೆ. ತಲೆಯು ಒಹಳ ದೊಡ್ಡದಾಗಿರುತ್ತದೆ. ಈ ಮರಿಗಳು ಸ್ವಲ್ಪದಿನಗಳಲ್ಲಿ ಮತ್ಸ್ಯದ ಆಕಾರವನ್ನು ಹೊಂದುತ್ತವೆ. ಇವು ನೀರಿನಲ್ಲಿ ಬೆಳೆಯುತ್ತಿರುವ ಸಸ್ಯಗಳಿಗೆ ಹತ್ತಿಕೊಂಡು ತೇಲಾಡುತ್ತಿರುತ್ತವೆ. ಇವುಗಳ ಬಾಲಗಳು	ಈ ಮರಿಯನ್ನು ನೋಡಿ ಅದರ ಆಕಾರ ಅಂಗರಚನೆಯನ್ನು ಹುಡುಗರು ಬರೆದಿಡಬೇಕು. ೩,೪ ದಿನಗಳ ನಂತರ ಈ ಮರಿಗಳ ಆಕಾರವು ಹೇಗಿರುತ್ತದೆ? ಈ ಮರಿಗಳು ನೀರಿನಲ್ಲಿರುವ ಸಸ್ಯಗಳಿಗೆ ಹತ್ತಿಕೊಂಡಿರುವದನ್ನು ಹುಡುಗರು ನೋಡಬೇಕು. ಇವು ಈಸುವದಕ್ಕೆ ಪ್ರಾರಂಭಿಸಿದಾಗ ಯಾವ ಸಹಾಯದಿಂದ ಇವು ಈಸುತ್ತವೆಂಬುವದನ್ನು ಹುಡುಗರ ಲಕ್ಷ್ಯಕ್ಕೆ ತರಬೇಕು. ಈ ಮರಿಗಳ ತಲೆಯ ಪಾರ್ಶ್ವಗಳಲ್ಲಿ ಕಾಣುವ ಕಲ್ಲಿಗಳನ್ನು ತೋರಿಸಬೇಕು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಸ್ವಲ್ಪ ಉದ್ದವಾದ ಮೇಲೆ ನೀರಿನಲ್ಲಿ ಈಸಲಾರಂಭಿಸುವವು. ಇವುಗಳ ತಲೆಯ ಎರಡೂ ಕಡೆಗಳಲ್ಲಿ ಕಲ್ಲಿಗಳಿರುತ್ತವೆ.	

೨. ಕಪ್ಪೆಯ ಮರಿಗಳು ತತ್ತಿಯಿಂದ ಹೊರಬಿದ್ದ ಸುಮಾರು ಹನ್ನೆರಡು ದಿವಸಗಳ ನಂತರ ಹುಡುಗರನ್ನು ಈ ಮರಿಗಳಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಇವುಗಳ ಆಕಾರ ಅಂಗರಚನೆಗಳಲ್ಲಿರುವ ವ್ಯತ್ಯಾಸಗಳನ್ನು ಲಕ್ಷಿಸುವಂತೆ ಮಾಡಬೇಕು ಕೆಲವು ದಿನಗಳು ಕಳೆದ ಮೇಲೆ ಮತ್ತೊಂದು ಸಾರಿ ಈ ಮರಿಗಳನ್ನು ನಿರೀಕ್ಷಿಸಬೇಕು. ಈ ಪ್ರಕಾರ ಹುಡುಗರನ್ನು ಆಗಾಗ್ಗೆ ಕರೆದುಕೊಂಡು ಹೋಗಿ ಕಪ್ಪೆಯ ಮರಿಗಳು ಪೂರ್ಣಾವಸ್ಥೆಯನ್ನ ಹೊಂದುವದಕ್ಕೆ ಮೊದಲು ಯಾವ ಯಾವ ಬೇರೆ ಬೇರೆ ರೂಪಗಳಲ್ಲಿರುತ್ತವೆಂಬುವದನ್ನು ಅವರು ಸ್ಪಷ್ಟವಾಗಿ ತಿಳಿಯುವಂತೆ ಏರ್ಪಡಿಸಬೇಕು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಹಿಂಗಾಲುಗಳು:—ಕಪ್ಪೆಯ ಮರಿಯು ಹುಟ್ಟಿದ ಸುಮಾರು ೧೨ ದಿನಗಳಿಗೆ ಅದರ ಬಾಲದ ಹತ್ತರ ಎರಡು ಸಣ್ಣ ಗಂಟುಗಳು ಕಂಡು ಬಂದು ಹಿಂಗಾಲುಗಳು ಹುಟ್ಟಲಾರಂಭಿಸುವವು. ಇವು ಬೆಳೆಯುತ್ತ ಬಂದಂತೆ ಈ ಪ್ರಾಣಿಯ ಬಾಲವು ಸುಕ್ಕಿ ಹೋಗುವುದು. ಕೆಲವು ದಿನಗಳಲ್ಲಿ ಮುಂಗಾಲುಗಳು ಬರುತ್ತವೆ. ಕಪ್ಪೆಯ ಹಿಂಗಾ	ಕಪ್ಪೆಯ ಮರಿಗಳು ಹುಟ್ಟಿದ ಸುಮಾರು ೧೨ ದಿನಗಳಿಗೆ ಅವುಗಳ ಬಾಲದ ಹತ್ತರ ಕಾಣುವ ಗಂಟುಗಳನ್ನು ತೋರಿಸಬೇಕು. ಕೆಲವು ಮರಿಗಳ ಹಿಂಗಾಲುಗಳು ಬಂದಿದ್ದರೆ ಹಿಂಗಾಲುಗಳು ಮುಂಗಾಲುಗಳಿಗಿಂತ ಮೊದಲೇ ಬರುತ್ತವೆಂಬುವದನ್ನೂ ಅವು ಆರಂಭದಲ್ಲಿ ಬಾಲದ ಹತ್ತರ ಹಿಂಗಾಲುಗಳು ಬಂದ ಕೆಲವು ದಿನಗಳ ನಂತರ ಮುಂಗಾಲುಗಳು ಒಡಮೂಡುವದನ್ನೂ ಹುಡುಗರಿಗೆ ತೋರಿಸಬೇಕು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಲುಗಳು ಮುಂಗಾಲುಗಳಿಗಿಂತ ದೊಡ್ಡವಾಗಿರಲು ಹಿಂಗಾಲುಗಳು ಮೊದಲು ಬರುವದೇ ಕಾರಣವು.	ಮುಂಗಾಲುಗಳಿಗಿಂತ ಹಿಂಗಾಲುಗಳು ಏತಕ್ಕೆ ದೊಡ್ಡವಾಗಿರುತ್ತವೆ?
ಬಾಲವಿರುವ ಕಪ್ಪೆ:—ಈಗ ಕಪ್ಪೆಯ ಮರಿಯ ಶರೀರದಲ್ಲಿ ನಾಲ್ಕು ಕಾಲುಗಳೂ ಬಾಲವೂ ಇರುತ್ತವೆ. ಈ ಅವಸ್ಥೆಯಲ್ಲಿ ಅದನ್ನು ಬಾಲವಿರುವ ಕಪ್ಪೆಯೆಂದು ತಿಳಿಯಬಹುದು.	ನಾಲ್ಕು ಕಾಲುಗಳೂ ಬಂದ ಕಪ್ಪೆಯ ಮರಿಗಳನ್ನು ನೋಡಿ ಅವುಗಳ ಪೂರ್ಣರಚನೆಯನ್ನು ಹುಡುಗರು ಲಕ್ಷಿಸಿ ಚಿತ್ರಗಳನ್ನು ತೆಗೆಯಬೇಕು. ಈಗ ಕಪ್ಪೆಯ ಶರೀರದಲ್ಲಿ ಯಾವ ಯಾವ ಅವಯವಗಳಿರುತ್ತವೆ?
ಪೂರ್ಣಾವಸ್ಥೆ:—ಕಪ್ಪೆಯು ಬೆಳೆಯುತ್ತ ಬಂದಂತೆ ಅದರ ಬಾಲವು ನಿಶ್ಶೇಷವಾಗಿ ಇಲ್ಲದಂತಾಗುತ್ತದೆ. ಆಗ ಅದು ನೀರಿನಿಂದ ಹೊರಗೆ ಬಂದು ನೆಲದ ಮೇಲೆ ಓಡಾಡುತ್ತ ಸಣ್ಣ ಸಣ್ಣ ಕೀಟಗಳನ್ನು ತಿನ್ನುತ್ತದೆ.	ಕಪ್ಪೆಯು ಬೆಳೆಯುತ್ತ ಬಂದಂತೆ ಅದರ ಬಾಲವು ಸುಕ್ಕಿ ಹೋಗುವದನ್ನು ಹುಡುಗರು ನೋಡಬೇಕು. ಕಪ್ಪೆಯು ನೀರನ್ನು ಬಿಟ್ಟು ಹೊರಗೆ ಬಂದಾಗ ಅದರ ಬಾಲವು ನಿಶ್ಶೇಷವಾಗಿಲ್ಲದಿರುವದನ್ನು ಲಕ್ಷಿಸಬೇಕು. ನೀರಿನಿಂದ ಹೊರಗೆ ಬಂದ ಮೇಲೆ ಕಪ್ಪೆಯು ಯಾವ ಆಹಾರವನ್ನು ತಿನ್ನತ್ತದೆಂಬುದನ್ನು ಹುಡುಗರು ಪರೀಕ್ಷಿಸಬೇಕು.

ಕಪ್ಪೆಯ ಆಯುಷ್ಯದ ಸಂಕ್ಷಿಪ್ತ ವಿವರಣೆ.

೧. ಕಪ್ಪೆಯ ತತ್ತಿಗಳು ಸಾಮಿನೆ ಕಾಳಿನಷ್ಟಿದ್ದು ಕರೇ ಬಣ್ಣದವಾಗಿರುತ್ತವೆ. ಇವು ಒಂದು ಬೆಳೇ ಕೊಳವೆಯಲ್ಲಿದ್ದ ನೀರಿನಲ್ಲಿ ತೇಲಾಡುತ್ತವೆ.

೨. ಕಪ್ಪೆಯ ಮರಿಯು ಆರಂಭದಲ್ಲಿ ತಲೆ, ಬಾಲ ಎಂಬ ಎರಡು ಭಾಗಗಳನ್ನು ಮಾತ್ರ ಹೊಂದಿ ಮತ್ಸ್ಯದಂತೆ ಕಾಣುತ್ತವೆ.

೩. ಹಿಂಗಾಲುಗಳು ಮೊದಲು ಬರುತ್ತವೆ. ಇವು ಆರಂಭದಲ್ಲಿ ಬಾಲದ ಹತ್ತರ ಸಣ್ಣ ಗಂಟುಗಳಾಗಿ ಕಾಣಿಸುತ್ತವೆ.

೪. ಕೆಲವು ದಿನಗಳ ನಂತರ ಮುಂಗಾಲುಗಳು ಬರುತ್ತವೆ.

೫. ಕಾಲುಗಳು ಬೆಳೆಯುತ್ತ ಬಂದಂತೆ ಬಾಲವು ಸುಕ್ಕಿ ಹೋಗಿ ಕಪ್ಪೆಯು ನೀರಿನಿಂದ ಹೊರಗೆ ಬರುತ್ತದೆ.

M. Ramabrham.

(೧೯೧೨ನೇ ವಿಶಂಬರ ಸಂಚಿಕೆಯಿಂದ ಮುಂದೆಸಾಗಿದ್ದು.)

ಪ್ರಾರ್ಥನೆಯ ಪದಗಳು.



(೧)

ಧಾಟಿ:—"ತಾಧಕರಿ ತಕಲ ತಹಲ ಥಿಥ" ಎಂಬ ಮರಾಠೀ ಪದದಂತೆ.
ರಾಗ ಸಾರಂಗ. ತಾಳ ಆದಿ.

ತೋರಿಸು ನೀಂ ಕೃಪೆಯಾ । ಸದಯಾಕರ ॥
ತೋರಿಸು ನೀಂ ಕೃಪೆಯಾ ॥ ಪಲ್ಲ ॥

ಕೋಮಲಾರ್ಭಕರು । ಪ್ರೇಮದೆ ಪಾಡುತ ।
ಸುಮತಿಯ ನೀಯಲು । ಬೇಡುವೆನ್ನೈ । ಸದಯಾಕರ ॥ ೧ ॥

ಶ್ರೀಪರಾತ್ಮಭವ । ತಾಪನಿವಾರಕ ।
ಸುಪಥವ ತೋರಿಸಿ । ಕಾಯುವದ್ಯೈ । ಸದಯಾಕರ ॥ ೨ ॥

---

(೨)

ಧಾಟಿ:—ಭಾಸ ಕಲಾ ಜಾಹಲಾ ಪಹಾಡಾ ಕಶಾಲಾ ॥ ಎಂಬ ಮರಾಠೀ ಪದದಂತೆ.
ರಾಗ ಧಾನಿಪಿಲೂ. ತಾಳ ದಾದರಾ.

ದೇವ ! ದಯಾಸಾಗರಾ ! । ಪಾವನಾತ್ಮ ಶ್ರೀಶಾ ॥
ಮೂಢ ಬಾಲರಯ್ಯ । ಬೇಡಿಕೊಂಬೆನೀಗ ।
ನಾಡುವೆನ್ನೈ ಲೋಕೇಶ । ಕಾಪಾಡು ಪ್ರೇಮಾಭಿರಾಮಾ ॥ ಪಲ್ಲ ॥

ಪರಮ ಕಾರುಣಿಕನು ನೀನು ।
ಪರಮ ಪಾತಕಿಗಳು ನಾವು ।
ನೆರೆ ನಿನ್ನನು ನಂಬಿರುವೆವು ।
ತೋರ್ಯೈ ಸದಾನಂದವನ್ನು ॥ ೧ ॥

ನಿರುತ ಕ್ಲೇಶ ಹರಣ ಮಾಡು ।
ಪರಮ ಸೌಖ್ಯವನ್ನು ನೀಡು ।
ತರುಳರನ್ನು ದಯದಿ ನೋಡು ।
ಆರ್ಯೆದು ಕಾಯಯ್ಯ ನೀನು ॥ ೨ ॥

---

(೩)

ಧಾಟಿ:—ತೋಡಿ ಕಲ ಸುರ ಸಪ್ತಸುರೀ ।
ಪಾಸಿ ತೋಸಿ ಕರ ನಿಹಾರಿ ॥
ಎಂಬ ಮರಾಠೀ ಪದದಂತೆ.
ರಾಗ ಪಹಾಡಿ. ತಾಳ ಏಕ.

ದೇವ! ಸಕಲ ಜಗದ ಪಿತನೆ ।
ಕಾವುದಯ್ಯ ತರುಳರನ್ನ ॥
ಪಾವನಾತ್ಮ ಪರಮ ಶಾಂತ ।
ಭೋ ವಿಭೋ! ಕರುಣದಲೀ ॥ ಪಲ್ಲ ॥

ತರುಳರೆಂದು ಜರೆಯಬೇಡ ।
ಕೊರತೆಯನ್ನು ಗಣಿಸಬೇಡ ।
ಪೊರೆಯಲು ಪಿಂಜರಿಯಬೇಡ ॥
ನೆರೆ ಶರಣಾಗತರಿರುವೆವು ॥೧॥
ಶಾಂತ ಚಿತ್ತವನ್ನು ಕೊಟ್ಟು ।
ಭ್ರಾಂತಿಯ ನೀಂ ಕಳೆದುಬಿಟ್ಟು ॥
ಅಂತ್ಯದಿ ತವಲೋಕದಲ್ಲಿ ।
ಸಂತಸವಾಗಿರಲು ಮಾಡು ॥ ೨ ॥

---

(೪)

ಧಾಟಿ:—" ಪಾ ಪ್ರಿಯಾ ಮುನಿಸೇತಕೇಗಳೆ ॥" ಎಂಬಂತೆ.
ರಾಗ ಭೈರವಿ. ತಾಳ. ಆದಿ.

ಕಾಯೊ ದೇವನೆ ಬಾಲರಾ । ಸುಖ ।
ದಾಯಕಾ ಜಗದೀಶ್ವರಾ ॥ ಪಲ್ಲ ॥

ನೀನೆ ಲೋಕವ ಮಾಡಿದಿ । ಶಶಿ ।
ಭಾನು ತೇಜವ ನೀಡಿದೀ ।
ಮಾನವಗೆ ನೆಲೆ ತೋರಿದೀ । ಅನ್ನ ।
ಪಾನಗಳ ಪೂರಯಿಸಿದಿ ॥೧॥

ವಂದಿವೆವು ಕರುಣಾತ್ಮನೇ । ನಾವ್ ।
ಮಂದಮತಿಗಳು ದೇವನೆ ॥
ತಂದೆ! ನೀನೇ ರಕ್ಷಿಸೈ । ನಿಜ ।
ಬಂಧು! ನೀನೇ ಪಾಲಿಸು ॥ ೨ ॥

ಪ್ರೀತಿ ತಾಳ್ವನು ತಂದೆಯೂ । ತೊಡ ।
ಲ್ಮಾತು ಕೇಳುತ ಬಾಲರಾ ॥
ಈ ತೆರದ ಜನ ರೀತಿಯಾ । ಪ್ರಿಯ ।
ತಾತ ತಾಳ್ಕೈ ಈಶ್ವರಾ ॥ ೩ ॥

---

(೫)

ಧಾಟಿ:—" ಏನಿದಚ್ಚರಿ ಪ್ರಿಯಾ । ಏಣಾಂಕವದನೆಯಾ ॥
ಎಂಬ ಪದದ ಪಲ್ಲದಂತೆ.

ರಾಗ:— ಭೂಪ ತಾಳ ರೂಪಕಾದಿ.

ನ್ಮಾಮಿ ಶ್ರೀ ಪರಮಾತ್ಮ । ಕಾಮಿತ ಸುಖದಾತಾ ।
ಪ್ರೇಮದೊಳೆಮ್ಮನು । ಪೊರೆಯೊ ತಾತಾ ॥
ನೇಮದಿ ನಿನ್ನ ಸು । ನಾಮವ ನೆನೆವೆವು ।
ಈ ಬಾಲಕರೊಳು । ನೀ ಮಾಡು ಕೃಪೆಯಾ ॥ ಪಲ್ಲ ॥
ಮೂಢ ಬಾಲರು ನಾವು । ಪಾಡಲಾರೆವು ನಿನ್ನ ।
ಗೂಢ ಮಹಿಮೆಯನು । ಗಾಢದಲಿ ॥
ಬೇಡಿಕೊಂಬೆವು ಕಾ । ವಾಡು ಸರ್ವೇಶ್ವರಾ ।
ರೂಢಿಯ ಜನಕೆಲ್ಲ । ಪಡೆದ ತಂದೆಯು ನೀನು ॥ ೧ ॥
ಮಂದಮತಿಗಳೆಂದು । ಕುಂದಿಟ್ಟಿಮ್ಮನು ನೀನು ।
ನಿಂದಿಸಲ್ಕಾರನು ಪೊಂದುವೆವು? ॥
ಒಂದೆ ಮನದಿ ಶರಣು । ಬಂದಿರ್ಪೆವೆಮಗಾ ।
ನಂದಸುಖವನಿಂದು । ತಂದೆಯೆ ಪಾಲಿಸು ॥ ೨ ॥
ಶಾಂತ ಚಿತ್ತವ ನೀಡು । ಭ್ರಾಂತಿಯ ನೀಡಾಡು ।
ಅಂತರಂಗದಿ ನಿನ್ನ ಭಕ್ತಿ ಕೊಡು ॥
ಅಂತ್ಯದಿ ನಿನ್ನ ಸು । ಶಾಂತ ಲೋಕಕೆ ಬರು ।
ವಂತೆ ಮಾಡಯ್ಯ ಸ । ರ್ವಾಂತರ್ಯಾಮಿಯು ನೀನು ॥ ೩ ॥

---

(೬)

ಧಾಟಿ:—" ಏಳು ಮಾತಿನ ಗಿಳಿಯೆ " ಇದರಂತೆ.

ರಾಗ ಉದಯ. ತಾಳ. ಝಂಪೆ.

ಕಾಯೊ ದೇವನೆ ನಿನ್ನ ನಂಬಿದೀ ಬಾಲಕರ ।
ನೀಯೊ ಇಷ್ಟಾರ್ಥವನು ಕೊಡು ಸುಭಕ್ತಿಯನು ॥ ಪಲ್ಲ ॥

ನಿನ್ನಿಂದಲೀಜಗವು ಜನ್ಮ ಹೊಂದುತ್ತಿಹುದು ।
ನಿನ್ನಿಂದಲೀ ಜಗವು ಪುಷ್ಟವಾಗುವದು ।
ನಿನ್ನಿಂದಲೀ ಜಗವು ಲಯವ ಹೊಂದುತ್ತಿಹುದು ।
ನಿನ್ನ ಮಹಿಮೆಯ ತಿಳಿದು ಬಣ್ಣಿಸುವದರಿದು ॥ ೧ ॥
ಆಗುವದು ನಿನ್ನಿಂದೆ ಸೂರ್ಯ ಚಂದ್ರೋದಯವು ।
ಮೇಘಗಳು ಕಾಲಕ್ಕೆ ಮಳೆಯ ಸುರಿಸುವವು ॥
ಆಗುವವು ಋತುಗಳೂ ಹಗಲು ರಾತ್ರಿಯು ತಾವು ।
ಸಾಗರವು ಭೂಮಿಯನು ಸುತ್ತಿಕೊಂಡಿಹುದು ॥ ೨ ॥

ನೀನೆ ಜನನಿಯು ಮೇಣು ಜನಕನೈಸರ್ವೇಶ ।
ನೀನೆ ಬಂಧುವು ನೀನೆ ಸಕಲಗುಣಕೋಶ ।
ನೀನೆ ಸದ್ಗುರು ನೀನೆ ಪ್ರೇರಕನು ಜಗದೀಶ ।
ನೀನೆಮ್ಮನುರೆ ಸಲಹು ಸರ್ವ ಜೀವೇಶಾ ॥ ೩ ॥

V. M. Tatti.

ಪತ್ರವ್ಯವಹಾರ.

ಕಾನಡಾ ಜಿಲ್ಲೆಯೊಳಗಿನ ಭೂಮಿ (ಗುಡ್ಡಗಾಡುಗಳ) ಎತ್ತರ ವಿವರಣೆ.

ಕಾರವಾರ ತಾಲೂಕು (ಮೇರೆ ಸಹ).

ಸ್ಥಳಗಳ ಹೆಸರು.	ಸಮುದ್ರ ಸಪಾಟಿಯಿಂದ ಎತ್ತರ ಫೂಟು.	ವಿವರಣೆ.
ಮಾಜಾಳಿಯಗುಡ್ಡ (ಅಂಗಡಿ)	೩೬೩	ಉತ್ತರಕ್ಕೆ ಗೋವೆಸರಹದ್ದಿನಲ್ಲಿರುವದು.
ಹಣಕೋಣದಗುಡ್ಡ	೧೦೬೪	ಉತ್ತರಕ್ಕೆ ಗೋವೆಯಕಡೆಗೆ ಇರುವದು.
ಕಾರವಾರಬಂದರದ ಗುಡ್ಡ	೬೮೦	ಬೈತಖೋಲದ ಆಖಾತದ ಸೆರೆ
ಅಜಾದ್ವೀಪದ ಗುಡ್ಡ	೧೫೫	ಚಂಡಿಯೆ ಪಶ್ಚಿಮಕ್ಕೆ ಇರುವದು.
ಹೇಮಜಾಲಿ ಗುಡ್ಡ	೧೬೬೭	ಕಾರವಾರದ ಪೂರ್ವಕ್ಕೂ ಕಿನ್ನರದ ದಕ್ಷಿಣಕ್ಕೂ ಆಗುವದು.
ಗುಡ್ಡೇಹಳ್ಳಿ ಗುಡ್ಡ	೮೦೫	ಪೂರ್ವಕ್ಕೆ
ಕಿನ್ನರದ ಗುಡ್ಡ	೬೩೩	ಕಿನ್ನರದ ದಕ್ಷಿಣಕ್ಕೆ
ಪಲ್ಲಾಳರದ ಗುಡ್ಡ	೬೫೦	ಉತ್ತರಕ್ಕೆ

ಕುನ್ನಿಪೇಟೆ ಗುಡ್ಡೆ	೭೦೯	ದಕ್ಷಿಣಕ್ಕೆ
ತಿರ್ಮೆ ಗುಡ್ಡೆ	೨೨೦೪	
ನಗೆಕೊಪ	೧೮೨೨೨	ದಕ್ಷಿಣಕ್ಕೆ
	೧೯೨೨೨	ಪೂರ್ವಕ್ಕೆ
ಕುಚ್ಚೆಕಾರ	೫೦೨೨	ಈಶಾನ್ಯ (ಮಾರ್ಗದ ಉತ್ತರ)
,, ಹಾಂಗುಡ್ಡೆ	೨೫೨೧	ನೈಋತ್ಯ
ಕೈಗಾ	೨೬೨೪	ದಕ್ಷಿಣ
ಹೈದರಘಟ್ಟದ ಪೂರ್ವ	೧೪೬೨	
ನಾಯತಿಸಾಂವರ	೬೯೩	
ಅಣತಿ ಪೂರ್ವದ್ದು	೧೯೧೦	ಸುವಾ ಜೇತೆಯಲ್ಲಿ
ಅಮದಳ್ಳಿ ಪೂರ್ವ	೧೫೫೨೪	
ಮುಡಗೇರಿ ಈಶಾನ್ಯ	೧೬೬೧	ಗೋವೆಯಗಡಿ
ಕದ್ರಾದಿಂದ ಅಣತಿ ಕಡೆಗೆ ಹೋಗುವ ಮಾರ್ಗದ ಪಶ್ಚಿಮ ಭಾಗದಲ್ಲಿ ಕ್ರಮವಾಗಿ	೧೬೬೨	೧ ಮೈಲು ದೂರ
	೧೬೨೨೨	ಮಾರ್ಗಕ್ಕೆ ಸಮೀಪ
	೧೬೫೫೫	೧ ಮೈಲು ದೂರ

ಪೂರ್ವಭಾಗದಲ್ಲಿ ಕ್ರಮದಿಂದ ೧೫೫೨೭ ಈಶಾನ್ಯ (ಕದ್ರಾದಿಂದ ೩ ಮೈಲು)

(ಸಶೇಷ)

ಧಾರವಾಡ ಟ್ರೇನಿಂಗ ಕಾಲೇಜದ ಶಾರೀರಿಕ ಶಿಕ್ಷಣದ ವಾರ್ಷಿಕೋತ್ಸವವು.

(ಬರೆದು ಬಂದದ್ದು.)

ಪರೀಕ್ಷೆಯಾದ ಬಳಿಕ ನಾಲ್ಕು ದಿನಗಳು.

(೦)

(ದಿಂಬರ ಸಂಚಿಕೆಯಿಂದ ಮುಂದೆಸಾಗಿದ್ದು)

ಒಟ್ಟಿಗೆ ಮೂರು ದಿವಸ ಪ್ರವಾಸಮಾಡಿ ಹಲವು ಪ್ರಕಾರದ ಉಪಯುಕ್ತ ಜ್ಞಾನವನ್ನೂ ಸಾಮಾಜಿಕ ಸದ್ಗುಣಗಳನ್ನೂ ಕಲಿತೆವು. ಪ್ರವಾಸ ಮಾಡುವಾಗ ಸುತ್ತಲಿನ ಸೃಷ್ಟಿಸೌಂದರ್ಯವನ್ನವಲೋಕಿಸುವದರಿಂದ

ನಮ್ಮ ಮನಸ್ಸು ಆನಂದಗೊಂಡಿತೆಂಬದಿಷ್ಟೇ ಅಲ್ಲ; ಸೃಷ್ಟಿಯಬಗ್ಗೆ ಆದರ ಬುದ್ಧಿಯುಂಟಾಯಿತು. ಅಲ್ಲದೆ ತುಸುದಿವಸಗಳಲ್ಲಿಯೇ ಅಗಲುವ ಪ್ರಿಯ ಮಿತ್ರರೊಡನೆ ಯಥೇಚ್ಛವಾಗಿ ಸಂಭಾಷಣ ಮಾಡಲಿಕ್ಕೆ ಅನುಕೂಲವಾಗಿ ಪ್ರೇಮವರ್ಧನವಾಯಿತು. ಇದರಂತೆಯೇ ಮ್ಯಾಜಿಕ್‌ಲ್ಯಾಂಟರ್ನದ ಸಹಾಯದಿಂದ ಸಂಗ್ರಹಿಸುವ ವಿಷಯಕ್ಕೆ ಮೂರ್ತಸ್ವರೂಪವು ಬರುವದರಿಂದ ಆ ವಿಷಯ ಸಂಗ್ರಹವು ದೃಢವಾಗಿ ಮನಸ್ಸಿಗೆ ಆನಂದವು ಉಂಟಾಯಿತು.

೧೫–೧೦–೧೭

ಈ ದಿವಸವು ಬಹಳ ಮಹತ್ವವಾದದ್ದೂ ಆನಂದಕಾರಕವೂ ಆಗಿತ್ತು. ಶರೀರಸಾಮರ್ಥ್ಯವನ್ನು ಬೆಳೆಯಿಸುವ ಹಲವು ಕಸರತ್ತಿನ ಆಟಗಳನ್ನು ಕಾಲೇಜದ ವಿದ್ಯಾರ್ಥಿಗಳು ಆಡಿತೋರಿಸಿದರು. ಆಟಗಳನ್ನು ಉತ್ತಮವಾಗಿ ಮಾಡಿತೋರಿಸಿದವರಿಗೆ ಇನಾಮುಗಳು ಕೊಡಲ್ಪಟ್ಟವು. ಈಪ್ರಸಂಗವು ನಮಗೆ ಒಂದು ದೊಡ್ಡ ಉತ್ಸವವಾಗಿ ತೋರಿತು. ಇದಕ್ಕೆ ವಾರ್ಷಿಕೋತ್ಸವವೆಂದು ಕರೆಯೋಣ. ಇಂಥ ವಾರ್ಷಿಕೋತ್ಸವಗಳು ಕಾಲೇಜದಲ್ಲಿ ಆಗುತ್ತಿರುವದು ಅವಶ್ಯವಾಗಿರುವದು. ಯಾಕಂದರೆ ಇದರಿಂದ ಮುಂದೆ ಪ್ರಾಥಮಿಕ ಶಾಲೆಗಳಲ್ಲಿ ಹುಡುಗರಿಂದ ಈಬಗೆಯ ಆಟಗಳನ್ನಾಡಿಸಲು ಅನುಕೂಲವಾಗುತ್ತದೆ. ಸ್ವಂತ ಕಾಲೇಜದ ವಿದ್ಯಾರ್ಥಿಗಳ ದೇಹದಾರ್ಢ್ಯವುಂಟಾಗುತ್ತದೆ. ಯಾವಯಾವ ಆಟಗಳಿಂದ ಯಾವಯಾವ ಅವಯವಗಳು ಬಲಹೊಂದುತ್ತವೆಂಬದರ ಕಲ್ಪನೆಯುಂಟಾಗುವದರಿಂದ ಯಾವದೊಂದು ಶಾಲೆಯಲ್ಲಿ ಯಾವದೊಂದು ಆಟದ ಅನನುಕೂಲವಿರಲು ಅದೇ ಆಟದ ಪರಿಣಾಮವಾಗುವ ಮತ್ತೊಂದು ಆಟವನ್ನು ಆಡಿಸುವ ವ್ಯವಸ್ಥೆಯನ್ನು ಮಾಡುವದಕ್ಕೆ ಶಿಕ್ಷಕನಿಗೆ ಸಹಾಯವಾಗುತ್ತದೆ. ಯಾವ ಯಾವ ಆಟಗಳನ್ನು ಹೇಗೆ ಹೇಗೆ ಆಡತಕ್ಕದ್ದೆಂಬ ತಿಳುವಳಿಕೆಯುಂಟಾಗುವದರಿಂದ ಹುಡುಗರು ಆಟಗಳನ್ನಾಡುವಾಗ ಅವರದೇಹಕ್ಕೆ ಅಪಾಯವಾಗದಂತೆ ಎಚ್ಚರ ಪಡುವದಕ್ಕೆ ಬರುತ್ತದೆ.

ಕಾಲೇಜದಲ್ಲಿ ಇಂಥ ಕಸರತ್ತಿನ ಆಟಗಳಾದದ್ದು ಇವೇ ಮೊದಲನೆಯ ವರ್ಷವೆಂದು ಕೇಳುತ್ತೇವೆ. ಆಟಗಳನ್ನು ಒಂದೆರಡು ದಿನಸ

ಗಳಲ್ಲಿಯೇ ತಯಾರಿಸುವ ಪ್ರಸಂಗವು ಬಂತು. ಇಷ್ಟು ಅಲ್ಪಾವಧಿಯಲ್ಲಿಯೇ ತಯಾರಿಸಿದರೂ ಅವರಾಡಿ ತೋರಿಸಿದ ಆಟಗಳು ಪ್ರೇಕ್ಷಣೀಯನನ್ನು ಆಶ್ಚರ್ಯಚಕಿತನನ್ನಾಗಿ ಮಾಡದೆ ಬಿಡಲಿಲ್ಲ. ಆಟಗಳು "ತಾಲೀಮುಖಾನೆ"ಯ ಸುತ್ತಲಿನ ಬೈಲಿನಲ್ಲಿಯೇ ಆದವು. ಆಟವಾಡತಕ್ಕ ಸ್ಥಳವನ್ನು ನಿಶಾನೆಗಳಿಂದಲೂ ತಳಿತೋರಣಗಳಿಂದಲೂ ಅಲಂಕರಿಸಿತ್ತು. ಸಾಯಂಕಾಲಕ್ಕೆ ಸರಿಯಾಗಿ ಳಟ್ಟಿದಿಂದ ಬಿಟ್ಟಿದ ವರೆಗೆ ಆಟಗಳಾದವು. ಆಟಗಳನ್ನು ನೋಡಿ ಇಂಥ ಆಟಗಳನ್ನಾಡುವದಕ್ಕೆ ಪ್ರೋತ್ಸಾಹನ ಕೊಡುವದಕ್ಕಾಗಿ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾದ ರಾ. ಸಾ. ಹುನಗುಂದರಾಯರೂ, ಹಾಯಸ್ಕೂಲ ಪೆ. ಮೂ. ರಾದ ಮಿ. ಚಂದಾವರಕರ ಇವರೂ ಪರೀಕ್ಷೆಗಾಗಿ ಬಂದಿದ್ದ ಎಲ್ಲ ಡೈಪೂಟಿ ಇನಸ್ಪೆಕ್ಟರರೂ ದಯಮಾಡಿಸಿದ್ದರು. ಈ ಎಲ್ಲ ಮಹನೀಯರು ಬಂದಕೂಡಲೆ ವಿದ್ಯಾರ್ಥಿಗಳು ಆನಂದಪ್ರದರ್ಶಕ ಚಪ್ಪಾಳೆಯನ್ನು ಬಾರಿಸಿದರು. ಆಮೇಲೆ ಆಟಗಳು ಪ್ರಾರಂಭಿಸಿದವು.

ಆಟಗಳು ವಿದ್ಯಾರ್ಥಿಗಳ ದೀರ್ಘಪ್ರಯತ್ನವನ್ನು ವ್ಯಕ್ತ ಮಾಡಿದವೆಂಬದರಲ್ಲಿ ಸಂಶಯವಿಲ್ಲ. ಹುಡುಗರ ಹಸ್ತ ಸಾಮರ್ಥ್ಯವೂ, ತೀವ್ರಗತಿಯೂ ಮೈಮಣಿಸೋಣವೂ ನೋಡತಕ್ಕಂಥವಿದ್ದವು. ಪ್ರೇಕ್ಷಕರೆಲ್ಲರೂ ತುಂಬಾ ಆನಂದಬಟ್ಟರೆಂಬದು ಅವರ ಮುಖಮುದ್ರೆಯ ಮೇಲಿಂದ ಸ್ಪಷ್ಟವಾಗಿ ಕಾಣುತ್ತಿತ್ತು.

ಶಿ. ಫ. ಭಂಡಿವಾಡ.

ಶ. ಬಾ. ಜೋಶಿ.

೩ನೇ ವರ್ಷದ ವಿದ್ಯಾರ್ಥಿಗಳು.

'ಅವರಡೇ' ಸಂಬಂಧದ ಬೀರಿಕಡೆಯ ಉತ್ಸವಗಳು.

(ಈ ದಿವಸ ಬೇರೆ ಬೇರೆ ಶಾಲೆಗಳಲ್ಲಿ ಆದ ಉತ್ಸವ ಮತ್ತು ಕೂಡಿದ ಹಣದಬಗ್ಗೆ ಬಂದ ಪತ್ರಗಳ ಸಾರಾಂಶವನ್ನು ಇಲ್ಲಿ ಕೊಟ್ಟಿರುವೆವು.)

೧. ಶಾಳಾ ಎರನಾಳ, ತಾಲೂಕು ಬಾಗೇವಾಡಿ:— ಶ್ರೀ. ಶಿವಲಿಂಗಪ್ಪಾ ಮರನೂರ ೨ ರೂ. ಗೋವಿಂದ ಪಾಂಡುರಂಗ ಕುಲಕರ್ಣಿ ೨ ರೂ. ವೀರನಗೌಡಾ ಪಾ

ಟೀಲ ೨ ರೂ. ಮಾಮಲ್ಲಪ್ಪಾ ಪಾಟೀಲ ೧ ರೂ. ನಿಂಗನಗೌಡಾ ಪಾಟೀಲ ೧ ರೂ. ಸಿದಗೌಡಾ ಓರೇಗೌಡರ ೧ ರೂ. ಬಾಬಣ್ಣಾ ಸೇಗುಣಸಿ ೧ ರೂ. ಗೋಪಾಳ ಪಾಂಡುರಂಗ ಕುಲಕರ್ಣಿ ೧ ರೂಪಾಯಿ.

ಈ ಶಾಲೆಯಲ್ಲಿ ಒಟ್ಟಿಗೆ ೧೪ ರೂ. ೧೨ ಆಣೆಗಳು ವಸೂಲಾಗಿದ್ದು ಅದರಲ್ಲಿ ೧೦ ರೂ. ೧ ಕ್ಯಾಶ್ ಸರ್ಟಿಫಿಕೇಟನ್ನು ತೆಗೆದುಕೊಂಡು ಅದರಿಂದ ಬಂದ ಬಡ್ಡಿಯನ್ನು ಶಾಲೆಯ ಉಪಕರಣಗಳ ಬಗ್ಗೆ ಉಪಯೋಗಿಸಬೇಕೆಂದೂ ಉಳಿದ ಹಣವನ್ನು ರೆಡ್ ಕ್ರಾಸ್ ಸೊಸಾಯಟಿಯ ಸಲುವಾಗಿ ಕೊಡಬೇಕೆಂದು ಠರಾವು ಮಾಡಲ್ಪಟ್ಟಿತೆಂದೂ ಅಲ್ಲಿಯ ಸ್ಕೂಲ ಮಾಸ್ತರ ಮಿ. ಅನಿೂನನಾ॥ ಉಪನಾಳ ಇವರು ತಿಳಿಸಿರುತ್ತಾರೆ.

೨. ಕನ್ನಡ ಶಾಳಾ–ಇಂಡಿ:— ಇಲ್ಲಿಯ ೨ನೇ ಅ॥ ಮಾಸ್ತರ ಮಿ. ತ್ರಿಶೈಲಪ್ಪಾ ಲಿಂಗಪ್ಪಾ ಆಲೂರ ಇವರು ತಮ್ಮ ಶಾಲೆಯಲ್ಲಿ ಮೆ. ಡಿ. ಡಿ. ಕಲೆಕ್ಟರ ಸಾಹೇಬರವರ ಅಧ್ಯಕ್ಷತೆಯ ಕೆಳಗೆ ಸಭೆಯು ಆಗಿ ಒಟ್ಟಿಗೆ ೫೦ ರೂ. ಗಳು ಕೂಡಿದವೆಂದೂ ಸಭೆಗೆ ಮೆ. ಮಾಮಲೇದಾರ ಸಾಹೇಬರವರ ಆಗಮನವೂ ಆಗಿತ್ತೆಂದೂ ತಿಳಿಸುತ್ತಾರೆ.

೩. ಶಾಳಾ ಬಡಸ, ತಾಲೂಕು ಬೆಳಗಾವ:— ಇಲ್ಲಿಯ ಹೆಡ್ ಮಾಸ್ತರರು ತಮ್ಮ ಶಾಲೆಯಲ್ಲಿ ೪ ರೂ. ಗಳು ಕೂಡಿದವೆಂದು ತಿಳಿಸುತ್ತಾರೆ.

೪. ಶಾಳಾ ಗುಡೂರ, ಜಿಲ್ಹಾ ವಿಜಾಪೂರ:— ಇಲ್ಲಿಯ ಹೆಡ್‌ಮಾಸ್ತರ ಮಿ. ರಾ. ಬ. ಜೋಶಿ ಇವರು ತಮ್ಮ ಶಾಲೆಯಲ್ಲಿ ಮಿ. ಅಡಬಡ್ಡಿ ಇವರಿಂದ ತಯಾರಿಸಲ್ಪಟ್ಟ 'ಶಿವಿ ಚಕ್ರವರ್ತಿ' ಎಂಬ ಲಘು ಸಂಗೀತ ನಾಟಕವು ಹೃದಯಂಗಮವಾಗಿ ಮಾಡಲ್ಪಟ್ಟಿತೆಂದೂ ಸಭೆಗೆ ತಮ್ಮ ಭಾಗದ ಅಸಿ॥ ಡಿ. ಎ. ಇನ್ಸಪೆಕ್ಟರ ಮಿ. ಬಂಡೆಪ್ಪನವರ ಇವರು ಬಂದದ್ದರಿಂದ ಹೆಚ್ಚು ಕಳೆಯೇರಿತೆಂದೂ ಒಟ್ಟಿಗೆ ೧೫ ರೂ. ಗಳು ಕೂಡಿದವೆಂದೂ ತಿಳಿಸುತ್ತಾರೆ.

೫. ಶಾಳಾ ಮೋರಟಗಿ, ತಾಲೂಕು ಸಿಂದಿಗಿ:— ಈ ಶಾಲೆಯಲ್ಲಿ ಒಟ್ಟಿಗೆ ೧೨ ರೂ. ೧೨ ಆಣೆಗಳು ಕೂಡಿದವೆಂದು ಒಬ್ಬ ಶಿಕ್ಷಕರಿಂದ ಬರೆದುಬಂದಿರುತ್ತದೆ.

೬. ಶಾಳಾ ಇಬ್ರಾಹಿಮಪೂರ, ತಾಲೂಕ ನವಲಗುಂದ:— ಈ ಶಾಲೆಯ ವಿದ್ಯಾರ್ಥಿಗಳು ಸದ್ಗೃಹಸ್ಥರ ಮನೆಗೆ ಹೋಗಿ ೭೫ ರೂ. ಗಳನ್ನು ಕೂಡಿಸಿದರೆಂತಲೂ ಸಭೆಯಲ್ಲಿ ೫ ರೂ. ಗಳು ಕೂಡಿದವೆಂತಲೂ ಓರ್ವ ಪ್ರೇಕ್ಷಕರು ತಿಳಿಸುತ್ತಾರೆ.

೭. ಶಾಳಾ ಸೂಡಿ, ತಾಲೂಕು ರೋಣ:— ಇಲ್ಲಿಯ ಸಭೆಗೆ ಮೆ. ಡಿ. ಎ. ಇನ್ಸಪೆಕ್ಟರ ಸಾ॥ ರವರು ದಯಮಾಡಿಸಿದ್ದರೆಂತಲೂ ಅವರು ಸ್ವಹಸ್ತದಿಂದ ೧ ರೂ. ಕೊಟ್ಟರೆಂತಲೂ ಒಟ್ಟಿಗೆ ೧೫ ರೂ. ೩ ಆಣೆಗಳು ಕೂಡಿದವೆಂತಲೂ ಮಿ. ಗೋಲಪ್ಪನವರ ಇವರು ತಿಳಿಸುವರು.

೮. ಶಾಳಾ ಗೋಕಾಕ ಫಾಲ್ಸ:— ಇಲ್ಲಿಯ ಹೆಡ್ ಮಾಸ್ತರ ಮಿ. ಗಣಾಚಾರ್ಯ ಇವರು ತಮ್ಮಲ್ಲಿಯ ಸಮಾರಂಭಕ್ಕೆ ಮೆ. ಮ್ಯಾನೇಜರಸಾಹೇಬ ಗೋಕಾಕ ಫಾಲ್ಸ ಈ

ಮಹನೀಯರು ದಯಮಾಡಿಸಿದ್ದರೆಂತಲೂ ರೆಡ್‌ಕ್ರಾಸ ಸೊಸಾಯಟಿಯ ಬಗ್ಗೆ ೫೦ ರೂ ೮ ಆಣೆಗಳು ಕೂಡಿದವೆಂತಲೂ ತಿಳಿಸುವರು.

೯. ಶಾಳಾ ಬಿಳ್ಳಟ್ಟಿ, ತಾಲೂಕ ಶಿರಹಟ್ಟಿ:— ಡೆಪ್ಯೂಟಿ ಚೇಅರಮನ್ ಮಿ. ಹನಮಪ್ಪಾ ಅಳವಂಡಿ ಇವರು ಇಲ್ಲಿಯ ಹೆ. ಮಾ. ಮಿ. ಕಿರ್ತ್ತೂರ ಇವರು ತಮ್ಮ ಉಪಶಿಕ್ಷಕ ಹಾಗೂ ವಿದ್ಯಾರ್ಥಿಗಳ ಸಹಾಯದಿಂದ ವೇಣೀಸಂಹಾರ ನಾಟಕವನ್ನು ಉತ್ತಮರೀತಿಯಿಂದ ಮಾಡಿ ತೋರಿಸಿದರೆಂತಲೂ ರೆಡ್‌ಕ್ರಾಸ ಸೊಸಾಯಟಿಯ ಬಗ್ಗೆ ೫೬ ರೂ. ಗಳು ಕೂಡಿದವೆಂತಲೂ ತಿಳಿಸುತ್ತಾರೆ.

ಸಾರ್ವಭೌಮರ ವಿಜಯ ಪ್ರಾರ್ಥನೆ.

ಪದ|| ರಾಗ ಸೂಂಪ| ತಾಳ—ಝಾಂಪರಾ|| (“ಜಗದೀಶಾ ನೀನೆ ಕಾಯಬೇಕು”)

ಪರಮೇಶಾ ನೀನೆ ರಕ್ಷಿಸೆಮ್ಮ ಪ್ರಭುಗಳಾ ।
ಪರಮ ಶೌರ್ಯ ಜಾರ್ಜ ಸೈಪರ ಕ್ಷಾತ್ರತೇಜಮಂ ॥೧॥
ನಿತ್ಯದೊಳು ಯುದ್ಧವಾರ್ತೆಯಲ್ಲಿ ಜಾರ್ಜರ ।
ಸ್ತುತ್ಯ ಸಂದೇಶವೀಯೊ ಕರುಣಸಾಗರಾ ॥೨॥
ಸಂದುಬಿಡದೆ ಹೊಂದಿಕೊಂಡ ಆಂಗ್ಲಭೂಮಿಗೆ ।
ಕುಂದುಬಾರದಂತೆ ಇಂದು ಕದನ ನಿಲ್ಲಿಸೋ ॥೩॥
ಯುದ್ಧದಿಂದ ಬದ್ಧರಾದ ಲಾಯಡ್ ಜಾರ್ಜರಾ ।
ಬುದ್ಧಿವೃದ್ಧಿ ಪೊಂಸೀಗ ದೇವದೇವಸೇ ॥೪॥
ರಾಜ್ಯದೊಳು ರಾಜ್ಯವಧಿಕ ಆಂಗ್ಲಭೂಮಿಯು ।
ವ್ಯಾಜ್ಯರಹಿತವಾಗಿ ನಾಮ ನಾರ್ಥವಾಗಲೀ ॥೫॥
ಜನರೆ ನೀವು ನಿಮ್ಮ ನಾರ್ವಭೌಮ ಭೂಪಗೆ ।
ಮನದಿ ವಚದಿ ಕಾಯದಿಂ ಸಹಾಯಮಾಡಿರಿ ॥೬॥
ಕ್ರಮದಿ ದುಷ್ಟ ಜರ್ಮನೀಶನನ್ನು ಜಯಿಸಲಿ ।
ಶ್ರಮವು ಸಾಧ್ಯವಾಗಿ ಜನರ ಸುಖವ ಹೆಚ್ಚಿಸೈ ॥೭॥
ಮೇರಿಮಹಾರಾಣಿ ನಾರ್ವಭೌಮ ಜಾರ್ಜರು ।
ಸಾರುವವಂದದಲಿ ಕೀರ್ತಿಗರ್ಹರಾಗಲೀ ॥೮॥
ಸೌಖ್ಯದೊಳು ಅಧಿಕ ಸೌಖ್ಯ ನಮ್ಮ ಜಾರ್ಜರಿಂ ।
ಮುಖ್ಯವಾಗಿ ದೊರೆತು ಜನರ ಕಷ್ಟಹಿಂಗಲೀ ॥೯॥

ತಿರಕಂಭಟ್ಟ

ಲ. ಮಾ. ಲಕ್ಕುಂಡಿ.

ವಿದ್ಯಾಖಾತೆಯ ನೋಟೀಸುಗಳು.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಲಿ. ನ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪುಸ್ತಕದ ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು.	ಮಂಜೂರು ಮಾಡಿದ ಬಗೆ ಮೈ.ಎ.ಇ.ನವ ಹ್ಯೂ ನಂ
೧	ಬಾಲಶಿಕ್ಷಣ.	ಮಿ. ವಿರುಪಾಕ್ಷಪ್ಪಾ ಚಿನ್ನಪ್ಪಾ ಹೂಲಿಗದಗ.	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳ ಇನಾಮಿನ ಪುಸ್ತಕದ ಬಗ್ಗೆ.	ಲಸಿಟಂ ೧೫—೧೨—೧೯೧೭
೨	ಭಗಿನೀ ಸಮಾಚಾರ.	ಮಿ. ಅ. ಅ. ಮಂಟಿಗಣೇಕರ ಮಾಸ್ತರ ಡಂಬಳ.	,,	ಪ್ರಾಥಮಿಕ ಶಾಲೆಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ.	ಲಸಿಶಿಒ ೧೬—೧೨—೧೯೧೭
೩	ಸರಸ್ವತಿ.	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.	,,	ಸದರ	ಲಸಿಶಿಳ ೧೫—೧೨—೧೯೧೭
೪	ರಾಣಾ ರಾಜಸಿಂಹ.	ಸದರ	,,	ಸದರ	ಲಸಿಶಿಗಿ ೧೫—೧೨—೧೯೧೭
೫	ಶ್ರೀಮಂತ ಬಾಜೀರಾವ ಬಲ್ಲಾಳ ಪೇಶವೆ.	ಸದರ	,,	ಸದರ	ಲಸಿಳಲ ೧೫—೧೨—೧೯೧೭
೬	ಗರ್ಭಿಣೀ ಶಿಶುಸಂಗೋಪನ.	ಮಿ ರಾಮರಾವ ಬಳ್ಳಾರಿ ಬುಕ್ಕಸೆಲರ ಧಾರವಾಡ.	,,	ಸದರ (ವಿಶೇಷತಃ ಹೆಣ್ಣು ಹುಡಿಗೆಯರ ಶಾಲೆಗಳಿಗೆ)	ಲಳಸಿಶಿ ೧೫—೧೨—೧೯೧೭
೭	ಜಯವಿಜಯ.	ಮಿ. ಹ್ಹಿ. ಸಿ. ಅಮಿನ.	,,	ಪ್ರಾಥಮಿಕ ಮತ್ತು ಸೆಕಂಡರೀ ಸ್ಕೂಲುಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ	ಲಳಸಿಲ ೧೫—೧೨—೧೯೧೭
೮	ಸೂರ್ಯೋದಯದ ರಾಜ್ಯವು	ಮಿ. ಎನ್, ವರದರಾಜ ಅಯ್ಯಂಗಾರ	,,	ಸದರ	ಲಳಳ ೧೫—೧೨—೧೯೧೭

Office of the Educational Inspector, S. D.

K. S. Hunguud.
Educational Inspector, S. D.

ಬೆಲ್ಜಿಯನ್ ಹುಡುಗರ ಸಹಾಯಾರ್ಥವಾಗಿ ವಸೂಲಾದ ಹಣದ ವಿವರವು.

ಬೆಳಗಾವ ಜಿಲ್ಲೆ.

ತಾ. ಅಥಣಿ

ಐಗಳಿ ೧೦–೯–೩, ಐನಾಪೂರ ೨೧–೧೨–೦, ಅಲಕನೂರ ೩–೦–೦, ಅನಂತಪೂರ ೪–೦–೬, ಬಳ್ಳೀಗೇರಿ ೧೨–೨–೦, ಬೆಗಡ ಮರಾಠಿ ೫–೨–೬ ದರೂರ ೬–೦–೦, ಹಾರೋಗೇರಿ ೧೧–೦–೦, ಹಿರೇಪಡಸಲಗಿ ೩–೮–೦, ಜನವಾಡ ೨–೦–೦, ಜುಗಳ ೭–೭–೬, ಕಾಗವಾಡ ೪–೮–೦, ಕಕಮರಿ ೫–೭–೦, ಕೋಹಳ್ಳಿ ೨–೨–೦, ಕೊಕಟನೂರ ೩೦–೦–೩, ಕೊಟ್ಟಲಗಿ ೨–೧೩–೯, ಕೊಟ್ಟಲಗಿ ಧೇಡ ೧೦–೧೫–೦, ಕುಡಚಿ ಮರ ೫ ೧೦–೧೦–೦, ಕುಡಚಿ ಉರ್ದು ೬–೦–೦, ಕುಡಚಿ ಉರ್ದುಗರ್ಲ ೩–೦–೦ ಖೋಟೀಕೊರಪ ೧೪–೧೧–೦, ಖೇಮಲಾಪುರ ೫–೦–೦, ಮದಭಾವಿ ೩–೪–೦, ಮಹಿಸವಾಡಗಿ ೧೦–೯–೦, ನಂದಗಾಂವ ೩–೨–೦, ನಂದೇಶ್ವರ ೫–೧೨–೦, ಸಪ್ತಸಾಗರ ೧೩–೦–೦, ಸತ್ತೀ ೧೦–೦–೦, ಸೌದಿ ೧೬–೦–೦, ಶೇಡಬಾಳ ೭೦–೦–೦, ಶೇಡಬಾಳ ಗರ್ಲ ೧–೪–೦, ಶೇಡಬಾಳ ಮರಾಠಿ ೯–೧೨–೦, ಶಿರಹಟ್ಟಿ ೩–೦–೦, ಶೂಪ್ಪಲಿ ೧೫–೦–೦, ತೆಲಸಂಗ ೫–೧೩–೦, ಉಗಾರ ೧೦–೧೦–೩, ಯಲಿಹಡಗಲಿ ೨–೪–೦, ಝುಂಜರವಾಡ ೩–೧–೬, ಒಂತು ೩೨೯–೩–೬.

ತಾ. ಬೆಳಗಾಂವ

ಅಡಕುರ ಮರಾಠಿ ೦–೪–೦, ಅಂಕಲಗಿ ೦–೪–೦, ಅರಳೀಕಟ್ಟಿ ೪–೪–೦, ಅಷ್ಟೇ ಮರಾಠಿ ೦–೧–೦, ಬಡಸ ೦–೧–೦, ಬಾಗೇವಾಡಿ ಕನ್ನಡ ೧೨–೦–೦, ಬಾಗೇವಾಡಿ ಗರ್ಲ ೨–೧–೦, ಬಾಗೇವಾಡಿ ಉರ್ದು ೪–೧೨–೩, ಸದರ ಗರ್ಲ ೦–೧–೦, ಪೋಲೀಸ ಸ್ಕೂಲ ಬೆಳಗಾಂವ ಮರಾಠಿ ೧–೦–೦, ಚಂದಗಡ ಮರಾಠಿ ೭೪–೮–೦, ಚಂದಗಡ ಉರ್ದು ೧–೪–೦, ಚಿಕ್ಕಬಾಗೇವಾಡಿ ೨–೪–೦, ನಾಟಿ ಮರಾಠಿ ೯–೪–೦, ಧಾಮಣೆ ೦–೪–೦, ಗರ್ಲಗುಂಜಿಮರಾಠಿ ೦–೪–೦, ಗವಸೆಮರಾಠಿ ೨–೪–೦, ಹಲಕರ್ಣಿಮರಾಠಿ ೦–೧೫–೦, ಹೇರೆ ಮರಾಠಿ ೦–೧೦–೦, ಹುದಲಿ ೮–೦–೦, ಕಾಲಕುಂದ್ರಿ ಮರಾಠಿ ೦–೪–೦, ಕಣಬರ್ಗಿ ೧೪–೧೯–೦, ಕಣವೀಕರವಿನಕೊಪ್ಪ ೨–೪–೩, ಮುರ್ಡಕಾನೂರ ಮರಾಠಿ ೨–೯–೦, ಕೆಣೆ ಮರಾಠಿ ೬–೯–೦, ಕೋಕರೆ ಮರಾಠಿ ೦–೪–೦, ಕಾಳುಂದ್ರೆ ಮರಾಠಿ ೦–೯–೦, ಕೊರಜಮರಾಠಿ ೧–೧೫–೦, ಕೋಚಾಡಮರಾಠಿ ೦–೬–೦, ಕುಡಚಿ ೨–೯–೩, ಕುದನೂರ ಮರಾಠಿ ೦–೪–೩, ಮೋದಗೆ ೦–೮–೦, ಮುತನಾಳ ೨–೪–೦, ನಂದೀಹಳ್ಳಿ ೦–೨–೦, ನಿಟ್ಟೂರ ಮರಾಠಿ ೦–೪–೦, ಪಾಟಣೆ ಮರಾಠಿ ೯–೦–೦, ರಾಜಗೋಳಿ ಮರಾಠಿ ೦–೪–೦, ತುರ್ಕಿಬಾಡಿ ಮರಾಠಿ ೦–೬–೦, ಒಟ್ಟು ೧೪೬–೧೩–೬

ತಾ. ಚಿಕ್ಕೋಡಿ

ಅಡೀ ಮರಾತಿ ೨-೬-೦, ಅಕ್ಕೀವಾಟ ೩-೨-೨, ಅಕ್ಕೀವಾಟ ಉರ್ದು ೧-೦-೦, ಅಕ್ಕೋಳ ಮರಾತಿ ೨೪-೬-೨, ಅಕ್ಕೋಳ ಧೇಡ (ಮರಾತಿ) ೨-೦-೦, ಅಂಕಲಿ ೧೮-೪-೦, ಅಪ್ಪಾಚಿವಾಡಿ ಮರಾತಿ ೩-೧೦-೦, ಔರವಾಡ ಮರಾತಿ ೪-೨-೦, ಔರವಾಡ ಉರ್ದು ೨-೪-೦, ಬಂಬಲವಾಡ ೧-೪-೦, ಬೆಡಕೀಹಾಳ ೬-೨-೦, ಬೆಳಕೂಡ ೫-೦-೦, ಬೆನಾಡಿಮರಾತಿ ೧೫-೪-೦, ಬೆನಾಡಿಧೇಡ ೨-೦-೦, ಭೋಜ ೨೬-೧೦-೦, ಭಿವಸಿ ಮರಾತಿ ೩ ೪-೦, ಬೋರಗಾಂವ ೩-೧೦-೬, ಬೋರಗಾಂವ ಉರ್ದು ೧-೩-೬, ಚಿಕ್ಕೋಡಿ ನಂ. ೧, ೫೨-೧೦-೦, ಚಿಕ್ಕೋಡಿ ನಂ. ೨, ೩-೧೪-೬, ಚಿಕ್ಕೋಡಿ ಗರ್ಲ ಮರಾತಿ ೪-೦-೯, ಚಿಕ್ಕೋಡಿ ಧೇಡ ೧೦-೪-೦, ಚಿಕ್ಕೋಡಿ ಉರ್ದು ೩-೧೪-೦, ಚಿಕ್ಕೋಡಿ ಉರ್ದು ಗರ್ಲ ೧-೦-೦, ಚಿಂಚಣೀ ೨-೦-೦ ಛೋಗೊವಾಡಿ ಮರಾತಿ ೨-೧೩-೦, ಗಳತಗೆ ೧೬-೦-೦, ಹತ್ತರವಾಟ ೬-೦-೦, ಹಿರೇಕೋಡಿ ೨-೧೪-೦, ಹುನ್ನರಗಿ ಮರಾತಿ ೩-೦-೦, ಇಂಗಳಿ ಮರಾತಿ ೩-೦-೨, ಜನವಾಡಮರಾತಿ ೩-೦-೬, ಜತ್ರಾಟ ಮರಾತಿ ೨-೦-೦, ಕಬ್ಬೂರ ೩-೦-೦, ಕಾಡಾಪೂರ ೨-೨-೬, ಕರಗಾಂವ ೧-೪-೦, ಕಾರದಗಾ ಮರಾತಿ ೧೧-೧೩-೦, ಕರೋಶಿ ೨-೦-೦, ಕರೋಶಿ ಉರ್ದು ೦-೧೨-೦, ಕೆರೂರ ೧-೪-೦, ಕೊಂಗನೋಳಿ ಮರಾತಿ ೧೦-೦-೦, ಕೊಂಗನೋಳಿ ಗರ್ಲ ಮರಾತಿ ೧-೦-೦, ಕೊಂಗನೋಳಿ ಉರ್ದು ೨-೦-೦, ಕೊಂಗನೋಳಿ ಧೇಡ ಮರಾತಿ ೦-೮-೦, ಕುನ್ನೂರ ಮರಾತಿ ೧೦-೦-೦, ಕುರ್ಲಿ ಮರಾತಿ ೧೩-೧-೦, ಮಲಿಕವಾಡ ಮರಾತಿ ೫-೦-೦, ಮಮದಾಪೂರ ಮರಾತಿ ೯-೬-೦, ಮೂಣಕಾಪೂರ ಮರಾತಿ ೧-೧೨-೦, ಮಾಂಗೂರ ಮರಾತಿ ೧೫-೦-೦, ಮಾಂಜರಿ ೧-೧೦-೦, ನಣದೀಮರಾತಿ ೧೦-೦-೦, ನೇಜ ೫-೨-೦, ಸದಲಗೆ ೩೫-೧೯-೦, ಸದಲಗಾಧೇಡ ೯-೦-೦, ಶಮನೇವಾಡಿ ೧೨-೫-೬, ಶೆಂಡೂರ ಮರಾತಿ ೩-೧೨-೦, ಶಿರಗುಪ್ಪಿ ಮರಾತಿ ೪-೯-೦, ಸೌಂದಲಗಾ ಮರಾತಿ ೯ ೫-೬-೦, ಟಾಕಳೀ ಮರಾತಿ ೨-೬-೦, ಯಡೂರ ಮರಾತಿ ೫-೦-೦, ಎಕ್ಸಂಬೇ ೪೦-೪-೦, ಎಕ್ಸಂಬೇ ಉರ್ದು ೨-೦-೦, ಶಿವಪರ್ಡಿ ಸ್ಕೂಲ ೧-೪-೦, ಅಂಕೂ ೪೭೪-೭-೯

ತಾ. ಹುಕ್ಕೇರಿ.

ಅಮ್ಮಣಗಿ ೬-೨-೬, ಬಡಕುಂದ್ರಿ ೫-೧-೦, ಬಾಗೇವಾಡಿ ಸದರ ಉರ್ದು ಕ್ಲಾಸಸಹಿತ ೨೨-೧೪-೦, ಬಾಗೇವಾಡಿ ಗರ್ಲ ೧-೦-೦, ಬಾಗೇವಾಡಿ ಧೇಡ ೦-೧೨-೦, ಬೆಳವಿ ೪-೯-೬, ಬೆನಕನಹೋಳಿ ೨-೦-೦, ದಡ್ಡಿ ಮರಾತಿ ೪-೭-೦, ಕೊಟಬಾಗಿ ೨-೧-೦, ಘೊಡಗೇರಿ ೭-೧೨-೩, ಹೆಬ್ಬಾಳ ೧೨ ೦-೦, ಹುಕ್ಕೇರಿ ೮೦-೧೧-೦, ಹುಕ್ಕೇರಿಗರ್ಲ ೨-೮-೦, ಹುಕ್ಕೇರಿ ಧೇಡ ೧-೨-೬, ಹುಕ್ಕೇರಿಉರ್ದು ೯-೦-೦, ಹುಲ್ಲೋಳಿ ೨-೮-೦ ಕಮತನೂರ ೫-೨-೦, ಕಣಗಲೀ ಮರಾತಿ ೪-೦-೦, ಕಣಗಲಿ ಧೇಡ ೧-೦-೦, ಕರಜಗಿ ೧-೦ ೬ ಕೊ ಚರಿ ೪-೧-೯, ಕುರಣೀ ೨ ೮-೦. ಮಜಲಿ ೪-೧೨-೦, ನಿಡ

ಸೋಸಿ ೭ ೦-೦. ನೇರ್ಲಿ ಲ-೬-೬, ನೇರ್ಲಿ ಉರ್ದು ೩-೮-೦. ಪಾಚ್ಛಾಪುರ ಲ ೦-೬ ಪಾಚ್ಛಾಪುರ ಉರ್ದು ೩-೧೫ ೬, ಪಾಚ್ಛಾಪುರ ಗರ್ಲ ೧-೦-೦, ಸಂಕೇಶ್ವರ ಮರಾಠಿ, ೩೬-೮-೦, ಸಂಕೇಶ್ವರ ಗರ್ಲ ಮರಾಠಿ ೩ ಲ-೦, ಸಾರಾಪುರ ೨-೮-೦, ಸೋಲಾಪುರ ಮರಾಠಿ ೩-೪-೦, ಶಿರಗಾಂವ ೨-೮-೦. ಉಳ್ಳಾಗಡ್ಡಿ ಖಾನಾಪುರ ೬-೬-೦, ವಂಟಮುರಿ ೩೬-೨-೬, ವಂಟಮುರೀ ಉರ್ದು ೩ ೧೩-೯, ವಂಟಮುರೀ ಗರ್ಲ ೧-೮-೦. ಯಾದಗುಡ ೪-೧೪-೦, ಯಲಿಮನೋಳಿ ೫-೫-೦. ಯಮಕನಮರಡಿ ಕನ್ನಡ ೩೮-೧೫ ೩, ಯಮಕನಮರಡಿ ಉರ್ದು ೧-೦-೦. ಅಂಕು ೩೬೩—೦—೦

ತಾ. ಗೋಕಾಕ.

ಅಕ್ಕತಂಗೇರಹಾಳ ೧-೮-೦, ಅಂಕಲಗಿ ೮-೪-೦, ಧೂಪದಾಳ ೦-೧೨-೦, ಹಂದೀ ಗುಂದ ೧-೧೯-೦, ಹುಲಕುಂದ ೪-೪ ೦, ಕಾಮನಕಟ್ಟಿ ೨-೦ ೦, ಕೊಣ್ಣೂರ ೯-೧೧-೬, ಕೊಣ್ಣೂರ ಉರ್ದು ೨-೦-೩, ಕೌಜಲಗಿ ೫-೦-೬, ಕುಲಿಗೋಡ ೭ ೨೬ ಕುಂದರಗಿ ೨-೦-೦, ಮಲ್ಲಾಪುರ ೦-೮ ೬, ಮಸುದಾಪುರ ೯-೧-೦, ಮಿಡಕನಹಟ್ಟಿ ೨-೦-೦, ಮುಡಲಗಿ ೪-೮-೦, ಮುಗಳಖೋಡ ೨-೮-೦, ನಂದಗಾಂವ ಖಾನಾಪುರ ೨-೭-೬, ಸಿಂದೀಕುರಬೇಟ ೩ ೨-೬, ಸಿಂದೀಕುರಬೇಟ ಉರ್ದು ೦-೭-೦, ಸುಲಧಾಳ ೮-೦-೦. ಅಂಕು ೭೭—೧೨—೩

ತಾ. ಖಾನಾಪುರ.

ಬೀಡಿ ೫-೬ ೬, ಚಿಕ್ಕಹಟ್ಟಿಹೊಳಿ ೧-೧೧-೦, ಗುಂಜೀ ಮರಾಠಿ ೧ ೧೨-೦, ಗೋದಗೇರಿ ಮರಾಠಿ ೫-೦-೦, ಹಲಶೀ ೪-೦-೦, ಹಲಶೀ ಉರ್ದು ೦-೮-೦, ಹಿರೇ ಮನೋಳಿ ೦-೮-೦, ಇಟಗಿ ೨-೦-೪೨, ಜಾಂಬೋಟಿ ಮರಾಠಿ ೩-೨-೦, ಕಕ್ಕೇರಿ ೧-೮-೦ ಕಣಕುಂಬಿ ಮರಾಠಿ ೧-೦-೦, ಖಾನಾಪುರ ಮರಾಠಿ ೩೧—೩-೦, ಖಾನಾಪುರ ಕನ್ನಡ ಕ್ಲಾಸ ೨೫-೦-೦, ಖಾನಾಪುರ ಗರ್ಲ ಮರಾಠಿ ೧೫-೧೧-೦, ಖಾನಾಪೂರ ೨-೦-೦ ಖಾನಾಪುರ ಛೇಡ ೩-೦-೦ ನಂದಗಡ ಮರಾಠಿ ೨೪-೦-೦, ನಂದಗಡ ೫-೪-೬, ನಂದಗಡ ಉರ್ದು ೩-೯-೦, ನಂದಗಡ ಉರ್ದು ಗರ್ಲ ೨-೦-೦, ಪಾರಶ್ವಾಡ ೯-೪-೬, ತೊಲಗಿ ೯-೧೦-೦, ಪೋಪಿನಕಟ್ಟಿ ೧-೦-೦. ಅಂಕು ೧೪೧—೯—೧೦೪.

ತಾ. ಪರಸಗಡ.

ಅಸುಂಡಿ ೭-೦-೦, ಏಸೀಡೋಣಿ ೫-೦-೦, ಚಚಡಿ ೩೦-೦-೦, ಚುಳಕೀ ೧-೮-೦, ಚುಂಚನೂರ ೯-೮-೦, ಗುರ್ಲಹೊಸೂರ ೩೦-೨-೦, ಹಂಚಿನಾಳ ೪-೪-೦, ಹಾರೋಗೊಪ್ಪ ೫-೨-೦, ಹಿರೇಕುಂಬಿ ೫-೦-೦, ಹೆಗ್ಗಸೂರ ೨೪-೧-೦, ಇಂಚಲ ೪-೮-೦. ಕರೀಕಟ್ಟಿ ೯-೩-೦, ಕಡಬಿ ೧-೦-೦, ಮರಕುಂಬಿ ೩-೦-೦, ಮನೋಳಿ ೧೬-೦-೦, ಮನೋಳಿ ಗರ್ಲ ೧-೦-೦, ಮನೋಳಿ ಉರ್ದು ೯-೮-೦, ಮುರಗೋಡ ೩೮-೦-೦,

ಬಾಲಕರ ವರ್ಗದ ವಿಷಯಗಳನ್ನು ಹೇಗೆ ಕಲಿಸಬೇಕು?

ಬರೆದು ಬಂದದ್ದು

(ದಿಶಂಬರ ಸಂಚಿಕೆಯಿಂದ ಮುಂದೆಸಾಗಿದ್ದು)

ಉದಾ: — ನಾನು ನಿನ್ನೆ ಅಂತಪ್ಪ (ಈ ಹುಡುಗನು ಕ್ಲಾಸಿನವನೇ ಇರಬೇಕು.) ನ ಮನೆಗೆ ಹೋಗಿದ್ದೆನು. ಆಗ ಅವನ ತಾಯಿಯು ನನಗೆ ಮೂರು ಚಕ್ಕಲಿ ಕೊಟ್ಟಳು. ಅದನ್ನು ನೋಡಿ ಅಂತಪ್ಪನೂ ಎರಡು ಚಕ್ಕಲಿ ತಂದು ಕೊಟ್ಟನು. (ಈ ಕಾಲಕ್ಕೆ ಶಿಕ್ಷಕನ ಸಹಿತವಾಗಿ ಎಲ್ಲರೂ ಅಷ್ಟಷ್ಟು ತಮ್ಮಮುಂದಿನ ವಸ್ತುಗಳನ್ನು ವ್ಯವಸ್ಥಿತವಾಗಿ ಬೇರೆಬೇರೆ ತೆಗೆದಿಡ ಬೇಕು.) ಆಗ ನನ್ನ ಬಳಿಗೆ ಎಲ್ಲಕೂಡಿ ಎಷ್ಟು ಚಕ್ಕಲಿಯಾದವು? ಎಂದು ಕೇಳಿ ಆ ವಸ್ತುಗಳನ್ನು ಕೂಡಿಸಿ ಎಣಿಸಲಿಕ್ಕೆ ಹೇಳಲು, ಎಲ್ಲರೂ ಎಣಿಸಿ ತಮ್ಮ ಉತ್ತರವನ್ನು ತಯಾರಿಸಿ ಇಡುವರು. ಆಗ ಎಲ್ಲರಿಂದಲೂ ಅಥವಾ ಬೇಕಾದ ಒಬ್ಬ ಹುಡುಗನಿಂದಲೂ ಉತ್ತರವನ್ನು ಹೊರಡಿಸಬಹುದು. ಈ ಪದ್ಧತಿಯಿಂದ ಹುಡುಗರು ಸಂತುಷ್ಟರಾಗಿ ಆಡುತ್ತಾಡುತ್ತಾ ಸಂಖ್ಯೆ ಗಳ ವಿಶಿಷ್ಟಜ್ಞಾನವನ್ನು ಮಾಡಿಕೊಳ್ಳುವರು. ಮೊದಲನೆಯ ಮೆಟ್ಟಿನಲ್ಲಿ ಹೇಳಿರುವ ವಿಷಯಗಳನ್ನು ಸಹ ಈ ಕಾಲದಲ್ಲಿ ವಿಶ್ರಾಂತಿಗಾಗಿ ನಡುನ ಡುವೆ ಸೇರಿಸಬೇಕೆಂಬಮಾತು ಮರೆಯತಕ್ಕದ್ದಲ್ಲ. ಇಲ್ಲಿಗೆ ಬಾಲಕರು ಎರಡನೆಯ ಮೆಟ್ಟು ಏರುವ ಕೆಲಸವು ಮುಗಿಯುತ್ತದೆ. ಇದೂ ಎರಡೇ ವಾರಗಳಲ್ಲಿ ಕೈಗೂಡಬಹುದು. ಅಥವಾ ಈಗಲೂ ಹೊಸ ಹೊಸ ಹುಡು ಗರು ಶಾಲೆಗೆ ಬರುತ್ತಿರುವ ಕಾಲವಿರುವದರಿಂದ ಮೂರು ವಾರಗಳವ ರೆಗೂ ಈ ಶಿಕ್ಷಣವನ್ನು ಸಾಗಿಸಲಿಕ್ಕೆ ಅಡ್ಡಿಯಿಲ್ಲ. ಪರಂತು ಇದಕ್ಕೂ ಹೆಚ್ಚಿನ ಕಾಲವನ್ನು ಇದರೊಳಗೆ ಕಳೆಯಕೂಡದು. ಯಾಕಂದರೆ ಈವಿಷಯಗಳನ್ನು ಅಲ್ಪಸ್ವಲ್ಪ ಮಾನದಿಂದ ಇದರ ಮುಂದಿನ ಮೆಟ್ಟಿನಲ್ಲಿಯೂ ಸೇರಿಸುವದಿ ರುತ್ತದೆ.

ಈಗ ಹುಡುಗರು ಶಾಲೆಗೆ ಮೆಚ್ಚಿದವರಾಗಿರುತ್ತಾರೆ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪರಿಚಯವೂ, ವಿಶ್ವಾಸವೂ, ಪ್ರೇಮವೂ ಉಂಟಾಗಿರು

ಮೂರನೆಯ ಮೆಟ್ಟು.

ವವು. ಮಕ್ಕಳ ಜಿಜ್ಞಾಸೆಯು ಬೆಳೆಯಹತ್ತಿದ್ದ ರಿಂದ ಅನೇಕ ವಿಷಯಗಳನ್ನು ಗುರುಗಳಿಂದ

ಅವರು ತಿಳಕೊಳ್ಳಲಿಕ್ಕೆ ಯತ್ನಿಸುವರು. ಕಥೆಗಳನ್ನು ಕೇಳಿ ಅವುಗಳ ಚಿತ್ರಗಳನ್ನು ನೋಡಿರುವರಷ್ಟೇ? ಅವನ್ನು ಮನಸ್ಸಿನಲ್ಲಿಟ್ಟುಕೊಂಡು, ತಮ್ಮ ಕಲ್ಪನೆಯಿಂದ ಅಂಥ, ಅಥವಾ ಬೇರೆತರದ ಚಿತ್ರಗಳನ್ನು ತೆಗೆಯಲಿಕ್ಕೆ ಅವರು ಎಣಿಸುವರು. ಅವರ ಮನಸ್ಸು, ಕಣ್ಣುಮೊದಲಾದ ಇಂದ್ರಿಯಗಳು, ಕೈಮೊದಲಾದ ಅವಯವಗಳು ಜಾಗ್ರತವಾಗಹತ್ತಿ ಹೆಚ್ಚು ಹೆಚ್ಚು ಕೆಲಸವನ್ನು ಹುಡುಕಹತ್ತುವವು. ಈ ಕಾಲದಲ್ಲಿ ಶಿಕ್ಷಕನು ಅವರ ಉತ್ಸಾಹಕ್ಕೆ ಯೋಗ್ಯವಾದ ದಿಕ್ಕು ತೋರಿಸಬೇಕಾಗಿರುವದು. ಈ ಕೆಲಸವು ಈ ಮೂರನೆಯ ಮೆಟ್ಟಿನಲ್ಲಿ ಕೊನೆಗಾಣುವದು. ಅಂದರೆ ಸ್ನಾಯುಗಳಿಗೂ ಇಂದ್ರಿಯಗಳಿಗೂ ಕೆಲಸ ಸಿಕ್ಕು ಅವುಗಳ ಪೋಷಣವೂ ಅಭಿವೃದ್ಧಿಯೂ ವ್ಯವಸ್ಥಿತವಾಗಿ ಆಗುವವು. ಇದರ ಉಪಾಯಗಳು ಕೆಳಗೆ ಬರೆದಿರುತ್ತವೆ.

೧. ಬೇರೆ ಬೇರೆ ತರದ ಆಕೃತಿಗಳನ್ನು ಮಣಿಗಳಿಂದಲೂ, ಕಡ್ಡಿಗಳಿಂದಲೂ ನೆಲದಮೇಲೆ ರಚಿಸುವದು.

೨. ಇವೇ ಆಕೃತಿಗಳನ್ನು ಪಾಟಿಯ ಮೇಲೆ ತೆಗೆಯುವದು.

೩. ಮಣಿಗಳನ್ನು ಪೋಣಿಸುವದು; ಮತ್ತು ಅವುಗಳಿಂದ ಬೇರೆ ಬೇರೆ ತರದ ಆಕಾರಗಳನ್ನು ನೆಲದಮೇಲೆ ಮಾಡುವದು.

೪. ಅಕ್ಷರಾವಯವಗಳನ್ನು ಪಾಟಿಯಮೇಲೆ ತೆಗೆಯುವದು.

೫. ಬೇರೆ ಬೇರೆ ತರದ ಎಲೆಗಳು, ಬಡಿಗೆ, ಶೀಸಪೇನು, ಪಾಟಿ, ಪುಸ್ತಕ ಮೊದಲಾದ ವಸ್ತುಗಳ ಚಿತ್ರವನ್ನು ಪಾಟಿಯಮೇಲೆ ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ತೆಗೆಯುವದು.

೬. ಕಥೆಗಳಲ್ಲಿ ಹೇಳಿದ ವಸ್ತುಗಳ ಚಿತ್ರಗಳನ್ನು ತೆಗೆಯುವದು.

೭. ಕಾಗದದ ಸುಲಭವಾದ ಮಡಿಕೆಗಳನ್ನು ವ್ಯವಹಾರಕ್ಕೆ ಅನುಸರಿಸಿ ಹಾಕುವದು.

೮. ಅಲ್ಲಿನಿಂದ ಮಾದರಿ (ಮಾಡೆಲ್)ಗಳನ್ನು ಮಾಡುವದು.

ಇವುಗಳನ್ನು ಉಪಯೋಗಿಸುವ ಕಾಲದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸಾಕಷ್ಟು ಉಪಕರಣಗಳ ಪೂರಯಿಕೆಯನ್ನು ಮಾಡಿಕೊಳ್ಳಬೇಕು. ಅಂದರೆ ಎಲ್ಲ ಹುಡುಗರೂ ಒಂದೇ ಕಾಲಕ್ಕೆ ಒಂದೇ ಕೆಲಸವನ್ನು ಮಾಡುವಂತೆ ಅನುಕೂಲತೆ ಮಾಡಿಕೊಳ್ಳಬೇಕು. ಹುಡುಗರು ಕೆಲಸಮಾಡುವಾಗ, ಶಿಕ್ಷಕನು ಅವರ ನಡುವೆ, ಸಮ್ಮುಖದಲ್ಲಿ ಕೂತು, ತಾನೂ ಅದೇ

ಕೆಲಸವನ್ನು ಮಾಡುತ್ತಿರಬೇಕು. ಅಂದರೆ ಹುಡುಗರು ಅವನು ಮಾಡುವ ದನ್ನು ನೋಡುತ್ತ ಕಲಿಯುವರು, ಮತ್ತು ಅದರಂತೆ ಮಾಡುವರು. ಇದ ರಿಂದ ಅವರಿಗೆ ಒಳಿತು ಹೀನಗಳ ತಾರತಮ್ಯವು ತಿಳಿದು ವಿಚಾರಶಕ್ತಿಯು ಪ್ರಾದುರ್ಭವಿಸುವದು. ಮೇಲೆ ಹೇಳಿದ ಉಪಾಯಗಳಲ್ಲಿ ಮೊದಲನೇ ಎರಡನೇ, ಮೂರನೇ, ನಾಲ್ಕನೇ, ಹಾಗು ಐದನೇ, ಆರನೆಯ ಉಪಾಯ ಗಳು ಒಂದಕ್ಕೊಂದು ಸಂಬಂಧಿಸಿ ಇರುತ್ತವೆಂಬದು ಬೇರೆಯಾಗಿ ಹೇಳ ಬೇಕಾಗಿಲ್ಲ. ಕೆಲಸವು ಸ್ಥೂಲದಿಂದ ಸೂಕ್ಷ್ಮಕ್ಕೆ, ಸುಲಭದಿಂದ ಕಠಿಣಕ್ಕೆ, ಸಾಗುವ ವ್ಯವಸ್ಥೆಯು ಅವುಗಳಲ್ಲಿ ಬರುತ್ತದೆ. ಆಕೃತಿಗಳ ಕ್ರಮವು ಮಾತ್ರ ಮೊದಲಿನದರಲ್ಲಿ ಬಹಳಷ್ಟು ಹೆಚ್ಚುಕಡಿಮೆ ಮಾಡದೆ ಮುಂದಿನ ದನ್ನು ರಚಿಸಲಿಕ್ಕೆ ಬರುವಂತೆ ಇರಬೇಕು. ಮೂರನೆಯ ಉಪಾಯದಲ್ಲಿ ಸುಣಿಗಳನ್ನು ಪೋಣಿಸುವದು ಹೇಳಿರುತ್ತದೆ. ಇದರಿಂದ ವರ್ತುಳಕ್ಕೆ ಸಂ ಬಂಧಿಸಿದ ಆಕೃತಿಗಳನ್ನು, ನಂ. ನಾಲ್ಕನೆಯದರಲ್ಲಿ ಹೇಳಿದ ಅಕ್ಷರಾವಯ ವಗಳನ್ನು ರಚಿಸಲಿಕ್ಕೆ ಯತ್ನಿಸಬೇಕು. ಈ ಅವಯವಗಳಿಗೆ ಸಹ ಕೆಲ ವೊಂದು ವ್ಯಾವಹಾರಿಕ ನಾಮವನ್ನು ಕೊಟ್ಟು ಹುಡುಗರ ಮನಸ್ಸಿನಲ್ಲಿ ಅವು ತೀವ್ರವಾಗಿ ನಡುವಂತೆ ಮಾಡುವ ಕೆಲಸವು ಶಿಕ್ಷಕನ ಚಾತುರ್ಯದ ನೂತಾಗಿರುತ್ತದೆ. ಅಕ್ಷರಾವಯವಗಳು:—

ಂ ಉಂಗುರ, ○ ಬಳೆ, ‿ ಬಟ್ಟಲ, ⌒ ಕೊಪ್ಪಿಗೆ ( ) ಕೋಡುಗಳು, ಉ ಹಾವು, ऽ ಕೋಳಿಯಗೋಣು, ⌓ ನಾಯಿಯಬಾಲ, ಹ ಸಾಯಿಕಲ್, ದ ಕುಂಬಳಕಾಯಿ. ಈ ಎರಡನೆಯ ನಾಲ್ಕನೆಯ ಉಪಾಯಗಳಲ್ಲಿ ಹೇಳಿದ ಆಕೃತಿಗಳನ್ನು ಶಿಕ್ಷಕನು ಕರಿ ಹಲಿಗೆಯ ಮೇಲೆ ತೆಗೆಯುತ್ತ ಹುಡುಗರಿಂದ ಪಾಟಿಯ ಮೇಲೆ ತೆಗಿಸ ಬೇಕು. ನಂ. ಐದನೆಯದರಲ್ಲಿ ಹೇಳಿದ ಚಿತ್ರಗಳು ಪಾಟಿಯ ಮೇಲಾಗಲಿ ಕರಿಹಲಿಗೆಯ ಮೇಲಾಗಲಿ ತೆಗೆಯುತಕ್ಕವು. ಮೊದಲು ಯಾವ ವಸ್ತುವಿನ ಚಿತ್ರವ ತೆಗೆಯ ಬೇಕಾಗಿರುವದೋ ಅದನ್ನು ಪ್ರತಿಯೊಬ್ಬರ ಹತ್ತರ ಒಂ ನೊಂದರಂತೆ ಕೊಟ್ಟು, ತಾನೂ ಒಂದು ತಕ್ಕೊಂಡು ಶಿಕ್ಷಕನು ಅದರ ಬೇರೆ ಬೇರೆ ಭಾಗಗಳನ್ನು ಬಾಲಕರಿಗೆ ನಿರೀಕ್ಷಿಸಲಿಕ್ಕೆ ಹೇಳಬೇಕು. ಆ ಮೇಲೆ ಅದನ್ನು ಪಾಟಿಯ ಮೇಲೆ ತೆಗಿಸಬೇಕು. ಈ ಕಾಲದಲ್ಲಿ ಶಿಕ್ಷಕನೂ ತಾನು ಕರಿಹಲಿಗೆಯಮೇಲೆ ತೆಗೆಯುತ್ತಿರಬೇಕು. ಒಮ್ಮೆ ಒಂದು ವಸು

ವಿನ ಚಿತ್ರವನ್ನು ತೆಗೆಯಿಸಿ ಬಳಿಕ ಆವಸ್ತುವಿನ ಸ್ಥಿತಿಯನ್ನು ಬದಲಿಸಿ ಅದರ ಚಿತ್ರವನ್ನು ಮತ್ತೊಮ್ಮೆ ತೆಗಿಸಬೇಕು. ಇದರಿಂದ ವಸ್ತುವಿನ ಸ್ಥಿತಿಯು ಬದಲಾದಂತೆ ಚಿತ್ರದಲ್ಲಾದರೂ ಹೆಚ್ಚುಕಡಿಮೆಯಾಗುವದೆಂದು ತಿಳಿದು ಬಾಲಕರಿಗೆ ಆನಂದವೂ ಆಶ್ಚರ್ಯವೂ ಆಗುವದು. ಹಿಂದಿನ ಎರಡನೆಯ ಮೆಟ್ಟಿನಲ್ಲಿ ಹೇಳಿದ ಕಥೆಗಳ ಚಿತ್ರವನ್ನೇ ಹುಡುಗರಿಂದ ತೆಗಿಸುವದು ಆರನೆಯ ಉಪಾಯವು. ಈಗಲಾದರೂ ಶಿಕ್ಷಕನು ಕರಿಹಲಿಗೆಯ ಮೇಲೆಯೂ ಬಾಲಕರು ಪಾಟಿಗಳ ಮೇಲೆಯೂ ಏಕಸಮಯವಾವಚ್ಛೇದದಿಂದ ಈ ಚಿತ್ರಗಳನ್ನಾದರೂ ತೆಗೆಯಬೇಕು. ಇವು ಇಯತ್ತಾಪತ್ರಿಕೆಯಲ್ಲಿ ಹೇಳಿದ ಮೇರೆಗೆ "ಆಗಸ್ ಬರ್ಗ್" ಡ್ರಾಯಿಂಗ ಪದ್ಧತಿಯಂತೆ ತೆಗಿಸಲು ಬಾಲಕರಿಗೆ ಅಷ್ಟು ಗಡಚು ಹೋಗುವದಿಲ್ಲ. ಆದ್ದರಿಂದ ಅವರು ಆನಂದದಿಂದ ತೆಗೆಯುತ್ತಾರೆ. ಕಾಗದ ಮಡಿಚುವಾಗಲೂ ಮೇಲೆ ಹೇಳಿದಂತೆ ವ್ಯವಹಾರಕ್ಕೆ ಉಪಯೋಗವಾಗುವಂತೆಯೂ, ಮೊದಲಿನ ರಚನೆಯೇ ಮುಂದಿನದಕ್ಕೆ ಬಹಳಷ್ಟು ಉಪಯುಕ್ತವಾಗುವಂತೆಯೂ ಎಚ್ಚರ ಗೊಳ್ಳಬೇಕು. ಅರ್ಜಿನ ಕೆಲಸದಲ್ಲಿ ಎಲ್ಲರ ಕೂಡ ಒದ್ದೆಯು ಅರಿವೆಯಿದ್ದು, ಕ್ಲಾಸಿನಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವ ಕೆಲಸವು ಮಹತ್ವವುಳ್ಳದ್ದಿರುತ್ತದೆ. ಈ ಮೂರನೆಯ ಮೆಟ್ಟಿನ ಶಿಕ್ಷಣವು ಒಂದು ತಿಂಗಳವರೆಗೂ ನಡೆಯಬೇಕು. ಅಂದರೆ ವಿದ್ಯಾರ್ಥಿಗಳು ನಾಲ್ಕನೆಯ ಅಂದರೆ ಮಹತ್ವದ ಮೆಟ್ಟಿನ್ನು ಏರಲಿಕ್ಕೆ ಸಿದ್ಧರಾಗುವರು. ಮತ್ತು ಈ ಕೆಲಸವು ಮುಗಿಯಿತೆಂದರೆ ಅವರು ಪ್ರಾಥಮಿಕ ಶಿಕ್ಷಣದ ಆಲಯದಲ್ಲಿ ಸೇರುವರು. ಆ ಆಲಯದ ಬೇರೆ ಬೇರೆ ಭಾಗಗಳಲ್ಲಿ ಪ್ರವೇಶಿಸಿ ಅವುಗಳ ಜ್ಞಾನ ಮಾಡಿಕೊಳ್ಳುವದು ಮುಂದಿನ ಮಾತಾಗಿರುತ್ತದೆ.

ನಾಲ್ಕನೆಯ ಮೆಟ್ಟು.

ಮೇಲೆ ವಿವೇಚಿಸಿದಂತೆ ಬಾಲಕರ ಈ ವರೆಗಿನ ಶಿಕ್ಷಣದಲ್ಲಿ "ಶಿಕ್ಷಕರಿಗೋಸ್ಕರ ಸೂಚನೆಗಳು" ಎಂಬ ಪುಸ್ತಕದಲ್ಲಿ ಹೇಳಿದ ಆಕೃತಿ ಬಣ್ಣ ಇವುಗಳ ಜ್ಞಾನಮಾಡಿಕೊಡುವದು, ಅಕ್ಷರ ಕಲಿಸುವದು, ಅಂಕಿ ಮೊಗ್ಗೆಗಳನ್ನು ಹೇಳಿಕೊಡುವದು ಈ ವಿಷಯಗಳು ಬಂದಿಲ್ಲ. ಇವು ಈ ಮೆಟ್ಟಿನಲ್ಲಿ ಕಲಿಸಲ್ಪಡಬೇಕು. ಬಣ್ಣಗಳು ಸಾಮಾನ್ಯವಾಗಿ ಯಾವಾಗಲೂ ವಸ್ತುಗಳಿಂದ ಸಹಿತವಾಗಿರುತ್ತವೆ. ವಸ್ತುಪಾಠಗಳೊಡನೆಯೇ ಈ ಬಣ್ಣಗಳ ಮಾಹಿತಿಯನ್ನೂ

ಮಾಡಿ ಕೊಡಬೇಕಲ್ಲದೆ, ಬಣ್ಣಗಳಲ್ಲಿ ವರ್ಗೀಕರಣಮಾಡಿ ಪ್ರಾಥಮಿಕ (ಮೂಲ,) ಮಿಶ್ರ ಬಣ್ಣಗಳನ್ನು ಮೊದಲಿಗೇ ಹೇಳುವದು ಕಠಿಣವಾಗುವದು. ಆದ್ದರಿಂದ ಶಿಕ್ಷಕನು ಪ್ರತಿಯೊಂದು ಬಣ್ಣದ ಹಲವು ಒಡವೆಗಳನ್ನು ತಂದು ಹುಡುಗರ ಮುಂದೆ ಇಟ್ಟು, ಇವು ಕೆಂಪು ಬಣ್ಣದ ಒಡವೆಗಳು, ಇವು ನೀಲಿಯ ಬಣ್ಣದವು, ಇವು ಹಸರು, ಇವು ಬಿಳಿಯವು ಎಂದು ತಿಳಿಸಿ ಹೇಳಬೇಕು. ಆ ಮೇಲೆ ಆ ಎಲ್ಲ ಬಣ್ಣದ ವಸ್ತುಗಳನ್ನು ರಾಶಿಮಾಡಿ ಅವು ಗಳೊಳಗಿಂದ ಬೇರೆ ಬೇರೆ ಬಣ್ಣದವುಗಳನ್ನು ವಿಂಗಡಿಸಲಿಕ್ಕೆ ಹೇಳಬೇಕು. ಇದರಿಂದ ಬಾಲಕರಿಗೆ ಬಣ್ಣದ ಸಾಮಾನ್ಯ ಜ್ಞಾನವಾಗಲಿಕ್ಕೆ ಅಡ್ಡಿಯಿಲ್ಲ. ಇವುಗಳ ವಿಶೇಷ ಜ್ಞಾನವನ್ನೂ, ಶಾಸ್ತ್ರೀಯ ವರ್ಗೀಕರಣವನ್ನೂ ಅವರು ಮುಂದಿನ ಇಯತ್ತೆಗಳಲ್ಲಿ ಮಾಡಿಕೊಳ್ಳಬಹುದು. ಆಕೃತಿಗಳ ಜ್ಞಾನವು ಹಿಂದೆ ಮೂರನೆಯ ಮೆಟ್ಟಿನಲ್ಲೇ ಆಗಿರುವದು ಈಗ ಅಂಥ ಸುಲಭವಾದ ಆಕೃತಿಗಳಿಗೆ ಹೆಸರುಗಳನ್ನು ಕೊಡುವದಿರುತ್ತದೆ. ಇವನ್ನು ಮೊದಲೇ ಭೂಮಿತಿಯ ಪರಿಭಾಷೆಯಿಂದ ಹೇಳದೆ, ಬಳಿಕೆಯ ಒಡವೆಗಳಿಗೆ ಸಂಬಂ ಧಿಸಿ ಹೇಳುವದು ಲೇಸು. ಸರಳರೇಖೆ, ವಕ್ರರೇಖೆ, ವರ್ತುಳ, ಅರ್ಧವ ರ್ತುಳ, ಚೌಕೋನ, ತ್ರಿಕೋನ, ಕೋನ, ಈ ಆಕೃತಿಗಳ ಜ್ಞಾನವನ್ನು ಕಟ್ಟಿಗೆಯ ಹಲಿಗೆ ಕಾಗದಹಾಳಿ, ಬಳೆ, ಉಂಗುರ, ದುಡ್ಡು, ದಾರ, ಕಡ್ಡಿಗಳು ಇವುಗಳ ಸಹಾಯದಿಂದ ಮಾಡಿಕೊಡಬೇಕು. ಗೋಲ, ಘನ, ಸಿಲಿಂಡರ ಇವುಗಳ ಮಾಹಿತಿಯನ್ನೂ ಈಗ ಹೇಳಬಹುದು.

ಈಗ ಮಕ್ಕಳ ನಿರೀಕ್ಷಣಸಾಮರ್ಥ್ಯವೂ ಜಿಜ್ಞಾಸೆಯೂ ಬೆಳೆದಿರು ವವು. ಇಂದ್ರಿಯಗಳಿಗೆ ತಕ್ಕಕೆಲಸವು ಸಿಕ್ಕಿದರಿಂದ ಅವುಗಳ ಸಾಮರ್ಥ್ಯ ವಾದರೂ ಬೆಳೆಯ ಹತ್ತುವದು. ಸ್ನಾಯುಗಳೂ ಕಾರ್ಯಕ್ಷಮವಾಗಿರು ವವು. ಅವರ ಈ ಸುಧಾರಣೆಯು ಅಕ್ಷರಗಳ ಜ್ಞಾನದಿಂದ ಪೂರ್ಣತೆಯ ನ್ನು ಪಡೆಯಬೇಕಾಗಿದೆ. ಶಾಲೆಗಳಲ್ಲಿ ಕಲಿಸುವ ವಿಷಯಗಳೆಂದರೆ ಇಡೀ ಜಗತ್ತಿನ ಮಾನದಿಂದ ಏನೂ ಇಲ್ಲ. ಇಂಥ ಅಗಾಧ ವಿಷಯಗಳ ಜ್ಞಾನ ವನ್ನು ಅಲ್ಪಸ್ವಲ್ಪವಾದರೂ ಮಾಡಿಕೊಳ್ಳಲಿಕ್ಕೆ ಓದುಬರಹಗಳ ಅವಶ್ಯಕ ತೆಯು ಬಹಳವುಂಟು. ಈ ಓದುಬರಹಗಳನ್ನು ಕಲಿಯುವದಕ್ಕಿಂತ ಮುಂ ಚೆ ಬಾಲಕರು ಅಕ್ಷರಗಳನ್ನು ಕಲಿಯಬೇಕೆಂದು ಸಾಮಾನ್ಯರೂಢಿಯುಂ ಟು. ಇವನ್ನು ಮಕ್ಕಳಿಗೆ ಹೇಗೆ ಕಲಿಸಬೇಕೆಂಬ ವಿಷಯದಲ್ಲಿ ಮುತಭೇದ

ವಿದೆ. ಕೆಲವರು ಮೂಲಾಕ್ಷರಗಳ ಕ್ರಮದಂತೆ "ಅ, ಆ,...." ಹಿಡಿದು ಕ್ರಮದಿಂದ ಕಲಿಸಬೇಕೆಂತಲೂ, ಹಲವರು ಈ ಪದ್ಧತಿಯಿಂದ ಕಲಿಸಲು "ಸುಲಭದಿಂದ ಕಠಿಣಕ್ಕೆ ಸಾಗುವ" ತತ್ವವು ಸಿದ್ಧಿಸದೆ, ವಿಷಯವು ನೀರಸವಾಗುವದರಿಂದ ಯಾವತ್ತು ಮೂಲಾಕ್ಷರಗಳಲ್ಲಿ ಅವುಗಳ ಚಿಹ್ನಗಳ ಸುಲಭತೆಯ ಮಾನದಿಂದ ಬೇರೊಂದು ವಿಧವಾಗಿ ವರ್ಗೀಕರಣವನ್ನು ಮಾಡಿ, ಸುಲಭಾಕ್ಷರಗಳನ್ನು ಮೊದಲು ಕಠಿಣವಿದ್ದವುಗಳನ್ನು ಕಡೆಗೆ ಕಲಿಸಬೇಕಂತಲೂ, ಬೇರೆ ಕೆಲವು ಜನರು ಈ ಎರಡನೆಯ ಪದ್ಧತಿಯು ಸಹ ಭಾಷಾತತ್ವಕ್ಕೂ ವ್ಯವಹಾರಕ್ಕೂ ಅನುಕೂಲಿಸಿ ಇಲ್ಲದ್ದರಿಂದ ಇವರಲ್ಲಿಯೂ ಸುಧಾರಣೆಯುಂಟಾಗಬೇಕೆಂತಲೂ ಹೇಳುತ್ತಾರೆ. ಇವರ ಅಭಿಪ್ರಾಯವೇನೆಂದರೆ— ಮೊದಲಿಗೇ ಹುಡುಗರು ಚಿಕ್ಕವರು, ಓದುಬರಹಗಳಲ್ಲಿ ಅವರ ಆಸಕ್ತಿಯಿರುವದು ಸ್ವಾಭಾವಿಕವಾಗಿ ಕಡಿಮೆ. ಪ್ರಾಚೀನಕಾಲದ ಗುರುಕುಲದಲ್ಲಿ ವಾಸಮಾಡಿದ್ದು ಅನೇಕತರದ ಸೇವೆಗಳಿಂದ ಗುರುಪ್ರಸಾದವನ್ನು ಸಂಪಾದಿಸಿ ಮಕ್ಕಳು ತಾವಾಗಿ ಕಲಿಯಲಿಕ್ಕೆ ಹವಣಿಸುವದಲ್ಲಿಯೂ, ಈಗಿನ ಕಾಲದ ಮಾಸಿಕವೇತನವನ್ನು ಪಡೆದು ಕರ್ತವ್ಯಕರ್ಮವೆಂದು ತಿಳಿಯದಿದ್ದರೂ—ನಿದಾನ ತನಗೆ ಸಿಗುತ್ತಿರುವ ವೇತನದಾಶೆಗಾಗಿ, ಶಿಕ್ಷಣದ ಗಂಧ-ಗಾಳಿಯಿಲ್ಲದ ಕುಟುಂಬಗಳಲ್ಲಿ ಜನಿಸಿದ ಮಕ್ಕಳಿಗೆ ಸಹ ಶಾಲೆಗೆ ಬರುವಂತೆ ಮಾಡಿ, ಪ್ರಸಂಗ ಬಂದಾಗ ತನ್ನ ವೇತನದ ಕೆಲವಂಶವನ್ನು ಈ ಕೆಲಸಕ್ಕಾಗಿಯೇ ಖರ್ಚು ಮಾಡುತ್ತ ಶಿಕ್ಷಕನು ತಾನಾಗಿ ವಿದ್ಯಾರ್ಥಿಗಳಿಗೆ ಬಾಲಕರಿಗೆ ಕಲಿಯಲಿಕ್ಕೆ ಹವಣಿಸುವಂತೆ ಮಾಡುವದರಲ್ಲಿಯೂ ಆಕಾಶ ಪಾತಾಳದಷ್ಟು ತಾರತಮ್ಯವಿದೆ. ಶಹರದ ಶಾಲೆಗಳಲ್ಲಿ ಬಿಂನೊಮ್ಮೆ ಈ ಅನುಭವವು ಬಂದಿರದಿದ್ದರೂ, ಶಿಕ್ಷಕರಿಗೆ ಹಳ್ಳಿಗಳಲ್ಲಿ ಅದು ಬಹಳಮಾಡಿ ತಪ್ಪುವಂತಿಲ್ಲ. ಭಾಷಾಶಾಸ್ತ್ರದ ಇತಿಹಾಸದ ಕಡೆಗೆ ನೋಡಿದರೆ ವರ್ಣಗಳ ವರ್ಗೀಕರಣವು ಹಿಂದಿನಿಂದ ಆದದ್ದು ತೋರಿ ಬರುತ್ತದೆ. ಶಿಶುಗಳು ಮಾತಾಡಲಿಕ್ಕೆ ಅರಂಭಿಸುವಾಗ ಯಾವಕ್ರಮವಿರುತ್ತದೆಂಬದನ್ನು ನೋಡಿ. ಅವು ಮೊದಲು ಒಂದೊಂದೇ ವರ್ಣಗಳನ್ನು ಮತ್ತೆ ಅವು ಅಸ್ಪಷ್ಟವಾಗಿ ಉಚ್ಚರಿಸುತ್ತಿದ್ದರೂ ಆವರ್ಣಗಳು ಯಾವದೊಂದು ವಿಷಯಕ್ಕೆ ಅಂದರೆ ಅವು ಯಾವದೊಂದು ವಸ್ತುವನ್ನಾಗಲಿ ಸಂಗತಿಯನ್ನಾಗಲಿ ಬೋಧಿಸುತ್ತವಲ್ಲನೆ "ಅ, ಪ, ರ" ಈ ಅಕ್ಷರಗಳಂತೆ

ಸರ್ವಿಷಯಗಳಲ್ಲ. ಮಕ್ಕಳಿಗೆ ಓದುಬರಹವನ್ನು ಕಲಿಸುವಾಗಲಾದರೂ ನಾವು ಈ ತತ್ವವನ್ನು ಮರೆಯತಕ್ಕದ್ದಲ್ಲ. ಈಗಿನ "ಬಾಲಬೋಧಿನಿ"ಯಲ್ಲಾದರೂ ಈ ತತ್ವವು ಪೋಷಿಸಲ್ಪಡಲಿಲ್ಲ. ಸುಲಭ ಕಠಿಣಗಳ ಕ್ರಮದಂತೆ ಅದರಲ್ಲಿ ಮೂಲಾಕ್ಷರಗಳ ಏರ್ಪಾಡನ್ನು ಮಾಡಿ, ಆ ಅಕ್ಷರಗಳನ್ನು ಯಾವದೊಂದು ವಸ್ತುವಿಗೆ ಅಥವಾ ಚಿತ್ರಕ್ಕೆ ಸಂಬಂಧಿಸಿ ಕಲಿಸುವಂತೆ ವ್ಯವಸ್ಥೆ ಮಾಡಿದ್ದರೂ ಅದೂ ಅಪೂರ್ಣವಾಗಿದೆ. ಇಷ್ಟೇ ಅಲ್ಲ, ಗುಣಿತಾಕ್ಷರಗಳ ಶಾಸ್ತ್ರೀಯ ರಚನೆಯಿಂದ ಅದು ಮತ್ತಷ್ಟು ಗಹನವಾಗಿದೆ. ಓದುವ ಪಾಠಗಳಲ್ಲಿ ಒತ್ತಕ್ಷರಗಳ ಗೊಂದಲವಾಗದಿದ್ದಹಾಗೆ ಜಾಗ್ರತೆ ತೆಗೆದುಕೊಳ್ಳಲ್ಪಟ್ಟಿದ್ದರೂ ಅವುಗಳ ವಾಕ್ಯಗಳಲ್ಲಿ ಪರಸ್ಪರ ಸಂಬಂಧವಿಲ್ಲ. ಏಷ್ಟೋವಾಕ್ಯಗಳ ಅರ್ಥವೇ ಆ ಚಿಕ್ಕಮಕ್ಕಳಿಗೆ ತಿಳಿಯುವದು ಒತ್ತಟ್ಟಿಗಿರಲಿ, ದೊಡ್ಡವರ ಬುದ್ಧಿಗೆ ಕೂಡ ಹೊಳೆಯುವದಿಲ್ಲ. ಅರ್ಥದೊಂದಿಗೆ ಓದಬೇಕೆಂಬ ಉದ್ದೇಶವು ಅದರ ರಚನೆಯಲ್ಲಿ ಇಟ್ಟಿಲ್ಲವೆಂದು ಹೇಳಿದರೂ ಈ ನಿರರ್ಥಕವಾದ ಓದುಬರಹವು ಅವ್ಯವಹಾರ್ಯವಾಗುವದರಿಂದ ಅಮಾತು ಸಮಂಜಸವಾಗಲಾರದು. ಮೇಲಾಗಿ ಆ ಒತ್ತಕ್ಷರಗಳಾದರೂ ಯಾವ ಪಾಪ ಮಾಡಿರುತ್ತವೆ? ಬಾಲಕರ ವ್ಯವಹಾರದಲ್ಲಿ ಬರುವ ಯಾವ ಒತ್ತಕ್ಷರವನ್ನಾದರೂ ಕಲಿಸಲಿಕ್ಕೆ ಅಡ್ಡಿಯಿಲ್ಲ. ಇಷ್ಟೇ, ಆಒತ್ತಕ್ಷರಗಳು ಅವರ ಪರಿಚಯದ ವಸ್ತುವಿಷಯಕ ಸಂಗತಿಯೊಳಗೆ ಇಲ್ಲವೆ ಕಥೆಯೊಳಗೆ ಬಂದಿರಬೇಕು. ಹಾಗಾದರೆ ಮುಂದೆ ಒಂದನೆಯ ಇಯತ್ತೆಯನ್ನು ಕಲಿಯುವಾಗ ಯಾವತ್ತು ಒತ್ತಕ್ಷರಗಳನ್ನು ಹೇಳಬೇಕಾಗಿರುವದರಿಂದ ಮೊದಲಿಗೇ ಅವುಗಳನ್ನು ಈ ವರ್ಗದಲ್ಲಿ ಸೇರಿಸಿ ಮತ್ತಿಷ್ಟು ಕಾಠಿಣ್ಯವನ್ನು ತಂದುಕೊಳ್ಳುವದು ಒಳಿತಲ್ಲ. ಎಂಬ ಆಕ್ಷೇಪವಿದ್ದರೆ ಅವ್ಯವಹಾರ್ಯವೂ ಕಲ್ಪನಾಮಯವೂ ಆದ ವಿಷಯವು ಎಷ್ಟು ಕಠಿಣವಾಗುವದೋ ಅಷ್ಟು ಅದು ವ್ಯಾವಹಾರಿಕವಾಗಿ ಬಳಿಕೆಯಲ್ಲಿ ಬಂದರೆ ಆಗುವದಿಲ್ಲ. ಅರ್ಥಾತ್ ವ್ಯವಹಾರದಲ್ಲಿದ್ದ ಒತ್ತಕ್ಷರಗಳಾದರೂ ಬಾಲಕರಿಗೆ ಸುಲಭವಾಗುವವು. ಈ ಬಾಲಕರ ವರ್ಗದಲ್ಲಿ ಎಲ್ಲ ಮೂಲಾಕ್ಷರಗಳೂ ಗುಣಿತಾಕ್ಷರಗಳೂ ಕಲಿಸಲ್ಪಡಲಿಕ್ಕೆಬೇಕು, ಎಂಬದಾದರೂ ಯಾಕೆ? ಚಿಕ್ಕ ಹುಡುಗರಲ್ಲಿರುವ ಸ್ವಾಭಾವಿಕವಾದ ಚಟುವಟಿಕೆ, ಸ್ಮರಣಶಕ್ತಿ, ಹೆಚ್ಚಳದ ಅಪೇಕ್ಷೆ, ನಿರ್ಬಲತ್ವ ಇವುಗಳನ್ನು ಉಪಯೋಗಿಸಿಕೊಂಡು ಅವರಿಂದ ಈ ಕೆಲಸಗಳು ಮಾಡಲ್ಪಡುವವಲ್ಲವೆ?

ಅವರ ಇವೇ ಶಕ್ತಿಗಳ ಉಪಯೋಗವು ವ್ಯಾವಹಾರಿಕವಾಗಿ ಉಪಯೋಗಿಸಿ ಕೊಳ್ಳುವದರಿಂದ ಹೆಚ್ಚಿನ ಲಾಭವಾಗಲಾರದೆ? ಒಳ್ಳೇದು, ಎಲ್ಲ ಮೂಲಾಕ್ಷರಗಳ ಹಾಗು ಗುಣಿತಾಕ್ಷರಗಳ ಪ್ರಯೋಜನವಾದರೂ ಅವರಿಗೆ ಭಾಷೆಯಲ್ಲಿ ಎಳ್ಳಿ ಆಗುವದು? ಈಗಳೇ ನಾವು ಆ ಬಾಲಕರಿಗೆ ವ್ಯಾಕರಣ ಕಲಿಸುವವರಲ್ಲಿ. ಅವಶ್ಯವಿದ್ದರೆ ಈ ಶಾಸ್ತ್ರೀಯ ವರ್ಗೀಕರಣವನ್ನು ಅವರು ಮುಂದಿನ ಇಯತ್ತೆಗಳಲ್ಲಿ ಕಲಿಯಬಹುದು. ಮೊದಲನೆಯ ಇಯತ್ತೆಯು ಬಾಲಕರ ವರ್ಗದ ಮಾನದಿಂದ ಸುಲಭವಿರುತ್ತಬೆ. ಈ ಶಿಕ್ಷಣವನ್ನು ಅಲ್ಲಿ ಪೂರ್ಣ ಪಡಿಸಬಹುದು. ಇದರ ಮೇಲೆ, ಪಾಶ್ಚಾತ್ಯ ಸಂಸ್ಕೃತಿಯ ಪ್ರಚಲಿತ ಶಿಕ್ಷಣ ಪದ್ಧತಿಯ ಅನುಭವವನ್ನು ಪ್ರಾಚೀನ ಶಿಕ್ಷಣಪದ್ಧತಿಯ ಒರೆಗಲ್ಲಿಗೆ ಹಚ್ಚಿನೋಡುವ ಕೆಲವೊಂದು ಪಕ್ಷದವರು ಈಪ್ರಕಾರವಾದಿಸುವಲ್ಲ, "ಅರ್ಥವಿವರಣೆಯು ವಿಚಾರದ ಕೆಲಸವು. ಅದು ಬಾಲಕರಲ್ಲಿ ಒಮ್ಮೆಲೇ ಪ್ರಾದುರ್ಭವಿಸುವದಿಲ್ಲ. ಅನುಕರಣಶಕ್ತಿ-ಸ್ಮರಣಶಕ್ತಿ-ಕಲ್ಪನಾಶಕ್ತಿಗಳು ಮಾತ್ರ ಅವರಲ್ಲಿ ಈಗ ತೋರುತ್ತವೆ. ಆದ್ದರಿಂದ ಅಂಥ ಹುಡುಗರ ಮೇಲೆ ಮೊದಲಿಗೇ ವಿಚಾರಶಕ್ತಿಯ ಒಜ್ಜೆಯನ್ನು ಹಾಕದೆ ಅವರ ಸ್ಮರಣಶಕ್ತಿಯನ್ನೂ ಅನುಕರಣಶಕ್ತಿಯನ್ನೂ ಉಪಯೋಗಿಸಿಕೊಂಡು ಅವರಿಗೆ ನಿರ್ವಿಷಯಗಳಾದರೂ ಅಡ್ಡಿಯಿಲ್ಲ–"ಅ, ಆ, ಇ, ಈ" ಮೊದಲಾದ ವರ್ಣಗಳನ್ನೇ ಕ್ರಮವಾಗಿ ಕಲಿಸಬೇಕು. ವಯೋಮಾನವು ಬೆಳೆದಂತೆ ಅವರ ಮಾನಸಿಕ ಶಕ್ತಿಗಳಾದರೂ ಬೆಳೆಯುವದರಿಂದ ಮುಂದೆ ಅವರಿಗೆ ವಿಚಾರಶಕ್ತಿಯ ಕೆಲಸವನ್ನು ಕೊಡಬಹುದು. ಆದ್ದರಿಂದ ಬಾಲಕರ ವರ್ಗಕ್ಕೆ ಬರೆ ಓದುವ ಕೆಲಸವನ್ನಷ್ಟೇ ಇಟ್ಟುರಬೇಕು. ಆದ್ದರಿಂದಲೇ ಪ್ರಾಚೀನಕಾಲದಲ್ಲಿ ಬಾಲಕರಿಂದ ಕೆಲವು ಗ್ರಂಥಗಳನ್ನು ಬರೆ ಪಾಠಮಾಡಿಸಿ ಕೊಳ್ಳುತ್ತಿದ್ದರು. ಅವರು ಪ್ರೌಢರಾದ ಹಾಗೆ-ವಿಚಾರಶಕ್ತಿಯು ಬೆಳೆದಂತೆ-ವಿಷಯಗಳನ್ನು ವಿವೇಚಿಸುವ ಗ್ರಂಥಗಳನ್ನೂ, ವಾದಗ್ರಂಥಗಳನ್ನೂ ಕಲಿಸುವರು. ಇದರಿಂದ ಬಾಲ್ಯದಲ್ಲಿ ಕಂಠತಃ ಪಾಠಮಾಡಿದ ಸಂಗತಿಗಳೂ ಹಿಂದಿನಿಂದ ವಿವೇಚಿಸಲ್ಪಟ್ಟ ವಿಷಯಗಳೂ ಪರಸ್ಪರ ಪೂರಕಗಳಾಗಿ ಕಲಿತದ್ದು ಸ್ಥಿರವಾಗಿರುವದು. ವಿಚಾರಶಕ್ತಿಗೆ ಸ್ಮರಣಶಕ್ತಿಯ ಸಹಾಯವಾಗಿ ಅವರು ಕಲಿತವಿದ್ಯೆಯು ಈಗಿನವರಂತೆ "ಪುಸ್ತಕವಿದ್ಯೆಯಾಗಿರಲಿಲ್ಲ.

ಸಶೇಷ

ಶಾಲಾಪತ್ರಕ.

ಪುಸ್ತಕ ೫೪. | ಫೆಬ್ರುವರಿ.೧೯೧೯. | ಸಂಚಿಕೆ ೨.

ಪಾಶ್ಚಿಮಿಕ-ಶಿಕ್ಷಕರ ಸಂಬಳದ ಬಗ್ಗೆ ಸರಕಾರದ ತರಾವು.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಶಿಕ್ಷ್ಯವೃತ್ತಿ, ಅಂಟ್ರೇಡ ಶಿಕ್ಷಕರ ಸಂಬಳ, ಟ್ರೇಂಡ ಶಿಕ್ಷಕರ ಕೋಡಪೇ ಇವುಗಳಬಗ್ಗೆ ಹಿಂದು ಸ್ತಾನ ಸರಕಾರದವರು ಮುಂಬಯಿ ಇಲಾಖೆಗಾಗಿ ೨೪ ಲಕ್ಷರೂಪಾಯಿ ಗಳ ವಾರ್ಷಿಕ ದೇಣಿಗೆಯನ್ನು ಕೊಟ್ಟಿದ್ದು ಆದರ ವೆಚ್ಚವನ್ನು ಕೆಳಗೆ ತೋರಿಸಿದಂತೆ ಮಾಡಬೇಕೆಂದು ಮುಂಬಯಿ ಸರಕಾರದವರು ಗೊತ್ತು ಮಾಡಿದ್ದಾರೆ. ಇತ್ತಿತ್ತಲಾಗಿ ೭, ೮ ವರ್ಷಗಳ ಅವಧಿಯಲ್ಲಿ ಶಿಕ್ಷಣದ ವೃದ್ಧಿಯ ದೆಶೆಯಿಂದ ದೊರೆತ ಹಣದಲ್ಲಿ ಅಂಟ್ರೇಂಡ ಶಿಕ್ಷಕರ ಸಂಬಳವು ತಕ್ಕಷ್ಟು ಹೆಚ್ಚಿಸಲ್ಪಡಲಿಲ್ಲ. ಆದರೆ ಈಗ ಅವರ ಪಗಾರವನ್ನು ಹೆಚ್ಚಿಸು ವದು ಅವಶ್ಯವಾದದ್ದೆಂದು ಕಂಡದ್ದರಿಂದ ಮೇಲೆ ಕಾಣಿಸಿದ ೨೪ ಲಕ್ಷ ರೂಪಾಯಿಗಳೊಳಗಿನ ಅರ್ಧಕ್ಕಿಂತ ಹೆಚ್ಚು ಹಣವನ್ನು ಈ ಕೆಲಸಕ್ಕೆ ಉಪಯೋಗ ಮಾಡುವವರಿದ್ದಾರೆ. ಯುದ್ಧವು ಪ್ರಾರಂಭವಾದಂದಿನಿಂದ ಟ್ರೇಂಡ ಶಿಕ್ಷಕರಿಗೆ ಸರ್ಟಿಫಿಕೇಟಿನಷ್ಟು ಪಗಾರ ಕೊಡುವದು ನಿಂತಿದೆ. ಪುನಃ ಅವರಿಗೆ ಮೊದಲಿನಂತೆ ಕೊಡಬೇಕೆಂದು ಗೊತ್ತಾಗಿದೆ. ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಯುದ್ಧದಿಂದ ಮತ್ತು ಇತರ ಕಾರಣಗಳಿಂದ ನಿತ್ಯದ ಅವಶ್ಯಕ ಪದಾರ್ಥಗಳ ಬೆಲೆಯು ಹೆಚ್ಚಾದ್ದರಿಂದಲೂ, ಅವರಿಗೆ ಈಗ ದೊರೆಯುವ ಆಹಾರವು ಸಾಕಷ್ಟು ಪೌಷ್ಟಿಕವಾಗಬೇಕೆಂತಲೂ ಅವರ ಶಿಷ್ಯವೃತ್ತಿಯನ್ನು ಹೆಚ್ಚಿಸುವದು ಅವಶ್ಯ ಕಂಡುಬಂದದೆ. ಆ ಪ್ರಕಾರ ಸರಕಾರದವರು ಗೊತ್ತು ಮಾಡಿದ ವೇತನಗಳ ಕ್ರಮವು ಕೆಳಗೆ ಬರೆದಂತೆ ಇರುವದು.

ಅಂಟ್ರೇಂಡ ಶಿಕ್ಷಕರ ಹೆಚ್ಚಿಸಿದ ವೇತನದ ಕ್ರಮ.

ಶಿಕ್ಷಕನ ತೀರ ಕಡೆಯ ಪಗಾರ ..... ೯ ರೂ.
ಸ್ವತಂತ್ರ ಶಾಲೆಯ ಹೆಡ್ ಮಾಸ್ತರನ ಕೆಲಸ ಮಾಡುವ

ಶಿಕ್ಷಕನಪಗಾರ.... ....,.....,..... ೧೨ ರೂ.
೧೫ ವರ್ಷ ಸ್ವತಂತ್ರ ಮೂಸ್ತರನ ಕೆಲಸ ನೂಡಿ ಶಿಫಾರಸು ಪಡೆದ
ಶಿಕ್ಷಕನ ಪಗಾರ.....,.....,.....,.....೧೫ ರೂ.

ಪಗಾರದ ತರಗತಿಗಳನ್ನು ಇವಕ್ಕೂ ಹೆಚ್ಚು ನೂಡುವದು ಸರಕಾರಕ್ಕೆ ಯೋಗ್ಯ ಕಂಡಿರುತ್ತದೆ. ಆದರೆ ಸಧ್ಯದ ಹಣದ ಅನನುಕೂಲತೆಯಲ್ಲಿ ಆ ಪ್ರಕಾರ ಮಾಡಲು ಅಸಮರ್ಥರಾಗಿರುತ್ತಾರೆ.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಶಿಷ್ಯವೃತ್ತಿಯನ್ನು ೧೦ ರೂ. ನೂಡುವದು ಗೊತ್ತಾಗಿರುತ್ತದೆ.

ಟ್ರೇಂಡ ಶಿಕ್ಷಕರು ನೌಕರಿಯಲ್ಲಿ ಸೇರಿದ ಕೂಡಲೆ ಅವರಿಗೆ ಸರ್ಟೀಫಿಕೇಟಿನಷ್ಟು ಪಗಾರವು ದೊರೆಯುವದು. ಮ್ಯುನಸಿಪಾಲಿಟಿಗಳಲ್ಲಿ ಸೇರಿವ ಟ್ರೇಂಡ ಶಿಕ್ಷಕರಿಗೆ ಸಹ ಈ ಪ್ರಕಾರ ಪಗಾರ ದೊರೆಯಬೇಕೆಂದು ಸರಕಾರದವರು ಆ ಸಂಸ್ಥೆಗೆ ಗ್ರ್ಯಾಂಟುಗಳನ್ನು ಕೊಡತಕ್ಕವರಿದ್ದಾರೆ. ಮೇಲಿನ ಈ ಮೂರು ಸುಧಾರಣೆಗಳಲ್ಲಿ ಟ್ರೇಂಡ ಮತ್ತು ಅಂಟ್ರೇಂಡ ಶಿಕ್ಷಕರ ಪಗಾರದ ವಿಷಯದ ತರಾವುಗಳು ೧೯೧೭ನೆಯ ಇಸವಿ ಏನೇ ಎಪ್ರಿಲ ದಿಂದ ಅಮಲಿನಲ್ಲಿ ಬರಬೇಕೆಂದು ಗೊತ್ತಾಗಿದೆ. ಟ್ರೇನಿಂಗ ಕಾಲೇಜದ ಶಿಷ್ಯವೃತ್ತಿಯನ್ನು ಹೆಚ್ಚಿಸಿದ ತರಾವು ಎಂದಿನಿಂದ ಅಮಲಿನಲ್ಲಿ ಬರಬೇಕೆಂಬದನ್ನು ಸರಕಾರದವರು. ಇನ್ನೊಂದು ತರಾವಿನಿಂದ ಪ್ರಸಿದ್ಧ ಪಡಿಸತಕ್ಕವರಿದ್ದಾರೆ.

ಮೂಸ್ತರ ಜನರಿಗೆ ಕೋಡಪೇದಂತೆ ಪಗಾರವನ್ನು ಕೊಡಬೇಕೆಂಬ ಬಗ್ಗೆ ನಮ್ಮ ಕಡೆಗೆ ಕೆಲವು ಶಿಕ್ಷಕರ ಲೇಖಗಳು ಬಂದಿರುವವು. ಮೇಲಿನ ತರಾವಿನಿಂದ ಶಿಕ್ಷಕ ಜನರ ಪಗಾರದ ಸಂಬಂಧದ ಕೆಲವು ಅಡಚಣೆಗಳು ದೂರಾಗಿರುತ್ತವೆ. ಅವುಗಳನ್ನು ಓದಿ ಅವರು ಸಮಾಧಾನ ಪಡೆಯಬಹುದು. ಆದರೆ ಶಿಕ್ಷಕ ಜನರು ತಮಗೆ ಒದಗುವ ಅಡಚಣೆಗಳನ್ನು ಆಗಾಗ್ಗೆ ತಮ್ಮ ವರಿಷ್ಠ ಅಧಿಕಾರಗಳ ಮುಂದೆ ಇಷ್ಟು ಅವುಗಳನ್ನು ದೂರ ಮಾಡಿಕೊಳ್ಳುವದು ಯೋಗ್ಯವೆಂದು ನಾವು ಅವರಿಗೆ ಸೂಚಿಸುವೆವು. ಮತ್ತು ಅಂಥ ಲೇಖಗಳನ್ನು ನಮ್ಮ ವರ್ತಮಾನಪತ್ರಿಕೆಯಲ್ಲಿ ಪ್ರಸಿದ್ಧಮಾಡಿ ಶಿಕ್ಷಕ ಜನರಲ್ಲಿ ಅಸಂತೋಷವನ್ನು ಹುಟ್ಟಿಸಲಿಕ್ಕೆ ಇಚ್ಛಿಸುವದಿಲ್ಲ.

ಶಾಲೆಗಳನ್ನು ಪರೀಕ್ಷಿಸುವ ಅಧಿಕಾರಿಗಳ ಕರ್ತವ್ಯಗಳು.

(ಜನವರಿ ತಿಂಗಳಿಂದ ಮುಂದೆ ಸಾಗಿದ್ದು.)

ಶಿಕ್ಷಕರ ಕೂಡ ವರ್ತನೆಯು: — ಶಾಲಾಧಿಕಾರಿಯು ಶಾಲೆಯು ಇರುವ ಊರಿಗೆ ಬರುವಾಗ ತಾನು ಇಂಥ ದಿವಸ ಬರುತ್ತೇನೆ. ಇಂಥಿಂಥ ಅನುಕೂಲತೆಗಳು ತನಗೆ ಬೇಕು. ಮುಂತಾದ ಸಂಗತಿಗಳನ್ನು ಶಿಕ್ಷಕನಿಗೆ ಮೊದಲೇ ತಿಳಿಸುವ ರೂಢಿಯುಂಟು. ಇದು ನಮಗೆ ಸರಿದೋರುವದಿಲ್ಲ. ಅದರಿಂದ ಶಿಕ್ಷಕರಲ್ಲಿ ಒಂದು ಪ್ರಕಾರದ ಸಲಿಗೆ ಹುಟ್ಟಲಿಕ್ಕೆ ಕಾರಣವಾಗುತ್ತದೆ ಅವರು ಸ್ವಾಭಾವಿಕವಾಗಿ ಇವನ ಅನುಕೂಲತೆಗಳನ್ನು ಮಾಡಿಕೊಡಲಿಕ್ಕೆ ಸಿದ್ಧರೇ ಇರುತ್ತಾರೆ. ಅಂದ ಮೇಲೆ ಬರೆದು ತಿಳಿಸುವದರಿಂದ ಪ್ರಯೋಜನವೇನೂ ಇಲ್ಲ. ಇಷ್ಟೇ ಅಲ್ಲದೆ ಇವನು ಅಪೇಕ್ಷಿಸುವದರಕಿಂತ ಹೆಚ್ಚು ವ್ಯವಸ್ಥೆಯನ್ನು ಮಾಡಲಿಕ್ಕೆ ಅವರು ತೊಡಗುವರು. ಅದರಿಂದ ಇವನ ವ್ಯವಸ್ಥೆಯ ಬಗ್ಗೆ ಊರಲ್ಲಿ ಗೊಂದಲವು ಹುಟ್ಟುತ್ತದೆ. ಮೇಲಧಿಕಾರಿಯು ಶಾಲೆಯ ಹಿತಕ್ಕಾಗಿ ಬರುತ್ತಾನೆಂಬ ಸದ್ಭಾವನೆಯು ಊರ ಜನರಲ್ಲಿ ಇಲ್ಲದಂತಾಗಿ ಇವನೂ ಬೇರೆ ಖಾತೆಗಳ ಅಧಿಕಾರಸ್ಥರಂತೆ ಊರ ಜನರಿಗೆ ಭಯುಪ್ರದನಾಗುತ್ತಾನೆ. ಅದರಿಂದ ವಿದ್ಯಾರ್ಥಿಗಳ ಮನಸ್ಸಿನ ಸಮಾಧಾನವು ಇಲ್ಲದಂತಾಗಿ ಪರೀಕ್ಷೆ ಕೊಡುವಾಗ ಅಂಜಹತ್ತುವರು. ವಿದ್ಯಾರ್ಥಿಗಳ ಪಾಲಕರು ಬಹುಶಃ ಇವರಿಗೆ ಭೆಟ್ಟಿಯಾಗಲಿಕ್ಕೆ ಬರುವದೇ ಇಲ್ಲ. ಇದರಿಂದ ಹುಡುಗರ ಹಾಗೂ ಶಾಲೆಯ ನಿಜವಾದ ಸ್ಥಿತಿಯು ತಿಳಿಯಲಿಕ್ಕೆ ಅಡ್ಡಿಯಾಗುತ್ತದೆ.

ಶಾಲಾಧಿಕಾರಿಯು ಊರಿಗೆ ಬಂದ ಬಳಿಕ ಶಿಕ್ಷಕರು ಇವನ ಭೆಟ್ಟಿಗೆ ಬರುವರು. ಆಗ ಅವರಿಗೆ ತಕ್ಕ ಮರ್ಯಾದೆ ಕೊಟ್ಟು ಅವರೊಡನೆ ಪ್ರೀತಿಯಿಂದ ಮಾತಾಡಿ ಅವರಿಗೆ ತಾನು ಶಾಲೆಗೆ ಬರುವ ವೇಳೆಯನ್ನು ತಿಳಿಸಬೇಕು. ಶಾಲೆಗೆ ಹೋಗುವಾಗ ಮನಸ್ಸಿನಲ್ಲಿ ಶಾಲೆಯ ವಿಷಯವಾಗಿ ಯಾವ ತರದ ಪ್ರತಿಕೂಲ ಇಲ್ಲವೆ ಅನುಕೂಲ ಭಾವನೆಯನ್ನು ಮಾಡಿಕೊಂಡಿರಬಾರದು. ಈ ಶಾಲೆಯು ತನ್ನ ಬರುವಿಕೆಯಿಂದ ಯಾವ ತರದ ಊರ್ಜಿತಾವಸ್ಥೆಯನ್ನು ಹೊಂದೀತು; ಮತ್ತು ವಿದ್ಯಾರ್ಥಿಗಳಲ್ಲಿಯೂ ಶಾಲಾ ಶಿಕ್ಷಕರಲ್ಲಿಯೂ ಊರ ಜನರಲ್ಲಿಯೂ ತನ್ನ ವಿಷಯಕ್ಕೆ ಪೂಜ್ಯ ಭಾವವು ಹೆಚ್ಚಾದೀತು: ಈ ತರದ ಭಾವನೆಯಿಂದ ಕೆಲಸಕ್ಕೆ ಸ್ಫೂರ್ತಿಗೊಂಡಿರಬೇಕು. ಅಂದರೆ ಇವನ ಶಾಲೆಯ ವಿಷಯದ ಮತ್ತು ಹುಡುಗರ ವಿಷಯದ ಎಲ್ಲ ಅಭಿಪ್ರಾಯಗಳು ಯಥಾರ್ಥವಾದವುಗಳಾಗಿ ಅದರಿಂದ ಯಾರ ಮನಸ್ಸಿನಲ್ಲಿಯೂ ವಿರುದ್ಧ ಭಾವವು ಉಂಟಾಗದೆ ಇವನ ಉಪದೇಶದ ಪರಿಣಾಮವು ತೀವ್ರ ಫಲದ್ರೂಪವಾಗುವದು.

ಶಾಲೆಯನ್ನು ಪರೀಕ್ಷಿಸುವಾಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯು ತಕ್ಕಷ್ಟು ದುಡಿದು ತನ್ನ ವರ್ಗದ ಅಭ್ಯಾಸದಲ್ಲಿ ತಕ್ಕಷ್ಟು ಗತಿಯನ್ನು ಸಂಪಾದನೆ ಮಾಡಿರುವನೋ ಇಲ್ಲವೋ ಎಂಬ ಧೋರಣವನ್ನು ಇಡಬೇಕಲ್ಲದೆ ಬಿಗಿಯಾದ ಇಲ್ಲವೆ ಸಂದಿಗೊಂದಿಗ

ಳಲ್ಲಿಯ ಪ್ರಶ್ನೆಗಳನ್ನು ಕೇಳಿ ಅವರನ್ನು ಗೊಂದಲದಲ್ಲಿ ಕೆಡವುವದೂ ಭಯಗ್ರಸ್ತರನ್ನಾಗಿ ಮಾಡುವದೂ ಸರ್ವಥಾ ತಕ್ಕದ್ದಲ್ಲ. ಪ್ರತಿಯೊಂದು ವರ್ಗದ ಶಿಕ್ಷಕನ ಕೆಲಸವು ಯೋಗ್ಯ ಪದ್ಧತಿಯಿಂದ ಕಾಲಕಾಲಕ್ಕೆ ಸರಿಯಾಗಿ ನಡೆದಿರುವದೋ ಇಲ್ಲವೋ ಎಂಬದನ್ನು ತಿಳಕೊಳ್ಳುವದರ ಕಡೆಗೆ ಪೂರ್ಣ ಲಕ್ಷ್ಯವಿಡಬೇಕು. ಈ ಪ್ರಕಾರ ಶಿಕ್ಷಕನ ಕೆಲಸದ ಅಂದಾಜು ಮಾಡುವಾಗ ಪರಿಸ್ಥಿತಿಯಲ್ಲಿರುವ ಅಡಚಣಿಗಳನ್ನೂ ಪೂರ್ಣವಾಗಿ ಲಕ್ಷ್ಯದಲ್ಲಿ ತರಬೇಕು.

ವರ್ಗದ ಪರೀಕ್ಷೆಯು ಮುಗಿದ ಕೂಡಲೆ ಆ ವರ್ಗದಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯ ಯೋಗ್ಯತೆಯ ಜ್ಞಾನವು ಪರೀಕ್ಷಕನಿಗೆ ಸರಿಯಾಗಿ ಆಯಿತೆಂದರೆ ಶಿಕ್ಷಕನಿಗೆ ತನ್ನ ಕೆಲಸದ ಯೋಗ್ಯವರಿ ಹತ್ತಿದಂತಾಗಿ ದುಡಿದ ಶಿಕ್ಷಕನಿಗೆ ಸಮಾಧಾನವಾಗುವದಲ್ಲದೆ ದುಡಿಯದ ಶಿಕ್ಷಕನಿಗೆ 'ಕುರಕುರಿಯನ್ನು' ಮಾಡಲಿಕ್ಕೆ ಅಸ್ಪದವು ಉಳಿಯುವದಿಲ್ಲ. ಹುಡುಗರ ಪಾಲಕರು ಭೆಟ್ಟಿಯಾದಾಗ ಯೋಗ್ಯನಾದ ಹುಡುಗನ ಗುಣಗಳನ್ನು ವರ್ಣಿಸಿದರೆ ಅವರಿಗೆ ಅತ್ಯಾನಂದವಾಗುತ್ತದೆ. ಮತ್ತು ದಡ್ಡ ಹುಡುಗನನ್ನು ತಿದ್ದುವ ಬಗ್ಗೆ ಸಹಾನುಭೂತಿಯಿಂದ ಸೂಚನೆಗಳನ್ನು ಮಾಡಿದರೆ ಅವರಿಗೆ ಇವನಲ್ಲಿ ಪ್ರೇಮವೂ ಪೂಜ್ಯಬುದ್ಧಿಯೂ ಹುಟ್ಟುತ್ತದೆ. ಶಾಲೆಯ ಪರೀಕ್ಷೆಯು ಮುಗಿದ ಬಳಿಕ ತನ್ನ ಅನುಕೂಲದ ಕಾಲದಲ್ಲಿ ಶಾಲೆಯ ಮುಖ್ಯಾಧ್ಯಾಪಕನನ್ನು ಕರೆದು ಶಾಲೆಯ ಗುಣದೋಷಗಳ ಬಗ್ಗೆ ತನ್ನ ಅನುಭವವನ್ನು ಅವನಿದುರಿಗೆ ಇಟ್ಟು, ಅವುಗಳ ಸುಧಾರಣೆಯ ಬಗ್ಗೆ ಶಾಂತ ರೀತಿಯಿಂದ ಸೂಚನೆಗಳನ್ನು ಮಾಡಬೇಕು. ಮತ್ತು ತನ್ನ ಅಭಿಪ್ರಾಯವು ಸರಿಯಾಗಿರುವದೆಂಬ ಬಗ್ಗೆ ಅವನಿಗೆ ಮನಗಾಣಿಸಿ ಕೊಡಬೇಕು. ಅವನ ಉಪಶಿಕ್ಷಕರ ಕೆಲಸ ಮತ್ತು ನಡತೆಯ ಬಗ್ಗೆ ಕಂಡ ಸಂಗತಿಗಳನ್ನು ವಿವರಿಸಬೇಕು. ಈ ಬಗ್ಗೆ ಮುಖ್ಯಾಧ್ಯಾಪಕನ ಅಭಿಪ್ರಾಯದ ಮೇಲಿಂದ ಉಪಶಿಕ್ಷಕರ ನಿಜವಾದ ಕೆಲಸದ ಸ್ಥಿತಿಯು ತಿಳಿದು ಅವರಿಗೆ ಯೋಗ್ಯವಾದ ಸೂಚನೆಗಳನ್ನು ಮಾಡಲಿಕ್ಕೂ, ಶಿಕ್ಷಕ ಉಪಶಿಕ್ಷಕರಲ್ಲಿ ಪ್ರೀತಿಯು ಉಳಿದು ಉತ್ಸಾಹದಿಂದ ಅವರು ಕೆಲಸದಲ್ಲಿ ತೊಡಗುವಂತೆ ಮಾಡಲಿಕ್ಕೂ ಅನುಕೂಲವಾಗುವದು. (ಮುಂದೆ ಸಾಗುವದು.)

ವಿದ್ಯಾಖಾತೆಯ ನೋಟೀಸುಗಳು.

ಹಾಯಸ್ಕೂಲುಗಳಲ್ಲಿ ದೊರೆಯುವ ಮಹಮ್ಮದನ್ ಬರ್ಸರೀಪಂಡ ಸ್ಕಾಲರಶಿಪ್ಪಿನ ಬಗ್ಗೆ

ನೋಟೀಸು.

ಇದರ ಮೂಲಕ ನೋಟೀಸು ಕೊಡುವದೇನಂದರೆ:— ತಾರೀಖು ೩೦ ನೇ ದಿಸಂಬರ ಸನ್ ೧೯೦೮ ನೇ ಇಸವಿಯ ಮುಂಬಯಿ ಸರಕಾರದ ಗೆಜೆಟ್ಟಿನೀಟ ಭಾಗ ೧ ನೆಯ ಪಂಟಿಯಿಂದ ಪುಟ ೨೦೬೯ನೆಯ ಪುಟಗಳ

ಪ್ರಸಿದ್ಧ ಮಾಡಿದ ನಿಯಮಗಳ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ ಮುಹಮ್ಮಡನ್ ಬರ್ಸರೀ ಫಂಡದಿಂದ ಒಂದು ಸ್ಕಾಲರಶಿಪ್ಪು ಕೊಡುವ ಬಗ್ಗೆ ಮೇಲಾಟದ ಪರೀಕ್ಷೆಯು ಧಾರವಾಡ ಹಾಯಸ್ಕೂಲಿನಲ್ಲಿ ೧೯೧೪ನೇ ಇಸವಿಯ ಎಪ್ರಿಲ ತಿಂಗಳ ೬೫ ಮತ್ತು ೯೮ನೇ ತಾರೀಖು ಶನಿವಾರ ಸೋಮವಾರ ಮತ್ತು ಮಂಗಳವಾರ ಈ ದಿವಸಗಳಲ್ಲಿ ಬೆಳಗಿನ ೧೧ ಘಂಟೆಗೆ ಪಾರಂಭವಾಗುವದು.

೨. ಈ ಸ್ಕಾಲರಶಿಪ್ಪು ಪರೀಕ್ಷೆಗೆ ಧಾರವಾಡ ಜಿಲ್ಲೆಯೊಳಗಿನ ಶಾಲಾಖಾತೆಯಿಂದ ಮಾನ್ಯಮಾಡಲ್ಪಟ್ಟ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಲೆಯ ವಾಸಸ್ಥರೆಂಬ ಬಗ್ಗೆಯೂ ಹಾಯಸ್ಕೂಲಿನಲ್ಲಿ ಇಂಗ್ಲಿಷ ಕಲಿಯಲಿಕ್ಕೆ ತಾಗುವ ಖರ್ಚನ್ನು ಮಾಡುವದಕ್ಕೆ ಆಗದಷ್ಟು ಬಡವರಿದ್ದ ಬಗೆಯೂ ಇಬ್ಬರು ಪ್ರಸಿದ್ಧ ಸಂಭಾವಿತ ಗೃಹಸ್ಥರ ಸರಟಿಫಿಕೇಟನ್ನು ಹಾಜರ ಮಾಡಲಿಕ್ಕೆಬೇಕು.

೩. ಪರೀಕ್ಷೆಯು ಕನ್ನಡದಿಂದ ಆಗುವದು.

೪. ಪರೀಕ್ಷೆಯು ಒಂದು ಕಮೀಟಿಯ ಮುಖಾಂತರವಾಗಿ ಆಗುವದು. ಆ ಕಮೀಟಿಗೆ ಧಾರವಾಡ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಿರುವರು. ಮಿಡಲ್‌ಸ್ಕೂಲಸ್ಕಾಲರಶಿಪ್ಪು ಪರೀಕ್ಷೆಗೆ ಕೂಡುವ ಪರವಾನಿಗಿಯ ಬಗ್ಗೆ ಮೂಡತಕ್ಕ ಫಾಪೀನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆಯೇ ಅರ್ಜಿಯನ್ನು ಮೂಡತಕ್ಕದ್ದು. ಈ ನಮೂನೆಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಖರ್ಚು ಬೀಳದೆ ಸಿಗುವವು. ಪರೀಕ್ಷೆಯ ಬಗ್ಗೆ ಅರ್ಜಿಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ತಾರೀಖು ೧೫ನೇ ಮಾರ್ಚ ೧೯೧೪ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸಲಿಕ್ಕೆಬೇಕು. ಅನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರ ವಯಸ್ಸು, ಪರೀಕ್ಷೆಗಳ ವಿಷಯ, ಸ್ಕಾಲರಶಿಪ್ಪನ್ನು ಕೊಡೋಣ ಮತ್ತು ಬಂದು ಮಾಡೋಣ, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಶಾಲೆಯ ಫೀ ಬಗ್ಗೆ ನಿಯಮ, ಮುಂತಾದವುಗಳು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗ

ಳಂತೆಯೇ ಇರುವವು. ಆದರೆ ಈ ಸ್ಕಾಲರಶಿಪ್ಪು ಪರೀಕ್ಷೆಗೆ ಪರೀಕ್ಷಾ ಫೀ ಮಾತ್ರ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

Office of the Educational Inspector, S. D.
Dharwar,
26th January 1918

K. S. Hungund,
Educational Inspector
S. D.

ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪುಗಳ ಬಗ್ಗೆ

ನೋಟೀಸು.

೨೪ ನೇ ಅಕ್ಟೋಬರ ಸನ್ ೧೯೧೭ ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝೆಟಿನ ಮೊದಲನೇ ಭಾಗದ ೬೬೨ರಿಂದ ೬೬೫ ರವರೆಗಿನ ಪುಟಗಳಲ್ಲಿ ಪ್ರಸಿದ್ಧ ಪಡಿಸಿದಂತೆ ಪ್ರತಿಯೊಂದು ಜಿಲ್ಲೆಗೆ ಆರು ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ತಾರೀಖು ೬ ಏಪ್ರಿಲ ಮತ್ತು ೯ ನೆಯ ಎಪ್ರಿಲ್ ೧೯೧೮ ನೇ ಇಸವಿ ಶನಿವಾರ, ಸೋಮವಾರ ಮತ್ತು ಮಂಗಳವಾರ ಪ್ರಾತಃಕಾಲದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಆ ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲು
೨. ಬೆಳಗಾವ ಹೈಸ್ಕೂಲು.
೩. ಬಿಜಾಪುರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು
೫ ರತ್ನಾಗಿರಿ ಹೈಸ್ಕೂಲು.
೬. ಅಲಿಬಾಗ ಜಾನ್ ಎಲ್ ಫಿನ್‌ಸ್ಟನ್ ಹೈಸ್ಕೂಲು.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು, ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು, ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯಿಲ್, ಕುಣಬಿ, ಇವರಿಗಿಂತಲೂ ಕಡಿಮೆ ವರ್ಗದವರಿಗಾಗಿ ಕಾದಿಡಲ್ಪಟ್ಟಿಂಥವು; ಇವು ಅದರಲ್ಲಿ ಉತ್ತೀರ್ಣರಾದವರಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲ್ಮಾನರಿಗಾಗಿ ಕಾದಿಡಲ್ಪಡುವವು.

೩. ಸರಕಾರೀ ಠರಾವ ನಂಬರ $\frac{೧೯೩೬}{೧೬-೩೧೧೯೧೭}$ ನೇದರಲ್ಲಿ ಮಂಜೂರಾದ ಪ್ರಕಾರ ದರ ತಿಂಗಳಿಗೆ ೫ ರೂ. ದೊರೆಯುವ ಒಂದು ಹೆಚ್ಚಿನ ಸ್ಕಾಲರಶಿಪ್ಪು ಕೇಳ್ಜಾತಿಯವರಲ್ಲಿ ಮೇಲು ಬಂದವರಿಗೆ ಮಾತ್ರ ಇರುತ್ತದೆ. ಈಗ ಅಮಲಿನಲ್ಲಿರುವ ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪುಗಳ ಬಗ್ಗೆ ಇರತಕ್ಕ ನಿಯಮಗಳೇ ಇದಕ್ಕೂ ಇರುವವು.

೪. ಈಗ ಖಾಲೀಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ನಂಬರು ಬಂದವರಿಗೆ ದೊರೆಯುವಂತೆ ಇವೆ:—

ನಂಬರು	ಜಿಲ್ಲೆ	ಯಾವ ಸ್ಕಾಲರ ಶಿಪ್ಪುಗಳು.	ಎಷ್ಟು ಕಾಲ ನಡೆಯುವದು.	
			ಯಾವ ತಾರೀಖಿ ನಿಂದ	ಯಾವ ತಾರೀಖಿನ ವರೆಗೆ.
೧	ಧಾರವಾಡ	ಅಸ್ಪೃಶ್ಯ ಜಾತಿಯ ಹುಡುಗರಿಗೋಸ್ಕರ ಕಾದಿಟ್ಟದೆ.	೧ನೇ ಎಪ್ರೀಲ ೧೯೧೫	೩೧ ಮೇ ೧೯೧೯
೨	ಬೆಳಗಾವ	ಸದರ	ಸದರ	ಸದರ
೩	ವಿಜಾಪೂರ	ಸದರ	ಸದರ	ಸದರ
೪	ಕಾರವಾರ	ಸದರ	ಸದರ	ಸದರ
೫	ರತ್ನಾಗಿರಿ	ಸದರ	ಸದರ	ಸದರ
೬	ಕುಲಾಬಾ	ಸದರ	ಸದರ	ಸದರ
೭	ಧಾರವಾಡ	ಮುಸಲ್ಮಾನರಿಗಾಗಿ ಕಾದಿಟ್ಟದೆ.	ಸದರ	೩೧ ಮೇ ೧೯೨೦
೮	ಬೆಳಗಾವ	ಅಸ್ಪೃಶ್ಯ ಜಾತಿಯವರ ಬಗ್ಗೆ ಕಾದಿಟ್ಟದೆ.	ಸದರ	ಸದರ
೯	ವಿಜಾಪೂರ	ಸದರ	ಸದರ	ಸದರ
೧೦	ಸದರ	ಹಿಂದುಳಿದ ಹಿಂದು ಗಳಿಗೋಸ್ಕರ	ಸದರ	ಸದರ
೧೧	ಸದರ	ಮುಸಲ್ಮಾನರಿಗಾಗಿ ಕಾದಿಟ್ಟದೆ.	ಸದರ	ಸದರ
೧೨	ಸದರ	ಸದರ	ಸದರ	ಸದರ
೧೩	ಕಾರವಾರ	ಅಸ್ಪೃಶ್ಯ ಜಾತಿಯವರ ಬಗ್ಗೆ ಕಾದಿಟ್ಟದೆ.	ಸದರ	ಸದರ
೧೪	ರತ್ನಾಗಿರಿ	ಮುಸಲ್ಮಾನರಿಗಾಗಿ ಕಾದಿಟದೆ.	ಸದರ	ಸದರ
೧೫	ಸದರ	ಸದರ	ಸದರ	ಸದರ
೧೬	ಸದರ	ಅಸ್ಪೃಶ್ಯ ಜಾತಿಯವರಬಗ್ಗೆ ಕಾದಿಟ್ಟದೆ.	ಸದರ	ಸದರ
೧೭	ಕುಲಾಬಾ	ಸದರ	ಸದರ	ಸದರ
೧೮	ಸದರ	ಮುಸಲ್ಮಾನರ ಬಗ್ಗೆ ಕಾದಿಟ್ಟದೆ.	ಸದರ	ಸದರ

ಇವು ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರುಗಳು ಬರುವವೋ ಅವರಿಗೆ ಕೊಡಲ್ಪಡುವವು.

೫. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ಬಿಜಾಪೂರ, ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯು ಮುಖಾಂತರವಾಗಿಯೂ, ರತ್ನಾಗಿರಿ ಅಲಿಬಾಗ ಸೆಂಟರುಗಳಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

೬. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲಿಬಾಗ ಪರೀಕ್ಷಾ ಕಮೀಟಿಯ ಅಧ್ಯಕ್ಷರು ಅಲ್ಲಿಯ ಡೆಪುಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. ಉಳಿದ ಕಡೆಯಲ್ಲಿ ಆಲ್ಲಲ್ಲಿಯ ಹೈಸ್ಕೂಲ ಹೆಡ್‌ಮಾಸ್ತರರು ಪರೀಕ್ಷಾ ಕಮೀಟಿಯ ಅಧ್ಯಕ್ಷರಿರುವರು ಈ ಪರೀಕ್ಷೆಗೆ ಕೂಡ್ರುವಿಕ್ಕೆ ಬೇಕಾಗುವ ಪತ್ರವಾನಗಿಯನ್ನು ಕುರಿತು ಮಾಡತಕ್ಕ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಕ್ರಯವಿಲ್ಲದೆ ದೊರೆಯುವವು. ಉಮೇದವಾರರು ಅರ್ಜಿಗಳನ್ನು ಇಂಥದೇ ಮಾರ್ಚ ಇಂಥದೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಅನಂತರ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

೭. ಉಮೇದಾರರ ವಯಸ್ಸು, ಪರೀಕ್ಷೆಯ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಪರೀಕ್ಷೆಯ ಫೀ, ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ಸುಧಾರಿಸಿದ ನಿಯಮಗಳಲ್ಲಿ ಕಂಡುಬರುವದು. ಈ ನಿಯಮಗಳ ಪ್ರತಿಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಅರ್ಜಿಯನ್ನು ಮಾಡಿದರೆ ಬೆಲೆ ಇಲ್ಲದೆ ಸಿಗುವವು.

Office of the Educational Inspector, S. D.
Dharwar.
26th January 1918

K. S. Hungund
Educational Inspector
S. D.

ವ್ಯವಹಾರೀ ಅಥವಾ ಸಾಮಾನ್ಯ ಅಪೂರ್ಣಾಂಕಗಳ ಉಪಪತ್ತಿ.

ಹಿಂದಿನ ವಿಷಯದ ಸಾರಾಂಶ.

ಪೂರ್ಣಾಂಕ, ಅಪೂರ್ಣಾಂಕಗಳ ವ್ಯಾಪ್ತಿ.

ಯಾವದೊಂದು ಪರಿಮೇಯದಲ್ಲಿ ಒಂದು ಎಕ್ಕಮು ಹಲವು ಪೂರ್ಣಸಾರೆ ಹೋಗುತ್ತಿದ್ದರೆ ಆ ಪರಿಮೇಯವನ್ನು ಆ ಎಕ್ಕಮಿನಿಂದ ಅಳೆದು ಬಂದ ಸಂಖ್ಯೆಯು ಪೂರ್ಣಾಂಕವು ಯಾವದೊಂದು ಪರಿಮೇಯದಲ್ಲಿ ಒಂದು ಎಕ್ಕಮು ಹಲವು ಪೂರ್ಣ ಸಾರೆ ಹೋಗದಿದ್ದರೆ ಆ ಪರಿಮೇಯವನ್ನು ಆ ಎಕ್ಕಮಿನಿಂದ ಅಳೆದು ಬಂದ ಸಂಖ್ಯೆಗೆ ಅಪೂರ್ಣಾಂಕವೆನ್ನುವರು.

ಅಪೂರ್ಣಾಂಕಗಳ ಪರಿಭಾಷಾ.

ಎಂಟರಿಂದ ಭಾಗಿಸಿ ಬಂದ ಭಾಗಲಬ್ಧಕ್ಕೆ 'ಎಂಟನೆಯ ಅಂಶ'ವೆನ್ನುವರು. ಎಂಟರಿಂದ ಭಾಗಿಸೋಣವೆಂದರೆ ಎಂಟು ಸರಿಯಾದ ಭಾಗಗಳನ್ನು ಮಾಡೋಣ. ಆದರಿಂದ ಎಕ್ಕಮಿನಲ್ಲಿ ಎಂಟು ಸರಿಯಾದ ಭಾಗಗಳನ್ನು ಮಾಡಿದರೆ ಬರುವಂಥ ಒಂದು ಭಾಗಕ್ಕೆ 'ಎಂಟನೆಯ ಅಂಶ' ವೆಂಬ ಹೆಸರು. ಈ ಎಕ್ಕಮಿನ ಎಂಟನೆಯ ಅಂಶವನ್ನು ಹೊಸ ಎಕ್ಕಂ ಮಾಡಿಕೊಂಡು ಇದನ್ನು ಇತರ ಎಕ್ಕಮುಗಳಂಶೆ ಅಳೆಯಲಿಕ್ಕೆ ಉಪಯೋಗಿಸ ಬಹುದು. ಕೆಲವೊಂದು ಪರಿಮೇಯದಲ್ಲಿ ಇಂಥ ಹೊಸ ಎಕ್ಕಮುಗಳು ಸಾವಿರ ಆದರೆ ಆ ಪರಿಮೇಯವು ಮೂಲ ಎಕ್ಕಮಿನ 'ಸಾವಿರ ಎಂಟನೆಯಅಂಶ' ವದೆ ಎಂದು ಹೇಳುತ್ತೇವೆ.

ಅಪೂರ್ಣಾಂಕಗಳ ಲೇಖನ.

'ಸಾವಿರ ಎಂಟನೆಯ ಅಂಶ'ವನ್ನು ಸಾವಿರದ ಕೆಳಗೆ ಒಂದು ಅಡ್ಡಗೆರೆಯನ್ನು ಹಾಕಿ ಅದರ ಕೆಳಗೆ ಎಂಟು ಹೀಗೆ ಯಾಕೆ ಬರೆಯಬೇಕು? ಈ ಪ್ರಶ್ನೆಯ ಉತ್ತರವನ್ನು ಹೇಳಬೇಕಾದರೆ ಸಾವಿರಕ್ಕೂ ಎಂಟಕ್ಕೂ ಯಾವತರದ ಸಂಬಂಧವಿರುತ್ತದೆಂಬದನ್ನು ವಿಚಾರಿಸಬೇಕು.

೧೦೦೦ ರೂಪಾಯಿಯನ್ನು ೮ ಮಂದಿಯಲ್ಲಿ ಸರಿಯಾಗಿ ಹಂಚಿದರೆ ಪ್ರತಿಯೊಬ್ಬನಿಗೆ ಒಂದು ರೂಪಾಯಿಯ ಎಂಟನೆಯ ಅಂಶ ಸಾವಿರ ಬಂತೆಂದೂ ಅಥವಾ ೧೦೦೦ ರೂಪಾಯಿಯ ಎಂಟನೆಯ ಅಂಶವು ಬಂತೆಂದೂ ಹೇಳಬಹುದು.

∴ 'ಸಾವಿರ-ಎಂಟನೆಯ ಅಂಶ'ವೆಂಬದು ಸಾವಿರಕ್ಕೆ ಎಂಟರಿಂದ (ಹಂಚುವಿಕೆಯು ಅರ್ಥದಲ್ಲಿ) ಭಾಗಿಸಿ ಬಂದ ಭಾಗಲಬ್ಧವು.

೧೦೦೦ ರೂಪಾಯಿಯನ್ನು ೮ ರೂಪಾಯಿಯಿಂದ ಅಳೆಯೋಣ. ೮ ರೂಪಾಯಿ ಎಕ್ಕಂ ಇರುವದರಿಂದ ಎಕ್ಕಮಿನ ಎಂಟನೆಯ ಅಂಶವೆಂದರೆ ೧ ರೂಪಾಯಿ. ೧೦೦೦ ರೂಪಾಯಿಯಲ್ಲಿ ಎಕ್ಕಮಿನ ೧೦೦೦ ಎಂಟನೆಯ ಅಂಶಗಳಾಗುವವು. ಇನ್ನು ೧೦೦೦ ರೂಪಾಯಿಯಲ್ಲಿ ಎಕ್ಕಮು (೧೦೦೦÷೮) ಸಾರೆ ಹೋಗುತ್ತದೆ.

∴ 'ಸಾವಿರ ಎಂಟನೆಯ ಅಂಶ'ವೆಂಬದು ಸಾವಿರಕ್ಕೆ ಎಂಟರಿಂದ (ಅಳೆಯುವ ರ ಅರ್ಥದಲ್ಲಿ) ಭಾಗಿಸಿ ಬಂದ ಭಾಗಲಬವು.

ಇದರಿಂದ ಭಾಗಾಕಾರದ ಯಾವ ಅರ್ಥವನ್ನು* ತಕ್ಕೊಂಡರೂ 'ಸಾವಿರ–ಎಂಟನೆಯ ಅಂಶ' ವೆಂಬದು ೧೦೦೦ ಕ್ಕೆ ೮ ರಿಂದ ಭಾಗಿಸಿ ಬಂದ ಭಾಗಲಬ್ಧವೆ ಎಂಬದು ಸಿದ್ಧವಾಗುತ್ತದೆ.

* ಭಾಗಾಕಾರದಲ್ಲಿ ಎರಡು ಪ್ರಕಾರಗಳಿರುವವು.

(೧) ೧೦೦೦ ರೂಪಾಯಿಗಳನ್ನು ೮ ಸರಿಯಾದ ಭಾಗಗಳನ್ನು ಮಾಡಿದರೆ ಒಂದು ಭಾಗವು ಎಷ್ಟಾಗುವದು?

(೨) ೧೦೦೦ ರೂಪಾಯಿಯಲ್ಲಿ ೮ ರೂಪಾಯಿಯಂಥ ಭಾಗಗಳು ಎಷ್ಟಾಗುವವು?

ಈ ಪ್ರಕಾರಗಳಿಗೆ ಅನುಕ್ರಮವಾಗಿ "ಹಂಚೋಣ" "ಅಳೆಯೋಣ" ಎಂಬ ಹೆಸರುಗಳನ್ನಿಟ್ಟಿವೆ.

ಅಪೂರ್ಣಾಂಕಗಳ ಬೇರೀಜು, ವಜಾಬಾಕಿ, ಮುಂತಾದ ಕೃತಿಗಳು ಪೂರ್ಣಾಂಕಗಳ ಕೃತಿಗಳ ನಿಯಮಗಳನ್ನು ಬಿಟ್ಟಿಲ್ಲ. ಇಷ್ಟೇ ಅಲ್ಲ ಆ ನಿಯಮಗಳು ಅಪೂರ್ಣಾಂಕಗಳ ಕೃತಿಗಳು ದೃಢೀಕರಿಸುತ್ತವೆ. ಉದಾ.

(ಅ) ಬೇರೀಜು.

೨ ರೂಪಾಯಿ + ೩ ರೂಪಾಯಿ = ೫ ರೂಪಾಯಿ

೨ (೧೦೦ ರೂ.) + ೩ (೧೦೦ ರೂ) = ೫ (೧೦೦ ರೂ.)

ಇದರಂತೆ

೨ (½ ರೂ.) + ೩ (½ರೂ) = ೫ (½ರೂ.)

(ಬ) ವಜಾಬಾಕಿ.

೮ ರೂಪಾಯಿ – ೨ ರೂಪಾಯಿ = ೬ ರೂಪಾಯಿ

೮ (೧೦ ರೂ.) – ೨ (೧೦ ರೂ.) = ೬ (೧೦ ರೂ)

ಇದರಂತೆ.

೮ (½ ರೂ) – ೨ (½ ರೂ.) = ೬ (½ ರೂ)

(ಕ) ಗುಣಾಕಾರ.

೨ ರೂಪಾಯಿ × ೫ = ೧೦ ರೂಪಾಯಿ

೨ (೧೦೦೦ ರೂ.) × ೫ = ೧೦ (೧೦೦೦ ರೂ.)

ಇದರಂತೆ

೨ (½ ರೂ.) × ೫ = ೧೦ (½ ರೂ.)

(ಡ) ಭಾಗಾಕಾರ.

೧೦ ರೂಪಾಯಿ ÷ ೫ = ೨ ರೂಪಾಯಿ

೧೦ (೫ ರೂ.) ÷ ೫ = ೨ (೫ ರೂ.)

ಇದರಂತೆ

೧೦ (ಷಿ ರೂ) ÷ ೫ = ೨ (ಷಿ ರೂ.)

ಕ್ಷ, ಗ್ಕೆ ಈ ಅಪೂರ್ಣಾಂಕಗಳು ಸರಿ ಇರುತ್ತವೆಂದು ಸಿದ್ಧ ಮಾಡುವದು.

ಗ್ಕಕ್ಷ × ಕ್ಷ = ಗ್ಕಕ್ಷ × ಷ × ೨ = ಗಿ (ಗ್ಕಷ್ಟ) ÷ ೩ × ೨ .... ಮೂರನೆಯ ಅಂಶ"ದ ವ್ಯಾಖ್ಯೆಯಂತೆ

= ೪ (ಗ್ಕಷ್ಟ) × ೨ ...(ಡ) ದಲ್ಲಿ ತೋರಿಸಿದಂತೆ.

= ೮ (ಗ್ಕಷ್ಟ) (ಕ). ದಲ್ಲಿ ತೋರಿಸಿದಂತೆ.

ಆದರೆ ಗ್ಕಕ್ಷ × ಕ್ಷ = ೧ × ಕ್ಷ = ಕ್ಷ

∴ ಕ್ಷ = ಗ್ಕೆ

∴ ಯಾವದೊಂದು ಅಪೂರ್ಣಾಂಕದ ಅಂಶ ಛೇದಗಳಿಗೆ ಒಂದೇ ಸಂಖ್ಯೆಯಿಂದ ಭಾಗಿಸಲು ಅಥವಾ ಗುಣಿಸಲು ಆ ಅಪೂರ್ಣಾಂಕದ ಬೆಲೆಯಲ್ಲಿ ಹೆಚ್ಚು ಕಡಿಮೆಯಾಗುವದಿಲ್ಲ.

(ಮುಂದೆ ಸಾಗುವದು.)

S. R. Tatti.

ವಿವಿಧ ವಿಜ್ಞಾನಸಂಗ್ರಹ.

(೧೯೧೭ ನೆಸೆಂಬರ ಸಂಚಿಕೆಯಿಂದ ಮುಂದೆ ಸಾಗಿದ್ದು.)

೪ ವಿಚಿತ್ರ ಮುಸಿಗಳು: —

ಈ ಪ್ರಯೋಗಗಳಿದೆಸೆಯಿಂದ ಹೊಳಿಪಿಲ್ಲದ ಕಾಗದಗಳನ್ನು ಉಪಯೋಗಿಸತಕ್ಕದ್ದು: —

೧. ಕಾಸ್ಟಿಕ್ ಪೊಟಾಶ್ ಅಥವಾ ಕಾಸ್ಟಿಕ್ ಸೋಡಾದ ಸೊಲ್ಯೂಶನದಿಂದ ಬರೆದ ಅಕ್ಷರಗಳು ಮೊದಲು ಕಾಣಿಸುವದಿಲ್ಲ. ಆದರೆ ಬರೆದ ಭಾಗಕ್ಕೆ ಉಷ್ಣತೆಯನ್ನು ಪೂರೈಸಿಕೊಟ್ಟರೆ ಅವು ಕಪ್ಪಾಗುತ್ತವೆ.

೨. ಕಾಪರ್ ನೈಟ್ರೇಟದ ತೆಳ್ಳಗಿನ ಸೊಲ್ಯೂಶನದಿಂದ ಬರೆದ ಅಕ್ಷರಗಳು ಮೊದಲು ಕಾಣಿಸದಿದ್ದರೂ ಉಷ್ಣತೆಯನ್ನು ಕೊಟ್ಟಬಳಿಕ ಕೆಂಪಗೆ ಕಾಣುತ್ತವೆ.

೩. ಕಾಪರ್ ಬ್ರೋಮಾಯ್ಡು ಎಂಬ ಪದಾರ್ಥವನ್ನು ನೀರಿನಲ್ಲಿ ಬೆರಿಸಿ ಆ ಸೊಲ್ಯೂಶನದಿಂದ ಗುಲಾಬಿಬಣ್ಣದ ಕಾಗದದ ಮೇಲೆ ಬರೆದರೆ ಕಾಣಿಸುವದಿಲ್ಲ. ಉಷ್ಣತೆಯಿಂದ ಅಕ್ಷರಗಳು ನೀಲಿಬಣ್ಣದವಾಗುತ್ತವೆ.

೪. ಲಿಂಬೀಹಣ್ಣು, ಉಳ್ಳೀಗಡ್ಡಿ, ಅಥವಾ ಕ್ಯಾಬೇಜದ ರಸದಿಂದ ಬರೆದ ಅಕ್ಷರಗಳು ಮೊದಲು ಕಾಣುವದಿಲ್ಲ. ಉಷ್ಣತೆಯನ್ನು ಕೊಡಲು ಅವು ಸ್ಪಷ್ಟವಾಗಿ ಗೋಚರವಾಗುತ್ತವೆ.

೫. ನಾಲ್ಕು ಪಾಲು ಸ್ವಚ್ಛವಾದ ನೀರಿನಲ್ಲಿ ೧ ಪಾಲು ಪೊಟಾಸಿಯಮ್ ಬ್ರೋಮಾಯ್ಡನ್ನೂ ೧ ಪಾಲು ಕಾಪರ್ ಸಲ್ಫೇಟ್ (ತುತ್ಥ)ವನ್ನೂ ಬೆರಿಸಿ ಆದ ಸೊಲ್ಯೂಶನದಿಂದ ಬರೆದ ಅಕ್ಷರಗಳು ಉಷ್ಣತೆಯಿಂದ ನಾಸೀಪುಡಿಬಣ್ಣದವಾಗುತ್ತವೆ.

೬. ಮಜ್ಜಿಗೆಯಿಂದ ಅಥವಾ ಹಾಲಿನಿಂದ ಬರೆದ ಅಕ್ಷರಗಳು ಮೊದಲು ಕಾಣದಿದ್ದರೂ ಉಷ್ಣತೆಯಿಂದ ಸುಲಭವಾಗಿ ಕಾಣುತ್ತವೆ.

೭. ಮೆಕ್ಯುರಿಕ್ ನೈಟ್ರೇಟಿನ ಸೊಲ್ಯೂಶನದಿಂದ ಬರೆದ ಅಕ್ಷರಗಳು ಉಷ್ಣತೆಯಿಂದ ಕಪ್ಪಾಗುತ್ತವೆ.

೮. ಸಿಲ್ವರ್ ನೈಟ್ರೇಟ್ (ಟಾಡೀಕಾರ)ವನ್ನು ಶುದ್ಧನೀರಿನಲ್ಲಿ ಬೆರಿಸಿ ಆದ ಸೊಲ್ಯೂಶನದಿಂದ ಅಕ್ಷರಗಳನ್ನು ಬರೆದರೆ ಅವು ಮೊದಲು ಕಾಣಿಸುವದಿಲ್ಲ. ಆದರೆ ಸ್ವಲ್ಪ ಹೊತ್ತಿನವರೆಗೆ ಬಿಳಕಿನಲ್ಲಿಟ್ಟರೆ ಅವು ಕಪ್ಪೊಡೆಯುತ್ತವೆ.

೯. ಲೆಡ್ ಎಸಿಟೇಟಿನ ಸೊಲ್ಯೂಶನದಿಂದ ಮೊದಲು ಬರೆದು ಕಾಗದವನ್ನು ಒಣಗಿಸಿದರೆ ಅಕ್ಷರಗಳೇನೂ ಕಾಣುವದಿಲ್ಲ ಇಂಥ ಕಾಗದವನ್ನು ಎಮೋನಿಯಮ್ ಸಲ್ಫಾಯ್ಡಿನ ಸೊಲ್ಯೂಶನದಲ್ಲಿ ಎದ್ದಿದರೆ ಅಕ್ಷರಗಳು ಕಪ್ಪಾಗಿ ಕಾಣುತ್ತವೆ.

೧೦. ಅಣಲೇಕಾಯಿಯ ತೆಳ್ಳಗಿನ ಅರ್ಕದಿಂದ ಬರೆದ ಅಕ್ಷರಗಳು ಮೊದಲು ಕಾಣುವದಿಲ್ಲ. ಇಂಥಕಾಗದವನ್ನು ಹಿರಾಕಸಿನ ಸೊಲ್ಯೂಶನದಲ್ಲಿ ಎದ್ದಿತೆಗೆದರೆ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತವೆ.

೧೧. ತುತ್ಥದ ನೀರಿನಿಂದ ಅಕ್ಷರವನ್ನು ಬರೆದು ಅದನ್ನು ನವಸಾಗರ ಮತ್ತು ಸುಣ್ಣಗಳ ಮಿಶ್ರಣದಿಂದ ಹೊರಡುವ ಎಮೋನಿಯವಾದಮೇಲೆ ಹಿಡಿದರೆ ಅದು ನೀಲೀಬಣ್ಣದ್ದಾಗುತ್ತದೆ.

೧೨. ನೀರಿನಿಂದ ಕಪ್ಪು, ನೀಲಿ ಅಥವಾ ಕಂದೀಬಣ್ಣದ ಅಕ್ಷರವನ್ನು ಬರೆಯುವದು: – ೧೦ ಪಾಲು ಅಣಲೇಕಾಯಿಯ ಸೂಕ್ಷ್ಮವಾದ ಹುಡಿ ಮತ್ತು ೨೪ ಪಾಲು ಹಿರಾಕಸಿನ ಸೂಕ್ಷ್ಮವಾದ ಹುಡಿಗಳನ್ನು ಬೆರಿಸಿ (ಈ ಮಿಶ್ರಣದಲ್ಲಿ ನೀರು ಸೇರಿಕೊಳ್ಳಬಾರದು.) ಒಂದು ಕಾಗದದ ಮೇಲೆ ಒಳಿತಾಗಿ ತಿಕ್ಕಬೇಕು. ಹೀಗೆ ಮಾಡುವದರಿಂದ ಮಿಶ್ರಣದ ಕಣಗಳು ಕಾಗದದ ಛಿದ್ರಗಳಲ್ಲಿ ಸೇರಿಕೊಳ್ಳುತ್ತವೆ. ಇಂಥ ಕಾಗದದ ಮೇಲೆ ನೀರಿನಿಂದ ಬರೆದರೆ ಕಪ್ಪು ಮಸಿಯಿಂದ ಬರೆದಂತೆಯೇ ಆಗುತ್ತದೆ. ಅಣಲೇಕಾಯಿಯ ಬದಲು ೨೪ ಪಾಲು ಪೊಟಾಸಿಯಮ್ ಫೆರೊಸಾಯನಾಯ್ಡನ್ನು ತೆಗೆದುಕೊಂಡರೆ ಅಕ್ಷರವು ನೀಲೀಬಣ್ಣದ್ದಾಗುತ್ತದೆ. ಮತ್ತು ಫೆರೋಸಾಯನಾಯ್ಡನ್ನೂ ಹಿರಾಕಸನನ್ನೂ ಸಮಪ್ರಮಾಣದಿಂದ ಬೆರಿಸಿ ನೀರಿನಿಂದ ಬರೆದರೆ ಕಂದೀಬಣ್ಣದ್ದಾಗುತ್ತದೆ.

೧೩. ನೀರು, ಅಕ್ಕೀಪಿಟ್ಟು ಅಯೋಡೀನ್ ಮತ್ತು ಅತಿಸ್ವಲ್ಪ ಪೊಟಾಸಿಯಮ್ ಅಯೋಡಾಯ್ಡುಗಳ ಮಿಶ್ರಣವು ಕಪ್ಪುಮಸಿಯಂತೆ ಆಗುತ್ತದೆ. ಇಂಥ ಮಿಶ್ರಣದಿಂದ ಬರೆದ ಅಕ್ಷರಗಳು ಸುಮಾರು ಒಂದುತಿಂಗಳೊಳಗಾಗಿ ಪೂರ್ಣವಾಗಿ ಅದೃಶ್ಯವಾಗುತ್ತವೆ. ಯಾಕಂದರೆ ಅಯೋಡೀನವು ಬಿಗಿರೂಪವನ್ನು ಹೊಂದಿ ಹೋಗುವದರಿಂದ ಅಕ್ಕಿಯ ಪಿಟ್ಟಿನ ಕೆಲವು ಭಾಗವು ಮಾತ್ರ ಉಳಿಯುತ್ತದೆ. ಇಂಥ ಮಸಿಯು ಪಾಶ್ಚಾತ್ಯರಾಷ್ಟ್ರಗಳಲ್ಲಿಯ ಎಷ್ಟೋ ದೊಡ್ಡ ದೊಡ್ಡ ಶಹರಗಳಲ್ಲಿ "ಹೆಂಗಸರ ಮಸಿ" (ಹೆಂಗಸರು ಪ್ರೇಮ ಪತ್ರಗಳನ್ನು ಒರೆಯಲಿಕ್ಕೆ ಒಳ್ಳೆಯದಾದ ಮಸಿ) ಎಂಬ ಹೆಸರಿನಿಂದ ಮಾರಾಟಿಕ್ಕೆ ಸಿಗುತ್ತದೆ. ಯಾವದೊಂದು ಜವಾಬದಾರಿಯ ಪತ್ರವನ್ನು ಈ ಮಸಿಯಿಂದ ಒರೆದರೆ ಜವಾಬದಾರಿಯು ಇಲ್ಲದಂತಾಗುತ್ತದೆ. ಆದರೆ ಹೀಗೆ ಮಾಡುವದು ಕಾಯಿದೆಗೆ ವಿರುದ್ಧವಾದದ್ದೆಂಬ ಸಂಗತಿಯನ್ನು ಮಾತ್ರ ಮರೆಯಬಾಗದು. ಇಷ್ಟೇ ಅಲ್ಲ: ಹಾರಿಹೋದ ಅಕ್ಷರಗಳು ತಿರುಗಿ ಕಾಣುವಂತೆ ಸಹ ಮಾಡಬಹುದು.

R. K. Naik.

ಸಾಭಿನಯ ಪಾಠಗಳು.

ಶಾಲೆಯು ಒರೇ ವಿಷಯಜ್ಞಾನ ಮಾಡಿಕೊಳ್ಳಲಿಕ್ಕಷ್ಟೇ ಅಲ್ಲ. ಅದು ಮನೋರಂಜನೆಯ ಸ್ಥಾನವೂ ಆನಂದದ ಮಂದಿರವೂ ಆಗಲಿಕ್ಕೆ ಹಲವು ಒಗೆಯ ಉಪಾಯಗಳೂ ಏರ್ಪಾಡುಗಳೂ ಮಾಡಲ್ಪಡುತ್ತಲಿವೆ. ತಲೆ ಚಿಟ್ಟಿನಿಸುವ 'ಗಿಳಿ ಓದು, 'ಗಿಳಿಪಾಠ, ಇವು ಮೊದಲಿಗೆ ಇದ್ದವು. ಈಗ ಆಟಕ್ಕೆ ಆಟವಾದಂತಾಗಿ ಜ್ಞಾನದ ಅಭಿವೃದ್ಧಿಯಾಗುವಂತೆ ವಿಷಯಕ್ಕೆ ಸುಲಭರೂಪ ಕೊಟ್ಟು, ' ಹುಡುಗರ ಚಿತ್ತರಂಜನೆಯಾಗುವಂತೆ ಹೊಸ ಪದ್ಧತಿಯಿಂದ ಕಲಿಸುವದು ಪ್ರಾರಂಭವಾಗಿದೆ. ಒಂದೇ ಸವನೆ ಒತ್ತಟ್ಟಿಗೆ ಕೂತು ಕೂತು ಬೇಸತ್ತು, ಹುಡುಗರು ಅರಿವೆಗಾಲು-ಅರಿವೆಗೈಯವರೂ ಸಪ್ಪಸ್ಸ ಜೋಲು ಮೋರೆಯವರೂ ಆಗಬಾರದೆಂದು, ಡ್ರಿಲ್ಲಿನ ಮತ್ತು ವ್ಯಾಯಾಮದ ಆಟಗಳ ಯೋಜನೆಮಾಡಿ, ಅವಕ್ಕೆ ತಕ್ಕ ಉಪಕರಣಗಳು ಶಕ್ಯವಿದ್ದ ಪಟ್ಟಿಗೆ ಶಾಲೆಗಳಿಗೆ ಪೂರೈಸಿ ಕೊಡಲ್ಪಟ್ಟಿರುತ್ತವೆ. ಶಿಕ್ಷಕನೆಂದರೆ ಭಯಂಕರ ಪ್ರಾಣಿಯು ಅತನ ಶಾಸನವು ಯಮಶಾಸನವು, ತೀರ ಕ್ಷುಲ್ಲಕ ಅಪರಾಧಕ್ಕೆ ಸಹ ಮೂಲದಂಡಿಗೆ, ಖುರ್ಚಿ ಕೂಡಿಸುವದು, ಬಡಿಗೆಯ ಪೆಟ್ಟು, ಮುಂತಾದ ಭಯಂಕರ ಶಿಕ್ಷೆಯಾಗುವದು" ಹೀಗೆ ವಿದ್ಯಾರ್ಥಿಗಳ ದುರ್ಭಾವನೆಯಾಗಿ ಶಿಕ್ಷಕನ ಹೆಸರು ತೆಗೆದುಕೊಂಡ ಕೂಡಲೆ ಗದಗದ ನಡುಗುವ ಸ್ಥಿತಿಯು ಅಳಿದು ಹೋಗಿ, ಶಿಕ್ಷಕರು ನಮ್ಮ ಪ್ರೇಮದ ಹಿರಿಯರು, ನಮ್ಮ ಮಾರ್ಗದರ್ಶಕರು, ನಮ್ಮ ಆಪ್ತಮಿತ್ರರಂತೆ ಇರುವವರು, ನಮಗೆ ತೊಂದರೆ ಹುಟ್ಟಾದಾಗ ಉಪಾಯವನ್ನು ಹೇಳಿಕೊಟ್ಟು, ನಮ್ಮಿಂದಲೇ ತೊಂದರೆಗಳನ್ನು ನಿವಾರಣ ಮಾಡಿಸುವವರು ಎಂಬ ಸದ್ಭಾವನೆಯನ್ನು ಉಂಟು ಮಾಡುವ ಕಾಲವು ಒದಗಿದೆ. ಗುರಿಂಚಿಸೇನಂದರೆ, ಹುಡುಗರನ್ನು ತೀರ ಶ್ರಮ ಒಡಿಸಿ, ಆಳಿಸುತ್ತ ಕಲಿಸುವ ಕಾಲವು

ನೀಗಿ, ನಗಿಸುತ್ತ ಆಡಿಸುತ್ತ, ಜ್ಞಾನವಂತರನ್ನು ಮಾಡುವ ಕಾಲವು ಬಂದಿದೆ. ಈ ಬಗೆಯ ಶಿಕ್ಷಣವನ್ನು ನಾಗಿಸಬೇಕಾದರೆ ಶಿಕ್ಷಕನು "ತಾನು ದೊಡ್ಡವನು, ವಿದ್ಯಾರ್ಥಿಗಳು ತೀರ ಜಡ-ಮೂಢರು" ಎಂದು ಭಾವಿಸದೆ, ತಾನೂ ವಿದ್ಯಾರ್ಥಿಗಳೊಳಗಿನವನೊಬ್ಬನೆಂದು ತಿಳಕೊಂಡು ಹುಡುಗರಲ್ಲಿಯೂ ಅದೇ ಭಾವನೆಯನ್ನುಂಟು ಮಾಡಿ ಕೇವಲ ತಾದಾತ್ಮ್ಯ-ಸ್ಥಿತಿಯನ್ನು ತಾಳಬೇಕಾಗುತ್ತದೆ. ಪುಸ್ತಕದೊಳಗಿನ ವಿಷಯವನ್ನು ಕಲಿಸುವಾಗ ಶಿಕ್ಷಕನು ದೂರದಲ್ಲಿ ಇದ್ದುಕೊಂಡು ತಾರತಮ್ಯದಿಂದ ಕಲಿಸಲಿಕ್ಕೆ ಬಂದೀತು. ಆದರೆ ಆಟಗಳು, ಡ್ರಿಲ್ಲು, ತಾಲೀಮು, ಸಾಭಿನಯ-ಪಾಠಗಳು ಇವುಗಳನ್ನು ಕಲಿಸುವಾಗ ಅವನು ದೂರ ನಿಂತು ಬರೇ ಅಪ್ಪಣೆ ಕೊಡುತ್ತಿದ್ದರೆ ಅವನಿಗೆ ಹೆಚ್ಚು ಶ್ರಮವಾಗುವದೇ ಹೊರತು, ಪಾಠದಿಂದ ವಿಶೇಷ ಪ್ರಯೋಜನವಾಗಲಾರದು. ಸಾಭಿನಯ--ಪಾಠಗಳಲ್ಲಂತೂ ಶಿಕ್ಷಕನು ತಾನು ಶಿಕ್ಷಕನೆಂಬದನ್ನು ಸಹ ಮರೆತು, ಹುಡುಗರೊಡನೆ ವರ್ತಿಸಬೇಕಾಗುತ್ತದೆ. ಇದರಿಂದ ಹುಡುಗರ ಬಳಿಕೆಯು ಶಿಕ್ಷಕನೊಡನೆ ಹೆಚ್ಚು ಬೆಳೆದು ಅವನ ಶಿಕ್ಷಣ-ಕಾರ್ಯಕ್ಕೆ ಬಹು ಪ್ರಯೋಜನವನ್ನುಂಟು ಮಾಡುತ್ತದೆ.

ಸಾಭಿನಯ-ಪಾಠಗಳಿಂದ ಹುಡುಗರ ಅನುಕರಣ-ಶಕ್ತಿಯನ್ನು ಬಹಳವಾಗಿ ಬೆಳೆಸಲಿಕ್ಕೆ ಬರುತ್ತದೆ. ಅನುಕರಣ-ಶಕ್ತಿಯಿಂದಲೇ ಶಿಶುಗಳು ಮಾತೃಭಾಷೆಯನ್ನು ಕಲಿಯುತ್ತವೆ. ಎರಡನೆಯವರು ತಮ್ಮ ಕೈಯಿಂದ ಉಣ್ಣುವದನ್ನು ನೋಡಿ ಉಣ್ಣಿಸಿಕೊಳ್ಳಲಿಕ್ಕೆ ಅಲ್ಲಗಳೆದು ತಾವೇ ಉಣ್ಣಹತ್ತುತ್ತವೆ. ಎತ್ತು-ನಾಯಿಗಳು ಪಾತ್ರೆಗೆ ಬೋರೆ ಹಚ್ಚಿ ನೀರು ಕುಡಿಯುವದನ್ನು ನೋಡಿ, ಕೈಕಾಲೂರಿ ನೀರು ಕುಡಿಯಲಿಕ್ಕೆ ಹುತ್ನಿಸುತ್ತವೆ! ಒಕ್ಕಲಿಗರು ಬಂಡಿಯಿಂದ ಮೇವು ತರುವದನ್ನು ನೋಡಿ, ಅಡುವ ಬಂಡಿಯಲ್ಲಿ ಹುಲ್ಲು-ಕಸ ತುಂಬಿ, ಸಾಕಿದ ನಾಯಿಯನ್ನು ಹೂಡಿ, ನಡಿಸಿ ಆನಂದಪಡುತ್ತವೆ!! ಶಾಲೆ ಬಿಟ್ಟು ಮನೆಗೆ ಬಂದಾಗ ಶಿಕ್ಷಕರು ಕಲಿಸಿದಂತೆ ಕಲಿಸುವ ಆಟವಾಡುತ್ತವೆ. ಹೀಗೆ ಎಲ್ಲ ಸಂಗತಿಗಳನ್ನು ಅನುಕರಣದಿಂದ ಸೊತ್ತುಮಾಡಿಕೊಳ್ಳುತ್ತವೆ. ಬಡಿಗ, ಕಮ್ಮಾರ, ಕುಂಬಾರ, ಸಿಂಪ್ಯಾರ ಮುಂತಾದವರ ಮಕ್ಕಳು ಅನುಕರಣದಿಂದಲೇ ತಮ್ಮ ತಮ್ಮ ಹಿರಿಯರ ಹೋರೆಗಳಲ್ಲಿ ಪಾಣ್ಮೆಯನ್ನು ಪಡೆಯುತ್ತಿರುವರು. ಬಹಳ ಮಾತೇಕೆ? ಮನುಷ್ಯನ ಪ್ರತಿಯೊಂದು ಶಬ್ದವೂ ಕೃತಿಯೂ ಅವನಿಗಿಂತ ಮುಂಚಿನವರ ಅನುಕರಣದಿಂದಲೇ ಆಗಿರುತ್ತವೆನ್ನಲಿಕ್ಕೆ ಅಡ್ಡಿಯಿಲ್ಲ. ಒಬ್ಬ ವಿದ್ವಾಂಸರು ಹೇಳುವದೇನಂದರೆ--"ಜಗತ್ತಿನಲ್ಲಿ ಹೊಸ ಶೋಧಗಳು ಆಗುವದೇ ಇಲ್ಲ. ಆದಂತೆ ತೋರುವ ಎಷ್ಟೋ ಸಂಗತಿಗಳು ಮೊದಲಿನವರ ಅನುಕರಣ ಮಾಡಿದ್ದರ ಫಲಿತಗಳೇ ಇರುತ್ತವೆ. ಅನುಕರಣವಿಲ್ಲದಿದ್ದರೆ ಫಲಿತವೆಲ್ಲಿ?"

ಈ ಬಗೆಯ ಮಹತ್ವದ ಅನುಕರಣ-ಶಕ್ತಿಯನ್ನು ಕುಗ್ಗಿಸುವದು ಎಷ್ಟುಮಾತ್ರವೂ ಸರಿಯಿಲ್ಲ. ಅದನ್ನು ಕುಗ್ಗಿಸಿದರೆ ವಿದ್ಯಾರ್ಥಿಗಳ ಅನಂತಾಂಕುರವನ್ನು ಚಿವುಟಿದಂತಾಗಿ ಅವರು ಮನಗುಂದಿ, ಉತ್ಸಾಹಹೀನರಾಗುವರು. ವಿದ್ಯಾರ್ಥಿಗಳನ್ನು

ತಾ. ಜಾನ್‌ಸನ್ನನ ನೆಳೆಯನಾದ ಗ್ಯಾರಿಕ್, ಅಥವಾ ಜಾವಡೇಕರ ಮುಂತಾದ ನಟರಂತೆ, ಅದ್ವಿತೀಯ-ಅನುಕರಣ-ಶೀಲರನ್ನು ಮಾಡುವದಕ್ಕೆ ಯತ್ನಿಸುವದೂ ಸರಿಯಲ್ಲ. ಹುಡುಗರ ಭಾವನೆಗಳು ಶಾಬ್ದಿಕವಾಗಿ ಇರದೆ, ಹೃದಯದಿಂದ (ಮನಃಪೂರ್ವಕವಾಗಿ) ಹೊರಟವುಗಳಂತೆ ಮಾಡುವಷ್ಟು ಮಟ್ಟಿಗೆ ಅನುಕರಣ-ಶಕ್ತಿಯು ಬೆಳೆದರೆ ಸಾಕು. ಉದಾಹರಣಾರ್ಥವಾಗಿ—ಕುರುಡರ, ಕುಂಟರ ಅನುಕರಣವನ್ನು ಹುಡುಗರು ಚೇಷ್ಟೆಗಾಗಿ ಬರೇ ಶಾಬ್ದಿಕ-ರೀತಿಯಿಂದ ಮಾಡುವದರಿಂದ ಏನೂ ಪ್ರಯೋಜನವಿಲ್ಲ. ಆದರೆ ಕುರುಡತನ, ಕುಂಟತನ, ಇವೇ ಮೊದಲಾದ ವ್ಯಂಗಗಳಿಂದ ಏನೇನು ತೊಂದರೆಗಳಾಗುತ್ತವೆಂಬದರ ಅರಿವು ಹುಟ್ಟಿದರೆ, ಆ ಅನುಕರಣದಿಂದ ಪ್ರಯೋಜನವಾಗುವದು. ಈ ದೃಷ್ಟಿಯಿಂದ ವಿಚಾರಿಸಲು, ನಾಭಿನಯ-ಪಾಠಗಳು ಯೋಗ್ಯ ರೀತಿಯಿಂದ ನಾಗಿದರೆ, ಅನುಕರಣ-ಶಕ್ತಿಯನ್ನು ಬೆಳಿಸುವವಲ್ಲದೆ, ಅದಕ್ಕೂ ಅತ್ಯಂತ ಶ್ರೇಷ್ಠವಾದ ಭಾವನೆಗಳ ಜಾಗರೂಕತೆಯನ್ನು ಮಾಡುತ್ತವೆ. ನಾಭಿನಯ ಪಾಠಗಳಿಂದ ಆಗುವ ಮೇಲಾದ ಪ್ರಯೋಜನವು ಇದೇ ಇರುತ್ತದೆ.

ಭಾವನೆಗಳ ಜಾಗರೂಕತೆ, ಅನುಕರಣ-ಶಕ್ತಿಯ ಬೆಳವಣಿಗೆ ಇವುಗಳ ಹೊರತು ನಾಭಿನಯ-ಪಾಠಗಳಿಂದ ಕೆಲವು ಗೌಣ-ಪ್ರಯೋಜನಗಳೂ ಆಗುವವು. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ:—

(೧) ಹುಡುಗರಲ್ಲಿ **ಮುಖ-ಹೀನ**ತೆಯು ಹೋಗಿ, ದಿಟ್ಟತನವು ನೆಲೆಗೊಳ್ಳುತ್ತದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಗಾಬರಿಯಾಗಿ ಸಮರ್ಪಕ ಉತ್ತರ ಕೊಡದೆ, ನಾಪಾಸ ಆದನೆಂದು ಶಿಕ್ಷಕರು ಹೇಳಿಕೊಳ್ಳುವ ಪ್ರಸಂಗವು ತಪ್ಪುತ್ತದೆ. ಈ ದಿಟ್ಟತನವು ಬೆಳೆದಂತೆ ಸಭಾಕಂಪವು ಇಲ್ಲದಂತಾಗಿ ಹುಡುಗರು ದೊಡ್ಡವರಾದ ಮೇಲೆ ಸ್ಪಷ್ಟವಕ್ತಾರರಾಗುತ್ತಾರೆ.

(೨) ವಾಚನಪುಸ್ತಕಗಳೊಳಗಿನ ಸಂವಾದದ ಪಾಠಗಳಲ್ಲಿ ಅವಶ್ಯವಾಗಿ ಬೇಕಾಗುವ ಶಬ್ದಾಘಾತ, ಸ್ವರಾಘಾತ, ಧ್ವನಿಯ ಏರಿಳಿವು, ಇವುಗಳ ಜ್ಞಾನವಾಗುತ್ತದೆ.

(೩) ಸ್ವಾಭಿಪ್ರಾಯವನ್ನು ವಿಶದವಾಗಿ ವ್ಯಕ್ತ ಮಾಡಲಿಕ್ಕೆ ಅವಶ್ಯವಾಗಿರುವ ಹಾವಭಾವಗಳ ಜ್ಞಾನವಾಗುತ್ತದೆ.

(೪) ಗಡಚಾಪ ವಿಷಯವು ಸಹ ಸಂಭಾಷಣೆಯ ಪಾಠದ ಸ್ವರೂಪಕ್ಕೆಳಿಸಿಕೊಂದರೆ ಅದರಲ್ಲಿ ಸೌಲಭ್ಯವುಂಟಾಗುತ್ತದೆ.

(೫) ನಡುವೇ ಬಾಯಿ ಹಾಕಿ ಮಾತಾಡುವ ಕೆಟ್ಟ ಚಟವು ಹೋಗಿ, ಅನ್ನಿಗರ ಅಭಿಪ್ರಾಯವು ಸೊತ್ತಾದ ಮೇಲೆ ಮಾತಾಡುವ ರೂಢಿಯಾಗುತ್ತದೆ.

(೬) ನಡೆ-ನುಡಿಗಳಲ್ಲಿ ವಿಶೇಷ ಪ್ರಕಾರದ ಶಿಸ್ತು ನೆಲೆಗೊಳ್ಳುತ್ತದೆ.

(೭) ಈ ಪಾಠಗಳಲ್ಲಿ ಗುರು-ಶಿಷ್ಯರೊಳಗೆ ವಿಶೇಷ ಸಲಿಗೆ ಬೆಳೆದು, ಹುಡುಗರು ಮನದಿಚ್ಛೆ ಮಾತಾಡುವದರಿಂದ, ಅವರ ಸ್ವಭಾವವೃತ್ತಿಗಳ ಜ್ಞಾನವಾಗುತ್ತದೆ. ಆದ

ರಿಂದ ಅವುಗಳನ್ನು ಯೋಗ್ಯ ಮಾರ್ಗದ ಕಡೆಗೆ ತಿರುಗಿಸಲಿಕ್ಕೆ ಅನುಕೂಲವಾಗುತ್ತದೆ.

ನಾಭಿನಯ-ಪಾಠಗಳನ್ನು ನಡಿಸುವಾಗ ಶಿಕ್ಷಕರು ಕೆಲವು ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕಾಗುವದು. ಅವುಗಳಲ್ಲಿ ಅವಶ್ಯವಾದವುಗಳು ಯಾವವೆಂದರೆ:—

(೧) ಶಿಕ್ಷಕನು ಹಸನ್ಮುಖನಾಗಿ ಪ್ರೇಮದ ಭಾಷೆಯನ್ನು ಉಪಯೋಗಿಸಬೇಕು.

(೨) ಭಾಷೆಯು ಎಲ್ಲರಿಗೂ ತಿಳಿಯುವಂತೆ ಇರಬೇಕು.

(೩) ಶಿಕ್ಷಕನು ತಾನೂ ಹುಡುಗರೊಳಗಿನವನೊಬ್ಬನೆಂದು ತೋರಿಸಬೇಕು. ಆದರೂ ವಯಸ್ಸು, ಅಧಿಕಾರ, ವಿದ್ಯೆ ಇವುಗಳ ಮೂಲಕವಾಗಿ, ಹುಡುಗರು ತುಸು ಮಟ್ಟಿಗೆ ಅಂಜಿಸೇ ನಡೆಯುವರು. ಅಷ್ಟು ಅಂಜಿಕೆಯು ಸ್ವಚ್ಛಂದದ ಅತ್ಯಾಚಾರ, ಅಶ್ಲೀಲ-ಭಾಷಣ ಇವುಗಳಿಗೆ ಪ್ರತಿಬಂಧಕವಾಗಿ ಪ್ರಯೋಜನವನ್ನೇ ಮಾಡುವದು.

(೪) ಶಿಕ್ಷಕನು ಸ್ವತಃ ಅಭಿನಯ ಮಾಡಿ ತೋರಿಸುವಾಗ ನಾಚಬಾರದು. ಒಮ್ಮೊಮ್ಮೆ ಹುಡುಗರಿಗೆ ಶಿಕ್ಷಕನ ಅಭಿನಯವು ವಿಲಕ್ಷಣವೆನಿಸಿ, ಖೊಳ್ಳನೆ ನ[illegible] ವರು. ಆ ನಗೆಯು ಹುಡುಗರ ಸಾನಂದಾಶ್ಚರ್ಯದ ಕುರುಹೇ ಹೊರತು ಶಿಕ್ಷಕನ ಅಪಮಾನ ಮಾಡುವದರ ಲಕ್ಷಣವಲ್ಲ.

(೫) ನಾಭಿನಯ-ಪಾಠವನ್ನು ಹೊಡೆದು ಒಡೆದು ಹೆದರಿಕೆ ಹಾಕಿ ಕಲಿಸುವದು ಎಷ್ಟು ಮಾತ್ರವೂ ಸರಿಯಲ್ಲ. ವಿಷಯ-ಗ್ರಹಣಮಾಡಿ, ದಣಿದ ಮನಸಿಗೆ ವಿಶ್ರಾಂತಿಯಾಗಬೇಕೆಂದು ನಾಭಿನಯ ಪಾಠಗಳಿರುತ್ತವೆ. ಹೀಗಿರಲು ಈ ಪಾಠಕ್ಕಾಗಿ ಒತ್ತಾಯವೂ ಬಿಳಿಪ್ಪು ಕೂಡ ಇರಕೂಡದು.

(೬) ಉಳಿದ ವಿಷಯಗಳನ್ನು ಕಲಿಸುವದರಲ್ಲಿ ಶಾಂತವೃತ್ತಿಯು ಬೇಕಷ್ಟೆ. ಆದರೆ ನಾಭಿನಯ-ಪಾಠಗಳಲ್ಲಿ ತಪ್ಪುತಪ್ಪೆಗಳು ಹೆಚ್ಚಾಗುವದರಿಂದ ಶಿಕ್ಷಕನು ಅಮಿತವಾದ ಸಮಾಧಾನವನ್ನು ತಾಳಬೇಕು. ಒಂದೇಸವನೆ ಬಹಳ ಸಾರೆ ಅಭಿನಯ ಮಾಡಿ ತೋರಿಸಿದರೆ, ಕೊಸಿಗೆ ಹುಡುಗರು ತದ್ರೂಪವಾಗಿ ಮಾಡುವರೆಂಬದರಲ್ಲಿ ಸಂಶಯವಿಲ್ಲ.

(೭) ಶಿಕ್ಷಕನು ಹೇಳೋದ ಪೂರ್ಣವಾಗಿ ಮಾತಾಡುತ್ತಿರಬೇಕು. ಹುರುಪಿನ ಅಂಕೆಯೊಂಕತನಕ್ಕಾಗಿ ಏನೂ ಹೀಯಾಳಿಸಬಾರದು. ಭಲೆ! ಶಾಹಬಾಸ್ ಮುಂತಾದ ಉತ್ಸಾಹವರ್ಧಕ ಶಬ್ದಗಳನ್ನು ಆಗಾಗ್ಗೆ ಉಪಯೋಗಿಸಬೇಕು.

ನಾಭಿನಯ-ಪಾಠಗಳು ಇಂತಹವೇ ಇರಬೇಕೆಂಬ ನಿಯಮವಿಲ್ಲ. ಐತಿಹಾಸಿಕ ಸಂಗತಿಗಳು, ಪಶುಪಕ್ಷಿಗಳ ಕಥೆಗಳು, ಶಾಸ್ತ್ರೀಯ ವಿಷಯದೊಳಗಿನ ಪಾಠಗಳ ಇವೇ ಮೊದಲಾದವುಗಳಿಗೆ ತಕ್ಕ ಸಂಭಾಷಣೆಯ ರೂಪ ಕೊಟ್ಟು, ಅಭಿನಯಸಹಿತವಾಗಿ, ಬಿಲ್ಲಪೆ ಪ್ರಯೋಗಸಹಿತವಾಗಿ ಸಾಗಿಸಿದರೆ ಸಾಕು. ನಾಟಕಕ್ಕೆ ಬೇಕಾಗುವ ವಸ್ತ್ರಾಭರಣಗಳು ಬೇಕೆಂಬ ಮಾತು ಸಹ ಗೌಣವೇ. ಹುಡುಗರ ಭಾವನೆಗೆ ಜಾಗ್ರತೆ ಹೊಂದಿ, ಕಾರ್ಯಶಕ್ತಿಯು ಬೆಳೆದರೆ ಸಾಕು.

ಇನ್ನು, ಕೆಲವು ನಾಭಿನಯ-ಪಾಠಗಳನ್ನು ಕ್ರಮದಿಂದ ಒರೆಯುತ್ತ ಹೋಗುವೆವು. ಇವೇ ಪಾಠಗಳನ್ನೇ ಕಲಿಸಬೇಕೆಂಬ ಉದ್ದೇಶವಲ್ಲ. ಶಿಕ್ಷಕರು ತಮ್ಮತಮ್ಮ ವಾಸಸ್ಥಳದ ಪರಿಸ್ಥಿತಿಗೆ ಅನುಸರಿಸಿ ಬೇರೆ ಬೇರೆ ಬಗೆಯ ಪಾಠಗಳನ್ನು ರಚಿಸಿ ಕಲಿಸ ಬಹುದು. ಇಷ್ಟಿನಿಂದ ನಾಭಿನಯ-ಪಾಠಗಳ ಉದ್ದೇಶವು ಸಫಲವಾದರಾಯಿತು.

V. M. Tatti.

ಬಾಲಕರ ವರ್ಗದ ವಿಷಯಗಳನ್ನು ಹೇಗೆ ಕಲಿಸಬೇಕು.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಇದಕ್ಕೆ ಉತ್ತರವೇನೆಂದರೆ -- ನಾವಾದರೂ ವಿಚಾರಶಕ್ತಿಯ ಕೆಲಸವನ್ನು ಈಗಲೇ ಕೈಕೊಳ್ಳುವವರಲ್ಲವಾದ್ದರಿಂದ ಇವರ ಈ ವಾದವು ನಮಗೆ ಅನುಕೂಲವೇ ಉಂಟು. ಅಥವಾ ವಿಚಾರಶಕ್ತಿಯ ಕೆಲಸವು ಕೆಲವು ಟ್ಟಿಗೆ ಇದ್ದರೂ ಅದು ಬಾಲಕರ ವ್ಯವಹಾರದ್ದು. ಆದ್ದರಿಂದ ಅದೊಂದು ಭಾರವಾಗುವದಿಲ್ಲ. ತೃತೀಯ ಪಕ್ಷದವರ ಈ ಅಭಿಪ್ರಾಯವನ್ನೇ ಅನುಸರಿಸಿ, ಮತ್ತು ಈ ಪ್ರಕಾರದ ಅನುಭವವನ್ನು ತೆಗೆದುಕೊಂಡೇ ಬಾಲಕರಿಗೆ ಓದುಬರಹವನ್ನು ಹೇಗೆ ಕಲಿಸಬೇಕೆಂಬದು ಇವರ ಕೆಳಗೆ ಹೇಳಿರುತ್ತದೆ.

ಸೂರನೆಯ ಮೆಟ್ಟಿನಲ್ಲಿ ದೊರೆತ ಶಿಕ್ಷಣದಿಂದ ಬಾಲಕರು ಚಿತ್ರಗಳನ್ನೂ ಅಕ್ಷರಾವಯವಗಳನ್ನೂ ತೆಗೆಯಲಿಕ್ಕೆ ಕಲಿತಿರುವದರಿಂದ ಕರಿಹಲಿಗೆಯ ಮೇಲಾಗಲಿ, ಪಾಟಿಯ ಮೇಲಾಗಲಿ ಯಾವದೊಂದು ಅಕ್ಷರವನ್ನು ತೆಗೆಯಲಿಕ್ಕೆ ಸಮರ್ಥರಾಗಿರುವರು. ಹಿಂದಿನ ಎರಡನೆಯ ಮೆಟ್ಟಿನಲ್ಲಿ ನೋಡಿದ ವಸ್ತುಗಳ ಅಥವಾ ಚಿತ್ರಗಳ ಸಂಬಂಧದಿಂದಲೂ, ಕೇಳಿದ ಕಥೆಗಳ ಸಂಬಂಧದಿಂದಲೂ, ವರ್ಷದಲ್ಲಿ ಪ್ರಾಪ್ತವಾಗುವ ಋತುಗಳು ಜಾತ್ರೆಗಳು ಹಬ್ಬಗಳು ಮೊದಲಾದ ಪ್ರಸಂಗ ವಿಶೇಷಗಳಲ್ಲಿ ಸಂಭವಿಸುವ ಸಂಗತಿಗಳ ಸಂಬಂಧದಿಂದಲೂ ಪಾಠಗಳನ್ನು ಬರೆದು ಅವನ್ನೇ ಓದಿಸಿದರೆ ಹಾಗು ಬರೆಯಿಸಿದರೆ ಮಕ್ಕಳಿಗೆ ಅಕ್ಷರಜ್ಞಾನವು ಅಂದರೆ ಓದುಬರಹದ ಜ್ಞಾನವು ಉತ್ತಮವಾಗಿ ಆಗುವದು. ಮೂಲಾಕ್ಷರಗಳನ್ನು ಕಲಿಸದೆ ಮೊದಲಿಗೇ ಈ ಪಾಠಗಳನ್ನು ಕಲಿಸುವದು ಹೇಗೆ ಎಂದು ಎದೆಗುಂದುವದು ಬೇಡ. ಮುಂದೆ ಹೇಳಿದ ನೋಟಿಗೆ ನಿಯಮಿತ

ತನದಿಂದ ನಿತ್ಯವೂ ಕೆಲಸ ಮಾಡಿದರೆ ಏನೂ ತ್ರಾಸವಾಗುವದಿಲ್ಲ. ಮೇಲೆ ಉಲ್ಲೇಖಿಸಿದ ಪಾಠಗಳು ಹದಿನೈದು-ಹದಿನಾರು ಇದ್ದರೆ ಸಾಕು. ಪ್ರತಿಯೊಂದು ಪಾಠಗಳಲ್ಲಿ ಹತ್ತು-ಹನ್ನೆರಡಕ್ಕಿಂತ ಹೆಚ್ಚು ವಾಕ್ಯಗಳಿರುವದು ಬೇಡ. ವಾಕ್ಯಗಳು ಸಣ್ಣವೂ, ಸುಲಭವೂ ಇದ್ದು ಅವುಗಳ ಅರ್ಥವು ಬಾಲಕರಿಗೆ ಸಹಜವಾಗಿ ತಿಳಿಯುವಂತೆ ಅವರ ರೂಢಿಯವಿರಬೇಕು. ಅವುಗಳಲ್ಲಿ ಒತ್ತಕ್ಷರವಿದ್ದರೂ ಅಡ್ಡಿಯಿಲ್ಲ. ಆ ಪಾಠಗಳನ್ನು ದೊಡ್ಡಕ್ಷರಗಳಿಂದ ಒಂದು ಇಂಚಿನಿಂದ ಅರ್ಧ ಇಂಚಿನವರೆಗೆ ಒಂದೇ ಕಾಗದದ ಮೇಲೆ ಸುಂದರವಾಗಿ ಬರೆಯಿಸಿ, ರಟ್ಟಿಗೆ ಅಂಟಿಸಿ, ಗೋಡೆಗೆ ತೂಗಿಸಿ ಇಡುವಂತೆ ವ್ಯವಸ್ಥೆ ಮಾಡಿರಬೇಕು. ಮೊದಲಿನ ಪಾಠಗಳು ದೊಡ್ಡ ಅಕ್ಷರದವೂ ಸ್ವಲ್ಪ ವಾಕ್ಯಗಳುಳ್ಳವುಗಳೂ ಇದ್ದು, ಕಡೆಕಡೆಯವುಗಳ ಅಕ್ಷರಗಳು ಸಣ್ಣವಾಗುತ್ತ ಹೋಗಬೇಕು. ಈ ಕಡೆಯ ಪಾಠಗಳಲ್ಲಿ ಒಂದೆರಡು ವಾಕ್ಯಗಳು ಹೆಚ್ಚಿಗಿದ್ದರೂ ನಡೆಯಬಹುದು. ಇದಲ್ಲದೆ ಆ ಪಾಠದ ಮೇಲ್ಬದಿಯಲ್ಲಿ ಪಾಠದೊಳಗೆ ಪ್ರಸ್ತಾಪಿಸಿದ ಸಂಗತಿಯ ಚಿತ್ರಗಳೂ, ಕೆಳಬದಿಯಲ್ಲಿ ಅದರ ತಾತ್ಪರ್ಯದಿಂದೊಡಗೂಡಿದ ಸಾದರಾಗದ ಒಂದೊಂದು ಸಣ್ಣ ಪದ್ಯವೂ ಬರೆಯಲ್ಪಡಬೇಕು. ಪಾಠಗಳಲ್ಲಿ ವರ್ಣಿಸಿರುವ ವಸ್ತುಗಳ ಇಲ್ಲವೆ ಸಂಗತಿಗಳ ಪ್ರತ್ಯಕ್ಷಸ್ವರೂಪವು ಬಾಲಕರ ಕಣ್ಣಮುಂದೆಯೂ ಬಾಯಮೇಲೂ ಇರಬೇಕೆಂಬದೇ ಈ ಯೋಜನೆಯ ಉದ್ದೇಶವು. ಈ ಪ್ರಕಾರ ತಯಾರಿಸಿದ ಪಾಠಗಳು ದೊಡ್ಡಕ್ಷರಗಳಿಂದ ಛಾಪಿಸಿದ್ದವಿದ್ದರೆ ಬಹಳೇ ಉತ್ತಮ.

ಮೊದಲನೆಯ ಪಾಠವನ್ನು ಕಲಿಸುವಾಗ ಆ ಪಾಠದ ವಸ್ತುವನ್ನಾಗಲಿ, ಕಥೆಯ ಯಾ ಸಂಗತಿಯ ಸ್ವರೂಪವನ್ನಾಗಲಿ ಪ್ರತ್ಯಕ್ಷ ತೋರಿಸಿ ಆ ಸಂಬಂಧದಿಂದ ಪ್ರಶ್ನೆಗಳನ್ನು ಮಾಡಿ, ಪಾಠದಲ್ಲಿ ಬರೆದ ವಾಕ್ಯಗಳನ್ನು ಉತ್ತರರೂಪವಾಗಿ ಬಾಲಕರಿಂದ ಹೊರಡಿಸಿದ ಬಳಿಕ ಪಾಠದ ಕೆಳಗೆ ಬರೆದ ಪದ್ಯವನ್ನು ಎಲ್ಲರೂ ಹಾಡಬೇಕು. ಆ ಮೇಲೆ ಆ ಪಾಠದ ಆರಂಭದ ವಾಕ್ಯವನ್ನು ಕರಿಹಲಗೆಯ ಮೇಲೆ ಬರೆಯಬೇಕು. ಈ ವಾಕ್ಯದಲ್ಲಿ ಎರಡು ಮೂರು ಪದಗಳು ಇರುವಷ್ಟು. ಉದಾಹರಣೆ– "ಇದು ಚಂಡು." "ಇದು ಪಾಟಿ." "ಈಕೆ ನಮ್ಮ ತಾಯಿ." ಈ ಮಾತ ಮೊದಲು ಹುಡುಗರ ಬಾಯಿಂದ ಹೊರಡಿಸಲ್ಪಟ್ಟಿದ್ದರಿಂದ ಇದನ್ನು ಅವರು ಸಹಜವಾಗಿ ಓದಬಹುದಾಗಿದ್ದರೂ (ಬಾಯಿಪಾಠದಿಂದ–ಅ

ಮಾಸಿನಂದ) ಶಿಕ್ಷಕನು ಮೊದಲಿಗೆ ತಾನೇ ಪ್ರತಿಯೊಂದು ಪದವನ್ನು ಬೇರೆ ಬೇರೆ ತೋರಿಸುತ್ತ ಸ್ಪಷ್ಟವಾಗಿ ಓದಿ ತೋರಿಸಬೇಕು. ಆ ಮೇಲೆ ಎಲ್ಲ ಹುಡುಗರಿಂದಲೂ ಓದಿಸಬೇಕು. ಇಷ್ಟಾದ ಬಳಿಕ ಆ ವಾಕ್ಯವನ್ನು ಹುಡುಗರಿಂದ ಪಾಟಿಯ ಮೇಲೆ ಸ್ವಚ್ಛವಾಗಿಯೂ ವ್ಯವಸ್ಥಿತವಾಗಿಯೂ ಬರಿಸಿಕೊಳ್ಳಬೇಕು. ಇಲ್ಲಿ ಅಕ್ಷರಗಳ ಯಾವ ಅವಯವವನ್ನು ಮೊದಲಿಗೆ ತೆಗೆಯಬೇಕು ಎಂಬ ಸಂಗತಿಯು ಮಕ್ಕಳಿಗೆ ತಿಳಿಯದೆ ಅಕ್ರಮವಾಗುವ ಸಂಭವವುಂಟು. ಶಿಕ್ಷಕನು ಬರೆಯುವ ಕಾಲದಲ್ಲೇ ಹುಡುಗರೂ ನೋಡುತ್ತ ಬರೆಯುತ್ತ ಹೋದರೆ ಈ ತಪ್ಪು ಆಗುವದಿಲ್ಲ. ಪಾಟಿಗಳಿಗೆ ಅರ್ಧ ಇಂಚಿನ ಗೆರೆಗಳನ್ನು ತೆಗೆದುಕೊಟ್ಟರೆ ಬರೆಯುವ ಕೆಲಸವು ಉತ್ತಮವಾಗಿ ವರ್ಗದ ಅಕ್ಷರವೂ ಸುಧಾರಿಸುವದು. ಈ ವಾಕ್ಯದ ಒಂದೊಂದು ಅಕ್ಷರವನ್ನು ಮಣಿಗಳಿಂದ ನೆಲದಮೇಲೆ ರಚಿಸಬಹುದು. ಕೆಲವು ದಿವಸಗಳ ವರೆಗೆ ಬರೆ ಓದುವ ಕೆಲಸವನ್ನೇ ಹುಡುಗರಿಂದ ಮಾಡಿಸಬೇಕು. ಬರಿಸುವ ಕೆಲಸವನ್ನು ಹಿಂದಿನಿಂದ ಸಾಗಿಸುವದು ಲೇಸು, ಎಂದು ಕೆಲವರ ಮತವುಂಟು. ಆದರೆ ಹುಡುಗರ ಕೈಯು ಸ್ವಾಯುಗಳು ಈಗ ಕಾರ್ಯಕ್ಷಮವಾಗಿರುವದರಿಂದ ಓದಿಸುವ ಕೆಲಸವಾದಕೂಡಲೇ ಬರಿಸುವ ಕೆಲಸವನ್ನು ಅಂದರೆ ಅದೇ ಕಾಲಕ್ಕೆ ಸಾಗಿಸುವದರಿಂದ ತೊಂದರೆಯುಂಟಾಗುವದಿಲ್ಲೆಂದು ಅನುಭವವುಂಟು. ಮೇಲಾಗಿ ಯಾವದೊಂದು ವಿಷಯವು ಹಲವು ಇಂದ್ರಿಯಗಳ ಮಾರ್ಗದಿಂದ ಪರಿಚಿತವಾದಷ್ಟು ಹೆಚ್ಚು ಮನದಟ್ಟಾಗುತ್ತದೆಂಬ ತತ್ವವಾದರೂ ಇಲ್ಲಿ ಮನ್ನಿಸಲ್ಪಟ್ಟಂತಾಗುವದು.

ಅಭ್ಯಾಸವು ಯಾವದೊಂದು ಕಾರ್ಯದಲ್ಲಿ ಕೌಶಲ್ಯವನ್ನು ಹುಟ್ಟಿಸುವದಷ್ಟೇ? ಬಾಲಕರ ವರ್ಗದಲ್ಲಿ ಇದಕ್ಕೆ ಹೆಚ್ಚು ಮಹತ್ವವುಂಟು. ಆ ಪ್ರಕಾರ ಈ ಬರೆಯೋಣ-ಓದೋಣಗಳು ಪದಶಃ ಹಾಗು ವಾಕ್ಯಶಃ ಮೇಲಿಂದಮೇಲೆ ಆಗುತ್ತಿರಬೇಕು. ಇದರಿಂದ ಕಲಿತದ್ದು ಗಟ್ಟಿಯಾಗುವದು. ಕಲಿತ ಅಕ್ಷರಗಳು ಯಾವದೊಂದು ಸಂಗತಿಗೆ ಸಂಬಂಧಿಸಿದ ಮಾತಿನೊಳಗಿನವಾದ್ದರಿಂದ, ಮತ್ತು ಅವು ಮಕ್ಕಳಿಗೆ ಸ್ವಲ್ಪಕಾಲದಲ್ಲಿಯೇ ಸ್ವಾಭಾವಿಕವಾಗಿ ಮುಖತಃ ಪಾಠವಾಗುವದರಿಂದ ಮರೆತು ಹೋಗುವ ಸಂಭವವೂ ಇರುವದಿಲ್ಲ. ಎಲ್ಲ ಮೂಲಾಕ್ಷರ ಗುಣಿತಾಕ್ಷರಗಳನ್ನು ಕಲಿತ ಮೇಲೆ ಅವುಗಳ ಉಪಯೋಗವು ವ್ಯವಹಾರದಲ್ಲಿ ಆಗುವ

ಪ್ರಸಂಗ ಬಂದಾಗ ಬಾಲಕರ ಸ್ಮರಣಶಕ್ತಿಯ ಮೇಲೆ ವಿತಿವಿಾರಿ ಒಜ್ಜೆ ಬೀಳುತ್ತದೆ. ಇದರಿಂದ ಆ ಶಕ್ತಿಯು ಕ್ಷೀಣವಾಗಬಹುದು. ಆ ಪ್ರಸಂಗವು ಈ ಪದ್ಧತಿಯೊಳಗೆ ಬರುವದಿಲ್ಲ. ಅಕ್ಷರ ಚಿಹ್ನಗಳನ್ನು ಅವುಗಳ ಮೇಲಿಂದ ಪದಗಳನ್ನು ಬಾಲಕರಿಗೆ ಸ್ಮರಣದಲ್ಲಿ ಇರಿಸುವಂತೆ ಮಾಡುವದಕ್ಕೆ ಒಂದು ಸುಲಭ-ಉಪಾಯವುಂಟು. ಪಾಠದೊಳಗಿನ ಪದಗಳು ಅಕ್ಷರಗಳು ಅವುಗಳ ಅವಯವಾನುಕ್ರಮದಂತೆ ನೋಡಿ ಬರೆಯಲಿಕ್ಕೆ ಬಂದ ಬಳಿಕ—ಈ ಕೆಲಸವನ್ನು ಪ್ರತಿದಿವಸ ಕರೆ ಹಲಿಗೆಯ ಮೇಲಿಂದ ಒಂದೆರಡು ಸರ್ತಿ ಬರೆಯಿಸಿದರೆ ಸಾಧ್ಯವಾಗುತ್ತದೆ. ಮೊದಲು ಕಲಿಸಿದ ವಾಕ್ಯವನ್ನು ಕರೆ ಹಲಿಗೆಯ ಮೇಲೆ ಶಿಕ್ಷಕನೇ ಬರೆದು ಅದರೊಳಗಿನ ಒಂದೊಂದು ಪದವನ್ನು ಹುಡುಗರಿಗೆ ಚನ್ನಾಗಿ ನೋಡಲಿಕ್ಕೆ ಹೇಳಬೇಕು. ಆ ಮೇಲೆ ಯಾವ ಪದವನ್ನು ನೋಡಲಿಕ್ಕೆ ಹೇಳಿತ್ತೋ ಅದನ್ನೇ ತಾನು ಒರಿಸಿಬಿಟ್ಟು ಬಳಿಕ ಹುಡುಗರಿಂದ ಪಾಟಿಯ ಮೇಲೆ ಬರೆಯಿಸಬೇಕು. ಇವನ್ನು ಎಲ್ಲ ಹುಡುಗರೂ ಬರೆದಾರು. ಒಮ್ಮೊಮ್ಮೆ ತಪ್ಪಿದರೆ, ಅಂಥ ಹುಡುಗರಿಗೆ ಅದೇ ಪದವನ್ನು ತೋರಿಸಿ ಮತ್ತೊಮ್ಮೆ ಬರೆಯಿಸಬೇಕು. ಈ ಪ್ರಕಾರ ಬರೆಯಿಸುವ ಪದಗಳು ವಾಕ್ಯದೊಳಗಿನ ಕ್ರಮದಂತೆ ಬರೆಯಿಸಬೇಕೆಂಬ ನಿಯಮವಿಲ್ಲ. ಒಂದು ಮುಂದಾಗಿ ಬರೆಯಿಸಿದರೂ ನಡೆಯುವದು. ಒಂದೊಂದು ವೇಳೆ ನಾಲ್ಕಾರು ಅಕ್ಷರಗಳುಳ್ಳ ದೊಡ್ಡ ಪದವನ್ನು ಈ ರೀತಿಯಿಂದ ಬರೆಯಿಸುವಾಗ ವರ್ಗದೊಳಗಿನ ಬಹಳಷ್ಟು ಹುಡುಗರು ತಪ್ಪಬಹುದು. ಅಂಥ ಪ್ರಸಂಗದಲ್ಲಿ ಆ ಪದವನ್ನು ಕರೆ ಹಲಿಗೆಯ ಮೇಲೆ ಇಲ್ಲವೆ ಪಾಟಿಯ ಮೇಲೆ ಪುನಃ ಪುನಃ ಒಂದರ ಕೆಳಗೊಂದು ನಾಲ್ಕೈದು ಸಾರೆ ಬರೆಯಿಸಿ, ಆಮೇಲೆ ಸ್ವಚ್ಛವಾಗಿ ಅಳಿಸಿ ಮತ್ತೊಮ್ಮೆ ಬರೆಯಿಸಬೇಕು. ಅಂದರೆ ಹುಡುಗರು ತಪ್ಪಲಿಕ್ಕಿಲ್ಲ. ಮುಂದುಮುಂದಿನ ವಾಕ್ಯಗಳನ್ನೂ ಪಾಠಗಳನ್ನೂ ಕಲಿಸುತ್ತ ಹೋದಹಾಗೆ ಬರತಕ್ಕ ಅಕ್ಷರಗಳೂ ಶಬ್ದಗಳೂ ಒಂದೆ ಯಾವ ಪಾಠದಲ್ಲಿ ಅಥವಾ ವಾಕ್ಯದಲ್ಲಿ ಬಂದಿರುತ್ತವೆಂಬದನ್ನು ಬಾಲಕರ ಸ್ಮರಣೆಯಲ್ಲಿ ತಂದು ಕೊಡುತ್ತಿರಬೇಕು. ಕಡೆಕಡೆಗೆ ಈ ಕೆಲಸವನ್ನು ಹುಡುಗರೆ ಮಾಡಹತ್ತುತ್ತಾರೆ. ಇದರಿಂದಲೂ ಸ್ಮರಣಶಕ್ತಿಯೂ ತುಲನಾಸಾಮರ್ಥ್ಯವೂ ವಿಚಾರವೂ ಬೆಳೆಯುವವು. ಮೊದಲನೆಯ ಪಾಠವನ್ನು ಒಂದು ತಿಂಗಳವರೆಗೆ ನಡಿಸಬಹುದು. ಆದರೆ ಮುಂದಿನ ಪಾಠಗಳ

ಕಡೆಕಡೆಗೆ ತಿಂಗಳಿಗೆ ಮೂರು ನಾಲ್ಕು ಸಹ ಮುಗಿಯುವವು. ಮುಖ್ಯವಾಗಿ ಮೊದಲನೆಯ ಪಾಠವು ಎಷ್ಟು ವ್ಯವಸ್ಥಿತವೂ ಗಟ್ಟಿಯೂ ಆಗುವದೋ ಅದರ ಮೇಲೆ ಮುಂದಿನ ಪಾಠಗಳು ಅವಲಂಬಿಸಿರುವವು. ಪ್ರತಿ ದಿವಸ ಒಂದು ತಾಸು ಮೊದಲು ಕಲಿತ ಪಾಠಗಳೊಳಗಿನ ಅಥವಾ ಪಾಠದ ಭಾಗದೊಳಗಿನ ಶಬ್ದಗಳನ್ನು ಹುಡುಗರಿಂದ ಅಭ್ಯಾಸಕ್ಕಾಗಿ ಬರೆಯಿಸಬೇಕೆಂದು ಹಿಂದೆ ಹೇಳಿರುತ್ತದಷ್ಟೇ? ಅದರ ಕ್ರಮವು ಹೇಗಂದರೆ—ಆಪಾಠದ ಪಟಿಗಳನ್ನು ಹುಡುಗರ ಕಣ್ಣಮುಂದೆ ತೂಗಿಸಿ ಇಟ್ಟು, ಅವುಗಳೊಳಗಿನ ಶಬ್ದಗಳನ್ನು ಶಿಕ್ಷಕನು ಹೇಳುವ ಕ್ರಮದಂತೆ ಹುಡುಗರು ಹುಡುಕಿ ನೋಡುತ್ತ ಬರೆಯಬೇಕು. ಇದರಿಂದ ಹುಡುಗರ ಶೋಧಕದೃಷ್ಟಿಯು ತೀವ್ರವಾಗಿ ಚಟುವಟಿಕೆಯು ಬೆಳೆಯುವದು. ಮಾತ್ರ ವಿಷ್ಟೇ, ಮಕ್ಕಳಿಗೆ ಪಾಠದೊಳಗಿನ ಶಬ್ದಗಳನ್ನು ಹುಡುಕುವಾಗ ಕಣ್ಣಿಗೆ ತ್ರಾಸವಾಗದಿದ್ದ ಹಾಗೆ ಸವಿಾಪವಾಗಿ ಕುಳ್ಳಿರಿಸಬೇಕು. ಈ ಕೆಲಸ ನಡೆಯುವಾಗ್ಗೆ ಶಿಕ್ಷಕನು ಕ್ಲಾಸಿನಲ್ಲಿ ತಿರುಗುತ್ತ ಹುಡುಗರು ಬರೆದ ಪ್ರತಿಯೊಂದು ಶಬ್ದವನ್ನು ಆಗಾಗ್ಗೆ ನೋಡಿ ತಿದ್ದುತ್ತ ಹೋದರೆ ಉಭಯತರಿಗೂ ಒಳಿತಾಗುತ್ತದೆ. ಅಥವಾ ಬರೆಯುವದರಲ್ಲಿ ಹಿಂದುಳಿದ ಹುಡುಗರನ್ನೇ ಆರಿಸಿ, ಅವರನ್ನು ಎಲ್ಲರಿಗಿಂತ ಮುಂದೆ ಪಟಿಗಳಿಗೆ ಸವಿಾಪಿಸಿ ಕುಳ್ಳಿರಿಸಿ ಈ ತಾಸು ನಡಿಸಬಹುದು. ಇಂಥ ಹುಡುಗರ ಸಂಖ್ಯೆಯು ನೂವತ್ತು ನಾಲ್ವತ್ತು ಹುಡುಗರ ವರ್ಗದಲ್ಲಿ ಎಂಟು ಹತ್ತಕ್ಕಿಂತ ಹೆಚ್ಚು ಇರುವದಿಲ್ಲ. ನಿಜವಾಗಿ ಶಿಕ್ಷಕರ ಕೆಲಸವೆಂದರೆ ಇಂಥವರೊಡನೆಯೇ ಇರುತ್ತದೆ. ಈ ಪ್ರಕಾರ ಶಿಕ್ಷಣದೊರೆತ ಈ ಬಾಲಕರಿಗೆ ಸಹ ವಾರದಲ್ಲಿ ಒಮ್ಮೆ, ಕಲಿತ ಪಾಠಗಳನ್ನು ಮುಚ್ಚಿಸಿ ಅವುಗಳೊಳಗಿನ ಶಬ್ದಗಳ ವಿಷಯದಲ್ಲಿ ಪರೀಕ್ಷಿಸಬಹುದು. ಇದರಿಂದ ಹುಡುಗರ, ಹಾಗೂ ತನ್ನ ಕೆಲಸದ ಯೋಗ್ಯತೆಯು ಶಿಕ್ಷಕರಿಗೆ ತಿಳಿದು, ಹುಡುಗರಲ್ಲಿ ಹುರುಪೂ ಮೇಲಾಟವೂ ಕಾಯ್ದುಕೊಳ್ಳಲ್ಪಡುವವು. ಓದು ಬರಹದ ಶಿಕ್ಷಣವು ಈ ರೀತಿಯಿಂದ ಕೊಡಲ್ಪಡುವ ಕಾಲದಲ್ಲಿಯೇ ಈ ವಿದ್ಯಾರ್ಥಿಗಳಿಗೆ ಮೂಲಾಕ್ಷರಗಳನ್ನೂ ಗುಣಿತಾಕ್ಷರಗಳನ್ನೂ ಕ್ರಮವಾಗಿ ಕಲಿಸಲಿಕ್ಕೂ ಬರುತ್ತದೆ. ವಾರದಲ್ಲಿ ಒಂದು ತಾಸು ಶಿಕ್ಷಕನು ಎಲ್ಲ ಬಾಲಕರನ್ನು ಕರೆ ಹಲಿಗೆಯ ಮುಂದೆ ಕುಳ್ಳಿರಿಸಿ, ತಾನು ಅದರ ಮೇಲೆ ಅವನ್ನು ಕ್ರಮ

ವಾಗಿ ಬರೆದು, ಮಕ್ಕಳಿಂದ ಪಾಟಯ ಮೇಲೆ ತುಸು ತುಸು ತೆಗೆಯಿಸುತ್ತ ಹೋದರೆ, ಈ ಕ್ಲಾಸಿನ ಅಭ್ಯಾಸಕ್ರಮವು ಮುಗಿಯುವದರೊಳಗಾಗಿ ಅವರು ಎಲ್ಲ ಬಳ್ಳಿಗಳನ್ನು ಬರೆಯಲಿಕ್ಕೆ ಸಹ ಸಮರ್ಥರಾಗುವರು.

ಗಣಿತಶಾಸ್ತ್ರದ ಆರಂಭವಾದರೂ ಇದೇ ವರ್ಗದಲ್ಲಿ ಆಗುವದು. ಹಿಂದೆ ಎರಡನೆಯ ಮೂರನೆಯ ಮೆಟ್ಟುಗಳಲ್ಲಿ ಬಾಲಕರಿಗೆ ಬೇರೆಬೇರೆ ತರದ ವಸ್ತುಗಳನ್ನು ತೋರಿಸಿ, ಅವುಗಳ ಗುಣಧರ್ಮಗಳನ್ನು ಹೊರಡಿಸಿ ಅವರ ನಿರೀಕ್ಷಣ ಸಾಮರ್ಥ್ಯವನ್ನು ಬೆಳೆಯಿಸತಕ್ಕದ್ದೆಂದು ಹೇಳಿರುವದಷ್ಟೇ? ಅಗಳೀ ಸಜಾತೀಯ ವಸ್ತುಗಳ ಮೇಲೆ ಇರತಕ್ಕ ಸಂಖ್ಯೆಯೆಂಬ ಗುಣವನ್ನು ಸಹ ಅವರ ಲಕ್ಷ್ಯದಲ್ಲಿ ತಂದುಕೊಟ್ಟು, ಅವರಿಂದ ಅಂದಿನಿಂದಲೇ ಒಂದು, ಎರಡು, ಮೂರು ಮೊದಲಾಗಿ ಹತ್ತರವರೆಗೆ ಎಣಿಸಲಿಕ್ಕೆ ಪ್ರಾರಂಭ ಮಾಡಿರುತ್ತದೆ. ಇಷ್ಟೇ ಅಲ್ಲ, ಅವರಿಗೆ ಸಣ್ಣ ಸಣ್ಣ ಬೀರೀಜು ವಜಾಬಾಕಿಗಳು ಸಹ ಮಾಡಲಿಕ್ಕೆ ಬರುವದು. ಆದರೆ ಅವರ ಈ ಕೆಲಸವು ಇನ್ನೂ ಸ್ವಚ್ಛವಾಗಿಲ್ಲ. ಇದನ್ನು ಈಗ ಅಂಕೆಗಳ ಸಂಖ್ಯಾಚಿಹ್ನಗಳ ಜ್ಞಾನಮಾಡಿ ಕೊಟ್ಟು ಸಾಧಿಸಿಕೊಳ್ಳಬೇಕಾಗಿದೆ. ಮೊದಲು ಮೂಲಾಕ್ಷರ ಗುಣಿತಾಕ್ಷರಗಳನ್ನು ಕಲಿಸಿದ ಬಳಿಕ ಅಂಕೆಗಳನ್ನು ಹೇಳಿಕೊಡುವ ರೂಢಿಯಿತ್ತು. ಆದರೆ ಹತ್ತರವರೆಗಿನ ಸಂಖ್ಯಾಜ್ಞಾನವು ಅವರಿಗೆ ಮೊದಲಿಗೇ ಆಗಿರುವದರಿಂದಲೂ, ಅವರ ಕೈಯು ಸಂಖ್ಯಾಚಿಹ್ನಗಳನ್ನು ತೆಗೆಯಲಿಕ್ಕೆ ಸಮರ್ಥವಾಗಿರುವದರಿಂದಲೂ, ಈಗ ಅಕ್ಷರಗಳನ್ನು ಕಲಿಸುವ ಕಾಲದಲ್ಲಿಯೇ ಅಂಕಿಗಳನ್ನು ಕಲಿಸಲಿಕ್ಕೆ ಸಹ ಅಡ್ಡಿ ಇಲ್ಲ. ಗೋಲಿ, ಚಂಡು, ಪುಸ್ತಕ, ಪಾಟಿ, ಗಜಗ, ಎಲೆ, ಹುಣಸೆ ಬೀಜ, ಬೇರೆಬೇರೆ ಕಾಳುಗಳು, ಹೂ, ಕಡ್ಡಿಗಳು, ಟೊಪ್ಪಿಗೆ ಮೊದಲಾದ ಬಹಳಷ್ಟು ವಸ್ತುಗಳನ್ನು ಸಂಪಾದಿಸಿ, ಮೊದಲು ಹಲವು ಜಾತಿಯ ಒಂದೊಂದೇ ವಸ್ತುವನ್ನು ಹುಡುಗರ ಮುಂದೆ ಇಟ್ಟು, ಇವು ಎಷ್ಟೆಷ್ಟು ಇರುತ್ತವೆಂದು ಕೇಳಲು, ಒಂದೊಂದು ಇರುತ್ತವೆಂಬ ಉತ್ತರವು ಅವರಿಂದ ಸಹಜವಾಗಿ ಬರುವದು. ಅಂದರೆ ಗೋಲಿ ಒಂದು, ಚಂಡು ಒಂದು ಪುಸ್ತಕ, ಒಂದು ಪಾಟಿ, ಒಂದು ಗಜಗ, ಒಂದು ಎಲೆ ಒಂದು ಇತ್ಯಾದಿ. ಈ ಪ್ರಕಾರ ಹಲವು ಜಡವೆಗಳನ್ನು ತೆಗದುಕೊಳ್ಳುವದರಿಂದ ಏಕತ್ವ-ದ್ವಿತ್ವಾದಿಗಳು ಯಾವದೊಂದೇ ಜಡವೆಯ ಮೇಲೆ

ಇರದೆ ಜಗತ್ತಿನೊಳಗಿರುವ ಸಕಲ ವಸ್ತುಗಳ ಮೇಲೆಯೂ ಇರುತ್ತವೆಂಬ ಕಲ್ಪನೆಯು ಹುಡುಗರ ಮನಸ್ಸಿಗೆ ಹೊಳೆಯುವದು. ಈ ತತ್ವವನ್ನು ಅವರಿಗೆ ಈಗಲೇ ಒಡೆದು ಹೇಳುವ ಗರಜು ಇಲ್ಲ. ಅದನ್ನು ಮುಂದಿನ ಇಯತ್ತೆಗಳಲ್ಲಿ ತಿಳಿಯಬಹುದು. ಸಂಖ್ಯೆಗಳ ಸಾಮಾನ್ಯ ಕಲ್ಪನೆಯಷ್ಟೇ ಬಂದರೆ ಈಗ ಸಾಕು. ಇಷ್ಟಾದ ಬಳಿಕ ಈ "ಒಂದು" ಎಂಬದು "೧" ಹೀಗೆ ಎಂದು ಅದರ ಚಿಹ್ನವನ್ನು ಬರೆದು ತೋರಿಸಬೇಕು. ಇದನ್ನು ಕರಿಹಲಿಗೆಯ ಮೇಲೆ ಬಾಲಕರಿಗೆ ಮುಂದೆ ಶಿಕ್ಷಕನು ಬರೆಯುತ್ತಿರಲು, ಅವರೂ ತಮ್ಮ ಪಾಟಿಯ ಮೇಲೆ ಬರೆಯಬೇಕೆಂಬದನ್ನು ಇಲ್ಲಿ ಬೇರೆಯಾಗಿ ಹೇಳಬೇಕಾಗಿಲ್ಲ. ಅವಶ್ಯವಿದ್ದರೆ ಕಾಳುಗಳನ್ನಾಗಲಿ ಮಣ್ಣುಗಳನ್ನಾಗಲಿ ಮಕ್ಕಳಿಗೆ ಕೊಟ್ಟು ಅವುಗಳಿಂದ ಒಂದರ "೧" ಆಕಾರವನ್ನು ನೆಲದ ಮೇಲೆ ಮಾಡಿಸಬಹುದು. ಆ ಮೇಲೆ ಮೊದಲು ತೆಗೆದಿಟ್ಟ ಗೋಲಿಮೊ ನಲಾದ ಒಂದೊಂದು ಪಡವೆಗಳಲ್ಲಿ ಆ ಜಾತಿಯ ಮತ್ತೊಂದನ್ನು ಕೂಡಿಸಿ ಆಗುವ ವಸ್ತುಗಳ ಮೇಲೆ ಇರುವ "ಎರಡು" ಈ ಸಂಖ್ಯೆಯನ್ನು "೨" ಹೀಗೆ ಬರೆಯಬೇಕೆಂದು ಹೇಳಿ ಪಾಟಿಯ ಮೇಲೆ ಬರೆಯಿಸಬೇಕು. ಪಾಗು ಕಾಳುಗಳಿಂದ ಅದರ ಆಕಾರವನ್ನು ನೆಲದ ಮೇಲೆ ರಚಿಸಬೇಕು. ಈ ಪ್ರಕಾರ ಕ್ರಮವಾಗಿ ಒಂದೊಂದು ವಸ್ತುವನ್ನು ಕೂಡಿಸಲು ಆಗುವ ನೂರು, ನಾಲ್ಕು ಮೊದಲಾದ ಸಂಖ್ಯೆಗಳನ್ನು ಲಕ್ಷ್ಯದಲ್ಲಿ ತಂದು ಕೊಟ್ಟು ಅವನ್ನು ಬರೆಯಿಸಬೇಕು. ಹತ್ತು ವಸ್ತುಗಳಾದ ಬಳಿಕ ಪ್ರತಿಹತ್ತು ವಸ್ತುಗಳ ಗಂಟುಗಳನ್ನು ಕಟ್ಟಿ, ಒಂಬತ್ತರ ವರೆಗಿನ ಸಂಖ್ಯೆಗಳಿಗೆ ಮಾತ್ರ ಬೇರೆ ಬೇರೆ ಗುರುತುಗಳು—ಅಂಕೆಗಳಿರುತ್ತವೆಂತಲೂ, ಹತ್ತಕ್ಕೆ ಬೇರೊಂದು ಗುರುತು ಇಲ್ಲವೆಂತಲೂ ಹೇಳಬೇಕು. ಹತ್ತು ಮೊದಲಾದ ಅಂಕೆಗಳನ್ನು ಇದರ ಮುಂದಿನ ಕೃತಿಯಿಂದ ಸುಲಭವಾಗಿ ತಿಳಿಸಬಹುದು.



ಎಡಬದಿಯಲ್ಲಿ ಇರುವ ಮನೆಗಳಲ್ಲಿ ಒಂದು ಸಾಲು ದೊಡ್ಡವರದು. ಮತ್ತೊಂದು ಬಡವರದು. ದೊಡ್ಡವರ ಮನೆಗಳು ನಮೂನೆಯಲ್ಲಿ ತೋರಿಸಿದಂತೆ ಒಂದು ವಿಶೇಷಪ್ರಕಾರದವಿರುವವು. ಬಡವರ ಮನೆಯೊಳಗೆ ಮೇಲಿಂದ ಕ್ರಮವಾಗಿ ಒಂದು, ಎರಡು, ಮೂರು ಇತ್ಯಾದಿ ಕಾಳು ಮೊದಲಾದ ಸಜಾತೀಯ ವಸ್ತುಗಳನ್ನು ಇರಿಸುತ್ತ ಹೋಗಲು ಕಡೆಯ ಮನೆಯಲ್ಲಿ ಹತ್ತು ವಸ್ತುಗಳು ಆಗುವವು. ಪರಂತು ಈ ಹತ್ತು ವಸ್ತುಗಳಿಂದರೆ ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಿನವು ಇರುವವು. ಇವುಗಳನ್ನು ಹೀಗೆ ಉಳಿದವುಗಳಂತೆ ಬಿಡಿಯಾಗಿ ಇಡುವದು ತಕ್ಕದ್ದಲ್ಲ. ಇವುಗಳಿಂದ ಒಂದು ಗಂಟನ್ನು ಕಟ್ಟುವಾ. ಎಂದು ಅವುಗಳದೊಂದು ಗಂಟು ಕಟ್ಟಿ ಇಡಲಿಕ್ಕೆ ಹೇಳಬೇಕು. ಹುಡುಗರು ಆಗಂಟನ್ನು ಕಾಳುಗಳಿದ್ದ ಬಡವರ ಮನೆಯಲ್ಲೇ ಇಡುವರು ಆಗ ಈ ಗಂಟು ಎಂಬದು ಒಂದು ದೊಡ್ಡ ವಸ್ತುದೊಡ್ಡದು. ಇದ್ದದರಿಂದ ಅದನ್ನು ಬಡವರ ಮನೆಯಲ್ಲಿ ಇಡತಕ್ಕದ್ದಲ್ಲ. ಅದನ್ನು ದೊಡ್ಡವರ ಮನೆಯಲ್ಲೇ ಇಡಬೇಕು. ಎಂದು ಅದಕ್ಕೆ ಹೊಂದಿಯೇ ಇದ್ದ ಎಡಬದಿಯ ಮನೆಯಲ್ಲಿ ಇಡಿಸಬೇಕು. ಈ ಪ್ರಕಾರ ಗಂಟು, ಗಂಟನ ಅಂದರೆ ದೊಡ್ಡವರ ಮನೆಯಲ್ಲಿ ಇದ್ದ ಬಳಿಕ ಹತ್ತು ಕಾಳುಗಳಿದ್ದ ಬಡವರ ಮನೆಯು ತೆರವು ಇದ್ದ ಸಂಗತಿಯನ್ನು ಬಾಲಕರ ಮನಸಿನಲ್ಲಿ ತಂದು ಕೊಡಬೇಕು. ಆ ಮೇಲೆ ಇದೇ ಪ್ರಕಾರ ಮತ್ತೂ ಎರಡು ಇಂಥದೊಡ್ಡವರ ಬಡವರ ಮನೆಗಳ ಸಾಲುಗಳನ್ನು



ಈ ಮೊದಲಿನ ಸಾಲುಗಳಿಗೇ ಹೊಂದಿಸಿ (ಎಡಗಡೆಗೆ ತೋರಿಸಿದಂತೆ) ರಚಿಸಿ, ಅವುಗಳಲ್ಲಿಯು ಬಡವರ ಮನೆಗಳೊಳಗೆ ೧, ೨, ೩ ಮೊದಲಾದ ಒಂಬತ್ತರ ವರೆಗಿನ ಅಂಕಿಗಳನ್ನು ಬರೆಸಿ, ಹತ್ತರ ಮನೆಯಲ್ಲಿ ಇಟ್ಟ ಕಾಳುಗಳ ಗಂಟನ್ನು ವ್ಯಾಡಿ ಅದನ್ನು ದೊಡ್ಡವರ ಮನೆಯಲ್ಲಿ ಇಟ್ಟದ್ದರಿಂದ, ಆದೇ ಪ್ರಕಾರ ಆ ಗಂಟಿನ ಮೇಲೆ ಇರುವ "ಒಂದು" ಈ ಸಂಖ್ಯೆಯನ್ನಾದರೂ ಈ ಎಡ

ನೆಯ ಸಾಲಿನ ದೊಡ್ಡವರ ಮನೆಯಲ್ಲಿ "೧" ಈ ರೀತಿಯಾಗಿ ಬರೆದು ಇರಿಸತಕ್ಕದ್ದು, ಎಂದು ಹೇಳಬೇಕು. ಹಾಗು ಮೊದಲನೆಯ ಸಾಲಿನೊಳಗಿನ ಬಡವರ ಕಡೆಯ ಮನೆಯಲ್ಲಿ ಕಾಳುಗಳು ಇಲ್ಲದ್ದರಿಂದ ಇದನ್ನು ತೋರಿಸಿ, ಈ ಎರಡನೆಯ ಬಡವರ ಮನೆಯಲ್ಲಿ ಕೂಡ "ಏನೂ ಇಲ್ಲ" ಎಂಬ ಅರ್ಥವನ್ನು ತೋರಿಸುವ ಶೂನ್ಯ '೦' ದ ಗುರುತನ್ನು ಬರೆಯಬೇಕೆಂದು ಹೇಳಬೇಕು. ಅದರಿಂದ ಹತ್ತು ಎಂಬ ಸಂಖ್ಯೆಯು ಗುರುತಾದ '೧೦' ಇದರ ತಾತ್ಪರ್ಯವು ಹುಡುಗರಿಗೆ ಚನ್ನಾಗಿ ತಿಳಿಯುವದು. ಒಂದು ನೇಳೆ ಮೊದಲನೆಯ ಸಾರೆ ಈ ಮಾತು ಅವರ ಲಕ್ಷ್ಯದಲ್ಲಿ ಬಾರದಿದ್ದರೂ ನಾಲ್ಕಾರುಸಾರಿ ಈ ಕೆಲಸ ಅವರಿಂದಲೇ ಮಾಡಿಸಿದರೆ ಈ ತತ್ವವು ಅವರ ಮನಸ್ಸಿಗೆ ನಡದೆ ಇರಲಿಕ್ಕಿಲ್ಲ. ಇಪ್ಪತ್ತು ಮೂವತ್ತು ಮೊದಲಾದ ಸ್ಥಳಗಳಲ್ಲಿಯೂ ಹತ್ತು ವಸ್ತುಗಳಾದ ಕೂಡಲೆ ಗಂಟು ಕಟ್ಟಲ್ಪಡುತ್ತವೆಂಬ ಸಂಗತಿಯನ್ನಾದರೂ ಹೀಗೇ ಹೇಳುವದು. ಕಡೆಕಡೆಗೆ ಹುಡುಗರಿಗೆ ಹೇಳಿಕೊಡುವ ಅವಶ್ಯಕತೆಯೇ ಉಳಿಯುವದಿಲ್ಲ. ಶತಮಿನ ಸ್ಥಾನದಲ್ಲಿ ಮಾತ್ರ ಹುಡುಗರಿಗೆ ಶಿಕ್ಷಕರ ಗರಜು ಬೀಳುವದು ಅದರೂ ಹತ್ತು ವಸ್ತುಗಳಿಂದ ಒಂದು ಗಂಟು ಕಟ್ಟಲ್ಪಡುವಂತೆ ಅಂಥ ಹತ್ತು ಗಂಟುಗಳಾದ ಕೂಡಲೆ ಅವುಗಳಿಂದ ಒಂದು ದೊಡ್ಡ ಗಂಟು ತಯಾರಿಸುವದು, ತಕ್ಕದ್ದೆಂತಲೂ ಅವರ ಮನೆಯಾದರೂ ಉಳಿದ ಎರಡು ಮನೆಗಳಿಂತ ಬಹಳ ದೊಡ್ಡದಿರಬೇಕೆಂತಲೂ ಅಂದರೆ ಬಡವರ ದೊಡ್ಡವರ ಮನೆಗಳಿಗಿಂತ ದೊಡ್ಡದಾದ ಬೇರೊಂದು ಮನೆ ಅವುಗಳ ಎಡಗಡಿಗೆ ಹತ್ತಿಯೇ ಇರಬೇಕೆಂತಲೂ ತೆರವಾಗಿರುವ ಮನೆಗಳಲ್ಲಿ ಮೊದಲಿನಂತೆ ಏನೂ ಇಲ್ಲವೆಂದು ತೋರಿಸುವ ಶೂನ್ಯದ ಗುರುತುಗಳು ಇರಬೇಕೆಂತಲೂ, ತಿಳಿಸಿದರೆ ನೂರು ಅಂದರೆ ಶತಮಿನ ಕಲ್ಪನೆಯಾವರೂ ಮಕ್ಕಳಿಗೆ ಸುಲಭವಾಗಿ ಬರುವದು.

ಹನ್ನೊಂದು, ಇಪ್ಪತ್ತೊಂದು, ಮೂವತ್ತೊಂದು ಮೊದಲಾದ ಸಂಖ್ಯೆಗಳ ಕಲ್ಪನೆಯು ಅಂಕೆಗಳ ಕಲ್ಪನೆಯು ಬಾಲಕರಿಗೆ ಸರಿಯಾಗಿ ಬರುವಂತೆ ಮಾಡಬೇಕಾದರೆ ಒಂದು ಉಪಾಯವುಂಟು. ಒಂದು ಸಂಖ್ಯೆಯಲ್ಲಿ "ಒಂದ"ನ್ನು ಕೂಡಿಸಲು ಅದರ ಮುಂದಿನ ಸಂಖ್ಯೆಯಾಗುವದೆಂಬ ಜ್ಞಾನವು ಈ ಮೊದಲೇ ಹುಡುಗರಿಗೆ ಆಗಿದೆಯಷ್ಟೇ? ಆ ಪ್ರಕಾರ ಹತ್ತು

ಈ ಸಂಖ್ಯೆಯ ಹಾಗು ಅಂಕೆಯ ಜ್ಞಾನವಾದ ಕೂಡಲೆ ಹತ್ತು ವಸ್ತುಗಳ ಗಂಟಿನ ಕೂಡ ಅದೇ ಜಾತಿಯ ಮತ್ತೊಂದು ವಸ್ತುವನ್ನು ಇರಿಸಿ ಇಲ್ಲಿ ಒಟ್ಟಿಗೆ ಎಷ್ಟು ವಸ್ತುಗಳಿರುತ್ತವೆಂದು ಕೇಳಲು, ಹುಡುಗರಿಂದ ವಾಡಿಕೆಯಾಗಿ "ಹನ್ನೊಂದು" ಎಂದು ಉತ್ತರ ಬರಬಹುದು. ಆದರೆ ಈ ಉತ್ತರ ಬಾರದೆಯಿದ್ದ ಹುಡುಗರೂ ಕ್ಲಾಸಿನಲ್ಲಿ ಇರಬಹುದು. ಆದರೂ ಆ ಹುಡುಗರಿಗೆ ಗಂಟಿನ ಹತ್ತು ವಸ್ತುಗಳನ್ನೂ, ಬಿಡಿಯಾದ ಒಂದು ವಸ್ತುವನ್ನೂ ಲಕ್ಷ್ಯದಲ್ಲಿ ತಂದು ಕೊಟ್ಟು, ಅವರಿಂದ "ಹತ್ತು, ಒಂದು" ವಸ್ತುಗಳಿರುತ್ತವೆಂದು ಉತ್ತರ ತೆಗದುಕೊಳ್ಳಲಿಕ್ಕೆ ಪ್ರಯಾಸವಾಗಲಿಕ್ಕಿಲ್ಲ. ಈ ರೀತಿಯಾಗಿ "ಹತ್ತು ಎರಡು, ಹತ್ತು ಮೂರು, ಎರಡು ಹತ್ತು, ಎರಡು ಹತ್ತು ಒಂದು" ಹೀಗೆ ಓದಿಸುವ ರೂಢಿಯನ್ನು ಮೊದಲಿಗೇ ಇಟ್ಟರೆ ಸಂಖ್ಯೆಗಳ ಅಂಕೆಗಳ ಅವಯವಗಳೂ ಕೂಡ ಬಾಲಕರ ಲಕ್ಷ್ಯದಲ್ಲಿ ಬರುವವು. ಈ ಅವಯವೋಚ್ಚಾರಗಳಿಂದಲೇ ಹನ್ನೊಂದು, ಹನ್ನೆರಡು, ಇಪ್ಪತ್ತು, ಇಪ್ಪತ್ತೊಂದು ಮೊದಲಾದ ಸಂಖ್ಯೆಗಳ ಉಚ್ಚಾರವು ಮಾಡಲ್ಪಡುತ್ತದೆಂಬದನ್ನಾದರೂ ಅವರು ಕಡೆಕಡೆಗೆ ತಾವಾಗಿಯೇ ತಿಳಿದುಕೊಳ್ಳುವರು.

ಮಗ್ಗಿಗಳಿಂದರೆ ಬೀರೀಜುಗಳು, ಇಲ್ಲವೆ ಗುಣಾಕಾರಗಳು ಅಥವಾ ಒಂದು ವಿಶೇಷ ಪ್ರಕಾರದಿಂದ ರಚಿಸಿದ ಬಾಯಿಲೆಕ್ಕಗಳು ಇವನ್ನು ವ್ಯವಹಾರಕ್ಕೆ ಅನುಸರಿಸಿ ಕಲಿಸಲು ಎಷ್ಟು ಉಪಯೋಗವಾಗುವದೋ ಅಷ್ಟು ಬೇರೆ ರೀತಿಯಿಂದ ಕಲಿಸಿದರೆ ಆಗಲಿಕ್ಕಿಲ್ಲವೆಂಬದು ಸ್ವಾಭಾವಿಕವು. ಯಾವದೊಂದು ಸಂಖ್ಯೆಯನ್ನು ಅಥವಾ ಕೆಲವೊಂದು ವಸ್ತುವನ್ನು ಇಲ್ಲವೆ ವಸ್ತುಸಮೂಹವನ್ನು ಒಂದುಸಾರೆ, ಎರಡುಸಾರೆ, ಮೂರುಸಾರೆ ಹೀಗೆ ತಕ್ಕೊಂಡರೆ ಆಗುವ ಬೀರೀಜೇ ಈ ಮಗ್ಗಿಗಳಿದ್ದದರಿಂದ ಈ ಕ್ರಮದಿಂದ ಕಲಿಸುವದೇ ಮಗ್ಗಿಗಳ ಜ್ಞಾನವಾಗಲಿಕ್ಕೆ ಸುಲಭ ಉಪಾಯವು ಎಂದು ಕೆಲವರ ಮತವುಂಟು. ಆದರೆ "ಸಾರೆ" ಈ ಶಬ್ದದ ಅರ್ಥವನ್ನು ತಿಳಿದುಕೊಳ್ಳುವಷ್ಟು ಶಕ್ತಿಯೇ ಆ ಬಾಲಕರಲ್ಲಿ ಇರುವದಿಲ್ಲ. ಇದರಿಂದ ಶಿಕ್ಷಣಕ್ಕೆ ಯಾಂತ್ರಿಕತ್ವವು ಪ್ರಾಪ್ತವಾಗುವದಲ್ಲದೆ ವಿಷಯವೂ ನೀರಸವಾಗುವದು. ಆದರೆ ಇದಕ್ಕೆ ಮತ್ತೊಂದು ಉಪಾಯವುಂಟು. ಎಲ್ಲ ಹುಡುಗರ ಕಡೆಗೆ ಕೆಲಕೆಲವು ಕಾಳು ಅಥವಾ ಬೇರೆ ವಸ್ತುಗಳನ್ನು ಕೊಟ್ಟು ವ್ಯವಸ್ಥಿತವಾಗಿ ಕುಳ್ಳಿರಿಸಿ, ಶಿಕ್ಷಕನು ತಾನೂ ಅಂಥ ಕೆಲವು ವಸ್ತುಗಳನ್ನು ತಕ್ಕೊಂಡು

ನಡುವೆ, ಎಲ್ಲರ ಎದುರಿಗೆ ಕುಳಿತುಕೊಳ್ಳಬೇಕು. ಮತ್ತು ಮುಂದೆ ಹೇಳಿದ ಸಣ್ಣ ಸಣ್ಣ ಉದಾಹರಣೆಗಳನ್ನು ಹೇಳಬೇಕು. ನನ್ನ ಹತ್ತರ ಕೆಲವು ಚಂಡುಗಳುಂಟು ಅವುಗಳಲ್ಲಿ ರಾಮನಿಗೆ ಎರಡು ದೇವಣ್ಣನಿಗೆ ಎರಡು ಕೊಡಲು ಅವರ ಹತ್ತರ ಒಟ್ಟು ಎಷ್ಟು ಚಂಡುಗಳಾದವು? ಈ ಪ್ರಕಾರ ಕೇಳುತ್ತಿರಲು, ಎಲ್ಲ ವಿದ್ಯಾರ್ಥಿಗಳು ತಮ್ಮ ಮುಂದಿನ ವಸ್ತುಗಳನ್ನು ರಾಮನ ಬಗ್ಗೆ ಎರಡು, ದೇವಣ್ಣನ ಬಗ್ಗೆ ಎರಡು ಬೇರೆಬೇರೆಯಾಗಿ ಇರಿಸಿ ಆ ಮೇಲೆ ಎರಡೂ ಕೂಡಿಸುವರು, ಬಳಿಕ ಎಲ್ಲ ವಸ್ತುಗಳನ್ನು ಎಣಿಸಿ ಒಟ್ಟಿಗೆ ನಾಲ್ಕು ಚಂಡುಗಳಾಗುವವೆಂದು ಹೇಳುವರು. ಈ ನಾಲ್ಕನ್ನು ಅವರಿಗೆ ಪಾಟಿಯ ಮೇಲೆ ಬರಿಸಲಿಕ್ಕೆ ಹೇಳಿ ತಾನೂ ಕರಿಹಲಿಗೆಯ ಮೇಲೆ ಬರೆದು ಇಡಬೇಕು. ಆ ಬಳಿಕ ಬೇರೆ ಮೂರು ಹುಡುಗರ ಹೆಸರುಗಳನ್ನು ಹೇಳಿ ಅವರಿಗೂ ಎರಡೆರಡು ಚಂಡುಗಳಂತೆ ಕೊಡಲು ಎಷ್ಟಾಗುತ್ತವೆಂಬದನ್ನು ಕೇಳಬೇಕು. ಬಾಲಕರಾದರೂ ತಮ್ಮ ವಸ್ತುಗಳ ಸಹಾಯದಿಂದ "ಆರು" ಆಗುತ್ತವೆಂದು ಹೇಳುವರು. ಇದನ್ನೂ ಬರೆದಿಡಬೇಕು. ಈ ಪ್ರಕಾರ ಹತ್ತು ಹುಡುಗರವರೆಗೂ ಚಂಡುಗಳನ್ನು ಕೊಡುತ್ತ ಹೋಗಿ ಎಷ್ಟೆಷ್ಟು ಆಗುತ್ತವೆಂಬದನ್ನು ಪ್ರತ್ಯಕ್ಷ ವಸ್ತುಗಳಿಂದ ಎಣಿಸಿ ಮನಗಾಣಿಸಿ ಬರೆಯಿಸಲು ಸ್ವಾಭಾವಿಕವಾಗಿ ಎರಡರ ಮಗ್ಗಿಯು ಸಿದ್ಧವಾಗುವದು. ಬಳಿಕ "ಈ ಲೆಖ್ಖಗಳನ್ನು ಪಾಠ ಮಾಡಲಿಕ್ಕೆ ಬರುವಂತೆ ಬರೆಯಲಿಕ್ಕೆ ಕಲಿಯುವಾ" ಎಂದು ಶಿಕ್ಷಕನು ಕರಿಹಲಿಗೆಯ ಮೇಲೆ ೨×೧ = ೨, ೨×೨ = ೪, ೨×೩ = ೬.....ಇತ್ಯಾದಿ ಬರೆದು ತೋರಿಸಿ ಹುಡುಗರಿಂದಲೂ ಬರೆಯಿಸಬೇಕು. ಮತ್ತು ಪಾಠ ಮಾಡಲಿಕ್ಕೆ ಶುದ್ಧವಾಗಿಯೂ, ಸ್ಪಷ್ಟವಾಗಿಯೂ, ಪರಿಣಾಮಕಾರಕವಾಗಿಯೂ ಹೇಳಿಕೊಡಬೇಕು. ಪರಂತು ಮಗ್ಗಿಗಳು ಮರೆತು ಹೋಗುವ ಸಂಭವವು ವಿಶೇಷವಿರುವದರಿಂದ ಅವುಗಳ ಉಜಳಣೆಯನ್ನು ಬಾಯಿಲೆಕ್ಕಗಳ ರೂಪದಿಂದಲೂ, ಪುರೋಚಿಗಳ ರೂಪದಿಂದಲೂ ಮೇಲಿಂದ ಮೇಲೆ ರೂಢಿಯಲ್ಲಿಡುವದು ಅವಶ್ಯವುಂಟು. ಅಥವಾ ಪ್ರಾಚೀನ ಕಾಲದ ನಮ್ಮ ಆರ್ಯ ಸಾಂಪ್ರದಾಯದಂತೆ ಅಂದರೆ ಮಂತ್ರಗಳನ್ನು ಪಾಠಮಾಡುವ ಪದ್ಧತಿಯಂತೆ ನಿತ್ಯವೂ ಒಂದು ವೇಳೆಯನ್ನು ಗೊತ್ತುಮಾಡಿ, ಮಗ್ಗಿಗಳೊಳಗಿನ ಪ್ರತಿಯೊಂದು ಗುಣಾಕಾರವನ್ನು ಕೆಲವು ನಿಯಮಿತವಾದ ಗತಿಗಳವರೆಗೆ "ರೂ" ಹಾಕುವ ಪರಿಪಾಠವಿಟ್ಟರೆ ಕಲಿತ ಮಗ್ಗಿಗಳ

ಎಂದೂ ಮರೆಯಲಿಕ್ಕಿಲ್ಲ. ಈ ಪ್ರಕಾರ ಮೂರರ ನಾಲ್ಕರ, ಮಗ್ಗಿಗಳು ಮುಗಿಯಲು ಮುಂದಿನ ಮಗ್ಗಿಗಳನ್ನು ಮಕ್ಕಳು ತಾವಾಗಿಯೇ ಕಟ್ಟುವರು. ಈ ರೀತಿಯಿಂದ ಕಲಿಸಲು ವರ್ಗದಲ್ಲಿ ಉತ್ಸಾಹವೂ ಚಟುವಟಿಕೆಯೂ ಕಾಯಲ್ಪಟ್ಟು, ಶಿಕ್ಷಣವು ಸುಖಹಾರ್ಯವಾಗುವದು. ಆಮೇಲೆ ಬೇಕಾದರೆ ಸಾರಿ, ಪಟ್ಟು ಈ ಶಬ್ದಗಳ ಜ್ಞಾನವನ್ನು ಮಾಡಿಕೊಡುವದು ಸುಲಭವಾಗುವದು. ಪ್ರತಿಯೊಬ್ಬರಿಗೆ ಒಂದೊಂದು ವಸ್ತುವಿನಂತೆ ಒಬ್ಬನಿಗೆ, ಇಬ್ಬರಿಗೆ, ಮೂವರಿಗೆ ಹೀಗೆ ಹತ್ತು ಜನರಿಗೆ ಎಷ್ಟೆಷ್ಟು ವಸ್ತುಗಳು ಕೊಡಬೇಕಾಗುವವು ಎಂಬದನ್ನು ಕ್ರಮವಾಗಿ ಹೇಳುತ್ತ ಒಂದರ ಮಗ್ಗಿಯನ್ನು ಕಲಿಸುವ ಕೆಲಸವು ಮೊದಲನೆಯದಾಗಿದ್ದರೂ ಮಗ್ಗಿಗಳ ತತ್ವವನ್ನು ಕಲಿಸುವ ಮಾದರಿಯ ಕಾಲದಲ್ಲಿ ಮಾಡುವ ಸ್ಪಷ್ಟೀಕರಣವು ಎರಡನೆಯ ಮಗ್ಗಿಯಲ್ಲಿಯೇ ವಿಶೇಷವಾಗಿ ಒಡೆದು ತೋರಿಸಲಿಕ್ಕೆ ಬರುವದರಿಂದ ಇಲ್ಲಿ ಅದನ್ನೇ ಮೊದಲಿಗೆ ಇಟ್ಟಿರುತ್ತದೆ. ಈ ಕಾಲಕ್ಕೆ ಉದಾಹರಣೆ ತೆಗದುಕೊಳ್ಳುವಾಗ ಉಂಡೆ, ಹಣ್ಣು, ಚಕ್ಕಲಿ ಮೊದಲಾದ ಬಾಲಕರ ತಿಂಬುಂಬುವ ಪದಾರ್ಥಗಳೂ, ಗೋಲಿ, ಚಂಡು, ಬೊಗರೆ ಮೊದಲಾದ ಆಟದ ಸಾಮಾನುಗಳೂ, ಟೊಪ್ಪಿಗೆ, ಅಂಗಿ, ದೋತರ ಮುಂತಾದ ಪ್ರಾವರಣಗಳೂ ಉಪಯೋಗಿಸಲ್ಪಟ್ಟರೆ ವಿಷಯವು ರಮ್ಯವಾಗುವದು. ಇದು ಶಿಕ್ಷಕನ ಜಾಣ್ಮೆಯ ಮಾತಾಗಿರುತ್ತದೆ.

ಪತ್ರವ್ಯವಹಾರ.

ವಿಜ್ಞಾಪನೆ.

ಕನ್ನಡ ಬಾಂಧವರೇ,

ಧಾರವಾಡದಲ್ಲಿ ಬರುವ ಮೇ ತಿಂಗಳಲ್ಲಿ ಕೂಡುವ ಸಮ್ಮೇಲನದಲ್ಲಿ ಉಪನ್ಯಾಸ ಮಾಡಲು ಅರ್ಹವಾದ ವಿಷಯಗಳನ್ನು ಸೂಚಿಸಬೇಕೆಂದು ಕನ್ನಡ ಅಭಿಮಾನಿಗಳಿಗೆಲ್ಲ ನಾವು ವಿಜ್ಞಾಪಿಸಿಕೊಂಡದ್ದನ್ನು ಮನಸಿ ಅನೇಕ ಮಹನೀಯರು ಬೇಕಾದಷ್ಟು ವಿಷಯಗಳನ್ನು ಸೂಚಿಸಿರುವರು. ಇದಕ್ಕಾಗಿ ನಾವು ಅವರಿಗೆ ತುಂಬಾ ಉಪಕೃತರಾಗಿರುವೆವು. ಇವೆಲ್ಲ ವಿಷಯಗಳನ್ನು ವರ್ಗೀಕರಿಸಿ ಇದರಡಿಯಲ್ಲಿ ಕೊಟ್ಟಿರುವೆವು.

ಕನ್ನಡ ಮಂಡಲದ ಬೇರೆ ಬೇರೆ ಭಾಗಗಳಲ್ಲಿರುವ ವಿದ್ವಾಂಸರೂ ಭಾಷಾಭಿಮಾನಿಗಳೂ ಇವುಗಳಲ್ಲಿ ತಮಗೆ ಇಷ್ಟವಾದ ಒಂದೆರಡು ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ರಚಿಸಿ ನಮಗೆ ಕಳಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇವೆ. ಮಾರ್ಚ

ತಿಂಗಳ ಹಿಗಿ ನೇ ತಾರೀಖಿನೊಳಗಾಗಿ ಉಪನ್ಯಾಸಗಳು ತಮ್ಮಿಡೆಗೆ ಬರಬೇಕೆಂದು ಉಪನ್ಯಾಸ ಕಮಿಟಿಯವರು ಅಭಿಪ್ರಾಯಪಟ್ಟಿರುವರು. ಉಪನ್ಯಾಸವನ್ನು ಕಳಿಸಲಪೇಕ್ಷಿಸುವವರು ತಾವು ಬರೆಯಲಿಚ್ಛಿಸುವ ವಿಷಯವನ್ನು ಆದಷ್ಟು ಬೇಗನೆ ಅಂದರೆ ಫೆಬ್ರುವರಿ ತಿಂಗಳ ಕೊನೆಯೊಳಗಾಗಿ ನಮಗೆ ಬರೆದು ತಿಳಿಸಿದರೆ ಬಹಳ ಉಪಕಾರವಾಗುವುದು. ಸಮ್ಮೇಲನದಲ್ಲಿ ಓದಲಿಕ್ಕೆ ಅವಕಾಶವು ದೊರೆಯದಂತಾದಲ್ಲಿ ಈ ಉಪನ್ಯಾಸಗಳನ್ನು ಪುಸ್ತಕರೂಪದಿಂದ ಪ್ರಸಿದ್ಧಪಡಿಸುವ ವ್ಯವಸ್ಥೆಯು ಮಾಡಲ್ಪಡುವದು.

ಭಾಷಾಭಿಮಾನಿಗಳ ಸಮೂಹಿಕ ಪ್ರಯತ್ನದಿಂದಲೇ ಸಮ್ಮೇಲನದ ಕಾರ್ಯವು ಸಾಂಗವಾಗಿ ಕನ್ನಡ ಸಾಹಿತ್ಯಕ್ಕೆ ಪುಷ್ಟಿ ದೊರೆತು, ಕನ್ನಡ ಭಾಷೆಯು ಅಭಿವೃದ್ಧಿ ಹೊಂದಬೇಕಾಗಿರುವದರಿಂದ ಕನ್ನಡ ನಾಡಿನಲ್ಲಿ ಜನ್ಮಹೊಂದಿದ ಪ್ರತಿಯೊಬ್ಬ ಕನ್ನಡಿಗನೂ ತಾನು ಪ್ರಯತ್ನಪಟ್ಟು ಬರೆವಾಗಲಿ, ವಿದ್ವಾಂಸರಾದ ತನ್ನ ಮಿತ್ರರಿಗೆ ಪ್ರೋತ್ಸಾಹಪಡಿಸಿ ಉಪನ್ಯಾಸಗಳನ್ನು ಬರೆಯಿಸಿಯಾಗಲಿ, ನಾವು ಕೈಕೊಂಡ ಕಾರ್ಯಕ್ಕೆ ಯಶಸ್ಸು ಬರುವಂತೆ ನಮಗೆ ನೆರವಾಗುವರೆಂದು ನಂಬಿದ್ದೇವೆ.

ತಮ್ಮ ಹಿತಾಭಿಲಾಷಿಗಳು

ವೆ. ಸ. ಮಗದಾಲ.

ವೆ. ಭೀ. ಅಲೂರ.

ಉಪನ್ಯಾಸ ವಿಷಯಗಳು.

೧. ಕವಿಕಾವ್ಯಗಳ ವಿಮರ್ಶೆ:– ಆದಿಪಂಪನ ಗ್ರಂಥಗಳಲ್ಲಿ ಉಪಯೋಗಿಸಿರುವ ಅಪೂರ್ವ ಪದಗಳ ವಿಚಾರ; ಭಟ್ಟಾಕಲಂಕನ ಶಬ್ದಾನುಶಾಸನ; ಕವಿರಾಜಮಾರ್ಗವನ್ನು ನೃಪತುಂಗನು ರಚಿಸಿದನೊ? ಬೇರೆ ಬೇರೆ ಶತಮಾನಗಳಲ್ಲಿ ಕನ್ನಡ ಶೈಲಿಯೂ ಭಾಷಾಪ್ರವಾಹವೂ ಹೊಂದಿದ ಹೊಸ ಸ್ವರೂಪ; ಲಕ್ಷ್ಮೀಶನ ಮನೋಹರತೆಯ ಮರ್ಮ; ಇವೇ ಮೊದಲಾದವು.

೨. ಕನ್ನಡ ನುಡಿಯ ಬಗ್ಗೆ ಐತಿಹಾಸಿಕ ವಿಮರ್ಶೆ:–ಲಿಂಗಾಯತ ಕವಿಗಳು ಕನ್ನಡವನ್ನು ಅಭಿವೃದ್ಧಿ ಪಡಿಸಿದ್ದು; ಕನ್ನಡವೂ ಉತ್ತರಕನ್ನಡ ಜಿಲ್ಲೆಯು; ವಿಜಯನಗರದ ಸಾಮ್ರಾಜ್ಯವೂ ಕನ್ನಡ ಭಾಷೆಯು; ಜೈನಗ್ರಂಥಗಳಿಂದ ಕನ್ನಡ ನುಡಿಗುಂಟಾದ ಪುಷ್ಟಿ ಇನೇ ಮೊದಲಾದವು.

೩. ಸಾಂಪ್ರತ ಕನ್ನಡದ ಸುಧಾರಣೆಯ ಮಾರ್ಗಗಳು:— ಕನ್ನಡ ಭಾಷೆಯ ಬೆಳವಣಿಗೆಗೆ ಮಾಡತಕ್ಕ ಉಪಾಯಗಳು; ಸಾಮಾನ್ಯಜನರಲ್ಲಿ ಬಿಂಬಿಸಿ ಕನ್ನಡ ಭಾಷೆಯ ಏಳಿಗೆಗಾಗಿ ಅವರು ಸಹಾಯ ಮಾಡಲು ಉತ್ಸಾಹಪಡುವಂತೆ ಮಾಡತಕ್ಕ ಉಪಾಯಗಳು ಮುಂತಾದವು.

೪. ಕನ್ನಡ ಭಾಷಾಭೇದವನ್ನು ಹೋಗಲಾಡಿಸುವ ಉಪಾಯ:— ಮೈಸೂರ, ಧಾರವಾಡ ಮಂಗಳೂರ ಕನ್ನಡವೆಂದು ಮೂರು ತರದ ಭಾಷೆಯನ್ನು ಒಂದೇ ವಿಧವಾ

ಗುವಂತೆ ಮಾಡತಕ್ಕ ಉಪಾಯಗಳು ಮೊದಲಾದವು.

೫. ಕನ್ನಡ ಭಾಷೆಯೂ ಶಾಲೆಗಳೂ:—ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡನುಡಿಯು ಅಭ್ಯಾಸವನ್ನು ಹೆಚ್ಚಿಸುವ ಕ್ರಮವೂ, ಉಪಾಯಗಳೂ ಮೊದಲಾದವು.

೬. ಕನ್ನಡದಲ್ಲಿ ಬಹು ಜನಾಭಿಮಾನವನ್ನು ಹುಟ್ಟಿಸುವ ಬಗ್ಗೆ:--ಕನ್ನಡದಲ್ಲಿ ಸರ್ವಜನೋಪಯುಕ್ತವಾದ ಗ್ರಂಥಗಳನ್ನು ಹೇಗೆ ಹೆಚ್ಚಿಸಬಹುದು; ಪುಸ್ತಕಾಲಯಗಳೂ, ಭಾಷಾಭಿವೃದ್ಧಿಯೂ ಮೊದಲಾದವು.

೭. ಕನ್ನಡ ಕವಿತೆ, ಅದರ ಭವಿತವ್ಯ, ವ್ಯಾಕರಣ, ಛಂದಸ್ಸು ಅಲಂಕಾರ, ಶಾಸ್ತ್ರಗ್ರಂಥಗಳು, ಕಾದಂಬರಿಗಳು, ಕೀರ್ತನಗಳು, ದಾಸರ ಪದಗಳು, ನಾಟಕಗಳು, ವರ್ತಮಾನಪತ್ರಗಳು ಮತ್ತು ಇವುಗಳಿಗೆ ಸಂಬಂಧಿಸುವ ಎಲ್ಲ ವಿಷಯಗಳು, ಕನ್ನಡಕ್ಕೂ ಇತರ ಭಾಷೆಗಳಿಗೂ ಇರುವ ಸಂಬಂಧ.

೮. ಕನ್ನಡ ಗಾದೆಸು ಮಾತುಗಳು, ಕವಿಸಮಯ, ಕವಿಚರಿತ್ರೆ, ಶಾಸನಗಳು, ರಾಜರು, ಗ್ರಾಮ್ಯಕನ್ನಡದಲ್ಲಿರುವ ಕವಿತೆಗಳು, ಸಾಂಪ್ರದಾಯ ಶಬ್ದಗಳು, ಅಕ್ಷರ ಸಂಯೋಜನ ಮೊದಲಾದ ವಿಷಯಗಳು.

ಶ್ರೀ.

ಮಕರ ಸಂಕ್ರಮಣಾಷ್ಟಕಂ॥

ಭಾಮಿನೀ ಷಟ್‌ಪದಿ.

ಎಳ್ಳುಸಕ್ಕರೆಗಳನು ಭುಂಜಿಸಿ। ಯೊಳ್ಳಶಂಬರ ದಯದಿ ರಕ್ಷಿಸು।
ವೆಳ್ಳುಸಕ್ಕರೆ ಪಂಚಗಜ್ಜದ ಸವಿಯ ಕಂಡವನೇ॥

*

ಒಳ್ಳಿತನೆ ಸಿದ್ಧಿಸುವ ಬಲುಹಿರಿ। ಜೊಳ್ಳಕಿಟಗಳ ಸಂಬಿನಕ ನೀಂ।
ಕೊಳ್ಳು ಮೊದಲಿಟ್ಟಿರುವ 'ಸಕ್ಕರೆ ಯೆಳ್ಳನೊಳ್ಳುಡಿಯಾ" ॥ ೧॥
ಗುರುರವಿಯಲಂಬ ಪ್ರಕಾಶವು। ಗರನೆತೆಂಕಣದಿಂದ ಬಡಗಲು।
ತಿರುಗಲೀ ಧರೆಗೆಲ್ಲ ಪುಣ್ಯೋದಯವು ತಾನಾಯ್ತೈ!॥
ಸುರರು ತಾಮೆಚ್ಚತ್ತರೈ! ಭೂ। ಸುರರಜೀವದ ಕಳೆಯು ಹೆಚ್ಚಿತು।
ಗುರುಜನರೆ! ನೀಂ ಕೊಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥೨॥
ಉತ್ತರಾಷಾಢಾ ಪ್ರಥಮವ। ನ್ನುತ್ತರಿಸಿ ಧನುರಾಶಿಯನು ಮೇಣ್।
ಮತ್ತೆ ಮಕರವಸೇರಿ ಚಲಿಸಲು ಲೋಕರಂಜನವು॥
ನಿತ್ಯದಲ್ಲಿಯು ದಿವವು ಹೆಚ್ಚಿ। ಗುತ್ತನಡೆವುದು ರಾತ್ರಿ ಸಂಯುವ।
ದುತ್ತಮರೆ! ನೀಂ ಕೊಳ್ಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥ ೩ ॥
ಚಕ್ರವರ್ತಿಯುಗಾದಿಯಿಂದಲಿ। ಚಕ್ರಸಂಖ್ಯಾದಿನ ಸಮೀಪದಿ।

ಮಕರ ಸಂಕ್ರಮಣಾಷ್ಟಕ

ಚಕ್ರಗತಿಯಿಂದುತ್ತರಾಯಣ ಪುಣ್ಯ ಕಾಲವಿದು ॥
ಚಕ್ರಪಾಣಿಯು ಮಹಿಮೆಯಿಂ ಭೂ। ಚಕ್ರಮಂ ವ್ಯಾಪಿಪುದಿನಲ್ಲಾ।
ಚಕ್ರಿನಿಷ್ಠರೆ ! ಕೊಳ್ಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥ ೪ ॥
ಮಿತ್ರರಥಿಕಾರುಣನುದಯಕಾ। ಲತ್ರಿಕರಣೋತ್ಥಿತ ವಿಶ್ವಾ।
ಮಿತ್ರ ವೊದಲಹರಂತೆ ಸಂಧ್ಯಾವಿಧಿಯ ತೀರಿಸುತಾ॥
ಚಿತ್ರಭಾವಾಶ್ವತ್ಥ ಪೂಜೆಯ। ಚಿತ್ರತರದೀಪದೊಳುಗೆದಿಹ।
ಮಿತ್ರನರ್ಯರೆ! ಕೊಳ್ಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥ ೫ ॥
ಶೂನ್ಯಪುಷ್ಯವಿದೆಂಬ ಮಾಸವು। ಮಾನ್ಯಮಪ್ಪುದು ಮಕರಯೋಗದಿ।
ಧನ್ಯಮುಂಲಗ್ನಾದಿ ಶುಭಕಾರ್ಯಾವಳಿಗಳಿಂದ॥
ಕನ್ಯೆಯರ ನೆರೆದಾಟಗುಣಿಕೆಗೆ। ಮನ್ಯೆಯರ ನೆರೆಯಿಸುವ ಬಲು ಸ।
ನ್ಮಾನ್ಯರೇ! ತಕ್ಕೊಳ್ಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥ ೬ ॥
ಕೆಸರು ಮೈಕೈಗಾಗೆ ಹೇಸದೆ। ಬಸಬಸನೆ ಬಿವರಲ್ಕೆ ಸಹಿಸುತೆ।
ಪಶುಗಳಾರೈಕೆಯನು ಮಕ್ಕಳ ವೋಲು ಮಾಡುತ್ತಾ॥
ಕೃಷಿಯನೊಂದೇ ಮನದಿ ಮಾಡುತ। ಒಸರು ತುಪ್ಪದೊಳುಂಡು ಸುಖಿಸುವ।
ಕೃಷಿಕಪರ್ಗವೆ! ಕೊಳ್ಳಿ, "ಸಕ್ಕರೆಯೆಳ್ಳನೊಳ್ಳುಡಿಯಾ" ॥೭॥
ರಾಜಜಾರ್ಜಾಧಿಕೃತರೆಲ್ಲರು। ರಾಜಕರಣಿಕ ಮಂಡಲಸ್ಥರು।
ರಾಜ ಸೇವಾಗುರುಕುಲವ ನುದರಿಸಲಾರುವರು॥
ರಾಜಗಣಪತಿ ಜನನಿಕಾಂಬಿಕೆ। ರಾಜನಿಜಪದಯುಗಳ ಪೆರ್ಚಿಕೆ।
ರಾಜಮಾನ್ಯರೆ !! ಕೊಳ್ಳಿ "ಸಕ್ಕರೆಯೆಳ್ಳನೊಳ್ಳುಡಿಯಾ" ॥ ೮ ॥

೧೩—೧—೧೯೧೮.
ಅಂಕೋಲಾ.

ವೆ. ಪ. ಹೆಗಡೆ ಬಾಡ.
ಅಸಿ. ಮಾಸ್ತರ ಶಾಲಾ ನಂ. ೧.

* ಹಂದಿಗೋಣು ಗ್ರಾಮದ

ಅಂಕೆಗಳಿಲ್ಲದ ಸನ್ ೧೯೧೯ ನೇ ಇಸವಿಯ ಕ್ಯಾಲಂಡರವು.

" ನೀನು, ವಿದ್ವಜ್ಜನರಲ್ಲಿ ಬಹುಮಾನವನ್ನು ಪಡೆದ ಈ ಮಾಸಿಕದಲ್ಲಿ ಬರುವ ವಿಚಾರ-ಸರಣಿಯ ಲೇಖನವನ್ನು ಓದಿ ವ್ಯವಸಾಯವನ್ನು ಮಾಡಬೇಕು."

ಮೇಲಿನ ವಾಕ್ಯದಲ್ಲಿಯ ಹನ್ನೆರಡು ಶಬ್ದಗಳು ಅನುಕ್ರಮವಾಗಿ ಕ್ರಿ. ಶಕದ ಹನ್ನೆರಡು ತಿಂಗಳು ಎಂದು ತಿಳಿಯಬೇಕು. ಮತ್ತು ಆ ಶಬ್ದದ ಅಕ್ಷರಗಳ ಸಂಖ್ಯೆಯು ಆ ಆ ತಿಂಗಳ ಮೊದಲನೇ ಬುಧವಾರದ ತೀಯಿಗಳೆಂದು ತಿಳಿಯಬೇಕು.

ಉದಾ:— ಮೇಲಿನ ವಾಕ್ಯದಲ್ಲಿಯ ಎಂಟನೇ ಶಬ್ದದಲ್ಲಿ ನಾಲು ಅಕ್ಷರಗಳು ಅವೆ. ಇಂದಮೇಲೆ ಎಂಟನೇ ಅಂದರೆ ಆಗಸ್ಟ ತಿಂಗಳ ಮೊದಲನೇ ಬುಧವಾರ ದಿನಸ ೭ನೇ ತಾರೀಖು ಬರುವದು. ಎಂದು ತಿಳಿಯಬೇಕು.

ತಮ್ಮ ವಿಧೇಯ,

ತಾ॥ ೩೦-೧೧-೧೯೧೮ನೇ ಇಸವಿ.
ಸಿರಸಿ ತಾಲೂಕಿನ ಜಿಲ್ಲಾ ಬೆಳಗಾವಿ.

ಮೋರೇಶ್ವರ ವ್ಯಂಕಟೇಶ ದೇಶಪಾಂಡೆ
ಅ. ಮಾಸ್ತರ.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿಸಿತ್ತದೆ.

ಕ್ರಮ ಸಂಖ್ಯೆ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು.	ಮಂಜೂರು ಮಾಡಿದ ಬಗ್ಗೆ ಹುಕುಂ ನಂಬರು.
೧	ಹಿಂದೂಚರಿತ್ರಸಾರ.	ಎಮ್. ಎಚ್. - ಕೃಷ್ಣಅಯ್ಯಂಗಾರ ಕೃಷ್ಣವಿಲಾಸ ಅಗ್ರಹಾರ ಮೈಸೂರು	ಕನ್ನಡ.	ಪ್ರಾಯಮರಿ ಸೆಕಂಡರಿ ಮತ್ತು ಟ್ರೇನಿಂಗ್ ಸ್ಕೂಲುಗಳ ಇನಾಮಿಗಾಗಿಯೂ, ಲಾಯಬ್ರರಿಗಾಗಿಯೂ	೧೮೯೫೦
೨	ಹಿಂದುಸ್ತಾನದೇಶದ ವನಸ್ಪತಿಶಾಸ್ತ್ರ	ರೆವ್ಹರಂಡ ಜೆ. ಫ್ಲೀಡೀರರ.	ಕನ್ನಡ.	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿಯೂ	
೩	ಮಾನಸಶಾಸ್ತ್ರ.	ಕರ್ನಾಟಕ ವಿದ್ಯಾವರ್ಧಕಸಂಘ ಧಾರವಾಡ	,,	ಇನಾಮಿಗಾಗಿಯೂ.	೧೭೮೯೧
೪	ಶರೀರಶಾಸ್ತ್ರಸಾರ. (ಟೆಂಪರೆನ್ಸ್.)	ಎಲ್. ಸ್ವಾಮಿರಾವ ಬಿ. ಏ. ಮೂಮೂಲ ಪೇಟೆ. ಬೆಂಗಳೂರ	,,	ಸದರ.	೧೭೮೫೬೬
೫	ನೀತಿಶಿಕ್ಷಕ.	ಆ. ಆ. ಮಂಟಗಣೀಕರ. ಮಾಸ್ತರ ಹೊಳೆಮಣ್ಣೂರ.	,,	ಸದರ.	೧೭೮೫೬೬
	ರಾಜಭಕ್ತಿಸಾರ.	ಕೆ ರಾಮಸ್ವಾಮಿ ಅಯ್ಯಂಗಾರ ಹೆಡ್ಡಮಾಸ್ತರ. ಎ. ವ್ಹಿ. ಸ್ಕೂಲ, ಮಾಗಡಿ.	,,	ಸದರ.	೧೭೮೫೬೬
೬	ಜಂತುಶಾಸ್ತ್ರಮ್.	ಸೀತಾರಾಮಯ್ಯ ಬಿ. ಏ. ಎಲ್. ಟಿ ಬಂದರಗಲ್ಲಿ ಕ್ರಿಶ್ಚನ್ ಕಾಲೇಜ, ಮದ್ರಾಸ.	,,	ಸದರ.	೧೭೮೫೬೬
೭	ರಾಮಸಶ್ರಭುಚರಿತಮ್.	ಎಸ್. ಜಿ. ಗೋವಿಂದರಾಜ ಅಯ್ಯಂಗಾರ ೧೭. ಅಪ್ಪಾಜಿಸ್ವಾ ಅಗ್ರಹಾರ, ಚಾಮರಾಜೇಂದ್ರ ಪೇಟೆ ಬೆಂಗಳೂರ.	,,	ಸದರ.	೧೭೮೫೬೬
೮	ವಾಸವದತ್ತ.	ಕೆ. ರಾಮಸ್ವಾಮಿ ಅಯ್ಯಂಗಾರ ಹೆ. ಮಾ. ಏ. ವ್ಹಿ. ಸ್ಕೂಲ, ಮಾಗಡಿ.	,,	ಪ್ರಾಥಮಿಕ ಮತ್ತು ಸೆಕಂಡರೀ ಸ್ಕೂಲುಗಳ ಲಾಯಬ್ರರಿಗಾಗಿಯೂ, ಇನಾಮಿಗಾಗಿಯೂ	೧೭೮೫೬೬
೯		ಸದತ.	,,	ಸದರ.	
೧೦	ಚಂದ್ರಕಲಾಕಲ್ಯಾಣಮ್.		,,	ಸದರ.	೧೭೮೫೬೬
೧೧	ದೇವರಸೇವೆ.	ದೊಡ್ಡಬೆಲೆ ನಾರಾಯಣಶಾಸ್ತ್ರಿ ಬೆಂಗಳೂರ.	,,	ಸದತ.	೧೭೮೫೬೬
೧೨	ವಿಜಯನಗರ ಸಾಮ್ರಾಜ್ಯ.	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.	,,	ಸದರ.	೧೭೮೫೬೬
೧೩	ನೀತಿಮಂಜರಿ ಭಾಗ ೨	ಆರ್. ನರಸಿಂಹಾಚಾರ್ಯ, ಮಲ್ಲೇಶ್ವರಂ ಬೆಂಗಳೂರ	,,	ಸದರ.	೧೭೮೫೬೬
೧೪	ರಾಮಾಯಣಸಂಗ್ರಹ ಬಾಲಕಾಂಡ	ಎಚ್. ಲಿಂಗರಾಜ ಶಾಸ್ತ್ರ. ಮೈಸೂರು.	,,	ಸದರ.	೧೭೮೫೬೬

ಶಾಲಾಪತ್ರಿಕೆ.

ಪುಸ್ತಕ ೫ಳ. | ಮಾರ್ಚ್. ೧೯೧೫. | ಸಂಚಿಕೆ ೩.

ದಕ್ಷಿಣಭಾಗದ ಕನ್ನಡ ಜಿಲ್ಲೆಗಳ ಹೆಣ್ಣುಮಕ್ಕಳ ಶಾಲೆಗಳ ಇನ್‌ಸ್ಪೆಕ್ಟ್ರೆಸ್ ಈ ಕೆಲಸದ ಮೇಲೆ ಹೊಸದಾಗಿ ನಿಯಮಿಸಲ್ಪಟ್ಟ ಮಿಸ್. ಮೆಕಾಫಿಯವರು.

ಸದ್ಯದ ಕನ್ನಡ ಜಿಲ್ಲೆಯೊಳಗಿನ ಸ್ತ್ರೀವಿದ್ಯಾಭ್ಯಾಸದ ಮತ್ತು ಹೆಣ್ಣುಮಕ್ಕಳ ಶಾಲೆಗಳಸ್ಥಿತಿಯು ತೀರ ನಿಕೃಷ್ಟಾವಸ್ಥೆಯಲ್ಲಿರುವದರಿಂದ ಮಿಸ್. ಮೆಕಾಫಿಯವರಂಥ ದೀರ್ಘೋದ್ಯೋಗಿಗಳಾದ ಅಧಿಕಾರಸ್ತರು ಕನ್ನಡ ಜಿಲ್ಲೆಗೆ ದೊರೆತದ್ದು ಸುದೈವವೇ ಸರಿ. ಇವರು ಚಿಕ್ಕವಯಸ್ಸಿನಲ್ಲಿ ದೊಡ್ಡಪದವಿಗೆ ಏರಿರುವದರಿಂದ ಇದರಲ್ಲಿರುವ ನಾನಾ ಸಾಧಿಗುಣಗಳು ವ್ಯಕ್ತವಾಗುತ್ತವೆ. ಇವರ ಸಂಕ್ಷಿಪ್ತ ಚರಿತ್ರೆಯನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಡುತ್ತೇವೆ.

ಇವರು ೧೮೮೮ನೇ ಇಸವಿ ಜುಲೈತಿಂಗಳ ೬ನೇ ತಾರೀಖಿನ ದಿವಸ ವಿಲಾಯತಿಯಲ್ಲಿ ಜನ್ಮ ಹೊಂದಿದರು. ಇವರ ಬಾಲ್ಯದ ಶಿಕ್ಷಣವು ಅಲ್ಲಿಯೇ ಆಯಿತು. ಇವರು ಅಮದಾವಾದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಮೂರುವರ್ಷ ಅಭ್ಯಾಸಮಾಡಿ ಸರ್ಟಿಫಿಕೇಟನ್ನು ದೊರಕಿಸಿ ಗುಜರಾಥೀ ಭಾಷೆಯಲ್ಲಿ ಪ್ರವೀಣತೆಯನ್ನು ಪಡೆದಿರುವರಲ್ಲದೆ ಅದೇ ಕಾಲೇಜಿನಲ್ಲಿ ಮೊದಲನೇ ಉಪಶಿಕ್ಷಕರಾಗಿ ಕೆಲಕಾಲ ಕೆಲಸಮಾಡಿರುವರು. ಪುನಃ ಇವರು ವಿಲಾಯತಿಗೆ ಹೋಗಿ, '**ಕಾಲೇಜ ಆಫ್ ಪ್ರಿಸೆಪ್ಟರ್ಸ**' ಎಂಬ ಶಿಕ್ಷಕರ ಶಿಕ್ಷಣ ಸಂಸ್ಥೆಯಲ್ಲಿ ಹೆಚ್ಚಿನ ಸರ್ಟಿಫಿಕೇಟನ್ನು ದೊರಕಿಸಿಕೊಂಡು ಬಂದರು. ಮುಂದೆ ಬಡೋದಾದ ಹೆಣ್ಣುಮಕ್ಕಳ ಕಾಲೇಜಿನ ಲೇಡೀಸುಪರಿಂಟೆಂಡೆಂಟರೂ ಅಲ್ಲಿಯ ಗರ್ಲ್‌ಸ್ಕೂಲುಗಳ ಇನಸ್ಪೆಕ್ಟರೂ ಆಗಿ ಕೆಲವುದಿವಸ ಕೆಲಸಮಾಡಿದರು.

೧೯೧೩ನೇ ಇಸವಿಯಲ್ಲಿ ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಲೇಡೀಸುಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟರು. ಇವರು ಈ ಕಾಲೇಜಕ್ಕೆ ನಿಯಮಿಸಲ್ಪಟ್ಟ ಮೂರು ತಿಂಗಳೊಳಗಾಗಿ ಕನ್ನಡ ಭಾಷೆಯ ಅಭ್ಯಾಸವನ್ನು ದಕ್ಷತೆಯಿಂದ ಮಾಡಿ ಗ್ರಂಥಗಳನ್ನು ಓದುವದಲ್ಲದೆ ವಿದ್ಯಾರ್ಥಿನಿಯರ ಕೂಡ ಈ ಭಾಷೆಯಲ್ಲಿ ಮಾತಾಡುವಷ್ಟು ಯೋಗ್ಯತೆಯನ್ನು ಸಂಪಾದಿಸಿದರು. ಇಷ್ಟೇಅಲ್ಲ. ಇವರು ಕೆಲವು ದಿವಸಗಳ

ತರುವಾಯ ಕನ್ನಡದಲ್ಲಿ ಶಿಷ್ಟಿಕೆ ಎಂಬ ಮಾಸಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಸ್ವತಃ ಲೇಖಗಳನ್ನು ಬರೆಯ ಹತ್ತಿದರು. ಇವರು ಈವರೆಗೆ ಗುಜರಾಥಿ, ಮತ್ತು ಕನ್ನಡ ಈ ಎರಡು ದೇಶೀ ಭಾಷೆಗಳ ಜ್ಞಾನವನ್ನು ಮಾಡಿಕೊಂಡಿರುತ್ತಾರೆ.

ಇವರು ಈ ಕಾಲೇಜಕ್ಕೆ ಬಂದಮೇಲೆ ೩-೪ ಅವರ್ಷ ತಮ್ಮ ವಿದ್ಯಾರ್ಥಿನಿಯರನ್ನು ಸಂಗಡ ಕರಕೊಂಡು ದೂರದೂರಿನ ಪ್ರವಾಸಕ್ಕೆ ಹೋಗಿಬಂದರು. ಅಷ್ಟುಶ್ರಮದ ಕೆಲಸವನ್ನು ಇವರು ಒಬ್ಬರೇ ನಿರಾಯಾಸವಾಗಿ ಮಾಡಿದ್ದು ಇವರಲ್ಲಿರುವ ಛಾತ್ರವರ್ಗದ ಮೇಲಿನ ಕಳಕಳಿಯ ಸೂಚಕವಾಗಿದೆ.

ಇವರು ಹೆಣ್ಣುಮಕ್ಕಳ ಕಾಲೇಜಿನಲ್ಲಿರುವಾಗ ಇಂಗ್ಲಿಷ ಕ್ಲಾಸುಗಳನ್ನು ಪ್ರಾರಂಭಿಸಿ ನ್ಯವಸ್ಥೆಯಿಂದ ನಡಿಸಿ ಧಾರವಾಡಸ್ಥರಲ್ಲಿ ತಮ್ಮ ಹೆಣ್ಣುಮಕ್ಕಳಿಗೆ ಇಂಗ್ಲಿಷ ವಿದ್ಯೆಯನ್ನು ಕಲಿಸುವ ಅಭಿರುಚಿಯು ಇರುತ್ತೆಂಬದನ್ನು ಮೇಲಿನ ಅಧಿಕಾರಸ್ತರಿಗೆ ಗೊತ್ತು ಮಾಡಿಕೊಟ್ಟರು.

ಈಪ್ರಕಾರ ಇವರಲ್ಲಿರುವ ಸಾಹಸ, ಕಾರ್ಯದಕ್ಷತೆ ಮುಂತಾದ ಗುಣಗಳನ್ನು ನೋಡಿ ಸರಕಾರದವರು ಇವರಿಗೆ ಈ ದೊಡ್ಡ ಅಧಿಕಾರವನ್ನು ಕೊಟ್ಟದ್ದು ಯೋಗ್ಯವೇ ಸರಿ. ಇವರಿಂದ ಕನ್ನಡ ಜಿಲ್ಲೆಯೊಳಗಿನ ಸ್ತ್ರೀವಿದ್ಯಾಭ್ಯಾಸವು ತೀವ್ರ ಮುಂದರಿಯುವದೆಂದು ನಾವು ಆಶಿಸುತ್ತೇವೆ.

ಶಿಶು ಶಿಕ್ಷಣ ಪದ್ಧತಿ ಪಂಚೇಂದ್ರಿಯಗಳ ಶಿಕ್ಷಣ.

(ಲೇಖಕರ ಸಮಾಧಿಯ ಜನನದ ಅಂಕ ೫. ಇದರೊಳಗಿಂದ ಭಾಷಾಂತರಿಸಿದ್ದು.)

ಚಿಕ್ಕಬಾಲಕರ ಇಂದ್ರಿಯಗಳ ತಿದ್ದುವಿಕೆಯ ಕೆಲಸವನ್ನು ಆಟದ ರೂಪದಿಂದ ಕಲಿಸುವದು ಬಹಳ ಆನಂದಕರವಾದ ಕೆಲಸವಾಗಿರುತ್ತದೆ. ಈ ರೀತಿಯಿಂದ ಕಲಿಸುವದು ತಿವಸ್ಥಾಯಿಯೂ, ಫಲಕಾರಿಯೂ ಆಗಿರುತ್ತದೆಂದು ನಮ್ಮ ಅಭಿಪ್ರಾಯವದೆ. ಈ ಇಂದ್ರಿಯ ಸಂಸ್ಕಾರದ ಆಟಗಳು ಬಾಲಕರಿಗೆ ಬಹಳ ಸೇರುತ್ತವೆ. ವಿಶೇಷವಾಗಿ ಸ್ವಲ್ಪ ಪ್ರಬುದ್ಧರಾದ ಬಾಲಕರಿಗೆ ಇವುಗಳಲ್ಲಿ ಹೆಚ್ಚು ಆಸಕ್ತಿಯು ಉಂಟಾಗುತ್ತವೆ. ಈ ಆಟಗಳ ಬಗ್ಗೆ ಕೆಲವು ಉಪಯುಕ್ತವಾದ ಸೂಚನೆಗಳನ್ನು ಸಂಕ್ಷೇಪವಾಗಿ ಇದರಡಿಯಲ್ಲಿ ಕೊಟ್ಟಿರುತ್ತದೆ.

ಕರಣ ಸಂಸ್ಕಾರದ ಆಟಗಳು:—ಮುಂದೆ ಹೇಳುವ ಆಟದಲ್ಲಿ ಬಾಲಕರು ಕಣ್ಣುಮುಚ್ಚಿಕೊಂಡು ಕೂಡಬೇಕು. ಇಲ್ಲವೆ ಆಟವಾಡುವವರು ತೆರೆಗೆ ಮರೆಯಾಗಿ ಕೂಡಬೇಕು. ಶಿಕ್ಷಕನಾಗಲಿ, ಬಾಲಕನಾಗಲಿ

ಕಟ್ಟಿಗೆ. ಗಡಿಗೆ, ಕಬ್ಬಿಣ ಮುಂತಾದ ಪದಾರ್ಥಗಳ ಮೇಲೆ ಧಾತುವಿನ ಒಂದು ತುಂಡಿನಿಂದ ಬಾರಿಸುವನು. ಪ್ರತಿಯೊಂದುಸಾರಿ ಸಪ್ಪಳವಾದ ನಂತರ ಉಳಿದ ಹುಡುಗರೆಲ್ಲರು ಬಾರಿಸಿದ ಪದಾರ್ಥವು ಯಾವದೆಂಬ ದನ್ನು ಹೇಳಲಿಕ್ಕೆ ಪ್ರಯತ್ನಮಾಡುವರು. ಮತ್ತೊಂದು ಪ್ರಕಾರದ ಆಟ ದಲ್ಲಿ ಹಿಡೋಣ, ಕುಂಟೋಣ, ಕಾಗದಹರಿಯೋಣ, ಅರಿವೆ ಹರಿಯೋಣ, ಕಟ್ಟಿಗೆ ಮುರಿಯೋಣ ಮುಂತಾದ ಸಪ್ಪಳಗಳನ್ನು ಗೊತ್ತು ಹಿಡಿಯುವ ಕೆಲಸವು ನಡೆಯುವದು. ಇವೆಲ್ಲ ಕಾರ್ಯಗಳು ಶಿಕ್ಷಕನ ಮೇಲ್ವಿಚಾರ ಣೆಯ ಕೆಳಗೆ ನಡೆಯತಕ್ಕವು.

ಧ್ವನಿಯ ಮೇಲಿಂದ ಜನರನ್ನು ಗೊತ್ತುಹಿಡಿಯುವ ಆಟವನ್ನು ಆಡಿ ಸುವ ಕ್ರಮವು ಹೇಗಂದರೆ:—ವರ್ತುಲಾಕಾರವಾಗಿ ಹುಡುಗರನ್ನು ನಿಲ್ಲಿಸಿ ನಡುವೆ ಒಬ್ಬನನ್ನು ಕಣ್ಣು ಕಟ್ಟಿಸಿ ನಿಲ್ಲಿಸಬೇಕು. ಸುತ್ತಲಿನ ಹುಡು ಗರು ತಾಳದೊಂದಿಗೆ ಹಾಡುತ್ತ ಇಲ್ಲವೆ ತಾಳಕ್ಕೆ ಅನುರೂಪವಾದ ವಾಕ್ಯಗಳನ್ನು ಅನ್ನುತ್ತ, ಚಪ್ಪಳೆ ಬಾರಿಸುತ್ತ ಇಲ್ಲವೆ ಕೋಲು ಹಾಕುತ್ತ ತಿರುಗುವರು. ಕೂಡಲೆ ಎಲ್ಲರೂ ಹಾಡುವದನ್ನು ಬಿಟ್ಟು ನಿಲ್ಲು ವರು. ಆಗ ಮಧ್ಯದಲ್ಲಿಯ ಹುಡುಗನು ಕಾಲುಬಡಿಯುತ್ತ ಯಾವ ದೊಂದು ಪ್ರಕಾರದ ಧ್ವನಿಯ ಉಚ್ಚಾರ ಮಾಡುತ್ತ ಮುಂದಕ್ಕೆ ಬಂದು ವರ್ತುಲದಲ್ಲಿಯ ಒಬ್ಬ ಹುಡುಗನನ್ನು ಮುಟ್ಟುವನು. ಮುಟ್ಟಿಸಿಕೊಂಡ ಹುಡುಗನು, ಕಣ್ಣುಕಟ್ಟಿಸಿಕೊಂಡ ಹುಡುಗನು ಮಾಡುವ ಧ್ವನಿಯ ಅನುಕರಣ ಮಾಡುವನು. ಈ ಅನುಕರಣ ಮಾಡಿದ ಧ್ವನಿಯ ಮೇಲಿಂದ ಕಣ್ಣು ಕಟ್ಟಿಸಿಕೊಂಡವನು ಆ ಧ್ವನಿಯ ಅನುಕರಣ ಮಾಡಿದವನ ಹೆಸರು ಹೇಳಬೇಕು. ಈ ಹೆಸರು ಹೇಳಲಿಕ್ಕೆ ಮೂರು ಸಾರೆ ಸವಡು ತೆಗೆದು ಕೊಂಡು ಪ್ರಯತ್ನ ಮಾಡಬಹುದು. ಅವನು ಹೇಳಿದ ಹೆಸರು ಸರಿಯಾ ದರೆ ಅವರು ತಮ್ಮ ಸ್ಥಳಗಳನ್ನು ಅದಲು ಬದಲು ಮಾಡುವರು ನಡುವಿ ನವನು ಮಾಡುವ ಧ್ವನಿಯನ್ನು ಬೇರೆ ಬೇರೆ ಕಾಲಕ್ಕೆ ಬದಲು ಮಾಡು ವದು ಒಳ್ಳೇದು. ಒಮ್ಮೆ ಬಿಕ್ಕಿ ಕಾಗಿಗಳಂತೆ ಒದರಬಹುದು. ಒಮ್ಮೆ ಕೆಮ್ಮಬಹುದು; ಒಮ್ಮೆ ಯಾವದಾದರೊಂದು ಹಾಡಿನ ಒಂದು ನುಡಿ ಮನ್ನು ಉಚ್ಚರಿಸಬಹುದು; ಇಲ್ಲವೆ ನಮಸ್ಕಾರ ಮುಂತಾದ ನಯನು ಡಿಗಳನ್ನು ಅನ್ನಬಹುದು. ಈ ಸಂಕೇತಗಳನ್ನು ಹುಡುಗರೂ ಶಿಕ್ಷಕನೂ

ಕೂಡಿ ಪೂರ್ವದಲ್ಲಿಯೇ ಗೊತ್ತುಮಾಡಿ ಇಟ್ಟಿರಬೇಕು. ಚುರುಕುಬುದ್ಧಿಯ ಉಲ್ಲಾಸವೃತ್ತಿಯ ಹುಡುಗರಿದ್ದಲ್ಲಿ ಅವರೇ ಇಂಥ ಶಬ್ದಗಳನ್ನು ಸ್ವಬುದ್ಧಿಯಿಂದ ಯೋಚಿಸಬಹುದು.

ನೇತ್ರ ಸಂಸ್ಕಾರದ ಆಟಗಳು:–ವಿದ್ಯಾರ್ಥಿಗಳ ಮುಂದೆ ಮೇಜಿನ ಮೇಲೆ ಹಲವು ಒಡವೆಗಳನ್ನು ಇಡಬೇಕು. ವಿದ್ಯಾರ್ಥಿಗಳು ಇಟ್ಟ ಒಡವೆಗಳ ಹೆಸರುಗಳನ್ನು ಅವುಗಳ ಸ್ಥಾನಗಳ ಅನುಕ್ರಮದಿಂದ ಲಕ್ಷ್ಯದಲ್ಲಿಡಬೇಕು. ಆಮೇಲೆ

೧ ಎಲ್ಲರಿಗೂ ಕಣ್ಣುಮುಚ್ಚಲಿಕ್ಕೆ ಹೇಳಿ ಶಿಕ್ಷಕನು ಅದರೊಳಗಿನ ಒಂದು ಒಡವೆಯ ಸ್ಥಳಾಂತರ ಮಾಡುವನು.

೨ ಎಲ್ಲರೂ ಕಣ್ಣುಮುಚ್ಚಿದಾಗ ಶಿಕ್ಷಕನು ಬೇರೆ ಒಂದು ಒಡವೆಯನ್ನು ತಂದು ಇಡುವನು.

ಈ ಪ್ರಕಾರ ಮೇಜಿನ ಮೇಲೆ ಆದ ಬದಲಾವಣೆಗಳನ್ನು ಹುಡುಗರು ಕಣ್ಣು ತೆರೆದು ನೋಡಿ, ಒಬ್ಬೊಬ್ಬರಾಗಿ ಹೇಳುವರು.

೩ ಎಲ್ಲರೂ ಕಣ್ಣು ಮುಚ್ಚಿದಾಗ ಶಿಕ್ಷಕನು ಮೇಜಿನ ಮೇಲಿನ ಒಂದು ಒಡವೆಯನ್ನು ತೆಗೆದು ಇಡುವನು.

ವಿದ್ಯಾರ್ಥಿಗಳು ತೆಗೆದ ಒಡವೆಯ ಹೆಸರು ಹೇಳುವರು. ಶಿಕ್ಷಕನು ಎಲ್ಲ ಒಡವೆಗಳನ್ನು ಗುಂಪುಮಾಡಿ ಇಡುವನು. ವಿದ್ಯಾರ್ಥಿಗಳು ಮೊದಲಿದ್ದ ಕ್ರಮದಂತೆ ಇಡಲಿಕ್ಕೆ ಪ್ರಯತ್ನ ಮಾಡುವರು. ಅಥವಾ ತೆಗೆದಿಟ್ಟ ಎಲ್ಲ ಒಡವೆಗಳ ಹೆಸರುಗಳನ್ನು ಅನುಕ್ರಮದಿಂದ ಹೇಳುವರು.

ಮೇಲಿಂದ ಮೇಲೆ ಒಡವೆಗಳನ್ನು ತೆಗೆದಿಟ್ಟು ಆಡಿಸುವದರ ಬದಲಾಗಿ ಒಂದು ಕೋಣೆಯೊಳಗಿಟ್ಟ ಸಾಮಾನುಗಳ ಬಗ್ಗೆ ಇದೇ ಆಟವನ್ನು ಆಡಿಸಬಹುದು. ಇಲ್ಲವೆ ಒಂದು ಸಾಲಿನಲ್ಲಿ ಹುಡುಗರನ್ನು ನಿಲ್ಲಿಸಿ ಇವರ ಬಗ್ಗೆ ಈ ಆಟವನ್ನು ಆಡಿಸಬಹುದು. ಇಲ್ಲವೆ ಒಬ್ಬ ಹುಡುಗನ ಮೈಮೇಲೆ ಆಭರಣ, ವಸ್ತ್ರ ಅಥವಾ ಯಾವದೊಂದು ಒಡವೆಯನ್ನು ಇಟ್ಟು ತೆಗೆದು ಈ ಆಟವನ್ನು ಆಡಿಸಬಹುದು. ಈ ತರದ ಆಟವು ತೀರ ಸಣ್ಣ ಹುಡುಗರಿಗೆ ಅನುಕೂಲವಾಗಿದೆ.

ಹುಡುಗರಿಗೆ ಕಣ್ಣು ಮುಚ್ಚಲಿಕ್ಕೆ ಹೇಳಿ ಅವರಿಂದ ಕೆಲವು ಅಂತರದ ಮೇಲೆ ಒಂದು ಮೇಜು ಇಟ್ಟು ಅದರ ಮೇಲೆ ಸಾಕಷ್ಟು ದೊಡ್ಡದಾದ ಯಾವದೊಂದು ವಸ್ತುವನ್ನು ಇಟ್ಟು ಒಮ್ಮೆಲೆ ಕಣ್ಣು ತೆಗೆದು ನೋಡಲಿ

ಹೇಳಬೇಕು. ನೋಡಿ ಗೊತ್ತುಮಾಡಿಕೊಂಡವನು ಅಪ್ಪುಗೈ ಹಚ್ಚಿಕೊಂಡ. ನಿಲ್ಲಬೇಕು. ಹೀಗೆ ಮಾಡುವದರಿಂದ ತೀವ್ರ ನಿರೀಕ್ಷಣ ಮಾಡುವ ಚಟವು ಉತ್ಪನ್ನವಾಗುವದು. ಹುಡುಗರ ಎದುರಿಗೆ ಅಂತರಿಕ್ಷದಲ್ಲಿ ಬೆರಳಿನಿಂದ ಅಕ್ಷರಗಳನ್ನು ಬರೆದು ಅವುಗಳ ಗುರ್ತು ಹಿಡಿಯಲಿಕ್ಕೆ ಹಚ್ಚಬಹುದು. ಸ್ಪರ್ಶೇಂದ್ರಿಯ ಘ್ರಾಣೇಂದ್ರಿಯಗಳ ಸಂಸ್ಕಾರದ ಆಟಗಳು:—

ಈ ಆಟಗಳನ್ನು ಹುಡುಗರನ್ನು ವರ್ತುಲಾಕಾರವಾಗಿ ನಿಲ್ಲಿಸಿ ಆಡಿಸಬೇಕು. ಒಬ್ಬ ಹುಡುಗನು ಕಣ್ಣುಮುಚ್ಚಿಕೊಂಡು ಮಧ್ಯದಲ್ಲಿ ನಿಲ್ಲುವನು. ಅವನು ತನ್ನ ಕೈಯಲ್ಲಿ ಕೊಟ್ಟ ವಸ್ತುವಿನ ಹೆಸರನ್ನು ಸ್ಪರ್ಶದಿಂದ ಪರೀಕ್ಷಿಸಿ ಹೇಳುವನು. ಒಡವೆಯನ್ನು ಪರೀಕ್ಷಿಸುವ ಕಾಲಕ್ಕೆ ಉಳಿದ ಹುಡುಗರು ಹಾಡುತ್ತ ತಿರುಗುವರು. ನಡುವಿನ ಹುಡುಗನು ಪರೀಕ್ಷಿಸುವದನ್ನು ಮುಗಿಸಿದ ಕೂಡಲೆ ಸೊನ್ನೆಯನ್ನು ಮಾಡುವನು ಆಗ ಎಲ್ಲರು ನಿಲ್ಲುವರು. ಕಣ್ಣು ಮುಚ್ಚಿದ ಅರಿವೆಯನ್ನು ತೆಗೆದನಂತರ ಆ ಹುಡುಗನಿಗೆ ಆ ಪದಾರ್ಥಗಳ ಇತರ ಗುಣಗಳನ್ನು ಹೇಳುವದಕ್ಕೆ ಉತ್ತೇಜನ ಕೊಡಬೇಕು. ಅವನು ಯಾವದೊಂದು ಸಂಗತಿಯನ್ನು ಹೇಳುವದನ್ನು ಬಿಟ್ಟರೆ, ಉಳಿದ ಹುಡುಗರು ಅದನ್ನು ಹೇಳಬಹುದು.

ಬೇರೆಯೊಂದು ಆಟದಲ್ಲಿ ಕಣ್ಣು ಮುಚ್ಚಿಸಿಕೊಂಡ ಹುಡುಗನಿಂದ ಹಲವು ಪದಾರ್ಥಗಳನ್ನು ಸಂಗ್ರಹಿಸಿದ ರಾಸಿಯೊಳಗಿಂದ ಒಂದು ವಿಶಿಷ್ಟ ಪದಾರ್ಥವನ್ನು ತೆಗೆಯಲಿಕ್ಕೆ ಹೇಳಬಹುದು. ಈ ರಾಸಿಯಲ್ಲಿದ್ದ ಪದಾರ್ಥಗಳು ಒಂದು ಕಾಲದಲ್ಲಿ ಆಕಾರದಿಂದ ಭಿನ್ನವಾದವುಗಳು ಇರಬಹುದು. ಮತ್ತೊಂದು ಕಾಲದಲ್ಲಿ ಅಳತೆಯಿಂದ ಇಲ್ಲವೆ ಸ್ಪರ್ಶದಿಂದ ಭಿನ್ನವಾದವುಗಳು ಇರಬಹುದು.

ರಾಸಿಯಲ್ಲಿದ್ದ ಹೂವುಗಳ ವಾಸನೆಗಳ ಮೇಲಿದ ಅವುಗಳ ಹೆಸರುಗಳನ್ನು ಹೇಳಿಸಬಹುದು. ಆದರೆ ಈ ಆಟದಲ್ಲಿ ಉಪಯೋಗಿಸುವ ಹೂವುಗಳು ಹುಡುಗರ ಪರಿಚಯದವೇ ಇರಬೇಕು. ಇಂಗು, ಕೇಶರ, ಲವಂಗ, ಸಾಬಣ, ಹಣ್ಣು-ಹಂಪಲ ಮುಂತಾದ ಒಡವೆಗಳನ್ನು ಇಟ್ಟು ಮೂಸಿ ನೋಡುವದಕ್ಕೆ ಹಚ್ಚುವದು ಮತ್ತೊಂದು ಪ್ರಕಾರದ ಆಟವು

ಈ ಪ್ರಕಾರದ ಇಂದ್ರಿಯ ಶಿಕ್ಷಣದ ಪಾಠವು ಮುಗಿಯುವದಕ್ಕೆ ಬಂದಾಗ್ಗೆ ಎಲ್ಲ ವಿದ್ಯಾರ್ಥಿಗಳ ಕಣ್ಣು ಕಟ್ಟಿ, ಕೋಣೆಯ ಒಂದು ವಿಶಿಷ್ಟ

ಭಾಗವನ್ನು ಮುಟ್ಟಲಿಕ್ಕೆ ಹೇಳಬಹುದು. ಇದರಿಂದ ಅವರ ಮನೋರಂಜನೆಯು ಆಗುವದು.

ಶಿಶುಶಿಕ್ಷಣ ಪದ್ಧತಿ:—ಮಾತಾಡಲಿಕ್ಕೆ ಕಲಿಸುವದು.

(ಟೀಚರ್ಸ್ ಫ್ರೆಂಡ್ ಎಂಬ ಮೂಸ ಪತ್ರಿಕೆಯ ೧೯೧೯ನೇ ಜನವರಿ ಅಂಕದಿಂದ ತೆಗೆದುಕೊಂಡದ್ದು.)

ಮಾತಾಡಲಿಕ್ಕೆ ಕಲಿಸುವದು ಬಾಲಕರ ಶಿಕ್ಷಣದ ಒಂದು ಮಹತ್ವವಾದ ವಿಷಯವಿರುತ್ತದೆ. ಯಾಕಂದರೆ ಇದರಿಂದ ಆಗುವ ಪರಿಣಾಮವು ಬಹಳದಿವಸ ಉಳಿಯುವಂಥಾದ್ದು ಇರುತ್ತದೆ. ಆರಂಭದಲ್ಲಿ ಶಿಕ್ಷಕನು ಮೊದಲು ಬಾಲಕರಲ್ಲಿರುವ ಈ ಸಂಬಂಧದ ದೋಷಗಳನ್ನೂ ನ್ಯೂನತೆಗಳನ್ನೂ ಅವರು ಶಾಲೆಗೆ ಬಂದಕೂಡಲೆ ಲಕ್ಷಪೂರ್ವಕವಾಗಿ ಅವಲೋಕಿಸತಕ್ಕದ್ದು. ಬಾಲಕರಲ್ಲಿರುವ ಈ ಸಂಬಂಧದ ನ್ಯೂನತೆಗಳು ಮುಖ್ಯವಾಗಿ ಶಬ್ದಸಂಗ್ರಹದ ಕೊರತೆ ಮತ್ತು ಉಚ್ಚಾರ ದೋಷ ಇವುಗಳ ಸಂಬಂಧವಾದವುಗಳು ಇರುತ್ತವೆ. ಸುಶಿಕ್ಷಿತರಾದ ಮನೆತನದವರ ಹುಡುಗರಿಗಿಂತ ಅಶಿಕ್ಷಿತ ಮನೆತನದ ಹುಡುಗರಲ್ಲಿ ವಿಶೇಷವಾಗಿ ಚಿಕ್ಕವ್ರಾಯದವರಲ್ಲಿ ಈ ಕೊರತೆಯು ವಿಶೇಷವಾಗಿರುತ್ತದೆ. ಈ ನ್ಯೂನತೆಯನ್ನು ಪೂರೈಸಿಕೊಟ್ಟು ಅವರಲ್ಲಿ ತಮ್ಮ ವಿಚಾರಗಳನ್ನು ಸಹಜವಾಗಿ ಪ್ರಕಟಮಾಡುವ ಶಕ್ತಿಯನ್ನು ಹುಟ್ಟಿಸಿಕೊಡುವ ಬಗೆಯನ್ನು ಇಲ್ಲಿ ವಿವರಿಸುವೆವು.

ಈ ವಿಷಯದ ಬಗ್ಗೆ ಈ ವರೆಗೆ, ನಮ್ಮ ಶಿಕ್ಷಕರು ಹುಡುಗರಕೂಡ ಸಂಭಾಷಣೆ ಎಂಬ ಪಾಠವನ್ನು ಇಡುತ್ತಿದ್ದರು. ಕೆಲವರು ವಸ್ತುಪಾಠದಿಂದ ಸಂಭಾಷಣೆಯನ್ನು ಕಲಿಸಬಹುದೆಂದು ತಿಳಿಯುತ್ತಿದ್ದರು. ಆದರೆ ವಸ್ತುಪಾಠದಲ್ಲಿ ಬಂದ ಶಬ್ದಗಳು, ವಿಷಯಗಳು ಹುಡುಗರ ದಿನದ ಬಳಿಕೆಯೊಳಗಿನವು ಆಗದೆ ಇದ್ದದರಿಂದ ಅವರಲ್ಲಿ ವಾಚಾಲತೆಯು ಬೆಳೆಯುತ್ತಿದ್ದಿಲ್ಲ. ಇತ್ತಲಾಗಿ ಪ್ರಕೃತಿ ವಿಮರ್ಶೆಯ ಪಾಠಗಳು ಆರಂಭವಾದಂದಿನಿಂದ ಅದರಲ್ಲಿಯ ವಿಷಯಗಳು ವಿಶೇಷವಾಗಿ ಹುಡುಗರ ದಿನದ ಬಳಿಕೆಯೊಳಗಿನವೇ ಇರುವವು. ಯಾಕಂದರೆ ಮನುಷ್ಯನ ಆಹಾರ, ವಸ್ತ್ರಪ್ರಾವರಣ ಆಟನೋಟ ಮುಂತಾದವುಗಳೊಳಗಿನ ಒಡವೆಗಳು, ವನಸ್ಪತಿ ಮುಂತಾದ ಸೃಷ್ಟವಸ್ತುಗಳಿಗೆ ಸಂಬಂಧಿಸಿದವೇ ಇರುತ್ತವೆ. ಪ್ರಕೃತಿ ವಿಮರ್ಶೆಯು ಸೃಷ್ಟವಸ್ತುಗಳ ಅವಲೋಕನವಿರುತ್ತದೆಂಬಮಾತು ತುಸು ವಿಚಾರದಿಂದ ತಿಳಿಯವಂತಿದೆ. ಆದ್ದರಿಂದ ಶಿಕ್ಷಕನು ಪ್ರಕೃತಿ ವಿಮರ್ಶೆಯ ಶಿಕ್ಷಣದಲ್ಲಿ ತಕ್ಕ ಪಾಠಗಳನ್ನು ಆರಿಸಿ ಅದರೊಳಗಿನ ಶಬ್ದಗಳೂ ವಾಕ್ಯಗಳೂ ಅವರ ದಿನದ ಬಳಿಕೆಯೊಳಗೆ ಬರುವಂತೆ ಮಾಡಿಕೊಡತಕ್ಕದ್ದು. ಇದಲ್ಲದೆ ಶಾಲೆಯಲ್ಲಿ ಉಪಯೋಗಿಸುವಂಥ ಭಾಷೆಯು ಹುಡುಗರು ಮನೆಯಲ್ಲಿ ಉಪಯೋಗಿಸುವಂಥ ಭಾಷೆಯಿಂದ ಭಿನ್ನವಾಗಿದ್ದದ್ದು ನಮಗೆ ಕಂಡುಬರುತ್ತದೆ. ಆದ್ದರಿಂದ ಶಿಕ್ಷಕನು ಕೈಲಾದ ಮಟ್ಟಿಗೆ ಯತ್ನಮಾಡಿ ಶಾಲೆಯೊಳಗಿನ ಭಾಷೆಯನ್ನೇ ಅವರು ಮನೆಯಲ್ಲಿ ಉಪಯೋಗಿಸುವಂತೆ ಸಾಧ್ಯಮಾಡಿ

ಕೊಡತಕ್ಕದ್ದು. ಅಂದರೇ ಅವನ ಶಿಕ್ಷಣದ ಪರಿಣಾಮವು ಶಾಶ್ವತವಾದದ್ದೂ ಉಪಯುಕ್ತವಾದದ್ದೂ ಆಗುತ್ತದೆ. ಬಹುಶಃ ಅಶಿಕ್ಷಿತ ಸುಶಿಕ್ಷಿತರ ನಿರ್ಣಯವು ಜನರು ಆಡುವ ನುಡಿಯ ಮೇಲಿಂದಲೇ ಗೊತ್ತು ಮಾಡಲ್ಪಡುತ್ತದೆ. ಇದಲ್ಲದೆ ಹುಡುಗರಿಗೆ ಬೇರೆ ಬೇರೆ ತರದ ಆಟದ ಮತ್ತು ಇತರ ಒಡನೆಗಳನ್ನು ಕೊಟ್ಟು ಅದರಿಂದ ಅವರ ಪರಿಸ್ಥಿತಿಯನ್ನು ಬದಲು ಮಾಡಿ ಅವರ ವಾಚಾಲಶಕ್ತಿಯನ್ನು ಬೆಳಿಸುವ ಉಪಾಯವನ್ನಾದರೂ ಯೋಚಿಸಬಹುದು. ಮತ್ತು ಯಾವದೊಂದು ಸಂಗತಿಯನ್ನು ಬೇರೆ ಬೇರೆ ರೀತಿಯಿಂದ ಹೇಳಬಹುದೆಂಬದನ್ನು ಅವರಿಗೆ ತಿಳಿಸಿ ಕೊಡಬೇಕು. ಶಾಲೆಯಲ್ಲಿ ಹುಡುಗರಿಗೆ ತಮ್ಮ ಮನಸಿಗೆ ಬಂದ ಪ್ರಶ್ನಗಳನ್ನು ಕೇಳುವ ಬಗ್ಗೆಯೂ, ಮತ್ತು ಇತರ ರೀತಿಯಿಂದಲೂ ಹೆಚ್ಚಿಗೆ ಸ್ವಾತಂತ್ರ್ಯವನ್ನು ಕೊಟ್ಟಲ್ಲಿ ಅವರಲ್ಲಿ ವಾಚಾಲತೆಯು ಸಹಜವಾಗುವದು. ಆದ್ದರಿಂದ ಕೆಲ ಕೆಲವುವೇಳೆ ಈಪ್ರಕಾರದಿಂದ ಶಿಕ್ಷಕರು ಬಾಲಕರ ಕೂಡ ಸಲಿಗೆಯಿಂದ ಮಾತಾಡುವ ರೂಢಿಯನ್ನು ಇಡಬೇಕು. ಸಲಿಗೆಯಿಂದ ಅಂದರೆ ಹುಡುಗರನ್ನು ಅಸಭ್ಯ ರೀತಿಯಿಂದ ನಡೆಯಗೊಡಬೇಕು ಎಂಬರ್ಥವಲ್ಲ. ಅವರು ತಮ್ಮ ತಮ್ಮೊಳಗೆ ಯಾವಪ್ರಕಾರ ಮನಸ್ಸು ಬಿಚ್ಚಿ ಮಾತಾಡುತ್ತಿರುವರೋ ಅದೇ ಪ್ರಕಾರ ಪ್ರತಿಬಂಧವಿಲ್ಲದೆ ಶಿಕ್ಷಕನಕೂಡ ಮಾತಾಡಬೇಕು. ಎಂಬದೇ ಇದರ ಉದ್ದೇಶವು.

ಶಬ್ದಸಂಗ್ರಹಗಳ ಕೊರತೆಯನ್ನು ಪೂರಯಿಸುವದು, ಬಾಲಕರ ಉಚ್ಚಾರದೋಷಗಳನ್ನು ತಿದ್ದುವದು ಅದನಂತರ ಅವರ ಮಾತಿನಲ್ಲಿ ಧ್ವನಿಯುತಕ್ಕ ಏರಿಳಿತಗಳನ್ನು ಹುಟ್ಟಿಸಿ ಮಾತಾಡುವಂತೆ ಕಲಿಸುವದು ಒಂದು ಮಹತ್ವದ ಕರ್ತವ್ಯವಾಗಿರುತ್ತದೆ. ಈ ಕೆಲಸಕ್ಕಾಗಿ ಶಿಕ್ಷಕರು ಸುಲಭವಾದ ವಿಷಯಗಳುಳ್ಳ ಸಂಭಾಷಣೆಗಳನ್ನು ಪಾಠ ಮಾಡಿಸಬಹುದು. ಪ್ರಾಸಯುಕ್ತ ಕೆಲವು ಸಣ್ಣ ಸಣ್ಣ ಹಾಡುಗಳು ನುಡಿಗಳು ಇವುಗಳನ್ನು ಕಲಿಸುವದರಿಂದಾದರೂ ಈ ಕೆಲಸವು ಸಾಧ್ಯವಾಗುವದು. ಸಂಭಾಷಣೆಗಳನ್ನು ಕಲಿಸುವದರಿಂದ ನಟಿಸುವ ಸ್ವಭಾವವು ಬರುತ್ತದೆಂದು ಕೆಲವರ ಆಕ್ಷೇಪವಿರಬಹುದು. ಆದರೆ ಹುಡುಗರಲ್ಲಿ ಸಹಾನುಭೂತಿಯನ್ನು ಹುಟ್ಟಿಸಬೇಕಾದರೆ, ಪರರ ಮನೋಭಾವಗಳನ್ನು ಕಲ್ಪಿಸುವ ಶಕ್ತಿಯು ನಟನದಿಂದ ಸಹಜವಾಗಿ ಬೆಳೆಯುತ್ತದೆಂಬ ಮಾತು ನಿರ್ವಿವಾದವಾದದ್ದು. ಆದರೆ ನಾವು ಮೇಲೆ ಹೇಳಿದಂತೆ ನಾಟಕದ ವಿಷಯವು ಹುಡುಗರಿಗೆ ತಿಳಿಯುವಂಥಾದ್ದೂ, ಯೋಗ್ಯವಾದದ್ದೂ ಮಾತ್ರ ಇರತಕ್ಕದ್ದು.

ಪುಸ್ತಕಗಳ ವಿಷಯಕ್ಕೆ ಅಭಿಪ್ರಾಯ.

ಗದಗಿನಲ್ಲಿ ಪ್ರಸಿದ್ಧವಾಗುತ್ತಿರುವ **ಮಹಿಳಾ** ಎಂಬ ಮಾಸಪತ್ರಿಕೆಯು ಅದರ ಸಂಪಾದಕರಾದ ಚನ್ನಬಸವಯ್ಯಾ ರಾಚಯ್ಯಾ ಚಂಡೂರಮಠ ಎಂಬವರಿಂದ ನಮ್ಮ ಬಿಡೆಗೆ ಬಂದಿರುತ್ತದೆ. ಇದರ ಹೆಸರಿನ ತಕ್ಕಂತೆ ಈ ಮಾಸಪತ್ರಿಕೆಯೊಳಗಿನ ಲೇಖಗಳು ಸ್ತ್ರೀಯರ ಅಭ್ಯುದಯಕ್ಕಾಗಿ ಬರೆಯಲ್ಪಟ್ಟಿರುತ್ತವೆ.

ಉತ್ತರಕರ್ನಾಟಕದಲ್ಲಿ ಗಂಡಸರ ಬಗ್ಗೆಯೇ ಎಂದು ಪ್ರಸಿದ್ಧವಾಗುತ್ತಿರುವ ಮಾಸಪತ್ರಿಕೆಗಳು ತೀರಸ್ವಲ್ಪ ಇರುವಾಗ ಹೆಂಗಸರ ದೆಸೆಯಿಂದ ಒಂದು ಸ್ವತಂತ್ರವಾದ ಮಾಸಪತ್ರಿಕೆಯು ಹೊರಟದ್ದನ್ನು ನೋಡಿ ನಮಗೆ ಬಹಳ ಆನಂದವೆನಿಸುತ್ತದೆ.

ಸದ್ಯದ ಸ್ಥಿತಿಯಲ್ಲಿ ಹಿಂದೂಸ್ತ್ರೀಯರು ಧರ್ಮಶ್ರದ್ಧೆಯುಳ್ಳವರು, ತಮ್ಮ ಗಂಡಂದಿರಿಗೆ ವಿಧೇಯರು, ಮಕ್ಕಳ ಆರೈಕೆಯ ವಿಷಯವಾಗಿ ಶ್ರಮಪಡತಕ್ಕವರು ಈ ಮುಂತಾದ ಗುಣಗಳಿಂದ ಜಗತ್ಪ್ರಸಿದ್ಧರಾಗಿರುತ್ತಾರೆ. ಆದರೆ ಈಗಿನ ಬದಲಾದ ಪರಿಸ್ಥಿತಿಯಲ್ಲಿ ಜಗತ್ತಿನ ಸಾಮಾನ್ಯ ಜ್ಞಾನವಿಲ್ಲದ್ದರಿಂದ ಅವರು ಧರ್ಮ, ದಾಂಪತ್ಯ ಕುಟುಂಬ ಸಂಬಂಧವಾದ ಕರ್ತವ್ಯಗಳನ್ನು ಪರಂಪರೆಯಿಂದ ಬಂದ ಜ್ಞಾನದಿಂದ ಪೂರ್ಣವಾಗಿ ಜರುಗಿಸಲಿಕ್ಕೆ ತಕ್ಕನರಾಗುವದಿಲ್ಲ. ಹಿಂದುಸ್ಥಾನದ ಜನರ ಕುಟುಂಬದ ಸ್ಥಿತಿಯಲ್ಲಿಯೂ, ರಾಷ್ಟ್ರೀಯ ಸಾಮಾಜಿಕ ಸ್ಥಿತಿಗಳಲ್ಲಿಯೂ ಬಹಳ ಬದಲಾವಣೆಯಾಗಿದೆ. ಚಿಕ್ಕಮಕ್ಕಳನ್ನು ಜೋಪಾನಮಾಡಿ ಅವರಿಗೆ ಕೆಲವು ಮಟ್ಟಿಗೆ ಗೃಹಶಿಕ್ಷಣವನ್ನು ಕೊಟ್ಟು ನೀತಿವಂತರನ್ನಾಗಿ ಮಾಡುವ ಭಾರವು ಈಗಿನ ತಾಯಂದಿರಮೇಲೆ ಬಹಳವಾಗಿ ಬಂದಿದೆ. ಈ ತಾಯಂದಿರಿಗೆ ಸದ್ಯದ ಪರಿಸ್ಥಿತಿಯ ಜ್ಞಾನವು ಇಲ್ಲದೆ ಇದ್ದರೆ ಅವರು ತಮ್ಮ ಮಕ್ಕಳನ್ನು ತಕ್ಕ ನಾಗರಿಕರನ್ನಾಗಿ ಮಾಡಲಿಕ್ಕೆ ಸಮರ್ಥರಾಗಲಾರರು. ತಮ್ಮ ಗಂಡದಿರ ವಿಚಾರಗಳಲ್ಲಿ ಆದ ಬದಲಾವಣೆಗಳನ್ನು ತಿಳಿದು ಅವರ ಕೂಡ ಯೋಗ್ಯರೀತಿಯಿಂದ ವರ್ತಿಸಿ ಮಾಡುವದಕ್ಕೂ ಜಗತ್ತಿನ ಸಾಮಾನ್ಯ ಮಾಹಿತಿಯು ಸ್ತ್ರೀಯರಿಗೆ ಇರುವದು ಅವಶ್ಯವಾಗಿರುತ್ತದೆ. ಅದರಿಂದ ಮಹಿಳಾದಂಥ ಅನೇಕ ಮಾಸಪುಸ್ತಕಗಳ ವಾಚನದಿಂದ ಸ್ತ್ರೀಯರಿಗೆ ಈ ಜ್ಞಾನವು ದೊರಕಬೇಕಾಗಿದೆ. ಈ ಕಾರಣದಿಂದ ಈ ಮಾಸಪುಸ್ತಕವು ದೀರ್ಘಾಯುಷ್ಯವಾಗಲೆಂದು ನಾವು ಹರಸುತ್ತೇವೆ.

ದೇವೀಹೊಸೂರ ಒಕ್ಕಲತನದ ಶಾಲೆಯು

ಧಾರವಾಡ ಜಿಲ್ಲಾ ದೇವೀಹೊಸೂರ್ ಗ್ರಾಮದಲ್ಲಿ ಸರಕಾರದವರು ಒಕ್ಕಲಿಗರ ವಿದ್ಯಾರ್ಥಿಗಳಿಗೋಸ್ಕರ ಒಕ್ಕಲತನದ ಶಾಲೆಯನ್ನು ಸ್ಥಾಪಿಸಿದ್ದು, ಅಲ್ಲಿ ಕಲಿಯುವ ಹುಡುಗರಿಗೆ ಸದ ಮತ್ತು ಊಟದ ವ್ಯವಸ್ಥೆಯು ಚನ್ನಾಗಿರುವದು. ಎಲ್ಲ ಜಾತಿಯ ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಕಲಿಯಬಹುದು. ಉಮೇದವಾರರು ಮೇ ತಿಂಗಳ ಗಿನೇ ತಾರೀಖಿನೊಳಗಾಗಿ ಮೆ. ಡೆಪೂಟಿ ಡಾಯರೆಕ್ಟರ ಸಾಹೇಬ ಶೇತಕಿಖಾತೆ ದಕ್ಷಿಣ ಇವರ ಕಡೆಗಾಗಲಿ, ಇಲ್ಲವೆ ಸದರ ಶಾಲೆಯ ಹೆಡ್‌ಮಾಸ್ತರ ಮ. ರಾ. ರಾಮನಗೌಡ ಹುಲಕೋಟಿ ಇವರ ಕಡೆಗಾಗಲಿ ಅರ್ಜಿಯನ್ನು ಕಳಿಸಬೇಕು. ಎಂದು ಸದರ ಶಾಲೆ ಹೆಡ್ಡಮಾಸ್ತರರು ಶಾಲಾಪತ್ರಿಕದಲ್ಲಿ ಮುದ್ರಿಸುವ ಬಗ್ಗೆ ಜಾಹೀರಾತು ಕಳಿಸಿರುವ ವಿಶೇಷ ಮಾಹಿತಿಯನ್ನು ಅವರಿಗೆ ಪತ್ರದ್ವಾರದಿಂದ ಕೇಳಿ ತಿಳಿದುಕೊಳ್ಳಬಹುದು.

ಬೇರೆ ಬೇರೆ ಪ್ರತಿಯು ಶಿಕ್ಷಣ.



ಪ್ರಾಥಮಿಕ ಶಿಕ್ಷಣ:–ಪ್ರಾಚೀನ ಹಿಂದುಸ್ತಾನದಲ್ಲಿ ಮಕ್ಕಳು ತಂದೆಯ ಉದ್ಯೋಗವನ್ನೇ ಕೈಕೊಳ್ಳುತ್ತಿದ್ದರು. ಇದರಿಂದ ಪ್ರತಿಯೊಬ್ಬ ಹುಡುಗನಿಗೆ ಮುಂದೆ ತಾನು ದೊಡ್ಡವನಾದಾಗ ಮಾಡತಕ್ಕ ಕೆಲಸದ ಶಿಕ್ಷಣವು ಚಿಕ್ಕಂದಿನಲ್ಲಿ ಮನೆಯಲ್ಲಿಯೇ ದೊರೆಯುತ್ತಿತ್ತು. ಆದ್ದರಿಂದ ಈಗಿನಂಥ ಪ್ರಾಥಮಿಕ ಶಾಲೆಗಳು ಪ್ರಾಚೀನ ಕಾಲದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಆದರೆ **"ಲಲಿತ ವಿಸ್ತಾರ"**ವೆಂಬ ಗ್ರಂಥದಲ್ಲಿ ಬುದ್ಧನು ಕ್ರಿಸ್ತೋತ್ತರಕ್ಕೆ ಪೂರ್ವದಲ್ಲಿ ೬ನೆಯ ಶತಮಾನದಲ್ಲಿ ತಾನು ಬರಹವನ್ನೂ ಲೆಕ್ಕ ಮಾಡುವದನ್ನೂ ಚೆನ್ನಾಗಿ ಅಭ್ಯಾಸಿಸುವದಕ್ಕಾಗಿಯೂ, ಸಹಸ್ರಾರು ಹುಡುಗರನ್ನು ಸತ್ಯ ಮಾರ್ಗಕ್ಕೆ ತರುವದಕ್ಕಾಗಿಯೂ 'ಬರಹದ ಶಾಲೆಗೆ' ಹೋಗುತ್ತಿದ್ದನೆಂದು ಉಲ್ಲೇಖವಿದೆ. ಇದರ ಮೇಲಿಂದ ಆ ಕಾಲದಲ್ಲಿ ಪ್ರಾಥಮಿಕ ಶಿಕ್ಷಣದ ಶಾಲೆಗಳು ಇದ್ದವೆಂದು ತಿಳಿಯುತ್ತವೆ ಇಂಥ ಶಾಲೆಗಳಲ್ಲಿ ಓದುವದಕ್ಕೂ ಬರೆಯುವದಕ್ಕೂ ಲೆಕ್ಕ ಮಾಡುವದಕ್ಕೂ ಕಲಿಸುತ್ತಿದ್ದರಲ್ಲದೆ ನೀತಿಯ ತತ್ವಗಳನ್ನೂ ಕಲಿಸುತ್ತಿದ್ದರು. ಕ್ರಿಸ್ತೋ ಶಕದ ಸ್ವಾರಂಭದಿಂದ ಶಾಲೆಗಳಲ್ಲಿ ಕಥೆಯ ರೂಪದಿಂದ ನೀತಿಶಾಸ್ತ್ರವನ್ನು ಕಲಿಸುತ್ತಿದ್ದರೆಂದು ಕಂಡುಬರುವದು. ಇವುಗಳಲ್ಲಿ ಮುಖ್ಯವಾದದ್ದು ಪಂಚತಂತ್ರವು. ಪ್ರಾಥಮಿಕ ಶಿಕ್ಷಣದ ಶಾಲೆಗಳನ್ನು ಸಾಧಾರಣವಾಗಿ ಜೈಲಲ್ಲಿಯೇ ಗಿಡಗಳಡಿಯಲ್ಲಾಗಲಿ ಮಳೆಗಾಲದಲ್ಲಿ ಚಪ್ಪರದ ಗುಡಿಸಲುಗಳಲ್ಲಾಗಲಿ ಹಾಕುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಆಶ್ಚರ್ಯದ ಮಾತು ನೆನಪಿಡುವಂತಿದೆ. ಅದೇನಂದರೆ:— ಬಾಲಕರಿಗೆ ಅಕ್ಷರಗಳನ್ನು ಕಲಿಸುವ ಒಂದು ಆಧುನಿಕ ಪದ್ಧತಿಯು ಆಗ ಪ್ರಚಾರದಲ್ಲಿತ್ತೆಂದು ಕಾಣುತ್ತದೆ. ಆಗ್ಗೆ ಪ್ರತಿಯೊಂದು ಅಕ್ಷರವನ್ನು ಆ ಅಕ್ಷರದಿಂದ ಪ್ರಾರಂಭವಾಗುವ ಒಂದು ವಾಕ್ಯದೊಂದಿಗೆ ಶಿಕ್ಷಕರು ಕಲಿಸುತ್ತಿದ್ದರೆಂದು ತಿಳಿಯಬರುತ್ತದೆ. ಅರ್ವಾಚೀನ ಕಾಲದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವರ್ಗಗಳ ಮೇಲಿನ ವಿದ್ಯಾರ್ಥಿಗಳನ್ನು ಕೆಳಗಿನ ವರ್ಗಗಳ ವಿದ್ಯಾರ್ಥಿಗಳಿಗೆ ಕಲಿಸಲಿಕ್ಕೆ ಹಚ್ಚುತ್ತಿದ್ದರು. ಈಗ 'ಮಾಂಟಿಸೋರಿಯಲ್ ಸಿಸ್ಟಮ್' ಎಂದು ಕರೆಯಲ್ಪಡುವ ಬಹಳ ಖರ್ಚಿಲ್ಲದೆ ಶಾಲೆಯನ್ನು ನಡಿಸುವ ಈ ಪದ್ಧತಿಯನ್ನು ಹಿಂದುಸ್ತಾನದಲ್ಲಿ ನೋಡಿ, ಅದನ್ನು ಆನ್ಡ್ರ್ರಬೆಲ್ ಸಾಹೇಬರು ಇಂಗ್ಲಂಡದೊಳಗೆ ಪ್ರಚಾರದಲ್ಲಿ ತಂದರು.

ಪ್ರಾಚೀನ ಹಿಂದುಸ್ಥಾನದ ಆರ್ಯರ ಶಿಕ್ಷಣದ ಇತಿಹಾಸ.

(ಗಗಗಟ ವಿಶಂಬರ ತಿಂಗಳಿಂದ ಮುಂದೆ ಸಾಗಿದ್ದು.)

ದುಯ್ಯಮ ಪ್ರತಿಯ ಶಾಲೆಗಳ ಆರಂಭವೂ ಬೆಳವಣಿಗೆಯೂ.

ಬಹಳ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಶಾಲೆಗಳಿದ್ದಿಲ್ಲ. ಪ್ರತಿಯೊಂದು ಮನೆತನದೊಳಗಿನ ಯಜಮಾನನು ಋಷಿಯಾಗಿದ್ದು ಸೂಕ್ತಗಳನ್ನು ರಚಿಸಿ ಆ ಸೂಕ್ತಗಳನ್ನೇ ತನ್ನ ತರುವಾಯ ತನ್ನ ಮಕ್ಕಳಿಗೆ ಕಲಿಸುತ್ತಿದ್ದನು. ಕೆಲವು ಕಾಲದನಂತರ ಯಜ್ಞಯಾಗಾದಿ ಧಾರ್ಮಿಕ ಕ್ರಿಯೆಗಳು ಅತಿ ಹೊಡಕುಳ್ಳವಾಗಿ ಸೂಕ್ತಗಳ ಮೂಲ ಅರ್ಥವು ಜನರಿಗೆ ತಿಳಿಯದಂತೆ ಆದ್ದರಿಂದ ಅವುಗಳ ಅರ್ಥವನ್ನು ಸ್ಥಿರಪಡಿಸಿ ಕಾಯ್ದಿಡುವದಕ್ಕೆ ಉಪಾಯಗಳನ್ನು ಕಲ್ಪಿಸಬೇಕಾಯಿತು. ಈ ಉದ್ದೇಶವು ಕೈಗೂಡುವದಕ್ಕಾಗಿ ಒಂದೊಂದು ವಿಷಯದಲ್ಲಿ ನಿಷ್ಣಾತರಾದವರು ತಮ್ಮ ಸುತ್ತಲಿನ ಅಶಿಕ್ಷಿತ ಜನರಿಗೆ ಶಿಕ್ಷಣವನ್ನು ಕೊಡಬೇಕಾಯಿತು. ಇದರಿಂದ ಇಂಥವರ ಸಹವಾಸದಲ್ಲಿ ಸ್ವಲ್ಪ ಕಾಲದಲ್ಲಿಯೇ ಅನೇಕ ಶಿಷ್ಯಮಂಡಲಗಳುಂಟಾದವು. ಈ ಶಿಷ್ಯರು ವಿದ್ಯಾವಿಶೇಷದ ವ್ಯುತ್ಪತ್ತಿಯಿಂದ ಉತ್ಕೃಷ್ಟರಾಗಿ ಒಬ್ಬ ಗುರುವಿನ ಬಳಿಯಿಂದ ಮತ್ತೊಬ್ಬ ಗುರುವಿನ ಒಳಿಗೆ ಸಂಚಾರ ಮಾಡುತ್ತಿದ್ದರು. ಕೆಲವು ವಿದ್ಯಾಸ್ಥಾನಗಳು ವಾನಪ್ರಸ್ಥಾಶ್ರಮಿಗಳಾದ ಪಾಂಡಿತ್ಯದಲ್ಲಿ ಹೆಸರಾದಂಥ ಬ್ರಾಹ್ಮಣರಿಂದ ಸ್ಥಾಪಿಸಲ್ಪಟ್ಟವು. ಇಂಥ ಸಂಸ್ಥೆಗಳಲ್ಲದೆ ನಾಗರಿಕತೆಯಲ್ಲಿ ಮುಂದುವರಿದವರೂ ವಿದ್ಯಾವಿಶಾರದರೂ ಆದ ಅರಸರ ಓಲಗಗಳಲ್ಲಿ ಧರ್ಮಗ್ರಂಥಗಳ ಅಧ್ಯಯನಕ್ಕಾಗಿ ದೊಡ್ಡ ದೊಡ್ಡ ಶಾಲೆಗಳಿರುತ್ತಿದ್ದವು. ಈ ಶಾಲೆಗಳಲ್ಲಿ ಆಧ್ಯಾತ್ಮಿಕ ಹಾಗೂ ಲೌಕಿಕ ಎರಡೂ ವಿಷಯಗಳನ್ನು ಕಲಿಸುತ್ತಿದ್ದರು. ಹುಡುಗನ ಬಾಲ್ಯದಲ್ಲಿ ಅವನಿಗೆ ಈ ಎರಡೂ ಪ್ರಕಾರದ ವಿಷಯಗಳನ್ನು ಅವನ ದೀಕ್ಷಾಗುರುವೇ ಕಲಿಸುತ್ತಿದ್ದನು. ಆದರೆ ಈ ದೀಕ್ಷಾಗುರುವಿನ ಕೆಲಸಗಳನ್ನು ಮುಂದೆ ದೀಕ್ಷಾಗುರುವು ಶಿಕ್ಷಾಗುರುವು ಎಂದು ಇಬ್ಬರು ಮಾಡಬೇಕಾಯಿತು. ದೀಕ್ಷಾಗುರುವು, ಹುಡುಗರಿಗೆ ಧರ್ಮದ ರಹಸ್ಯವನ್ನು ಉಪದೇಶ ಮಾಡುತ್ತಿದ್ದನು; ಶಿಕ್ಷಾಗುರುವು ಉಳಿದ ಲೌಕಿಕ ವಿಷಯಗಳನ್ನೆಲ್ಲ ಕಲಿಸುತ್ತಿದ್ದನು.

(ಮುಂದೆ ಸಾಗುವದು.)

S. R. Tatti.

ಸ್ಲಾಯಿಡ ಅಥವಾ ಹಸ್ತಶಿಕ್ಷಣ.

(ನವಂಬರ ೧೯೧೨ನೇ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಮಡಿಚುವದು:— ಪೇನ್ಸಿಲಿನಿಂದ ತೆಗೆದ ಟಿಮ್ ಟಿಮ್ ರೇಕ್ಷೆಯ ಬದಿಯಲ್ಲಿ ಸರಿಯಾಗಿ ಭೂಟುಗಟ್ಟಿಕೆಯನ್ನಿಟ್ಟು ಹಿಂದೆ ಹೇಳಿದಂತೆ ಅದನ್ನು ಗಟ್ಟಿಯಾಗಿ ಹಿಡಿಯ ಬೇಕು. ಮಡಿಚಬಹುದಾದ ಭಾಗವನ್ನು ಒಲಗ್ಯೆಯಿಂದ ಎತ್ತಿ ಹೆಬ್ಬಟ್ಟು ತಳದಲ್ಲಿ ರುವಂತೆ ಮಾಡಿ, ಸಾವಕಾಶವಾಗಿಯೂ, ಕಾಳಜಿಪೂರ್ವಕವಾಗಿಯೂ ಆ ಕಾಗ ಭಾಗವನ್ನು ಅದಕ್ಕೆ ಲಂಬವಾಗುವವರೆಗೆ ಮಣಿಸಬೇಕು. ಹೆಬ್ಬಟ್ಟಿನ ಉಗುರಿ ಭೂಟಕಟ್ಟಿಗೆಗೆ ಸಮಾಂತರವಾಗಿ ಕಾಗದವನ್ನು ಸರಿಯಾಗಿ ಒತ್ತಿ, ಲಂಬವಾಗಿ ರುವಂತೆ ಮಾಡಬೇಕು. ಅನಂತರ ಭೂಟುಗಟ್ಟಿಗೆಯನ್ನು ತೆಗೆದುಬಿಡಬೇಕು. ಆ ತಿಯಲ್ಲಿದ್ದ ಕಾಗದವನ್ನು ಮತ್ತೆ ಮಣಿಸಿ ಉಗುರಿನಿಂದ ಮೂರು ನಾಲ್ಕು ಸಾರೆ ಯಾಗಿ ಒತ್ತಿ ವ್ಯವಸ್ಥಿತವಾದ ಮಡಿಕೆಯನ್ನು ಹಾಕಬೇಕು. ಮಡಿಚುವದು ಬಹಳ ಹತ್ವದ ಕೃತಿಯು. ತುಸು ನಿಷ್ಕಾಳಜಿಯುಂಟಾದರೆ ಮಡಿಕೆಯು ಕೆಟ್ಟು ತುದಿಯಲ್ಲಿ ರುಬರಕಾಗುವದು. ಉಗುರನ್ನು ಉಪಯೋಗಿಸದೆ ಬಟ್ಟಿನ ಬೇರೆ ಭಾಗವನ್ನು ಉಪ ಯೋಗಿಸಿದರೆ ಕಾಗದವು ಹೊಲಸಾಗಿ ಹೋಗುವದು. ಬಹಳ ದಪ್ಪ ಕಾಗದವನ್ನು ಮಡಿಚುವದಿದ್ದರೆ ಚಾಕುವಿನ ಮೊಂಡಾದ ತುದಿಯಿಂದ ಮಡಿಚುವ ಭಾಗದಲ್ಲಿ ಹಗು ವಾಗಿ ಎಳೆದು ಮಡಿಚುವದಕ್ಕೆ ಸುಲಭವಾಗುವಂತೆ ಮಾಡಿಕೊಳ್ಳಬೇಕು.

ಕತ್ತರಿಸುವದು:— ಕಾಗದವನ್ನು ಮೊದಲಿಟ್ಟಂತೆ ಇಡಬೇಕು. ಅದನ್ನು ಎಡಗೆ ಯ್ಯಲ್ಲಿ ತೆಗೆದುಕೊಂಡು ಹೆಬ್ಬಟ್ಟು ಮೇಲೆ ಬರುವಂತೆಯೂ ಉಳಿದ ನಾಲ್ಕು ಬಟ್ಟುಗಳು ಳಗೆ ಬರುವಂತೆಯೂ ಗಟ್ಟಿಯಾಗಿ ಹಿಡಿಯಬೇಕು. ಬಲಭಾಗದಲ್ಲಿರುವ ಕಳ್ಳು ರೇಷೆ ುಲ್ಲಿಯೇ ಕೆಳಗಿನಿಂದ ಮೇಲಕ್ಕೆ ಕತ್ತರಿಸುತ್ತ ಹೋಗಬೇಕು. ಕಾಗದವು ಉದ್ದವಿದ್ದರೆ ಾಗು ಬಹಳ ತಿಳುವಾಗಿದ್ದರೆ ಎಡಗ್ಯೆಯನ್ನು ಆಗಾಗ್ಗೆ ಬದಲು ಮಾಡಿ ಸರಿಯಾದ ಳದಲ್ಲಿ ಹಿಡಿಯಬೇಕು. ಕತ್ತರಿಸಬಹುದಾದ ಎಲ್ಲ ಬಾಹ್ಯ ರೇಷೆಗಳು ಮುಗಿಯುವ ರೆಗೆ ಕಾಗದವನ್ನು ತಿರುಗಿಸುತ್ತ ಹೋಗಿ, ಸುತ್ತಲೂ ಕತ್ತರಿಸಬೇಕು. ಅನಂತರ ನಃ ಕಾಗದವನ್ನು ಮೊದಲಿದ್ದಂತೆ ಇಡಬೇಕು. ಕಾಗದದ ಒಳಭಾಗದಲ್ಲಿ ಕತ್ತರಿಸು ದಿದ್ದರೆ ಯಾವಾಗಲೂ ತಳರೇಖೆಯಿಂದಲೇ ಪ್ರಾರಂಭಿಸಬೇಕು. ಅಲ್ಲಿ ಕತ್ತರಿಸಬಹು ಾದ ಎಲ್ಲ ಭಾಗಗಳು ಮುಗಿದ ಕೂಡಲೆ ಉಳಿದ ಭಾಗಗಳಲ್ಲಿಯಾದರೂ ಇದೇ ಕಾರ ಮಾಡಬೇಕು. ಮೂಲೆಯಲ್ಲಿ ಕತ್ತರಿಯನ್ನು ಹೊರಳಿಸಿ ಹಾಗೆಯೇ ಸುತ್ತಲೂ ಕತ್ತರಿಸಬಾರದು. ಪ್ರತಿಯೊಂದು ಭಾಗವನ್ನು ಪ್ರಾರಂಭದಿಂದ ಕೊನೆಯವರೆಗೆ ಪೂರ್ಣವಾಗಿ ಕತ್ತರಿಸಿ ಆ ಕಾಗದದ ತುಂಡನ್ನು ಹೋಪಿಸ ಬಲಭಾಗದ ಮೇಲಿನ

ಮೂಲೆಯಲ್ಲಿ ಇಡುತ್ತ ಹೋಗಬೇಕು. ಅರ್ಧ ವರ್ತುಲಗಳನ್ನು ಕತ್ತರಿಸುವದಿದ್ದಾಗ ಮಧ್ಯದಲ್ಲಿ ಸುರುವು ಮಾಡಿ, ಕಾಗದದ ಬದಿಯವರೆಗೆ ಕತ್ತರಿಸುತ್ತ ಬರಬೇಕು.

ತೂತು ತೆಗೆಯುವದು:— ಆಕೃತಿಯಲ್ಲಿ ತೂತು ತೆಗೆಯುವ ಸ್ಥಳಗಳಲ್ಲಿ ಚುಂದುಗಲಿಂದ ಗುರ್ತಿಸಿರಬೇಕು. ಈ ಚಿಂದುವೇ ಆ ಪಂಚಿದ ವರ್ತುಳದ ಮಧ್ಯಚಿಂದುವೆಂದು ತಿಳಿದು ಅದನ್ನು ಅದರ ಮೇಲಿಟ್ಟು, ಸಾವಕಾಶವಾಗಿ ಒತ್ತಿದರೆ ಸರಿಯಾದ ತೂತು ಬೀಳುವದು. ಈ ತರದ ಎಲ್ಲ ತೂತುಗಳು ಕಾಗದದ ತುದಿಗಳಿಂದ ½ ಅಂತರದ ಮೇಲೆ ಯಾವಾಗಲೂ ಇರಬೇಕು.

ದಾರದಿಂದ ಕಟ್ಟುವದು:— ತೂತು ತೆಗೆದ ಭಾಗಗಳಲ್ಲಿ ಬೇರೆ ಬೇರೆ ಬಣ್ಣದ ದಾರಗಳಿಂದ ಕಟ್ಟಬೇಕು. ಅದಕ್ಕೆ ಬೇಕಾದಷ್ಟೇ ಉದ್ದವಾದ ದಾರದ ತುಂಡು ಪ್ರತಿಯೊಬ್ಬ ಹುಡುಗನಿಗೆ ಕೊಡಬೇಕು. ಬೇರೆ ಬೇರೆ ತರದಿಂದ ಹಾಕಬಹುದಾದ ಗಂಟುಗಳನ್ನು ಹುಡುಗರಿಂದ ಕೇಳಿಕೊಂಡು ಅವುಗಳಲ್ಲಿ ತೀರ ಸುಲಭವಾದ ಅಂದವಾಗಿ ತೋರುವಂಥಾದ್ದನ್ನು ಆರಿಸಿಕೊಂಡು ಅದರಂತೆ ಕಟ್ಟಲಿಕ್ಕೆ ಹೇಳಬೇಕು.

ಅಂಟಿಸುವದು:— ಮೊದಲು ಮಾದರಿಯನ್ನು ಅಂಟಿಸುವದಕ್ಕೆ ಉಪಯೋಗಿಸಿದ್ದ ಕಾಗದದ ಭಾಗಗಳನ್ನು ಒಳಗಡೆಯಲ್ಲಿ ಬರುವಂತೆ ಮಾಡಿಕೊಂಡು, ಅಂಟಿಸಬಹುದಾದ ಭಾಗಗಳನ್ನು ಗೊತ್ತುಮಾಡಿಕೊಳ್ಳಬೇಕು. ಅದರ ಎಲ್ಲ ಭಾಗದಲ್ಲಿ ಅಂಟನ್ನು ಸಮನಾಗಿ ಹಚ್ಚಿ, ಸರಿಯಾಗಿ ಆ ಭಾಗವನ್ನು ಅಂಟಿಸಬೇಕು. ಉಗುರಿನಿಂದ ಅಲ್ಲಲ್ಲಿ ಸರಿಮಾಡಬಹುದು. ಕೆಲವೆಡೆಯಲ್ಲಿ ಭೂಟುಗಟ್ಟಿಕೆಯಿಂದ ಒತ್ತಿ ಸರಿಮಾಡಬೇಕು. ಅಂಟು ಹಚ್ಚಿದ ಭಾಗವನ್ನು ತೀವ್ರ ಅಂಟಿಸದೆ ಹಾಗೆಯೇ ಬಿಡಬಾರದು.

ಸಾಮಾನ್ಯ ಸೂಚನೆಗಳು:— ವಾರದಲ್ಲಿ ಸ್ಲಾಯಿಡ್ ಪಾಠದ ಬಗ್ಗೆ ೨ ತಾಸು (period) ಗಳನ್ನು ಬಿಟ್ಟುಕೊಳ್ಳಬೇಕು. ಮೊದಲನೇ ವರ್ಷದ ಕೆಲಸ ಕಲಿಯುವವರೆಗೆ ೩೦ ನಿಮಿಟುಗಳ ಎರಡು ಅವಧಿಗಳು, ೨ ನೇ ವರ್ಷದವರಿಗೆ ೪೦ ನಿಮಿಟು, ೩ ನೇ ವರ್ಷದವರಿಗೆ ೫೦ ನಿಮಿಟು ಈ ಪ್ರಕಾರ ಪೇಳಿಯನ್ನು ಗೊತ್ತುಪಡಿಸಬಹುದು. ಮುಂಚಾಣಿಸ ತಾಸುಗಳಲ್ಲಿ ಮೊದಲನೆಯದೊಂದನ್ನು ಬಿಟ್ಟು ಉಳಿದೆರಡು ತಾಸುಗಳಿದ್ದರೆ ಬಹಳೇ ಒಳ್ಳೆಯದು. ಆಗ ವಿದ್ಯಾರ್ಥಿಗಳು ಕೆಲಸದ ಕಡೆಗೆ ಬಹಳ ಲಕ್ಷ ಕೊಡುವರು. ಹಾಗು ಕೊಟ್ಟ ಸೂಚನೆಗಳನ್ನು ಸರಿಯಾಗಿ ಲಕ್ಷದಲ್ಲಿ ತರುವರು. ಕೆಲಸವು ಸುರುವಾಗುವದಕ್ಕಿಂತ ಮೊದಲು ಎಲ್ಲ ಉಪಕರಣ ಹಾಗು ಆಯುಧಗಳ ಸಿದ್ಧತೆಯನ್ನು ಮಾಡಿಟ್ಟುಕೊಂಡಿರಬೇಕು. ಅಂದರೆ ಎಲ್ಲ ಸಾಮಾನುಗಳನ್ನು ಎಲ್ಲ ವಿದ್ಯಾರ್ಥಿಗಳಿಗೆ ಬಹಳ ಸ್ವಲ್ಪ ಕಾಲದಲ್ಲಿ ಕೊಡಲಿಕ್ಕೆ ಅನುಕೂಲವಾಗುವದು. ಪ್ರತಿಯೊಂದು ಸಾಲಿನಲ್ಲಿಯೂ ಮೊದಲನೆಯ ಪೀಟಿನ ಮೇಲೆ ಆ ಸಾಲಿನಲ್ಲಿ ಕೂಡ್ರತಕ್ಕ ಹುಡುಗರ ಸಂಖ್ಯೆಯಷ್ಟು ಭೂಟುಕಟ್ಟಿಗೆ, ಪೇನ್ಸಿಲು, ಕಂಪಾಸು, ತ್ರಿಕೋನಪಟ್ಟಿ, ಕತ್ತರಿ, ರಬ್ಬರು ಮುಂತಾದವುಗಳನ್ನು (ರಟ್ಟಿನಲ್ಲಿ ಬಿಲ್ಲಸೆ ಆ ಅರಿವೆಯಲ್ಲಿ ಮಾಡಿದ ಮನೆಗಳಲ್ಲಿ) ಇಟ್ಟಿರಬೇಕು. ಈ ಸಾಲುಗಳಲ್ಲಿ ಕುಳಿತ ಪ್ರತಿಯೊಬ್ಬ ವಿದ್ಯಾರ್ಥಿಯು ತನಗೆ ಬೇಕಾದ ಒಂದೊಂದು

ಆಯುಧವನ್ನು ತೆಗೆದುಕೊಂಡು ಮುಂದಿನವರಿಗೆ ಕೊಡುತ್ತ ಹೋಗಬೇಕು. ಹಾಗು ಕೆಲಸ ಮುಗಿದ ಬಳಿಕ ಕೊನೆಯ ವಿದ್ಯಾರ್ಥಿಯು ಅವುಗಳನ್ನು ಆಯಾ ರಟ್ಟುಗಳಲ್ಲಿ ಸೇರಿಸಿ, ಪುನಃ ಮೊದಲನೆಯವನ ಕಡೆಗೆ ಕೊಟ್ಟು ಕಳಿಸಬೇಕು. ಹಾಗೆ ಮಾಡಿದರೆ, ಏನೂ ಗೊಂದಲವಾಗದೆ ತುಸು ವೇಳೆಯಲ್ಲಿ ಸಾಮಾನು ಕೊಡುವ ಕೆಲಸವಾಗುವದು. ಕೆಲಸ ನಡೆಯದೆ ಇದ್ದ ವೇಳೆಯಲ್ಲಿ ಆಯುಧಗಳನ್ನು ಹಿಡಿಯಬೇಡಿರಿ ಎಂದು ಹೇಳಿರಬೇಕು. ಹಾಗು ಅದರಂತೆ ನಡಕೊಳ್ಳುವದಕ್ಕೂ, ವ್ಯವಸ್ಥಿತವಾಗಿ ಕೊಡುವದಕ್ಕೂ ಹೇಳಿಯೊವದೊಂದು ಸಂಗತಿಯನ್ನು ತಿಳಿಸಿಕೊಡುವ ವೇಳೆಯಲ್ಲಿ ಪೂರ್ಣ ಅವಧಾನವನ್ನು ಹೊರಕಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಬಹಳ ಚಿಕ್ಕವರಿರುವದರಿಂದ ಅನೇಕ ಸೂಚನೆಗಳನ್ನು ಒಮ್ಮೆಲೆ ಕೊಡಬಾರದು. ಯಾವದೊಂದು ಮಾಡತಕ್ಕ ಕೆಲಸವನ್ನು ಈ ರೀತಿಯಾಗಿ ಮಾಡಬೇಕೆಂಬದನ್ನು ಸುಲಭವಾದ ವಾಕ್ಯಗಳಿಂದ ಸಾವಕಾಶವಾಗಿ ಹೇಳಿದರೆ, ಮನಸಿನಲ್ಲಿ ಏನೂ ಗೊಂದಲವಾಗದೆ ಆಯಾ ಸ್ಥಾಯುಗಳಾದರೂ ಕೆಲಸ ಮಾಡುವದಕ್ಕೆ ಸಿದ್ಧವಾಗುವವು.

ಶಿಕ್ಷಕನು ಮಾಡಿದ ಮಾದರಿಗಳು ಹುಡುಗರ ಮುಂದೆ ಯಾವಾಗಲೂ ಇರಲಿಕ್ಕೇ ಬೇಕು. ಅದರ ಸಹಾಯದಿಂದಲೇ ಮಾಡತಕ್ಕ ಮಾದರಿಯು ಅಳತೆ ಮುಂತಾದವುಗಳನ್ನು ಹುಡುಗರಿಂದ ಹೊರಡಿಸಬೇಕು. ಮಾದರಿಯು ಆಕೃತಿಯನ್ನು ಕರೇ ಹಲಿಗೆಯ ಮೇಲೆ ಪಾಠದ ಅವಧಿಯಲ್ಲಿ ತೆಗೆಯುತ್ತ ಹೋಗಿ, ಪೂರ್ಣವಾಗಿ ಮುಗಿಸಿ, ಪರೀಕ್ಷಿಸಹಚ್ಚಿ, ಕತ್ತರಿಸುವದಕ್ಕೆ ಹೇಳಿದ ನಂತರ ದಾರದಿಂದ ಕಟ್ಟುವದಕ್ಕಾಗಲಿ, ಅಂಟಿಸುವದಕ್ಕಾಗಲಿ ಹೇಳಬೇಕು. ಮಾದರಿಯನ್ನು ತಯಾರಿಸುವದಕ್ಕಾಗಿ ಕೊಟ್ಟ ಕಾಗದದ ಉದ್ದವಿದ್ದ ಭಾಗವನ್ನು ಮೇಜಿನ ಮುಂಭಾಗಕ್ಕೆ ಸಮಾಂತರವಾಗಿ ಇಟ್ಟುಕೊಳ್ಳಬೇಕು. ನಂತರ ಮೇಲ್ಭಾಗ, ಕೆಳಭಾಗ, ಬಲ ಹಾಗು ಎಡಭಾಗಗಳೆಂದು ಆ ಕಾಗದದ ಅಂಚುಗಳಿಗೆ ಹೆಸರು ಕೊಡಬೇಕು. ಕಾಗದದ ಮೇಲೆ ಆಕೃತಿಯನ್ನು ತೆಗೆಯುವದು ಮುಗಿಯುವ ವರೆಗೆ ಅದರ ಸ್ಥಳಾಂತರವನ್ನು ಮಾಡಬಾರದು. ಯಾಕಂದರೆ ಎಡಬಲ ಮುಂತಃದ ಭಾಗಗಳು ಆಗ್ಗೆ ಬದಲಾಗುವವು. ಹಾಗು ಮುಂದಿನ ಕೆಲಸಕ್ಕೆ ತೊಂದರೆಯಾಗುವದಲ್ಲದೆ ವೇಳೆಯು ವ್ಯರ್ಥ ಹೋಗುವದು.

B. S. Purohit.

ಪತ್ರವ್ಯವಹಾರ.

ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ಕೋಅಪರೇಟಿವ ಕ್ರೆಡಿಟ ಸೊಸಾಯಿಟಿಯ ಅವಶ್ಯಕತೆಯು.

ಯಾವದೊಂದು ಕೆಲಸವನ್ನು ಅನೇಕ ಜನರು ಕೂಡಿ ಮಾಡುವದರಿಂದ ಶ್ರಮ ಭಾಗವಾಗುತ್ತದೆ; ಮತ್ತು ಪರಸ್ಪರ ಸ್ನೇಹದಿಂದ ಒಕ್ಕಟ್ಟು ಬೆಳೆಯುತ್ತದೆ. ಅದರಿಂದ

ನಾನಾತರದ ಪ್ರಯೋಜನವಾಗುತ್ತದೆ. ಈ ಸಂಗತಿಯನ್ನು ಲಕ್ಷ್ಯಕ್ಕೆ ತಂದು ಸುಧಾ
ರಣಾಪ್ರಿಯರೂ ಪ್ರಜಾವತ್ಸಲರೂ ಆದ ಸಾಮ್ರಾಜರು ಇತರ ದೇಶಗಳಂತೆ ಹಿಂದ
ಸ್ಥಾನದಲ್ಲಿಯೂ ಈ ತರದ ಸಂಘಗಳನ್ನು ಸ್ಥಾಪಿಸಬೇಕೆಂಬ ವಿಚಾರವನ್ನು ಅನೇಕ
ವರ್ಷಗಳಿಂದ ನಡೆಯಿಸಿ ಕೊನೆಗೆ ಸನ್ನ ೧೯೦೪ನೇ ಇಸವಿಯಲ್ಲಿ ಈ ಸಂಬಂಧದ
ಕಾಯಿದೆಯನ್ನು ಪಾಸುಮಾಡಿದರು. ಅಂದಿನಿಂದ ಇದುವರೆಗೆ ನಮ್ಮ ದೇಶದಲ್ಲಿ
೧೫–೧೬ ಸಾವಿರ ಸಂಘಗಳು ಸ್ಥಾಪಿಸಲ್ಪಟ್ಟಿರುವವು. ಆದರೂ ಜನಸಂಖ್ಯೆಯ ಮಾನ
ದಿಂದ ಇವು ಕಡಿಮೆಯಾಗಿರುವವು. ಇದು ಹೊರತು ಇದರ ಪ್ರಯೋಜನವು ಸಾಕಷ್ಟು
ಜನರಿಂದ ಮಾಡಿಕೊಳ್ಳಲ್ಪಡುವದಿಲ್ಲ. ಇದರ ಮೂಲ ಕಾರಣವನ್ನು ವಿಚಾರಿಸತಕ್ಕದ್ದು.

ಅಗಳವನ್ನು ಹಾರದವನು ಗಗನವನ್ನು ಹಾರಲಾರನು; ಎಳೆಸಸಿಯನ್ನು ಮಣಿಸು
ಬೇಕಾದತ್ತ ತಿರುಗಿಸಿಕೊಂಡು ನಮ್ಮ ಕೆಲಸವನ್ನು ಮಾಡಿಕೊಳ್ಳಬಹುದು; ಆದರೆ ಆ
ನ್ನು ಬಿಟ್ಟು ಬೆಳೆದು ಬಾಗಿದ ಮರವನ್ನು ಮಣಿಸುವದು ಕಠಿಣವೇ ಸರಿ. ಅಂದರೆ ನಿಚ್ಚ
ವಾಗಿ ನಮ್ಮಲ್ಲಿ ಸುಧಾರಣೆಯಾಗಬೇಕಾದರೆ ಈ ಸಂಘದ ಅಭಿರುಚಿಯನ್ನು ಸಣ್ಣ ಹುಡು
ಗರಿಗೆ ಕಾಣಿಸಿದರೆ "ಹುಟ್ಟಿದ ಚಾಳಿಗಟ್ಟ ಹತ್ತಿದರೂ ಬಿಡದು" ಎಂಬಂತೆ ಮುಂದೆ ಅವರು
ಯಾವ ಊರಿಗೆ ಹೋದರೂ ಇಂಥ ಸಂಘದಲ್ಲಿ ಸೇರಿಕೊಂಡು ತಮ್ಮ ಪ್ರಯೋಜನ
ವನ್ನು ಮಾಡಿಕೊಳ್ಳುವರು. ಕಳೆದ ೫೦-೬೦ ವರ್ಷಗಳಿಂದ ಭರದಿಂದ ನಡೆಯುತ್ತಿರುವ
ವಿದ್ಯಾಪ್ರಸಾರದಿಂದ ವಿದ್ಯೆಕಲಿಯುವದು ಸರಕಾರೀ ನೌಕರಿಗಾಗಿ, ಅದು ಸಿಗದಿದ್ದರೆ
ಕಲಿತದ್ದೆಲ್ಲ ವ್ಯರ್ಥವೆಂದು ಇನ್ನೂ ವಿದ್ಯಾರ್ಥಿಗಳಲ್ಲಿರುವ ತಪ್ಪು ತಿಳುವಳಿಕೆಯು ಇಲ್ಲದ
ತಾಗಿ, ಪ್ರೌಢಾವಸ್ಥೆಯಲ್ಲಿ ಪ್ರಪಂಚವನ್ನು ಚನ್ನಾಗಿ ಮಾಡಿಕೊಳ್ಳುವ ಮತ್ತು ಅಂಥ
ಜನರಲ್ಲಿ ಮುಂದರಿಯುವ ಚಟವು ಈ ಸಂಘದಿಂದ ಬೀಳುವದು. ಈ ವಿಚಾರಕ್ಕನು
ಗುಣವೇ ಸದ್ಯದ ಶಾಲಾಪಾಠಗಳಲ್ಲಿ ಕೃಷಿ, ಕೈಗಾರಿಕೆಗಳ ಸಲುವಾಗಿ ವಸ್ತುಪಾಠ
ಳನ್ನು ಸೇರಿಸಿದಂತೆ ಇಂಥ ಸಂಘದ ಅಮೂಲ್ಯವಾದ ಚಟವು ಸಹ ಹಸೀ ಮಣ್ಣಿನ
ಗೋಡೆಯಂತಿರುವ ಎಳೆಮಕ್ಕಳ ಬುದ್ಧಿಗೆ ಅಂಟಿಕೊಳ್ಳುವಂತೆ ಮಾಡುವದು ಭಾವಿ
ರಾಷ್ಟ್ರದ ಉನ್ನತಿಗೆ ಶುಲಭೋಪಾಯವಾಗಿರುವದು.

ಸಾಲೆಯಲ್ಲಿ ಹುಡುಗರಿಗೆ ತಪ್ಪದೆ ಬೇಕಾಗುವ ಪಾಟಿ, ಕಡ್ಡಿ, ಕಾಗದ, ಸೀಸಪೆ
ನಿಲು, ದೌತಿ, ಮಸಿಪುಡಿ, ಹೆಂಡ್ಲ, ನಿಬ್ಬ ಮುಂತಾದ ಸಾಮಾನುಗಳನ್ನು ಅವರು ಸದ್ಯ
ಕ್ಕೆ ಬೇರೆ ಬೇರೆಯಾಗಿ ಅಂಗಡಿಯಿಂದಲೇ ತರುವರು. ಅದರಿಂದ ಅವರಿಗೆ ಒಂದೇ ತ
ದ ಸಾಮಾನು ಸಿಗುವದಿಲ್ಲ. ಚಿಲ್ಲರೆ ಮಾರಾಟದ ದರವೂ ದುಬಾರಿಯಾಗುವದು. ಬೇಕ
ದ ಕೂಡಲೆ ಒಮ್ಮೊಮ್ಮೆ ಸಾಲೆಯಿಂದ ಹೋಗಿಯೂ ತರಬೇಕಾಗುತ್ತದೆ. ಕೆಲವು ಊ
ರಲ್ಲಿ ಬೇಕಾದ ಸಾಮಾನು ಸಿಗುವ ಅಂಗಡಿಯೂ ಇರುವದಿಲ್ಲ. ಅದರಿಂದ ಒಂದು ಶಾ
ಲೆಯೊಳಗಿನದಿರಲಿ, ಒಂದೇ ಇಯತ್ತೆಯ ಹುಡುಗರ ಕಾಪಿ, ಅರ್ಥದಪಟ್ಟಿ ಮುಂತಾ
ದವು ಅನೇಕ ಪ್ರಕಾರದವಾಗಿ ನೋಡಲಿಕ್ಕೆ ಅಸಹ್ಯವಾಗುವವು; ಇಷ್ಟೇ ಅಲ್ಲ, ಹೊತ್ತಿ

ಸರಿಯಾಗಿ ಕಟ್ಟಿ ಆಗುವದೂ ಇಲ್ಲ. ಅದರಿಂದ ಕೆಲಸಕ್ಕೆ ಬಹಳ ಅಡ್ಡಿಯಾಗುವದು. ಈ ಸಂಗತಿಯನ್ನು ಪಾಲಕರಿಗೆ ತಿಳಿಸಿದರೆ, "ಅವನ್ನೆಲ್ಲ ನೀವೇ ಬೇಕಾದ ಹಾಗೆ ಮಾಡಿ ಕೊಡಿರಿ, ಎಷ್ಟು ದುಡ್ಡು ಕೊಡಬೇಕು. ಹೇಳಿರಿ" ಎಂಬ ಮಾತನ್ನು ಎಷ್ಟೋಹಳ್ಳಿಯ ಶಾಲಾಮಾಸ್ತರರು ಕೇಳಿರಬಹುದು.

ಸರಕಾರೀ ಬುಕ್‌ಡಿಪೋ ಬಂದು ಆದಂದಿನಿಂದ ವ್ಯಾಪಾರಸ್ಥರೇ ಈ ಕೆಲಸವನ್ನು ಮಾಡುತ್ತಿರುವರು. ಅದರಿಂದ ಎಲ್ಲ ಕಡೆಗೆ ತಕ್ಕ ವೇಳೆಗೆ ಪುಸ್ತಕಗಳು ಸಿಗುವದಿಲ್ಲ; ಮತ್ತು ಅವುಗಳಿಗೆ ಕಮಿಶನ್ ಕೊಡುವದಿರಲಿ! ಟಪಾಲ ಹಾಸಲು ಸಹ ಏರಿಸಿದ್ದರಿಂದ ಹುಡುಗರ ತಲೆಯಮೇಲೆ ಭಾರೀಕ್ರಯ ಬೀಳುವದು. ಮತ್ತು ಮೇಲಿನ ಇಯತ್ತೆಯ ಹುಡುಗರಿಗಂತೂ ಕಂಪಾಸ ಪೆಟ್ಟಿಗೆ ಸಹಿತ ಎಲ್ಲ ಪುಸ್ತಕಗಳಿಗೆ ವರ್ಷಕ್ಕೆ ಹತ್ತು ರೂಪಾಯಿಗಳವರೆಗೆ ಬೀಳಬಹುದು. ಈ ಎಲ್ಲ ಜಿಲೆಯನ್ನು ಒಂದೇಸಾರೆ ಕೊಟ್ಟು ಕೊಳ್ಳುವ ಶಕ್ತಿ ಇದ್ದವರೂ ಈ ಸಾಲೆಗಳಲ್ಲಿ ವಿರಳ; ಅಂದರೆ ಬಡವರೇ ಬಹಳ. ಇಂಥವರು ಮೊದಲಿಗೆ ವಾಚನ, ಮುಂದೆರಡು ತಿಂಗಳಿಗೆ ಇತಿಹಾಸ ಈ ಪ್ರಕಾರಕೊಳ್ಳುತ್ತಿರುವರು ಅದರಿಂದ ಅವರ ಅಭ್ಯಾಸಕ್ಕೆ ಅಡ್ಡಿಯಾಗುತ್ತಿರುವದು ಎಲ್ಲ ಮಾಸ್ತರ ಜನರಿಗೆ ಅನುಭವವದೆ.

ಎಷ್ಟೋ ಹುಡುಗರು ಸಣ್ಣ ಪುಟ್ಟ ಬೇನೆಯ ಸಲುವಾಗಿ ಶಾಲೆಯನ್ನು ತಪ್ಪಿಸುವರು. ಇಷ್ಟಪೆ ಅಭ್ಯಾಸ ಬಿಟ್ಟು ನಡುವೆ ಮನೆಗೆ ಹೋಗುವರು. ಆಸ್ಪತ್ರೆಯಿಲ್ಲದ ಹಳ್ಳಿಯಲ್ಲಿಂತೂ ತಕ್ಕ ಔಷಧ ಕೂಡಲೇ ಸಿಗದೆ ಅನೇ ದೊಡ್ಡವಾಗಿ ತಿಂಗಳು ಗಟ್ಟಲೆ ಬೀಳುವದೂ ಉಂಟು. ಈಬೇನೆಗಳಲ್ಲಿ ತಲೆಸೂಲಿ, ಹೊಟ್ಟೆ ತೊಳೆಯೋಣ, ಹೊಳ್ಳಿ ಕಚ್ಚುವದು, ವಾಂತಿ, ಕಜ್ಜಿ, ಸಾಧಾರಣಜ್ವರ, ಕೆಮ್ಮು, ಶೈತ್ಯ, ಇನೇ ಮುಖ್ಯವಾಗಿರುವವು. ಎಂಥ ಬಡವನಾದರೂ ಬೇನೆ ಬಿದ್ದಾಗ ಸಾಲ ಮಾಡಿಯಾದರೂ ಔಷಧ ಕೊಳ್ಳುವರು. ಕೆಲವರು ಅಲಕ್ಷ್ಯದಿಂದ ಅವುಗಳನ್ನೇ ಬೆಳಿಸಿಕೊಂಡು ತಮ್ಮ ಅಮೂಲ್ಯವಾದ ಶಕ್ತಿಯನ್ನು ಕುಂದಿಸಿಕೊಳ್ಳುವದಲ್ಲದೆ, ಪುನಃ ಮೊದಲಿದ್ದಷ್ಟು ಆಗುವವರೆಗೆ ನಿತ್ಯ ವ್ಯವಹಾರವನ್ನೆಲ್ಲ ಬದಿಗಿಟ್ಟು ಮಲಗಿ ಬೇಸರದಿಂದ ಕಾಲಹರಣ ಮಾಡುವರು. ಅದೇ ಶಾಲೆಯಲ್ಲಿ ಕೆಲವು (ಹೊಮಿಯೋಪಥಿಕ್) ಔಷಧಗಳು ಇದ್ದರೆ ಆಗಿಂದಾಗಲೇ ಕೊಟ್ಟು ಬೇನೆಯನ್ನು ಮೇಲಿಂದಮೇಲೆ ಹಾರಿಸಬಹುದು. ಅದರಿಂದ ಶಾಲೆಗೆ ಗೈರಹಾಜರ ಆಗತಕ್ಕ ದೊಡ್ಡ ಕಾರಣವೇ ದೂರವಾಗಬಹುದು. ಇಂಥಿಂಥ ಔಷಧಗಳನ್ನು ಕೊಳ್ಳುವವರು ದಿನಕ್ಕೆ ಇಷ್ಟಿಷ್ಟು ಕೊಡಬೇಕೆಂಬ ನಿಯಮವನ್ನು ಮಾಡಬಹುದು. ತಲೆ ಹೊರೆ ಹೆಗಲಿಗೆ ಬಂತೆಂದು ಪಾಲಕರಾದರೂ ಸಂತೋಷದಿಂದ ಕೊಡಬಹುದು. ಹೊರತು ಅಡ್ಡಿ ಮಾಡಲಿಕ್ಕಿಲ್ಲ. ಈ ಔಷಧ ಕೊಡುವ ಕೆಲಸವನ್ನು ಸಹ, ಸಕ್ರೆಟರಿಯಾಗಿ, ಹುಡುಗರೇ ಪಾಳಿಯಂತೆ ಮಾಡುವರಾದ್ದರಿಂದ, ರೋಗಕ್ಕೆ ತಕ್ಕ ಔಷಧಗ

ಳಸ್ಸು ಕೊಡಕೊಳ್ಳುವ ಅನುಭವವಾಗಿ, ರೋಗಿಷ್ಠ ಹುಡುಗನಿಗೆ ಆರೋಗ್ಯದ ಚಟುವು ಬೆಳೆದು, ಅಭ್ಯಾಸಕ್ಕೆ ವೇಳೆಯ ಉಳಿತಾಯವೂ ಆಗುವದು.

ಈ ಮೇರೆಗೆ ಮೇಲೆ ವಿವರಿಸಿದ ನಾಲ್ಕು ಕಾರಣಗಳ ವಿಚಾರದಿಂದ ಪ್ರಾಥಮಿಕ ಶಾಲೆಗಳಲ್ಲಿ ಇಂಥ ಸೊಸಾಯಿಟಿಯ ಮೂಲ ಪಂಚಾಗವನ್ನು ಕಟ್ಟುವದು ಅತ್ಯವಶ್ಯವದೆ. ಸನ್ ೧೯೧೬ ನೇ ಇಸವಿಯ ಶಾಲಾಪತ್ರಿಕದಲ್ಲಿ ಈ ಸೊಸಾಯಿಟಿಯ ರಚಿಸ್ತಾರರು ಇದರ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿರುವರು. ಅಂದಿನಿಂದ ಇದುವರೆಗೆ ಕೆಲವು ಶಾಲಾಮಾಸ್ತರರು ತಕ್ಕಮಟ್ಟಿಗೆ ಸೊಸಾಯಿಟಿಯ ಅನುಭವವನ್ನು ವಿದ್ಯಾರ್ಥಿಗಳಿಗೆ ಮೇಲಿಂದಮೇಲೆ ಮಾಡಿಕೊಟ್ಟಿರಬಹುದು. ಆದಾಗ್ಯೂ ಈ ವಿಷಯದಲ್ಲಿ ಇನ್ನೂ ಕೆಲವು ವಿಚಾರಗಳನ್ನು ಮಾಡಿ ಪ್ರಾರಂಭಿಸುವ ಅವಶ್ಯಕತೆಯಿರುತ್ತದೆ.

ಸಾಧಾರಣ ಪ್ರಾಥಮಿಕ ಶಾಲೆಯೆಂದರೂ ೬೦–೯೦ ಮಂದಿ ಹುಡುಗರು ಇರುವರು. ಪ್ರತಿಯೊಬ್ಬನಿಗೆ ಸರಾಸರಿ ಕಡಿಮೆಯೆಂದರೂ ವರುಷಕ್ಕೆ ೮ ಆಣೆಯ ಚಿಲ್ಲರೆ ಸಾಮಾನು ಬೇಕೇ ಆದೀತು. ಒಂದೆರಡು ರೂಪಾಯಿಯಾದರೂ ಪುಸ್ತಕಕ್ಕೆ ಬೀಳುವದು. ಇಂಥ ಇಡೀ ಶಾಲೆಯಲ್ಲಿ ವರ್ಷಕ್ಕೆ ಕನಿಷ್ಟ ಕಡ್ಡಿ ಪೆಟ್ಟಿಗೆಗೆ ೨ ರೂಪಾಯಿ, ಪಾಟಿಗಳಿಗೆ ೬ ರೂಪಾಯಿ ಕಾಗದಕ್ಕೆ ೨೫ ರೂ, ಶಿಸ್ಸೆನ್‌ಗಳಿಗೆ ೫ ರೂ, ದೌತಿಗಳಿಗೆ ೨ ರೂ, ಮಶಿಪುಡಿಗೆ ೪ ರೂ, ಇನ್ನೂ ಕೆಲವು ಚಿಲ್ಲರೆ ನೂಲು ಚೀಟು, ಸೂಜಿ, ರಬ್ಬರು, ಪೆಂಡ್ಲ, ನಿಬ್ಬು ಮುಂತಾದವುಗಳಿಗೆ ಕೂಡಿ ಒಟ್ಟು ೫೦ ರೂಪಾಯಿಗಳು ಖರ್ಚಾಗದೆ ಇರಲಿಕ್ಕಿಲ್ಲ. ಪುಸ್ತಕಗಳಿಗಾದರೂ ಅಷ್ಟೇ (೫೦ ರೂ.) ಬಿದ್ದೀತು. ಔಷಧಕ್ಕೂ ೧೦ ರೂ. ಗಳಾದರೂ ಬೇಕಾಗಬಹುದು. ಅಂತು ಸರಾಸರಿ ೧೦೦–೧೫೦ ರೂಪಾಯಿಗಳು ಬಂಡವಲಿಗೆ ಬೇಕಾಗಬಹುದು.

ಸಂಘದ ಬಂಡವಲು

೧. ಶಾಲೆಗೆ ಬರುವ ಬೇಕಾದ ಹುಡುಗನು ೪ ಆಣೆಯ ಒಂದೊಂದು ಪಾಲನ್ನು ಬೇಕಾದಷ್ಟು ತಕ್ಕೊಳ್ಳಬಹುದು. ಕನಿಷ್ಠ ೧೦೦ ಪಾಲು ಒಟ್ಟಾಗಬಹುದು.

೨. ಈ ಪ್ರಕಾರ ಪಾಲುಗಾರನಾಗುವ ಪ್ರತಿಯೊಬ್ಬ ಮೆಂಬರನು ಆರಂಭದಲ್ಲಿ ಪ್ರವೇಶ ಫೀ ಎಂದು ಬಂದು ಇಲ್ಲವೆ ಎರಡು ಆಣೆಯನ್ನು ಕೊಡಬೇಕು.

೩. ವಿದ್ಯಾಪಕ್ಷಪಾತಿಗಳೂ ಸುಧಾರಣಾ ಪ್ರಿಯರೂ ಆದ ಸಭ್ಯಗೃಹಸ್ಥರು ಇಂಥ ಸಂಘಗಳಿಗೆ ಉಚಿತವಾಗಿ ಕೆಲವು ಹಣ ಕೊಡಬಹುದು.

೪. ಮೇಲಿನ ಮೂರು ಪ್ರಕಾರಗಳಿಂದ ನಿದಾನ ೫೦ ರೂ. ಕೂಡಬಹುದು. ಆದರೆ ಇಷ್ಟರಿಂದ ಪೂರಯಿಸಲಿಕ್ಕಿಲ್ಲ. ಆದರಿಂದ ದಯಾಳು ಸರಕಾರದವರು ಹೈಸ್ಕೂಲ್ ಟ್ರೇನಿಂಗ್ ಕಾಲೇಜ ಮುಂತಾದ ವಿದ್ಯಾರ್ಥಿಗಳ ಪ್ರವಾಸಕ್ಕೆ ಅರ್ಧ ಹಣವನ್ನು ಕೊಡುವಂತೆಯೂ ದೊಡ್ಡವರ ಸೊಸಾಯಿಟಿಗೆ ಸಹ ಆರಂಭದಲ್ಲಿ ೫ ವರ್ಗಗಳವರೆಗೆ

ಬಿನ್ ಬಡ್ಡಿಯಿಂದ ಅರ್ಧ ಬಂಡವಲಿನವರೆಗೆ ಕೊಟ್ಟಂತೆಯೂ ಇದೂ ಬಂದು ಮಹತ್ವದ ಶಿಕ್ಷಣವಾದ್ದರಿಂದ ಈ ಹುಡುಗರ ಸೊಸಾಯಿಟಿಗೆ ಸಹ ಇವರ ಬಂಡವಲಿನವ್ಯಾದರೂ ಹಣವನ್ನು ಕೊಟ್ಟು ಮುಂದೆ ಸ್ವಶಕ್ತಿಯಿಂದ ನಡೆಯುವಷ್ಟು ಸುಧಾರಿಸಿದ ಮೇಲೆ ಆ ಹಣವನ್ನು ತಿರುಗಿತಕೊಳ್ಳಬಹುದು.

ಇದಲ್ಲದೆ ಶಾಲೆಯಲ್ಲಿರುವ ಇಲ್ಲವೆ ಹೊರಗಿನ ಶ್ರೀಮಂತ ಹುಡುಗರು ಒಂದು ವರ್ಷದಲ್ಲಿ ೧ ರೂ. ದಿಂದ ೧೦ ರೂ. ವರೆಗೆ ತೀರಿನ ರೂಪದಿಂದ ಹಣಇಡಬಹುದು ಇದರಿಂದಲೂ ಸಂಘದ ಬಂಡವಲಿಗೆ ಸಹಾಯವಾಗುವದು.

ವ್ಯವಸ್ಥೆಯು.

೧. ಈ ಸಂಘಕ್ಕೆ ಮೆಂಬರರ ಬಹುಮತದಿಂದ ಆರಿಸಿದ ಒಬ್ಬ ಸೆಕ್ರೆಟರಿಯೂ ನಾಲ್ಕು ಜನ ವ್ಯವಸ್ಥಾಪಕರೂ ಇರಬೇಕು. ಹಾಗೂ ಶಾಲೆಯ ಹೆ. ಮಾ. ನು ಇಲ್ಲವೆ ಅವನು ನೇಮಿಸಿದ ಅಸಿ. ಮಾ. ನು ಈ ಕಮಿಟಿಯ ಚೆಅರಮನ್ನನಿರಬೇಕು. ಈ ಚೆಅರಮನ್ನನು ಸೆಕ್ರೆಟರಿಯಿಂದ ಎಲ್ಲ ಕೆಲಸಗಳನ್ನು ಮಾಡಿಸಿಕೊಳ್ಳಬೇಕು ಮೊದಲಿಗೇ ಎಲ್ಲ ವ್ಯವಸ್ಥಾಪಕರು ಹುಡುಗರಾಗುವದಕ್ಕಿಂತ ಒಬ್ಬಿಬ್ಬರು ಅಸಿ. ಮಾ. ರನ್ನು ಆ ಸ್ಥಳದಲ್ಲಿಟ್ಟು ಹುಡುಗರಿಗೆ ಅನುಭವವಾಗುತ್ತ ಬಂದ ಹಾಗೆ ಅವರನ್ನು ಕಡಿಮೆಮಾಡಬಹುದು. ಒಮ್ಮೆ ಆರಿಸಿದ ವ್ಯವಸ್ಥಾಪಕರೂ ಸೆಕ್ರೆಟರಿಯೂ ೩ ತಿಂಗಳವರೆಗೆ ಇರಬಹುದು. ಅನಂತರ ೩-೩ ತಿಂಗಳಿಗೆ ಬದಲಿಸಬೇಕು. ಮೊದಲಿನವರೆಗೇ ಕಮಿಟಿಯಲ್ಲಿ ಬಹುಮತ ಆದರೆ ಅವರು ಮತ್ತೆ ಮೂರು ತಿಂಗಳು ಇರಬಹುದು. ಆದರೂ ಸೊಸಾಯಿಟಿಯ ಉದ್ದೇಶಕ್ಕನುಸರಿಸಿ ಇದರ ಅನುಭವವು ಬೇರೆ ಬೇರೆ ಹುಡುಗರಿಗೆ ಸಿಗುವಂತೆ ಬೇರೆ ಬೇರೆಯವರನ್ನು ಆರಿಸಲಿಕ್ಕೆ ಹೆ. ಮಾ. ನು ಸೂಚಿಸಬೇಕು.

೨. ಸೆಕ್ರೆಟರಿಯು ಹೆ. ಮಾ. ರರು ಸೂಚಿಸಿದಂತೆ ಕಮಿಟಿಯವರು ಮಂಜೂರು ಮಾಡಿದ ಸಾಮಾನುಗಳನ್ನು ಆಗಾಗ ತಕ್ಕೊಂಡು ಅವುಗಳ ಮಾರಾಟವನ್ನು ಮಾಡಬೇಕು. ಮತ್ತು ಹೆ. ಮಾ. ನು ಹೇಳಿದ ನೇರೆಗೆ ಜಮಾಖರ್ಚನ್ನು ಬರೆದಿಡಬೇಕು. ಯಾವಾಗಲೂ ರೋಕಿ ವ್ಯಾಪಾರವನ್ನು ಮಾಡಬೇಕು. ಅದರೆ ೩ನೇ ನಿಯಮದಂತೆ ಮಾನ್ಯಮಾಡಿಕೊಟ್ಟ ಸಾಲದ ಹಣವನ್ನು ವಸೂಲು ಮಾಡಲಿಕ್ಕೂ ಜಾಗ್ರತನಾಗಿರಬೇಕು. ಸಂಘದ ಮೆಂಬರರನ್ನು ಹೆಚ್ಚಿಸಲಿಕ್ಕೂ ಅವಶ್ಯವಿದ್ದಾಗ ತೀವ್ರ ಇಡುವವರಿಗೆ ಉತ್ತೇಜನಕೊಡಲಿಕ್ಕೂ ಇವನೇ ಲಕ್ಷ್ಯಕೊಡುತ್ತಿರಬೇಕು. ಅವಶ್ಯವಿದ್ದಾಗ ಸಂಘದ ಸಭೆಯನ್ನು ಕೂಡಿಸಬೇಕು.

೩. ಹೆ. ಮಾ. ರಿಂದ ಬಡವನೆಂದು ಸರಟೀಫಿಕೇಟು ಹಾಜರ ಮಾಡಿದ ಹುಡುಗನಿಗೆ ಕಮಿಟಿಯವರು ಮಂಜೂರ ಮಾಡಿ ಯೋಗ್ಯವಾದ ಇಬ್ಬರ ಜಾಮೀನು ತಕ್ಕೊಂಡು ೧. ರೂ. ದಿಂದ ೧೦ ರೂ. ಗಳವರೆಗೆ ಸಾಮಾನುಗಳನ್ನು ಸಂಘದ ಮಹತ್ವದ ಉದ್ದೇಶವು ನೆರವೇರುವಂತೆ ಸಾಲವಾಗಿಯೂ ಕೊಡಬೇಕು. ಆಗ ತಿಂಗಳಿಗೆ ಹಪ್ತೆಯಿಂದ

ಆ ಹಣವನ್ನೂ ನಿಂತಹಣಕ್ಕೆ ದೂವಾಯಿಗೆ ತಿಂಗಳಿಗೆ ೧ ಪೈಯಂತೆ ಬಡ್ಡಿಯನ್ನೂ ಆಗಿಂದಾಗ ವಸೂಲು ಮಾಡಬೇಕು.

೪. ಹೆ. ಮಾ. ನು ಈ ಸಂಘದಲ್ಲಿ ಪ್ರಸಿಡೆಂಟನಾಗಿರಬೇಕು. ಅವನ ಅಪ್ಪಣೆಯನ್ನು ಇತರರೆಲ್ಲ ವ್ಯವಸ್ಥಾಪಕರು ಮನ್ನಿಸಬೇಕು. ಸ್ವತಃ ಟ್ರೀಝುರರನೂ ಆಗಬೇಕು ಚಿಲರಮನ್ನನು ತಂದ ಕಾಗದದ ಮೇಲ್ವಿಚಾರಣೆ ಮಾಡಿ ಸಹಿ ಮಾಡಬೇಕು. ಹಣದ ಸಂಬಂಧೀ ಯಾವತ್ತು ಜವಾಬದಾರಿಯು ಈತನದೇ ಇರಬೇಕು. ೫೦ ರೂ. ಗೆ ಮಿಾರಿದ ರಕಮನ್ನು ಊರೊಳಗಿನ ಯೋಗ್ಯಮನುಷ್ಯನಲ್ಲಿ ಠೇವು ಇಡಬೇಕು. ಇಲ್ಲವೆ ಸೇವಿಂಗ್ಸ ಬ್ಯಾಂಕಿನಲ್ಲಿಡಬೇಕು. ಒಟ್ಟಿನ ಮೇಲೆ ಹಣದ ಸಂಬಂಧದ ಪೂರ್ಣ ಜವಾಬದಾರಿಯು ಇವನ ಮೇಲೆಯೇ ಇರಬೇಕು.

೫. ಮಾರತಕ್ಕ ದರವನ್ನು ಬಹುಶಃ ಅಂಗಡಿಗಿಂತ ಅಗ್ಗವಾಗಿ ಇಡಬೇಕು ಅಂದರೆ ರೂವಾಯಿಗೆ ಅರ್ಧಾ ಇಲ್ಲವೆ ಒಂದು ಆಣೆಗೆ ಮಿಕ್ಕ ಲಾಭವನ್ನು ಸೇರಿಸಬಾರದು.

೬. ಸಂಘದ ಯಾವತ್ತೂ ಸಾಮಾನುಗಳನ್ನು ಶಾಲೆಯಲ್ಲಿ ನೇಮಿಸಿದ ಕಟ್ಟಡದಲ್ಲಿಯೇ ಇಡಬೇಕು.

೭. ಸಂಘದ ವಾರ್ಷಿಕ ಸಭೆಯು ಪ್ರತಿವರ್ಷ ಮಾರ್ಚ ಅಥವಾ ಡಿಶಂಬರ ತಿಂಗಳಲ್ಲಿ ಕೂಡಬೇಕು. ಅದರ ಕಾರ್ಯಗಳು ಕೆಳಗೆ ಬರೆದಂತೆ ಇರುತ್ತವೆ.

(ಅ) ಕಳೆದ ವರ್ಷದ ಕೆಲಸದ ಬಗ್ಗೆ ಸೆಕ್ರೆಟರಿ ತಂದ ರಿಪೋರ್ಟು ಓದುವದು

(ಬ) ವರ್ಷದಲ್ಲಿ ನಡೆದ ಒಟ್ಟುಖರೀದಿ, ವಿಕ್ರಿ ಅವುಗಳಿಂದಾದ ಲಾಭಹಾನಿಗಳ ತಪಶೀಲವಾರ ಪತ್ರಿಕೆಯನ್ನು ಮಂಜೂರೀ ಬಗ್ಗೆ ವಿಚಾರ ಮಾಡುವದು. ಆ ಮೇಲೆ ಅದರ ನಕಲನ್ನು ಆಯಾ ಜಿಲ್ಲೆಯ ಡಿ॥ ಎ. ಇ. ಸಾ. ರ ಕಡೆಗೆ ಕಳಿಸುವದು

೮. ಸಂಘಕ್ಕೆ ವರ್ಷದಲ್ಲಿ ಆದ ಲಾಭದ ಧಿವನ್ನು ಸಾಲೆಯ ರಿಝರ್ವ ಫಂಡಿಗೆ ಜಮೆ ಮಾಡಿ ಉಳಿದದ್ದನ್ನು ಸಂಘದ ಮೆಂಬರರಿಗೆ ಅವರವರ ಬಂಡವಲಿನ ಪ್ರಮಾಣದಂತೆ ಹಂಚಿಕೊಡಬೇಕು. (ಅವರು ಇಟ್ಟ ಠೇವಿನ ಹಣವು ಬಂಡವಲಿನಲ್ಲಿ ಬರುವಕ್ಕಿಲ್ಲ)

೯ ಹೆ. ಮಾ. ರೇ ಸಂಘದ ಅಡಿಟರರಾಗಬೇಕು, ಎಲ್ಲಾ ಲೆಕ್ಕಪತ್ರಗಳನ್ನು ಪುಸ್ತಕಗಳನ್ನು ಬೇಕಾದಾಗ ಸರಕಾರೀ ಅಧಿಕಾರಸ್ಥರಾಗಲಿ, ಸಂಘದ ಮೆಂಬರ ಪಾಲಕರಾಗಲಿ ನೋಡಲಿಕ್ಕೆ ಅಡ್ಡಿ ಇರಬಾರದು.

೧೦. ಸಂಘದ ಯಾವತ್ತೂ ಕೆಲಸವು ಸಾಲೆಯು ಇಲ್ಲದ ವೇಳೆಯಲ್ಲಿಯೇ ನ ಯಬೇಕು.

ಸಂಘದ ವಿಸ್ತಾರವು.

ಸೊಸಾಯಿಟಿಯ ಸಾಮಾನ್ಯ ನಿಯಮದಂತೆ ಅದರ ಆಫೀಸುಳ್ಳ ಸ್ಥಳದಿಂದ ೫ ಮೈಲಿನೊಳಗಿನವರು ಒಂದರಲ್ಲಿ ಕೂಡಬಹುದು. ಸಣ್ಣ ಹುಡುಗರ ಸಂಘವಾದ

ಯಾವದೊಂದು ಸಾಲೆಯಲ್ಲಿದ್ದರೆ ಅಲ್ಲಿಂದ ನಿದಾನ ೨–೩ ಮೈಲಿನೊಳಗೆ ಇರುವ ಬೇರೆ ಸಾಲೆಯ ಹುಡುಗರಿಗೂ ಮೆಂಬರರಾಗಲಿಕ್ಕೆ ಅಡ್ಡಿಯಿಲ್ಲ, ೩–೫ ಮೈಲಿನೊಳಗೆ ಇರುವ ಸಾಲೆಗಳಲ್ಲಿ ಇದರ ಬ್ರ್ಯಾಂಚ ಆಫೀಸುಗಳನ್ನು ಇಡಬಹುದು. ಅಲ್ಲಿಗೆ ಬೇಕಾದ ಸಾಮಾನುಗಳನ್ನು ಆಗಾಗ ಕಳಿಸಿಕೊಡಬಹುದು. ಅಲ್ಲಿಯ ಒಟ್ಟು ಮೆಂಬರರ ಬಂಡವಲಿನ ಪ್ರಮಾಣದಂತೆ ಬಂದ ಲಾಭದಲ್ಲಿ ಬ್ರ್ಯಾಂಚ ಆಫೀಸಿಗೆ ೫ ವನ್ನೂ ಅಲ್ಲಿಯ ಮೆಂಬರರಿಗೆ ಉಳಿದವುಗಳನ್ನೂ ಹಂಚಿಕೊಡಬಹುದು. ಸಣ್ಣ ಪುಟ್ಟ ಸಾಲೆಯಲ್ಲಾದರೂ ವರುಷಕ್ಕೆ ೧೫–೨೦ ರೂ. ಸಾಮಾನು ಖರ್ಚಾಗಬಹುದು. ಮತ್ತು ೨೫–೩೦ ಪಾಲು ದಾರರೂ ಆಗಬಹುದು. ಅವರಿಗಂತೂ ಸ್ವತಂತ್ರ ಸಂಘವನ್ನು ಮಾಡಿಕೊಳ್ಳುವ ಶಕ್ತಿಯಿರುವದಿಲ್ಲ. ಅದರಿಂದ ಅಲ್ಲಿಯ ಬಂಡವಲಿಗೆ ತಕ್ಕ ಕೆಲವು ಸಾಮಾನುಗಳನ್ನು ಬಿಮ್ಮೆಲೇ ಸಹ ಕೊಡಬಹುದು. ಆದರೆ ೩–೪ ಇಯತ್ತೆಯ ಸಾಲೆಯಲ್ಲಿ ಮಾತ್ರ ಜಮಾ ಖರ್ಚು ಮುಂತಾದ ಬ್ರ್ಯಾಂಚ ಆಫೀಸಿನ ಎಲ್ಲ ಕೆಲಸವನ್ನು ಆಸಾಲೆಯ ಮಾಸ್ತರರೇ ಮಾಡತಕ್ಕದ್ದು.

ಅವಶ್ಯವಾದ ಸರಕಾರೀ ಸಹಾಯಗಳು

ಬಂಡವಲಿನ ಸಂಬಂಧೀ ಳನೇ ನಿಯಮದಲ್ಲಿ ಹೇಳಿದಂತೆ ಸಂಘದ ಮೆಂಬರರಿಂದ ಒಟ್ಟಾದ ಬಂಡವಲಿಗೆ ಸಿಕ್ಕದಷ್ಟಾದರೂ ಹಣವನ್ನು ನಿದಾನ ೫ ವರ್ಷಗಳವರೆಗೆ ಮುದ್ದತ್ತು ಮಾಡುವದಲ್ಲದೆ ಇನ್ನೂ ಕೆಲವು ಅಡಚಣೆಗಳನ್ನು ಅವರೇ ದೂರ ಮಾಡಬೇಕು.

೧. ಸಾಲೆಯ ಇಮಾರತು ಎಷ್ಟೋ ಕಡೆಗೆ ಗಟ್ಟಿಮುಟ್ಟು ಇರುವದಿಲ್ಲ. ಕೆಲವು ಸಾಲೆಗಳಂತೂ ದೇವಸ್ಥಾನದ ಅಗ್ರಶಾಲೆಯ ಮೇಲೆ ಇರುವವು. ಅದರಿಂದ ಯಾವತ್ತು ಸಾಮಾನುಗಳನ್ನು ಇಟ್ಟುಕೊಳ್ಳುವದಕ್ಕೆ ಸಾಕಾಗುವಂಥ ಬಂದೋಬಸ್ತು ಬೀಗ ಇರುವ ಕಟ್ಟಿಗೆಯ ಕಪಾಟು ಇಲ್ಲವೆ ದೊಡ್ಡ ಪೆಟ್ಟಿಗೆಯನ್ನು ಕೊಡಬೇಕು.

೨. ವಿದ್ಯಾರ್ಥಿಗಳಿಗೆ ರೇಲ್ವೆ ಮುಂತಾದವುಗಳ ಪ್ರಯಾಣದ ಫೀಯಲ್ಲಿ ಅರ್ಧ ಸೂಟ ಬಿಡುವಂತೆ ಇದಾದರೂ ಮಹತ್ವದ ಶಿಕ್ಷಣದ ಕೆಲಸ ವಿರುವದರಿಂದ ಈ ಸಂಘದ ವ್ಹಿ. ಪಿ. ವಾರ್ಸಲುಗಳಿಗೆ ಪೂರಾ ಇಲ್ಲವೆ ಅರ್ಧವಾದರೂ ಟಪಾಲ ಹಾಸಲು ಮಾಫಿಯಾಗಬೇಕು. ಹಾಗೆಯೇ ಪತ್ರವ್ಯವಹಾರಕ್ಕೂ ಸ್ಟ್ಯಾಂಪು ಹತ್ತಬಾರದು.

೩. ಸಂಘದ ಲೆಕ್ಕ ಪತ್ರಗಳನ್ನು ಅನುಕೂಲವುಳ್ಳ ಖಾತೆಯ ವರಿಷ್ಠರು ತಪಾಸ ಮಾಡಿ, ಹೊಸಹೊಸ ವಿಚಾರ ಸೂಚನೆಗಳನ್ನು ಮಾಡುತ್ತಿರಬೇಕು.

೪. ಈ ಸಂಘದಿಂದ ಸಾಲವನ್ನು ತಕ್ಕೊಂಡು ಮುದ್ದತ್ತಿನ ಹಣಕೊಡದೆ ಇರುವ ಮೆಂಬರನ ಅಥವಾ ಜಾಮೀನದಾರರ ಮೇಲೆ ದಾವೆ ವಗೈರೆ ಮಾಡುವ ಖಟಪಟಿ ಮತ್ತು ಖರ್ಚಿನ ಕೆಲಸವನ್ನು ಮಾಡದೆ ಬರೇ ಈ ಸಂಘದ ಸಕ್ರೆಟರಿಯು ಪ್ರಸಿಡೆಂಟನ (ಹೆಚ್ ಮಾ ನ) ಮುಖಾಂತರ ಕಳಿಸಿದ ರಿಪೋರ್ಟಿನ ಮೇರೆಗೆ ಆಯಾ ಗ್ರಾಮಸರು

ತಮ್ಮ ಜಮೀನ ಬಾಬನ್ನು ಹೇಗೆ ಜಪ್ತ ಮಾಡಿ ವಸೂಲು ಮಾಡುವರೋ ಅದರಂತೆ ಅಂಥ ಹುಡುಗನು ಇಲ್ಲವೆ ಜಾಮೀನದಾರರು ಅವರ ಕಡೆಗೂ ಕೊಡದಿದ್ದರೆ ಚರ ಜಿಂದಿಗೆ ಜಪ್ತ ಮಾಡಿ ಲಲಾವಿನಿಂದ ನಿದಾನ ೧೫ ದಿವಸಗಳೊಳಗೆ ಹಣ ಕಳಿಸಿಕೊಡುವಂತೆ ಅಲಾಹಿದಾ ಮದತ್ತು ಆಗಬೇಕು. ಇದರಿಂದ ಸಂಘದಲ್ಲಿ ನಿಯಮಕ್ಕೆ ತಪ್ಪ ಬಾರದೆಂಬ ಜಾಗ್ರತೆಯು ಬಾಲ್ಯದಲ್ಲಿಯೇ ನಟ್ಟು ಹೋಗುವದು.

ಈ ಪೇರೆಗೆ ಎಲ್ಲ ವಿಚಾರಗಳಿಗೆ ಲಕ್ಷ್ಯಗೊಟ್ಟು ಪ್ರಾಥಮಿಕ ಶಾಲೆಗಳಲ್ಲಿ ಇಂಥ ಸೊಸಾಯಿಟಿಯನ್ನು ದಯಾಳು ಸರಕಾರದವರು ಅದಷ್ಟು ಬೇಗ ಚಾಲು ಮಾಡಲಿಕ್ಕೆ ಅವರಿಗೆ ಮಹಾಯುದ್ಧ-ವಿಜಯಾನಂದವನ್ನೂ ಮನಃ ಸ್ವಾಸ್ಥ್ಯವನ್ನೂ ಅನುಗ್ರಹಿಸಲೆಂದು ಜಗದೀಶನನ್ನು ಪ್ರಾರ್ಥಿಸತಕ್ಕದ್ದು.

ಅಂಕೋಲಾ
10—2—1918

ವೆ. ಪ. ಹೆಗಡೆ.
ಅಸಿ॥ ಮಾಸ್ತರ ಶಾಲಾ ನಂ. ೧.

ಬಾಲಕರ ವರ್ಗದ ವಿಷಯಗಳನ್ನು ಹೇಗೆ ಕಲಿಸಬೇಕು.

(ಫೆಬ್ರುವರಿ ತಿಂಗಳಿಂದ ಮುಂದೆ ಸಾಗಿದ್ದು.)

ಈ ಪ್ರಕಾರ ಕಲಿತ ಅಂಕಿಗಳು, ಮಗ್ಗಿಗಳು, ಪದಗಳು ಇವನ್ನ ನಿತ್ಯದಲ್ಲೂ ಹೇಳಿಸುವ ರೂಢಿಯನ್ನಿಟ್ಟರೆ, ಇವು ಮಕ್ಕಳಿಗೆ ಕಂಠತಃ ಪಾಠವಾಗುವವು. ಇವುಗಳ ಕೂಡ ಶಿಕ್ಷಕನು ವಾರಗಳು, ತಿಥಿಗಳು, ತಿಂಗಳುಗಳು, ನಕ್ಷತ್ರಗಳು, ಸಂವತ್ಸರಗಳು ಮೊದಲಾದವುಗಳನ್ನು ಕಲಿಸುವ ರೂಢಿಯನ್ನಾದರೂ ಬಡಬೇಕು. ಮಕ್ಕಳು ಶಾಲೆಯಲ್ಲಿ ಕಲಿಯುವ ವಿಷಯಗಳಲ್ಲಿ ಕೆಲವು ಪಾಠಮಾಡತಕ್ಕವಿರುತ್ತವೆ. ಇವುಗಳನ್ನು ಪಾಠ ಮಾಡಿಸುವ ಕಾಲದಲ್ಲಿಯೂ, ಪಾಠವಾದ ವಿಷಯಗಳಾದರೂ ತಕ್ಕ ಸಮಯದಲ್ಲಿ ಉಪಯೋಗಕ್ಕೆ ಬರುವಂತೆ ತಯಾರಿಯಲ್ಲಿ ಇರಿಸುವ ಪ್ರಸಂಗದಲ್ಲಿಯೂ ವಿದ್ಯಾರ್ಥಿಗಳಿಗೆ ಶಿಕ್ಷಕನ ಗರಜು ಇರುವದಿಲ್ಲವೆಂದು ಕೆಲವರ ಅಂಬೋಣವಿರಬಹುದು. ಆದರೆ ಚಿಕ್ಕ ಮಕ್ಕಳ ವಿಷಯದಲ್ಲಿ ಶಿಕ್ಷಕನ ಈ ದುರ್ಲಕ್ಷವು ಕ್ಷಮ್ಯವಾಗಲಿಕ್ಕಿಲ್ಲ. ಈ ವರ್ಗದಲ್ಲಿ ಪಾಠ್ಯವಿಷಯಗಳನ್ನು ಪಾಠ ಮಾಡುವದಾದರೂ ಹೇಗೆ ಈ ಸಂಗತಿಯನ್ನು ಸ

ಕಲಿಸುವದಿರುತ್ತದೆ. ಕಲಿತ ವಿಷಯಗಳು ಮೆಟ್ಟು ಮೆಟ್ಟಿಗೆ ವ್ಯವಹಾರದಲ್ಲಿ ಉಪಯೋಗಿಸಲ್ಪಡುವಂತೆ ಇದ್ದರೆ ಅವು ಜಾಗ್ರತವಾಗಿ ಇರುವವು. ಮೇಲಿನ ಇಯತ್ತೆಗಳ ಹುಡುಗರಿಗೆ ಈ ಮಾತು ಶಕ್ಯವಿದ್ದರೂ ಬಾಲಕರಿಗೆ ಇದು ಸಾಧ್ಯವಿಲ್ಲ. ಆದ್ದರಿಂದಲೇ ಈ ವರ್ಗಕ್ಕೆ ಪುರೋಚಿಯ ಅವಶ್ಯಕತೆಯು ಬಹಳ ಉಂಟು. ಮತ್ತು ಅದು ಶಿಕ್ಷಕನ ನೆರಳಿನಲ್ಲೇ ಆಗತಕ್ಕದ್ದು. ಪುರೋಚಿಯ ಕಾಲವು ಕೂಡ ಶಿಕ್ಷಕನ ವಿಶ್ರಾಂತಿಯದು ಇರಬಾರದು. ಅಪೂರ್ಣವೂ ಅಸ್ಪಷ್ಟವೂ ಆದ ಉಚ್ಚಾರವು, ಮಾತಿನೊಳಗಿನ ಅಶುದ್ಧತೆ, ಓದುವಾಗಲೂ ಮಾತಾಡುವಾಗಲೂ ಗಡಬಡಿ, ಅಸಭ್ಯತೆ, ದುರ್ಲಕ್ಷ್ಯ ಮೊದಲಾದ ದುರ್ಗುಣಗಳ ನೆಲಗಟ್ಟು, ಈ ಪುರೋಚಿಯ ಕಾಲದಲ್ಲಿ ಉಂಟಾದ ದುರ್ಲಕ್ಷ್ಯದಿಂದಲೇ ಅಲ್ಪಸ್ವಲ್ಪ ಹಾಕಲ್ಪಡುತ್ತದೆಂಬದಕ್ಕೆ ಸಂದೇಹವಿಲ್ಲ. ಶಿಕ್ಷಕನು ಈಗಲೇ ಎಚ್ಚರಗೊಂಡರೆ ಅದರ ಮುಂದಿನ ಕೆಲಸವು ಸುಖಕಾರಕವಾಗುವದು. ಹೊಸದಾಗಿ ಪಾಠ ಮಾಡಿಸುವ ಸಂಗತಿಗಳನ್ನು ಹೇಗೆಮಾಡಿಸಬೇಕು ಎಂಬದನ್ನು ಮೇಲೆ ಹೇಳಿದೆಯಷ್ಟೇ? ಪಾಠವಾದ ಸಂಗತಿಗಳ, ಪರೋಚಿಯ ಕಾಲದಲ್ಲಿ ಒಬ್ಬ ಹುಡುಗನು ಕಲಿಸಿ ಅಥವಾ ಶಿಕ್ಷಕನೇ ಸತತ ಕಲಿಸಿ ಉಳಿದವರನ್ನು ಹೇಳಲಿಕ್ಕೆ ಹಚ್ಚುವ ಪದ್ಧತಿಯೂ ನೆಟ್ಟಗಲ್ಲ. ವೇಳೆಯ ಹಾನಿಯು ಆಗುತ್ತದೆ; ಆಲಸ್ಯ ಬೆಳೆಯುತ್ತದೆ. ಬಾಲಕರನ್ನು ಸರಿಯಾಗಿ ಕುಳ್ಳಿರಿಸಿ ಇಲ್ಲವೆ ನಿಲ್ಲಿಸಿ ಒಬ್ಬೊಬ್ಬರು ಒಂದೊಂದು ಹೇಳುವಂತೆ ವ್ಯವಸ್ಥೆ ಮಾಡಿದರೆ ಈ ಕೆಲಸವು ಉತ್ತಮವಾಗಿ ಸಾಗುತ್ತದೆ. ಉದಾಹರಣಾರ್ಥವಾಗಿ, ಪಾಠಕಿಗಳನ್ನು ಹೇಳುವಾಗ, ಒಬ್ಬನು "ಒಂದು," ಎರಡನೆಯವನು "ಎರಡು,'' ಮೂರನೆಯವನು "ಮೂರು,".....! ಇದೇಮೇರೆಗೆ ಮಗ್ಗಿಗಳಲ್ಲಿ ಮೊದಲನೆಯವನು "ಒಂದುಒಂದಲೆಒಂದು,'' ಎರಡನೆಯವನು "ಒಂದು ಎರಡಲೆ ಎರಡು''.....! ಈಪ್ರಕಾರ ಹೇಳಬೇಕು.

ಡ್ರಿಲ್ಲು, ಸಾಭಿನಯಗೀತ, ಆಟ ಇವುಗಳಿಂದ ಬಾಲಕರ ಶಾರೀರಿಕ ಸುಧಾರಣೆಯೂ, ಚಿತ್ರಕಲೆ, ಲೇಖನವಾಚನ, ವಸ್ತುಪಾಠ, ಲೆಕ್ಕಗಳು ಮೊದಲಾದವುಗಳಿಂದ ಅವರ ಮಾನಸಿಕಸುಧಾರಣೆಯೂ,ಅಭಿವೃದ್ಧಿಯೂ ಆಗುವ ಕ್ರಮವು ಈ ವರೆಗೆ ಉಲ್ಲೇಖಿಸಿದಂತಾಯಿತು. ಈಗ ಇವೆಲ್ಲವುಗಳಿಗಿಂತ ಅತಿಮಹತ್ವವುಳ್ಳ ನೈತಿಕ-ಸುಧಾರಣೆಯಬಗ್ಗೆ ಬರೆಯುವದು.

ಪ್ರಶಸ್ತವಾಗಿರುವದು. ಬೇಕಾದಷ್ಟು ಬಲಶಾಲಿಯೂ ಬುದ್ಧಿವಂತನೂ ಆದ ಮನುಷ್ಯನಲ್ಲಿ ನೈತಿಕ ಸುಧಾರಣೆಯು ಆಗದಿದ್ದರೆ ಅವನಲ್ಲಿ ನಿಜವಾದ ನಾಗರಿಕತ್ವ-ಮನುಷ್ಯತ್ವಗಳು ಬಂದಂತಾಗಲಿಕ್ಕಿಲ್ಲ. ಮಕ್ಕಳ ನೈತಿಕ ಸುಧಾರಣೆಗೆ ಮನೆಯಲ್ಲಿ ತಾಯಿತಂದೆಗಳು ನೆರೆಹೊರೆಯವರು ಕಾರಣವಿರುವಂತೆ ಸಾಲೆಯೂ ಒಂದು ಕಾರಣವಿರುವದು. ಕಿಂಬಹುನಾ, ಅವು ಒಂದಕ್ಕೊಂದು ಪೂರಕವಾಗಿರುವವು. ಪಾಲಕರ ಸಹಕಾರಿತ್ವವು ಶಿಕ್ಷಕರಿಗೆ ಇಲ್ಲೇ ವಿಶೇಷವಾಗಿ ಬೇಕಾಗುವದು. ಮತ್ತು ಇದರ ಸಹಾಯವಿದ್ದಲ್ಲಿ ನೈತಿಕ ಶಿಕ್ಷಣವು ಪೂರ್ಣವಾಗಲಿಕ್ಕೆ ಅಡ್ಡಿಯಿಲ್ಲ. ಪಾಲಕರಿಗೆ ತಮ್ಮ ಮಕ್ಕಳು ನೀತಿವಂತರಾಗಬೇಕೆಂಬ ಇಚ್ಛೆಯು ಮನಸಾ ಇರುತ್ತದೆ. ಆದರೆ ಕೃತಿಯು ಮಾತ್ರ ಹಾಗೆ ಇರುವದು ಅಪರೂಪವಾಗಿದೆ. ಆದ್ದರಿಂದ ನೈತಿಕ ಸುಧಾರಣೆಗೆ ಈಪ್ರಕಾರ ಇನ್ನೂ ಪರಿಣತರೂಪವು ಪ್ರಾಪ್ತವಾಗಿಲ್ಲೆಂದು ಹೇಳಬಹುದು. ಆದರೂ ಶಿಕ್ಷಣದ ಕಲಸ ಕೈಕೊಂಡವನು ಈ ಮಾತಿನಲ್ಲಿ ತನ್ನ ಸ್ವಂತದ ಉದಾಹರಣೆಯನ್ನು ವಿದ್ಯಾರ್ಥಿಗಳಿಗೆ ಹಾಕಿಕೊಟ್ಟು ಈ ಕೆಲಸ ಪೂರ್ಣಪಡಿಸುವದು ಯುಕ್ತವು. ನೈತಿಕ ಮಾರ್ಗದಲ್ಲಿ ಪಾಲಕರ ವಿರುದ್ಧವಾದ ಪ್ರೇರಣೆಯ ಕಡೆಗೆ ಲಕ್ಷ್ಯ ಕೊಡದೆ, ಕೇವಲ ತನಗೇ ಅವಲಂಬಿಸಿ ಇರುವಂತೆ ವಿದ್ಯಾರ್ಥಿಗಳ ಮನೋರಚನೆಯನ್ನು ಮಾಡುವ ಶಿಕ್ಷಕನೇ ಈ ಪ್ರಸಕ್ತಿಯಲ್ಲಿ ಧನ್ಯನು. ಪರಂತು ಇಂಥ ಶಿಕ್ಷಕರು ಸದ್ಗುರುಗಳು ಇರುವದು ಅಪರೂಪ. ಆದರೂ ಈಗಿನ ಶಾಲೆಗಳಲ್ಲಿ ಕೊಡಿಸುವ ಶಿಕ್ಷಣದಿಂದ ಈ ಮಾತು ತಕ್ಕಮಟ್ಟಿಗೆ ಕೈಗೂಡಲಿಕ್ಕೆ ಅಡ್ಡಿಯಿಲ್ಲ. ನೈತಿಕ ಶಿಕ್ಷಣವು ಮಕ್ಕಳಿಗೆ ಬಾಹ್ಯ ಹಾಗೂ ಅಭ್ಯಂತರ ಈಪ್ರಕಾರ ಎರಡು ಬಗೆಯಾಗಿ ಕೊಡಬಹುದು. ಸ್ವಚ್ಛತೆ, ಅಚ್ಚುಕಟ್ಟುತನ, ಸುಸ್ತಿ, ಸಹವಾಸ ಇವುಗಳಿಗೆ ಸಂಬಂಧಿಸಿದ್ದು ಬಾಹ್ಯವು. ಆಜ್ಞಾಧಾರಕತೆ, ಭೂತದಯೆ, ಸೃಷ್ಟಿವಿಷಯಕಪ್ರೀತಿ, ಪ್ರಾಮಾಣಿಕತನ ಮೊದಲಾದವುಗಳಿಗೆ ಸಂಬಂಧಿಸಿದ್ದು ಅಭ್ಯಂತರವು, ಮೊದಲನೆಯ ಪ್ರಕಾರದ ಹಾಗು ಎರಡನೆಯ ಪ್ರಕಾರದ ನೈತಿಕ ಸುಧಾರಣೆಯು ವಿಶೇಷವಾಗಿ ಶಿಕ್ಷಕನ ಸ್ವಂತ ಆಚರಣೆಗೆ ಅವಲಂಬಿಸಿರುತ್ತದೆ. ಮಕ್ಕಳ ಕೈಕಾಲು ಮೋರೆ ಮೊದಲಾದ ಅವಯವಗಳನ್ನೂ ಪ್ರಾವರಣಗಳನ್ನೂ ಸ್ವಚ್ಛವಾಗಿರಿಸಲಿಕ್ಕೆ ಯತ್ನಿಸುವ ಶಿಕ್ಷಕನು ತಾನು ಸ್ವಚ್ಛತೆಯಿಂದ ಇರುವ

ಯೋಗ್ಯವಾಗಿರುವದಷ್ಟೇ? "ಪರೋಪದೇಶೇ ಪಾಂಡಿತ್ಯಮ್" ಇದು ಚಿಕ
ಮುಕ್ಕಳ ಮುಂದೆ ಸ್ವಲ್ಪವೂ ಕೆಲಸಕ್ಕೆ ಬರುವದಿಲ್ಲ. ಬರೆಯುವದು, ಚಿತ್ರ
ಕೆಗೆಯುವದು ಬೇರೆ ಕೈಕೆಲಸಗಳನ್ನು ಮಾಡುವದು, ಆಡುವದು ಇವು
ಗಳಿಂದ ಸ್ವಚ್ಛತೆಯೂ ಅಚ್ಚುಕಟ್ಟುತನವೂ ನೆಲೆಗೊಳ್ಳುವವು. ಆಟಗಳು,
ಕಥೆಗಳು, ಡ್ರಿಲ್ಲು ಇವುಗಳಿಂದ ಆಜ್ಞಾಧಾರಕತೆ, ಸೃಷ್ಟಿವಿಷಯಕ ಪ್ರೀತಿ,
ಪ್ರಾಮಾಣಿಕತನ ಮೊದಲಾದ ಅಭ್ಯಂತರ ಸುಧಾರಣೆಯು ಆಗುವದು.
ಬಾಲಕರಿಗೆ ಸಮಾಜವೆಂದರೆ ಅವರ ಮನೆ, ಶಾಲೆ, ಓರಿಗೆಯ ಗೆಳೆಯರು.
ಕ್ಷಕನ ಮುಂದೆ ವಿದ್ಯಾರ್ಥಿಗಳ ಎಷ್ಟೋ ವ್ಯವಹಾರಗಳು ನಡೆಯುತ್ತಿ
ರುತ್ತವೆ. ಆ ಪ್ರಸಂಗದಲ್ಲಿ ಅವನ್ನು ಬೇಕಾದ ಹಾಗೆ ಉಪಯೋಗಿಸಿ,
ಾಂಡು ಮುಕ್ಕಳನ್ನು ನೀತಿವಂತರನ್ನಾಗಿ ಮಾಡಬಹುದು. ಮುಖ್ಯವಿಷ್ಟೇ
ಪ್ರಸಂಗ ಬಂದಾಗ ಇಲ್ಲವೆ ಪ್ರಸಂಗವನ್ನು ತಂದುಕೊಂಡು ಅದನ್ನು ಉಪ
ಯೋಗಿಸಿ ಉಪದೇಶಿಸುತ್ತಿರಬೇಕು.

ಇರಲಿ, ಈ ವಿಷಯದಲ್ಲಿ ಕೆಲವು ಪಾಠಗಳು, ಪಾಠದ ಟಿಪ್ಪಣಿ
ಳು ಅವಶ್ಯಕವಾಗಿರುವವು. ಪ್ರಸಂಗ ಬಂದಾಗ ಅವನ್ನು ಸಾಂಗವಾಗಿ
ರೂಪಿಸ ಬಹುದು. ಸದ್ಯಃ ಮೇಲೆ ವಿವರಿಸಿದ ರೀತಿಯಿಂದ ಸುಮಾರು
ತ್ತರಿಂದ ಹನ್ನೆರಡು ತಿಂಗಳವರೆಗೆ ಶಿಕ್ಷಣ ಹೊಂದಿದ ಮುಕ್ಕಳ ಸುಧಾ
ಕೆಯು ಶಾರೀರಿಕ ಮಾನಸಿಕನೈತಿಕ ಹೀಗೆ ಎಲ್ಲ ಬಗೆಯಿಂದ ಉಂಟಾಗಿ
ವರು ಮುಂದಿನ ಇಯತ್ತೆಗಳ ಅಭ್ಯಾಸವನ್ನು ಇತರರಿಗಿಂತ ಒಳಿತಾಗಿ
ಬಡಿ ಜಾಣರಾಗುವರೆಂಬ ಅನುಭವವನ್ನು ವ್ಯವಸಾಯವರ್ಗಕ್ಕೆ ವಿನ
ಯಪೂರ್ವಕವಾಗಿ ನಿವೇದಿಸಿ ಇದನ್ನು ಇಷ್ಟಕ್ಕೆ ನಿಲ್ಲಿಸುವನು.

ಉಪೇಂದ್ರ ಶರ್ಮಾ ಹೋಳಮಟ್ಟ.

ಶಾಲಾಧ್ಯಾಪಕ ಮುರನಾಳ.

ನವಾ ಜಿಲ್ಲೆಯೊಳಗಿನ ಭೂಮಿ (ಗುಡ್ಡಗಾಡುಗಳ) ಎತ್ತರ ವಿವರಣೆ.

(ಜನವರಿ ತಿಂಗಳಿಂದ ಮುಂಜೆ ಸಾಗಿದ್ದು.)

ಕಾರವಾರ ತಾಲೂಕು.

ಸಮುದ್ರ ಸಪಾಟಿಯಿಂದ

ಸ್ಥಳದ ಹೆಸರು.	ಎತ್ತರ ಫೂಟು.	ವಿವರಣೆ.
ಕೋಡಾರದ ಗುಡ್ಡ	೭೦೪	ಕಷ್ಟಮ್ ಚವಡಿ ಇರುವಂಥಾದ್ದು
ಾರದ ಪಶ್ಚಿಮಕ್ಕೆ ಸಮುಗಡ್ಡೆ ಗಿಪಿ		ಸಮುದ್ರದಲ್ಲಿ.

ಕೋಡಾರದ ವಾಯವ್ಯಕ್ಕೆ ಇರುವ ಗುಡ್ಡ.	೫೩೫	ಅಕ್ಷಾಂಶ ೧೪–೪೫ರ ಮೇಲೆ ಚಂಡಿಯ ಪಶ್ಚಿಮಕ್ಕೆ ಸಮುದ್ರ ದಂಡೆಗೆ.
ಬಾರ್ವೆವಾಡೀಗುಡ್ಡ	೬೨೫	ಅಮದಳ್ಳಿಯ ನೈರುತ್ಯಕ್ಕೆ

ಅಂಕೋಲಾ ತಾಲೂಕು ಪಶ್ಚಿಮಭಾಗ.

ಮುಸಕೋಣ ಗುಡ್ಡ	೨೨೫	ಹಾರವಾಡೆ ಉತ್ತರಕ್ಕೆ
ಹಾರವಾಡೆಗುಡ್ಡ (ಪೂರ್ವಕ್ಕೆ)	೩೭೩	ಅಂಕೋಲಾ ಕಾರವಾರ ಮಾರ್ಗದ ಪಶ್ಚಿಮಕ್ಕೆ
ಕಂಟೀಮಾಲೆಗುಡ್ಡ	೨೧೦೬	ಬಾಳೆಗುಳಿಯ ಈಶಾನ್ಯಕ್ಕೆ ಕಂಚಿನಘಟ್ಟ ಗ್ರಾಮದಲ್ಲಿ, ಇದಕ್ಕೆ ತುಳಸೀಗುಡ್ಡವೆನ್ನುವರು.
ಹೇರಗಣಿಗುಡ್ಡ ಸದರ	೧೫೦೦ ೨೧೪	ಹೇಗರಣಿಯ ಉತ್ತರಕ್ಕೆ ದಕ್ಷಿಣಕ್ಕೆ } ಹೇಗರಣಿ ಗ್ರಾಮದಲ್ಲಿ
ಕಲುಬ ಕಂಟಗುಡ್ಡ	೧೬೦೦	ಅಕ್ಷಾಂಶ ೧೫–೩೫ ಹೇಗರಣಿ ಪೂರ್ವಕ್ಕೆ ಹೇಗರಣಿ ಮಾರುಗದ್ದೆ ಗ್ರಾಮಗಳ ಮಧ್ಯದಲ್ಲಿ
ಹರೂಗುಡ್ಡ	೧೫೦೦	ಮಾರುಗದ್ದೆ ಗ್ರಾಮದಲ್ಲಿ ಉತ್ತರಭಾಗದಲ್ಲಿ.
ಹಂಡೇಗುಡ್ಡ	೨೮೫೫	ಕಂಚೀಮಾಲೇ ಈಶಾನ್ಯಕ್ಕೆ ಕಂಚಿನ ಘಟ್ಟ ಗ್ರಾಮದಲ್ಲಿಯೇ ಅದೆ.
ಮಕ್ಕೀಗದ್ದೆಗುಡ್ಡ	೧೨೯೯	ಮಾರುಗದ್ದೆ ದಕ್ಷಿಣಕ್ಕೆ ಮಕ್ಕೀಗದ್ದೆ ಗ್ರಾಮದಲ್ಲಿ
ಮಂಗಿವಕಲ್‌ಗುಡ್ಡ ಜವಡೇಗುಡ್ಡ ಸೆಟ್ಟೀಗದ್ದೆಗುಡ್ಡ	೧೫೦೦ ೧೨೫೦ ೧೦೩	} ಕಂಚಿನಮಾಲೇ ದಕ್ಷಿಣಕ್ಕೆ ಅಗಸೂರ ಮೀಯಲ್ಲಾಪೂರ ರಸ್ತೆಯ ಉತ್ತರ ಒದಿ ೧–೧೫-೨ ಮೈಲಿನಲ್ಲಿ ಅಗಸೂರ ಗ್ರಾಮದಲ್ಲಿಯೇ ಬರುತ್ತವೆ.
ಅಗಸೂರ ಗುಡ್ಡ	೧೩೭೦	ಅಗಸೂರ ದಕ್ಷಿಣಕ್ಕೆ ಅಗಸೂರ ಗ್ರಾಮದಲ್ಲಿ
ಅಡ್ಲೂರ ಗುಡ್ಡ	೧೪೪೮	ಅಡಲೂರ ದಕ್ಷಿಣಕ್ಕೆ ಅದೇ ಗ್ರಾಮದಲ್ಲಿ
ನವಗದ್ದೆಗುಡ್ಡ	೧೩೭೫	ಬಾಳೆಗುಳಿ ಪೂರ್ವಕ್ಕೆ ಮಾರ್ಗಕ್ಕೆ ೧ ಮೈ ನವಗದ್ದೆ ಗ್ರಾಮದಲ್ಲಿ
ಕಲ್ಲಗೊಡದಗುಡ್ಡ	೨೫೨೨	ಶೀಡಗೇರಿ ಪೂರ್ವಕ್ಕೆ
ಸಕಲ್ ಟೀಣದ ಗುಡ್ಡ	೧೪೦೦	ಅವರ್ಸಾ ಪೂರ್ವಕ್ಕೆ

ಸಿಲ್ಲೂರ ,,	೨೦೧	ಭಾವಿಕೇರಿಪೂರ್ವಕ್ಕೆ
ವರೀಲ್ ಬೇಣದಗುಡ್ಡ	೧೪೫೮	ಹಾರವಾಡಿ ಉತ್ತರಕ್ಕೆ ಕಾರವಾರ ತಾ– ನಗಡಿ ವರೀಲಬೇಣ ಗ್ರಾಮದಲ್ಲಿ
ಕೇಣಿಗುಡ್ಡ	೧೩೫೫	ಕಾರವಾರಕ್ಕೆ ಹೋಗುವರಸ್ತೆ ಸಮುದ್ರ ಬೀಚಿಗೆ ಕೂಡುವಲ್ಲಿಂದ ನೈರುತ್ಯಕ್ಕೆ
ಒಬ್ಬರವಾಡಿಗುಡ್ಡ	೧೯೫೫	ಸಮುದ್ರ ದಂಡಿಗೆ
ಬಿಳಂಬಾರದಗುಡ್ಡ	೨೮೪	ನದೀಬಾಗದ ದಕ್ಷಿಣಕ್ಕೆ
ವಾಡಿಭೋಗ್ರಿಗ ಡ್ಡ	೧೪೬೬	ಬಿಳಂಬಾರದ ನೈರುತ್ಯಕ್ಕೆ ಸಮುದ್ರ ದಂಡಿಗೆ ಇದಕ್ಕೆ ನಮಿಲಗುಡ್ಡವೆಂದೂ ಅನ್ನುವರು.
ಶಿಟಗೇರಿಗುಡ್ಡ	೩೫೫೬	ಅಂಕೋಲಾ ಕುಮಟಾ ಮಾರ್ಗದ ಪಶ್ಚಿಮಕ್ಕೆ
ತೆಂಕಣಹಡವದಗುಡ್ಡ	೨೬೦	ಸದರ ,, ,, ,,
ಬಿಳಸೆಗುಡ್ಡ	೮೦೫	ವರೀಲ್ ಬಿಳಸೆಯಲ್ಲಿ
ಶಿರೂರಗುಡ್ಡ	೧೦೧೫	ಬಿಳಸೆ ದಕ್ಷಿಣಕ್ಕೆ
ಕೋಡಸಣಿ ಗುಡ್ಡ	೪೦೫	ಶಿರೂರ ಪೂರ್ವಕ್ಕೆ ನದೀದಂಡೆ.
ಮೊಕ್ವಾಗುಡ್ಡ	೬೯೧	ಮಾದನಗೇರಿಯಿಂದ ಯಲ್ಲಾಪೂರ ಮಾರ್ಗದ ಬಲಕ್ಕೆ ೨ ಮೈಲು ಸುಮಾರಿಗೆ
ಪಾರ್ವತೀಗುಡ್ಡ	೧೩೮೫	ಸದರ ಮಾರ್ಗಕ್ಕೆ ೧॥ ಮೈಲು
ನೇಮೀಗದ್ದೆ ಗುಡ್ಡ	೪೦೦	ಮಾದನಗೇರೀ ಪಶ್ಚಿಮಕ್ಕೆ ಗೊಸೆಹಳ್ಳಿ ಈಶಾನ್ಯಕ್ಕೆ ೧॥ ಮೈಲು

ಕುಮಟಾ ತಾಲೂಕು ಪಶ್ಚಿಮಭಾಗ.

ಯಣ್ಣೆಮಡಿಗುಡ್ಡ	೩೭೫	ಮಾದನಗೇರಿ ಪೂರ್ವಕ್ಕೆ ಕಾರಿಬೈಲ ಹತ್ತರ
ಬೀದರಗಿರಿಗುಡ್ಡ	೩೦೯	ಬೆಂಕಿ ಕೊಡ್ಲಗಣಿಗೆ (ಇ ಗರ್ಚಿ) ಪೂರ್ವ ಬದಿಗೆ ೨ ಮೈಲು
ಕೋಟಿತೀರ್ಥಗುಡ್ಡ	೩೭೫	ಗೋಕರ್ಣಕೋಟೀ ತೀರ್ಥದ ದಕ್ಷಿಣಕ್ಕೆ
ರಾಮತೀರ್ಥಗುಡ್ಡ	೧೯೦	ಗೋಕರ್ಣದ ದಕ್ಷಿಣಕ್ಕೆ ಸಮುದ್ರಕ್ಕೆ ಹೊಂದಿ
ಉಮಾಮಹೇಶ್ವರಗುಡ್ಡ	೨೦೬	ರಾಮತೀರ್ಥದ ದಕ್ಷಿಣಕ್ಕೆ ಸಮುದ್ರದಂಡಿಗೆ
ಭೀಮಕೊಂಡ (ಅಶೋಕೆ)ಗುಡ್ಡ	ಳಳಳ	ಬೇಲೆಕಾನಿನ ಉತ್ತರಕ್ಕೆ ಮೇಲಿನ ಮೂರು ಗುಡ್ಡದ ತಲೆಯ ಸಂಗಡ ಇದರ ತಲೆಯನ್ನು ಕೂಡಿಸಿದರೆ ಕಾ. ಪೌ ಕೋನವಾಗುವದು

ಬೀಲೇಕಾನ ಬಂದರಗುಡ್ಡ	೩೦೯	ಹಡಿಕೇರಿ ಹತ್ತರ
ತಲಗೇರಿಗುಡ್ಡ	೨೩೦	ಸಾಣೇಕಟ್ಟಿಂದ ಮಾದನಗೇರಿಗೆ ಹೋಗು ಉಪ್ಪಿನ ಅಗರ ಮಾರ್ಗದಲ್ಲಿ ಬಲಕ್ಕೆ ಹೊಂ ತೊರ್ಕೆ ಹತ್ತರ
ನುಸಿಕೋಟಿಗುಡ್ಡ	೧೩೭	
ಮೊರಬದಗುಡ್ಡ	೨೦೪	ಮೊರಬ ಬಿಳಕುಳಿಗಳ ನಡುವೆ
ಹಿಲ್ಲೆಮಕ್ಕಿಗುಡ್ಡ	೧೦೧	ತೊರ್ಕೆಯ ಉತ್ತರ ಈಶಾನ್ಯಗಳಲ್ಲಿ
ಮಳಲಗುಡ್ಡ	೧೬೭	ಮಾರ್ಗದ ಪಶ್ಚಿಮ ಭಾಗದಲ್ಲಿ
ಹಳೆರಾಜ್ಯದಗುಡ್ಡ	೨೦೬	
ದೇವಸದಗುಡ್ಡ	೨೩೦	ತೋರ್ಕೆಯ ಅಗ್ನೆಯಕ್ಕೆ ಮಾರ್ಗದ ಪೂವ
ತೋರ್ಕೆಗುಡ್ಡ	೧೩೦	ಬದಿಯಲ್ಲಿ
ತೋರೆಗಜ್ಜಿಗುಡ್ಡ	೧೦೬	ಹೊಸಗಟ್ಟಿನಹತ್ತರ
ನುಸೀಕೋಟಿಗುಡ್ಡ	೧೩೭	
ಕಿಮ್ಮಾನಿಗುಡ್ಡ	೩೩೪	
ಕುಂದಿಗುಡ್ಡ	೧೦೪೭	ಮೊರಬ ಹೆಗಲಿಗಳನಡುವೆ
ದೀವಟಿಗುಡ್ಡ	೧೧೭೨	ಹೆಗಲೆ ಈಶಾನ್ಯ ಹೊನ್ನಕೆರೇ ಉತ್ತರಕ್ಕೆ
ಪೋಕಿರಚೆಂಡಿ	೧೪೦	ಸಂತೇಗೆದ್ದೆ ವಾಯವ್ಯಕ್ಕೆ
ಸಂತೆಗದ್ದೆಗುಡ್ಡ	೬೫೨	ಮಿರ್ಜಾನ್ ಹೊನ್ನಕೇರೆ ಮಾರ್ಗದ ಎಡಕ್ಕೆ
ಸೇಮಾನಿಗುಡ್ಡ	೧೧೪೫	ಯಲವಳ್ಳಿ ನೈರುತ್ಯಕ್ಕೆ
ಪರ್ವತೇಶ್ವರ	೫೩೪	ಹೊನ್ನಕೇರೆ ಹತ್ತರ ದೇವರ ಸ್ಥಾನವುಂಟು
ಯಲವಳ್ಳಿಗುಡ್ಡ	೨೭೪	ಯಲವಳ್ಳಿ ಪೂರ್ವಕ್ಕೆ
ಅಂತರವಳ್ಳಿಗುಡ್ಡ	೫೦೫	ಯಲವಳ್ಳಿ ದಕ್ಷಿಣಕ್ಕೆ
ಸೆಟ್ಟಿಗದ್ದೆ	೩೪೪	ಕುಮಟಾ ಶಿರ್ಶಿರಸ್ತೆಯ ಮೇಲೆ ಉಪ್ಪಿನ ಪಟ್ಟಿಗ
		ದಿಂದ ಈಶಾನ್ಯಕ್ಕೆ
ಕಾಗಾಲಬಾಡ ಕೋಟಿಗುಡ್ಡ	೪೧೦	
ಗುಡೇಅಂಗಡಿ ಅಮ್ಮನವರಮನೆ	೧೩೦	
ಕಡಲೆಗುಡ್ಡ	೧೪೪	ಹೊಲ್ಲಗದ್ದೆ ದಕ್ಷಿಣಕ್ಕೆ ಸಮುದ್ರದಂಡೆಗೆ
ವನ್ನಳ್ಳಿಗುಡ್ಡ	೧೪೪	

ಾಸೂರಗುಡ್ಡ	೨೦೫	ನಾಣೆಕಟ್ಟಿನಿಂದ ಹಳ್ಳಾರಿಗೆ ದೊಣೇ ಮೇಲಿಂದ
ಕ್ಕೆರೆಕೇರಗಜ್ಜಗುಡ್ಡ	೨೪೩	ಹೋಗುತ್ತಾ ಪೂರ್ವದಲ್ಲಿ
ದಗುಣಿಗುಡ್ಡ	೧೩೫	ಮದಗುಣಿ ದಕ್ಷಿಣಕ್ಕೆ
ಳ್ಳಾರಗುಡ್ಡ	೨೧೨	ಹಳಕಾರ ದಕ್ಷಿಣಕ್ಕೆ
ತ್ರಿಗೆಗುಡ್ಡ	೨೩೭	ಚಿತ್ರಿಗೆಮಾರ್ಗದ ಪೂರ್ವಕ್ಕೆ
ೂನ್ನಮಾವಗುಡ್ಡ	೧೩೧	ಕುಮಟೆಯ ಅಗ್ನೇಯಕ್ಕೆ (ಇಗರ್ಜಿಹತ್ತರ)
ೂಬೇಕಾನಗುಡ್ಡ	೪೦೮	ಹಂದಿಗೋಣ ಪೂರ್ವಕ್ಕೆ ಬಗ್ಗೋಣ ದಕ್ಷಿಣಕ್ಕೆ
ೋರೆಗುಡ್ಡ	೨೭೩	
ಗತೀರ್ಥಗುಡ್ಡ	೧೩೯	ಗೋರೆಗುಡ್ಡದ ದಕ್ಷಿಣಕ್ಕೆ
ರನೀರಗುಡ್ಡ	೨೧೦	ಧಾರೇಶ್ವರದ ಪೂರ್ವ ಈಶಾನ್ಯಕ್ಕೆ
ಮನಗಂಡಿ ಗುಡ್ಡ	೩೫೦	ಧಾರೇಶ್ವರದ ಹತ್ತರ
ೂರಭಾಗದಗುಡ್ಡ	೪೪೧	ಬೆತ್ತಗೇರೀ (ಹೊಳೀಗದ್ದೆ) ಪಶ್ಚಿಮಕ್ಕೆ
ೂರೂರಗುಡ್ಡ	೫೫೭	ಮೂರೂರ ಕಲ್ಲಬ್ಬೆನಡುವೆ
ಲಕೇರಿಗುಡ್ಡ	೩೪೪	ವಾಲಗಳ್ಳಿ ಹೆರವಟ್ಟಿಗಳ ನಡುವೆ ಮಾರ್ಗದ ದಕ್ಷಿಣಕ್ಕೆ
ೂಜಳ್ಳಿಗುಡ್ಡ	೨೫೨	ಕುಜಳ್ಳಿ ಕೋನಳ್ಳಿ ನಡುವೆ
ೋನಳ್ಳಿಗುಡ್ಡ	೩೩೩	ಕೋನಳ್ಳಿ ಮಲ್ಲಾಪೂರದ ಹತ್ತರ

(ಮುಂದೆ ನಾಗುವದು.)

ವಿದ್ಯಾಖಾತೆಯ ನೋಟೀಸುಗಳು.

೧೯೧೭ನೆಯ ಇಸವಿಯ ವರ್ಧಪ್ರಾಯಿಮ್ಕು ಪರೀಕ್ಷೆಯು.

ಮೆ. ಎಜ್ಯು॥ ಇಸ॥ ದಕ್ಷಿಣಭಾಗ ಇವರ ಇಂಗ್ರೇಜಿ ಪತ್ರ ನಂಬರ್ ೧೦೧೦೨೪೯೦ ನೇ ಕಾರ ತಿಳಿಸುವದೇನಂದರೆ:— ಕನ್ನಡದಲ್ಲಾಗತಕ್ಕ ವರ್ಧಪ್ರಾಯಿಮ್ಕು ಪರೀಕ್ಷೆಯು ॥-೩ ಜೂನ ೧೯೧೭ನೇ ಇಸವಿಯ ದಿವಸ ಪ್ರಾತಃಕಾಲದ ೧೦ಗಂಟ್ಟಿ ಘಂಟಿಗೆ ಸರಿ ಾಗಿ, ೧೯೧೮ನೇ ಇಸವಿಯ ಫೆಬ್ರುವರಿ ತಿಂಗಳ ಶಾಲಾಪತ್ರಕದಲ್ಲಿ ಪ್ರಕಟಿಸಿದ ನಿಯ ಗಳಿಗನುಸಾರವಾಗಿ ಧಾರವಾಡ ಟ್ರೇನಿಂಗಕಾಲೇಜಿನಲ್ಲಿ ತೆಗೆದುಕೊಳ್ಳಲಡುವದು ಪರೀಕ್ಷೆಯಲ್ಲಿ ೪೦ ರೂಪಾಯಿಯದೊಂದು ೨೦ ರೂಪಾಯಿಯದೊಂದು ಹೀಗೆ ಎರ ಇನಾಮುಗಳಿರುವವು. ಉಮೇದವಾರರು ತಾ॥ ೧೫ನೇ ಜೂನ ೧೯೧೭ನೇ ಇಸ್ವಿಯೊ ಾಗಿ ತಲಪುವಂತೆ ತಮ್ಮ ಅರ್ಜಿಗಳನ್ನು ನಮ್ಮ ಕಡೆಗೆ ಕಳಿಸಬೇಕು.

ೇನಿಂಗ ಕಾಲೇಜ ಧಾರವಾಡ
೧೩-೫-೧೯೧೭

R. S. Kulkarni
ಪ್ರಿನ್ಸಿವಾಲ.

ನೋಟೀಸು ನಂ. ೧೨೯೭೬

ಮೆ. ಡಾಯರೇಕ್ಟರ ನಾಯಿ ರವರಿಂದ ಮಂಜೂರು ಮಾಡಿದಂಥ ಪುಸ್ತಕಗಳ ಪಟ್ಟಿಯು,

ಅನುಕ್ರಮ ನಂ.	ಪುಸ್ತಕದ ಹೆಸರು.	ಪುಸ್ತಕವು ಮುದ್ರಿಸಲ್ಪಟ್ಟ ಭಾಷೆ.	ಪುಸ್ತಕವು ಯಾತಬಗ್ಗೆ ಮಂಜೂರು ಮಾಡಲ್ಪಟ್ಟದೆ.	ಬೆಲೆ.	ಶರಾ.
	ಬ್ರಿಜ್ ಬಸೇಲಾಲ ಬಿ. ಎ ಕಪಾವುನ ಜಿನಿಜನಪ ರಾಲಾ ಆ. ಇ. (ಸಂಯುಕ್ತ ಪ್ರಾಂತ) ಇವರ ಪುಸ್ತಕಗಳು.		ಉರ್ದು ಶಾಲೆಗಳ ಉಪಯೋಗಕ್ಕಾಗಿ, ಹಾಗು ಉರ್ದುಶಾಲೆಗಳ ಇನಾಮಿನ ಮತ್ತು ಲಾಯಬ್ರರಿ ಪುಸ್ತಕಗಳಿಗಾಗಿ.		
೧	ಜುಡಿದ ಮೋಯಾಲ್ಲಿಮೆ ಉರ್ದು.	ಉರ್ದು.		೦–೮–೦	
೨	ಜುಫ್ರಾಫಿಆಕ್ ಅಲಮ್ ಜಡಿದಹಿನಾಯಿ ಅವಲ್.	,,	ಉರ್ದು ಶಾಲೆಗಳ ಉಪಯೋಗಕ್ಕಾಗಿ ಹಾಗು ಇನಾಮಿನಬಗ್ಗೆ	೦–೧೨–೦	
೩	ಸದರ ದುಅಮ್.	,,		೦–೨–೦	
೪	ಸದರ ಸುಅಮ್.	,,		೦–೧೨–೦	
	ಮುಹಮ್ಮದ ಮುಕ್ತಾಪಾ ಖಾನ ಶರ್ವಾನಿ ಅಲೀಗಡ ಇವರ ಪುಸ್ತಕಗಳು.				
೫	ದೀನಾವತ್ ಕಾ ಪಾಹಲಾ ರಿನಾಲಾ.	,,	ಉರ್ದು ಶಾಲೆಗಳ ಇನಾಮಿಗಾಗಿ.		
೬	ಸದರ ದುಸರಾ ರಿನಾಲಾ.	,,			
	ರಾಯಬಾಹದ್ದೂರ ಕೇ. ಆರ್. ಥಾಸೇರ್ ಲಾಹೋರ ಇವರ ಪುಸ್ತಕಗಳು.				
೭	ಪ್ರೊಫೇಸರ ರಾಮಸೇ ಮ್ಯುಲರ ಇವರ "ಜರ್ಮನಿಯ ವಿರುದ್ಧ ಬ್ರಿಟನ್ನದ ಪ್ರಕರಣ" ಈ ಪುಸ್ತಕದ ಉರ್ದು ಭಾಷಾಂತರ.	,,	ಉರ್ದು ಶಾಲೆಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯು	೧–೦–೦	
	ಶೇಖ ಅಬ್ದುಲ್ ಅಝೀಜ್ ಬಿ. ಎ. ಲೋಅಲ್ ಫಾಟ್ಸ ಸಬ್ಜಿಶಿಂಗ ಅಸೋಸಿಯೇಶನ ಲಾಹೋರ ಇವರ ಪುಸ್ತಕಗಳು.				
೮	ಶೇರ-ಇ-ಬಾರ್ಟಾನಿಯಾ-ಗತಿಸಿದ ಲಾರ್ಡ ಕಿಚನರ ಇವರ ಚರಿತ್ರ	,,	ಸದರ.	೧–೪–೦	

Office of the Director of Public Instruction
Poona, 21st February 1918.

K. B. Joshi
for Director of Public Instruc

ನೋಟೀಸು.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧಮಾಡಿರುತ್ತದೆ.

ಪುಸ್ತಕಗಳ ನಂಬರು	ಪುಸ್ತಕಗಳಹೆಸರು	ಗ್ರಂಥಕರ್ತರ ಹೆಸರು	ಭಾಷೆ	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು.	ಮಂಜೂರು ಮಾಡಿದ ಬಗ್ಗೆ ಇಸವಿ ನಂಬರು
೧	ರಾಮಕುಬ್ಜ.	ಬಿ. ವೆಂಕಟಕೃಷ್ಣಯ್ಯಾ	ಕನ್ನಡ	ಪ್ರಾಥಮಿಕ ಮತ್ತು ಸೆಕಂಡರೀಸ್ಕೂಲುಗಳ ಇನಾಮಿಗಾಗಿಯೂ, ಲಾಯಬ್ರರಿಗಾಗಿಯೂ.	೧೮೮೯೭
೨	ಜಸೀ ಜಾರ್ಜಬಾದಶಹರ ಚರಿತ್ರೆ.	ಚಂದ್ರಶೇಖರಶಾಸ್ತ್ರಿ ಅಸಿ|| ಮಹಾರಾಜಾ ಉಸರ್ ಬೋರ್ಡಿಂಗ ಮೈಸೂರು.	,,	ಪ್ರಾಥಮಿಕ ಶಾಲೆಗಳ ಇನಾಮಿಗಾಗಿ.	೧೮೯೯೬
೩	ಛತ್ರಪತಿ ಸಂಭಾಜಿ ಮಹಾರಾಜ.	ಕೃಷ್ಣರಾವ ಮುದ್ಗಲರಾವ ಹೂಯಿಲಗೋಳ	,,	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ.	೧೮೯೯೬೫
೪	ಜಸೀ ಇಯತ್ತೈಯ ಅಂಕಗಣಿತ ಪಟ್ಟಿ ೫ ಆಣೆ.	ಆರ್. ಅಳವಾರ ಅಯ್ಯಂಗಾರ ಅಸಿ|| ಡಿಪೂಟಿ. ಕೋರ್ ಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪೂರ.	,,	ಸದರ	೧೮೯೯೬೬
೫	ಸದ್ಗುರು ಪ್ರಭಾವ	ಎಚ್. ಚಿದಂಬರಯ್ಯಾ ಕೇರಳಫ್ ಕುರ್ತಕೋಟಿ ಮಹಾಭಾಗವತ.	,,	ಪ್ರಾಥಮಿಕ ಮತ್ತು ಸೆಕಂಡರೀ ಸ್ಕೂಲುಗಳ ಲಾಯಬ್ರರಿಗಾಗಿ.	೧೮೯೯೬೭
೬	ಜಸೀ ಇಯತ್ತೈಯ ಅಂಕಗಣಿತ ಪಟ್ಟಿ ೫ ಆಣೆ.	ಆರ್. ಅಳವಾರ ಅಯ್ಯಂಗಾರ ಅಸಿ|| ಡಿಪೂಟಿ. ಕೋರ್ ಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪೂರ	,,	ಸದರ	೧೮೯೯೬೮

Office of the Educational Inspector, S. D.

DHARWAR. 8th February, 1918.

K. S. Hungund.
Educational Inspector, S. D.

ಕರ್ನಾಟಕ ಶಿಕ್ಷಕ ಮಂಡಲ ಧಾರವಾಡ.

ಬರುವ ಜೂನ ತಿಂಗಳ ಸಮ್ಮೇಲನದಲ್ಲಿ ಪಾಠಗಳನ್ನು ಕಲಿಸಿ ತೋರಿಸಲು ಶಿಕ್ಷಕಲಿಯಲ್ಲಿ ನುರಿತವರಿಗೆ ವಿಜ್ಞಾಪನೆ ಮಾಡಿಕೊಳ್ಳತಕ್ಕದ್ದಿರುವದು. ಶಿಕ್ಷಕರಿಗೆ ವಿಶೇಷ ಗಡಚಿಸಿಸುವ ಪಾಠಗಳನ್ನು ಸೂಚಿಸಿದರೆ ಅವುಗಳನ್ನು ಕಲಿಸಿ ತೋರಿಸುವ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುವದು. ಈ ಸಮ್ಮೇಲನದಬಗ್ಗೆ ಮತ್ತೇನಾದರೂ ವಿಶೇಷ ಸೂಚನೆಗಳನ್ನು ಮಾಡಲಿಚ್ಛಿಸುವವರು ಕೂಡಲೆ ಬರೆದು ತಿಳಿಸಿದರೆ ಉಪಕಾರವಾಗುವದು.

ಮಂಡಲದಿಂದ ಪ್ರಸಿದ್ಧವಾಗಿರುವ ಪಾಠಮಾಲೆಯು ಮುಟ್ಟಿದಿದ್ದ ಮೆಂಬರರು ತಪ್ಪ ಸದ್ಯದ ಪತ್ತೆಯನ್ನು ದಯವಿಟ್ಟು ತಿಳಿಸಬೇಕೆಂದು ಅಪೇಕ್ಷಿಸುವೆವು.

ಧಾರವಾಡ ನೆ ಸ. ಜೋಗದಾಳ.
೧-೬-೧೯೧೯ ಸೆಕ್ರೆಟರಿ.

ನೋಟೀಸು.

ತಾ॥ ೬ ನೇ ಸಪಟಂಬರ ೧೯೧೭ ನೆಯ ಮುಂಬಯಿ ಸರಕಾರೀ ಗ್ಯಾಝೆಟ್ಟಿನ ಭಾಗ ೨ರ ೧೪೧೫ ಪುಟ ಹಾಗು ೧೪೧೬ ಪಾನುಗಳಲ್ಲಿ ಛಾಪಿಸಿದ ವಿದ್ಯಾಖಾತೆಯ ಜಾಹೀರಾತು ನಂಬರ ೪೯೯೯ ನೇದರಲ್ಲಿ ಸಮೂದಿಸಿದ ಪ್ರಕಾರ ತಾ. ೧–೧–೧೯೧೭ ರಿಂದ ಮುಂದೆ ಹತ್ತು ವರ್ಷಗಳವರೆಗೆ ಕನ್ನಡ ಕ್ರಮಿಕ ಪುಸ್ತಕಗಳನ್ನು ಮುದ್ರಿಸುವ, ಪ್ರಸಿದ್ಧ ಮಾಡುವ, ಸಂಗ್ರಹಿಸುವ ಮತ್ತು ಮಾರಾಟಮಾಡುವ ಬಗ್ಗೆ ಬಾಸೆಲ್‌ಮಿಶನ್‌ಬುಕ್ ಮತ್ತು ಟ್ರ್ಯಾಕ್ ಸೆಕ್ಷೋಸ್ಯಿಟಿಯ ಮಂಗಳೂರ ಈ ಸಂಸ್ಥೆಯ ಮ್ಯಾನೇಜರರ ಟೆಂಡರವನ್ನು ಸರಕಾರದವರು ಸ್ವೀಕಾರ ಮಾಡಿದ್ದಾರೆ. ಎಂದು ಮೆ. ಡಾ. ಸಾ. ಬಾ. ಇಲಾಪ ಮುಂಬಯಿ ಇವರು ತಮ್ಮ ಇಂಗ್ರೇಜಿ ಸಂಬರ $\frac{13290}{7-2-1918}$ ದಿಂದ ತಿಳಿಸಿರುತ್ತಾರೆ.

ಟ್ರೇನಿಂಗ ಕಾಲೇಜ ಧಾರವಾಡ. } R. S. Kulkarni
೨೫-೨-೧೯೧೮ } ಪ್ರಿನ್ಸಿಪಾಲ.

ಬೆಲ್ಜಿಯನ್ ಹುಡುಗರ ಸಹಾಯಾರ್ಥವಾಗಿ ವಸೂಲಾದ ಹಣದ ವಿವರವು.

ತಾ. ಪರಸಗಡ.

(ಜನಸಂ ಸಂಖ್ಯೆಯಿಂದ ಮುಂದೆ ಸಾಗಿದ್ದು.)

ಮೊರಗೋಡ ಗರ್ಲ್ ೧೩–೫–೦, ಮುತವಾಡ ೨–೦–೦, ಮುಗಳೀಹಾಳ ೩–೪–೦, ಸತ್ತಿಗೇರಿ ೧೫–೦–೦, ತಿರಸಂಗಿ ೧೮–೮–೦, ತಿವಾಪೂರ ೮–೦–೦, ಸೊಪ್ಪಡ್ಲ ೫–೧೦–೦, ಸುತಗಟ್ಟಿ ೧–೪–೦, ಉಗರಗೋಳ ೧೫–೦–೦

ಕ್ಕುಂಡಿ ೮–೦–೦, ಯರಗಟ್ಟಿ ೧೦ ೧–೦, ಯರಹುರವಿ ೫–೦–೦, ಅಂತು. ೨೯೨೧೨

ಗಾಂವಠೀಶಾಲೆಗಳು: - ಚಿಕ್ಕುಂಬಿ ೨-೪–೦, ಕಗಧಾಳ ೬–೦–೦

ತಾ. ಸಂಪಗಾಂವ.

ಅಂಬಡಗಟ್ಟಿ ೧-೮–೦, ಅನಿಗೋಳ ೧–೦–೦, ಅಪಟೂರ ೧–೦–೦ ವರಾದಿ ೦-೧೨–೦, ಬೈಲಹೊಂಗಲ ೩೬–೧೫–೯, ಬೈಲಹೊಂಗಲ ಗರ್ಲ, ೦–೦, ಬೈಲಹೊಂಗಲ ಉರ್ದು ೫–೨–೯, ಬೈಲಹೊಂಗಲ ಉರ್ದುಗರ್ಲ ೪-೩, ಬೈಲೂರ ೨–೦ ೦, ಬೈಲವಾಡ ೫–೦–೦, ಬಸಾಪೂರ ೧-೧೦–೦, ಳವಡಿ ೬ ೦–೦, ಬುಡರಕಟ್ಟಿ ೩–೧೪–೦, ಬುದಿಹಾಳ ೨–೧–೬, ೀಶನೂರ ೫-೬–೦, ದೇಶನೂರ ಉರ್ದು ೩-೪-೦ ದೇವಲಾಪೂರ ೩-೦–೦ ದೇವ ೦ವ ೩-೦–೦ ಗಜಮನಹಾಳ ೨-೧–೦, ಹಣಬರಹಟ್ಟಿ ೩-೦-೬ ಹಣ್ಣೀಕೇರಿ ೧೯–೦ ೀರೆನಂದೀಹಳ್ಳಿ ೧–೦–೦ ಹೊಸೂರ (ಹೊಳಿ) ೧-೩–೦ ಹೊಳೆನಾಗಲಾಪೂರ ೫-೪–೦ ಲಿಕಟ್ಟಿ ೦–೧೦–೦ ಹುಣಶೀಕಟ್ಟಿ ೧-೪–೦ ಕಾದರೋಳಿ ೨-೧–೦ ಕಿತ್ತೂರ ೧ನೇಸಂಬರ ೫-೬–೦ ಕಿತ್ತೂರ ೨ನೇಸಂಬರ ೪–೧೦–೯, ಕಿತ್ತೂರ ಗರ್ಲ ೫–೦–೦, ಕಿತ್ತೂರ ಉರ್ದು ೪–೦, ಕಿತ್ತೂರ ಉರ್ದು ಗರ್ಲ ೨-೦–೦ ಮಿದಾನಪೂರ ೧-೪–೬. ಮ್ಯಾಕಲಮರಡಿ ೪–೦ ಮಾಸ್ತಮರ್ಡಿ ೨-೦–೦, ಮತ್ತೀಕೊಪ್ಪ ೧-೦–೦, ಮದನಭಾವಿ ೦-೪–೦, ಮರಿ ೬ ೦–೨-೦ ಮುನವಸವ ೨-೦–೦, ಮುಗಟಖಾನಹುಬಳಿ ೧೫–೧೪–೬ ಮುಗಟಖಾ ಹುಬಳಿ ಗರ್ಲ ೧–೧೦–೬, ಮಗಟಖಾನಹುಬಳಿ ಉರ್ದು ೨-೪–೦, ನಾಗನೂರ ೪–೦, ನೇಗಿನಹಾಳ ೪–೧೩–೩, ನೇಸರಗಿ ೧೫–೦–೦, ನೇಸರಗಿ ಗರ್ಲ ೦-೪–೦, ಪಗಾಂವ ಗರ್ಲ ೧–೬–೦, ಸಂಗೋಳಿ ೩-೨–೬, ಸೀಗೀಹಳ್ಳಿ ೪–೦–೦, ಸುತಗಟ್ಟಿ ೦–೦. ತಿಗಡಿ ೨–೦–೦, ತಿಗಡೊಳ್ಳಿ೩–೦–೦, ತುರುಮರಿ ೧-೪–೦, ತುರುಕರಶೀಗೀಹಳ್ಳಿ ೦–೦, ಉಡಕೇರಿ ೨–೦–೦, ಉಗರಖೋಡ ೪-೪–೬, ವಕ್ಕುಂದ ೪–೧೫–೦, ವಕ್ಕುಂದ ೯ ೦–೧೦–೦. ವಣ್ಣೂರ ೨–೦–೦, ಅಂತೂ ೨೪೪-೯-೩.

ಅಥಣಿ ಮ್ಯುನಸಿಪಾಲಿಟಿ ಶಾಲೆಗಳು.

ಆಂಗ್ಲೋವ್ಹರ್ನ್ಯಾಕ್ಯುಲರ ಸ್ಕೂಲ ೮-೮–೦, ಕನ್ನಡ ೧ ನೇ ನಂಬರ ಶಾಲೆ ೧೧-೬, ಸದರ ೨ ನೇ ನಂಬರ ಶಾಲೆ ೪-೧೨–೦, ಕನ್ನಡ ಗರ್ಲಸ್ಕೂಲ ೧೪–೦–೦ ಗಂಡುಹುಡುಗರ ಶಾಲೆ ೨-೮–೦ ಉರ್ದು ಗರ್ಲಸ್ಕೂಲ ೨–೦–೦, ಥೇಡಸ್ಕೂಲ ೫–೦, ಏಡೆಡ್‌ಸ್ಕೂಲ ೧ನೇನಂಬರ ೧೦–೯–೦, ಸದರ ೨ನೇನಂಬರ ೬–೧೪–೦, ಸದರ ೩ನೇನಂಬರ ೨–೧೪–೦, ನಾಟಕದಿಂದ ೨೯–೪–೦, ಅಂತೂ, ೧೦೧–೦–೦.

ಬೆಳಗಾಂವಿ ಮ್ಯುನಸಿಪಾಲಿಟಿ ಶಾಲೆಗಳು.

ಮರಾಠಿ ಗಂಡುಹುಡುಗರ ಶಾಲೆ ೧ನೇನಂಬರ ೫-೧೧–೦, ಸದರ ೨ನೇನಂಬರ ಕನ್ನಡ ಗಂಡುಹುಡುಗರ ಶಾಲೆ ೧೦ನೇನಂಬರ ೨-೧೧-೬, ಸದರ ೨ನೇನಂಬರ

೪-೭-೦, ಸದರ್‌ಬಜಾರಸಬಾಗ ೧-೫-೦. ಥೋಡಸ್ಕೂಲ ೬-೧೧-೦, ಮರಾಠಿ ಗಲ
ಸ್ಕೂಲ ೧೯ೇಸಂಬರ ೫-೧೪-೦, ಸದರ ೨ನೆಸಂಬರ ೦-೧೦-೬, ಸದರ ೩ನೇಸಂಬ
೧-೯-೦, ಕನ್ನಡ ಗರ್ಲಸ್ಕೂಲ ಭಡಕಲಗಲ್ಲಿ ೨೭-೬-೧, ಉರ್ದು ಗಂಡು ೪-೧೩-೬
ಉರ್ದು ಹೆಂಣು ೧ನೇಸಂಬರ ೨-೧೨-೦, ಸದರ ೨ನೇಸಂಬರ೨-೦-೦ ಅಂತೂ ೬೧-೧೦-೦

ಸವದತ್ತಿ ಮ್ಯುನಸಿಪಾಲಿಟಿ ಶಾಲೆಗಳು.

ಕನ್ನಡ ಗಂಡುಹುಗರ ಶಾಲೆ ಮತ್ತು ಉರ್ದುಶಾಲೆ ಮತ್ತು ಇಂಗ್ಲಿಷಶಾಲೆಗಳ
ಕೂಡಿ ೧೦೦-೧೦-೦, ಹೆಣ್ಣುಹುಡುಗರ ಶಾಲೆ ೩-೨-೦ ಅಂತೂ ೧೦೩-೧೨ ೦

ನಿಪ್ಪಾಣಿ ಮ್ಯುನಸಿಪಾಲಿಟಿ ಶಾಲೆಗಳು.

೧ನೇಸಂಬರ ಶಾಲೆ ೨೧-೧-೨, ೨ನೇಸಂಬರ ಶಾಲೆ ೧೬-೬-೦, ಉರ್ದುಶಾ
೩-೧೪-೦, ಗರ್ಲಸ್ಕೂಲ ೨-೨-೦, ನಾಟಕದಿಂದ ೧೦೧-೪-೦ ಅಂತೂ ೧೪೪-೧೧-೦

ಗೋಕಾಕ ಮ್ಯುನಸಿಪಾಲಿಟಿ ಶಾಲೆಗಳು.

ಕನ್ನಡ ೧ನೇಸಂಬರ ಶಾಲೆ ೧೩-೧೩-೦, ಸದರ ೨ನೇಸಂಬರ ೧೦-೧೨-೦
ಸದರ ೩ನೇಸಂಬರ ೧೨-೬-೦, ಉರ್ದುಶಾಲೆ ೩-೧೦-೦, ಮರಾಠಿಶಾಲೆ ೩-೮-೦
ಗರ್ಲಸ್ಕೂಲ ೬-೨-೦, ಇಂಗ್ಲಿಷ್‌ಶಾಲೆ ೧೪-೪-೦, ಅಂತೂ ೬೪-೩-೦

ಕೂಟಪ್ರಶ್ನೆಗಳ ಉತ್ತರ.

(೧೯೧೩ ನೇ ಸಂಬರ ಪಾಟೀಕೆಯಲ್ಲಿ ವಿ. ಗ್ರಾ. ಪ. ಶಾಡಂಬಿ ಇವರು ಕೊಟ್ಟ ಪ್ರಶ್ನೆಗಳುತ್ತರ.)

ಒಂದುಕೀಡಿ, ಮತ್ತೊಂದು ರೇತಿಮೆಯ ಹುಳವು.

ಚರ್ಮದಿಂದ ಸುಕ್ಕಿದವುಗಳಾಗಿ ಹಿಂದೆಬಾಳಿದಂತೆ ಮುಂದೆ ಬಾಳದವುಗಳಾ
ಎರಡೂ ವೃದ್ಧಪ್ರಾಣಿಗಳಾಗಿದ್ದು ತೊಪ್ಪಲಾಹಾರದಿಂದಲೂ ನಡಿಗೆ ಮತ್ತು ಆಕಾ
ದಿಂದಲೂ ಒಂದೇ ಇರುವವು. ಕೀಡೆಯು ಅನ್ಯಪ್ರಾಣಿಯಿಂದ ಬಯ್ಯಲ್ಪಟ್ಟು ಗೌಪ್ಯ
ವಾಗಿ ಇಡಲ್ಪಡುವದು. ರೇತಿಮೆಯು ಮೊಳಿವು ತನ್ನಮೈಸುತ್ತು ಗಡಚಾದ ಆವರಣ
ವೆನ್ನು ಮಾಡಿಕೊಳ್ಳುವದು. ಹೀಗೆ ತಕ್ಕರಾಗಿ ಗುಪ್ತಸ್ಥಾನದಿಂದ ಹೊರಬೀಳಲು ಗುಟ
ಪಟ್ಟಾಗಿ ಎರಡನೇ ಜನ್ಮವು ಬರುವದು. ಇವುಗಳಲ್ಲಿ ಒಂದು ಗೂಡುಕಟ್ಟಲಿಕ್ಕೆ ಶ್ರೇ
ವಾದದ್ದಾಗಿಯೂ ಮತ್ತೊಂದು ಗೂಡೇಬೇಡಾದದ್ದಾಗಿಯೂ ಇರುವವು. ಹಿಂದುಗಡೆ
ಹೆಸರು ಒಂದಕ್ಕೆ ಕುರಡೀ ಕುಠಾರವೆಂತಲೂ, ಮತ್ತೊಂದಕ್ಕೆ ಪಾತರಗಿತ್ತಿ ಎಂತಲ
ಬರುವದು.

ಈಶ್ವರಪ್ಪಾ ಗುಡ್ಡದ.
ಪ್ರೌಢವಿದ್ಯಾರ್ಥಿ ಕಾಲಹೇ

ಸಿದ್ಧನಾಥ ವಾಚನ ಮಂದಿರ.
ಶ್ರೀ ಸ್ವಾಮಿಚ್ಛಾ ಜ್ಞಾನ ಕಾರವಾಡ.

ವರ್ಷ ೫೪. | ಏಪ್ರೆಲ. ೧೯೧೮. | ಸಂಚಿಕೆ ೪.

ಹೋಳಿಯ ಆಟಗಳು.

ಹೋಳಿಯ ಹುಣ್ಣಿವೆ—ಈ ಹಬ್ಬವು ಹಿಂದೂಜನರ ದೊಡ್ಡ ಹಬ್ಬಗಳಲ್ಲಿ ಒಂದಾಗಿದೆ. ಸುಖೋಪಭೋಗಕ್ಕೆ ಅನುಕೂಲವಾದ ವಸಂತಮಾಸದ ಪ್ರಾರಂಭಕ್ಕೆ ಈ ಹಬ್ಬದ ಯೋಜನೆ ಇದ್ದು, ಜನರು ಈ ಕಾಲದಲ್ಲಿ ಧನಧಾನ್ಯಗಳನ್ನು ಸಂಗ್ರಹಿಸಿ ಸುಖಿಗಳಾಗಿರುವದರಿಂದ ಈ ಅವಧಿಯಲ್ಲಿ ೭–೮ ದಿವಸಗಳ ದೀರ್ಘ ಕಾಲದ ಹಬ್ಬವನ್ನು ಗೊತ್ತು ಮಾಡಿದ್ದು ಯೋಗ್ಯವೇಸರಿ.

ಭವಿಷ್ಯೋತ್ತರ ಪುರಾಣದಲ್ಲಿ ಈ ಹಬ್ಬವು ಬಾಲಕರ ರಕ್ಷಣಾರ್ಥವೆಂದು ಹೇಳಿದೆ. ಧರ್ಮಶಾಸ್ತ್ರದಲ್ಲಿ ದುಂಡಾ ಎಂಬಹೆಸರಿನ ರಾಕ್ಷಸಿಯು ಬಾಲಕರಿಗೆ ಅತಿಶಯ ಪೀಡೆಯನ್ನು ಉಂಟುಮಾಡುವಳು. ಆಕೆಯ ಪ್ರೀತ್ಯರ್ಥ ಅಪಶಬ್ದಗಳನ್ನು ಉಚ್ಚರಿಸಿ ಶಂಖಿಧ್ವನಿಯನ್ನು ಮಾಡಿದರೆ ಪೀಡೆಯನ್ನು ಮಾಡುವದಿಲ್ಲವೆಂದು ಹೇಳಿದೆ. ಶ್ರೀ ಶಂಕರನು ತನ್ನ ಮೂರನೇ ನೇತ್ರದಿಂದ ಮನ್ಮಥನನ್ನು ಭಸ್ಮಮಾಡಲು, ಶಿವದೂತರು ಭೂತಗಣಗಳು ಮುಂತಾದವರು ಅಪಶಬ್ದಗಳನ್ನು ಉಚ್ಚರಿಸುತ್ತ ಮನ್ಮಥನನ್ನು ಉಪಹಾಸಮಾಡತೊಡಗಿದರು. ಆಗ ಈಶ್ವರನು ಫಾಲ್ಗುಣಶುದ್ಧ ಪೂರ್ಣಿಮೆಯ ದಿವಸ ಅಂದರೆ ಮನ್ಮಥನನ್ನು ಭಸ್ಮ ಮಾಡಿದ ದಿವಸ ಮಾತ್ರ ನೀವು ಹೋಳಿಯ ಉತ್ಸವವನ್ನು ಮಾಡಬೇಕು ಎಂದು ಕಟ್ಟು ಮಾಡಿದ ಮತ್ತೊಂದು ಕಥೆಯು ಸರ್ವತ್ರ ಪ್ರಸಿದ್ಧವಿರುವದು.

ಈ ಪ್ರಕಾರ ಅಪಶಬ್ದಗಳನ್ನು ಉಚ್ಚರಿಸಲಿಕ್ಕೆ ಕೆಲವು ಆಧಾರಗಳಿರುವದರಿಂದಲೂ, ಈ ಹಬ್ಬವು ವಿಶೇಷವಾಗಿ ಅಶಿಕ್ಷಿತ ಜನರ ಪ್ರಾಬಲ್ಯದಿಂದ ಬೆಳವಣಿಗೆಯನ್ನು ಹೊಂದುತ್ತ ನಡೆದಿರುವರಿಂದಲೂ ಸದ್ಯಕ್ಕೆ ಈ ಹಬ್ಬವು ಸುಶಿಕ್ಷಿತರಿಗೆ ಅಸಹ್ಯಕರವಾಗುವಂತೆ ಪರಿಣಮಿಸಿದೆ. ಆದಕಾರಣ ಮುಂಬಯಿ ಪುಣೆ ಮುಂತಾದ ದೊಡ್ಡ ದೊಡ್ಡ ಶಹರಗಳಲ್ಲಿ ಸುಶಿಕ್ಷಿತರು ಈ ಹಬ್ಬದ ಉತ್ಸವಕ್ಕೆ ಬೇರೆ ತರದ ಸ್ವರೂಪವನ್ನು ಕೊಡಲಿಕ್ಕೆ ಪ್ರಯತ್ನಿಸುತ್ತಿರುವರು.

ಧಾರವಾಡದಲ್ಲಿ ಎರಡು ವರ್ಷಗಳಿಂದ 'ಹೋಳೀಸ್ಪೋರ್ಟ್ಸ ಅಸೋಸಿಯೇಶನ' ಎಂಬ ಸಂಸ್ಥೆಯು ಸ್ಥಾಪನವಾಗಿದ್ದು, ಈ ಸಂಸ್ಥೆಯವರು ಈ ಹಬ್ಬದಲ್ಲಿ ಬಾಲಕರ ಬಗ್ಗೆ ಕೆಲವು ಆಟಗಳನ್ನು ಗೊತ್ತುಮಾಡಿ ಮೇಲುಬಂದವರಿಗೆ ಇನಾಮುಗಳನ್ನೂ ಪದಕಗಳನ್ನೂ ಕೊಡುವ ಯೋಜನೆ ಮಾಡಿರುವರು. ಹೋದವರುಷ ಇಲ್ಲಿಯ ಹಾಯಸ್ಕೂಲಿನ ವಿದ್ಯಾರ್ಥಿಗಳು ಅನೇಕ ಆಟಗಳಲ್ಲಿ ಮೇಲು ಬಂದರು. ಈ ವರುಷ ಇಲ್ಲಿಯ ಗವ್ಹರ್ನ್

ಮೆಂಟ ಹಾಯಸ್ಕೂಲು, ವ್ಹಿಕ್ಟೋರಿಯಾ ಹಾಯಸ್ಕೂಲು, ಮಿಶನ್ ಹಾಯಸ್ಕೂಲು ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳು ಆಟವಾಡಿ ತಮ್ಮ ಶಾರೀರಬಲದ ಪ್ರೌಢಿಮೆಯನ್ನು ವ್ಯಕ್ತಪಡಿಸಿದರು. ಅದರಲ್ಲಿ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳು ಇನಾಮು ದೊರಕಿಸಿದ್ದನ್ನು ಅವರವರ ವಿಷಯದೊಂದಿಗೆ ಇದರಡಿಯಲ್ಲಿ ಕೊಟ್ಟಿದೆ.

ಮಿ. ಕುರಂದವಾಡ. ಸಿಂಗಲಬಾರದಲ್ಲಿ ಪದಕ, ಮಿ. ಮುರನಾಳ. ಭಾರವೆತ್ತುವ ದರಲ್ಲಿ ಪದಕ, ಮಿ. ಪಾಟೀಲ ಕುಸ್ತೀ ಆಡುವದರಲ್ಲಿ ಇನಾಮು, ಕೃಷ್ಣಮೂರ್ತಿ ತಟ್ಟಿ. (ಪ್ರೈ. ಸ್ಕೂ. ವಿ.) ಡಬಲ್‌ಬಾರ ಸಿಂಗಲ್‌ಬಾರದಲ್ಲಿ ಪದಕ ಈ ಪ್ರಕಾರ ಇನಾಮು ದೊರಕಿಸಿದರು.

ಟಿಗ್ ಆಫ್‌ವಾರದಲ್ಲಿ ಮಿ. ಮುರನಾಳ ಇವರು ಮುಖ್ಯಸ್ಥರಿದ್ದು, ೧ ಮಾ. ಅ. ಗೊಳಸಂಗಿ ೨ ದಾ. ಅ. ಕುಲಕರ್ಣಿ ೩ ಸಿ. ದು. ಆರೇರ ೪ ಸ್ಪೆ. ಬ. ಉಪ್ಪಾರ ೫ ಹ. ಕ. ಕಪಲಟ್ಟಿ ೬ ರಾ. ಬೈ. ಹಲಕುರ್ಕಿ ೭ ರಾ. ಪ ಪಾಟೀಲ ೮ ದೇ. ಚ. ಸಾಂಸಿ ೯ ಮೂಲಿಮನಿ ೧೦ ಶ್ರೀ. ಬಾ. ಕುಲಕರ್ಣಿ ಈ ವಿದ್ಯಾರ್ಥಿಗಳನ್ನೊಳಗೊಂಡು ಇಲ್ಲಿಯ ಗವ್ಹರ್ನಮೆಂಟ ಹಾಯಸ್ಕೂಲಿನ ವಿದ್ಯಾರ್ಥಿಗಳ ಸಂಗಡ ಆಡಿ ಇನಾಮು ರೂಪವಾಗಿ ವಸ್ತ್ರಗಳನ್ನೂ ಸರ್ಟಿಫಿಕೇಟನ್ನೂ ಸಂಪಾದಿಸಿದರು.

ವಿದ್ಯಾರ್ಥಿಗಳಿಗೆ ನೀತಿ ಶಿಕ್ಷಣವನ್ನು ಕೊಡಲು ಪ್ರಯತ್ನಿಸುತ್ತಿರುವ ಮಾಸ್ತರರು ಹೋಳಿಯ ಹಬ್ಬದಲ್ಲಿ ಯಥೇಚ್ಛವಾಗಿ ಹುಡುಗರು ಅನೀತಿಯಿಂದ ನಡೆಯುವದನ್ನು ನೋಡುತ್ತ ಕೂಡದೆ ಅವರನ್ನು ಮೇಲಿನ ಉಪಾಯದಿಂದ ಸನ್ಮಾರ್ಗಕ್ಕೆ ಎಳಿಸುವಂತೆ ಪ್ರಯತ್ನಿಸುವದು ಉಕ್ತವೆಂದು ನಮಗೆ ತೋರುತ್ತದೆ.

ನಿರೋಗತಾ ನಿದರ್ಶಕ ಶರೀರಸ್ಥಿತಿ

ಯಾವನೊಬ್ಬ ಮನುಷ್ಯನು ನಿರೋಗಿಯೋ ಅಥವಾ ರೋಗಿಷ್ಠನೋ ಎಂಬದನ್ನು ಅರಿತುಕೊಳ್ಳುವದು ಎಷ್ಟೋ ಸಾರೆ ಅಸಾಧ್ಯವಾಗುತ್ತದೆ. ಆದುದರಿಂದ ತಜ್ಞರಿಂದ ಯೋಗ್ಯವೆಂದು ನಿರ್ಣಯಿಸಲ್ಪಟ್ಟ ಒಂದು ಕೋಷ್ಟಕವನ್ನು ಇದರಡಿಯಲ್ಲಿ ಕೊಡುತ್ತೇವೆ. ಅದರ ಸಹಾಯದಿಂದ ಬೇಕಾದ ಮನುಷ್ಯನು ನಿರೋಗಿಯೋ ಅಥವಾ ಸರೋಗಿಯೋ ಎಂಬದನ್ನು ಕಂಡುಹಿಡಿಯಬಹುದು. ಪ್ರತಿಯೊಬ್ಬ ನಿರೋಗಿಯಾದ ಮನುಷ್ಯನ ಶರೀರಸ್ಥಿತಿಯು ಹೀಗೆಯೇ ಇರಲಿಕ್ಕೆಬೇಕೆಂದು ಹೇಳಲಿಕ್ಕೆ ಬರುವಂತಿಲ್ಲವಾದರೂ, ಈ ಕೋಷ್ಟಕವು ಸಾಮಾನ್ಯವಾಗಿ ಪ್ರಮಾಣ-ಯೋಗ್ಯವಾಗಿದೆಯೆಂದು ಹೇಳಬಹುದು. ಮೊದಲು ತಮ್ಮ ಶರೀರದ ಎತ್ತರವನ್ನು ಗೊತ್ತುಮಾಡಿಕೊಂಡು, ಆ ಮೇಲೆ ಕೆಳಗಿನ ಕೋಷ್ಟಕವನ್ನು ನಿರೀಕ್ಷಿಸಬೇಕು; ತಮ್ಮ ಶರೀರವು ಇತರ ಸಂಗತಿಗಳಲ್ಲಿ ಅದಕ್ಕೆ ಸರಿಯಾಗಿದ್ದದ್ದಾದರೆ, ತಾವು ನಿರೋಗಿಗಳೆಂದು ಖಂಡಿತವಾಗಿ ತಿಳಿಯಬಹುದು.

ಎತ್ತರ	ತೂಕ	ಎದೆ.	ನಡು.	ರಟ್ಟೆ.	ಮುಂಗೈ.	ತೊಡೆ.	ಪಿಂಡಿಗಳು	ತಿರ.
ಫೂ. ಇ.	ಪೌಂಡು.	ಇಂಚು.	ಇಂಚು.	ಇಂಚು.	ಇಂಚು.	ಇಂಚು.	ಇಂಚು.	ಇಂಚು.
೫– ೦	೧೦೬	೩೪	೨೫।	೧೦।।।	೧೧	೧೮	೧೨	೧೨।।
೫– ೧	೧೨೦	೩೫	೨೮।।।	೧೨	೧೧।	೧೮।।	೧೨।	೧೨।।।
೫– ೨	೧೨೬	೩೬	೨೬।।	೧೨।	೧೧।।	೧೯	೧೨।।	೧೩
೫– ೩	೧೩೩	೩೭	೨೭।	೧೨।।	೧೧।।।	೧೯।।	೧೨।।।	೧೩।
೫– ೪	೧೩೬	೩೮	೨೮	೧೨।।।	೧೨	೨೦	೧೩	೧೩।।
೫– ೫	೧೪೨	೩೮।।	೨೮।।।	೧೩	೧೨	೨೦।।	೧೩।	೧೩।।।
೫– ೬	೧೪೬	೩೯	೨೯।	೧೩।	೧೨।	೨೧	೧೩।।	೧೪
೫– ೭	೧೪೯	೩೯।।	೨೯।।	೧೩।।	೧೨।।	೨೧।।	೧೪।	೧೪।।
೫– ೮	೧೫೩	೪೦	೩೦।	೧೪।	೧೩।	೨೨	೧೪।।	೧೪
೫– ೯	೧೫೬	೪೦।।	೩೦।।।	೧೪।	೧೩।।	೨೨।।	೧೪।।।	೧೪।
೫– ೧೦	೧೬೦	೪೧	೩೧।।	೧೪	೧೩।।।	೨೩	೧೪।	೧೪।।
೫–೧೧	೧೬೩	೪೧।।	೩೧।।।	೧೪।	೧೩।।।	೨೩।।	೧೪।।	೧೪।।।
೫–೧೨	೧೬೬	೪೨	೩೨।	೧೪।।	೧೪	೨೪	೧೪।।।	೧೫
೬– ೦	೧೭೦	೪೨।।	೩೨।।।	೧೫	೧೪।	೨೪।।	೧೫।।	೧೫।।।

ಸೂಚನೆ:– ಎತ್ತರ ತೂಕಗಳನ್ನು ಬಿಟ್ಟು ಉಳಿದವೆಲ್ಲ ಪಿಂಡದ ಅಳತೆಗಳು.

ಒಬ್ಬ ಶಿಕ್ಷಕನ ಅಕಾಲಿಕ ಮೃತ್ಯು.

ನಮ್ಮ ಇಲಾಖೆಯೊಳಗಿನ ಮಧ್ಯಮ ತರಗತಿಯ ಶಾಲೆಯೊಳಗಿನ ಶಿಕ್ಷಕರಿಗೆ ಶಿಕ್ಷಣಕೊಡುವ 'ಸೆಕಂಡರೀ ಟೀಚರ್ಸ' ಕಾಲೇಜಿನ ಪ್ರಿನ್ಸಿಪಾಲರಾದ **ಮಿ॥ ಜೆ ಎನ್. ಫ್ರೇಜರರವರು** ಕಳೆದ ಮಾರ್ಚ ತಿಂಗಳ ೧೨ನೇ ತಾರೀಖಿನ ದಿವಸ ಮೃತರಾದ ಸಂಗತಿಯನ್ನು ನಮ್ಮ ವಾಚಕರಿಗೆ ತಿಳಿಸಲಿಕ್ಕೆ ತುಂಬಾ ವಿಷಾದವೆನಿಸುತ್ತದೆ. ಇವರ ಮರಣದಿಂದ ಮುಂಬಯಿ ಇಲಾಖೆಯ ವಿದ್ಯಾಖಾತೆಗೆ ವಿಶೇಷವಾದ ಹಾನಿಯಾಯಿತೆಂಬದಿಷ್ಟೇ ಅಲ್ಲ. ಇಡೀ ಹಿಂದುಸ್ತಾನದ ಶಿಕ್ಷಣಾಭಿವೃದ್ಧಿಗೆ ಒಂದು ಪ್ರಕಾರದ ತಡೆಯುಂಟಾಯಿತೆನ್ನಬಹುದು. ಇವರ ಅವಿರತೋದ್ಯೋಗ, ಅತ್ಯಂತ ಸರಳಸ್ವಭಾವ, ಕೆಲಸದಲ್ಲಿ ಉತ್ಸಾಹ ಈ ಗುಣಗಳು ಶ್ಲಾಘನೀಯವಾಗಿದ್ದವು. ಇವರು ತಾವು ಕೈಕೊಂಡ ಪ್ರತಿಯೊಂದು ಕಾರ್ಯದಲ್ಲಿ ವ್ಯವಹಾರ ದೃಷ್ಟಿಯನಿಟ್ಟು ಕೆಲಸಮಾಡುತ್ತಿದ್ದರಾದ್ದರಿಂದ ಶಿಕ್ಷಕರ ಮೇಲೆ ಇವರ ಶಿಕ್ಷಣದ ಪರಿಣಾಮವು ಬಹಳ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಸಚ್ಛಿಕ್ಷಕನಲ್ಲಿರಬೇಕಾದ ಎಲ್ಲ ಗುಣಗಳನ್ನು ಕಾಲೇಜಿನಲ್ಲಿ ದೊರೆಯುವ ಶಿಕ್ಷಣದ ಒಂದು ವರ್ಷದ ಅವಧಿಯಲ್ಲಿ ಶಿಕ್ಷಕರಿಗೆ ಕಲಿಸುವದು ಅವ್ಯವಹಾರ್ಯವಾದ ಕೆಲಸವೆಂದು ತಿಳಿದು, ಅವರು ತಮ್ಮ ಶಿಕ್ಷಕರಲ್ಲಿದ್ದ ಯಾವ ನ್ಯೂನತೆಗಳನ್ನು ತಿದ್ದಿದರೆ

ಅವರ ಕಲಿಸುವಿಕೆಯಿಂದ ಹುಡುಗರಿಗೆ ಅದಷ್ಟು ಕಡಿಮೆ ಕೆಡಕು ಸಂಭವಿಸಬಹುದೆಂಬ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲನಮಾಡಿ ಅನ್ಯೂನತೆಗಳನ್ನು ತಿದ್ದುವ ಕ್ರಮವನ್ನು ಅವರು ಅಸಾಧಾರಣವಾದ ಆಸ್ಥೆಯಿಂದ ಅಭ್ಯಾಸಮಾಡಿದರು. ಉಜ್ವಲವಾದ ವ್ಯಾಖ್ಯಾನವು, ಚಿತ್ತವೇಧಕವಾದ ಶೈಲಿಯು ಇವುಗಳ ಪರಿಣಾಮವು ತಾತ್ಕಾಲಿಕವಾಗಿರುವದು. ಎಂಬ ಉದ್ದೇಶದಿಂದ ಫ್ರೋಜರಸಾಹೇಬರು ತಾವು ಸ್ವತಃ ಕಲಿಸುವಾಗ ಈ ತರದ ಪದ್ಧತಿಯನ್ನಿಟ್ಟುಕೊಂಡಿದ್ದಿಲ್ಲ. ಸ್ವಲ್ಪೇ ಸಂಗತಿಗಳನ್ನು ಕಲಿಸಿದರೂ ಅವುಗಳನ್ನು ಚನ್ನಾಗಿ ರೂಢಿಮಾಡಿಸುತ್ತಿದ್ದರು. ಬೇರೆ ಬೇರೆ ದೇಶಗಳಲ್ಲಿರುವ ಶಿಕ್ಷಣ ಪದ್ಧತಿಯನ್ನು ತಿಳಕೊಂಡು ಅವುಗಳಲ್ಲಿರುವ ಗುಣದೋಷಗಳನ್ನು ಅರಿತಿದ್ದರು. ವಿಧಿವಾಕ್ಯಗಳಿಗಿಂತ ನಿಷೇಧ ವಾಕ್ಯಗಳಿಂದ ತಿದ್ದುವದೇ ಇವರ ಪದ್ಧತಿಯಾಗಿತ್ತು. ಇವರ ಜ್ಞಾನವೂ ಅನುಭವವೂ ಇಷ್ಟು ಪೂರ್ಣವಾಗಿದ್ದಾಗ್ಯೂ ಇವರಲ್ಲಿ ಸ್ವಪ್ರತಿಷ್ಠೆಯ ಮತ್ತು ಸ್ವಗುಣಾನುವಾದನದ ಬಗ್ಗೆ ಅಭಿಲಾಷೆಯು ಸ್ವಲ್ಪವಾದರೂ ಇದ್ದಿಲ್ಲ. ಈ ಪ್ರಕಾರ ಶಿಕ್ಷಣದ ಕೆಲಸದಲ್ಲಿ ನುರಿತ ಜನರನ್ನು ಕಾಣುವದು ವಿರಳ. ಮರಣ ಸಮಯದಲ್ಲಿ ಇವರು ೪೮ ವರುಷದವರಿದ್ದರು. ಜಗಚ್ಚಾಲಕನಾದ ಪರಮೇಶ್ವರನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಆತನನ್ನು ಪ್ರಾರ್ಥಿಸುವೆವು.

ಪ್ರಾಚೀನ ಹಿಂದುಸ್ತಾನದ ಆರ್ಯರ ಶಿಕ್ಷಣದ ಇತಿಹಾಸ.

ಪ್ರಾಚೀನ ವಿಶ್ವ ವಿದ್ಯಾಲಯಗಳು.

ಹಿಂದೂ ಜನರ ನಾಗರಿಕತೆಯು ಮೊದಲು, ಹಿಂದುಸ್ತಾನದ ವಾಯವ್ಯ ಭಾಗದಲ್ಲಿ ಉದ್ಭವಿಸಿತೆಂದು ಹಿಂದೆ ಹೇಳಿಯದೆ. ಬಹುಕಾಲದ ವರೆಗೆ ಆ ವಾಯವ್ಯ ಭಾಗವೇ ಹಿಂದೂ ವಿದ್ಯೆಯ ಕೇಂದ್ರಸ್ಥಾನವಾಗಿತ್ತು. ಕಾಶ್ಮೀರ ಮತ್ತು ಬದರಿಕಾಶ್ರಮ ಇವೆರಡು ಸ್ಥಳಗಳಲ್ಲಿ ಬಹಳ ದಿವಸಗಳ ವರೆಗೆ ವಿದ್ಯೆಯು ವ್ಯವಸ್ಥಿತ ರೀತಿಯಿಂದ ನಡೆಯಿತು.

ತಕ್ಷಾಶಿಲ—ಇದು ಕ್ರಿ. ಶ. ಪೂರ್ವದಲ್ಲಿ ೬ನೆಯ ಶತಮಾನದಲ್ಲಿ ವಿದ್ಯೆಯ ಮುಖ್ಯಸ್ಥಾನವಾಗಿತ್ತು. ಈ ಪಟ್ಟಣಕ್ಕೆ 'ತಕ್ಷಾಶಿಲ' ಅಥವಾ 'ತಕ್ಷಿಲ' ಎಂಬ ಹೆಸರು ಇತ್ತು. ಇಲ್ಲಿಯ ಶಾಲೆಗಳಲ್ಲಿ ೧೬ ಬೇರೆ ಬೇರೆ ಶಾಸ್ತ್ರಗಳನ್ನು ಕಲಿಸುತ್ತಿದ್ದರು. ತಕ್ಷಿಲದಲ್ಲಿ ಚಿತ್ರಕಲೆ, ಶಿಲ್ಪಕಲೆ, ಮೂರ್ತಿಗಳನ್ನು ಮಾಡುವಕಲೆ, ಕೈಗಾರಿಕೆ ಮುಂತಾದ ವಿಷಯಗಳ ಶಾಲೆಗಳಿದ್ದವು. ಪ್ರಸಿದ್ಧ ವೈಯಾಕರಣಿಯಾದ ಪಾಣಿನಿಯೂ, ಚಂದ್ರಗುಪ್ತನ ಮಂತ್ರಿಯಾದ ಚಾಣಕ್ಯನೂ ತಕ್ಷಿಲದಲ್ಲಿ ಅಭ್ಯಾಸ ಮಾಡಿದರೆಂದು ತಿಳಿಯುತ್ತದೆ. ಇಲ್ಲಿಯ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಸಲುವಾಗಿ ಫೀ ಕೊಡಬೇಕಾಗುತ್ತಿತ್ತು.

ಈ ವಿಶ್ವವಿದ್ಯಾಲಯವು ವಿಶೇಷತಃ ವೈದ್ಯಶಾಸ್ತ್ರದ ದೆಶೆಯಿಂದ ಕೀರ್ತಿಯನ್ನು ಪಡೆದಿತ್ತು. ಮಗಧ ದೇಶದ ಬಿಂಬಸಾರನೆಂಬ ಅರಸನನ್ನೂ, ಗೌತಮ ಬುದ್ಧನನ್ನೂ ಕೆಲವು ರೋಗಗಳಿಂದ ನೆಟ್ಟಗೆ ಮಾಡಿದ ಜೀವಕನೆಂಬ ರಾಜವೈದ್ಯನು ಇಲ್ಲಿಯೇ ಆತ್ರೇಯ ಋಷಿಯ ಕೈಕೆಳಗೆ ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡಿದ್ದನು. ಜೀವಕನ ವಿದ್ಯಾಭ್ಯಾಸವು ಏಳು ವರ್ಷಗಳ ವರೆಗೆ ನಡೆದು ಅದರ ಅಂತ್ಯದಲ್ಲಿ ಒಂದು ಪರೀಕ್ಷೆಯೂ ಯಿತು. ಈ ಪರೀಕ್ಷೆಯಲ್ಲಿ ಜೀವಕನಿಗೆ ತಕ್ಷಿಲ ಪಟ್ಟಣದ ಸುತ್ತಲೂ ೧೫ ಮೈಲುಗಳ ಒಳಗಾಗಿ ಸಿಗುವ ಯಾವತ್ತೂ ವನಸ್ಪತಿಗಳ ಗುಣಧರ್ಮಗಳನ್ನು ವಿವರಿಸಿ ಹೇಳಬೇಕೆಂದು ಒಂದು ಪ್ರಶ್ನೆಯನ್ನು ಹಾಕಿದ್ದರು. ಜೀವಕನು ಅವುಗಳನ್ನು ನಾಲ್ಕು ದಿವಸಗಳವರೆಗೆ ಪರೀಕ್ಷಿಸಿ ತಾನು ಮಾಡಿದ ಶೋಧನೆಗಳನ್ನೆಲ್ಲ ತನ್ನ ಗುರುವಿನ ಮುಂದಿಟ್ಟು ಯಾವದಾದರೊಂದು ರೋಗ ಚಿಕಿತ್ಸೆಯಲ್ಲಿ ಉಗಯೋಗ ಬೀಳದಂಥ ಗಿಡಮೂಲಕೆಯೇ ಸಿಗುವದು ದುರ್ಲಭವೆಂದು ತನ್ನ ಅಭಿಪ್ರಾಯವನ್ನು ತಿಳುಹಿದನು. ಮೇಲೆ ಹೇಳಿದ ಸಂಗತಿಯಿಂದ ಆಗಿನ ಕಾಲದಲ್ಲಿ ಪರೀಕ್ಷೆ ತೆಗೆದುಕೊಳ್ಳುವ ಪದ್ಧತಿಯು ಯಾವ ಪ್ರಕಾರದ್ದಿತ್ತೆಂಬದನ್ನು ಊಹಿಸಬಹುದು.

ಎಷ್ಟೋ ಶತಮಾನಗಳ ವರೆಗೆ ಈ ವಿಶ್ವವಿದ್ಯಾಲಯವು, ತನ್ನ ಓಗಂತವಾದ ಕೀರ್ತಿಯನ್ನು ಕಾಯ್ದುಕೊಂಡದ್ದಲ್ಲದೆ, ಕ್ರಿ. ಶ. ಪೂರ್ವದಲ್ಲಿ ೩ನೇ ಶತಮಾನದಲ್ಲಿ ಅದು ಬಹಳೇ ಊರ್ಜಿತಾವಸ್ಥೆಯನ್ನು ಹೊಂದಿತು. ಆಗ್ಗೆ ಪರಾಕ್ರಮಿಯಾದ ಅಶೋಕನು ಹಿಂದುಸ್ಥಾನದ ಸಾರ್ವಭೌಮ ಅರಸನಾಗಿದ್ದನು. ಪ್ರಸಿದ್ಧ ಇತಿಹಾಸಕಾರನಾದ 'ವ್ಹಿನ್ಸೆಂಟಸ್ಮಿಥನು' ಅಶೋಕನ ಕಾಲದ ಹಿಂದುಸ್ಥಾನವನ್ನು ವರ್ಣಿಸುವಾಗ ಅಂದಿರುವದೇನಂದರೆ— "ಎಲ್ಲ ಉಚ್ಚವರ್ಗದವರು, ಸಂಸ್ಥಾನಿಕರು, ಬ್ರಾಹ್ಮಣರು, ವ್ಯಾಪಾರಸ್ಥರು ಮೊದಲಾದವರು ತಮ್ಮ ಮಕ್ಕಳಿಗೆ ಅಭ್ಯಾಸ ಮಾಡಿಸುವದಕ್ಕಾಗಿ ಶಿಕ್ಷಣದ ತವರಮನೆಯಾದ ತಕ್ಷಶಿಲೆಗೆ ಕಳಿಸುತ್ತಿದ್ದರು. ಆಗ ವೈದ್ಯಶಾಸ್ತ್ರಕ್ಕೆ ಬಹಳೇ ಮಹತ್ವವಿತ್ತು."

ಶಿಕ್ಷಣದ ಪ್ರಸಾರವು ಪೂರ್ವ-ದಕ್ಷಿಣ ದೇಶಗಳಲ್ಲಿ ಹಬ್ಬಿದ ಹಾಗೆ, ಆ ಆ ಭಾಗಗಳಲ್ಲಿ ಬುದ್ಧನ ಕಾಲದಿಂದಿದ್ದ ವಿಹಾರಗಳಲ್ಲಿ ವಿದ್ಯಾಪೀಠಗಳು ಸ್ಥಾಪಿಸಲ್ಪಟ್ಟವು. ಇದಕ್ಕೂ ಮೊದಲು, ಬೌದ್ಧಸನ್ಯಾಸಿ

ಗಳು ಮರದ ನೆರಳಿನಲ್ಲಿ ಕುಳಿತು, ಧರ್ಮಶಿಕ್ಷಣವನ್ನು ಕೊಡುತ್ತಿದ್ದರು. ಸ್ವಲ್ಪದರಲ್ಲಿ ಹೇಳಬೇಕಾದರೆ ಆಗಿನಕಾಲಕ್ಕೆ ವಿದ್ಯಾಪ್ರಸಾರವು ಕೇವಲ ಬೌದ್ಧ ಸನ್ಯಾಸಿಗಳಿಂದಲೇ ಮಾಡಲ್ಪಟ್ಟಿತು. ಈ ಬೌದ್ಧ ಸನ್ಯಾಸಿಗಳು ವಿಹಾರಗಳಲ್ಲಿ ಗುಂಪುಗಟ್ಟಿ ಇರಹತ್ತಿದಕೂಡಲೆ ಅದೊಂದು ವಿಶ್ವವಿದ್ಯಾಲಯವೇ ಆಗುತ್ತಿತ್ತು. ಪ್ರತಿಯೊಂದು ವಿಹಾರವು ಒಬ್ಬ 'ಕುಲಪತಿ'ಗೆ ಅಧೀನವಾಗಿರುತ್ತಿತ್ತು. ಈ ಕುಲಪತಿಯು ನಮ್ಮ ಈಗಿನ ಕಾಲೇಜುಗಳ ಪ್ರಿನ್ಸಿಪಾಲರ ಹಾಗೆ ಅಲ್ಲಿ ಕಲಿಯುತಕ್ಕ ವಿದ್ಯಾರ್ಥಿಗಳನ್ನು ನಡಿಸಿಕೊಳ್ಳಬೇಕಾಗುತ್ತಿತ್ತು.

S. R. Tatti.

ಸಾಮಾನ್ಯ ಅಪೂರ್ಣಾಂಕಗಳು.

(ಮುಂದೆ ಸಾಗಿದ್ದು)

ಅಪೂರ್ಣಾಂಕವೆಂದರೆ ಯಾವದೊಂದು ಹೆಸರಿನ ಒಂದು ಅಥವಾ ಹಲವು ಭಾಗಗಳ ಸಂಖ್ಯೆ. ಉದಾ:– ೫ "೬ನೆಯ ಅಂಶ" ವೆಂಬ ಹೆಸರಿನ ೫ ಭಾಗಗಳು. ೬ ಎಂಬದು "೬ನೆಯ ಅಂಶ" ಎಂಬ ಹೆಸರನ್ನು ಸೂಚಿಸುತ್ತದೆ. ೫ ಎಂಬದು ಅ ಭಾಗಗಳ ಸಂಖ್ಯೆ. ೩ ರೂಪಾಯಿ, ೫ ಫೂಟು, ೬ ತಾಸು ಇತ್ಯಾದಿ ಪರಿಮೇಯಗಳಿಂದ ನಾವು ಲೆಕ್ಕ ಮಾಡುವಂತೆ ೩ (ಆನೆಯ ಅಂಶ), ೫ (೬ನೆಯ ಅಂಶ) ಇತ್ಯಾದಿ ರಾಶಿಗಳಿಂದ ಲೆಕ್ಕಮಾಡಲಿಕ್ಕೆ ಬರುತ್ತದೆ. ೩ ರೂಪಾಯಿಯಲ್ಲಿ ೫ ರೂಪಾಯಿಯನ್ನು ಹ್ಯಾಗೆ ಕೂಡಿಸಲಿಕ್ಕೆ ಬರುತ್ತದೋ ಅಥವಾ ೩ ರೂಪಾಯಿಯಲ್ಲಿ ೧ ರೂಪಾಯಿಯನ್ನು ಹ್ಯಾಗೆ ಕಳೆಯಲಿಕ್ಕೆ ಬರುತ್ತದೋ ಅಥವಾ ೩ ರೂಪಾಯಿಯನ್ನು ೫ ಸಾರೆ ಹ್ಯಾತಕೊಳ್ಳಲಿಕ್ಕೆ ಬರುತ್ತದೋ ಅಥವಾ ೩ ರೂಪಾಯಿಯಲ್ಲಿ ೩ ಸರಿಯಾದ ಭಾಗಗಳನ್ನು ಮಾಡಲಿಕ್ಕೆ ಹ್ಯಾಗೆ ಬರುತ್ತದೋ ಅಥವಾ ೩ ರೂಪಾಯಿಯಲ್ಲಿ ೧ ರೂಪಾಯಿಯು ಎಷ್ಟು ಸಾರೆ ಹೋಗುತ್ತದೆಂಬದನ್ನು ಹ್ಯಾಗೆ ತೆಗೆಯಲಿಕ್ಕೆ ಬರುತ್ತದೆಂಬೋ ಅದರ. ೩(ಆನೆಯು) ದಲ್ಲಿ * ೫ (ಆನೆಯ)ವನ್ನು ಕೂಡಿಸಲಿಕ್ಕೆ ಬರುತ್ತದೆ. ಅದರಂತೆ ೩ (ಆನೆಯ) ದಲ್ಲಿ ೧ (ಆನೆಯ) ವನ್ನು ಕಳೆಯಲಿಕ್ಕೆ ಬರುತ್ತದೆ. ಅದರಂತೆ ೩ (ಆನೆಯ) ವನ್ನು ೨ ಸಾ ತೆಗೆದುಕೊಳ್ಳಲಿಕ್ಕೆ ಬರುತ್ತದೆ. ಅದರಂತೆ ೩(ಆನೆಯ)ವನ್ನು ೩ ರಿಂದ ಭಾಗಿಸಲಿ ಬರುತ್ತದೆ. ಮತ್ತೂ ಅದರಂತೆ ೩ (ಆನೆಯ) ದಲ್ಲಿ ೧ (ಆನೆಯ) ವು ಎಷ್ಟು ಸಾ ಹೋಗುತ್ತದೆಂಬದನ್ನು ತೆಗೆಯಲಿಕ್ಕೆ ಬರುತ್ತದೆ.

---

* ಇದನ್ನು ಓದುವಾಗ ೩ (ಆನೆಯ ಅಂಶ) ಎಂದು ಓದತಕ್ಕದ್ದು.

ಅದ್ದರಿಂದ ಅಪೂರ್ಣಾಂಕಗಳ ವಿಷಯವನ್ನು ಕಲಿಸುವಾಗ ಇವುಗಳ ಸಂಬಂಧದ ನಿಯಮಗಳೇ ಬೇರೆ ಎಂಬ ಭಾವನೆಯು ಹುಡುಗರ ಮನಸ್ಸಿನಲ್ಲಿ ಹುಟ್ಟುವಂತೆ ಕಲಿಸುವ ಪದ್ಧತಿಯು ಸರಿಯಾದದ್ದಲ್ಲ. ವಿವಿಧ ಪರಿಮಾಣಗಳ ಬೇರೀಜಾಗಲಿ, ಸಾಮಾನ್ಯ (ವ್ಯವಹಾರೀ) ಅಪೂರ್ಣಾಂಕಗಳ ಬೇರೀಜಾಗಲಿ, ದಶಾಂಶ ಅಪೂರ್ಣಾಂಕಗಳ ಬೇರೀಜಾಗಲಿ ಬೇರೀಜಿನ ಕೃತಿಯು ಒಂದೇ; ಅದರ ಸಂಬಂಧದಿಂದ ಕಲಿಯತಕ್ಕ ನಿಯಮವೂ ಒಂದೇ; ಉಳಿದ ಕೃತಿಗಳಿಗಾದರೂ ಇದೇ ಮಾತು.

ಅಪೂರ್ಣಾಂಕಗಳ ರೂಪಾಂತರ.

೧ ಅರ್ಧ ರೂಪಾಯಿಯನ್ನು ಮುರಿಸಿ ಅದರ ಬದಲಾಗಿ ೨ ಪಾವಲಿಗಳಾಗಲಿ ೪ ಚವಲಿಗಳಾಗಲಿ, ೮ ಅಣೆಗಳಾಗಲಿ ಹ್ಯಾಗೆ ತಕ್ಕೊಳ್ಳಲಿಕ್ಕೆ ಬರುತ್ತದೆಯೋ ಅದರಂತೆ ೨ (೩ನೆಯ) ವನ್ನು ಮುರಿಸಿ ೪ (೬ನೆಯ) ವನ್ನಾಗಲಿ ೬ (೯ನೆಯ) ವನ್ನಾಗಲಿ ೮ (೧೨ನೆಯ) ವನ್ನಾಗಲಿ ತಕ್ಕೊಳ್ಳಲಿಕ್ಕೆ ಬರುತ್ತದೆ. "೧ ಪಾವಲಿ ಎಂದರೆ ೨ ಚವಲಿಗಳು" ಎಂಬದು ಕೋಷ್ಟಕಗಳ ದ್ವಾರಾ ಬಾಯಿಪಾಠವಾಗಿರುವದರಿಂದ ೨ ಪಾವಲಿಗಳೆಂದರೆ ೪ ಚವಲಿಗಳೆಂದು ಅವರು ಥಟ್ಟನೇ ಹೇಳುವರು. ಅಪೂರ್ಣಾಂಕಗಳನ್ನು ಮುರಿಸಲಿಕ್ಕೆ ಈ ತರದ ಕೋಷ್ಟಕಗಳೇನೂ ಇಲ್ಲ. ಹಾಗು ಇಂಥ ಕೋಷ್ಟಕಗಳನ್ನು ಪಾಠ ಮಾಡಬೇಕಾಗುವದಿಲ್ಲ. ಒಂದು ಅಪೂರ್ಣಾಂಕವನ್ನು ಮುರಿಸಿ ಬೇರೆ ಭಾಗಗಳನ್ನು ಮಾಡಿಕೊಳ್ಳಲಿಕ್ಕೆ ಬಹು ಸುಲಭವಾದ ಒಂದು ನಿಯಮವಿರುವದು. ಅದು ಯಾವದೆಂದರೆ "ಅಂಶಕ್ಕೂ ಛೇದಕ್ಕೂ ಒಂದೇ ಸಂಖ್ಯೆಯಿಂದ ಗುಣಿಸು."

೩ (೪ನೆಯ) = ೬ (೮ನೆಯ) = ೯ (೧೨ನೆಯ) ಇತ್ಯಾದಿ.

ಮೇಲೆ ಹೇಳಿದ ನಿಯಮವನ್ನು ಹಿಂದಿನ ಲೇಖನದಲ್ಲಿ ಸಿದ್ಧಮಾಡಿದೆ.

ಅಪೂರ್ಣಾಂಕಗಳ ಜೇರೀಜು

ಪೂರ್ಣಾಂಕಗಳ ಬೇರೀಜು, ಅಪೂರ್ಣಾಂಕಗಳ ಬೇರೀಜು ಇವುಗಳ ಏಕರೂಪತೆಯನ್ನು ತೋರಿಸುವದಕ್ಕಾಗಿ ಈ ಎರಡು ಕೃತಿಗಳು ಒಂದರ ಬದಿಯಲ್ಲೊಂದು ಕೆಳಗೆ ಕೊಟ್ಟವೆ.

೨ ಘಟ್ಟದುಡ್ಡು + ೧ ದುಡ್ಡು	೨ (೩ನೆಯ) + ೧ (೪ನೆಯ)
= ೮ ಪೈ + ೩ ಪೈ	= ೮ (೧೨ನೆಯ) + ೩ (೧೨ನೆಯ)
= ೧೧ ಪೈ	= ೧೧ (೧೨ನೆಯ)

ಹೆಚ್ಚು ವಿವರಣೆಯು ಅನವಶ್ಯಕವಾದದ್ದು.

ಅಪೂರ್ಣಾಂಕಗಳ ವಜಾಬಾಕಿ.

ಇದರಲ್ಲಿ ವಿಚಾರಮಾಡತಕ್ಕಂಥ ಹೊಸ ಸಂಗತಿಗಳೇನೂ ಇಲ್ಲ.

ಅಪೂರ್ಣಾಂಕಗಳ ಗುಣಾಕಾರ.

ಎರಡು ಅಪೂರ್ಣಾಂಕಗಳ ಗುಣಾಕಾರವು ಗುಣಾಕಾರದ ಸಾಮಾನ್ಯ ವ್ಯಾಖ್ಯೆಯ ಅನುಸರಿಸಿರುವದೆಂದು ಗಣಿತ ಶಾಸ್ತ್ರಜ್ಞರು ಶ್ರಮಪಟ್ಟು ತೋರಿಸುವದುಂಟು. ವಸ್ತುತಃ ನೋಡಲಾಗಿ ಅಪೂರ್ಣಾಂಕಗಳ ಗುಣಾಕಾರವು ಒಂದು ಕೃತಿಯಲ್ಲ. ಇದರಲ್ಲಿ ಗುಣಾಕಾರ ಭಾಗಾಕಾರಗಳೆರಡೂ ಸೇರಿರುತ್ತವೆ,

$\frac{೪}{೫}$ ಪೌ. × $\frac{೪}{೫}$

$\frac{೪}{೫}$ ವೆಂದರೆ "ಐದನೆಯ ಅಂಶದ ನಾಲ್ಕುಪಟ್ಟು" "ಐದನೆಯ ಅಂಶ" ವೆಂದು "ಐದರಿಂದ ಭಾಗಿಸಿ ಬಂದ ಭಾಗಾಕಾರ."

$\frac{೪}{೫}$ ಪೌ. ÷ ೫ × ೪

= $\frac{೧೦}{೫೫}$ ಪೌ. ÷ ೫ × ೪

$\frac{೧೦}{೫೫}$ ಪೌ. ÷ ೫ = $\frac{೪}{೫೫}$ ಪೌ.

೧೦ (ಪೌಂಡಿನ ೧೫ನೆಯ) ÷ ೫ = ೨ (ಪೌಂಡಿನ ೧೫ನೆಯದು)

$\frac{೪}{೫೫}$ ಪೌ. × ೪ = $\frac{೮}{೫೫}$ ಪೌ.

೨ (ಪೌಂಡಿನ ೧೫ನೆಯ) × ೪ = ೮ (ಪೌಂಡಿನ ೧೫ನೆಯ)

$\frac{೪}{೫}$ ಪೌ. × $\frac{೪}{೫}$ = $\frac{೮}{೫೫}$ ಪೌ.

ಅಪೂರ್ಣಾಂಕಗಳ ಗುಣಾಕಾರ ಭಾಗಾಕಾರಗಳನ್ನು ತಿಳಿಸುವಾಗ ಗಣಿತಪುಸ್ತಕಗಳಲ್ಲಿ ಆಕೃತಿಗಳನ್ನು ತಕ್ಕೊಂಡು ೨ ಮೂರನೆಯ ಅಂಶದ ೪ ಐದನೆಯ ಅಂಶವೆಂದರೆ ೮ ಹದಿನೈದನೆಯ ಅಂಶವೆಂದು ದೃಷ್ಟಾಂತವನ್ನು ಹೇಳುವರು. ಇಲ್ಲವೆ ಐದು ಆರುಸಾಲು ಶಬ್ದಗಳಿಂದ ಬಾಲಕರಿಗೆ ದುರ್ಗ್ರಾಹ್ಯವಾದ ವಿವರಣೆಯನ್ನು ಬರೆಯುವರು. ಇಂಥ ದೃಷ್ಟಾಂತ ವಿವರಣೆಗಳಿಂದ ಹುಡುಗರಿಗೆ ಈ ಕೃತಿಗಳ ತಿಳುವಳಿಕೆಯು ಎಷ್ಟರ ಮಟ್ಟಿಗೆ ಆಗುವದೆಂಬದು ಸಂಶಯಾಸ್ಪದವಾದದ್ದು. ಅದರೆ ಸಂಖ್ಯೆಗಳ ಮೇಲೆ ಕೃತಿಗಳನ್ನು ಮಾಡುವ ನಿಯಮಗಳ ಪ್ರಕಾರ ಸ್ವಾಭಾವಿಕವಾಗಿ ಉತ್ತರವನ್ನು ತೆಗೆಯುವ ಸುಲಭವಾದ ಮತ್ತು ಕೇವಲ ಅಂಕೆಗಳಿಂದ ಬರೆದು ತೋರಿಸಲಕ್ಕೆ ಬರುವ ಪದ್ಧತಿಯನ್ನು ಎಲ್ಲಿಯೂ ಕೊಡಲಿಲ್ಲ. ಮೇಲಿನ ಗುಣಾಕಾರದಲ್ಲಿ ಮಾಡಬೇಕಾದ ಕೃತಿಗಳೆಲ್ಲವು ಕೆಳಗಿನ ಲೆಕ್ಕದಲ್ಲಿ ಬಂದಿವೆ.

೨ ಐದು ರೂಪಾಯಿಯ ನೋಟು. ÷ ೫ × ೪

= (೧೦ ಒಂದು ರೂಪಾಯಿಯ ನೋಟು ÷ ೫) × ೪

= ೨ ಒಂದು ರೂಪಾಯಿಯ ನೋಟು · ೪

= ೮ ಒಂದು ರೂಪಾಯಿಯ ನೋಟು.

(ಮುಂದೆ ಸಾಗುವದು.)

S. R. Tatti.

ಜೇನ್ನೊಣಗಳು.

ಜೇನುತುಪ್ಪವು ಜೇನ್ನೊಣದಿಂದ ಸಿಗುವದು; ಎಂಬ ಮಾತು ಎಲ್ಲರಿಗೂ ಗೊತ್ತೇ ಇರುವದು. ಜೇನುತುಪ್ಪವು ವಿಶೇಷವಾಗಿ ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ಪರರಾಷ್ಟ್ರಗಳಿಂದ ನಮ್ಮ ಹಿಂದುಸ್ತಾನಕ್ಕೆ ಬರುವದು; ನಮ್ಮ ದೇಶದಲ್ಲಿ ಜೇನುತುಪ್ಪವು ದೊರಕದೆ ಪರರಾಷ್ಟ್ರಗಳಿಂದಲೇ ಬರುವದಕ್ಕೆ ಕಾರಣವೇನಂದರೆ:– ನಮ್ಮ ದೇಶದಲ್ಲಿ ಜೇನ್ನೊಣಗಳನ್ನು ಯಾವ ರೀತಿಯಿಂದ ಸಂರಕ್ಷಣೆ ಮಾಡಬೇಕು? ಅವುಗಳಿಂದ ಜೇನುತುಪ್ಪವನ್ನು ದೊರಕಿಸುವ ಉಪಾಯಗಳು ಯಾವವು? ಎಂಬ ಸಂಗತಿಯು ಪರಿಚಯವಿಲ್ಲದ್ದರಿಂದ ಇಲ್ಲಿ ಜೇನ್ನೊಣಗಳು ವಿಶೇಷವಾಗಿ ಕಂಡುಬರುವದಿಲ್ಲ. ಆದಕಾರಣ ನಮಗೆ ಜೇನುತುಪ್ಪವು ಅಪರೂಪವಾಗಿದೆ; ಆದರೆ ಪರರಾಷದವರು ಈ ಸಂಗತಿಯನ್ನು ಅರಿತಿರುವದರಿಂದ ಅವರು ಪರಿಪರಿಯಿಂದ ಆ ಪ್ರಾಣಿಗಳನ್ನು ಸಾಕಿ ಅವುಗಳಿಂದ ತಯಾರಾದ ಜೇನುತುಪ್ಪವನ್ನು ಮಾರಾಟಕ್ಕೆ ಕಳಿಸುವರು. ಈ ಪ್ರಕಾರ ಅಪರಿಚಯವಾದಂಥ ಸಂಗತಿಯನ್ನೂ, ಪರೋಪಕಾರಿಯಾದಂಥ ಈ ಜೇನ್ನೊಣದ ಅಂಗರಚನೆ, ಮತ್ತು ಅದರ ಕರ್ತವ್ಯ, ಅವಸ್ಥೆ, ಪ್ರಯೋಜನ ಮುಂತಾದವುಗಳನ್ನೂ ತಿಳಿದುಕೊಳ್ಳುವದು ಅವಶ್ಯವಿರುವದು.

ಪರೀಕ್ಷೆಗಾಗಿ ಜೇನ್ನೊಣವನ್ನು ತಂದು ಬರಿಗಣ್ಣಿನಿಂದ ಅಥವಾ ಇದಕ್ಕೂ ಸೂಕ್ಷ್ಮರೀತಿಯಿಂದ ತಿಳಿಯುವ ದುರ್ಬಿನಿನಿಂದ ನೋಡಲುಪಕ್ರಮಿಸಲು, ನಾವು ಈ ವರೆಗೆ ನೋಡಿದ ಕುದುರೆ, ನಾಯಿ, ಪಕ್ಷಿ ಮುಂತಾದ ಜಂತುಗಳಿಂತಲೂ ಈಪ್ರಾಣಿಯ ಶರೀರರಚನೆಯು ಬೇರೆಯಾಗಿರುವದೆಂದು ಕಂಡುಬರುವದು. ಯಾಕಂದರೆ ಅವೆಲ್ಲವು ಬೆನ್ನೆಲಬು ಉಳ್ಳಂಥವು. ಆದರೆ ಜೇನ್ನೊಣಗಳಿಗೆ ಈ ಸ್ಥಿತಿಯು ಕಂಡುಬರುವದಿಲ್ಲ. ಇದು ಅಲ್ಲದೆ ಸ್ಥೂಲಮಾನದಿಂದ ನಿರೀಕ್ಷಿಸಲು, ಜೇನ್ನೊಣದ ಶರೀರದಲ್ಲಿ ತಲೆ, ಎದೆ, ಹೊಟ್ಟೆ ಎಂದು ಮೂರು ಭಾಗಗಳುಂಟು. ಮತ್ತು ಮುಂಭಾಗದಲ್ಲಿ ಎರಡು ಕಣ್ಣುಗಳೂ, ಎರಡು ವಿಾಸೆಗಳೂ, ಮತ್ತು ಮೂರು ಜೋಡು ಕಾಲುಗಳೂ, ಎರಡು ಅಥವಾ ಒಂದು ಜೊತೆಯ ಪಕ್ಷಗಳೂ, ಮತ್ತು ಶರೀರದ ಮೇಲೆ ವಲಯಗಳೂ ಕಂಡುಬರುವವು. ಇವುಗಳನ್ನು ಮೇಲೆ ವಿವರಿಸಿದ ಪ್ರಾಣಿ

ಗಳಿಗೆ ಸರಿಹಚ್ಚಲು, ಒಂದುವಿಶಿಷ್ಟ ಪ್ರಕಾರದ ಪ್ರಾಣಿಯೆಂದು ತಿಳಿದುಬರುವದು. ಈ ಪ್ರಕಾರದ ಶರೀರ ರಚನೆಯುಳ್ಳ ಪ್ರಾಣಿಗಳಿಗೆ ಶಾಸ್ತ್ರಜ್ಞರು **ಕೀಟಗಳೆಂಬ** ಅಭಿಧಾನವನ್ನು ಕೊಟ್ಟಿರುವರು. ಹೇನು, ತಗಣಿ, ರೇಶಿಮೆ ಹುಳ, ಪಾತರಗಿತ್ತಿ, ನೊಣ ಮುಂತಾದವುಗಳು ಈ ವರ್ಗಕ್ಕೆ ಸೇರಿದವುಗಳೆಂದು ಹೇಳಬಹುದು. ಇನ್ನು ಕೀಟಕಗಳಲ್ಲಿ ಲಕ್ಷೋಪಲಕ್ಷ ಜಾತಿಗಳಿದ್ದರೂ, ನಿರ್ಮಾಣದಲ್ಲಿ ಭೇದಿಸದೆ ಒಂದಾಗಿರುವವು.

ಜೀನ್ಮೊಣದ ಅವಸ್ಥೆಗಳು:— ಪಶುಪಕ್ಷಿಗಳು ತಮ್ಮ ಮರಿಗಳನ್ನು ಭದ್ರವಾದ ಸ್ಥಳದಲ್ಲಿಟ್ಟು, ಅವುಗಳಿಗೆ ಆಹಾರವನ್ನು ಪೂರೈಸುತ್ತವೆ. ಆದರೆ ಕ್ರಿಮಿಗಳಿಗೆ ಈ ಜ್ಞಾನವಿಲ್ಲದೆ ಫಕ್ತ ಆಹಾರ ಹೆಚ್ಚಾಗಿ ಎಲ್ಲಿ ಸಿಗುವದೋ ಅಲ್ಲಿ ತತ್ತಿಗಳನ್ನು ಇಡುವದಕ್ಕೆ ಜಗನ್ನಿಯಾಮಕನು ಜ್ಞಾನವನ್ನು ಕೊಟ್ಟಿರುವನು. ಅದ್ದರಿಂದ ಕ್ರಿಮಿಗಳು ಬೇರು, ಕಾಂಡ, ಎಲೆ ಮುಂತಾದವುಗಳ ಮೇಲೆ ತತ್ತಿಗಳನ್ನು ಇಡುವವು. ಈ ಪ್ರಕಾರದ ಕೀಟಕಗಳ ಮೊದಲನೇ ಅವಸ್ಥೆಗೆ ಅಂಡಾವಸ್ಥೆಯನ್ನುವರು.

ಕೀಟಕಗಳು ತತ್ತಿಯಿಂದ ಹೊರಬೀಳುವಾಗ ಒಂದು ಆಶ್ಚರ್ಯಕರವಾದ ನೋಟವು ದೃಷ್ಟಿಗೋಚರವಾಗುವದು. ನಮ್ಮ ನೆರೆಹೊರೆಯ ಪ್ರಾಣಿಗಳಿಂದ ಹುಟ್ಟುವ ಮರಿಗಳು ತಾಯಿತಂದೆಗಳ ಹಾಗೆಯೇ ಇರುತ್ತವೆಂಬದನ್ನು ಎಲ್ಲರೂ ಮನಗಂಡಿರುವರು; ಆದರೆ ಕೀಟಕಗಳ ವರ್ಗವು ಈ ಪ್ರಕಾರವಾದದ್ದಲ್ಲ. ಮೊದಲು ಅವು ತತ್ತಿಯಿಂದ ಐದಾರು ದಿವಸಕ್ಕೆ ಹೊರಬಿದ್ದು, ಜೀರಿಗೆಯ ಕಾಳಿನಂತೆ ಉದ್ದವಾಗಿ ಕಪ್ಪಾಗಿರುವವು. ಇದೇ ಕೀಟಕದ ಎರಡನೇ ಅವಸ್ಥೆಯು. ಈಗ ಆ ಕ್ರಿಮಿಯು ಆಹಾರವನ್ನು ತಿನ್ನಲಿಕ್ಕೆ ಹತ್ತಿ ಸೃಷ್ಟಿಯ ನಿಯಮದಂತೆ, ಬೆಳೆಯಲುದ್ಯುಕ್ತವಾಗುವದು. ಈ ಎರಡನೇ ಅವಸ್ಥೆಗೆ **ಕ್ರಿಮಿಯ ಅವಸ್ಥೆಯೆಂದು** ಹೇಳಬಹುದು.

ಬಳಿಕ ಏಳೆಂಟು ದಿವಸಗಳಾದ ಮೇಲೆ ಈ ಕೀಟಕವು ಸುಮಾರು ಎರಡು ಇಂಚಿನಷ್ಟು ಉದ್ದ ಬೆಳೆದು ಗೂಡನ್ನು ಕಟ್ಟಲಿಕ್ಕೆ ಆರಂಭಿಸುವದು. ಇದೇ ಕೀಟಕದ ಮೂರನೇ ಅವಸ್ಥೆಯು. ಇದಕ್ಕೆ **ಕೋಶಾವಸ್ಥೆಯೆನ್ನುವರು.** ಪುನಃ ಗೂಡು ಕಟ್ಟಿಕೊಂಡು, ಅವಯವಗಳಿಂದ ಸಹಿತವಾಗಿ ಹೊರಗೆ ಬಂದರೆ, ಅದಕ್ಕೆ **ಪೂರ್ಣಾವಸ್ಥೆಯೆನ್ನುವರು.** ಇದೇ ಕೀಟಕಗಳ ನಾಲ್ಕನೇ ಅವಸ್ಥೆಯು. ಮನುಷ್ಯನಿಗೆ ಮೂರು ಅವಸ್ಥೆಗಳಿದ್ದಂತೆ ಈ ಪ್ರಕಾರ ಕೀಟಕಗಳಿಗೆ ನಾಲ್ಕು ಅವಸ್ಥೆಗಳಿರುವವು

ಜೇನ್ನೊಣದಲ್ಲಿ ಪ್ರಕಾರಗಳು:—(೧) ಅರಸಿ (ಹೆಣ್ಣು ಜೇನ್ನೊಣ) (೨) ಗಂಡು ಜೇನ್ನೊಣ (೩) ಕೆಲಸ ಮಾಡುವ (ಸಾಮಾನ್ಯ) ಜೇನ್ನೊಣ ಎಂಬ ಮೂರು ಪ್ರಕಾರಗಳನ್ನು ಇವುಗಳ ಕಾರ್ಯಗಳ ಮೇಲಿಂದ ಗೊತ್ತು ಮಾಡಬಹುದು. ಇನ್ನು ಪ್ರತಿಯೊಂದು ಪ್ರಕಾರದ ಬಗ್ಗೆ ವಿಚಾರಮಾಡೋಣ.

ಅರಸಿ:— (ಹೆಣ್ಣು ಜೇನ್ನೊಣ) ಜೇನ್ನೊಣಗಳಲ್ಲಿ ಸ್ವಲ್ಪ ಉದ್ದಾಗಿರುವ ಜೇನ್ನೊಣಕ್ಕೆ ಅರಸಿ (ರಾಣಿ) ಯೆನ್ನುವರು. ಇದು ಕ್ರಿಮಿರೂಪದಲ್ಲಿ ಐದು ದಿವಸವಿದ್ದು ಬಳಿಕ ಕೋಶರೂಪವನ್ನು ಹೊಂದಿ, ಅಲ್ಲಿಂದ ಹೊರಬಿದ್ದ ಕೂಡಲೆ ಗೂಡಿನಲ್ಲಿ ಹಾರಾಡಲಿಕ್ಕೆ ಹತ್ತುವದು. ಮುಂದೆ ಈ ಪ್ರಾಣಿಯು ಅಲ್ಲಿ ಇದ್ದ ತನ್ನ ಜಾತಿಯ ಹುಳಗಳ ಕೂಡ ಹೋರಾಡುವದು. ಅದೇ ಕಾಲಕ್ಕೆ ಮತ್ತೊಂದು ಅರಸಿಯು ಕೋಶದಿಂದ ಹೊರಗೆ ಬಂದರೆ, ಹೊಸದಾಗಿ ಬಂದ ಹುಳಕ್ಕೂ, ಇದಕ್ಕೂ ಹೋರಾಟವಾಗಿ ಮೊದಲಿದ್ದ ಅರಸಿಯು ತನ್ನ ಸಂಗಡ ಕೆಲವು ಹುಳಗಳನ್ನು ಕಟ್ಟಿಕೊಂಡು ಎರಡನೇ ಕಡೆಗೆ ಹೋಗುವದು. ಹೀಗಾಗಲಿಕ್ಕೆ ಕಾರಣವೇನಂದರೆ:— ಒಂದು ಗೂಡಿನಲ್ಲಿ ಒಂದೇ ಅರಸಿಯು ಇರಬೇಕೆಂದು ದೇವರ ಸಂಕೇತವಿರುತ್ತದೆ. ಈ ಅರಸಿಯು ಒಮ್ಮೆ ಹೊರಗೆ ಬಂದಮೇಲೆ ಪುನಃ ಗೂಡು ಸೇರಿದ್ದು ಹೊರಗೆ ಬರುವದಿಲ್ಲ; ಯಾಕಂದರೆ ಅಲ್ಲಿ ತತ್ತಿಗಳನ್ನಿಕ್ಕಲಿಕ್ಕೆ ಪ್ರಾರಂಭಿಸುವದು. ಇದು ದಿನವೊಂದಕ್ಕೆ ಮೂರುಸಾವಿರ ತತ್ತಿಗಳನ್ನು ಹಾಕುವದು. ಈ ಹುಳವು ಹದಿನೈದು ದಿವಸಕ್ಕೆ ಪೂರ್ಣಾವಸ್ಥೆಯನ್ನು ಹೊಂದುವದು.

ಗಂಡುಹುಳ:— ಇದು ಸ್ಥೂಲವಾಗಿರುವದು. ಒಂದು ಗೂಡಿನಲ್ಲಿ ಮೂನೂರು ಐನೂರು ಆರುನೂರು ಹುಳಗಳು ಇರುವವು. ಇದು ಇಪ್ಪತ್ತು ಇಪ್ಪತ್ತಾಲ್ಕು ದಿವಸಕ್ಕೆ ಪೂರ್ಣಾವಸ್ಥೆಯನ್ನು ಹೊಂದುವದು. ಇದು ಬಹಳ ಸೋಮಾರಿಯಾಗಿರುವದು; ಇದಕ್ಕೆ ಸೊಂಡಿ ಇರುವದಿಲ್ಲ. ಇದರ ಕೆಲಸವು ಹೆಣ್ಣು ಹುಳವನ್ನು ಕೂಡಿಕೊಂಡು ಹೋಗುವದಿರುವದು. ಚಳಿಗಾಲವಂದ ಕೂಡಲೆ ಸಾಯುವದು.

ಸಾಮಾನ್ಯ (ಕೆಲಸದ) ಹುಳ:—ಇದು ವಿಶೇಷವಾಗಿ ಸಣ್ಣದಾಗಿರುವದು. ೨೧ ದಿವಸಕ್ಕೆ ಪೂರ್ಣಾವಸ್ಥೆಯನ್ನು ಹೊಂದುವದು. ಈ ಹುಳವು ಜೇನುತುಪ್ಪವನ್ನು ತೆಗೆಯುವ ಕೆಲಸವನ್ನೂ, ಗೂಡನ್ನು ಕಟ್ಟುವ ಕೆಲಸವನ್ನೂ ಮಾಡುವದು.

ಸಾಮಾನ್ಯಹುಳದ ಅಂಗರಚನೆಯನ್ನು ಪರೀಕ್ಷಿಸುವಾ

ತಲೆ, ಮಿಾಸೆಗಳು:– ಜೇನ್ನೊಣದ ತಲೆಯು ದುಂಡಗಿರುವದು. ಮತ್ತು ಅದರ ಮುಂಭಾಗದಲ್ಲಿ ಮಿಾಸೆಗಳು ಕಂಡುಬರುವವು. ಇವು ಕಣ್ಣುಗಳ ನಡುವೆ ಬೆಳೆಯುವವು. ಕೀಟಕಗಳು ಕದಲದಿರುವಾಗ ಈ ಮಿಾಸೆಗಳನ್ನು ಬೆನ್ನಿನ ಮೇಲೆ ಮಡಿಚಿಟ್ಟುಕೊಳ್ಳುವವು. ಅವು ಕದಲುವಾಗ ಮಾತ್ರ ಮಿಾಸೆಗಳನ್ನು ಮುಂದಕ್ಕೆ ಚಾಚಿಕೊಳ್ಳುವವು. ಒಮ್ಮೊಮ್ಮೆ ಒಂದೇ ಮಿಾಸೆಯನ್ನು ಮುಚ್ಚಿಕೊಳ್ಳುವವು. ಈ ಮಿಾಸೆಗಳೇ ಇವಕ್ಕೆ ಸ್ಪರ್ಶೇಂದ್ರಿಯಗಳಾಗಿದ್ದು ಇವೇ ಘ್ರಾಣೇಂದ್ರಿಯ, ಶ್ರೋತ್ರೇಂದ್ರಿಗಳಾಗಿಯೂ ಉಪಯೋಗಿಸಲ್ಪಡುವವು. ಈ ಮಿಾಸೆಗಳಿಂದಲೇ ಇವು ತಮ್ಮತಮ್ಮೊಳಗೆ ಅಭಿಪ್ರಾಯಗಳನ್ನು ತಿಳಿಸಿಕೊಡುವವು.

ನಾಲಿಗೆ:— ಈ ಹುಳದ ಬಾಯಿಯನ್ನು ನಿರೀಕ್ಷಿಸಲು, ಹೂಗಳಲ್ಲಿರುವ ಮಕರಂದವನ್ನು ಹೀರಿ ಕುಡಿಯಬೇಕಾಗಿರುವದರಿಂದ ಇದರ ಬಾಯಿಯು ಸೊಂಡಿಯಂತಿರುವದು. ಈ ಪ್ರಕಾರ ಸೊಂಡಿಯಿಂದ ಆಹಾರ ದೊರಕಿಸುವ ಕೀಟಕಗಳಿಗೆ ಹೀರುವ ಕೀಟಕಗಳೆಂದು ಅನ್ನುವರು. ಹೀರಿಕೊಳ್ಳದ ವೇಳೆಯಲ್ಲಿ ಸೊಂಡಿಯನ್ನು ಮಡಚಿಟ್ಟುಕೊಳ್ಳುವವು. ಇದರಲ್ಲಿ ಮೂರು ನಾಳಗಳುಂಟು. ಮಧ್ಯದಲ್ಲಿದ್ದ ನಾಳವು ಜೇನುತುಪ್ಪವನ್ನು ಹೀರುವದು. ಈ ಸೊಂಡಿಯ ಸುತ್ತಲು ಕೂದಲುಗಳಿರುವವು. ಮತ್ತು ಸೊಂಡಿಯ ಅಗ್ರಭಾಗವು ಗೋಲವಾಗಿರುವದು.

ಕಣ್ಣು:— ಇವು ನಮ್ಮಂತೆ ತಲೆ ತಿರುಗಿಸಿ ಪಕ್ಕದಲ್ಲಿರುವ ಪದಾರ್ಥವನ್ನು ನೋಡುವದಿಲ್ಲ. ಆದ್ದರಿಂದ ಅವುಗಳಿಗೆ ಎರಡೂ ಪಕ್ಕಗಳಲ್ಲಿ ಕಣ್ಣುಗಳಿರುವವು. ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ಷಟ್ಕೋನಾಕೃತಿಯ ಸಣ್ಣಸಣ್ಣ ತುಂಡುಗಳು ಸೇರಿ ಈ ಕಣ್ಣುಗಳು ನಿರ್ಮಾಣವಾಗಿರುವವೆಂದು ಕಂಡುಬರುವದು. ಆದ್ದರಿಂದ ಇವುಗಳಿಗೆ ತಮ್ಮ ಕಣ್ಣುಗಳನ್ನು ತಿರುಗಿಸುವದಕ್ಕೆ ಬರುವದಿಲ್ಲ. ಈ ಕಣ್ಣುಗಳು ದೊಡ್ಡವಾಗಿಯೂ ಬಟ್ಟುವಾಗಿಯು ಇರುವದರಿಂದ ದೂರದಿಂದಲೇ ಹೂವನ್ನು ಗೊತ್ತುಹಿಡಿಯುವವು.

ಪಕ್ಕಗಳು:— ಸಾಮಾನ್ಯವಾಗಿ ಕೀಟಕಗಳೆಲ್ಲಕ್ಕೂ ಎರಡು ಜೊಯ ರೆಕ್ಕೆಗಳಿರುತ್ತವೆ. ಕೆಲವಕ್ಕೆ ಒಂದೇ ಜೊತೆಯ ರೆಕ್ಕೆಗಳಿರುತ್ತವೆ. ಆದರಿಂದ ಇವು ಹಕ್ಕಿಯಂತೆ ಹಾರಬಲ್ಲವು, ಹಾರದಿದ್ದಾಗ ಇವು ರೆಕ್ಕೆಗಳನ್ನು ಮುಚ್ಚಿಕೊಳ್ಳುವವು.

ಕಾಲುಗಳು:— ನಮ್ಮಂತೆ ಇವುಗಳ ಕಾಲುಗಳೆಲ್ಲಾದರೂ ವಿಭಾ
ಗಗಳಿರುವವು ಮುಂಗಾಲುಗಳು ಕಿರಿದಾಗಿರುವವು. ಕಾಲಿನ ತುದಿಯಲ್ಲಿ
ುಗುರುಗಳಿರುವವು. ಆ ಉಗುರುಗಳಿಂದ ತನ್ನ ಸೊಂಡಿಯನ್ನು ಶುದ್ಧಮಾ
ುವದು. ಮತ್ತು ತನ್ನ ದೇಹದ ಮೇಲೆ ಬಿದ್ದಿರುವ ಮಕರಂದವನ್ನು ಒರಿಸಿ
ೊಳ್ಳುವದು. ಹಿಂಗಾಲುಗಳು ದೊಡ್ಡವಿದ್ದು ಹೂಗಳಲ್ಲಿರುವ ಪುಷ್ಪರಸ
ನ್ನು ಹೀರಿ ಅದನ್ನು ಚೀಲದಂತಿರುವ ತಮ್ಮ ಹಿಂಗಾಲುಗಳಲ್ಲಿ ಸಂಗ್ರಹಿಸಿ
ಟ್ಟುಕೊಳ್ಳುವವು. ಇವುಗಳಿದಿರಾಗಿ ಸಣ್ಣ ಕೂದಲುಗಳು ಅಲ್ಲಿ ಬೆಳೆದಿರು
ದರಿಂದ ಅವುಗಳಲ್ಲಿ ಇದ್ದ ಪುಷ್ಪರಸವು ತುಳುಕಿ ಹೋಗುವದಿಲ್ಲ.

ಹೊಟ್ಟೆಯಅಡಿಯಭಾಗ:— ಇಲ್ಲಿ ಮೇಣವನ್ನು ಸಂಗ್ರಹಿಸಿ ಇಡು
ವವು. ಕೆಲಸ ಮಾಡುವ ಹುಳಗಳು ಸಂಗ್ರಹಿಸಿದ ಜೇನುತುಪ್ಪವನ್ನು ತಿನ್ನಲಿ
ಕ್ಕೆ ಆರಂಭಿಸುವವು. ಇಪ್ಪತ್ತುಸೇರು ಜೇನು ತುಪ್ಪವು ಖರ್ಚಾದರೆ ಒಂದು
ೇರು ಮೇಣ ಹೊರಡುವದು. ಮೇಣ ಕೂಡಿಸಿ ಹುಟ್ಟು ಕಟ್ಟುವವು.

ಶ್ವಾಸೋಚ್ಛ್ವಾಸ:— ಕೀಟಕಗಳ ರಕ್ತವು ನಮ್ಮ ರಕ್ತದಂತಿರದೆ
ಣ್ಣಗಿರುವದು. ಸಾಧಾರಣವಾಗಿ ಅವುಗಳ ರಕ್ತವು ಸ್ವಲ್ಪ ಕೆಂಪಾಗಿದ್ದು
ನ್ಮ ರಕ್ತದಂತೆ ಪ್ರಾಣವಾಯುವಿನ ಮೂಲಕವಾಗಿಯೇ ಶುದ್ಧವಾಗುತ್ತಿ
ಲಿಕ್ಕೆ ಬೇಕು. ಅದರಿಂದ ಅವು ನಮ್ಮಂತೆ ಪ್ರಾಣವಾಯುವನ್ನು ತೆಗೆದು
ೊಳ್ಳುವವೆಂದು ತಿಳಿಯುವದು. ಆದರೆ ಕೀಟಕಗಳಿಗೆ ನಮಗಿರುವಂತೆ
ಶ್ವಾಸಕೋಶಗಳಾಗಲಿ, ಮೀನುಗಳಂತೆ ಶ್ವಾಸೇಂದ್ರಿಯವಾಗಲಿ ಇರುವ
ಿಲ್ಲ. ಕೀಟಕಗಳಿಗೆ ಪಾರ್ಶ್ವದಲ್ಲಿ ರಬ್ಬರಿನಂತೆ ಒಂದು ವಿಧವಾದ
ಚರ್ಮವುಂಟು. ಈ ಚರ್ಮರಂಧ್ರದಲ್ಲಿಯೇ ಅನೇಕ ಶ್ವಾಸರಂಧ್ರಗಳಿರು
ವವು. ಅದರಿಂದಲೇ ಅವು ಶ್ವಾಸೋಚ್ಛ್ವಾಸ ನಡಿಸುವವು. ನಮ್ಮ ಮೂಗು,
ಾಯಿ ಮುಚ್ಚಿದರೆ ನಾವು ಸಾಯುವೆವು; ಆದರೆ ಕೀಟಕಗಳು ಸಾಯುವ
ಿಲ್ಲ, ಮತ್ತು ಎಣ್ಣೆ ಹೊಯ್ದರೆ ಕೀಟಕವರ್ಗಕ್ಕೆ ಸೇರಿದ ಹೇನು, ಮುಂ
ಾದವುಗಳು ಸಾಯುವವು. ಯಾಕಂದರೆ ಎಣ್ಣೆಯಿಂದ ಆ ರಂಧ್ರವು
ುಚ್ಚಿಹೋಗಿ ಶ್ವಾಸವು ಕಟ್ಟಾಗುವದು.

ಅಸ್ಥಿಪಂಜರ:—ನಮ್ಮ ಹಾಗೆ ಇವುಗಳಿಗೆ ಅಸ್ಥಿಪಂಜರವು ಒಳಗೆ
ಿದ್ದು ಅದರ ಮೇಲೆ ಮಾಂಸ ರಕ್ತಾದಿಗಳಿರದೆ, ಅಸ್ಥಿಪಂಜರಗಳೇ ಮೇಲೆ
ಿದ್ದು ಮಾಂಸರಕ್ತಾದಿಗಳು ಒಳಗೆ ಇರುವವು. ಮನುಷ್ಯನಿಂದ ಬಾಧೆ

ಯಾಗಬಾರದೆಂದು ದೇವರು ಇದಕ್ಕೆ ಒಂದು ಅವಯವ ಕೊಟ್ಟಿರುವನು
ಅದು ಯಾವದೆಂದರೆ ಮುಳ್ಳು. ಆ ಮುಳ್ಳಿನಿಂದ ಮನುಷ್ಯನಿಗೆ ಚುಚ್ಚ
ಅದರಿಂದ ಒಂದು ಪ್ರಕಾರದ ರಸ ಬಿಡುವದು. ಆ ಮುಳ್ಳು ಇದರ ಅಡಿಯ
ಭಾಗದಲ್ಲಿರುವದು.

ಇದರ ದವಡೆಗಳಲ್ಲಿ ಕೋರೆಹಲ್ಲಿನಂತೆ ಉಳ್ಳ ಒಂದು ಅವಯ
ದಿಂದ ಮೇಣವನ್ನು ತಕ್ಕೊಂಡು ಗೂಡನ್ನು ಕಟ್ಟಿಕೊಳ್ಳುವದು. ಆ ಗೂ
ಗಳು ಷಟ್ಕೋಣಾಕೃತಿಯಾಗಿದ್ದು ಅವುಗಳಲ್ಲಿ ಎಲ್ಲಕ್ಕೂ ತಳಕ್ಕೆ ಮೇ
ವಿವರಿಸಿದ ಅರಸಿಯು ಇರುವದು. ಉಳಿದ ಮೇಲ್ಭಾಗದ ದೊಡ್ಡ ರಂ
ಗಳಲ್ಲಿ ಗಂಡು ಹುಳವಿರುವದು. ಸಣ್ಣ ಸಣ್ಣ ರಂಧ್ರಗಳಿದ್ದಲ್ಲಿ ಈ
ಮಾನ್ಯ ಹುಳಗಳಿರುವವು.

ಜೇನುತುಪ್ಪ ತೆಗೆಯುವ ರೀತಿ:— ಜೇನ್ನೊಣವು, ಹೂವಿನಿ
ತಂದ ಮಕರಂದರಸವನ್ನು ತನ್ನ ಬಾಯೊಳಗೆ ಹಾಕಿಕೊಂಡು ತನ್ನ
ಯೊಳಗಿರುವ ಒಂದು ಪ್ರಕಾರದ ರಸದಿಂದ ರಸಾಯನ ಕ್ರಿಯೆಯನ್ನು ನ
ಪುನಃ ಆ ರಸವನ್ನು ಹೊರಗೆ ಬಿಟ್ಟು ತನ್ನ ಗೂಡಿನಲ್ಲಿ ಒಂದು ಕ
ಸಂಗ್ರಹಿಸುವದು. ಇದೇ ಜೇನುತುಪ್ಪವು. ಸದೋದಿತ ಉದ್ಯೋಗ ಮ
ಈ ಜೇನುತುಪ್ಪವನ್ನು ಸಂಗ್ರಹಿಸಿ, ಮಳೆಗಾಲ ಬಂದಕೂಡಲೆ ಆ ಜೇ
ತುಪ್ಪವನ್ನೇ ಸ್ವೀಕರಿಸುವದು. ನಾವು ಇವುಗಳ ಹತ್ತರ ಹೋಗಿ ನೊ
ಲುಪಕ್ರಮಿಸಲು, ಇವು "ಗುಯ್" ಎಂದು ಸ್ವರಮಾಡಿದ ಕೂಡಲೆ ನಾ
ಕಡಿದಾವೆಂದು ಅಂಜಿಹೋಗುವೆವು. ಆದರೆ ಅಮೇರಿಕಾ ಮುಂತಾದ
ರಾಷ್ಟ್ರದವರು ಕೃತ್ರಿಮ ಗೂಡುಗಳನ್ನು ಮಾಡಿ ಕೊಟ್ಟು ಅವನ್ನು ಸ
ವರು; ಅದರಿಂದಲೇ ಆ ದೇಶದಲ್ಲಿ ಜೇನುತುಪ್ಪವು ವಿಶೇಷವಾಗಿರುವದು
ಪ್ರಕಾರ ಸತತ ಉದ್ಯೋಗಿಯಾದ ಮತ್ತು ಪರೋಪಕಾರಿಯಾದ ಜೇ
ಣಗಳ ಸಂಬಂಧವಾಗಿ ಕೊಟ್ಟ ಕೆಲವು ಸಂಗತಿಗಳನ್ನು ತಿಳಕೊಂ
ಅಜ್ಞಾನಿಯಾದ ಆ ಬಡಪ್ರಾಣಿಯಲ್ಲಿರುವ ಸುಗುಣಗಳನ್ನು ಸುಜ್ಞಾನ
ಮನುಷ್ಯಪ್ರಾಣಿಯು ಅನುಕರಣ ಮಾಡುವದು ಪರಮ ಶ್ರೇಯ
ವಾಗಿರುವದು.

ಶ್ರೀ. ಕಾ. ಧಾರವಾಡ.
೧೪—೫—೧೯೧೪.

ಗು. ಸಾ. ಕನ್ನೂರ,
೩ನೇ ವರ್ಷದ ವಿದ್ಯಾರ್ಥಿ.

ಶಿಕ್ಷಕಮಂಡಲದ ದ್ವಿತೀಯ ಸಮ್ಮೇಲನ.

೧೯೧೫

(ಬರೆದುಬಂದದ್ದು-)

ಕರ್ನಾಟಕ ಶಿಕ್ಷಕಮಂಡಲದ ದ್ವಿತೀಯ ಸಮ್ಮೇಲನವೂ ದ್ವಿತೀಯ ವಾರ್ಷಿಕಸಭೆಯೂ ಬರುವ ಜೂನ ತಿಂಗಳಲ್ಲಿ ೬-೭-೮ ನೇ ತಾರೀಖುಗಳ ದಿವಸ (ಗುರುವಾರ ಶುಕ್ರವಾರ ಶನಿವಾರ) ಕೂಡಬೇಕೆಂದು ಮಂಡಲದ ವ್ಯವಸ್ಥಾಪಕ ಸಭೆಯವರು ನಿಶ್ಚಯಪಡಿಸಿದ್ದಾರೆ. ಈ ಮೂರು ದಿವಸ ಮಂಡಲದ ಯಾವತ್ತು ಸಭಾಸದರೂ ಪ್ರಾಥಮಿಕ ಶಿಕ್ಷಣದಲ್ಲಿ ತೊಡಗಿದ ಶಿಕ್ಷಕಶಿಕ್ಷಿಕೆಯರೂ, ಶಿಕ್ಷಣಾಭಿಮಾನಿಗಳೂ ಸಮ್ಮೇಲನಕ್ಕೆ ಬಂದು ತಮ್ಮ ಅನುಭವದ ಲಾಭವನ್ನು ಸಮ್ಮೇಲಕ್ಕೆ ಮಾಡಿಕೊಟ್ಟು ಉಪಕಾರ ಮಾಡು ನರೆಂದು ಕೋರುತ್ತೇನೆ. ಈ ವರುಷದ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಭಾರವನ್ನು ಕರ್ನಾಟಕದಲ್ಲಿ ಶಿಕ್ಷಣಾಭಿವೃದ್ಧಿಯನ್ನು ಮಾಡುವದರಲ್ಲಿ ಮುಂದುವರಿದಿರುವ ರಾಣೇಬೆನ್ನೂರಿನ **ದಿ ಆನರೇಬಲ್ ರಾವಬಹಾದ್ದೂರ ವೆಂಕಣ್ಣನಾಯಿಕರವರು** ವಹಿಸಿದ್ದು ವಿಶೇಷ ಸಂತೋಷದ ಸಂಗತಿಯು.

ಮಂಡಲದ ವ್ಯವಸ್ಥಾಪಕಸಭೆಯವರು ಸಮ್ಮೇಲನದ ಯಾವತ್ತು ವ್ಯವಸ್ಥೆಯನ್ನು ಎಂಟುಜನರ ಒಂದು ಉಪಸಭೆಗೆ ಒಪ್ಪಿಸಿರುವರು. ಈ ಸಭೆಯಲ್ಲಿ ಧಾರವಾಡದ ಟ್ರೇನಿಂಗಕಾಲೇಜಗಳಲ್ಲಿ ಮಾಡುತ್ತಿರುವ ಶಿಕ್ಷಕ ಶಿಕ್ಷಿಕೆಯರೂ ಇತರ ಇನ್ಸಪೆಕ್ಟರರಲ್ಲಿ ಒಬ್ಬರೂ ಇರುವರು. ಸಮ್ಮೇಲನದಲ್ಲಿ ನಡೆಯತಕ್ಕ ವಾತಗಳ ಬಗ್ಗೆಯೂ ಇತರ ಕೆಲಸಗಳ ಬಗ್ಗೆಯೂ ಈ ಉಪಸಭೆಯವರು ಪೂರ್ಣ ಚರ್ಚಿಸಿ ಪಾಸುಮಾಡಿದ ಠರಾವುಗಳ ಸಾರಾಂಶವನ್ನು ಇಲ್ಲಿ ಕೊಡುತ್ತೇವೆ.

೧. ಮಾದರಿಯಪಾಠಗಳನ್ನು ಕಲಿಸಿ ತೋರಿಸಲು ಈ ವರುಷದ ಸಮ್ಮೇಲನದಲ್ಲಿ ವಿಶೇಷವಾಗಿ ಪದವೀಧರರಿಗೂ, ಇನ್ಸಪೆಕ್ಟಿಂಗ ಲೈನದಲ್ಲಿ ಕೆಲಸಮಾಡುತ್ತಿರುವ ಅಧಿಕಾರಸ್ಥರಿಗೂ, ಇಬ್ಬರು ಇಲ್ಲವೆ ಮೂವರು ಅನುಭವಿಕರಾದ ಪ್ರಾಥಮಿಕ ಶಿಕ್ಷಕರಿಗೂ ವಿನಂತಿ ಮಾಡಿಕೊಳ್ಳತಕ್ಕದ್ದು. ಪ್ರತಿಯೊಂದು ಮಾದರಿಯ ಪಾಠವನ್ನು ಕಲಸಿ ತೋರಿಸಿದ ಬಳಿಕ ಕಲಿಸಿ

ತೋರಿಸಿದವರು ಆ ಪಾಠದಲ್ಲಿ ತಾವು ಉದಹರಿಸಲಚ್ಚಿಸಿದ ಶಿಕ್ಷಣದ ತತ್ವಗಳನ್ನು ಕುರಿತು ಸಭಾಸದರರಿಗೆ ಹೇಳಬೇಕು; ಹಾಗು ಆ ಬಗ್ಗೆ ಸಭಾಸದರರಿಗೆ ಅನುಮಾನಗಳೇನಾದರೂ ಒದಗಿದರೆ ಚರ್ಚೆಮಾಡಬೇಕು. ಪ್ರತಿಯೊಂದು ಪಾಠದಬಗ್ಗೆ ತೀರ ಕಡಿಮೆಯೆಂದರೆ ೧೫ ನಿನಿಟು ಚರ್ಚೆಗೋಸ್ಕರ ಕಾದಿಡಬೇಕು.

೨. ಈ ವರುಷದ ಸಮ್ಮೇಲನದಲ್ಲಿ ಶಿಕ್ಷಕರಿಗೆ ಉಪಯುಕ್ತವೆನಿಸುವ ವಿಷಯಗಳ ಬಗ್ಗೆ ನಿಬಂಧಗಳನ್ನು ಓದಿಸುವ ವ್ಯವಸ್ಥೆ ಮಾಡತಕ್ಕದ್ದು. ಪ್ರತಿಯೊಂದು ನಿಬಂಧವು ೧೫ ನಿನಿಟಿನೊಳಗೆ ಮುಗಿಯುವಂಥದಿರಬೇಕು. ನಿಬಂಧದಲ್ಲಿ ವಿಸ್ತರಿಸಿದ ವಿಷಯಗಳ ಚರ್ಚೆಗೆಂದು ೧೫ ನಿನಿಟುಗಳನ್ನು ಕಾದಿಡಬೇಕು. ನಿಬಂಧಗಳ ವಿಷಯಗಳು ಕೇವಲ ತಾತ್ವಿಕವಾದವುಗಳಿರಬಾರದು. ಉದಾಹರಣಾರ್ಥವಾಗಿ, ಶಾಲೆಯ ಪುಸ್ತಕಾಲಯಗಳು ಎಂಬ ವಿಷಯವನ್ನು ಕುರಿತು ಬರೆಯುವದಾದರೆ, ಪುಸ್ತಕಾಲಯದ ಲಾಭಗಳ ಅವಶ್ಯಕತೆ ಮೊದಲಾದ ಪ್ರಸಿದ್ಧವಾದ ಮುದ್ದೆಗಳನ್ನು ಮಂಡಿಸುವದರಲ್ಲಿ ಕಾಲಕಳೆಯದೆ, ಪ್ರಾಥಮಿಕ ಶಾಲೆಗಳ ಶಿಕ್ಷಕ ಶಿಕ್ಷಿಕೆಯರಿಗೆ ಅತ್ಯವಶ್ಯವಾದ ಗ್ರಂಥಗಳಯಾವಾದಿ, ಇವು ಅತ್ಯವಶ್ಯವೆನ್ನಲು ಕಾರಣಗಳು, ಇವುಗಳನ್ನು ಉಪಯೋಗಿಸುವ ಪ್ರಕಾರ ಮೊದಲಾದ ಉಪಯುಕ್ತ ಮಾಹಿತಿಗಳ ಬಗ್ಗೆ ಬರೆಯುವದು ವಿಹಿತವು. ಚಿಕ್ಕಮಕ್ಕಳ ಆಟಗಳು, ಮಾಂಟಸ್ಸೋರಿಯ ಚರಿತ್ರವೂ ಶಿಕ್ಷಣಪದ್ಧತಿಯೂ, ಹಸ್ತನೇತ್ರಗಳ ಶಿಕ್ಷಣ, ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ವಿಷಯಗಳಲ್ಲಿ ಈ ಶಿಕ್ಷಣವನ್ನು ಎಷ್ಟರಮಟ್ಟಿಗೆ ಕೊಡಬಹುದು. ಇವೇ ಮೊದಲಾದ ವಿಷಯಗಳನ್ನು ಸಭೆಯವರು ಸೂಚಿಸಿರುವರು. ಈ ಬಗೆಯ ಇತರ ವಿಷಯಗಳ ಬಗ್ಗೆ ನಿಬಂಧ ಬರೆಯುವವರು ಉಪನ್ಯಾಸಗಳನ್ನು ಬರೆದು ಮೇ ತಿಂಗಳ ೩೧ ನೇ ತಾರೀಖಿನೊಳಗಾಗಿ ಕಾರ್ಯದರ್ಶಿಗಳ ಕಡೆಗೆ ಕಳಿಸಬಹುದು. ಇವುಗಳೊಳಗಿಂದ ಮಿ. ನವಲಗುಂದ, ಮಿ. ಡಂಬಳ ಹಾಗು ಮಿ. ಪೂಜಾರ ಇವರದೊಂದು ಕಮಿಟಿಯು ಕಾಲಾನುಕೂಲವಿರುವಷ್ಟು ನಿಬಂಧಗಳನ್ನು ಸಮ್ಮೇಲನದಲ್ಲಿ ಓದಲಿಕ್ಕೆ ಅರಿಸತಕ್ಕದ್ದು.

೩. ಈ ವರುಷದ ಸಮ್ಮೇಲನದಲ್ಲಿ ಒಂದು ಉರ್ದು ಪಾಠವನ್ನೂ ಒಂದು ಮರಾಠೀ ಪಾಠವನ್ನೂ ಕಲಿಸಿ ತೋರಿಸುವ ವ್ಯವಸ್ಥೆಯಾಗತಕ್ಕದ್ದು.

೪. ಈ ವರುಷದ ಸಮ್ಮೇಲನದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸುವ ಒಡವೆಗಳ ಸಣ್ಣ ಪ್ರದರ್ಶನಮಾಡುವ ವ್ಯವಸ್ಥೆಯಾಗತಕ್ಕದ್ದು. ಈ ಪ್ರದರ್ಶನದಲ್ಲಿ ಪ್ರಾಥಮಿಕ ಶಿಕ್ಷಕ ಶಿಕ್ಷಿಕೆಯರು ತಯಾರಿಸಿದ ಮಾಡೆಲ್, ಯಂತ್ರ, ಚಿತ್ರ, ನಕಾಶ ಮೊದಲಾದವುಗಳನ್ನು ಇಡಬೇಕು. ಪ್ರತಿಯೊಂದು ಒಡವೆಯ ಬಳಿಯಲ್ಲಿ ಆ ಬಗ್ಗೆ ಪ್ರೇಕ್ಷಕರಿಗೆ ವಿಶೇಸವಾಗಿ ತಿಳಿಯತಕ್ಕ ಸಂಗತಿಗಳ ಒಂದು ಟಪ್ಪಣಿಯೂ ಇರಬೇಕು. ವಾಡಿಕೆಯ ಶಾಲೆಯ ಕೆಲಸದಲ್ಲಿ ಹುಡುಗರು ಮಾಡಿದ ಕೆಲಸಗಳನ್ನು (ಬರಹ, ನೋಟುಗಳು, ಕಿಂಡರಗಾರ್ಟನದ ಇನಾಮುಗಳ ಕೆಲಸಗಳು) ಸಹ ಪ್ರದರ್ಶನದಲ್ಲಿ ಇಡಬಹುದು. ಇವೆಲ್ಲ ಒಡವೆಗಳನ್ನು ಶಿಕ್ಷಕರು ತಾವು ಸಮ್ಮೇಲನಕ್ಕೆ ಬರುವಾಗ ತರಬಹುದು; ಇಲ್ಲವೆ ಬರುವವರ ಸಂಗಡ ಕಳಿಸಿಕೊಡಬಹುದು. ಮೊದಲೇ ಕಳಿಸಿಕೊಡುವ ಕಾರಣವಿಲ್ಲ.

ಸಮ್ಮೇಲನಕ್ಕಾಗಿ ಜೂನತಿಂಗಳ ೫-೬-೭-ಲ ಈ ತಾರೀಖುಗಳ ದಿವಸ ಪ್ರಾಥಮಿಕ ಶಾಲೆಗಳ ಶಿಕ್ಷಕ ಶಿಕ್ಷಿಕೆಯರಿಗೆ ಮೆಹಬ್ಬಾನ ಎಜ್ಯುಕೇಶನಲ್ ಇನ್ಸಪೆಕ್ಟರ್ ದಕ್ಷಿಣಭಾಗ ಇವರು ರಜೆ ಮಂಜೂರು ಮಾಡಿರುವರು. ಸಮ್ಮೇಲನಕ್ಕೆ ಬರಲು ಮರಾಠಿ ಪಾಠಕ್ಕಾಗಿ ಪುಣೆಯ ಟ್ರೇನಿಂಗ ಕಾಲೇಜದ ಒಬ್ಬ ಅನುಭವಿಕ ಶಿಕ್ಷಕರು ಬರಲೊಪ್ಪಿರುವರು. ಕನ್ನಡ ಭಾಷಾ ಪಾಠ, ಕಿಂಡರಗಾರ್ಟನ್ ಪದ್ಧತಿಯ ಪಾಠಗಳಲ್ಲಿ ಮೇಲಾದ ಮಾದರಿಗಳನ್ನು ತೋರಿಸಲಿಕ್ಕಾಗಿ ಮೈಸೂರ ವಿದ್ಯಾಖಾತೆಗೆ ಸೇರಿದ ಅನುಭವಿಕ ಶಿಕ್ಷಕರನ್ನು ಸಮ್ಮೇಲನಕ್ಕೆ ಕಳಿಸಿಕೊಡುವ ಬಗ್ಗೆ ಮೈಸೂರ ಸರಕಾರದ ಮೆಹಬ್ಬಾನ ಇನ್ಸಪೆಕ್ಟರ ಜನರಲ್ ಆಫ್ ಎಜ್ಯುಕೇಶನ್ ಬಹಾದ್ದೂರರವರಿಗೆ ವಿನಂತಿಮಾಡಿಕೊಳ್ಳುವ ಬಗ್ಗೆ ವ್ಯವಸ್ಥೆಯು ನಡೆದಿರುವದು.

ಈ ವರುಷದ ಸಮ್ಮೇಲನದ ಬಗ್ಗೆ ವಿಶೇಷ ಸೂಚನೆಗಳನ್ನು ಮಾಡಲಿಚ್ಛಿಸುವವರು ತೀವ್ರವೇ ಕಾರ್ಯದರ್ಶಿಗಳಿಗೆ ಬರೆದು ತಿಳಿಸಿದರೆ ಉಪಕಾರವಾಗುವದು. ಸಮ್ಮೇಲನದ ಕೊನೆಯದಿವಸ ಮಧ್ಯಾನ್ಹದಲ್ಲಿ ಮಂಡಲದ ವಾರ್ಷಿಕ ಸಭೆಯು ಕೂಡುವದು. ಹೊರಗಿನಿಂದ ಬರುವ ಶಿಕ್ಷಕರ ಇಳಕೊಳ್ಳುವ ಹಾಗು ಊಟದ ವ್ಯವಸ್ಥೆಯ ಬಗ್ಗೆ ಮೆ॥ ಪ್ರಿನ್ಸಿಪಾಲ ಗುಡುಮಕ್ಕಳ ಟ್ರೇನಿಂಗ ಕಾಲೇಜ ಫಾರ್‌ಮೆನ್ ಇವರೊಡನೆ ಪತ್ರವ್ಯವಹಾರವು ನಡೆದಿರುವದು.

V. N. Magdal.
ಕಾರ್ಯದರ್ಶಿ.

ಪತ್ರವ್ಯವಹಾರ

ಬೀಕಿ ಬೀಕಿ ಕಡೆಯಲ್ಲಿ ಆದ ಶಿಕ್ಷಕರ ಸಮ್ಮೇಲನಗಳು.

(೧)

ಗುರುವರ್ಯ: ಕನ್ನಡ ಶಾಲಾಪತ್ರಕದ ಎಡಿಟರವರ ಸನ್ನಿಧಿಗೆ.

ಸಾಷ್ಟಾಂಗ ನಮಸ್ಕಾರಗಳು ವಿನಂತಿ:—ಕುರ್ತಕೋಟೆಯಲ್ಲಿ ಆದ ಸಮ್ಮೇಲನವು ಶಿಕ್ಷಕರಿಗೂ, ಆಯಾಗ್ರಾಮದ ಸಭ್ಯಗ್ರಹಸ್ಥರಿಗೂ, ಪಂಚರಿಗೂ ಬೋಧಪ್ರದವಾದ್ದರಿಂದ ಅದರ ಸಂಕ್ಷಿಪ್ತವರ್ಣನೆಯನ್ನು ತವ ಶಾಲಾಪತ್ರಕದಲ್ಲಿ ಮುದ್ರಿಸೋಣವಾಗಬೇಕೆಂದು ಪ್ರಾರ್ಥಿಸುವೆನು.

ಜನವರಿ ೨೧।೨೨ ನೇ ತಾರೀಖಿನ ದಿನಗಳಲ್ಲಿ ಕುರ್ತಕೋಟೆ (ಗದಗ ಯಲ್ಲಿ ಶಿಕ್ಷಕರ ಸಮ್ಮೇಲನವು ಕೂಡಿತ್ತು. ಸಮ್ಮೇಲನಕ್ಕೆ ಲೋಕಲ್ ಬೋರ್ಡ್, ಮುನಸಿಪಾಲಟಿಗಳ ಶಿಕ್ಷಕರೂ ಸಿರಹಟ್ಟಿ ತಾಲೂಕಿನ ಮಾಸ್ತರೂಕೂಡಿ ೨೨೫ ಜನರು ಬಂದಿದ್ದರು. ಸಮ್ಮೇಲನಕ್ಕಾಗಿ ಭವ್ಯವ ಮಂಟಪವನ್ನು ಊರಜನರು ಕಟ್ಟಿದ್ದರು. ಮಂಟಪದಲ್ಲಿ ಎಲ್ಲತ ಹೊಸ ಸುಧಾರಣೆಯಿತ್ತು. ಎಲ್ಲ ಶಿಕ್ಷಕರ ಊಟಕ್ಕಾಗಿಯೂ, ದರ್ಬಾ ವೆಚ್ಚಕ್ಕಾಗಿಯೂ ಊರವರು ೨೨೦ ರೂ. ಗಳನ್ನು ವೆಚ್ಚಮಾಡಿದ ಸಮ್ಮೇಲನಕ್ಕೆ ಪರಸ್ಥಳದ ಸ್ಕೂಲಪಂಚರೂ ಗ್ರಾಮಸ್ಥರೂ ಊರೊಳ ಎಲ್ಲ ಪ್ರಮುಖಜನರೂ ಹಾಜರಿರುತ್ತಿದ್ದರು. ಗದಗಿನ ವಕೀಲರಾದ ಶಾಂತಾರಾಮರಾವ ಪುಣೇಕರ ಬಿ. ಏ. ಎಲ್‌ಎಲ್. ಬಿ ಇವರು ಅಧ್ ರಾಗಿದ್ದರು. ಮೆ|| ಡಿ|| ಎ|| ಇ|| ಸಾಹೇಬರೂ, ಮೆ. ಳನೇ ಅ|| ಡಿ|| ಪರ್ವತೀಕರಸಾಹೇಬರೂ ಸಭೆಗೆ ಆಗಮಿಸಿ ಶೋಭೆಯನ್ನುಂಟುಮಾ ದ್ದರು. ಒಟ್ಟಿಗೆ ಈ ಸಮ್ಮೇಲನವು ಶಿಕ್ಷಕರ ಸಮ್ಮೇಲನವಿರದೆ ಶಿಕ್ಷಣ ಹುಳ ಪ್ರಗತಿಯನ್ನು ಬಯಸುವ ಸುಶಿಕ್ಷಿತರ ಸಮ್ಮೇಲನವಾಗಿತ್ತೆಂ ಧಾರಾಳವಾಗಿ ಹೇಳಬಹುದು. ಇದು ವರೆಗೆ ಆದ ಸಮ್ಮೇಲನಗಳಲ್ಲಿ ಇ ಬಹುದೊಡ್ಡ ಸಮ್ಮೇಲನವು. ಇಂಥ ದೊಡ್ಡ ಸಮ್ಮೇಲನದ ಕಾರ್ಯವ ನೀಗಿಸುವದಕ್ಕಾಗಿ ಕುರ್ತಕೋಟೆಯವರು ಅಷ್ಟೆಯಿಂದ ಸಹಾಯಮಾ

ದ್ದು ಹಳ್ಳಿಯಲ್ಲಿಯೂ ಕೂಡ ಶಿಕ್ಷಣದ ವಿಷಯವಾಗಿ ಜನರಲ್ಲಿ ಜಾಗ್ರತೆಯಾಗಹತ್ತಿರುತ್ತದೆಂಬುವದು ವ್ಯಕ್ತವಾಗುತ್ತದೆ.

ಸಮ್ಮೇಲನದಲ್ಲಿ ನಡೆದ ಮಹತ್ವದ ಕಾರ್ಯಗಳು.

೨೧ನೇ ತಾರೀಖು ಸೋಮವಾರ ದಿವಸ ಗದಗ ಏ. ವ್ಹಿ. ಸ್ಕೂಲ ವಿದ್ಯಾರ್ಥಿಗಳ ಪ್ರೇಕ್ಷಣೀಯವಾದ ಡ್ರಿಲ್ಲು ಆದನಂತರ ಕಾರ್ಯಕ್ರಮದ ಪ್ರಕಾರ ಕೆಲಸ ನಡೆದು ನಿಬಂಧಗಳು ಓದಲ್ಪಟ್ಟವು. ಮಿ. ಮೇವುಂಡಿ ಇವರು ಓದಿದ ಮುಷ್ಟಿಫಂಡಿನ ನಿಬಂಧವು ಸರ್ವಮಾನ್ಯವಾಗಿ ಎಲ್ಲ ಶಾಲೆಯಲ್ಲಿಯೂ ಫಂಡು ಸ್ಥಾಪಿಸುವದು ಅಗತ್ಯವೆಂದು ಏಕಮುಖದಿಂದ ಪಾಸಾಯಿತು. ನಿಯಮಿಸಿದ ವಿಷಯಗಳು ಕಲಿಸಲ್ಪಟ್ಟ ತರುವಾಯ ಮೆ॥ ಡಿ॥ ಎ॥ ಇ॥ ಸಾಹೇಬರು ಸರ್ವರೂ ಒಡಂಬಡುವಂತೆ ಸುಲಭವಾಗಿ ದಶಾಂಶ ಅಪೂರ್ಣಾಂಕ ಭಾಗಾಕಾರವನ್ನು ಕಲಿಸುವ ರೀತಿಯನ್ನು ತೋರಿಸಿದರು. ಮಿ. ತ. ನಾ. ಅಮ್ಮಿನಭಾವಿ, ಕಾನಡೆ, ಅಲೂರ, ಕಲ್ಮಠ, ಸೂರ್ಯವಂಶಿ, ಇಂಗಳಿಗೀಕರ, ಅಣ್ಣೀಗೇರಿ ಉರ್ದುಮಾಸ್ತರ ಛಬ್ಬಿ (ಹತಿಗ) ಇವರು ನಿಬಂಧ ವಿಷಯಗಳನ್ನು ತಗೆದುಕೊಂಡು ಸಮ್ಮೇಲನದ ಕಾರ್ಯವು ಯಶಶ್ವಿಯಾಗುವಂತೆ ಮಾಡಿದರು. ಬಹಳ ಜನ ಮಾಸ್ತರರು ವ್ಹಾಲಂಟಿಯರರಾಗಿ ಸಮ್ಮೇಲನದಲ್ಲಿ ಕೆಲಸಮಾಡಿದ್ದರಿಂದಲೇ ಇಷ್ಟು ದೊಡ್ಡ ಸಮ್ಮೇಲನವು ಕುಂದು ಕೊರತೆಗಳಿಲ್ಲದೇ ಸಾಂಗವಾಯಿತು.

ಸಮ್ಮೇಲನದಲ್ಲಿ ನಡೆದ ಇತರ ಮಹತ್ವದ ಸಂಗತಿಗಳು.

ಕುರ್ತಕೋಟ ಹೆಡ್‌ಮಾಸ್ತರ ಮಿ. ವೈದ್ಯ ಇವರು ಕಬೀರಾಪ್ಯಾನವನ್ನು ಬೋಧಪರವಾಗುವಂತೆ ಕೀರ್ತನೆ ಮಾಡಿದರು. ಟ್ರೇನಿಂಗಕಾಲೇಜದ ರಸಾಯನ ಪ್ರೋಫೇಸರರಾದ ಮಿ. ಕೋಲ್ಹಟಕರ ಇವರು ಗೋವರ್ಧನದಾಸ ಇವರ ಕಡೆಯಿಂದ ಶಾಸ್ತ್ರೀಯ ಉಪಕರಣಗಳನ್ನು ತಯಾರಿಸಿ ಸಮ್ಮೇಲನಕ್ಕೆ ಕಳಿಸಿದ್ದರು. ಸಪ್ರಯೋಗ ಸಾಮಾನುಗಳನ್ನು ತೋರಿಸಿ ಅವುಗಳನ್ನು ಬೇಡಿದವರಿಗೆ ಗೋವರ್ಧನದಾಸ ಇವರು ತಯಾರಿಸಿಕೊಡುವೆವೆಂದು ತಿಳಿಸಿದರು ಶಿಕ್ಷಕರ ಇದೊಂದು ಮಹತ್ವದ ಕೊರತೆಯೇ ದೂರಾದಂತಾಯಿತು. ಸಮ್ಮೇಲನಕ್ಕೆ ಬೇರೆ ಬೇರೆ ಶಾಲೆಯಿಂದ ಪ್ರದರ್ಶನ ಸಾಮಾನುಗಳು ಬಂದಿದ್ದವು. ಬಹುತರ ಎಲ್ಲ ಸಾಮಾನುಗಳು

ಪತ್ರವ್ಯವಹಾರ

ಬೇಕಿ ಬೇಕಿ ಕಡೆಯಲ್ಲಿ ಆದ ಶಿಕ್ಷಕರ ಸಮ್ಮೇಲನಗಳು.

(೧)

ಗುರುವರ್ಯ ಕನ್ನಡ ಶಾಲಾಪತ್ರಕದ ಎಡಿಟರವರ ಸನ್ನಿಧಿಗೆ.

ಸಾಷ್ಟಾಂಗ ನಮಸ್ಕಾರಗಳು ವಿನಂತಿ:—ಕುರ್ತಕೋಟೆಯಲ್ಲಿ ಆದ ಸಮ್ಮೇಲನವು ಶಿಕ್ಷಕರಿಗೂ, ಆಯಾಗ್ರಾಮದ ಸಭ್ಯಗ್ರಹಸ್ಥರಿಗೂ, ಪಂಚರಿಗೂ ಬೋಧಪ್ರದವಾದ್ದರಿಂದ ಅದರ ಸಂಕ್ಷಿಪ್ತವರ್ಣನೆಯನ್ನು ತಮ್ಮ ಶಾಲಾಪತ್ರಕದಲ್ಲಿ ಮುದ್ರಿಸೋಣವಾಗಬೇಕೆಂದು ಪ್ರಾರ್ಥಿಸುವೆನು.

ಜನವರಿ ೨೧।೨೨ ನೇ ತಾರೀಖಿನ ದಿನಗಳಲ್ಲಿ ಕುರ್ತಕೋಟ (ಗದಗ) ಯಲ್ಲಿ ಶಿಕ್ಷಕರ ಸಮ್ಮೇಲನವು ಕೂಡಿತ್ತು. ಸಮ್ಮೇಲನಕ್ಕೆ ಲೋಕಲ್ ಬೋರ್ಡ, ಮುನಸಿಪಾಲಟಿಗಳ ಶಿಕ್ಷಕರೂ ಸಿರಹಟ್ಟಿ ತಾಲೂಕಿನ ಮಾಸ್ತರರೂಕೂಡಿ ೨೨೫ ಜನರು ಬಂದಿದ್ದರು. ಸಮ್ಮೇಲನಕ್ಕಾಗಿ ಭವ್ಯವಾದ ಮುಂಟಪವನ್ನು ಊರಜನರು ಕಟ್ಟಿದ್ದರು. ಮುಂಟಪದಲ್ಲಿ ಎಲ್ಲತರಹೊಸ ಸುಧಾರಣೆಯಿತ್ತು. ಎಲ್ಲ ಶಿಕ್ಷಕರ ಊಟಕ್ಕಾಗಿಯೂ, ದರ್ಬಾರವೆಚ್ಚಕ್ಕಾಗಿಯೂ ಊರವರು ೨೨೦ ರೂ. ಗಳನ್ನು ವೆಚ್ಚಮಾಡಿದರು. ಸಮ್ಮೇಲನಕ್ಕೆ ಪರಸ್ಥಳದ ಸ್ಕೂಲಪಂಚರೂ ಗ್ರಾಮಸ್ಥರೂ ಊರೊಳಗಿನ ಎಲ್ಲ ಪ್ರಮುಖಜನರೂ ಹಾಜರಿರುತ್ತಿದ್ದರು. ಗದಗಿನ ವಕೀಲರಾದ ಶಾಂತಾರಾಮರಾವ ಪುಣೇಕರ ಬಿ. ಏ. ಎಲ್ಎಲ್. ಬಿ ಇವರು ಅಧ್ಯಕ್ಷರಾಗಿದ್ದರು. ಮೆ|| ಡಿ|| ಎ|| ಇ|| ಸಾಹೇಬರೂ, ಮೆ. ಳನೇ ಅ|| ಡಿ|| ಪರ್ವತೀಕರಸಾಹೇಬರೂ ಸಭೆಗೆ ಆಗಿಮಿಸಿ ಶೋಭೆಯನ್ನುಂಟುಮಾಡಿದ್ದರು. ಒಟ್ಟಿಗೆ ಈ ಸಮ್ಮೇಲನವು ಶಿಕ್ಷಕರ ಸಮ್ಮೇಲನವಿರದೆ ಶಿಕ್ಷಣದ ಮುಖ ಪ್ರಗತಿಯನ್ನು ಬಯಸುವ ಸುಶಿಕ್ಷಿತರ ಸಮ್ಮೇಲನವಾಗಿತ್ತೆಂದು ಧಾರಾಳವಾಗಿ ಹೇಳಬಹುದು. ಇದು ವರೆಗೆ ಆದ ಸಮ್ಮೇಲನಗಳಲ್ಲಿ ಇದು ಬಹುದೊಡ್ಡ ಸಮ್ಮೇಲನವು. ಇಂಥ ದೊಡ್ಡ ಸಮ್ಮೇಲನದ ಕಾರ್ಯವನ್ನು ನೀಗಿಸುವದಕ್ಕಾಗಿ ಕುರ್ತಕೋಟಿಯವರು ಅಷ್ಟೆಯಿಂದ ಸಹಾಯಮಾಡಿ

ದ್ದು ಹಳ್ಳಿಯಲ್ಲಿಯೂ ಕೂಡ ಶಿಕ್ಷಣದ ವಿಷಯವಾಗಿ ಜನರಲ್ಲಿ ಜಾಗ್ರತೆ ಯಾಗಹತ್ತಿರುತ್ತದೆಂಬುವದು ವ್ಯಕ್ತವಾಗುತ್ತದೆ.

ಸಮ್ಮೇಲನದಲ್ಲಿ ನಡೆದ ಮಹತ್ವದ ಕಾರ್ಯಗಳು.

೨೧ನೇ ತಾರೀಖು ಸೋಮವಾರ ದಿವಸ ಗದಗ ಏ. ವ್ಹಿ. ಸ್ಕೂಲ ವಿದ್ಯಾರ್ಥಿಗಳ ಪ್ರೇಕ್ಷಣೀಯವಾದ ಡ್ರಿಲ್ಲು ಆದನಂತರ ಕಾರ್ಯಕ್ರಮದ ಪ್ರಕಾರ ಕೆಲಸ ನಡೆದು ನಿಬಂಧಗಳು ಓದಲ್ಪಟ್ಟವು. ಮಿ. ಮೇವುಂಡಿ ಇವರು ಓದಿದ ಮುಷ್ಟಿಫಂಡಿನ ನಿಬಂಧವು ಸರ್ವಮಾನ್ಯವಾಗಿ ಎಲ್ಲ ಶಾಲೆಯಲ್ಲಿಯೂ ಫಂಡು ಸ್ಥಾಪಿಸುವದು ಅಗತ್ಯವೆಂದು ಏಕಮುಖದಿಂದ ಪಾಸಾಯಿತು. ನಿಯಮಿಸಿದ ವಿಷಯಗಳು ಕಲಿಸಲ್ಪಟ್ಟ ತರುವಾಯ ಮೆ॥ ಡಿ॥ ಎ॥ ಇ॥ ಸಾಹೇಬರು ಸರ್ವರೂ ಒಡಂಬಡುವಂತೆ ಸುಲಭವಾಗಿ ದಶಾಂಶ ಅಪೂರ್ಣಾಂಕ ಭಾಗಾಕಾರವನ್ನು ಕಲಿಸುವ ರೀತಿಯನ್ನು ತೋರಿಸಿದರು. ಮಿ. ತ. ನಾ. ಅಮ್ಮಿನಭಾವಿ, ಕಾನಡೆ, ಅಲೂರ, ಕಲ್ಮಠ, ಸೂರ್ಯವಂಶಿ, ಇಂಗಳಿಗೀಕರ, ಅಣ್ಣೀಗೇರಿ ಉರ್ದುಮಾಸ್ತರ ಛಬ್ಬಿ (ಹತಿಗ) ಇವರು ನಿಬಂಧ ವಿಷಯಗಳನ್ನು ತಗೆದುಕೊಂಡು ಸಮ್ಮೇಲನದ ಕಾರ್ಯವು ಯಶಶ್ವಿಯಾಗುವಂತೆ ಮಾಡಿದರು. ಬಹಳ ಜನ ಮಾಸ್ತರರು ವ್ಹಾಲಂಟಿಯರರಾಗಿ ಸಮ್ಮೇಲನದಲ್ಲಿ ಕೆಲಸಮಾಡಿದ್ದರಿಂದಲೇ ಇಷ್ಟು ದೊಡ್ಡ ಸಮ್ಮೇಲನವು ಕುಂದು ಕೊರತೆಗಳಿಲ್ಲದೇ ಸಾಂಗವಾಯಿತು

ಸಮ್ಮೇಲನದಲ್ಲಿ ನಡೆದ ಇತರ ಮಹತ್ವದ ಸಂಗತಿಗಳು.

ಕುರ್ತಕೋಟಿ ಹೆಡ್‌ಮಾಸ್ತರ ಮಿ. ವೈದ್ಯ ಇವರು ಕಬೀರಾಖ್ಯಾನವನ್ನು ಬೋಧಪರವಾಗುವಂತೆ ಕೀರ್ತನೆ ಮಾಡಿದರು. ಟ್ರೇನಿಂಗಕಾಲೇಜದ ರಸಾಯನ ಪ್ರೋಫೇಸರರಾದ ಮಿ. ಕೋಲ್ಹಟಕರ ಇವರು ಗೋವರ್ಧನದಾಸ ಇವರ ಕಡೆಯಿಂದ ಶಾಸ್ತ್ರೀಯ ಉಪಕರಣಗಳನ್ನು ತಯಾರಿಸಿ ಸಮ್ಮೇಲನಕ್ಕೆ ಕಳಿಸಿದ್ದರು. ಸಪ್ರಯೋಗ ಸಾಮಾನುಗಳನ್ನು ತೋರಿಸಿ ಅವುಗಳನ್ನು ಬೇಡಿದವರಿಗೆ ಗೋವರ್ಧನದಾಸ ಇವರು ತಯಾರಿಸಿಕೊಡುವೆವೆಂದು ತಿಳಿಸಿದರು ಶಿಕ್ಷಕರ ಇದೊಂದು ಮಹತ್ವದ ಕೊರತೆಯೇ ದೂರಾದಂತಾಯಿತು. ಸಮ್ಮೇಲನಕ್ಕೆ ಬೇರೆ ಬೇರೆ ಶಾಲೆಯಿಂದ ಪ್ರದರ್ಶನ ಸಾಮಾನುಗಳು ಬಂದಿದ್ದವು. ಬಹುತರ ಎಲ್ಲ ಸಾಮಾನುಗಳು

ಉಪಯುಕ್ತವಾದವಿದ್ದವು ೨೧ ನೇ ತಾರೀಖಿನ ಸಂಜೆಯ ಕಡೆಗೆ ಗದಗ ಎ. ವ್ಹಿ. ಸ್ಕೂಲ ವಿದ್ಯಾರ್ಥಿಗಳು ಯೋಗ್ಯ ಪದ್ಧಯಿಂದ ತಿಳ್ಳೀ ಆಟವನ್ನು ಆಡಿತೋರಿಸಿದರು. ಈ ಸಮ್ಮೇಲನದ ಅಧ್ಯಕ್ಷರಾದ ಮಿ. ವಿಜೇಕರ ಇವರ ಮತ್ತು ಮೆ|| ಡಿ|| ಎ|| ಇ|| ಸಾಹೇಬರ ಭಾಷಣಗಳು ಮಹತ್ವವಾದವೂ, ಬೋಧಪ್ರದವಾದವೂ ಇದ್ದದರಿಂದ ಸಂಕ್ಷೇಪವಾಗಿ ಇಲ್ಲಿ ಕೊಡುವೆವು.

ಅಧ್ಯಕ್ಷರ ಭಾಷಣ:—ಮಾಸ್ತರನ ಕರ್ತವ್ಯವು ಅತಿ ಮಹತ್ವದ್ದೂ ಜಬಾಬದಾರಿಯುಳ್ಳದ್ದೂ ಆಗಿದೆ. ಭಾವೀರಾಷ್ಟ್ರದ ಅಸ್ತಿವಾರವೇ ಶಿಕ್ಷಕ ವರ್ಗದ ಮೇಲಿರುವದು. ಅತ್ಯಂತ ಕಳಕಳಿಯಿಂದ ಕೆಲಸ ಮಾಡುವ ಶಿಕ್ಷಕನ ವಿಷಯವಾಗಿ ಜನರಲ್ಲಿ ಆದರವೂ ಪೂಜ್ಯ ಬುದ್ಧಿಯೂ ಹುಟ್ಟುವದು ಸಹಜವು. ಜಗತ್ತಿನಲ್ಲಿ ಶಿಕ್ಷಕರಿಗೆ ದೊರೆಯುವ ಮಾನವು ಮತ್ಯಾರಿಗೂ ದೊರೆಯುವದಿಲ್ಲ. ಮಾಸ್ತರ ಜನರು ಈ ಉದ್ಯೋಗದಿಂದ ಶ್ರೀಮಂತರಾಗುವದು ಅಸಂಭವವು. ಇವತ್ತಿನವರೆಗೆ ಯಾವ ರಾಷ್ಟ್ರದಲ್ಲಿಯೂ ಮಾಸ್ತರನು ತನ್ನ ಉದ್ಯೋಗದಿಂದ ಶ್ರೀಮಂತನಾದದ್ದು ದೃಗ್ಗೋಚರವಾಗಿಲ್ಲ. ಆದ್ದರಿಂದ ನಿಮ್ಮ ಪವಿತ್ರಕರ್ತವ್ಯಕ್ಕನುಸರಿಸಿ ನಿಮ್ಮ ಕೃತಿಯು ಪವಿತ್ರವಾದದ್ದೂ ನಿಷ್ಕಲಂಕವಾದದ್ದೂ ಇರಲಿ. ಶಿಕ್ಷಕರು ವಿದ್ಯಾರ್ಥಿಗಳ ಎದುರಿಗೆ ಮಾದರಿಗೊಂಬೆಗಳಾಗಿರಬೇಕು. ನೀತಿಪಾಠಗಳನ್ನು ಬಾಯಿಂದ ಹೇಳುವದಕ್ಕಿಂತ ಕೃತಿಯಿಂದ ಪಾಠಗಳನ್ನು ಕೊಡಬೇಕೆಂದು ನಾನು ಅಪೇಕ್ಷಿಸುವೆನು. ಹುಡುಗನು ಜಗತ್ತಿನ ತಂದೆಯಾದ್ದರಿಂದ ಅಂಥ ಜಬಾಬುದಾರಿಯುಳ್ಳ ತಂದೆಯನ್ನು ತಯಾರಿಸುವ ಮಹತ್ಕಾರ್ಯವು ತಮ್ಮದಿರುವದು ಇತ್ಯಾದಿ.

ಮೆ|| ಡಿ|| ಎ|| ಇ|| ಸಾ|| ರವರ ಭಾಷಣವು:— ಸಮ್ಮೇಲನದ ನಿಜವಾದ ರಹಸ್ಯವು ಇನ್ನೂ ಎಷ್ಟೋ ಕಡೆಗೆ ಚನ್ನಾಗಿ ತಿಳಿದಿರುವದಿಲ್ಲ. ಕೇವಲ ಟೀಕಾಪಾಠಗಳೂ ನಿಬಂಧಗಳೂ ನಡೆದರೆ ಸಮ್ಮೇಲನದ ಉದ್ದೇಶವು ಈಡೇರಲಿಲ್ಲ. ಪಾಠಗಳನ್ನು ಕಲಿಸಲಿಕ್ಕೆ ಬರುವಷೋ ಇಲ್ಲವೋ ಎಂಬದನ್ನು ನೋಡುವದು ಇಲ್ಲಿ ಇಲ್ಲ. ಶಿಕ್ಷಣ ವಿಷಯದಿಂದ ಅನುಭವಗಳನ್ನು ಪರಸ್ಪರವಿನಿಯೋಗಮಾಡಿಕೊಳ್ಳುವದು ಅತಿ ಮಹತ್ವದ್ದದೆ. ನೀತಿಶಿಕ್ಷಣದ ವಿಷಯವಾಗಿ ಸಾಹೇಬರು ಅಂದದ್ದೇನಂದರೆ ಶಾಲೆಯಲ್ಲಿ ಬರೇ ಹತ್ತಿಪ್ಪತ್ತು ನೀತಿಯ ವಾಕ್ಯಗಳನ್ನು ಬರೆದು ಹಚ್ಚು

ವದಕ್ಕಿಂತ ವಿದ್ಯಾರ್ಥಿಗಳ ಆಚರಣೆಯಲ್ಲಿ ನೀತಿಯು ಉತ್ಪನ್ನವಾಗುವಂ
ತಾವೇ ನಡೆದು ತೋರಿಸಬೇಕು. ನೀತಿವಾಕ್ಯಗಳಿಂದ ಪ್ರಯೋಜನ
ಲ್ಲೆಂದು ನನ್ನ ಅಭಿಪ್ರಾಯವಿಲ್ಲ. ಪದ್ಧತಿಯು ಎಲ್ಲರಿಗೂ ಗೊತ್ತದೆ. ನಿತ್ಯ
ಕೆಲಸದಲ್ಲಿ ಪ್ರತಿಯೊಬ್ಬರಲ್ಲಿ ಪ್ರಾಮಾಣಿಕತನವಿರಬೇಕು. ಮಾಸ್ತರ ಜ
ರಿಗೆ ವಿಶಿಷ್ಟವಾದ ಅಧಿಕಾರವಿಲ್ಲ. ಆದರೆ ತಮ್ಮ ಕೆಲಸ, ನಡತೆ ಇವು
ಳಿಂದ ಜನರಲ್ಲಿ ಸದಭಿಪ್ರಾಯವನ್ನುಂಟುಮಾಡಿಕೊಳ್ಳುವದು ಯೋಗ್ಯ
ಇತ್ಯಾದಿ.

ಇಷ್ಟಾದನಂತರ ಮೆ॥ ಪರ್ವತೀಕರಸಾಹೇಬರು ಪ್ರಸಂಗಕ್ಕೆ ಅನು
ಸರಿಸಿ ಸಮಯೋಚಿತ ಭಾಷಣಮಾಡಿದನಂತರ ಕಾರ್ಯದರ್ಶಿಗಳು
ಬಂದಜನರ ಅಭಾರಮನ್ನಿಸಿದ ಬಳಿಕ ಹಾರ ತುರಾಯಿ ತಾಂಬೂಲಾದಿ
ಗಳು ಸಮರ್ಪಿಸಲ್ಪಟ್ಟವು. ಅನಂತರ ರಾಷ್ಟ್ರಗೀತೆಯಾಗಿ ಸಮಾರಂಭದ
ಕಾರ್ಯವು ಸಮಾಪ್ತವಾಯಿತು.

ಬಳಿಕ ೫॥ ರಿಂದ ೬ ರ ವರೆಗೆ ಮೆ. ಡೆಪುಟಿ ಸಾಹೇಬರ ಖಾಸಗಿ
ಭೆಟ್ಟಿಯಾಗಿ ಯೋಗ್ಯ ಸಂಗತಿಗಳ ನಿರ್ಣಯವಾಯಿತು.

ದತ್ತಾತ್ರಯ ಕೃಷ್ಣ ಮೇವುಂಡಿ,
ಸಮ್ಮೇಲನದ ಕಾರ್ಯದರ್ಶಿ ಕುರ್ತಕೋಟಿ.

ಪತ್ರವ್ಯವಹಾರ.

(೨)

ಶ್ರೀಯುತ ಗುರುವರ್ಯ ಎಡಿಟರ ಕನ್ನಡ ಶಾಲಾಪತ್ರಿಕ ಇವರ
ಸನ್ನಿಧಿಗೆ...

ಸವಿನಯ ವಿಜ್ಞಾಪನೆ—ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂ
ಕಿನ ಮಾಸ್ತರ ಜನರ ಕಾನ್‌ಫರನ್ಸವು ಬಾಗೇವಾಡಿ ಕನ್ನಡ ಶಾಲೆಯಲ್ಲಿ
ತಾರೀಖು ೨೮, ೨೯ ಜಾನೇವಾರಿ ೧೯೧೮ ಇಸವಿ. ಈ ಎರಡು ದಿವಸ ಮಿಲಿ
ತವಾಗಿತ್ತು. ಈ ಸಮಾರಂಭವು ಬಹು ಚಂದವಾಗಿ ಜರುಗಿತು. ಅದರ
ಸಂಕ್ಷಿಪ್ತವೃತ್ತವನ್ನು ಕೆಳಗೆ ಕೊಟ್ಟಿದೆ. ಅದು ಬಹು ಸರಸಾಗಿರುವದರಿಂದ
ತಮ್ಮ ಸುಂದರವಾದ ಶಾಲಾಪತ್ರಿಕದಲ್ಲಿ ಆದಷ್ಟು ಬೇಗನೆ ಇಂಬು ದೊರೆ
ಯುಬೇಕೆಂದು ಬೇಡುತ್ತೇನೆ.

ಶಾಲೆಯ ದಕ್ಷಿಣ ದಿಕ್ಕಿನ ಕಂಬಾವುಂಡದಲ್ಲಿ ತುಂಬ ಮುಂಟಪವು ಮಂಡಿಸಲ್ಪಟ್ಟಿತ್ತು. ಅಧ್ಯಕ್ಷರ ಆಸನವನ್ನು ಎತ್ತರವಾಗಿ ಕಟ್ಟಿದ ಕಟ್ಟೆಯ ಮೇಲೆ ರಚಿಸಿದ್ದರು. ಅದು ಸುತ್ತಲೂ ಚಿತ್ರಿತವಾದ ಪಡದೆಗಳಿಂದಲೂ ಅಸಮಾನಗಿರಿ ಛತ್ತುಗಳಿಂದಲೂ ಲತಾಪುಷ್ಪಗಳಿಂದಲೂ ಅಲಂಕೃತವಾಗಿತ್ತು.

ಮೆ॥ ಗೋಖಲೆ ಸಾಹೇಬ ಹೆಡ್ ಡಿಪೂಟಿಯವರು ಅಧ್ಯಕ್ಷರಾಗಿದ್ದರು. ಮೆ॥ ಕೊಪ್ಪರ ಸಾಹೇಬ ಅ॥ ಡೆಪೂಟಿಯವರು ಉಪಾಧ್ಯಕ್ಷರು. ತಾಲೂಕ ಶಾಲೆಯ ಮಾಸ್ತರ ಮಿ ಮುದ್ಧವ ವೆಂಕಟೇಶ ಯಳವತ್ತಿ ಇವರು ಕಾರ್ಯದರ್ಶಿಗಳಾಗಿದ್ದರು. ಮೆ॥ ಮಾಮಲೇದಾರ ಸಾಹೇಬರೂ ಡಾಕ್ಟರ ಸಾಹೇಬರೂ ವ್ಹಾಯಿಸ್ ಪ್ರೆಸಿಡೆಂಟ ಕೃಷ್ಣರಾವ ಬೊಮ್ಮಣಗಿ ಇವರೂ ಮನಗೋಳಿ, ಉಕ್ಕಲಿ, ಕೋಲ್ಹಾರ ಮುಂತಾದ ಗ್ರಾಮಗಳ ಲೋಕಲ್ ಬೋರ್ಡ ಮೆಂಬರರೂ ಬಾಗೇವಾಡಿಯ ಸ್ಕೂಲಕಮೀಟಿಯ ಮೆಂಬರರೂ, ಉಳಿದೆಲ್ಲ ಸಭ್ಯಗೃಹಸ್ಥರೂ ವಿರಾಜಿಸುತ್ತಿದ್ದರು.

ತಾರೀಖು ೨೮, ೨೯ ಈ ಎರಡೂ ದಿವಸ ಮುಂಜಾನೆ ೮ ರಿಂದ ೧೦ ಘಂಟೆಯ ಮತ್ತು ಸಂಜೆಯ ೩ ರಿಂದ ೫ ಘಂಟೆಯವರೆಗೆ ಕಾರ್ಯಕ್ರಮದ ಯೋಜನೆಯಾಗಿತ್ತು. ಸಭೆಯ ಕೆಲಸವು ಆರಂಭವಾಗುವ ಮೊದಲು ಎರಡೂ ಹೊತ್ತುಗಳಲ್ಲಿ ಪ್ರಾರ್ಥನೆ ಪದಗಳೂ ಸ್ವಾಗತಪದಗಳೂ ರಾಗದ ಪೆಟ್ಟಗೆಯೊಂದಿಗೆ ಅನ್ನಲ್ಪಡುತ್ತಿದ್ದವು. ಬಾಗೇವಾಡಿ ಕನ್ನಡ ಗಂಡ ಹೆಣ್ಣು ಶಾಲೆಗಳ ವಿದ್ಯಾರ್ಥಿವಿದ್ಯಾರ್ಥಿನಿಯರೂ ಮನಗೋಳಿ ಕನ್ನಡ ಗಂಡುಶಾಲೆಯ ಹುಡುಗರೂ ಪದಗಳನ್ನು ಅಂದರು. ಈ ಸಮ್ಮೇಲನದಲ್ಲಿ ೫ ನಿಬಂಧಗಳೂ, ೪ ನೈತಿಕ ಪಾಠಗಳೂ ಇಡಲ್ಪಟ್ಟಿದ್ದವು. ಇದಲ್ಲ ಬರೆದು ತಂದ ನಿಬಂಧಕ್ಕೂ ಕಲಿಸುವ ನೀತಿಪಾಠಕ್ಕೂ ಬಹು ಸಮೀಪ ಸಂಬಂಧವಿತ್ತು. ಮತ್ತು ಎರಡನೆಇಯತ್ತಿಗೆ ಭೂಗೋಲ ಪಾಠವನ್ನು ಮೇಲಿನ ವರ್ಗಗಳಿಗೆ ಇತಿಹಾಸಪಾಠವನ್ನೂ ಕಲಿಸುವದು ಗೊತ್ತಾಗಿತ್ತು

ಗೊತ್ತುಮಾಡಿದ ನಿಬಂಧಗಳು.	ನಿಯಮಿಸಿದ ಪಾಠಗಳು.
೧ ಹೋದ ಸಮ್ಮೇಲನದಿಂದ ಇಂದಿನವರೆಗೆ ಮಾಡಿದ ಸುಧಾರಣೆಗಳು.	೧ ನೈತಿಕ ವಿಷಯವನ್ನನುಲಕ್ಷಿಸಿ ಐ ಇಯತ್ತಿಗೆ ಕಥೆ ಹೇಳುವದು.
೨ ಪದ್ಧತಿಗೆ ಸರಿಯಾಗಿ ಶಾರೀರ ಶಿಕ್ಷಣವನ್ನು ಕೊಡುವ ಅವಶ್ಯಕತೆ.	೨ ಎರಡನೇ ಇಯತ್ತಿಗೆ ಭೂಗೋಲ ಕಸುವದು.

ಅಕ್ಷರಗಳ ಬರವಣಿಗೆಯಲ್ಲಿ ಸುಧಾರಣೆ.

ಶ್ರಮದ ಗೌರವ.

ನಮ್ಮ ನಿತ್ಯದ ಕರ್ತವ್ಯಗಳಲ್ಲಿ ಇಡಬೇಕಾದ ವ್ಯವಸ್ಥೆ ಮತ್ತು ಸಿಸ್ತು.

೩ (೫ನೇ, ೬ನೇ, ೭ನೇ) ಇಯತ್ತ್ರಗಳಿಗೆ ನೈತಿಕ ಪಾಠಗಳನ್ನು ಕಲಿಸುವದು.

೧ ವಿಧೇಯತ್ವ [ಮಾನನೀಯರಿಗೆ]

೨ ಸಮಾಜಹಿತಕ್ಕಾಗಿ ಒಟ್ಟುಗೂಡುವದು.

೩ ಕರ್ತವ್ಯದ ಸಲುವಾಗಿ ಕರ್ತವ್ಯವನ್ನು ಮಾಡುವದು.

೪ ಇತಿಹಾಸ [೫-೬-೭ ಇಯತ್ತ್ರಗಳಿಗೆ]

೫ ಶಾಸ್ತ್ರೀಯ ಪಾಠ. ಸದರ

ನಿಬಂಧಗಳೂ, ಪಾಠಗಳೂ ಸಭೆಯಲ್ಲಿ ಚನ್ನಾಗಿ ಆದವು. ಕೆಲವು ನಿಬಂಧಗಳನ್ನೂ ನೈತಿಕ ಪಾಠಗಳ ಟಿಪ್ಪಣಿಗಳನ್ನೂ ಸನ್ನಿಧಿಗೆ ಕಳಿಸುವ ಯೋಚನೆಯುಂಟು. ಅವುಗಳಲ್ಲಿ ಯೋಗ್ಯತೆ ಇದ್ದರೆ ಮುದ್ರಿಸಲ್ಪಡಲಿ. ನೀರಿನ ಸಮಪಾತಳಿ, ಕಾರಂಜಿ, ಗೆರಸಪ್ಪೆಯ ಧಬಧಬಿ, ಉಷ್ಣತೆಯ ನಹನ, ಸಹಚಲನ, ಆಮ್ಲ ಕ್ಷಾರ ಲವಣಗಳು ಕಲಿಸಲ್ಪಟ್ಟವು.

ತಾ॥ ೨೯ ಮಂಗಳವಾರ ರಾತ್ರಿ ೯ರಿಂದ ೧೧॥ ಗಂಟೆಯವರೆಗೆ ಮುನಗೋಳಿ ಶಾಲೆಯ ವಿದ್ಯಾರ್ಥಿಗಳು ಶ್ರೀಮಂತ ಸವಾಯಿ ಮಾಧವ ರಾಯರ ಪಟ್ಟಾಭಿಷೇಕ ಎಂಬ ಐತಿಹಾಸಿಕ ನಾಟಕವನ್ನು ಮಾಡಿ ತೋರಿಸಿದರು. ಈ ನಾಟಕವನ್ನು ಆ ಶಾಲೆಯ ಹೆಡ್‌ಮಾಸ್ತರ ಮಿ. ಭಗವಾನ ವಾಸುದೇವ ಮುರಾಠೆ ಇವರು ಬರೆದಿರುವರು. ಇದು ಸಂಗೀತ ನಾಟಕವು. ರಾತ್ರಿ ೧೨ರಿಂದ ಬೆಳಗಿನ ೪ ರ ವರೆಗೆ ಮುಸಬಿನಾಳ ನಾಟಕ ಮಂಡಳಿಯವರು ಭೋಜಪ್ರಬಂಧವನ್ನು ಆಡಿ ತೋರಿಸಿದರು. ಈ ಎರಡೂ ನಾಟಕಗಳಿಂದ ಬಂದ ಉತ್ಪನ್ನವು ಸಮ್ಮೇಲನಕ್ಕೆ ಕೊಡಲ್ಪಟ್ಟಿತು.

ಅಧ್ಯಕ್ಷರ ಭಾಷಣ:— ಈ ವರ್ಷ ಈ ಜಿಲ್ಹೆಯಲ್ಲಿ ನೆರೆದ ಸಮ್ಮೇಲನಗಳಲ್ಲಿ ಇದು ಉತ್ತಮ ರೀತಿಯಿಂದ ಕೊನೆಗಂಡಿತು. ತಾಲೂಕ ಮಾಸ್ತರರು ಬಹು ಆಸ್ಥೆಯಿಂದ ಕೆಲಸ ಮಾಡಿದ್ದು ಅನುಕರಣೀಯವಾದದ್ದು ಮುನಗೋಳಿ ನಾಟಕದ ಚಿಕ್ಕಮುಕ್ಕಳು ಮಾಡಿದ ಗಾಯನವೂ ಅಭಿನಯಗಳೂ ಬಹು ಸರಸವಾಗಿ ಕಂಡವು. ಮುಳವಾಡ ಶಾಲೆಯ ವಿದ್ಯಾರ್ಥಿಗಳು ನಡೆದಿರುವ ಮಹಾಯುದ್ಧದ ವಿಷಯದ ಮೇಲೆ ಸಂಭಾಷಣ ಮಾಡಿದರು. ನಿಡಗುಂದಿಯ ವಿದ್ಯಾರ್ಥಿಗಳು ತಿಲ್ಲೀ ಆಟವನ್ನು ರಮ್ಯವಾಗಿ ಆಡಿ ತೋರಿಸಿದರು.

ಸಭಾಕಾರ್ಯವನ್ನು ನೋಡಿ ಸಂತುಷ್ಟರಾಗಿ ಕೆಳಗೆ ಕಾಣಿ
ಮಹನೀಯರು ವರ್ಗಣೀ ರೂಪದಿಂದ ಹಣ ಕೊಟ್ಟರು. ಅದರ ವಿವರ

ಹೆಸರು	ಕೊಟ್ಟ ರಕಮು.			ಯಾತರ ಸಲುವಾಗಿ ಕೊಟ್ಟ
ಮೆ॥ ಗೋಖಲೆ ಸಾ॥ ಹೆಡ್ ಡಿಪೂಟಿ ಯವರು.	೧೫	೦	೦	ಮಾಸ್ತರ ಜನರ ಭೋಜನ ಖರ್ಚಿಗೆ.
ಮೆ॥ ಮಾಮಲೇದಾರ್ ಸಾ॥ (ಜಮಖಂಡಿ ಗುರುರಾಯರು)	೫	೦	೦	,, ,,
,, ಕೊಪ್ಪರ ಸಾ॥ ಅ. ಡೆಪೂಟಿಯವರು.	೫	೦	೦	,, ,,
ಮೆ॥ ವ್ಹಾಯಿಸ್ ಪ್ರೆಸಿಡೆಂಟ ತಾಲೂಕ ಲೋಕಲಬೋರ್ಡ ಬೊಮ್ಮಣಗಿ ಕೃಷ್ಣರಾಯರು.	೫	೦	೦	ಭೋಜನ ಖರ್ಚಿಗೆ.
ಸದರ ಸದರ	೪	೦	೦	ತಿಳ್ಳೀ ಆಟಕೆ. (ನಿಡಗುಂ
ಸದರ ಸದರ	೨	೦	೦	ಮುಳವಾಡದ ಸಂಭಾಷಣ
ಮ. ರಾ. ಅಣ್ಣಾಸ್ವಾಮಿ ಪಾಟೀಲ ಮನಗೋಳಿ ಲೋ. ಬೋ. ಮೆಂಬರ.	೧೦	೦	೦	ಭೋಜನ ಖರ್ಚಿಗೆ [ತೋ
,, ಸದರ ಸದರ	೫	೦	೦	ಮನಗೋಳಿ ನಾಟಕದ ಪ
,, ಭೀಮನಗೌಡಾ ಪಾಟೀಲ ಉಕ್ಕಲಿ ಲೋ. ಬೋ. ಮೆಂಬರ.	೧೦	೦	೦	ಭೋಜನಕ್ಕೆ
,, ಗುರುರಾವ ದೇಶಪಾಂಡೆ ಕೋಲ್ಹಾರ.	೨	೦	೦	,,
,, ಶಿದ್ದನಗೌಡಾ ಪಾಟೀಲ ಬಾಗೇವಾಡಿ.	೧೦	೦	೦	,,
,, ಗುರುಗೌಡಪ್ಪಾ ಅಣ್ಣಾ ಪಾಟೀಲ.	೧೦	೦	೦	,,
,, ಸಂಗನಗೌಡಾ ಕಲ್ಲಪ್ಪಾ ಪಾಟೀಲ.	೫	೦	೦	,,
,, ರಾಮನಗೌಡರು ಬಾಗೇವಾಡಿ	೫	೦	೦	,,
,, ಭೀಮರಾವ ಕುಲಕರ್ಣಿ.	೫	೦	೦	,,
ಅಂತು ...	೯೮	೦	೦	ತೊಂಬತ್ತೆಂಟು ರೂಪಾಯಿ

ಇದಲ್ಲದೆ ಮನಗೋಳಿ ವಿದ್ಯಾರ್ಥಿಗಳಿಗೆ ೭ ಜರದ ಟೊಪ್ಪಿಗೆ ಒಂ
ದ ಶಲ್ಲಿಗಳನ್ನು ಬಾಗೇವಾಡಿಯ ಸಜ್ಜನ ಹಿರಿಯರು ಕೊಟ್ಟರು ಮತ್ತೆ

ನಾಳ ನಾಟಕದವರಿಗೆ ಮಾಸ್ತರರಿಲ್ಲರೂ ಕೂಡಿ ಒಂದು ಸುವರ್ಣಪದಕವನ್ನೂ ಬೇರೆ ಮೂವರು ಬಾಗೇವಾಡಿ ಸಭ್ಯಗೃಹಸ್ಥರು ಕೂಡಿ ೧೫ ರೂ. ಗಳನ್ನೂ ಕೊಟ್ಟರು.

ಪತ್ರ ವಿಸ್ತಾರಕ್ಕೆ ಅಂಜಿ ಸಂಕ್ಷಿಪ್ತವಾಗಿ ಕೊಟ್ಟಿರುವೆನು.

ತಮ್ಮ ವಿಧೇಯ,

ಬಾಗೇವಾಡಿ
ತಾ॥೧೨-೨-೧೯೧೮. } ಭೀಮರಾವ ಹಣಮಂತ ಕುಲಕರ್ಣಿ,

ಸಿದ್ಧನಾಥ ಹೂರಿ, ಮೊರ್ಚ (ಮರ್ಚಂಟ.)

ಬೇರೆ ಕೆಲವು ಸಮ್ಮೇಲನಗಳ ಸಾರಾಂಶ.

೧ ಗೋಕಾಕ, ಜಿಲ್ಲಾ ಬೆಳಗಾವ. ಇಲ್ಲಿಯ ಸ್ಕೂಲಬೋರ್ಡ ಚೇಅರಮನ್ನರಾದ ರಾವಸಾ॥ ಭಸ್ಮೆಸಾ॥ ರವರು ಅಧ್ಯಕ್ಷರಾಗಿದ್ದರು. ಸಮ್ಮೇಲನದ ಖರ್ಚಿನ ಬಗ್ಗೆ ೧೦೦ ರೂಪಾಯಿಗಳು ಸಂಗ್ರಹವಾಗಿದ್ದವು. ಅಧ್ಯಕ್ಷರು "ಶಿಕ್ಷಣದ ಕೆಲಸವು ಬಹಳ ಮಹತ್ವದ್ದು ಇದ್ದಕಾರಣ ಶಿಕ್ಷಕರು ಅಂತಃಕರಣಪೂರ್ವಕ ಬಾಲಕರ ಕಲ್ಯಾಣದ ಕಡೆಗೆ ಲಕ್ಷ್ಯಗೊಟ್ಟು ಪದ್ಧತಿಗಳನ್ನು ಸುಧಾರಿಸುತ್ತ ಹೋಗಬೇಕು ಮತಭೇದವಿದ್ದ ಸಂಗತಿಗಳ ವಿಷಯಕ್ಕೆ ತಮ್ಮದೇ ನಿಜವೆಂದು ಆಗ್ರಹ ತೊಡಬಾರದು" ಎಂಬ ಆಶಯದ ಭಾಷಣ ಮಾಡಿದರು. ಇಲ್ಲಿಯ ಹೆಡ್‌ಮಾಸ್ತರರಾದ ಮಿ. ಹತ್ತಿಯವರು 'ಶಿಕ್ಷಕರು ವಿಷಯವನ್ನು ಮನೆಯಲ್ಲಿ ನೋಡಿಕೊಂಡು ಬಂದರೆ ಪಾಠವು ಸರಸವಾಗಿ ಸಾಗುತ್ತದೆ. ಮತ್ತು ಕಲಿಸುವಾಗ ವ್ಯರ್ಥವೇಳೆಯು ಹೋಗುವದಿಲ್ಲ. ಇಂದಂತು ಸರಿ. ಆದರೆ ಬರೇ ನೋಡಿಕೊಂಡು ಬರುವದಕ್ಕಿಂತಲೂ ಎಷ್ಟೋ ವಿಷಯಗಳನ್ನು ಮುದ್ದಿಗಳ ರೂಪದಿಂದಲೂ, ಮುಖ್ಯ ಮುಖ್ಯ ಪ್ರಶ್ನಗಳ ರೂಪದಿಂದಲೂ ಟಿಪ್ಪಣಿಮಾಡಿಕೊಂಡು ಬರುವದು, ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗುವದು. ಮತ್ತು ಕ್ರಮಶಃ ಪಾಠಗಳನ್ನು ಹೇಳಲಿಕ್ಕೂ, ಯೋಗ್ಯದೃಷ್ಟಾಂತಗಳನ್ನು ಉಪಯೋಗಿಸಲಿಕ್ಕೂ, ವಿದ್ಯಾರ್ಥಿಗಳ ಅರ್ಥದ ಪುಸ್ತಕ ಮುಂತಾದವುಗಳನ್ನು ಸಹಜವಾಗಿ ತಯಾರಿಸಲಿಕ್ಕೂ, ಅನುಕೂಲವಾಗುತ್ತದೆ.' ಈ ಮುಂತಾದ ಸಂಗತಿಗಳಿಂದ ಟಿಪ್ಪಣಿಯ ಪುಸ್ತಕವನ್ನು ಇಡುವದು ಅವಶ್ಯವೆಂದು ಸ್ಥಾಪಿಸಿದರು.

ಗೋಕಾಕ ಶಹರವು ಬಣ್ಣದ ನಾಮಾನುಗಳ ಬಗ್ಗೆ ಪ್ರಸಿದ್ಧಿಯನ್ನು ಪಡೆದದ್ದರಿಂದ ಪ್ರೇಕ್ಷಣೀಯ ಜೀನಸುಗಳ ಪ್ರದರ್ಶನವು ಸಭಿಕರನ್ನು ಹೆಚ್ಚು ಮನೋರಂಜನೆಗೊಳಿಸಿತು.

೨ ಆಲೂರ, ತಾಲೂಕು ಹಾನಗಲ್ಲ– ಇಲ್ಲಿಯ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಮೊದಲನೇ ದಿವಸ ಮೆ॥ ೨ನೇ ಅಸಿ॥ ಡಿಪೂಟಿಯವರೂ ಎರಡನೇ ದಿವಸ ಮೆ॥ ಡಿ. ಎ. ಇ. ಸಾಹೇಬರೂ ಸ್ವೀಕರಿಸಿದ್ದರು. ಇಲ್ಲಿ ಉದ್ಯೋಗದ ಮಹತ್ವ, ಕೈಬರಹದ ಅಕ್ಷರಗಳ ಸುಧಾರಣೆ, ವಿದ್ಯಾರ್ಥಿಗಳ ಸಹಕಾರೀ ಸಂಘ, ಸಾರ್ವತ್ರಿಕ ವಿದ್ಯಾಪ್ರಸಾರ ಸಶಾಸ್ತ್ರವ್ಯಾಯಾಮ, ಈ ನಿಬಂಧಗಳ ವಾಚನವು ಆಯಿತಲ್ಲದೆ, ಇತಿಹಾಸ, ವಿಶಿಷ್ಟಗುರುತ್ವ, ಅಕ್ಷರಗಳ ಬರವಣಿಗೆಯ ಕ್ರಮ, ಮುಂತಾದ ಕೆಲವು ವಿಷಯಗಳು ಕಲಿಸಿ ತೋರಿಸಲ್ಪಟ್ಟವು.

ಅಧ್ಯಕ್ಷರ ಭಾಷಣ:—"ಶಿಕ್ಷಕರ ಕೆಲಸವು ಇಹಪರಗಳೆರಡರಲ್ಲಿಯೂ ಸುಖಕರವಾದದ್ದು ಇರುತ್ತದೆ. ಹಣಸಾಶೆಯನ್ನು ಹೆಚ್ಚಾಗಿ ಮಾಡದೆ ತಮ್ಮ ಕರ್ತವ್ಯದಲ್ಲಿ ತತ್ಪರರಾಗಿರಬೇಕು. ಭಾವೀ ರಾಷ್ಟ್ರವನ್ನು ತಯಾರಿಸಿ ದೇಶ ಹಿತವನ್ನು ಸಾಧಿಸುವ ಜವಾಬದಾರಿಯು ಶಿಕ್ಷಕರ ಕಡೆಗೇ ಇರುತ್ತದೆಂಬದನ್ನು ಲಕ್ಷ್ಯದಲ್ಲಿಡಬೇಕು. ಅನುಭವಿಕ ಶಿಕ್ಷಕರ ಶಿಕ್ಷಣದಲ್ಲಿಯ ಅನುಭವಗಳನ್ನು ಬೇರೆ ಎಲ್ಲ ಶಿಕ್ಷಕರು ಅನುಸರಿಸಿ ತಮ್ಮ ಶಿಕ್ಷಣವನ್ನು ಸುಧಾರಿಸಿಕೊಳ್ಳತಕ್ಕದ್ದು. ನೀತಿ ಶಿಕ್ಷಣವು ಕೇವಲ ಕಥಾನುರೂಪದಿಂದ ಸಾಗದೆ, ಪ್ರತ್ಯಕ್ಷ ನೀತಿಗಳು ಯಾವಾಗಲೂ ಶಿಕ್ಷಕನಲ್ಲಿ ತೋರುತ್ತಲಿರಬೇಕು" ಇತ್ಯಾದಿ.

೩. ಹುನಗುಂದ ಜಿಲ್ಲಾ ವಿಜಾಪೂರ—ಇಲ್ಲಿಯ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ರಾವಸಾ॥ ಮಾಮಲೇದಾರ ಬಂಡೇರಾವ ಶಿರೋಳಕರ ಇವರು ಸ್ವೀಕರಿಸಿದ್ದರು. ೬೦ ಜನ ಶಿಕ್ಷಕರ ಸಮುದಾಯವು ಕೂಡಿತ್ತು. ಅಸಿ॥ ಡಿಪೂಟಿಯವರಾ ರಾವಸಾ॥ ಬಂಡೆಪ್ಪನವರ ಇವರು ವ್ಯವಸ್ಥಿತವಾದ ಶಾರೀರಿಕ ಶಿಕ್ಷಣದ ಕೆಲವು ಮೆಟ್ಟಿಗಳನ್ನು ಸೂಚಿಸಿದ್ದಲ್ಲದೆ 'ಶಾಲೆಯ ಮ್ಯೂಸ್ಯಿಯಂ' ಇದರ ಅವಶ್ಯಕತೆಯು ಪರಿಣಾಮಕರವಾಗುವಂತೆ ವ್ಯಾಖ್ಯಾನ ಕೊಟ್ಟರು. ಅದರಿಂದ ಮಿ. ವೀರಭದ್ರಯ್ಯಾ ನಾಗೂರ ಇವರು ನಾಗನೂರ ಶಾಲೆಯಲ್ಲಿ 'ಮ್ಯೂಸ್ಯಿಯಂ' ಸ್ಥಾಪಿಸಲಿಕ್ಕೆ ೨೫ ರೂಪಾಯಿಗಳನ್ನು ಕೊಡಲಿಕ್ಕೆ ಒಪ್ಪಿಕೊಂಡರು. ಮತ್ತು ಹುನಗುಂದ ಶಾಲೆಯಲ್ಲಿ 'ಮ್ಯೂಸ್ಯಿಯಂ' ಸ್ಥಾಪಿಸಲಿಕ್ಕೆ ಸ್ವಹಸ್ತ ಪರಹಸ್ತಗಳಿಂದ ಸಹಾಯ ಮಾಡುತ್ತೇವೆಂದು ಮಿ ದೊಡ್ಡಪ್ಪಾ ನಾಗರಾಳ ಇವರು ಒಪ್ಪಿಕೊಂಡರು.

ಅಧ್ಯಕ್ಷರ ಭಾಷಣ:— " ಸಾಂಪ್ರತದಲ್ಲಿ ರಾಷ್ಟ್ರದ ಬೆಳವಣಿಗೆಗೆ 'ಕಳೆ ಕಾಸಿ ಕಿಡಿ ಛಾತ್ರ ಶಾಧಾಧಿ ಶರಾಧಿ' ಎಂಬಂತೆ ಮಾನಸಿಕ, ನೈತಿಕ ಶಿಕ್ಷಣಗಳಲ್ಲದೆ ಶಾರೀರಿಕ ಶಿಕ್ಷಣವೂ ಅತ್ಯವಶ್ಯವು, ಇತ್ಯಾದಿ ಸಂಗತಿಗಳನ್ನು ಹೇಳಿ 'ಸ್ಕೌಟ'ದ ಬಗ್ಗೆ ಶಿಕ್ಷಕರು ಮಾಡತಕ್ಕ ಕೆಲವು ಉಪದೇಶಗಳನ್ನು ಸೂಚಿಸಿದರು."

೪. ಉಗಾರ, ತಾ॥ ಅಥಣಿ—ಇಲ್ಲಿಯ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಮೆ॥ ೧ನೇ ಅಸಿ॥ ಡಿ. ಎ. ಇನ. ಗುಡ್ಡೋಪಂತ ಉದಗಟ್ಟಿ ಇವರು

ಸ್ವೀಕರಿಸಿದ್ದರು. ಒಟ್ಟಿಗೆ ೭೦ ಜನ ಶಿಕ್ಷಕರ ಸಮಾಜವು ಕೂಡಿತ್ತು. ಮಿ. ಜಿ. ಭಿ. ಕುಲಕರ್ಣಿ ಮುಂತಾದ ಶಿಕ್ಷಕರು ಪಾಠಗಳನ್ನು ಕಲಿಸಿದ್ದರಿಂದಲೂ, ಮಿ. ಜಂಬಿಗಿ, ಮಿ. ಪದಕಿ, ಮಿ. ಗಾಡಗೀಳ, ಮಿ. ವಠಾರಕರ ಮುಂತಾದ ಮಾಸ್ತರರು ನಿಬಂಧಗಳನ್ನು ಓದಿದ್ದರಿಂದಲೂ ಸಮ್ಮೇಲನಕ್ಕೆ ವಿಶೇಷ ಕಳೆಯು ಬಂದಿತ್ತು. ಶೇಡಬಾಳಶಾಲೆಯ ಅಸಿ. ಮಾ. ಮಿ. ಭೀ. ನಾ. ಕುಲಕರ್ಣಿ ಇವರು ಶಿಕ್ಷಣದ ಉಪಕರಣಗಳನ್ನು ತಂದು ಅವುಗಳ ವಿಷಯಕ್ಕೆ ಸರಸವಾದ ಮಾಹಿತಿಯನ್ನು ಹೇಳಿದರು. ಅಧ್ಯಕ್ಷರವರು ಪ್ರತಿಯೊಂದು ಪಾಠವನ್ನು ಆದಷ್ಟು ಸಾಧ್ಯವಾದ ಮಟ್ಟಿಗೆ ಉಪಕರಣಗಳ ಸಹಾಯದಿಂದ ಮನೋರಂಜನವಾಗುವಂತೆ ಕಲಿಸಬೇಕೆಂಬ ಆಶಯದ ಭಾಷಣವನ್ನು ಮಾಡಿದರು.

೫. ಬದಾಮಿ ಜಿಲ್ಲಾ ವಿಜಾಪೂರ:—ಮೆ. ೧೯ನೇ ಅಸಿ. ಡಿ. ಎ. ಇನ. ರವರು ಇಲ್ಲಿಯ ಸಮ್ಮೇಲನದ ಅಧ್ಯಕ್ಷ ಪದವನ್ನು ಸ್ವೀಕರಿಸಿದ್ದರು. ಇಲ್ಲಿಯ ಪ್ರದರ್ಶನಾಲಯವು ಬೇರೆ ಬೇರೆ ತರದ ಹಿಂದುಸ್ಥಾನದ ನಕಾಶಗಳು, ಮಾಡೆಲಗಳು, ಗ್ಲೋಬುಗಳು, ನೀತಿಯ ವಾಕ್ಯಗಳು, ಪ್ರಯೋಗದ ಸಾಮಾನುಗಳು ಬಾಲಬೋಧಿನಿಯ ಅಕ್ಷರಗಳ ಗುಂಪುಗಳ ಪಟಗಳು, ಅಸ್ತಿಪಂಜರ, ಗಡಗಡಿಗಳು, ಇಳುಕಲು, ಬೇರೆ ಬೇರೆ ತರದ ಮಡಿಚಿದ ಮತ್ತು ಕತ್ತರಿಸಿದ ಮಾದರಿಗಳು, ಕೋಷ್ಟಕಗಳನ್ನು ಕಲಿಸುವ ಕೆಲವು ಮಾದರಿಯ ಒಡವೆಗಳು, ಒಕ್ಕಲತನದ ಆಯುಧಗಳು ಸೃಷ್ಟಿಚಮತ್ಕಾರವನ್ನು ತೋರಿಸುವ ಮಾದರಿಯ ಕಲ್ಲುಗಳು ಮುಂತಾದವುಗಳಿಂದ ಒಪ್ಪುತ್ತಿತ್ತು.

ಪತ್ರಗಳ ಸಾರಾಂಶ.

೧ ಶಿಗ್ಗಾವಿ ಗರ್ಲಸ್ಕೂಲ —ಇಲ್ಲಿ ತಾ॥ ೧೮–೨-೧೮ನೇ ದಿವಸ ಮೆ. ಅಸಿ॥ ಕಲೆಕ್ಟರ ಸೇಜವಿಕ್ ಸಾಹೇಬರ ಅಧ್ಯಕ್ಷತೆಯ ಕೆಳಗೆ ಬಕ್ಷೀಸ ಸಮಾರಂಭವು ಆಯಿತೆಂತಲೂ, ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿನಿಯರಿಗೆ ಶೀರೆ, ಖಣ, ಪಾಟಿ, ಪುಸ್ತಕಗಳು ಮೆ. ರವರ ಹಸ್ತದಿಂದ ಇನಾಮು ಕೊಡಿಸಲ್ಪಟ್ಟವೆಂತಲೂ ಈ ಶಾಲೆಯ ಅಸಿ॥ ಮಾಸ್ತರ ಮಿ. ಹಿಲೇಮುತ ಇವರು ತಿಳಿಸುತ್ತಾರೆ.

೨ ಉಪ್ಪಿನಬೆಟಗೇರಿ—ಈ ಶಾಲೆಯ ಅಸಿ॥ ಮಾಸ್ತರರಾದ ವಿ
ಮುಧೋಳ ಮತ್ತು ವಿ. ಅಗ್ನಿಹೋತ್ರಿ ಇವರು ಈ ಊರಲ್ಲಿರುವವರಿ
ಎಂಟಿಂಟು ಬಡವಿದ್ಯಾರ್ಥಿಗಳ ಫೀಯನ್ನು ಕೊಡಲಿಕ್ಕೆ ಒಪ್ಪಿಕೊಂಡ
ಅದರಂತೆ ಈ ತಿಂಗಳಿಂದ ಕೊಡಲುಪಕ್ರಮಿಸಿದ್ದಾರೆಂತಲೂ, ಈ ದೇಣ
ಗೆಯು ಸ್ವಗ್ರಾಮ ವಿದ್ಯಾಭಿವೃದ್ಧಿಗಾಗಿ ಅವರಲ್ಲಿರುವ ಅಭಿಮಾನವನ್ನೂ
ಮತ್ತು ಅವರ ಉದಾರ ಮನಸ್ಸನ್ನೂ ವ್ಯಕ್ತಪಡಿಸುತ್ತದೆಂತಲೂ ಈ
ಶಾಲೆಯ ೧ನೇ ಅಸಿ॥ ಮಾಸ್ತರ ವಿ ಬೆಲ್ಲದ ಇವರು ತಿಳಿಸುತ್ತಾರೆ.

೩ ಕರ್ಜಗಿತಾಲೂಕ ಕಬ್ಬೂರ ಶಾಲೆ:—ಈ ಶಾಲೆಯ ವಾರ್ಷಿ
ಪರೀಕ್ಷೆಯು ಇನಾಮಿನಸಮಾರಂಭವು ಮೆ. ೨ನೇ ಅಸಿ॥ ಡೆ. ಎ. ಇನ
ರವರ ಅಧ್ಯಕ್ಷತೆಯ ಕೆಳಗೆ ಒಳ್ಳೇ ವಿಜೃಂಭಣೆಯಿಂದ ನೆರವೇರಿತೆಂತಲೂ
ಊರಸದ್ಗೃಹಸ್ಥರು ವಿ. ಹಾಲಯ್ಯಸ್ವಾಮಿ ಹಿರೇಮಠ ಳರೂ. ವಿ
ಗದಿಗೆಯ್ಯಾ ಹಿರೇಮಠ ಳರೂ. ವಿ. ತಿರಕಪ್ಪಾ ಗಾಣಿಗೇರ ಲ. ರೂ
ವಿ. ರುದ್ರಪ್ಪಾ ಪಟ್ಟಣಶಟ್ಟಿ ೬. ರೂ. ವಿ. ಚನಬಸಯ್ಯಾ ವಿರಕ್ತಮ
ಳ. ರೂ. ವಿ ಶಿದ್ಲಿಂಗಪ್ಪಾ ಗಾಣಿಗೇರ ಳ. ರೂ. ವಿ. ಕಲ್ಲಪ್ಪಾ ದಿ
ಮನಿ ೨. ರೂ. ವಿ. ಶಿದ್ಲಿಂಗಪ್ಪಾ ಶಿಗ್ಗಲಿ ೨. ರೂ ವಿ. ಶಿದ್ದಪ್ಪಾ ಶಿಗ್ಗ
೨ ರೂ. ವಿ. ವೀರಬಸಪ್ಪಾ ಕಬ್ಬೂರ ೨. ರೂ. ಇವರು ಈ ಪ್ರಕಾ
ರೂಪಾಯಿಗಳನ್ನು ಶಾಲೆಯ ಸಾಮಾನುಗಳ ಕೊರತೆಯನ್ನು ಪೂರೈ
ಲಿಕ್ಕೆ ಕೊಟ್ಟರೆಂತಲೂ, ವಿ. ರಾಮಚಂದ್ರ ಮಯಾಚಾರ್ಯ ಇವ
ಶಾಲೆಯ ಉಪಯೋಗದಬಗ್ಗೆ ೧ ಬೆಂಚುಕೊಡಲಿಕ್ಕೆ ಕಬೂಲಾಗಿರು
ರೆಂತಲೂ, ವಿ. ಗುಂಡೇರಾವ ಕುಲಕರ್ಣಿ ಇವರು ಮುಲ್ಕೀಪರೀಕ್ಷೆ
ಇಬ್ಬರು ಬಡಹುಡುಗರಿಗೆ ಮೂರು ರೂಪಾಯಿ ಫೀ ಅಗಾವು ಕೊಟ್ಟ
ತಲೂ ವಿ. ಚನ್ನಬಸವಾರ್ಯ ವಿರಕ್ತಮಠ ಇವರು ತಿಳಿಸುತ್ತಾರೆ.

೪ ಕುರ್ತಕೋಟಿ ತಾಲೂಕ ಗದಗ:—ಈಶಾಲೆಯಲ್ಲಿ ದಿಶಂಬ
೧೫ನೇ ತಾರೀಖಿನ ದಿವಸ ಮೆ. ಅಸಿ. ಕಲೆಕ್ಟರ ಕಿತ್ತೂರ ಸಾಹೇಬ
ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭವಾಯಿತು. ಊರ ಸ
ಗೃಹಸ್ಥರು ಇನಾಮಿಗಾಗಿಯೂ ಮಿಠಾಯಿಗಾಗಿಯೂ ೮ ರೂ. ಗಳ
ಕೊಟ್ಟರು. ಮತ್ತು ಶಾಲೆಯ ರಸಾಯನಿಕ ಉಪಕರಣಗಳಬಗ್ಗೆ ವಿ
ದ್ಯಾಮನಗೌಡಾ ಪಾಟೀಲ ೫ ರೂ ವಿ ವಿರುಪಾಕ್ಷಗೌಡಾ ಪಾಟೀ

೨ ರೂ. ಗುರಪ್ಪಗೌಡಾ ಪಾಟೀಲ ೨ ರೂ. ಸೋಮಣ್ಣಾ ಕಟಗೇರಿ ೨ ರೂ. ಕೃಷ್ಣರಾವ ಪಂತರ ೧ ರೂ. ಶಿದ್ಲಿಂಗಯ್ಯಾ ವಿಭೂತಿ ೧ ರೂ. ಭಾಗವ ತೋತ್ತುಮ ನಾರಾಯಣಶಾಸ್ತ್ರಿಗಳು ೧ ರೂ. ಹನುಮಪ್ಪಗೌಡಾ ರಡ್ಡಿ ೧ ರೂ. ವಿರುಪಾಕ್ಷಪ್ಪಾ ಬ್ಯಾಡದ ೫. ರೂ. ಚನ್ನಪ್ಪಾ ಜಗಲಿ ೫ ರೂ. ದೊಡ್ಡಪ್ಪಾ ಧಾರವಾಡ ೪ ರೂ. ಪ್ರಭಪ್ಪಾ ಬಳಿಗೇರ ೩ ರೂ. ಸಂಗಪ್ಪಾ ತೋಟದ ೨ ರೂ. ಈ ಪ್ರಕಾರ ಹಣವನ್ನು ಕೊಟ್ಟರು.

ಇಲ್ಲಿಯ ಶಿಕ್ಷಕರ ಸಮ್ಮೇಲನದಲ್ಲಿ ಕೆಳಗೆ ಬರೆದ ಗೃಹಸ್ಥರು ಕೆಳಗೆ ಬರೆದ ಪ್ರಕಾರ ಖರ್ಚುಮಾಡಿದರು. ಮಿ. ಏಕನಾಥರಾವ ನಾಡಿಗೇರ ೬೬ ರು. ಫಕ್ಕೀರಪ್ಪಾ ಲಕ್ಷ್ಮೇಶ್ವರ ೫೦ರು. ದ್ಯಾಮನಗೌಡಾ ಪಾಟೀಲ ೩೦ ರು. ಮಾರ್ತಂಡಗೌಡಾ ಪಾಟೀಲ ೨೦ ರು. ವಿರುಪಾಕ್ಷಪ್ಪಾ ಬ್ಯಾಡ ೧೨ ರು. ವಿರುಪಾಕ್ಷಗೌಡಾ ಪಾಟೀಲ ೬ ರು ದತ್ತಾತ್ರಯ ಶಾಸ್ತ್ರಿ ಕಂದಿಗೋಳ ೫ ರು.

ದರ್ಬಾರದ ಖರ್ಚಿಗಾಗಿಯೂ ಮಾಸ್ತರಜನರ ಊಟಕ್ಕಾಗಿಯೂ ೨೦ ರು. ಗಳನ್ನು ಈ ಊರ ಸಭ್ಯಗೃಹಸ್ಥರು ವೆಚ್ಚಮಾಡಿದರು.

ಶಾಲೆಯಲ್ಲಿಯ ಜೈಲು ಕಪಾಟುಗಳಿಗೆ ಘಡಕುಹಚ್ಚಲಿಕ್ಕೆ ಸದರ ಗ್ರಾಮದ ಸಭ್ಯಗೃಹಸ್ಥರು ೮ ರು. ಗಳನ್ನು ಕೊಟ್ಟಿದ್ದರು. ಸರಕಾರದಿಂದ ೦ ರು. ಮಂಜೂರಾಗಿತ್ತು. ಆದರೂ ಹಣವು ಸಾಲದ್ದರಿಂದ ಮಿ. ಅಂದಾ ಪ್ಪಾ ಹಳ್ಳಿಯಾಳ ಇವರು ಮತ್ತು ಫಕ್ಕೀರಪ್ಪಾ ಲಕ್ಷ್ಮೇಶ್ವರ ಇವರು ಾಡಿ ೧೦ ರುಪಾಯಿಗಳನ್ನೂ ಏಕನಾಥರಾವ ನಾಡಿಗೇರ ಇವರು ಮತ್ತೆ ರು. ಗಳನ್ನೂ ಕೊಟ್ಟರು.

ಮಿ. ಲಿ. ಬಿ. ಕುಲಕರ್ಣಿ, ಮಿ. ಕೃ ನ ಪಾಟೀಲ, ಮಿ. ಕೃ ಮೆ. ುಲಕರ್ಣಿ ಇವರು ೩೩ ರೂ. ಗಳನ್ನು ಖರ್ಚುಮಾಡಿ ಶಾಲೆಯ ಉಪ ೋಗಕ್ಕಾಗಿ ೧ ಪಿಯಾನು ತರಿಸಿಕೊಟ್ಟರು.

ಒಟ್ಟಿಗೆ ೧೯೧೭ನೇ ಸಪ್ಟಂಬರದಿಂದ ಈ ವರೆಗಿನ ೬ ತಿಂಗಳ ಅವಧಿ ುಲ್ಲಿ ಕುರ್ತಕೋಟಿ ಗ್ರಾಮದವರು ಶಾಲಾಸಂಬಂಧದಿಂದ ಸುಮಾರು ೨೦ ರು. ಗಳನ್ನು ವೆಚ್ಚಮಾಡಿದರು.

ಕುರ್ತಕೋಟಿಯ ಜನರ ಈ ಪ್ರಕಾರದ ಉದಾರಗುಣವೂ ಶಾಲೆಯ ವಿಷಯದ ಅಭಿಮಾನವೂ ನಿಜವಾಗಿ ಅನುಕರಣೀಯವಾಗಿರುವವು.

ಹತ್ರವ್ಯವಹಾರ.

೫ ಗೋಕಾಕ ಶಾಲೆಯ ಮಾಸ್ತರ ಮಿ. ರಾಚಪ್ಪಾ ಹತ್ತಿ ಇವರು ಪಶುಪಕ್ಷಿಗಳ ಕಥೆಗಳು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನು ಮಾಡುತ್ತವೆಯೋ? ಇಲ್ಲವೋ? ವಿಷ್ಣುಶರ್ಮನೆಂಬ ಪಂಡಿತನು ಪಂಚತಂತ್ರದಂಥ ಕಥೆಗಳನ್ನು ಹೇಳಿ, ಮೂರ್ಖ ಹುಡುಗರನ್ನು ಹಾದಿಗೆ ತಂದದ್ದು ನಮ್ಮ ದೇಶದಲ್ಲಿ ಪ್ರಸಿದ್ಧವಿದ್ದು, ಆಧುನಿಕ ಎಷ್ಟೋ ವಿದ್ವಾಂಸರಿಗೆ ಅಂಥವೂ ಮತ್ತು 'ಹಾತಿಮತಾಯಿಗೆ ಮಾಂಸ ಭಕ್ಷಕ ಪ್ರಾಣಿಯಾದ ಹುಲಿಯು ನಮಸ್ಕಾರ ಮಾಡಿ ಹೋಯಿತು.' ಮುಂತಾದ ಕಥೆಗಳೂ ಮಾನ್ಯವಿಲ್ಲದ್ದು ಕಂಡುಬರುತ್ತದೆ. ಈ ಬಗ್ಗೆ ವ್ಯವಸಾಯ ಬಂಧುಗಳೂ, ವಿದ್ವಾಂಸರೂ ಯೋಗ್ಯ ವಿಚಾರಮಾಡಬೇಕೆಂದು ಅಪೇಕ್ಷಿಸುತ್ತಾರೆ.

ಪುಸ್ತಕಗಳ ವಿಷಯಕ್ಕೆ ಅಭಿಪ್ರಾಯ.

ಕರ್ನಾಟಕ ಗೌರವ ಗ್ರಂಥಮಾಲೆಯ ದ್ವಿತೀಯ ಪುಷ್ಪವಾದ 'ಜ್ಞಾನಸಾಧನ' ವೆಂಬ ಪುಸ್ತಕವು ಅದರ ಕರ್ತರಾದ ಶ್ರೀ. ವಿಷ್ಣುಪಂತ ಶ್ರೀನಿವಾಸರಾವ ರಂಗೈಶೇಣಿ ಇವರಿಂದ ನಮ್ಮ ಕಡೆಗೆ ಅಭಿಪ್ರಾಯಕ್ಕೆ ಬಂದಿರುತ್ತದೆ. ಈ ಚಿಕ್ಕ ಪುಸ್ತಕದಲ್ಲಿ ಆತ್ಮೋದ್ಧಾರ, ಜನ್ಮಭೂಮಿ, ನೈತಿಕಜ್ಞಾನವೂ ನೈತಿಕಾಚರಣೆಯೂ, ನೈಸರ್ಗಿಕ ಸೌಂದರ್ಯ ಇವುಗಳ ಬಗ್ಗೆ ಚಿಕ್ಕ ನಿಬಂಧಗಳು ಮತ್ತು ಸ್ವಾಮೀ ವಿವೇಕಾನಂದರವರ ಸಂಕ್ಷಿಪ್ತ ಚರಿತ್ರೆ ಇಷ್ಟು ವಿಷಯಗಳು ಮುಖ್ಯವಾದವುಗಳು. ಮದ್ಯಪಾನ ನಿಷೇಧ, ತಂಬಾಕು ಸೇವನದ ದುಷ್ಪರಿಣಾಮ ಈ ವಿಷಯಗಳ ಮೇಲೆ ಪರದೇಶೀಯರ ಮತ್ತು ಸ್ವದೇಶೀಯರ ಅಭಿಪ್ರಾಯಗಳು, ಸಾಮಾಜಿಕ ವಿಷಯದ ಮೇಲೆ ಕೆಲವು ಉಪಯುಕ್ತ ಮಾತಿಗಳು ಈ ಪ್ರಕಾರ ವಿಷಯ ಸಂಗ್ರಹವಿರುತ್ತದೆ. ಗ್ರಂಥಕರ್ತರ ಉದ್ದೇಶದಂತೆ ಪುಸ್ತಕದೊಳಗಿನ ಚಿಕ್ಕ ನಿಬಂಧಗಳನ್ನು ಓದುವದರಿಂದ ಮೂಲಗ್ರಂಥಗಳನ್ನು ಓದುವದರಿಂದಾಗುವ ಫಲದ ಸ್ವಲ್ಪ ಅಂಶವಾದರೂ ಆಗದೆ ಇರುವದಿಲ್ಲ. ಆದರೂ ನಿಬಂಧಗಳೊಳಗಿನ ಭಾಷೆ ಮತ್ತು ಅದರೊಳಗಿರುವ ಸಾಮಾನ್ಯೋಕ್ತಿಗಳ ಸಂಗ್ರಹ ಇವುಗಳನ್ನು ಗ್ರಂಥಕರ್ತರು ಯಾರ ಉದ್ದೇಶವಾಗಿ ಕೊಟ್ಟಿರುವರೋ ಅವು ಅಂಥವರ ಯೋಗ್ಯತೆಗೆ ಮೀರಿದವುಗಳಾಗಿರುತ್ತವೆ. ಸ್ವಾಮಿ ವಿವೇಕಾನಂದರ ಚರಿತ್ರದಂಥ ವಿಷಯಗಳನ್ನು

ಇದಕ್ಕೂ ಸುಲಭವಾದ ಭಾಷೆಯಿಂದ ಮತ್ತು ಸಾಮಾನ್ಯೋಕ್ತಿಗಳನ್ನು ಕಡಿಮೆಮಾಡಿ ಕೊಡುತ್ತ ಹೋದರೆ ಗ್ರಂಥಮಾಲೆಯ ಉದ್ದೇಶವು ಸರಿಯಾಗಿ ಕೊನೆಗಂಡೀತೆಂದು ನಮ್ಮ ಅಭಿಪ್ರಾಯವದೆ. 'ನೈತಿಕ ಜ್ಞಾನವೂ ನೈತಿಕಾಚರಣೆಯೂ' ಈ ನಿಬಂಧ ದಲ್ಲಿ ನೀತಿಜ್ಞಾನವನ್ನು ಸಂಪಾದನಮಾಡುವ ಬಗ್ಗೆ ವಿರುದ್ಧವಾದ ಅಭಿಪ್ರಾ ಯಗಳೇ ಮುಖ್ಯವಾಗಿ ವರ್ಣಿಸಲ್ಪಟ್ಟವೆ. ಕಟ್ಟಕಡೆಗೆ ಒಂದೇ ವಾಕ್ಯದಲ್ಲಿ ಮಾತ್ರ ಅವರು ಈ ಅಭಿಪ್ರಾಯಗಳನ್ನು ನಿರಾಕರಿಸಿವ್ವಾರೆ. ಇಂಥ ವಿವೇಚನದಿಂದ ವಾಚಕರ ಮನಸ್ಸಿನಮೇಲೆ ಇಷ್ಟಪರಿಣಾಮವು ಉಂಟಾಗಲಾರದು. ಆದರೂ ಗ್ರಂಥಕರ್ತರ ಉದ್ದೇಶ, ಭಾಷಾಶೈಲಿ, ಪುಸ್ತಕದ ಮುದ್ರಣ ಮುಂತಾದ ಸಂಗತಿಗಳು ಪ್ರಶಂಸನೀಯ ವಾಗಿರುವವು. ಎಡಿಟರ.

ಕೂಟಪ್ರಶ್ನೆಗಳು.

(೧) ನಾನು ಒಂದು ದೊಡ್ಡದಾದ ಆಶ್ಚರ್ಯವನ್ನು ನೋಡಿದೆನು. ಅದೇನೆಂ ದರೆ ಒಂದು ಗಿಡದ ಟೊಂಗೆಗಳಮೇಲೆ ಒಂದು ಸರೋವರವಿತ್ತು. ಅದರಲ್ಲಿ ಸಾರಂ ಗವು ತನ್ನ ಬಾಲದಿಂದ ನೀರು ಕುಡಿಯುತ್ತಿತ್ತು. ಆದರೆ ನಾನು ನೋಡಿದ ಆಶ್ಚರ್ಯ ವೇನು?

(೨) ನಾನು ಮತ್ತೊಂದು ದೊಡ್ಡದಾದ ಆಶ್ಚರ್ಯವನ್ನು ಕಂಡೆನು ಅದೇನೆಂದರೆ ಒಟ್ಟುವಾಗ ಹಸರುಂಟು ಆದರೆ ಅದು ಪಚ್ಚವಲ್ಲ. ಬೆಳೆಯುತಲೆ ಕೆಂಪುಂಟು. ಅದು ಹಳವು ಅಲ್ಲ. ಕಡೆಗೆ ಕಪ್ಪುಂಟು ಅದು ಕಸ್ತೂರಿಯು ಅಲ್ಲ. ಆದರೆ ನಾನು ನೋಡಿದ ಆಶ್ಚರ್ಯವು ಏನಿರಬಹುದು?

ಕಲ್ಲೋ ಭೀಮರಾವ ಸಿರಗಾವಕರ
ಹೆ. ಮಾಸ್ತರ, ಕಣವೀ ಕರವಿನಕೊಪ್ಪ.

ವಿದ್ಯಾಖಾತೆಯ ನೋಟೀಸುಗಳು.

೧೯೧೬ನೇ ದಿಸೆಂಬರ ತಿಂಗಳ ಶಾಲಾಪತ್ರಕದಲ್ಲಿ ಮುದ್ರಿಸಿದ ವಿದ್ಯಾಖಾತೆ ಯಿಂದ ಮಂಜೂರಾದ ಪುಸ್ತಕಗಳ ಯಾದಿಯಲ್ಲಿ ಕೆಳಗೆ ಕಾಣಿಸಿದ ಎರಡು ಪುಸ್ತಕ ಬೆಲೆಯಲ್ಲಿ ಹೆಚ್ಚುಕಡಿಮೆಯಾದ ಬಗ್ಗೆ ಮೆ. ಡಾಯರೇಕ್ಟರ ನಾ॥ ಬಹಾದ್ದೂರವರ ಟೈಪ್ಡ್ ನಂಬರ ೧೪೪೬೯/೧೬-೧೭-೧೮ ನೇ ಪ್ರಕಾರ ಬರೆದು ಬಂದ ಮೇರೆಗೆ ಆದನ್ನು ಜನರ ತಿಳುವಳಿಕೆಗಾಗಿ ಪ್ರಸಿದ್ಧಮಾಡಿರುತ್ತದೆ.

ನಂಬರು	ಪುಸ್ತಕದ ಹೆಸರು	ಮೊದಲಿನ ಬೆಲೆ	ಈಗಿನಬೆಲೆ.
೧	ಅನ್ವರುಲ್ ಅಖಲಾಕ್	೦-೧೦-೦	೦-೧೫-೦
೨	ಇನ್. ಶಾ. ಈ. ನೂರ ಅಹಮ್ಮದ.	೦-೫-೦	೦-೬-೦

Training College, for men Dharwar. } R. S. Kulkarni, *Principal.*

ಪ್ರಾಥಮಿಕ ಶಾಲೆಗಳಿಗೆ ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ. ಪ್ರ

ಸಾಲಿನ ನಂಬರು.	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು.	ಪುಸ್ತಕದ ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು	ಮಂಜೂರು ಮಾಡಿದ ಬಗ್ಗೆ ಪಿ. ಎ. ಇನ್‌ಸ್ಪೆಕ್ಟರವರ ಹುಕುಂ ನಂಬರು.
೧	ವಿರಗಿಣಿ ...	ತಿರುಮಲಮ್ಮಾ ಪ್ರೊಪ್ರಾಯಿಟ್ರೆಸ್ ಸತೀಹಿತೈಷಿಣಿ ಮತ್ತು ಕರ್ನಾಟಕನಂದಿನಿ ನಂಜಿನಗೂಡ.	ಕನ್ನಡ	ಪ್ರಾಥಮಿಕ ಮತ್ತು ಸೆಕಂಡರಿ ಸ್ಕೂಲುಗಳ ಲಾಯಬ್ರರಿಗಾಗಿಯೂ, ಇನಾಮಿಗಾಗಿಯೂ.	೧೧೩೦೨ / ೧೩-೩-೧೯೧೮
೨	ವಿದ್ಯುಲ್ಲತಾ ...	,,	,,	ಪ್ರಾಥಮಿಕ ಮತ್ತು ಸೆಕಂಡರಿ ಸ್ಕೂಲುಗಳ ಇನಾಮಿಗಾಗಿ.	೧೧೩೦೫ / ೧೩-೩-೧೯೧೮
೩	ಭಗವದ್ಗೀತಾ ...	ತುಕಾರಾಮ ಜಾವಜಿ ಪ್ರೊಪ್ರಾಯಟರ್ ನಿರ್ಣಯಸಾಗರ ಪ್ರೆಸ್ ಮುಂಬಯಿ	,,	ಪ್ರಾಥಮಿಕ ಮತ್ತು ಸೆಕಂಡರಿ ಮತ್ತು ಟ್ರೇನಿಂಗಕಾಲೇಜುಗಳ ಲಾಯಬ್ರರಿಗಾಗಿ.	೧೧೦೯೯ / ೧೩-೩-೧೯೧೮
೪	ಸಂಕ್ಷಿಪ್ತ ರಾಮಾಯಣ ...	ಕೇ. ಆರ್. ನರಸಿಂಹಯ್ಯ ಕನ್ನಡ ಪಂಡಿತ ಗವರ್ನಮೆಂಟ ಹಾಯ ಸ್ಕೂಲ ಚಿಕ್ಕಬಾಳಾಪೂರ.	,,	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ.	೧೧೦೭೮ / ೪-೩-೧೯೧೮
೫	ಕರ್ನಾಟಕ ಇತಿಹಾಸದ ಕಥೆಗಳು. ...	ಕೃಷ್ಣಾಜಿ ಶಂಕರ ಇಂಗಳಿಗಿ.	,,	,,	೧೧೦೭೪ / ೪-೩-೧೯೧೮

Office of the Educational Inspector, S. D. Dharwar.

K. S. Hungund.
Edl. Inspector, S. D.

ಶಾಲಾಪತ್ರಕ.

ವರ್ಷ ೫೪. | ಮೇ, ಜೂನ, ಜುಲೈ ೧೯೧೫. | ಸಂಚಿಕೆ ೫,೬,೭.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಶಿಷ್ಯವೃತ್ತಿಯ ಬಗ್ಗೆ ಸರಕಾರದ ಠರಾವು.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಶಿಷ್ಯವೃತ್ತಿಯು ೮ ರೂ. ಇದ್ದದ್ದನ್ನು ೧೦ ರೂ. ಮಾಡಿದ ಬಗ್ಗೆ ಫೆಬ್ರುವರಿ ತಿಂಗಳ ಸಂಚಿಕೆಯಲ್ಲಿ ಪ್ರಸಿದ್ಧಪಡಿಸಿರುವದಷ್ಟೇ. ಈ ಬಗ್ಗೆ ಸರಕಾರ ಠರಾವು ನಂಬರ ೧೩೩೦ ೨೨-೨-೧೯೧೫. ಈ ಪ್ರಕಾರ ತಾ. ೨೨ನೇ ಮಾರ್ಚ ೧೯೧೫ರಿಂದ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಶಿಷ್ಯವೃತ್ತಿಯನ್ನು ೧೦ ರೂ. ಕೊಡುವದು ಗೊತ್ತುಮಾಡಿ ಆಯತ್ತದೆಂದು ಕಡೆಯ ಮುಂಜೂರಿಯು ದೊರೆತಿರುತ್ತದೆ.

ಪ್ರೊ. ಕರ್ವೆಯವರ ಮಹತ್ಕಾರ್ಯ.

ಪುಣೆಯ ಸ್ತ್ರೀ ವಿದ್ಯಾಪೀಠದ ಸ್ಥಾಪಕರಾದ ಪ್ರೊ. ಧೋಂಡೋ ಕೇಶವ ಇವರ ಹೆಸರನ್ನು ಕೇಳದೆ ಇರುವವರು ಇಡೀ ಹಿಂದುಸ್ಥಾನದಲ್ಲಿ ವಿರಳ. ಅಬಲೆಯರ ಉನ್ನತಿಯ ಬಗ್ಗೆ ಇವರಲ್ಲಿರುವ ಕಳಕಳಿಯು ಅಸದೃಶವಾಗಿರುವದು. ಅಸ್ಖಲಿತವಾಕ್ಚಾತುರ್ಯ, ಭವ್ಯದೇಹ, ವಿಪುಲಸಂವತ್ತಿ, ಗಾಢವಿದ್ವತ್ತೆ ಮುಂತಾದವುಗಳು ಅಷ್ಟಕ್ಕಷ್ಟೇ ಇದ್ದರೂ, ಮನುಷ್ಯನು ಜಗತ್ಪುರುವಾಸಿಯಾಗುವನೆಂಬದಕ್ಕೆ, ಪ್ರೊ. ಧೋಂಡೋಪಂತ ಕರ್ವೆ ಇವರು ಸ್ಪಷ್ಟ ಮತ್ತು ಸ್ಫೂರ್ತಕವಾದ ದೃಷ್ಟಾಂತವಾಗಿದ್ದಾರೆ. ಇವರು ರತ್ನಾಗಿರಿ ಜಿಲ್ಲೆಯೊಳಗಿನ ಮುರುಡ ಎಂದು ಹಳ್ಳಿಯೊಳಗಿನ ಬಡಕುಟುಂಬದಲ್ಲಿ ಹುಟ್ಟಿದವರು. ಚಿಕ್ಕಂದಿನಲ್ಲಿ ದೀರ್ಘಪರಿಶ್ರಮದಿಂದ ಇಂಗ್ಲಿಷವಿದ್ಯೆಯನ್ನು ಚನ್ನಾಗಿ ಸಂಪಾದಿಸಿದರು. ವಿದ್ಯಾರ್ಥಿಯಾಗಿರುವಾಗಲೇ ಸಾಮಾಜಿಕವಿಷಯಗಳಲ್ಲಿ ಆಸಕ್ತಿ

ರಾದ ಮಿತ್ರರೊಡನೆ ಸರ್ವದಾ ಚರ್ಚೆಮಾಡುತ್ತಿದ್ದರು. ಹಿಂದೂ ಸಮಾ
ದಲ್ಲಿ ಸ್ತ್ರೀಶಿಕ್ಷಣದ ಅಭಾವವಿದ್ದದರಿಂದ, ದೇಶದ ಊರ್ಜಿತಾವಸ್ಥೆಯಾ
ಬೇಕಾದರೆ ಸಮಾಜದ ಈ ವಿಷಮಾವಸ್ಥೆಯನ್ನು ಹೋಗಲಾಡಿಸುವ
ಮುಖ್ಯ ಉಪಾಯವೆಂದು ಮನಗಂಡು ಸ್ತ್ರೀಯರ ಹೀನದೀನ ಸ್ಥಿತಿಯನ
ದೂರೀಕರಿಸಲಿಕ್ಕೆ ಇವರು ಟೊಂಕಕಟ್ಟಿದರು.

ಹಿಂದೂ ವಿಧವೆಯರ— ವಿಶೇಷವಾಗಿ ಉಚ್ಚವರ್ಣದವರೆಂದೆನಿ
ಕೊಳ್ಳುವ ವಿಧವೆಯರ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವದ
ಸುಸ್ಥಿತಿಯ ಮನೆತನಗಳ ವಿಧವೆಯರು ಅಣ್ಣತಮ್ಮ, ತಂದೆತಾಯಿ
ಗಳ ಆಶ್ರಯದಿಂದ ಕಷ್ಟದಿಂದಾದರೂ ಮರ್ಯಾದೆಯಿಂದ ಕಾಲಹರ
ಮಾಡುವರು, ಆದರೆ ಮಧ್ಯಮಕನಿಷ್ಠಸ್ಥಿತಿಯ ಮನೆತನಗಳ ವಿಧ
ಯರ ಗೋಳನ್ನು ನೋಡಲಾಸಲ್ಲ. ಕೇಳಲಾಸಲ್ಲ. ಅವರಿಗೆ ಸಹಗಮ
ನವು ಸಹ ಲೇಸೆನಿಸುವಷ್ಟು ಭಯಂಕರಕಷ್ಟವೊದಗುತ್ತದೆ. ಇಂ
ಅನಾಥವಿಧವೆಯರ ಪಡಿಪಾಟವನ್ನು ಬಗೆದಂದು ಮನಸುಕರಗಿ ಪ್ರೊ
ಕರ್ವೆಯವರು, ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ಅ
ಇಲ್ಲವೆಂಬ ಅಭಿಪ್ರಾಯವುಳ್ಳವರಾದರು. ಹಾಗು ಹಿರಿಯರೂ ಬಂಧ
ಬಳಗದವರೂ ಕೋಪಗೊಳ್ಳುತ್ತಿರಲು, ಇಷ್ಟಮಿತ್ರರು ಉಪಹಾಸಮ
ಡುತ್ತಿರಲು, ಧರ್ಮನಿಷ್ಠರು ಬಹಿಷ್ಕಾರದ ಶಿಕ್ಷೆಕೊಡುವ ಹೆದರಿಕೆ ಹಾಕ
ತ್ತಿರಲು, ಇವರು ಅವೆಲ್ಲವನ್ನುಲಕ್ಷಿಸದೆ ಒಳ್ಳೇ ಮಾನಸಿಕಧೈರ್ಯ
ದಿಂದ ತಾವೇ ವಿಧವಾವಿವಾಹವನ್ನು ಮಾಡಿಕೊಂಡರು. ಆದರೆ ಅವ
ಆಚರಣೆಯು ಅತ್ಯಂತಶುದ್ಧವೂ ಪವಿತ್ರವೂ ಆಗಿರುವದು. ಪರೋ
ದೇಶದಲ್ಲಿ ಪಾಂಡಿತ್ಯವನ್ನು ತೋರಿಸುವವರೇ ಬಹಳ; ಆದರೆ ಪ್ರಸಂ
ವೊದಗಿದಾಗ ನುಡಿದಂತೆ ನಡೆಯುವ ಪ್ರೊ. ಕರ್ವೆಯವರಂಥ ಕೆಚ್ಚೆದೆಯ
ಕರ್ಮವೀರರು ತೀರವಿರಳ.

ಆರಂಭದಲ್ಲಿ ಪ್ರೊ. ಕರ್ವೆಯವರು ಪೂನೆಯೊಳಗಿನ ಫರ್ಗ್ಯೂಸ
ಕಾಲೇಜದಲ್ಲಿ ಶಿಕ್ಷಕರಾಗಿದ್ದರು. ಆಗ ಇವರು ಅನಾಥವಿಧವೆಯರ
ಸ್ವಾವಲಂಬನವನ್ನು ಮರ್ಯಾದೆಯಿಂದ ಉಪಜೀವಿಸುವಂತೆ ಮಾ
ಬೇಕಾದರೆ ಅವರನ್ನು ವಿದ್ಯಾವತಿಯರನ್ನು ಮಾಡುವದೇ ಮುಖ್ಯಉಪ
ಯವೆಂದು ನಿಶ್ಚಯಿಸಿ ಅನಾಥಬಾಲಿಕಾಶ್ರಮವನ್ನು ಸ್ಥಾಪಿಸಬೇಕೆಂ

ನಿರ್ಧರಿಸಿದರು. ಈ ಕೆಲಸಕ್ಕಾಗಿ ದ್ರವ್ಯಬಲವೂ ಮನುಷ್ಯಬಲವೂ ಬೇಕಷ್ಟೇ, ಅವೆರಡೂ ಅವರಿಗೆ ಇದ್ದಿಲ್ಲ. ಆದರೂ ಅವರು ಕೈಮುಚ್ಚಿ ಕೊಂಡು ಸುಮ್ಮನೆ ಕೂಡ್ರದೆ ಒಮ್ಮೆಲೆ ಕೆಲಸಕ್ಕೆ ಆರಂಭಿಸಿ, ತುಸು ದಿನಗಳಲ್ಲಿ ಪುಣೆಯಲ್ಲಿ ೭, ೮ ವಿಧವೆಯರಿಗೆ ಕಲಿಸುವದೊಂದು ಶಾಲೆಯನ್ನು ಸ್ಥಾಪಿಸಿದರು. ಕರ್ವೆಯವರು ಪುನರ್ವಿವಾಹಿತರಾಗಿದ್ದದರಿಂದಲೂ, ಜನರ ನೆರವೂ ದುಡ್ಡೂ ಇಲ್ಲದ್ದರಿಂದಲೂ ಎಷ್ಟೋ ಜನರು ಹಲವು ಬಗೆಯಿಂದ ನಿಂದಿಸಿದರು; ಚೇಷ್ಟೆಮಾಡಿದರು; ಇಲ್ಲದ ಅಪವಾದ ಹೊರಿಸಿದರು. ಮನಸಿಗೆ ನಡುವ ಮಾತುಗಳನ್ನಾಡಿದರು. ಆದರೆ ಅವೆಲ್ಲಕ್ಕೂ ಅಂಜದೆ ಎದೆಗೊಟ್ಟು ನಿಂತು, ಹಿಡಿದ ಕೆಲಸವನ್ನು ಅತ್ಯಂತ ದೃಢನಿಶ್ಚಯದಿಂದ ಸಾಗಿಸಿದರು. ೨, ೩ ವರ್ಷಗಳಲ್ಲಿ ಇವರ ಕೆಲಸದ ಬಗ್ಗೆ ಜನರಲ್ಲಿ ಉಂಟಾಗಿದ್ದ ತಪ್ಪುತಿಳುವಳಿಕೆಯು ಇಲ್ಲದಂತಾಯಿತು, ಜನನಿಂದೆಯ ಕಸುವು ಹಿಮ್ಮೆಟ್ಟಿತು. ಇವರ ಗಟ್ಟಿಮನಸೂ ಪವಿತ್ರಾಚರಣೆಯೂ ಸಾದಾಸ್ಥಿತಿಯೂ ಜನರಿಗೆ ಹೊಳೆಯಹತ್ತಿ ಜನರು ಇವರ ಕೆಲಸಕ್ಕೆ ನೆರವಾಗಹತ್ತಿದರು, ನಿಂದೆಯ ಬದಲು ಸ್ತುತಿಮಾಡಹತ್ತಿದರು. ಹೆಚ್ಚು ಸಂಕಟಗಳೊದಗಿದಂತೆ ಹೆಚ್ಚು ಹುರುಪುಗೊಂಡು ಕೆಲಸಮಾಡಹತ್ತಲು ಇವರು ಕೈಕೊಂಡ ಸತ್ಕಾರ್ಯವು ಕ್ರಮೇಣ ಅಭಿವೃದ್ಧಿಹೊಂದಹತ್ತಿತು. ಹಿಂದುಸ್ತಾನದ ಎಲ್ಲ ಭಾಗಗಳಿಂದ ಬೇರೆಬೇರೆ ಜಾತಿಯ ವಿಧವೆಯರು ಇವರ ಶಾಲೆಯಲ್ಲಿ ಕಲಿಯಕ್ಕೆ ಬರಹತ್ತಿದರು. ಅದಕ್ಕತಕ್ಕಂತೆ ಶ್ರೀಮಂತರೂ ಸರದಾರರೂ ದೊಡ್ಡ ಅಧಿಕಾರಿಗಳೂ ಸಾಮಾನ್ಯಸ್ಥಿತಿಯವರೂ ದ್ರವ್ಯಸಹಾಯವನ್ನು ಮಾಡಹತ್ತಿದರು.

ಹೀಗೆ ಅನಾಥಬಾಲಿಕಾಶ್ರಮವು ಹೆಚ್ಚಳಗೊಳ್ಳುತ್ತಿರಲು, ಪುಣೆಯಂಥ ದಟ್ಟವಸತಿಯ ಪಟ್ಟಣದಲ್ಲಿ ತಕ್ಕಷ್ಟು ಇಂಬುದೊರೆಯುವದು ಕಠಿಣವಾಯಿತು. ಆದದರಿಂದ ಅದು ಪುಣೆಯಿಂದ ಸುಮಾರು ೮ ಮೈಲಿನ ಮೇಲಿರುವ ಹಿಂಗಣೆಬುದ್ರುಕ ಎಂಬ ಗ್ರಾಮಕ್ಕೆ ಒಯ್ಯಲ್ಪಟ್ಟಿತು. ಅಲ್ಲಿ ಪ್ರೊ. ಕರ್ವೆಯವರು ಸುಮಾರು ೧೫ ಎಕರೆ ಭೂಮಿಯನ್ನು ದೊರಕಿಸಿ, ಸುಮಾರು ೧ ಲಕ್ಷ ೩೭ ಸಾವಿರ ರೂಪಾಯಿ ಬೆಲೆಬಾಳುವ ಕಟ್ಟಡವನ್ನು ಕಟ್ಟಿಸಿರುವರು. ಅಲ್ಲಿ ಕಳೆದ ವರ್ಷದ ಕೊನೆಯಲ್ಲಿ ೨೭೦ ವಿದ್ಯಾರ್ಥಿನಿಯರು ಉಪಯುಕ್ತವೂ ಸ್ವಾವಲಂಬನದಾಯಕವೂ ಆದ ವಿದ್ಯಾಮೃತವನ್ನು ಪಾನಮಾಡುತ್ತಿರುವರು.

ಅದ್ಭುತಕಾರ್ಯವನ್ನು ನೋಡಲು "**नर करणी करेसो नरका नारायण बन जाय**" ಎಂಬ ಮಾತಿನ ಸತ್ಯತೆಯು ತುಸುವಾದರೂ ಹೊಳೆಯುವ ಇರಪು.

ಗತಭರ್ತೃಕೆಯರಿಗೆ ವಿದ್ಯಾದಾನಮಾಡಿ, ನೀತಿಯಿಂದ ಅವರ ಚರಿತಾರ್ಥ ಸಾಗಿಸಿಕೊಳ್ಳುವಂತೆ ಮಾಡುವದಿಷ್ಟೇ ಪ್ರೊ. ಕರ್ವೆಯವರ ಸಂಕುಚಿತವಾದ ಉದ್ದೇಶವಿರುವದಿಲ್ಲ. ಕುಮಾರಿಕೆಯರಿಗೆ ಶಾಲೆಯೊಳಗಿನ ಹಾಗು ಗೃಹಕೃತ್ಯದ ಶಿಕ್ಷಣಕೊಟ್ಟು ಲಗ್ನದ ವಯೋಮಾನವನ್ನು ಮುಂದಕ್ಕೆ ಹಾಕುವಂತೆ ಮಾಡುವದೂ, ಸ್ತ್ರೀಯರಿಗೆ ಉಚ್ಚಶಿಕ್ಷಣ ದೊರೆಯುವಂತೆಮಾಡಿ ಸ್ತ್ರೀಶಿಕ್ಷಣವು ಸ್ವದೇಶದ ಸ್ತ್ರೀಯರಿಂದಲೇ ಸಾಗಿಸುವಂತೆ ಮಾಡುವದೂ ಅವರ ಧ್ಯೇಯಗಳಾಗಿರುತ್ತವೆ. ಈ ಧ್ಯೇಯಗಳಿಗನುಸರಿಸಿ ಮಹಿಲಾ ವಿದ್ಯಾಲಯವನ್ನು ಸ್ಥಾಪಿಸಿ ಕುಮಾರಿಯರಿಗೆ ಯೋಗ್ಯಶಿಕ್ಷಣ ದೊರೆಯುವ ಏರ್ಪಾಡುಮಾಡಿದ್ದಾರೆ. ಸ್ತ್ರೀಯರಿಗೆ ಉಚ್ಚಶಿಕ್ಷಣವನ್ನು ದೊರಕಿಸಿಕೊಡುವ ಸ್ತ್ರೀವಿದ್ಯಾಪೀಠ (University) ವನ್ನು ಸ್ಥಾಪಿಸಲಿಕ್ಕೆ ದ್ರವ್ಯನಿಧಿಯನ್ನು ಕೂಡಿಸುವದಕ್ಕೋಸ್ಕರ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ತಿರುಗಾಡಿ ಎಷ್ಟೋ ಸದ್ಗೃಹಸ್ಥರ ಸಹಾನುಭೂತಿಯನ್ನೂ ಧನಸಹಾಯವನ್ನೂ ಪಡೆದು ಸ್ತ್ರೀವಿದ್ಯಾಪೀಠಸ್ಥಾಪನೆಯಂಥ ಮಹತಾರ್ಯವನ್ನು ನೆರವೇರಿಸಿದರು. ಈಗ ೧೬ ಮಂದಿ ಸ್ತ್ರೀಯರು ಉಚ್ಚಶಿಕ್ಷಣ ಹೊಂದುತ್ತಿರುವರು. ಈ ಕಾರ್ಯದಿಂದ ಪ್ರೊ. ಕರ್ವೆಯವರ ಕೀರ್ತಿಯು ಹಿಂದುಸ್ಥಾನತುಂಬ ಹಬ್ಬಿದೆ. ಕೀರ್ತಿಯ ಬೆನ್ನುಹತ್ತಿದರೆ ಅದು ದೊರೆಯುವದಿಲ್ಲ. ಕರ್ತವ್ಯದ ಪ್ರಬಲವಾದ ನಿಷ್ಠೆಯಿಂದ ದೀಕ್ಷೋದ್ಯೋಗಮಾಡಲು ಕೀರ್ತಿಯು ತಾನಾಗಿಯೇ ಬೆನ್ನುಹತ್ತಿ ಬರುವದೆಂಬ ಮಾತು ಪ್ರೊ. ಕರ್ವೆಯವರ ಉದಾಹರಣದಿಂದ ಸಹಜವಾಗಿ ತಿಳಿಯುವಂತೆ ಅದೆ.

ಸಮಾಜದ ಕುಂದುಕೊರತೆಗಳು ಬಹು ಜನರಿಗೆ ತಿಳಿಯುತ್ತವೆ. ಆದರೆ ಅವುಗಳನ್ನು ಇಲ್ಲದಂತೆ ಮಾಡುವದಕ್ಕೆ ನಿಃಸ್ವಾರ್ಥಬುದ್ಧಿಯಿಂದ ಶ್ರಮಿಸುವಂಥವರು ತೀರ ಅಪರೂಪ. ಪ್ರೊ. ಕರ್ವೆಯವರು ಹಿಂದುಸ್ಥಾನಕ್ಕೊದಗಿದ ಪಕ್ಷಘಾತರೋಗದ ಭಾಗದಲ್ಲಿ ಚೈತನ್ಯಶಕ್ತಿಯನ್ನುಂಟುಮಾಡಲಿಕ್ಕೆ ಅವಿಶ್ರಾಂತಶ್ರಮಬಟ್ಟು, ಕೃತಕೃತ್ಯರಾಗಿರುವರು. ಇಂಥವರ

ರಾಷ್ಟ್ರಕ್ಕೆ ಅಲಂಕಾರದಂತಿರುವವರು. ವಿಪರೀತಪರಿಸ್ಥಿತಿಯಲ್ಲಿ ದೃಢನಿಶ್ಚಯವುಳ್ಳ ಸಾಮಾನ್ಯಮನುಷ್ಯನು ಎಂಥ ಅದ್ಭುತಕಾರ್ಯವನ್ನು ನೆರವೇರಿಸುವನೆಂಬ ಸಂಗತಿಯು ಪ್ರೊ. ಕರ್ವೆಯವರ ಮಹತ್ಕಾರ್ಯದಿಂದ ಚಾಣಾಕ್ಷರು ತರ್ಕಿಸಲಿಕ್ಕೆ ಬರುವಂತಿದೆ.

ಕಳೆದ ಎಪ್ರೆಲ ತಿಂಗಳಲ್ಲಿ ಪ್ರೊ. ಕರ್ವೆಯವರಿಗೆ ೭೦ ವರ್ಷಗಳು ತುಂಬಿದವು. ಅದಕ್ಕಾಗಿ ಪುಣೆಯ ಎಷ್ಟೋ ದೊಡ್ಡ ನಾಗರಿಕರೂ ವಿದ್ಯಾರ್ಥಿನಿಗಳೂ ಸಭೆಗೂಡಿಸಿ. ಅವರನ್ನು ಒಳ್ಳೇ ಸಮಾರಂಭದಿಂದ ಸತ್ಕರಿಸಿದರು. ಇಂಥ ವಿಭೂತಿಗಳ ಸತ್ಕಾರವು ಪರಮಾನಂದಪ್ರದವಾಗಿರುವದು. ಪ್ರೊ. ಕರ್ವೆಯವರು ಪೂರ್ಣ ಆಯುರಾರೋಗ್ಯವಂತರಾಗಿ ತಾವು ಹಚ್ಚಿದ ವೃಕ್ಷಗಳ ಮಧುರತಮಫಲಗಳನ್ನು ಹಿಂದೀ ಜನಾಂಗವು ಸೇವಿಸುವದನ್ನು ನೋಡುತ್ತ ಆನಂದದಿಂದ ದೀರ್ಘಕಾಲ ಬಾಳಲಿ ಎಂದು ಜಗದೀಶ್ವರನನ್ನು ಪ್ರಾರ್ಥಿಸುವೆವು.

ಇನ್ನು ಕರ್ವೆಯವರ ಸಂಸ್ಥೆಯ ಸಂಬಂಧದಿಂದ ಸಾಮಾನ್ಯಮಾಹಿತಿಯನ್ನು ಬರೆದು ಈ ಲೇಖವನ್ನು ಮುಗಿಸುವೆವು.

ಸಂಸ್ಥೆಯ ಉದ್ದೇಶವು: — ವಿಧವೆಯರಿಗೆ ವಿದ್ಯೆಯನ್ನೂ ಜ್ಞಾನವನ್ನೂ ಕೊಟ್ಟು ಅವರು ನೀತಿಯಿಂದ ತಮ್ಮ ಚರಿತಾರ್ಥವನ್ನು ಸಾಗಿಸಿಕೊಳ್ಳುವ ಸಾಮರ್ಥ್ಯವನ್ನು ಅವರಲ್ಲಿ ಉಂಟು ಮಾಡುವದು; ಕುಮಾರಿಕೆಯರಿಗೆ ಶಿಕ್ಷಣಕೊಟ್ಟು ಅವರ ಲಗ್ನದ ವಯೋಮರ್ಯಾದೆಯನ್ನು ಬೆಳಿಸಿ ಪ್ರೌಢವಿವಾಹಕ್ಕೆ ಯೋಗ್ಯರನ್ನು ಮಾಡುವದು; ಮದುವೆಯಾದ ಸ್ತ್ರೀಯರು ಸಂಸಾರಕೃತ್ಯವನ್ನು ಅಚ್ಚುಕಟ್ಟುತನದಿಂದ ನಡಿಸುವಂತೆಯೂ, ಸಂಸಾರಯಾತ್ರೆಯಲ್ಲಿ ತಮ್ಮ ಪತಿಗೆ ನೆರವಾಗಲಿಕ್ಕೆ ಸಮರ್ಥರಾಗುವಂತೆಯೂ ಮಾಡುವದು, ಒಟ್ಟಿನಮೇಲೆ ಸ್ತ್ರೀಯರ ಶಾರೀರಿಕ, ಮಾನಸಿಕ ಉನ್ನತಿಯನ್ನು ಮಾಡುವದು.

ಸಂಸ್ಥೆಯ ಘಟಕವು:— ಪ್ರತಿವರ್ಷ ಒಂದು ಅಥವಾ ಒಮ್ಮೆಲೆ ೧೦ ರೂ. ಕೊಡುವವರು ಹಿತಚಿಂತಕರು: ಪ್ರತಿವರ್ಷ ೧೦ ರಂತೆ ಇಲ್ಲವೆ ಒಮ್ಮೆಲೆ ನೂರು ರೂಪಾಯಿ ಕೊಡುವವರು ಸಹಾಯಕರು; ಪ್ರತಿವರ್ಷ ೧೦ ರಂತೆ ಇಲ್ಲವೆ ಒಮ್ಮೆಲೆ ೫೦ ರೂಪಾಯಿ ಕೊಡುವವರು ಆಶ್ರಯದಾತರು ಬದುಕಿರುವವರಿಗೆ ಸಂಸ್ಥೆಯ ಕೆಲಸವನ್ನು ಮಾಡಲಿಕ್ಕೆ ಸಿದ್ಧರಾಗಿರುವವರು ಇಲ್ಲವೆ ಆರಿಸಲ್ಪಟ್ಟವರು ಆಜನ್ಮಸೇವಕರು.

ವ್ಯವಸ್ಥಾಪಕ ಮಂಡಳಿಯು:— ಸಂಸ್ಥೆಯ ಕೆಲಸಮಾಡುತ್ತಿರುವ ಆಜನ್ಮಸೇವಕರ ಸಂಖ್ಯೆಯ ಅರ್ಧದಷ್ಟು ಜನರು, ಆಶ್ರಯದಾತರಿಂದ ಆರಿಸಲ್ಪಟ್ಟ ಸಭಾಸದರು ಮತ್ತು ಆಷ್ಟೇ ಸಹಾಯಕರು ಆರಿಸಿಕೊಟ್ಟ ಸಭಾಸದರು ಇವರಿಗೆಲ್ಲ ವ್ಯವಸ್ಥಾಪಕ ಮಂಡಳಿ ಎಂಬ ಹೆಸರು. ವ್ಯವಸ್ಥಾಪಕ ಮಂಡಳಿಯ ಆರಿಸುವಿಕೆಯು ಮೂರುವರ್ಷಕ್ಕೊಮ್ಮೆ ಆಗುವದು. ಅದರಲ್ಲಿ ಮೊದಲಿನ ವ್ಯವಸ್ಥಾಪಕರು ಮತ್ತೆ ಆರಿಸಲ್ಪಡುವ ಹಕ್ಕು ಇರುತ್ತದೆ.

ವಿದ್ಯಾರ್ಥಿನಿಯರ ನಿತ್ಯಕ್ರಮವು:— ವಿದ್ಯಾರ್ಥಿನಿಯರು ಮುಂಜಾನೆ ೬ ಗಂಟೆಗೆ ಏಳುವರು. ದಿನದಂತೆ ಸ್ನಾನ, ಬಟ್ಟೆಗಳನ್ನು ಒಗೆಯೋಣ, ಇವೆಲ್ಲವನ್ನು ನೆರವೇರಿಸಿಕೊಂಡು ಹಿರಿಯರ ಇಚ್ಛೆಯಂತೆ ಕೆಲವು ವೇಳೆಯನ್ನು ಧರ್ಮಸಂಬಂಧದ ಕೆಲಸಗಳಲ್ಲಿ ಕಳೆಯುವರು. ೭॥ ಗಂಟೆಯಾದ ಕೂಡಲೆ ಕೆಲವು ಹುಡಿಗೆಯರು ಅಲ್ಪಾಹಾರವನ್ನು ಬೇಕಾದರೆ ಮಾಡುವರು. ಮುಂದೆ ಸುಮಾರು ೨ ತಾಸುಗಳವರೆಗೆ ಗ್ರಹಕೃತ್ಯವನ್ನೂ ಅಭ್ಯಾಸವನ್ನೂ ಮಾಡುವರು. ೧೦ ಗಂಟೆಗೆ ಊಟದ ಗಂಟೆಯಾಗುವದು. ಊಟವಾದ ಬಳಿಕ ಶಾಲೆಯು ೧೧/ ಗಂಟೆಗೆ ಪ್ರಾರಂಭಿಸುವದು. ಮೊದಲಿನ ಕಾಲುತಾಸಿನಲ್ಲಿ ಧರ್ಮಶಿಕ್ಷಣವು ಕೊಡಲ್ಪಡುವದು. ಸಂಸ್ಕೃತ ಬಲ್ಲ ವಿದ್ಯಾರ್ಥಿನಿಯರಿಗೆ ಶ್ರೀಮದ್ ಭಗವದ್ಗೀತೆಯು ಕಲಿಸಲ್ಪಡುವದು. ಉಳಿದವರಿಗೆ ಮಹಾರಾಷ್ಟ್ರ ಭಾಷೆಯೊಳಗಿನ ಗ್ರಂಥಗಳ ಭಕ್ತಿ-ಧರ್ಮಪರ ಭಾಗಗಳನ್ನು ಕಲಿಸುವರು. ಬಳಿಕ ನಾಲ್ಕುಮುಕ್ಕಾಲು ಗಂಟೆಯವರೆಗೆ ವ್ಯಾವಹಾರಿಕ ಶಿಕ್ಷಣವು ಸಾಗುವದು. ನಡುವೆ ಮುಕ್ಕಾಲುತಾಸು ಸೂಟಿಯು ಇರುವದು. ಆಗ ಹುಡಿಗೆಯರು ಅಲ್ಪಾಹಾರ ತಕ್ಕೊಳ್ಳುವರು. ಸಾಲೆ ಬಿಟ್ಟಬಳಿಕ ಮನೆಗೆಲಸ, ಆಟ, ತಿರುಗಾಡುವದು. ಇದೆಲ್ಲ ಆದಬಳಿಕ ಸಂಜೆಯ ೬ ಗಂಟೆಗೆ ಊಟವಾಗುವದು. ಬಳಿಕ ೬ ರಿಂದ ೭॥ ಗಂಟೆಯವರೆಗೆ ಪ್ರಾರ್ಥನೆಯು ನಡೆಯುವದು. ಆಗ ಪ್ರೌಢವಿದ್ಯಾರ್ಥಿನಿಯರು ಗೀತಾಮಂದಿರದಲ್ಲಿ ಒಟ್ಟುಗೂಡಿ ಮುಂಚಿನ ಹಾಗೂ ಈಗಿನ ಸಾಧುಗಳು ರಚಿಸಿದ ಪದಗಳನ್ನು ಹಾಡುವರು. ಬಳಿಕ ಪರಮೇಶ್ವರನ ಸಂಬಂಧವಾದ ನೀತಿಯ ಸಂಬಂಧವಾದ ಇಲ್ಲವೆ ತಾತ್ವಿಕ ವಿಷಯದ ಸಂಬಂಧವಾದ ಚಿಕ್ಕಚಿಕ್ಕ ಸಂಗತಿಗಳನ್ನಾಗಲಿ, ಸಾದುಗಳ ಇಲ್ಲವೆ

ಸಾಧ್ವಿಯೆರ ಚರಿತ್ರವನ್ನಾಗಲಿ, ರಾಮವಿಜಯ ಭಕ್ತಿವಿಜಯ ಮುಂತಾದ ನೀತಿಪರ ಗ್ರಂಥಗಳನ್ನಾಗಲಿ ಓದುವರು. ಬಳಿಕ ೭॥ ಗಂಟೆಯಿಂದ ಮುಂದೆ ಒಂದು ಒಂದೂವರೆ ತಾಸು ಅಭ್ಯಾಸ ಮಾಡುವರು. ೯ ಗಂಟೆಯಾದ ಕೂಡಲೆ ಸಣ್ಣ ಹುಡಿಗೆಯರು ಮಲಗಲಿಕ್ಕೆ ಹೋಗುವರು. ॥೯॥ ಘಂಟೆಗೆ ಮಲಗುವ ಗಂಟೆಯಾಗಲು, ಎಲ್ಲ ವಿದ್ಯಾರ್ಥಿನಿಯರು ೧೦ ಗಂಟೆಯಾಗುವದರೊಳಗೆ ನಿದ್ದೆಗೈಯ್ಯುವರು.

ಈ ಮೇಲಿನ ಸಂಗತಿಗಳನ್ನು ನೋಡಲು, ಪ್ರೊ. ಕರ್ವೆಯವರ ಸಂಸ್ಥೆಯು ಎಷ್ಟು ಅಚ್ಚುಕಟ್ಟುತನದಿಂದ ಸರ್ವಾಂಗ ಪರಿಪೂರ್ಣವಾಗಿ ನಡೆಯುತ್ತಿರುವದೆಂಬದು ವಾಚಕರಿಗೆ ತಟ್ಟನೆ ಹೊಳೆಯುವದರಲ್ಲಿ ಸಂಶಯವಿಲ್ಲ.

(ಕರ್ವೆಯವರ ಪೂರ್ಣವೃತ್ತಾಂತವು ಅವರೇ ಸುಬೋಧವಾಗಿ ಬರೆದ "ಆತ್ಮಚರಿತ್ರ" ಎಂಬ ಮರಾಠೀ ಪುಸ್ತಕದಲ್ಲಿ ಇರುವದು.)

ಶ್ರೀ

ಯುರೋಪದ ಮಹಾಯುದ್ಧ, ವಿಜಯಪ್ರಾರ್ಥನೆಯು.

ಪದ ॥ " ಸರ್ವದೇವ ಸುರಜಾಣೆ! ಮೋಹನ್‌ರಾಣೆ! " ಇದರಂತೆ.

ಲಾಲಿಸಯ್ಯಾ। ಶ್ರೀಲಕ್ಷ್ಮೀಶ್ವರ! ದಯಾ। ಪಾಲಿಸೈ! ಜಯಶ್ರೀಯಾ! ॥ ಪಲ್ಲ ॥
ಜಾಲವಲ್ಲ, ದುರ್ಮದಕೈಸರೆಯಾ। ಶೀಲವಂತ, ಬೆಲಜ್ಯಮ್ಮರಕ್ಷ್ರಂಚರಾ ॥
ನೀಲಿಟ್ಟಾ। ದಾಳಿಗಳಾ। ತಾಳದೆಪೋದೆಮ್ಮಯಾ। ಜಾರ್ಜಮಹಾರಾಯಾ॥

॥ ಅನುಪಲ್ಲ ॥

ನೀರಭಟರು ಹೋರಾಡುತಿಹರಲ್ಲಾ! ಪೂರಾ। ಮೂರು ನಾಲ್ಕುವರುಷ ವಾಯಿತಲ್ಲಾ॥
ವೈರಿಯಬಲವೆಲ್ಲಾ। ಚೂರಾಯತಿದು ಸುಳ್ಳಲ್ಲಾ ॥ ಘೋರಯುದ್ಧತೀರಿಲ್ಲಾ

॥ ೧ ॥

ದುರ್ಲಾಭಾ ರಾಕ್ಷಸಮಹಾಕೃತಿಯಾ। ಪರಿಪರಿಯಾ ಸುಹತ್ವಾಕಾಂಕ್ಷೆ
ವರಾ ॥
ಸರಿಯಾಯಿತು ಸಂಗ್ರಹವೆಲ್ಲಾ। ಧರೆಯೊಳುಮಾತಾಡಿಪರಿಲ್ಲಾ। ಧುರವ
ಡೆಲಜ್ಜಿಯಲ್ಲಾ! ॥ ೨ ॥

ಶತ್ರುಮಂಡಲಿಮೃತ್ಯುಹೊಂದಿಪೋಕೆ! । ಮಿತ್ರಸಂಯುಕ್ತಪಕ್ಷಭೂತಳಕ
ಉತ್ತಮಸಿರಿವಿಜಯಪತಾಕೆ!। ಬಿತ್ತರವಾಗಲಿ ಪುರಪುರಕೇ!। ಹತ್ತುದಿ
ಮೆರೆದಿರ್ಕ!!॥ ೩ ॥

ಶಾರೀಪು ೬-೬-೧೯೧೫ ಅಂಕೋಲಾ. } ವೆ. ಪ. ಹೆಗಡೆ ಬಾಡ, ಉಪಶಿಕ್ಷಕ ಶಾಲಾನಂಬರು

ಪುಸ್ತಕ ವಿಮರ್ಶೆ.

ಈಗ ೩, ೪ ವರ್ಷಗಳಿಂದ ವಿದ್ಯಾಖಾತೆಯವರಿಂದ ಪ್ರಾಥಮಿ
ಶಿಕ್ಷಕರ ಸಮ್ಮೇಲನಗಳು ಕೂಡಿಸಲ್ಪಡುತ್ತವೆ, ಅದರಿಂದ ಶಿಕ್ಷಕ ಜನರ
ಎಷ್ಟೋ ಜಾಗ್ರತಿ ಉತ್ಸಾಹಗಳುಂಟಾಗಿವೆ. ಆದರೂ ಸದ್ಯದ ಸ್ಥಿತಿಯ
ಬೇರೆ ಬೇರೆ ಸ್ಥಳಗಳಲ್ಲಿ ಆಗುವ ಸಮ್ಮೇಲನಗಳಲ್ಲಿ ನಡೆಯುವ ಕಾಯ
ದ ಲಾಭವು ಪ್ರತಿಯೊಬ್ಬ ಶಿಕ್ಷಕನಿಗೆ ಆಗುವ ಸಂಭವವಿಲ್ಲ; ಮತ್ತು ಒಂದ
ಸ್ಥಳದಲ್ಲಿ ಒಮ್ಮೆ ನಡೆದ ಸಮ್ಮೇಲನದ ಕೆಲಸದ ಮರವು ತುಸು ದಿವಸ
ಳಲ್ಲಿ ಆಗುವ ಸಂಭವವದೆ. ಆದ್ದರಿಂದ ಸಮ್ಮೇಲನದಲ್ಲಿ ನಡೆದ ಶಿಕ್ಷಣ
ಸಂಬಂಧವಾದ ಮಾದರಿಯ ಪಾಠಗಳೂ ಸಿಬಂಧಗಳೂ ಮುದ್ರಿಸಲ್ಪಟ್ಟು
ಶಾಶ್ವತ ಸ್ವರೂಪವನ್ನು ಹೊಂದಿದರೆ, ಮೇಲೆ ಹೇಳಿದ ಎರಡೂ ರೀತಿಯ
ಅನನುಕೂಲತೆಗಳು ದೂರಾಗುವವು. ಈ ದೃಷ್ಟಿಯಿಂದ ನಾವು ಬಾಗಲ
ಕೋಟೆಯ ೨ ನೇ ಶಿಕ್ಷಣ ಸಮ್ಮೇಲನದ ವೃತ್ತಾಂತವನ್ನು ಪುಸ್ತಕರೂಪ
ದಿಂದ ಪ್ರಸಿದ್ಧಮಾಡಿದ್ದಕ್ಕಾಗಿ ಅದರ ಸೆಕ್ರೆಟರಿಗಳಾದ ಜಿ. ಎ. ಬಳವಂತ
ರಾವ ಅವರನ್ನು ಅಭಿನಂದಿಸುತ್ತೇವೆ. ಈ ಪುಸ್ತಕವನ್ನು ಉಳಿದ ಕಡೆ
ಯಲ್ಲಿದ್ದ ಶಿಕ್ಷಕರು ಒಮ್ಮೆಯಾದರೂ ಓದಿನೋಡಬೇಕೆಂದು ನಾವು ಆಗ್ರ
ಹಪೂರ್ವಕವಾಗಿ ಹೇಳುತ್ತೇವೆ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಂಡ.

ವಿದ್ಯಾರ್ಥಿಗಳಿಗೆ ಸೂಚನೆಗಳು.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿ

ಹೆಣ್ಣುಮಕ್ಕಳು ೧೯೧೮ನೇ ಇಸವಿಯ ನವಂಬರ ತಿಂಗಳ ೨೭ನೇ ತಾರೀಖಿನ ದಿವಸ ಪರೀಕ್ಷಿಸಲ್ಪಡುವರು. ಈ ಪ್ರವೇಶ ಪರೀಕ್ಷೆಯು ಹೆಣ್ಣು ಮಕ್ಕಳ ೫ನೆಯ ಇಯತ್ತೆಯ ವಿಷಯಗಳಲ್ಲಿ ಆಗುವದು. ಉಮೇದವಾರರು ತಮ್ಮ ಅರ್ಜಿಗಳನ್ನು ತಮ್ಮ ತಮ್ಮ ಜಿಲ್ಲೆಯ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಮುಖಾಂತರವಾಗಿ ಸಪ್ಟಂಬರ ತಿಂಗಳ ೨೫ನೇ ತಾರೀಖಿನೊಳಗಾಗಿ ಕಳಿಸತಕ್ಕದ್ದು. ೫ನೆಯ ಇಯತ್ತೆಯ ಅಭ್ಯಾಸವಾಗದವರು ಅರ್ಜಿಯನ್ನು ಕಳಿಸಬಾರದು. ಉಮೇದವಾರರು ಕೆಳಗೆ ಬರೆದ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು.

ಅಂಕಗಣಿತ :—ವ್ಯವಹಾರೀಅಪೂರ್ಣಾಂಕ, ತ್ರೈರಾಶಿಕ, ಪಂಚರಾಶಿ, ಸರಳಬಡ್ಡಿಯ ಸುಲಭಉದಾಹರಣೆ.

ಭಾಷಾ :— ೫ನೆಯ ಪುಸ್ತಕದ ಸಾಮಾನ್ಯಜ್ಞಾನದ ಪಾಠಗಳಲ್ಲಿ ಮೊದಲಿನ ೩೦ ಪಾಠಗಳು. ಹಾಗು ಆ ಭಾಗದೊಳಗಿನ ಪದ್ಯಪಾಠಗಳಲ್ಲಿ ೭, ೨೪, ೩೦ ಈ ಮೂರು ಪಾಠಗಳು ಅರ್ಥ ಸಹಿತ.

ವ್ಯಾಕರಣ:—ನಾಮ, ಸರ್ವನಾಮ, ವಿಶೇಷಣ, ಕ್ರಿಯಾಪದ, ಅವ್ಯಯಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಸುಲಭ ವಾಕ್ಯಗಳನ್ನು ರಚಿಸುವದು.

ಕನ್ನಡ ಮುಲ್ಕೀಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳು ಕೂಡ ಮೇಲಿನಂತೆಯೇ ಅರ್ಜಿಗಳನ್ನು ಕಳಿಸತಕ್ಕದ್ದು. ಆದರೆ ನಡೆಯುವ ವರ್ಷ ಮುಲ್ಕೀ ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿನಿಯರು ಮಾತ್ರ ೧೯೧೮ನೇ ದಿಶಂಬರದೊಳಗಾಗಿ ಅರ್ಜಿಯನ್ನು ಕಳಿಸತಕ್ಕದ್ದು. ಮುಲ್ಕೀ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿನಿಯರನ್ನು ೧೯೧೮ನೇ ವರ್ಷದ ವರ್ಗದಲ್ಲಿಯೂ ಉಳಿದವರನ್ನು ತಯಾರೀ ವರ್ಗದಲ್ಲಿಯೂ ಸೇರಿಸಿ ಕೊಳ್ಳಲಾದೀತು.

ಉಮೇದವಾರರು ಮಾಡಿದ ಅರ್ಜಿಗೆ ನಮ್ಮಿಂದ ಪರೀಕ್ಷೆಗೆ ಬರಲಿಕ್ಕೆ ಪರವಾನಿಗಿ

ಮುದ್ದತ ವಿಾರಿ ಬಂದ ಅರ್ಜಿಗಳ ವಿಚಾರವಾಗಲಾರದು. ಹಾಗು ೨೭-೧೧-೧೮೮೫ ನೇ ತಾರೀಖಿನ ನಂತರ ತಯಾರೀ ವರ್ಗದಲ್ಲಿ ಸೇರಿಸಲಾಗದು.

ಅರ್ಜಿಯ ನಮೂನೆಗಳು ಮೆ. ಡಿ. ಎ. ಇನ್ಸಪೇಕ್ಟರರ ಕಡೆಗೂ ನಮ್ಮ ಕಡೆಗೂ ಸಿಗುವವು.

ಟ್ರೇ. ಕಾ. ಫಾರವೀಮೆನ್
ಧಾರವಾಡ
ತಾ|| ೧೦-೬-೧೮೮೬.

Sd: M. NEWLAND.
ಲೇಡೀ ಸುಪರಿಂಟಿಂಡೆಂಟ.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನ ನಿಯಮಗಳು.

೧. ಕಾಲೇಜಿನಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿನಿಯು ಕನ್ನಡ ಶಾಲೆಯ ಇಯತ್ತೆಯಲ್ಲಿ ಪಾಸಾಗಿರಬೇಕು. ಇಲ್ಲದಿದ್ದರೆ ಆಕೆಗೆ ಪ್ರವೇಶಪರೀಕ್ಷೆಗೆ ಕೂಡ್ರುವ ಪರವಾನಿಗಿಯು ದೊರೆಯಲಾರದು. ಪ್ರವೇಶ ಪರೀಕ್ಷೆಯು ಪ್ರತಿವರುಷ ನವಂಬರ ಅಥವಾ ಡಿಶಂಬರ ತಿಂಗಳಲ್ಲಿ ತಕ್ಕೊಳ್ಳಲ್ಪಡುವದು. ಹಾಗು ಒಂದು ವರ್ಷದಲ್ಲಿ ಒಂದೇಸಾರೆ ವಿದ್ಯಾರ್ಥಿನಿಯರನ್ನು ಕಾಲೇಜಿನಲ್ಲಿ ಸೇರಿಸಲಾಗುವದು.

೨. ಉಮೇದವಾರರ ಒಳ್ಳೇ ನಡತೆಯ ಬಗ್ಗೆ ಇಬ್ಬರು ಸದ್ಗೃಹಸ್ಥರ ಸರಟೀಫಿಕೇಟಗಳನ್ನು ಕಳಿಸಬೇಕು. ಮದುವೆಯಾದವರನ್ನು ಅವರ ಗಂಡನ ಒಪ್ಪಿಗೆಯ ಹೊರತು ಕಾಲೇಜದಲ್ಲಿ ತಕ್ಕೊಳ್ಳಲಾಗದು. ಮದುವೆಯಾಗದ ಹುಡುಗಿ ವಿದ್ಯಾರ್ಥಿನಿಯರನ್ನು ತಾಯಿದೆಶೀರ ಹಾಗು ಯೋಗ್ಯಪಾಲಕರ ಒಪ್ಪಿಗೆಯಿಂದ ಒಂದು ವೇಳೆ ಕಾಲೇಜಿನಲ್ಲಿ ಸೇರಿಸಿಕೊಳ್ಳಬಹುದು. ಆದರೆ ಅಂಥವರಿಗೆ ಸ್ಕಾಲರಶಿಪ್ಪವಾತ್ರ ಸಿಗಲಾರದು.

೩. ಉಮೇದವಾರ[illegible] (ಗಂಡ, ಭಾವ, ಮೈದುನ, ತಂದೆ, ಅಣ್ಣ ಮು.) ಅಭ್ಯಾಸವು ಪೂರ್ಣವಾಗುವ ವರೆಗೆ ಆ ಉಮೇದವಾರರನ್ನು ಕಾಲೇಜಿನಲ್ಲಿ ಇಡುವದಕ್ಕೂ ಅನಂತರ ನೇಮಿಸಿದ ಸ್ಥಳದಲ್ಲಿ ಅವರು ಕೆಲಸಮಾಡುವಾಗ ಅವರ ಮೊಡನೆ ಇದ್ದು ಅವರನ್ನು ರಕ್ಷಣಮಾಡಲಿಕ್ಕೂ [illegible]

ಯೋಗ್ಯಗೃಹಸ್ಥರಾದ ಜಾಮೀನಾನದಾರರ ಸಹಿತ ಕರಾರ ಪತ್ರವನ್ನು ಬರಕೊಡಬೇಕ್ಕದ್ದು. ಕರಾರ ಪತ್ರವನ್ನು ಬರಕೊಟ್ಟ ಹೊರತು ಸ್ಕಾಲರಶಿಪ್ ಸಿಗಲಾರದು.

ಟೀಪು:— ಸ್ಕಾಲರಶಿಪ್ ತಕ್ಕೊಳ್ಳದೆ ಕಾಲೇಜಿನಲ್ಲಿ ಕಲಿಯುವವರಿಗೆ ೩ನೆಯ ನಿಯಮವು ಲಾಗು ಇಲ್ಲ. ಆದರೆ ಅವರು ಬೋರ್ಡಿಂಗಿನಲ್ಲಿ ಉಂಡು ಇರುತ್ತಿದ್ದರೆ, ಅವರ ತಿಂಗಳ ವೆಚ್ಚವನ್ನು ಪಾಲಕರು ಪ್ರತಿತಿಂಗಳಲ್ಲಿ ಮುಂಗಡ ಕೊಡಬೇಕ್ಕದ್ದು.

೪. ಹದಿನಾಲ್ಕು ವರ್ಷಕ್ಕಿಂತ ಕಡಿಮೆ ಹಾಗು ೨೫ ವರ್ಷಕ್ಕಿಂತ ಹೆಚ್ಚು ವಯಸ್ಸಿನ ವಿದ್ಯಾರ್ಥಿನಿಯರನ್ನು ತಕ್ಕೊಳ್ಳಲಾಗದು.

೫ ಲೇಡೀಸುಪರಿಂಟಿಂಡೆಂಟರವರಿಗೆ ಏನೊಂದು ಕಾರಣವನ್ನು ಹೇಳದೆ ವಿದ್ಯಾರ್ಥಿನಿಯರನ್ನು ಹೊರಗೆ ಹಾಕುವ ಅಧಿಕಾರವುಂಟು.

೬. ವಿದ್ಯಾರ್ಥಿನಿಯರ ಯೋಗ್ಯ ಹಾಗು ಕಾಯಿದೇಶಿರ ಪಾಲಕರು ಇದರೊಂದಿಗೆ ಇರುವ (ಅರ್ಜಿಯ) ನಮೂನೆಯನ್ನು ತುಂಬಿ ತಮ್ಮ ಜಿಲ್ಲೆಯ ಡಿ. ಏ. ಇ. ಇವರ ಮುಖಾಂತರ ಕಳಿಸಬೇಕು. ಆ ನಮೂನೆಯಲ್ಲಿ ಕೇಳಿದ ಎಲ್ಲಮಾಹಿತಿಯನ್ನು ತಪ್ಪದೆ ಬರೆದಿರಬೇಕು. ಅಂದರೆ ಮಾತ್ರ ಅವರಿಗೆ ನಿಕಾಲೆಯ ಉತ್ತರವು ದೊರೆಯುವದು. ನಿಕಾಲೆಯ ಉತ್ತರವು ಬಾರದ ಹೊರತು ವಿದ್ಯಾರ್ಥಿನಿಯನ್ನು ಕಳಿಸಬಾರದು. ಕಳಿಸಿದರೆ ಕಾಲೇಜಿನಲ್ಲಿ ತಕ್ಕೊಳ್ಳಲಾಗದು.

೭. ಬೋರ್ಡಿಂಗಿನಲ್ಲಿ ಊಟದ ಖರ್ಚು ತಿಂಗಳಿಗೆ ೮, ೯ ರೂಪಾಯಿ ಹತ್ತು ಬಹುದು ಇದರ ಹೊರತು ಪುಸ್ತಕ ಅರಿವೆಅಂಚಡಿ ಖರ್ಚು ಬೇರೆ.

೮. ಯಾವವಿದ್ಯಾರ್ಥಿನಿಯರ ಕಾಯದೆಶೀರ ಹಾಗು ಯೋಗ್ಯ ಪಾಲಕರು ಧಾರವಾಡದಲ್ಲಿ ಇರುವದಿಲ್ಲವೋ ಅಂಥವರು ಬೋರ್ಡಿಂಗಿನಲ್ಲಿ ಇರಲಿಕ್ಕೇಬೇಕು.

ಟ್ರೇ. ಕಾ. ಧಾರವೀಮೆನ್
ಧಾರವಾಡ
ತಾ॥ ೧೦–೬–೧೯೧೮.

Sd : M. NEWLAND,
ಲೇಡೀ ಸುಪರಿಂಟಿಂಡೆಂಟ.

ಜಾವಕ ನಂಬರು

ಇದರ ಲಗತಿರುವ ನಿಯಮಗಳನ್ನೂ ಅರ್ಜಿಯ ನಮೂನೆಗಳನ್ನೂ ಕಳಿಸಿರುತ್ತದೆ. ಅರ್ಜಿಯನ್ನು ತುಂಬಿ ಮೆಹರಬಾನ ಡೆ. ಎ. ಇ. ಸಾ. ರವರ ಮುಖಾಂತರ ಕಳಿಸಬೇಕು.

ತಾರೀಖು.

ಪ್ರೇ. ಕಾ. ಥಾಠ ವೀಮೆನ್ ಧಾರವಾಡ. ತಾ॥ ೧೦-೬-೧೯೧೮ ಇಸವಿ } (Sd.) M. Newland. ಲೇಡೀ ಸುಪರಿಂಟಿಂಡೆಂಟ.

ಟೀಪು:—ಈ ಮಾಹಿತಿಯನ್ನು ತಮ್ಮ ತಮ್ಮ ಜಿಲ್ಲೆಯ ಡೆ. ಎ. ಇ. ಸಾ. ರವರ ಮುಖಾಂತರ ಕಳಿಸತಕ್ಕದ್ದು.

ಅರ್ಜಿಯ ನಮೂನೆ.

ಮೆಹರಬಾನ ಲೇಡೀ ಸುಪರಿಂಟಿಂಡೆಂಟ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ ಇವರ ಹುಜೂರಿಗೆ—

ಅರ್ಜದಾರ.....

ಮುಕ್ಕಾಮು.....ತಾಲೂಕ.....ಜಿಲ್ಲಾ.....

ಇವರು ಬರಕೊಂಡ ವಿನಯಪೂರ್ವಕ ಅರ್ಜಿ ಏನಂದರೆ:—

ನನ್ನ ..... ಈಕೆಯನ್ನು ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಕಲಿಯಲಿಕ್ಕೆ ಕಳಿಸಲಪೇಕ್ಷಿಸುತ್ತೇನೆ. ಅವಳ ಸಂಬಂಧದ ಯಾವತ್ತು ಮಾಹಿತಿಯನ್ನು ಕೆಳಗೆ ಬರೆದಿರುತ್ತೇನೆ. ತಮ್ಮ ಕಡೆಯಿಂದ ಬಂದ ಕಾಲೇಜದ ನಿಯಮಗಳನ್ನು ಓದಿ ತಿಳಕೊಂಡಿರುತ್ತೇನೆ. ಮತ್ತು ಅವುಗಳಿಗೆ ಸಾಸು ಒಪ್ಪುತ್ತೇನೆ. ಮೆ॥ ರವರಿಗೆ ಶ್ರುತವಿರಬೇಕು. ತಾರೀಖು

ಸಹಿ.....

ಮೆಹರಬಾನ ಡೆ. ಎ. ಇ. ಜಿಲ್ಲಾ.....

ಇವರ ಮುಖಾಂತರ ರವಾನೆ.

ಕಾಲೇಜಿನಲ್ಲಿ ಸೇರುವ ವಿದ್ಯಾರ್ಥಿನಿಯ ಕಾಯಿದೆಶೀರ ವಾಲಕನು ಆಕೆಯ ಬಗ್ಗೆ ಕೆಳಗಿನ ಯಾವತ್ತು ಮಾಹಿತಿಯನ್ನು ಕೊಡತಕ್ಕದ್ದು.)

೧. ಹೆಸರು

೨. ಜನ್ಮ ತಾರೀಖು ತಿಂಗಳು ಇಸವಿ.

೩. ಜಾತಿ

೪. ಅಭ್ಯಾಸ

೫. ಸಧವಾ, ವಿಧವಾ ಅಥವಾ ಅವಿವಾಹಿತ.

೬. ಪಾಲಕನಿಗೂ ಉಮೇದವಾರಳಿಗೂ ಇರುವ ಸಂಬಂಧ.

೭. ಪಾಲಕರ ಹೆಸರು, ಉದ್ಯೋಗ, ಪತ್ತೆ.

೮. ಜಾಮೀನದಾರರ ಹೆಸರು ಹಾಗು ಪೂರ್ಣ ಪತ್ತೆ.

೧ನೇ, ೨ನೇ, ೩ನೇ ನಿಯಮಗಳಂತೆ ಕರಾರಪತ್ರ ಬರಕೊಡಲಿಕ್ಕೆ ಪಾಲಕನ ಒಪ್ಪಿಗೆ.

ಪಾಲಕನ ಸಹಿ.

(ಮೇಲಿನ ಮಾಹಿತಿ ಬಂದ ಹೊರತು ನಿಕಾಲೆ ಹುಕುಮು ಕೊಡಲಾಗದು. ನಿಕಾಲೆ ಹುಕುಮು ದೊರೆತ ಹೊರತು ಉಮೇದವಾರರು ಇಲ್ಲಿಗೆ ಬರಲಾಗದು. ಇದರೊಡನೆ ಲೀವ್ಹಿಂಗ ಸರಟೀಫಿಕೇಟನ್ನು ಉಮೇದವಾರರ ಒಳ್ಳೇ ನಡತೆಯ ಬಗೆ ಇಬ್ಬರು ಸಂಭಾವಿತರ ಲೇಖೀ ದಾಖಲೆಯನ್ನು ಕಳಿಸತಕ್ಕದ್ದು.)

ನೋಟೀಸು.

೧೯೧೯ನೇ ಇಸವಿಯಲ್ಲಾಗುವ ವ್ಹ. ಫಾ. ಪರೀಕ್ಷೆಯ ಬಗ್ಗೆ೧೯೧೯ನೇ ಇಸವಿಯಲ್ಲಿ ಇಟ್ಟ ಪುಸ್ತಕಗಳನ್ನೇ(೧೯೧೯ನೇ ನವಂಬರ ತಿಂಗಳ ಶಾಲಾಪತ್ರಕದಲ್ಲಿ ಮುದ್ರಿಸಿದಪ್ರಕಾರ) ಇಟ್ಟಿರುತ್ತದೆಂದು ಮೆ.ಎ. ಇ.ಸಾ.ರವರ ಇಗ್ರೇಜೀ ಪತ್ರನಂಬರ $\frac{\text{೩೬೦}}{\text{೧೧-೪-೧೯೧೯}}$ ನೇ ಪ್ರಕಾರ ಬರೆದು ಬಂದಿರುತ್ತದೆ.

ಟ್ರೇ. ಕಾ. ಧಾರವಾಡ.
ತಾ||೨೦-೭-೧೯೧೯.

R. S. Kulkarni.
ಪ್ರಿನ್ಸಿಪಾಲ.

ನೋಟೀಸು

ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ, ಮಂಜೂರಾದ ಪುಸ್ತಕಗಳಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಇದರಡಿಯಲ್ಲಿ ಪ್ರಸಿದ್ಧ ಪಡಿಸಿರುವೆವು.

ಸಾ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪುಸ್ತಕದ ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು.	ಮಂಜೂರಿಯ ಹುಕುಮು ನಂಬರು ತಾರೀಖು.
	ನಾಮ್ರಾಟ್ ಪಂಚಮ ಜಾರ್ಜ.	ದತ್ತಾತ್ರಯ ಗೋ. ಸಜೇಕರ ಪ್ರೊಪ್ರಾಯಿಟರ ಧನಂಜಯಪ್ರೆಸ್, ಖಾನಾಪೂರ.	ಕನ್ನಡ	ಪ್ರಾಥಮಿಕ ಶಾಲೆಗಳ ಇನಾಮಿನ ಪುಸ್ತಕದ ಬಗ್ಗೆ.	ಮೆ. ಎ. ಇ. ಸಾ. ರವರ ಹುಕುಮು ನಂ. ೭೨೨೨ ೨೪-೪-೧೯೧೧
	ಬಾಲವ್ಯಾಕರಣ.	ಗೋವಿಂದ ಕೃಷ್ಣ ಕಲಿವಾಳ, ಅಸಿ. ಡಿ. ಎ. ಇ. ಬೆಳಗಾಂವ.	ಸದರ	ಪ್ರಾಥಮಿಕ ಶಾಲೆಗಳ ಲಾಯಬ್ರರಿ ಮತ್ತು ಇನಾಮಿನ ಬಗ್ಗೆ.	ಮೆ. ಡಾ. ಸಾ. ರವರ ಹುಕುಮು ನಂ. ೧೪೪೨ ೩-೫-೧೯೧೧
	ಹಾಸ್ಯ.	ಜೀವಾಜಿ ವಿಷ್ಣು ಗೋಠೆ ಹೆಡ್ ಕ್ಲಾರ್ಕ ಡಿ.ಎ. ಇ. ಆ॥ ಧಾರವಾಡ.	ಸದರ	ಪ್ರಾಥಮಿಕ ಮತ್ತು ಅ. ವ್ಹ. ಶಾಲೆಗಳ ಲಾಯಬ್ರರಿಯ ಬಗ್ಗೆ.	ಮೆ. ಎ. ಇ. ರವರ ಹುಕುಮು ನಂ. ೨೬೨೪ ೨೫-೬-೧೯೧೧
	ಎಂಟು ಸ್ತ್ರೀರತ್ನಗಳು.	ಆನರರಿ ಸೆಕ್ರೆಟರಿ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.	ಸದರ	ಪ್ರಾಥಮಿಕ ಹೆಣ್ಣುಮಕ್ಕಳಶಾಲೆಗಳ ಲಾಯಬ್ರರಿ ಮತ್ತು ಇನಾಮಿನ ಬಗ್ಗೆ.	ಸದರ ೨೬೩೨ ೨೫-೬-೧೯೧೧
	ಉತ್ತಮ ಗೃಹಿಣಿ.	ಸಂತೂಬಾಯಿ ನೀಲಗಾರ ಹೆ॥ ಮಿಸ್ತ್ರೆಸ್ ಗರ್ಲ್ಸ್‌ಶಾಲಾ ಬೈಲಹೊಂಗಲ.	ಸದರ	ಸದರ	ಸದರ ೨೬೩೫ ೨೫-೬-೧೯೧೧

Office of the Educational Inspector, S. D. Dharwar

K. S. HUNGUND

ational Inspector, S. D.

ಪ್ರವೇಶಪರೀಕ್ಷೆಯ ವಿದ್ಯಾರ್ಥಿಗಳೂ ವ್ಯಾಕರಣವಿಷಯವೂ

ಈಚೆಗೆ ಟ್ರೇನಿಂಗ ಕಾಲೇಜದ ಪ್ರವೇಶಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ವ್ಯಾಕರಣವನ್ನು ಚೆನ್ನಾಗಿ ಓದಿಕೊಂಡು ಬರುವದಿಲ್ಲವೆಂದು ಕಂಡು ಬಂದಿರುವದು. ಅವರು ಬರೆದ ಉತ್ತರಗಳ ಭಾಷೆಯಲ್ಲಿ ವಾಕ್ಯದೋಷಗಳೂ ಶಬ್ದದೋಷಗಳೂ ಹೇರಳವಾಗಿ ಆಗುವವು. ತಪ್ಪುಗಳುಳ್ಳ ವಾಕ್ಯಗಳನ್ನು ತಿದ್ದ ಹೇಳಿದಲ್ಲಿ ಮತ್ತೆ ಕೆಲವು ಹೊಸ ದೋಷಗಳನ್ನು ಅವುಗಳಲ್ಲಿ ಸೇರಿಸುವರು. ಬಹುವ್ರೀಹಿ, ತೃತೀಯೆ, ಕರ್ತರಿ ಪ್ರಯೋಗ ಮೊದಲಾದ ಪಾರಿಭಾಷಿಕ ಶಬ್ದಗಳು ಕೂಡ ಅವರ ಬರಹದಲ್ಲಿ ಶುದ್ಧರೂಪದಲ್ಲಿ ಇರುವದಿಲ್ಲ; ಒಂದೊಂದು ಶಬ್ದವನ್ನು ಹತ್ತೆಂಟು ವಿಕೃತ ರೂಪಗಳಲ್ಲಿ ಬರೆಯುವರು. ಎಲ್ಲ ವಿಷಯಗಳಲ್ಲಿ ತಾವು ಕೊಡುವ ಉತ್ತರಗಳು ಶುದ್ಧ ಭಾಷೆಯಲ್ಲಿರಬೇಕೆಂಬದನ್ನೂ ವಿಶೇಷವಾಗಿ ಭಾಷಾವಿಷಯದಲ್ಲಿ ಇದಕ್ಕೇ ಹೆಚ್ಚು ಮುಖ್ಯತೆಯಿರುವದೆಂಬದನ್ನೂ ಅವರು ಮರೆತು ಬಿಡುವರು.

ಈ ಮೇರೆಗೆ ಅವರು ವ್ಯಾಕರಣದ ಆರಂಭದ ಸಂಸ್ಕಾರವಿಲ್ಲದವರಾಗಲು ಪರೀಕ್ಷೆಗಳಲ್ಲಿ ಹೆಚ್ಚು ಗುಣಗಳನ್ನು ಸಂಪಾದಿಸಲಾರರೆಂಬದಿಷ್ಟೇ ಅಲ್ಲ, ಮುಂದೆ ಕಾಲೇಜದ ಕ್ಲಾಸುಗಳಲ್ಲಿ ಕಲಿಯಬೇಕಾದ ಭಾಷಾವಿಷಯವು ಅವರಿಗೆ ತಿಳಿಯದಂತಾಗುವದು. ಒಂದನೆಯ ವರ್ಷದ ತರಗತಿಯಲ್ಲಿದ್ದರೂ ಕೂಡ ಕೆಲವರು ವರಿಷ್ಠಾಧಿಕಾರಿಗಳಿಗೆ ಬರೆದುಕೊಂಡ ವಿಜ್ಞಾಪನೆಗಳಲ್ಲಿ ವಿಧೆಯ ಶೇವಕ, ಶೃತವಿರಬೇಕು. ಮೊದಲಾದ ಅಸಹ್ಯವಾದ ತಪ್ಪುಗಳನ್ನು ಮಾಡುವರು

ಭಾಷಾವಿಷಯದಲ್ಲಿ ವ್ಯಾಕರಣಕ್ಕಿರುವ ಮಹತ್ವವನ್ನು ಹೊಸದಾಗಿ ಹೇಳಬೇಕಾಗಿಲ್ಲ.

ಟ್ರೇ. ಕಾಲೇಜಿನಲ್ಲಿ ಪ್ರವೇಶಿಸಲಪೇಕ್ಷಿಸುವ ವಿದ್ಯಾರ್ಥಿಗಳು ವ್ಯಾಕರಣದ ಎಲ್ಲ ಭಾಗಗಳನ್ನು ಸರಿಯಾಗಿ ಓದಿ ತಿಳಿದುಕೊಂಡು ಬಂದರೆ ಪ್ರವೇಶ ಪರೀಕ್ಷೆಯಲ್ಲಿ ಮುಂದು ತರಿಯುವರಲ್ಲದೆ ಮುಂದೆಯೂ ಭಾಷಾವಿಷಯದಲ್ಲಿ ಪ್ರಗತಿಯನ್ನು ಹೊಂದುವರೆಂದು ಹೇಳಬಹುದು.

ಟ್ರೇನಿಂಗ ಕಾಲೇಜ ಫಾರಮೆನ್
ಧಾರವಾಡ. } ಮ. ಪ. ಪಂಡಿತಾಚಾರ್ಯ

ಧಾರವಾಡದಲ್ಲಿ ಕೂಡಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ
೪ನೆಯ ಸಮ್ಮೇಲನವು.

—+※:0:※+—

ಈ ಸಮ್ಮೇಲನವು ಧಾರವಾಡ ಟ್ರೇನಿಂಗ ಕಾಲೇಜಿನ ಜನರಲ್ ಹಾಲಿನಲ್ಲಿ ತಾ॥ ೧೧-೫-೧೯೧೫ ರಿಂದ ಪ್ರಾರಂಭವಾಗಿ ೩ ದಿವಸಗಳ ವರೆಗೆ ಬಹು ವಿಜೃಂಭಣೆಯಿಂದ ನೆರವೇರಿತು ಮೈಸೂರ ಸಂಸ್ಥಾನದ ಪ್ರಾಕ್ತನ ವಿಮರ್ಶ ವಿಚಕ್ಷಣ, ರಾವ ಬಹಾದ್ದೂರ ರಾ. ನರಸಿಂಹಾಚಾರ್ಯ, ಎಮ್, ಎ. ಎಮ್. ಆರ್. ಎ. ಎಸ್. ಇವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಮೈಸೂರ, ಬೆಂಗಳೂರ, ಮದ್ರಾಸ, ಬಳ್ಳಾರಿ, ಕೊಡಗು, ಮುಂಬಯಿ, ವಿಜಾಪೂರ, ಬೆಳಗಾಂವ ಮುಂತಾದ ಸ್ಥಳಗಳಿಂದ ಬಂದ ಅನೇಕ ವಿದ್ವಾಂಸರೂ, ಕನ್ನಡದ ಅಭಿಮಾನಿಗಳೂ, ವಿದುಷಿಯರೂ ಸಭಾಸ್ಥಾನವನ್ನು ಅಲಂಕರಿಸಿದ್ದರು. ಮೈಸೂರ ಸಂಸ್ಥಾನದ ರಿಟೈಯರ್ಡ ಎಜ್ಯು. ಇನ. ಜನರಲ್ಲರಾದ ರಾ. ಬ. ಎಮ್. ರಾಮರಾಯರು, ಕರ್ನಾಟಕ ಸಾಹಿತ್ಯಪರಿಷತ್ತಿನ ಜಾಯಂಟ ಸೆಕ್ರೆಟರಿ ಮ. ರಾ. ಆರ್. ರಘುನಾಥರಾಯರು, ಅರ್ಥಸಾಧಕ ಪತ್ರಿಕೆಯ ಸಂಪಾದಕರಾದ ಮ. ರಾ. ರಾ. ಎಚ್. ಚನ್ನಕೇಶವ ಅಯ್ಯಂಗಾರರು, ಶ್ರೀಕೃಷ್ಣಸೂಕ್ತಿಯ ಸಂಪಾದಕರಾದ ಮ. ರಾ. ರಾ. ರಾಜಗೋಪಾಲಾಚಾರ್ಯರು, ಮದ್ರಾಸದ ವಿದ್ಯಾಖಾತೆಯ ಟ್ರಾನ್ಸಲೇಟರರಾದ ಮ. ರಾ. ರಾ. ಬಿನಗಲ್ಲ ರಾಮರಾಯರು, ಚಿತ್ತವಾಡಿನ ರಾ. ಬ. ಹನುಮಂತ ಗೌಡರು, ಮ. ರಾ. ರಾ. ಬಿ. ಕೃಷ್ಣಪ್ಪನವರು, ಸತೀಹಿತೈಷಿಣಿಯ ಸಂಪಾದಿಕೆಯರಾದ ಶ್ರೀಮತಿ. ತಿರುಮಲಾಂಬಾ ಇವರು ಮತ್ತು ಮಧ್ಯಪ್ರಾಂತದ ಅಸಿ॥ ಕಲೆಕ್ಟರರಾದ ಬೀವೂರ ಗುರುರಾಯರೂ ಮುಂಬಯಿ ಹಾಯಕೋರ್ಟ ವಕೀಲರಾದ ಶ್ರೀ. ಜಹಾಗೀರದಾರ ಹಾಗು ಗುಮಾಸ್ತೆಯವರೂ ಇವರಲ್ಲದೆ ಅನೇಕ ಅಧಿಕಾರಸ್ಥರೂ, ಪದವೀಧರರೂ ವಕೀಲರೂ ಸೆಟ್ಟ ಸಾವುಕಾರರೂ ಒಟ್ಟಿಗೆ ಸುಮಾರು ೬೦೦ ಜನರು ಕೂಡಿದ್ದರು. ಸಮ್ಮೇಲನದ ಯಾವತ್ತು ಜನರೊಳಗೆ ಭಾಷಾಭಿಮಾನವೂ, ಉತ್ಸುಕತೆಯೂ ತುಂಬಿತುಳುಕುತ್ತಿದ್ದವು. ಸಮ್ಮೇಲನದ ಪ್ರಾರಂಭಕ್ಕೆ ಸ್ವಾಗತಮಂಡಲದ ಅಧ್ಯಕ್ಷರಾದ ಶ್ರೀಮಂತ ಮಹಾರಾಜ ರಾಜೇಶ್ರೀ ಬುಳ್ಳಪ್ಪ ಬಸವಂತರಾವ ಮಾಮಲೇದೇಸಾಯಿ ಹಂದಿಗನೂರು ಇವರು ಮಾತೃಭಾಷೆಯ ಪವಿತ್ರಕಾರ್ಯಕ್ಕೆ ಒಟ್ಟುಗೂಡಿದಂಥ ಎಲ್ಲ ಪ್ರತಿನಿಧಿಗಳಿಗೆ ಪ್ರೇಮಭಾವದಿಂದ ಸ್ವಾಗತಮಾಡಿ ಉತ್ತೇಜನಪರವಾದ ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರ ಚುನಾವಣೆಯು ನಡೆದು ಅವರು ಸ್ಥಾನಾಪನ್ನರಾದ ಬಳಿಕ ಬೀರೆಬೀರೆ ಕಡೆಯಿಂದ ಬಂದ ಅಭಿನಂದನಪರ ಪತ್ರಗಳನ್ನು ಶ್ರೀ. ಗದಿಗೆಯ್ಯಾ ಹೊನ್ನಾಪುರಮಠ ಇವರು ಓದಿತೋರಿಸಿದರು. ಹಿಂದುಗಡೆ ಮ. ರಾ. ರಾ. ಆರ್. ರಾಘವೇಂದ್ರರಾವ ಇವರು ಬೆಂಗಳೂರ ಸಾಹಿತ್ಯ ಪರಿಷತ್ತಿನವರು ಹೋದ ವರ್ಷ ಮಾಡಿದ ಕೆಲಸದ ವರದಿಯನ್ನು ಓದಿತೋರಿಸಿದರು. ಬಳಿಕ ಅಧ್ಯಕ್ಷರ ಭಾಷಣವಾಯಿತು. ಈ ಭಾಷಣವು ಬಹಳ ಮಹತ್ವದ್ದಿರುವದರಿಂದ ಅದನ್ನು ನಮ್ಮ ವಾಚಕರ ಸಲುವಾಗಿ

ಧಾರವಾಡದಲ್ಲಿ ಕೂಡಿದ
ಕರ್ನಾಟಕ ಸಾಹಿತ್ಯಪರಿಷತ್ತಿನ ನಾಲ್ಕನೆಯ ಸಮ್ಮೇಳನದಲ್ಲಿ
ಅಗ್ರಾಸನಸ್ಥರಾದ
ಪ್ರಾಕ್ತನವಿಮರ್ಶ ವಿಚಕ್ಷಣ, ರಾವಬಹಾದ್ದೂರ
ರಾ. ನರಸಿಂಹಾಚಾರ್ಯ,
ಎಂ, ಎ., ಎಂ. ಆರ್. ಎ. ಎಸ್.,
ಇವರು ಮಾಡಿದ ಭಾಷಣವು.

ಮಹಾಶಯರೇ! ದೇಶಬಾಂಧವರೇ! ಭಾಷಾಭಿಮಾನಿಗಳೇ!

ತಾವುಗಳು ತಮ್ಮಗಳ ಉದಾರಾಶಯದಿಂದ ಅಲ್ಪಜ್ಞನಾದ ನನ್ನನ್ನು ಈ ಉನ್ನತ ಪದವಿಗೆ ನಿಯಮಿಸಿ ಗೌರವಿಸಿದುದಕ್ಕಾಗಿ ನನ್ನ ಕೃತಜ್ಞತೆಯ ಪರಿಮಿತಿಯನ್ನು ಮಾತುಗಳ ಮೂಲಕ ತಿಳಿಸಲು ಅಶಕ್ತನಾಗಿದ್ದೇನೆ. ಈ ಮಹಾಪದವಿಯ ಕಾರ್ಯವನ್ನು ನಿರ್ವಹಿಸುವ ಶಕ್ತಿ ನನ್ನಲ್ಲಿಲ್ಲದಿದ್ದರೂ ದೇಶಬಾಂಧವರೂ ಭಾಷಾಭಿಮಾನಿಗಳೂ ಆದ ತಮ್ಮಗಳ ಆಜ್ಞೆಯನ್ನು ಶಿರಸಾವಹಿಸಿ ನನ್ನಿಂದಾದಮಟ್ಟಿಗೆ ಕನ್ನಡನಾಡಿನ ಮತ್ತು ಕನ್ನಡನುಡಿಯ ಸೇವೆಯನ್ನು ಅಲ್ಪಸ್ವಲ್ಪವಾದರೂ ತಮ್ಮೊಡನೆ ಸೇರಿ ಮಾಡುವುದು ಕರ್ತವ್ಯವೆಂದು ತಿಳಿದು ಈ ಮಹಾಕಾರ್ಯಕ್ಕೆ ಸಮ್ಮತಿಸಿರುವೆನು. ಈ ಕಾರ್ಯವು ತಮ್ಮಗಳ ಸಹಾಯದಿಂದ ಸುಲಲಿತವಾಗಿ ನಡೆದು ಫಲೋದರ್ಕವಾಗಬೇಕೆಂದು ಜಗದೀಶ್ವರನಲ್ಲಿ ಪ್ರಾರ್ಥಿಸುವೆನು.

ಕನ್ನಡನಾಡಿನ ಮತ್ತು ಕನ್ನಡನುಡಿಯ ಪ್ರಾಚೀನತೆ.

ಕ್ರಿಸ್ತಪೂರ್ವ ೩ನೆಯ ಶತಮಾನದಲ್ಲಿ ಅಶೋಕನು ಬನವಾಸಿಗೆ ಒಬ್ಬ ಬೌದ್ಧ ಬೋಧಕನನ್ನು ಕಳುಹಿಸಿದಂತೆ ತಿಳಿಯುತ್ತದೆ. ಅದೇ ಕಾಲದಲ್ಲಿ ಮಹಿಷಮಂಡಲಕ್ಕೆ ಮತ್ತೊಬ್ಬ ಬೋಧಕನನ್ನು ಕಳುಹಿಸಿದಂತೆಯೂ ತಿಳಿಯುತ್ತದೆ. ಈ ಮಹಿಷಮಂಡಲವು ಮೈಸೂರು ದೇಶವಲ್ಲ, ಗೋದಾವರಿಯ ಸಮೀಪದ ಪ್ರಾಂತವು ಎಂದು ಮೆ॥ ಫ್ಲೀಟ್ ಸಾ॥ರು ಬರೆದಿದ್ದಾರೆ. ಆದರೂ ಮೈಸೂರು ಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತದೆ.

ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು. ತಮಿಳುಭಾಷೆಯಲ್ಲಿರುವ ಅಗನಾ ನೂರು ಎಂಬ ಕವಿಸೂಕ್ತಿಕದಂಬದಲ್ಲಿ ಕ್ರಿಸ್ತ ಶಕ ೨ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾಗ ೧೧೫ನೆಯ ಪದ್ಯದಲ್ಲಿ ಎರುಮೈನಾಡು (ಎರು ಮೈ=ಮಹಿಷ) ಎಂಬ ಹೆಸರನ್ನು ಹೇಳಿ ಇದು ಪಶ್ಚಿಮಪ್ರಾಂತದಲ್ಲಿ (ಕುಡನಾಡು) ಇದೆ ಎಂದೂ ಹೇಳಿದೆ. ನಕ್ಕೀರರ್ ಎಂಬ ಮತ್ತೊಬ್ಬ ಪುರಾತನಕವಿಯ ಉಕ್ತಿಯಾದ ೫೬ನೆಯ ಪದ್ಯದಲ್ಲಿ—ನೆಡುಂಜಿಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ಚೋಳನ್, ತಿತಿಯನ್, ಎಳಿನಿ, ಎರುಮೈಯೂರನ್ (ಮಹಿಷಪುರದವನು), ಇರುಂಕೋವೇಣ್ಮಾನ್, ಪೊರುನನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೨೫೩ನೆಯ ಪದ್ಯದಲ್ಲಿ ಮಹಿಷಪುರದವನು ಬಡಗರ ಕುಲದವನು ಎಂದು ಉಕ್ತವಾಗಿದೆ. ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳುಗ್ರಂಥದಲ್ಲಿ ಎರಡನೆಯ ಶತಮಾನದಲ್ಲಿದ್ದ ಶೆಂಗುಟ್ಟುವನ್ ಎಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ ಕನ್ನಡರು ಅಡಿದ ಕುಣಿತವನ್ನು ನೋಡಿ ಸಂತೋಷಿಸಿದನು ಎಂದು ಹೇಳಿದೆ. ಈ ಕುಣಿತವು ಈಗ ಮಲೆನಾಡಿನಲ್ಲಿ ಆಡುವ ಸುಗ್ಗಿಯ ಕುಣಿತದಂತಿದ್ದಿರಬಹುದೆಂದು ತೋರುತ್ತದೆ.

ಉತ್ತರದೇಶದಲ್ಲಿ ಭದ್ರಬಾಹುವೆಂಬ ಶ್ರುತಕೇವಲಿಯ ಕಾಲದಲ್ಲಿ ದ್ವಾದಶವಾರ್ಷಿಕಕ್ಷಾಮವುಂಟಾಗಲು, ಜೈನಸಂಘವು ದಕ್ಷಿಣದಿಕ್ಕಿನಲ್ಲಿರುವ ಪುನ್ನಾಟರಾಷ್ಟ್ರಕ್ಕೆ ಪ್ರಯಾಣಮಾಡಿದಂತೆ ಜೈನಗ್ರಂಥದಲ್ಲಿ ಹೇಳಿದೆ. ಈ ಪುನ್ನಾಟರಾಷ್ಟ್ರವು ಮೈಸೂರುಸೀಮೆಯ ದಕ್ಷಿಣಭಾಗದಲ್ಲಿದ್ದಿತು. ಇದನ್ನು ರಾಷ್ಟ್ರವರ್ಮನೇ ಮೊದಲಾದ ರಾಜರು ಕೀರ್ತಿಪುರವೆಂಬ ರಾಜಧಾನಿಯಲ್ಲಿ ನೆಲಸಿ ಆಳಿದರು. ಇದಕ್ಕೆ ಕನ್ನಡದಲ್ಲಿ ಪುನ್ನಾಡು ಎಂದು ಹೆಸರು. ಕೀರ್ತಿಪುರವೆಂಬುದು ಈಗ ಹೆಗ್ಗಡದೇವನಕೋಟೆ ತಾಲೂಕಿನಲ್ಲಿರುವ ಕಿತ್ತೂರು. ಎರಡನೆಯ ಶತಮಾನದಲ್ಲಿದ್ದ ಟಾಲಮಿ ಪುನ್ನಾಟರಾಷ್ಟ್ರದ ಹೆಸರನ್ನು ಪೌನ್ನತ ಎಂದು ಹೇಳಿ ಅದು ಮರಕತರತ್ನಕ್ಕೆ (beryl) ಹೆಸರುವಾಸಿಯನ್ನು ಹೊಂದಿತ್ತು ಎಂದು ಬರೆದಿದ್ದಾನೆ.

ಆಂಧ್ರಭೃತ್ಯರ ಕಾಲದಲ್ಲಿ ಅವರ ಪ್ರತಿನಿಧಿಯೊಬ್ಬನು ಚಿತ್ರದುರ್ಗದಲ್ಲಿ ನಿಂತು ಆಳುತ್ತಿದ್ದಂತೆ ಅಲ್ಲಿ ದೊರೆತ ನಾಣ್ಯಗಳಿಂದ ತಿಳಿಯುತ್ತದೆ. ಈ ನಾಣ್ಯಗಳು ಸೀಸದವು. ಇವುಗಳಿಳಿಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಅಂಕಿತವಾಗಿರುವು

ಲ್ಲದೆ ಮುಡಾನಂದ, ಚುಟುಕಡಾನಂದ ಎಂಬ ಹೆಸರುಗಳೂ ದೊರೆಯುತ್ತವೆ. ಪ್ರತಿನಿಧಿಯ ನಾಣ್ಯಗಳಲ್ಲಿ ಅವನ ಹೆಸರೂ ವೃಷಭವೂ ಬೋಧಿವೃಕ್ಷವೂ ಕೆತ್ತಲ್ಪಟ್ಟಿವೆ. ಶಿವಮೊಗ್ಗ ಜಿಲ್ಲಾ ಶಿಕಾರಿಪುರ ತಾಲ್ಲೂಕು ತಾಳಗುಂದ ಗ್ರಾಮದ ಪ್ರಣವೇಶ್ವರ ದೇವಸ್ಥಾನದ ಇದಿರಿಗಿರುವ ಶಿಲಾಸ್ತಂಭದಲ್ಲಿ ೫ನೆಯ ಶತಮಾನದ ಕದಂಬರಾಜರ ಒಂದು ಶಾಸನವಿದೆ. ಇದರಲ್ಲಿ ಆ ದೇವರು ಶಾತಕರ್ಣಿ ಮೊದಲಾದವರಿಂದ ಪೂಜಿಸಲ್ಪಟ್ಟುದಾಗಿ ಹೇಳಿದೆ.

ಕೆಳಗಣ ಈಜಿಪ್ಟ್ ದೇಶದಲ್ಲಿಯ ಅಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ ೩ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡಶಬ್ದಗಳೂ ವಾಕ್ಯಗಳೂ ದೊರೆಯುತ್ತವೆ: ಉದಾಹರಣ—ಪಾನಂ ಬೀರೆತ್ತಿ ಕಟ್ಟಿ ಮಧುವಂ ಬೀರೆತ್ತುರ್ವೆ. ರಾಷ್ಟ್ರಕೂಟರಾಜನಾದ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ತನಗಿಂದೆ ಇದ್ದ ಗದ್ಯಗ್ರಂಥಕರ್ತೃಗಳಲ್ಲಿ ದುರ್ವಿನೀತನ ಹೆಸರನ್ನು ಹೇಳಿದ್ದಾನೆ. ಈತನು ಆ ಹೆಸರಿನ ಗಂಗರಾಜನಾಗಿರಬಹುದು. ಇವನ ಕಾಲವು ಸುಮಾರು ೫೦೦ ಆಗುತ್ತದೆ. ೫ನೆಯ ಶತಮಾನದಿಂದ ಕನ್ನಡಶಾಸನಗಳು ದೊರೆಯುತ್ತವೆ. ಭಟ್ಟಾಕಳಂಕನು ಕನ್ನಡಭಾಷೆಯ ವಿಷಯವಾಗಿ—ನಚೈತಾ ಭಾಷಾಶಾಸ್ತ್ರಾನುಪಯೋಗಿನೀಃ ತತ್ವಾರ್ಥಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯಾನ್ಯೇಷಾಂಚ ಶಬ್ದಾಗಮಯುಕ್ತ್ಯಾಗಮಪರಮಾಗಮವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರಕಲಾಶಾಸ್ತ್ರವಿಷಯಾಣಾಂಚ ಬಹೂನಾಂ ಗ್ರಂಥನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್ (ಕನ್ನಡದಲ್ಲಿ ತತ್ವಾರ್ಥಮಹಾಶಾಸ್ತ್ರಕ್ಕೆ ವ್ಯಾಖ್ಯಾನರೂಪವಾದ ೯೬೦೦೦ ಗ್ರಂಥಪರಿಮಿತಿಯುಳ್ಳ ಚೂಡಾಮಣಿಯೂ, ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮ ಇವುಗಳಿಗೆ ಸಂಬಂಧಪಟ್ಟ ಗ್ರಂಥಗಳೂ, ಕಾವ್ಯ, ನಾಟಕ, ಅಲಂಕಾರ, ಕಲಾಶಾಸ್ತ್ರ ಈ ವಿಷಯವಾದ ಗ್ರಂಥಗಳೂ ಹೇರಳವಾಗಿ ದೊರೆವುದರಿಂದ ಈ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ) ಎಂದು ಬರೆದಿದ್ದಾನೆ. ಈ ಚೂಡಾಮಣಿಯನ್ನು ಬರೆದವನು ತುಂಬುಲೂರಾಚಾರ್ಯ ಎಂಬ ನಾಮಾಂತರವುಳ್ಳ ಶ್ರೀವರ್ಧದೇವನು. ಇವನನ್ನು

ಜನೋ ೀಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ
ಶ್ರೀವರ್ಧದೇವ ಸಂಧತ್ತೇ ಜಿಹ್ವಾಗ್ರೇಣ ಸರಸ್ವತೀಂ ॥

ಯನ್ನು ನಾಲಗೆಯ ತುದಿಯಲ್ಲಿ ಧರಿಸಿದ್ದೀನಿ) ಎಂದು ೭ನೆಯ ಶತಮಾನದ ಅಂತ್ಯ ದಲ್ಲಿದ್ದ ದಂಡಿ ಸ್ತುತಿಸಿರುವಂತೆ ಒಂದು ಶಾಶನದಿಂದ ತಿಳಿಯುತ್ತದೆ. ೭ನೆಯ ಶತ ಮಾನಕ್ಕೆ ಹಿಂದೆಯೇ ಇಂಥ ಅವಾರವಾದ ಗ್ರಂಥವು ಹುಟ್ಟಬೇಕಾದರೆ ಆ ಕಾಲಕ್ಕೆ ಬಹಳ ಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆ ಆರಂಭವಾಗಿರಬೇಕು. ಸುಮಾರು ೭೦೦ ರಲ್ಲಿದ್ದ ಶ್ಯಾಮಕುಂದಾಚಾರ್ಯನು ಪ್ರಾಕೃತವನ್ನು ಕನ್ನಡದಲ್ಲಿ ಬರೆದಿರುವುದಾಗಿ ಇಂದ್ರ ನಂದಿಯು ಶ್ರುತಾವತಾರದಲ್ಲಿಯ

ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ ।
ಪ್ರಾಕೃತ ಸಂಸ್ಕೃತ ಕರ್ಣಾಟಭಾಷಯಾ ಪದ್ಧತಿಃ ಪರಾ ರಚಿತಾ ॥

ಎಂಬ ಪದ್ಯದಿಂದ ತಿಳಿಯುತ್ತದೆ. ೯ನೆಯ ಶತಮಾನದಲ್ಲಿ ಹುಟ್ಟಿದ ಕವಿರಾಜಮಾ ರ್ಗವೇ ನಮಗೆ ದೊರೆತಿರುವ ಆದಿಗ್ರಂಥವಾಗಿದೆ.

ಇಮ್ಮಡಿಪುಲಕೇಶಿಯ ಆಸ್ಥಾನಕವಿಯಾಗಿದ್ದ ರವಿಕೀರ್ತಿಯು ಕ್ರಿ.ಶ. ೬೩೪ರಲ್ಲಿ ಐಹೊಳೆಯಲ್ಲಿ ಜೈನದೇವಾಲಯವನ್ನು ಕಟ್ಟಿಸಿದನೆಂದು ಅಲ್ಲಿಯ ಶಾಸನದಿಂದ ತಿಳಿಯುತ್ತದೆ. ಈ ಶಾಸನವೇ ಕನ್ನಡದ ಮೊದಲ ಶಾಸನವೆಂದು ಕೆಲವರು ಭಾವಿಸಿದ್ದಾರೆ. ಆದರೆ ಇದಕ್ಕಿಂತ ಮೊದಲು ಕನ್ನಡದಲ್ಲಿ ಶಾಸನಗಳು ಇದ್ದಿರಬೇಕೆಂದು ಊಹಿಸಲು ಆಧಾರಗಳಿವೆ. ಕ್ರಿ.ಶ. ೫೭೫ರಲ್ಲಿ ಬಾದಾಮಿಯಲ್ಲಿ ಮೊದಲನೆಯ ಪುಲಕೇಶಿಯು ಕಟ್ಟಿಸಿದ ಗುಹಾಲಯದಲ್ಲಿ ಕೆಲವು ಕನ್ನಡ ಪದಗಳಿವೆ. ಇವು ಕನ್ನಡದ ಮೊದಲ ಶಾಸನಗಳಾಗಿರಬಹುದು. ಇವುಗಳಿಗಿಂತ ಮೊದಲು ಕನ್ನಡದಲ್ಲಿ ಶಾಸನಗಳು ಇದ್ದಿರಬೇಕೆಂದು ಊಹಿಸಲು ಆಧಾರಗಳಿವೆ. ಕ್ರಿ.ಶ. ೫೭೫ರಲ್ಲಿ ಬಾದಾಮಿಯಲ್ಲಿ ಮೊದಲನೆಯ ಪುಲಕೇಶಿಯು ಕಟ್ಟಿಸಿದ ಗುಹಾಲಯದಲ್ಲಿ ಕೆಲವು ಕನ್ನಡ ಪದಗಳಿವೆ. ಇವು ಕನ್ನಡದ ಮೊದಲ ಶಾಸನಗಳಾಗಿರಬಹುದು. ಇವುಗಳಿಗಿಂತ ಮೊದಲು ಕನ್ನಡದಲ್ಲಿ ಶಾಸನಗಳು ಇದ್ದಿರಬೇಕೆಂದು ಊಹಿಸಲು ಆಧಾರಗಳಿವೆ.

ಇಮ್ಮಡಿಪುಲಕೇಶಿಯ ಆಸ್ಥಾನಕವಿಯಾಗಿದ್ದ ರವಿಕೀರ್ತಿಯು ಕ್ರಿ.ಶ. ೬೩೪ರಲ್ಲಿ ಐಹೊಳೆಯಲ್ಲಿ ಜೈನದೇವಾಲಯವನ್ನು ಕಟ್ಟಿಸಿದನೆಂದು ಅಲ್ಲಿಯ ಶಾಸನದಿಂದ ತಿಳಿಯುತ್ತದೆ. ಈ ಶಾಸನವೇ ಕನ್ನಡದ ಮೊದಲ ಶಾಸನವೆಂದು ಕೆಲವರು ಭಾವಿಸಿದ್ದಾರೆ. ಆದರೆ ಇದಕ್ಕ

(ರಸ, ರೀತಿ, ಗುಣ ಇವು ಆವುವಾದರೂ ಅಗಲಿ, ಎಲ್ಲಾ ಕರ್ನಾಟರೂ ಹೆಮ್ಮೆಯಿಂದ ಟಂಕಾರದೊಡನೆ ಓದುತ್ತಾರೆ.)

ಕನ್ನಡನಾಡದೊರೆಗಳು.

ಕನ್ನಡನಾಡಿನಲ್ಲಿ ಕಾಲಕ್ರಮದಲ್ಲಿ ಅನೇಕ ರಾಜ್ಯಗಳು ಹುಟ್ಟಿ ಅವುಗಳಲ್ಲಿ ಆಂಧ್ರರೂ, ಕದಂಬರೂ, ಗಂಗರೂ, ಚಾಳುಕ್ಯರೂ, ರಾಷ್ಟ್ರಕೂಟರೂ, ಕಾಳಚುರ್ಯರೂ, ಹೊಯ್ಸಳರೂ, ವಿಜಯನಗರದರಸರೂ, ಮೈಸೂರರಸರೂ ಆಳಿದರು. ಈ ಮೂರ್ಧಾಭಿಷಿಕ್ತರಾದ ರಾಜರಲ್ಲದೆ ಅಲ್ಲಲ್ಲಿ ಅನೇಕಸಾಮಂತರಾಜರೂ ಇದ್ದರು. ಈ ರಾಜರೆಲ್ಲರೂ ಪ್ರಾಯಿಕವಾಗಿ ಪರಾಕ್ರಮಶಾಲಿಗಳಾಗಿಯೂ ಧರ್ಮಪರಾಯಣರಾಗಿಯೂ ವಿದ್ಯಾಪಕ್ಷಪಾತಿಗಳಾಗಿಯೂ ದಿಗಂತವಿಶ್ರಾಂತಕೀರ್ತಿಭಾಜನರಾಗಿಯೂ ರಾಜ್ಯಭಾರಮಾಡಿದರು. ಹಲವರು ಭಿನ್ನಮತಸ್ಥರಾದರೂ ರಾಗದ್ವೇಷಗಳಿಲ್ಲದೆ ಅನ್ಯಮತಗಳನ್ನು ಸಮದೃಷ್ಟಿಯಿಂದ ಕಾಣುತ್ತ ಅವಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಬೀರೆ ಬೀರೆ ಮತಸ್ಥರಿಗೆ ಪರಸ್ಪರವೈಮನಸ್ಯವು ಹುಟ್ಟಿದಾಗ ರಾಜರುಗಳು ಸಮಾಧಾನಪಡಿಸಿ ಸೌಹಾರ್ದವನ್ನು ನೆಲೆಗೊಳಿಸಿದಂತೆ ಶಾಸನಗಳಿಂದ ತಿಳಿಯುತ್ತದೆ. ವಿದ್ವಾಂಸರು, ವಿರಕ್ತರು, ಭಕ್ತರು ಇವರುಗಳಿಗೆ ತಕ್ಕ ಮನ್ನಣೆಯನ್ನು ಮಾಡಿ ಗೌರವಿಸುತ್ತಿದ್ದರು. ಗುಣಗ್ರಾಹಿಗಳಾಗಿ ಗುಣವಿಶಿಷ್ಟರನ್ನು ಅರಿಸಿತಕ್ಕ ಪದವಿಗಳಲ್ಲಿಟ್ಟು ತಮಗೂ ತಮ್ಮ ರಾಜ್ಯಕ್ಕೂ ಕ್ಷೇಮವುಂಟಾಗುವಂತೆ ಪೋಷಿಸಿದರು. ಕನ್ನಡನಾಡು ವಿದ್ಯಾನಿಧಿಯವದಿಂದಲೂ ವಾಣಿಜ್ಯ ಶಿಲ್ಪಾದಿ ಕಲಾಕೌಶಲದಿಂದಲೂ ಪ್ರಜಾನುರಾಗದಿಂದಲೂ ಶೋಭಿಸುತ್ತಿದ್ದಿತು.

ಕನ್ನಡನಾಡಮಹಿಮೆ[1]

ದ್ವೈತಮತೋದ್ಧಾರಕರಾದ ಮಧ್ವಾಚಾರ್ಯರಿಗೆ ಕನ್ನಡನಾಡು ತವರುಮನೆ; ಅದ್ವೈತಮತೋದ್ಧಾರಕರಾದ ಶಂಕರಾಚಾರ್ಯರಿಗೂ ವಿಶಿಷ್ಟಾದ್ವೈತಮತೋದ್ಧಾರಕರಾದ ರಾಮಾನುಜಾಚಾರ್ಯರಿಗೂ ಆಶ್ರಯಸ್ಥಾನ. ಇವರುಗಳಿಂದ ಸ್ಥಾಪಿತವಾದ ಮಠಗಳೂ ಶಾಖಾಮತಗಳೂ ಇಲ್ಲಿ ಈಗಲೂ ಶೋಭಿಸುತ್ತಿರುವುವು. ಈ ನಾಡುವಿದ್ಯಾತೀರ್ಥ, ವಿದ್ಯಾರಣ್ಯ, ಸಾಯಣಾಚಾರ್ಯ, ಶ್ರೀಪಾದರಾಯ, ವ್ಯಾಸರಾಯ, ರಾಘವೇಂದ್ರಯತಿ, ಅನಂತಾಚಾರ್ಯ, ವೇದಾಂತಾಚಾರ್ಯ, ಪುರಂದರದಾಸ, ಕನಕದಾಸ ಮುಖ್ಯ

ಮುಂತಾದ ತಪೋಧನರಿಂದಲೂ ವಿದ್ವದ್ವರ್ಯರಿಂದಲೂ ತತ್ವದರ್ಶಿಗಳಿಂದಲೂ ಭಕ್ತಿ ರೋಮಣಿಗಳಿಂದಲೂ ಅಲಂಕೃತವಾಗಿದ್ದಿತು. ವಾಣಿಜ್ಯ, ಶಿಲ್ಪ ಮುಂತಾದ ಕಲೆಗಳಲ್ಲಿ ಅಸದೃಶವಾದ ನೈಪುಣ್ಯವನ್ನು ಹೊಂದಿದವರೂ ಕನ್ನಡನುಡಿಯ ಸೊಬಗನ್ನು ಪ್ರಕಾಶಗೊಳಿಸಲು ಸಮರ್ಥರಾದ ಕವಿಶಿಖಾಮಣಿಗಳೂ ಈ ನಾಡಿನ ಕೀರ್ತಿಯನ್ನು ಸ್ಥಿರೀಕರಿಸಿದ್ದಾರೆ.

ವಾಣಿಜ್ಯ.

ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಸೀಸದ ನಾಣ್ಯಗಳು ದೊರೆತುವೆಂದು ಹಿಂದೆಯೇ ತಿಳಿಸಿದ್ದೇನೆ. ಅದೇ ಸ್ಥಳದಲ್ಲಿ ಕ್ರಿಸ್ತಪೂರ್ವ ೨ನೆಯ ಶತಮಾನದಲ್ಲಿದ್ದ ಹ್ಯೂವುತಿ ಎಂಬ ಚೀನದೇಶದ ಚಕ್ರವರ್ತಿಯ ಹಿತ್ತಾಳೆನಾಣ್ಯವೂ ಕ್ರಿಸ್ತ ಶಕ ೧ಳರಲ್ಲಿ ಸತ್ತ ಅಗಸ್ಟಸ್ ಎಂಬ ರೋಮ್ ಚಕ್ರವರ್ತಿಯ ಡಿನೇರಿಯಸ್ ಎಂಬ ಬೆಳ್ಳಿನಾಣ್ಯಗಳೂ ದೊರೆತುವು. ಇದರಿಂದ ಪೂರ್ವಕಾಲದಲ್ಲಿ ಕನ್ನಡನಾಡಿನ ವಾಣಿಜ್ಯವು ಎಷ್ಟರಮಟ್ಟಿಗೆ ವ್ಯಾಪಿಸಿದ್ದಿತು ಎಂಬಂಶವನ್ನು ಸ್ವಲ್ಪಮಟ್ಟಿಗೆ ಊಹಿಸಬಹುದಾಗಿದೆ. ವೀರಬಣಂಜುಧರ್ಮಕ್ಕೆ ಅಯ್ಯಾವಳೆ (ಐಹೊಳೆ) ಜನ್ಮಸ್ಥಾನವೆಂದು ಶಾಸನನಗಳಲ್ಲಿ ಹೇಳಿದೆ. ೧೧ಲಲರಲ್ಲಿ ಬರೆದ ಒಂದು ಶಾಸನದಲ್ಲಿ (ಅರಸೀಕೆರೆ ೨೨) ಚೆಟ್ಟಪಸೆಟ್ಟಿ ಎಂಬವನು ಇಂದ್ರನ ಉಚ್ಚೈಶ್ರವಸ್ಸಿಗೆ ಸಮಾನವಾದ ಕುದುರೆಗಳನ್ನೂ ಐರಾವತಕ್ಕೆ ಸದೃಶವಾದ ಆನೆಗಳನ್ನೂ ಶ್ರೇಷ್ಠವಾದ ಮುತ್ತುಗಳನ್ನೂ ಹಡುಗುಗಳಲ್ಲಿ ತಂದು ದೊರೆಗಳಿಗೆ ಮಾರುತ್ತಿದ್ದಂತೆ ಹೇಳಿದೆ.

ಹರಿಯು ಹಯಕ್ಕೆ ತೋಡೆನಿಪ ಹೇಷಜಯಂಗಳನೀಂದ್ರದಂತಿಯೊಳ್।
ದೊರೆಯೆನಿಸಿರ್ಪ ದಂತಿಗಳನಭ್ರದೊಳಾದ ಸುವಾಣಿಮುತ್ತಿನೊಳ್ ॥
ಸರಿಯೆನಿಸಿರ್ಪ ಮುತ್ತುಗಳನೆಯ್ದೆ ಬಹಿತ್ರದೆ ತಂದು ಮಾರುವಂ।
ಧರಣೀಪರ್ಗೊಲ್ದ ಕಮ್ಮಟದ.....ಚೆಟ್ಟಪಸೆಟ್ಟಿ ಸಂತತಂ ॥

ಅದೇ ಶಾಸನದಲ್ಲಿ ದಾಸೆಯನೆಂಬ್ಕಿ ವರ್ತಕನು ಪೂರ್ವದೇಶದ ವಸ್ತುಗಳನ್ನು ಪಶ್ಚಿಮದೇಶಕ್ಕೂ ಪಶ್ಚಿಮದೇಶದ ವಸ್ತುಗಳನ್ನು ಪೂರ್ವದೇಶಕ್ಕೂ ಉತ್ತರದೇಶದ ಭಂಡಗಳನ್ನು ದಕ್ಷಿಣದೇಶಕ್ಕೂ ದಕ್ಷಿಣದೇಶದ ಭಂಡಗಳನ್ನು ಉತ್ತರದೇಶಕ್ಕೂ ಕೊಳುಹಿಸುತ್ತಿದ್ದನೆಂದು ಹೇಳಿದೆ—

ಹರಿದಾಶಾಭಾಂಡಮಂ ವಾರುಣಿಗೆ ನಡಸುವಂ ವಾರುಣೀವಸ್ತುವಂ ವಿ
ಸ್ತರದಿಂದಿಂದ್ರಾಶೆಯೊಳ್ ಪೆರ್ಚಿಸುವನೊಸೆದು ಕೌಬೇರಿಯಿಂದ್ಯುಮ್ಮನಂನೋ
ಡಿರೆ ಯಾಮ್ಯಾಭಾಗದೊಳ್ ಸಂದಿಸುವನೆಸೆವವೋಲ್ಯಂಗಳಂಯಾಮ್ಯದಿಂದು
ತ್ತರದಿಕ್ಕಿಂಗಟ್ಟುವಂ ನೋಡನುಪಮವಣಿಜಂ ದಾಸೆಯಂದೋಷದೂರಂ ॥

೧೨೩೫ರಲ್ಲಿ ಬರೆದ ಮತ್ತೊಂದು ಶಾಸನದಲ್ಲಿ (ಅರಸೀಕೆರೆ ೧೦೮) ಕುಂಜನಂಬಿ ಸೆಟ್ಟಿ ಎಂಬವನು ಮಾಳವ, ಕಳಿಂಗ, ಜೋಳ, ಪಾಂಡ್ಯ ಈ ರಾಜರುಗಳ ಸಮಯಕ್ಕೆ ಬೇಕಾದ ವಸ್ತುಗಳನ್ನು ಒದಗಿಸಿಕೊಟ್ಟು ಹೊಯ್ಸಳರಾಜ್ಯದಲ್ಲಿ ಕೀರ್ತಿಯನ್ನು ಪಡೆದಿದ್ದಂತೆ ಹೇಳಿದೆ—

ಬೀರನ ಮಾಳವೇಂದ್ರನ ಕಳಿಂಗನ ಜೋಳನ ಪಾಂಡ್ಯಭೂತಳಾ
ಧಾರನ ಮುಟ್ಟಿದೊಂದವಸರಂಗಳನಾಗಳೆ ಪೂಣ್ದು ಮಾಳ್ಪ ವಿ।
ಸ್ತಾರದ ಪುಣ್ಯಸಂಪದದಿನೊಪ್ಪುವ ಸೆಟ್ಟಿಗೆ ಕುಂಜನಂಬಿಗಿ
ನ್ನಾರೆಣೆಯೆಂಬಿನಂ ನೆಗಳ್ದನಗ್ಗದ ಹೊಯ್ಸಳರಾಯರಾಜ್ಯದೊಳ್ ॥

ಶಿಲ್ಪ

ವಾಸ್ತುವಿದ್ಯಾನಿಶಾರದರಾದ ಕನ್ನಡನಾಡಿನ ಶಿಲ್ಪಿಗಳು ಎಲ್ಲೋರ, ಇಟ್ಟಗಿ, ಬೇಲೂರು, ಹಳೇಬೀಡು, ಸೋಮನಾಥಪುರ, ನಂದಿ, ಶೃಂಗೇರಿ, ಶ್ರವಣಬೆಳ್ಗೊಳ ಮುಂತಾದ ಸ್ಥಳಗಳಲ್ಲಿ ನಿರ್ಮಿಸಿರುವ ದೇವಾಲಯಗಳೂ ಕೆತ್ತಿರುವ ವಿಗ್ರಹಗಳೂ ವಿದೇಶೀಯರಾದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯರಸದಲ್ಲಿ ಮಗ್ನರಾಗುವಂತೆ ಮಾಡಿವೆ. ಶ್ರವಣಬೆಳ್ಗೊಳದಲ್ಲಿರುವ ಸುಮಾರು ೬೦ ಅಡಿ ಎತ್ತರವುಳ್ಳ ಗೋಮಟೇಶ್ವರನ ಸುಂದರವಾದ ವಿಗ್ರಹವು ನೋಡಿದವರನ್ನೆಲ್ಲಾ ಸ್ತಬ್ಧರನ್ನಾಗಿ ಮಾಡುತ್ತದೆ. ಈಜಿಪ್ಟ್ ದೇಶವನ್ನು ಬಿಟ್ಟರೆ ಇಂಥ ಅದ್ಭುತವಾದ ಕೆಲಸವು ಪ್ರಪಂಚದ ಇನ್ನಾವಭಾಗದಲ್ಲಿಯೂ ಇಲ್ಲವೆಂದು ತಿಳಿಯುತ್ತದೆ. ಮೇಲೆ ಹೇಳಿದ ದೇವಾಲಯಗಳಲ್ಲಿ ಶಿಲ್ಪಿಗಳು ತೋರಿಸಿರುವ ಕೌಶಲವನ್ನು ಫರ್ಗ್ಯೂಸ್, ಹಾವಲ್, ವಿನ್ಸೆಂಟ್‌ಸ್ಮಿತ್, ವೋರ್ಕ್‌ಮ್ಯಾನ್ ಮುಂತಾದ ಶಿಲ್ಪಶಾಸ್ತ್ರಜ್ಞರು ಹೇರಳವಾಗಿ ಪ್ರಶಂಸಿದ್ದಾರೆ. ಈ ಶಿಲ್ಪಿಗಳಲ್ಲಿ ಹಲವರು ತಾವು ಕೆತ್ತಿದ ವಿಗ್ರಹಗಳ ಬುಡದಲ್ಲಿ ತಮ್ಮ ಹೆಸರುಗಳನ್ನು ಬರೆದುಕೊಂಡಿದ್ದಾರೆ. ಈ ಹೆಸರುಗಳಲ್ಲಿ ಮಲ್ಲಿತಮ್ಮ, ಮುಸಣಿತಮ್ಮ, ಬೈಚೋಜ, ಹೊನ್ನೋಜ, ದಾಸೋಜ, ನಂಜಯ, ಹಗಿಪ, ಮದ್ದುವಣ, ಎಳಮಸಯ ಎಂಬುವ ಕೆಲವು ಈ ರೀತಿಯಾಗಿ ಶಿಲ್ಪಿಗಳು

ತಮ್ಮ ಹೆಸರು ಬರೆದುಕೊಂಡಿರುವುದು ಮೈಸೂರು ದೇಶದಲ್ಲಿ ಮಾತ್ರವೇ ಎಂದು ತಿಳಿಯುತ್ತದೆ. ಉಳಿದ ಕಡೆ ಈ ಪದ್ಧತಿ ಪ್ರಾಯಿಕವಾಗಿ ಇಲ್ಲ. ಫರ್ಗಸ್ಸ್ ಮುಂತಾದವರು ನೋಡದೆ ಇರುವ ಒಂದು ದೇವಸ್ಥಾನದ ವಿಷಯವನ್ನು ಮಾತ್ರ ಇಲ್ಲಿ ಸ್ವಲ್ಪ ಮಟ್ಟಿಗೆ ಸೂಚಿಸುತ್ತೇವೆ. ೧೪ನೆಯ ಶತಮಾನದ ಪೂರ್ವಾರ್ಧದಲ್ಲಿ ಶೃಂಗೇರಿಯ ಮಠದಲ್ಲಿ ವಿದ್ಯಾತೀರ್ಥರೆಂಬವರು ಸ್ವಾಮಿಯಾಗಿದ್ದರು. ಇವರು ಭಾರತೀತೀರ್ಥರಿಗೂ ವಿದ್ಯಾರಣ್ಯರಿಗೂ ಗುರುಗಳು. ಇವರ ದರ್ಶನವನ್ನು ಮಾಡುವುದಕ್ಕಾಗಿ ವಿಜಯನಗರದ ೧೪ನೆಯ ರಾಜನಾದ ಹರಿಹರನು ೧೩೪೬ ರಲ್ಲಿಯೂ ಅವನ ತಮ್ಮನಾದ ಬುಕ್ಕನು ೧೩೫೬ ರಲ್ಲಿಯೂ ಶೃಂಗೇರಿಗೆ ಹೋಗಿದ್ದಂತೆ ಶಾಸನಗಳಿಂದ ತಿಳಿಯುತ್ತದೆ. ಈ ಮಹಾತ್ಮರ ಜ್ಞಾಪಕಾರ್ಥವಾಗಿ ಇವರ ಸಮಾಧಿಯ ಮೇಲೆ ಇವರ ಶಿಷ್ಯರಾದ ಭಾರತೀತೀರ್ಥರು ತಾವೇ ಮೇಲ್ವಿಚಾರಣೆಯನ್ನು ವಹಿಸಿ ವಿದ್ಯಾಶಂಕರ ಎಂಬ ನಾಮಧೇಯವುಳ್ಳ ಒಂದು ದೇವಸ್ಥಾನವನ್ನು ಸುಮಾರು ೧೩೫೭ ರಲ್ಲಿ ಕಟ್ಟಿಸಿದರು. ಈ ದೇವಸ್ಥಾನವು ಚಿತ್ರವಿಚಿತ್ರವಾದ ಕೆಲಸಗಳಿಂದ ಶೋಭಾಯಮಾನವಾಗಿರುವುದು. ಇದರ ಸಂವಿಧಾನವೂ ರಚನೆಯೂ ಅನ್ಯಾದೃಶ್ಯವಾದುವು. ಇದರ ಸಂವಿಧಾನದಂಥ ಸಂವಿಧಾನವು (plan) ಆಸೇತುಹಿಮಾಚಲದಲ್ಲಿಯೂ ಇಲ್ಲ. ಭರತವರ್ಷದಲ್ಲಿ ಕೆಲವು ಕಟ್ಟಡಗಳು ಮಾತ್ರ ಗಜಪೃಷ್ಠಾಕೃತಿಯಾಗಿ ಒಂದು ತುದಿಯಲ್ಲಿ ವರ್ತುಲವಾಗಿವೆ (apsidal at one end). ಈ ಕಟ್ಟಡವಾದರೋ ಸೌತೆಯ ಕಾಯಿ ಹಾಗೆ ಎರಡು ತುದಿಗಳಲ್ಲಿಯೂ ವರ್ತುಲವಾಗಿದೆ. ಇಂಥ ಸಂವಿಧಾನದ ಕಟ್ಟಡಗಳು ಭರತವರ್ಷದಲ್ಲಿಲ್ಲ; ಇವನ್ನು ನೋಡಬೇಕಾದರೆ ರೋಮ ಪಟ್ಟಣಕ್ಕೆ ಹೋಗಬೇಕು. ಅಲ್ಲಿ ೧ನೆಯ ಶತಮಾನದ ಕೊನೆಯಲ್ಲಿದ್ದ ಟ್ರೇಜನ್ ಎಂಬ ಚಕ್ರವರ್ತಿ ಇಂಥ ಕಟ್ಟಡವನ್ನು ಕಟ್ಟಿಸಿದ್ದಾನೆ. ಇಂಥ ಕಟ್ಟಡಕ್ಕೆ ಬಸಿಲಿಕಾ (Basilica) ಎಂದು ಹೆಸರು. ಭರತವರ್ಷದಲ್ಲಿ ಎಲ್ಲಿಯೂ ದೃಗ್ಗೋಚರವಾಗದ ಇಂಥ ಸಂವಿಧಾನವನ್ನು ಏರ್ಪಡಿಸಿ ಈ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳ ಚಾತುರ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಇದು ಹಾಗಿರಲಿ. ದೇವಸ್ಥಾನದ ನವರಂಗದೊಳಗೆ ೧೨ ಚಿತ್ರಮಯವಾದ ಕಂಭಗಳಿವೆ. ಒಂದೊಂದು ಕಂಭದ ಮೇಲೆಯೂ ಮೇಷ, ವೃಷಭ ಮುಂತಾದ ೧೨ ರಾಶಿಗಳ ಚಿಹ್ನೆಗಳಲ್ಲಿ ಒಂದು ಅಂಕಿತವಾಗಿದೆ. ಆಯಾ ಚಿಹ್ನೆಕ್ಕೆ ಅನುಗುಣವಾಗಿ ಆಯಾ ಕಂಭದ ಮೇಲೆ ಆಯಾ ತಿಂಗಳಲ್ಲಿ ಸೂರ್ಯರಶ್ಮಿ ಬೀಳುವಂತೆ ಕಂಭಗಳನ್ನು ನಿಲ್ಲಿಸಿರುವ ಶಿಲ್ಪಿಕೌಶಲವು ಯಾರಿಗೆ ತಾನೆ ಆಶ್ಚರ್ಯವನ್ನು ಉಂಟುಮಾಡದು?

ಕನ್ನಡನುಡಿಗೆ ಪ್ರೋತ್ಸಾಹ.

ಪೂರ್ವದಿಂದಲೂ ಕನ್ನಡನುಡಿ ರಾಜರುಗಳ ಮತ್ತು ಮಂಡಲಿಕರ ಪ್ರೋತ್ಸಾಹದಿಂದ ಏಳಿಗೆಯನ್ನು ಹೊಂದಿರುತ್ತದೆ. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಕಾಳಚುರ್ಯರು, ಕಾಕತೀಯರು, ಹೊಯ್ಸಳರು, ವೆಂಗಿಯ ಅರಸರು ಅಥವಾ ಪೂರ್ವದೇಶದ ಚಾಲುಕ್ಯರು, ವಿಜಯನಗರದ ಅರಸರು, ಮೈಸೂರರಸರು, ಸೌಂದತ್ತಿಯ ರಟ್ಟರು, ಕರಹಾಟದ ಶಿಲಾಹಾರರು, ಸಾಂತರರು, ಕೊಂಗಾಳ್ವರು, ಚಿಂಗಾಳ್ವರು, ತುಳುದೇಶದ ಅರಸರು, ಕೊಡಗು ಅರಸರು, ಉಮ್ಮತ್ತೂರು, ನುಗ್ಗೆಹಳ್ಳಿ, ಸುಗಟೂರು, ಅವತಿ, ಇಕ್ಕೇರಿ, ಬೇಲೂರು, ಚಿತ್ರದುರ್ಗ, ಕಳಲಿ, ಪಿರಿಯಾಪಟ್ಟಣ, ಹದಿನಾಡು, ಚಿಕ್ಕನಾಸುಕನಹಳ್ಳಿ, ಮುದಿಗೆರೆ, ಬಿಜ್ಜವರ, ಈ ಸ್ಥಳಗಳ ಪಾಳೆಯಗಾರರು, ಜೆಟ್ಟರು ಇವರುಗಳಲ್ಲಿ ಕೆಲವರು ಸ್ವತಃ ಕವಿಗಳಾಗಿದ್ದುದಲ್ಲದೆ ಅನೇಕರು ಕವಿಗಳಿಗೆ ಪೋಷಕರಾಗಿ ಬಹಳ ಪ್ರೋತ್ಸಾಹವನ್ನು ಉಂಟುಮಾಡಿದ್ದಾರೆ. ಈ ಪ್ರಭುಗಳು ಮಾತ್ರವಲ್ಲದೆ ಇವರ ಕೈಯಕೆಳಗೆ ದೊಡ್ಡ ದೊಡ್ಡ ಪದವಿಗಳನ್ನು ವಹಿಸಿದ್ದ ಮಂತ್ರಿಗಳು, ದಂಡನಾಯಕರು, ಪಸಾಯಿತರು ಮುಂತಾದ ಅಧಿಕಾರಿಗಳಲ್ಲಿಯೂ ಕೆಲವರು ಕವಿಗಳಾಗಿಯೂ, ಹಲವರು ಕವಿಪೋಷಕರಾಗಿಯೂ ಇದ್ದರು. ಅಲ್ಲದೆ ಚಿಕ್ಕ ಚಿಕ್ಕ ಪಾಳೆಯಪಟ್ಟಿಗೆ ವಿಭುಗಳಾದ ಹಲವರು ಗ್ರಂಥ ರಚನೆಯನ್ನು ಮಾಡಿದ್ದಾರೆ. ಈ ವಿಷಯವನ್ನು ಸ್ವಲ್ಪಮಟ್ಟಿಗೆ ಉದಾಹರಣಗಳೊಡನೆ ಕೆಳಗೆ ವಿವರಿಸುತ್ತೇನೆ.

ಗಂಗರು—ಈ ರಾಜರಲ್ಲಿ ಸುಮಾರು ೫೦೦ ರಲ್ಲಿದ್ದ ದುರ್ವಿನೀತನು ನೃಪತುಂಗನ ಕೇಳಿಕೆಯ ಪ್ರಕಾರ ಕನ್ನಡದಲ್ಲಿ ಗದ್ಯಗ್ರಂಥಕಾರನಾಗಿದ್ದಿರಬಹುದೆಂದು ತೋರುತ್ತದೆ. ಶಿವಮಾರನು (೭೮೦–೮೧೪) ಗಜಾಷ್ಟಕವನ್ನು ಬರೆದನೆಂದೂ ಅದು "ಒನಕೆವಾಡಾಸುದು" ಎಂದೂ ಒಂದು ಶಾಸನದಿಂದ (ನಗರ ೩೫) ತಿಳಿವುದರಿಂದ ಇದು ಕನ್ನಡ ಗ್ರಂಥವಾಗಿರಬಹುದೆಂದು ತೋರುತ್ತದೆ. ಮಹೇಂದ್ರಾಂತಕ ಎಂಬ ಬಿರುದುಳ್ಳ ಎರೆಯಪ್ಪನು (೮೮೬–೯೧೩) ಶೂದ್ರಕ, ಹರಿವಂಶ ಮೊದಲಾದ ಗ್ರಂಥಗಳನ್ನು ಬರೆದನೆಯ ಗುಣವರ್ಮನಿಗೆ ಪೋಷಕನಾಗಿದ್ದನು. ರಾಜಮಲ್ಲನ ಮಂತ್ರಿಯಾದ ಚಾವುಂಡರಾಯನು ೯೭೮ ರಲ್ಲಿ ಚಾವುಂಡರಾಯಪುರಾಣವನ್ನು ಬರೆದನು. ಈ ರಾಜನ ಮಿತ್ರನಾದ ರಕ್ಕಸಗಂಗನ ಆಶ್ರಿತನಾಗಿ ನಾಗವರ್ಮನು ಛಂದೋಂಬುಧಿ ಮೊದಲಾದ ಗ್ರಂಥಗಳನ್ನು ಬರೆದನು.

ರಾಷ್ಟ್ರಕೂಟರು—ಈ ದೊರೆಗಳಲ್ಲಿ ನೃಪತುಂಗನು ಕವಿಯಾಗಿದ್ದ ಸಂಗ
ತಿಳಿದೇ ಇದೆ. ೩ನೆಯ ಇಂದ್ರರಾಜನ (೯೧೫–೯೧೭) ಕೈಯಕೆಳಗಿದ್ದ ಶ್ರೀ ವಿಜಯ
ದಂಡನಾಥನಿಗೆ ಒಂದು ಶಾಸನದಲ್ಲಿ (E. I. X. ೧೫೦) ಅನುಪಮಕವಿ ಎಂಬ ಬಿ
ದು ಹೇಳಿದೆ. ೩ನೆಯ ಕೃಷ್ಣರಾಜನು (೯೫೭–೯೭೮) ಪೊನ್ನನಿಗೆ ಕವಿಚಕ್ರವರ್ತಿ ಎಂ
ಬಿರುದನ್ನು ಕೊಟ್ಟಂತೆ "ಕನ್ನರನಾದರದಿಂ ಕುಡೆ ಪೊನ್ನಂ ಕವಿಚಕ್ರವರ್ತಿ ವೆಸರ
ತಳೆದಂ" ಎಂಬ ಜನ್ನನ ಪದ್ಯಭಾಗದಿಂದ ತಿಳಿಯುತ್ತದೆ.

ಚಾಲುಕ್ಯರು—ಈ ವಂಶಕ್ಕೆ ಸೇರಿದ ಅರಿಕೇಸರಿ ಎಂಬ ಸಾಮಂತರಾಜನು ಅ
ಪಂಪನಿಗೆ ಪೋಷಕನಾಗಿ ಬಚ್ಚೆಸಾಸಿರದಲ್ಲಿ ಧರ್ಮಪುರವನ್ನು ಅಗ್ರಹಾರವಾಗಿ ಕೊಟ್ಟ
ನು. ತೈಲಪನು (೯೭೩–೯೯೭) ರನ್ನನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟಂ
"ಮನಮೊಸೆದು ತೈಲಪಂ ಕುಡೆ ರನ್ನಂ ಕವಿಚಕ್ರವರ್ತಿವೆಸರಂ ತಳೆದಂ" ಎಂಬ ಜನ್ನ
ಪದ್ಯಭಾಗದಿಂದ ತಿಳಿಯುತ್ತದೆ. ಅಹವಮಲ್ಲನ (೧೦೪೨–೧೦೬೮) ಆಶ್ರಿತನಾದ ಶ್ರೀಧರ
ಚಾರ್ಯನು ಜಾತಕತಿಲಕವೆಂಬ ಜ್ಯೋತಿಷಗ್ರಂಥವನ್ನು ೧೦೪೯ರಲ್ಲಿ ಬರೆದಿದ್ದಾನೆ. "ಧಾ
ಯನಾಹವಮಲ್ಲಭೂಮಿಪಾಳಕನೆಸೆದಾಳ್ಗೆ" ಎಂದು ಗ್ರಂಥಾಂತ್ಯದಲ್ಲಿ ಬರೆದಿದ್ದಾ
ಭುವನೈಕಮಲ್ಲನ (೧೦೬೮–೧೦೭೬) ಪಸಯಿತನಾದ ಲಕ್ಷ್ಮನೃಪನ ಕೈಯಕೆಳಗೆ ಮಂ
ಯಾಗಿ ಬನವಸೆಪನ್ನಿರ್ಘಾಸಿರಕ್ಕೆ ಅಧಿಕಾರಿಯಾಗಿದ್ದ ಶಾಂತಿನಾಥನು ಸುಕುಮಾರಚರಿ
ವೆಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ಇದೇ ರಾಜನ ಮಹಾಪ್ರಧಾನನಾದ ಅ
ಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದ ನಾಗವರ್ಮಾಚಾರ್ಯನು ಚಂದ್ರಚೂಡಾಮಣಿ
ಶತಕವನ್ನು ಬರೆದಿದ್ದಾನೆ. ಅಹವಮಲ್ಲನ ಮಗನಾದ ಜಯಸಿಂಹನ ಕೈಯಕೆಳಗೆ ಅ
ಕಾರಿಯಾಗಿದ್ದ ಮಾಚಿರಾಜನ ಆಶ್ರಿತನಾಗಿ ಚಂದ್ರರಾಜನು ಮದನತಿಲಕವೇ ಮೊ
ಲಾದ ಗ್ರಂಥಗಳನ್ನು ಬರೆದನು. ಅದೇ ಅಹವಮಲ್ಲನ ಮಗನೂ, ವಿಕ್ರಮಾದಿತ್ಯ
ತಮ್ಮನೂ ಆದ ಕೀರ್ತಿವರ್ಮನು ಗೋವೈದ್ಯವನ್ನು ಬರೆದಿದ್ದಾನೆ. ಅದೇ ರಾಜರ ಆ
ತನೂ, ಕೀರ್ತಿವರ್ಮನ ಮಿತ್ರನೂ ಆದ ಬ್ರಹ್ಮಶಿವನು ಸಮಯಪರೀಕ್ಷೆ, ತ್ರೈಲೋಕ್ಯ
ರಕ್ಷಾಮಣಿಸ್ತೋತ್ರ ಇವುಗಳನ್ನು ರಚಿಸಿದ್ದಾನೆ. ೨ನೆಯ ಜಗದೇಕಮಲ್ಲನಲ್ಲಿ (೧೧೫೯–
೧೧೫೦) ೩ನೆಯ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದಂತೆ "ಜನನಾಥಂ ಜ
ದೇಕನಲ್ಲಿ ಕಟಕೋಪಾಧ್ಯಾಯ ನಾನಾಗವರ್ಮಂ" ಎಂಬ ಜನ್ನನ ಪದ್ಯಭಾಗದಿಂ
ತಿಳಿಯುತ್ತದೆ. ಪಂಚತಂತ್ರವನ್ನು ಬರೆದ ದುರ್ಗಸಿಂಹನು ಇದೇ ರಾಜನಲ್ಲಿ ಸಂ
ವಿಗ್ರಹಿಯಾಗಿದ್ದಂತೆ ಹೇಳಿಕೊಂಡಿದಾನೆ. ಪಾವಣಗೆರೆಯ ಲಗಮೆಯ ಶಾಸನವ

ಬರೆದ ಮಧುಸೂದನದೇವನು ಇದೇ ರಾಜನ ಸಾಮಂತನಾದ ಉಚ್ಚಂಗಿಯ ವೀರ ಪಾಂಡ್ಯನಿಂದ ಪೂಜಿತನಾಗಿದ್ದಂತೆ ತಿಳಿಯುತ್ತದೆ.

ಕಾಳಚುರ್ಯರು—ಬಿಜ್ಜಳನ (೧೧೫೬–೧೧೬೭) ಕಾಲದಲ್ಲಿ ಬಸವ, ಚೆನ್ನಬಸವ, ಕೊಂಡಗೂಳಿಕೇಶಿರಾಜ ಮುಂತಾದ ವೀರಶೈವರು ಗ್ರಂಥಗಳನ್ನು ಬರೆದಿದ್ದಾರೆ. ಈ ಕಾಲದಲ್ಲಿ ವೀರಶೈವಮತಕ್ಕೆ ಸಂಬಂಧಿಸಿದ ಅನೇಕ ವಚನಗ್ರಂಥಗಳು ಹುಟ್ಟಿದುವು.

ಕಾಕತೀಯರು—ಪ್ರತಾಪರುದ್ರನ ಸಭೆಯಲ್ಲಿ ರಾಘವಾಂಕನು ವೀರೇಶ್ವರಚರಿತೆಯನ್ನು ಓದಿ ವಾದಿಗಳನ್ನು ಜಯಿಸಿದಂತೆ ಹೇಳಿದೆ. ಮತ್ತೊಬ್ಬ ಪ್ರತಾಪರುದ್ರನ ಕಾಲದಲ್ಲಿ ಸೋಮೇಶ್ವರಶತಕವನ್ನು ಬರೆದ ಪಾಲ್ಕುರಿಕೆ ಸೋಮನು ಬಾಳಿದಂತೆ ತಿಳಿಯುತ್ತದೆ.

ಹೊಯ್ಸಳರು—ಗನೆಯ ಬಲ್ಲಾಳನ (೧೧೦೦-೧೧೭೬) ಕಾಲದಲ್ಲಿ ಅಭಿನವ ಪಂಪನು ಇದ್ದಂತೆ ಕಂತಿಯ ಚರಿತದಿಂದ ತಿಳಿಯುತ್ತದೆ. ವಿಷ್ಣುವರ್ಧನನ (೧೧೧೧–೧೧೪೧) ಕಾಲದಲ್ಲಿ ರಾಜಾದಿತ್ಯನು ಕ್ಷೇತ್ರಗಣಿತವೇ ಮೊದಲಾದ ಗ್ರಂಥಗಳನ್ನು ಬರೆದನು. ಜನ್ನನ ತಂದೆಯಾದ ಸುಮನೋಬಾಣನು ಒಂದನೆಯ ನರಸಿಂಹನ (೧೧೪೧–೧೨೩) ಕಟಕೋಪಾಧ್ಯಾಯನಾಗಿದ್ದಂತೆ "ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾ ನ್ಯಾಯಂ ಸುಮನೋಬಾಣಂ" ಎಂಬ ಜನ್ನನ ಪದ್ಯಭಾಗದಿಂದ ವ್ಯಕ್ತವಾಗುತ್ತದೆ. ಇದೇ ರಾಜನ ಕರಣಿಕನಾದ ಹರೀಶ್ವರನೂ, ಮಂತ್ರಿಯಾದ ಕೆರೆಯ ಪದ್ಮರಸನೂ ಗ್ರಂಥಗಳನ್ನು ಬರೆದಿದ್ದಾರೆ. ೨ನೆಯ ಬಲ್ಲಾಳನ (೧೧೭೩–೧೨೨೦) ಮಂತ್ರಿಯಾದ ಪೊಚಿರಾಜನು ಕವಿತೆಯಲ್ಲಿ ಪೊನ್ನನಿಗೆ ಸಮಾನನಾಗಿದ್ದನೆಂದು ಒಂದು ಶಾಸನದಿಂದ (ಶಾಸನ ೧೪೯) ತಿಳಿಯಬರುತ್ತದೆ. ಅದೇ ರಾಜನ ಸೆಜ್ಜಿವಳ್ಳನಾದ ಪದ್ಮನಾಭನ ಕರ್ಣಾಟಕಥಾನುಸಾರವಾಗಿ ನೇಮಿಚಂದ್ರನು ಅರ್ಧನೇಮಿಯನ್ನು ಬರೆದಂತೆ ಹೇಳುತ್ತಾನೆ. ಇದೇ ರಾಜನ ಮಂತ್ರಿಯಾದ ಚಂದ್ರಮೌಳಿಯಿಂದ ಪೋಷಿತನಾಗಿ ರುದ್ರಭಟ್ಟನು ಜಗನ್ನಾಥವಿಜಯವನ್ನು ಬರೆದನು. ಅದೇ ರಾಜನ ಮಂತ್ರಿಯಾದ ವಸುಧೈಕಬಾಂಧವ ನೀಚರಸನ ಪ್ರೇರಣೆಯಿಂದ ಆಚಣ್ಣನು ವರ್ಧಮಾನಪುರಾಣವನ್ನು ಬರೆದಂತೆ ತಿಳಿಯು ತ್ತದೆ. ಇದೇ ದೊರೆಯಿಂದ ಕವಿಚಕ್ರವರ್ತಿಯೆಂಬ ಬಿರುದನ್ನು ತಾನು ಪಡೆದಂತೆ ಜನ್ನ ನು ಹೇಳುತ್ತಾನೆ. ೩ನೆಯ ನರಸಿಂಹನ (೧೨೨೦–೧೨೩೫) ಮಂತ್ರಿಯಾದ ಪೋಲಾಳ್ವ ಕಂಡನಾಥನು ಷಟ್ಪದೀರೂಪವಾದ ಹರಿಚಾರಿತ್ರವನ್ನು ಬರೆದಂತೆ ತಿಳಿಯುತ್ತದೆ. ಕೇತಿ ರಾಜನ ತಂದೆಯಾದ ಮಲ್ಲಿಕಾರ್ಜುನನು ಕಾವ್ಯಾಂಗಗಳ ವರ್ಣನಾರೂಪವಾದ ಸೂಕ್ತಿ ಸುಧಾರ್ಣವವನ್ನು ವೀರಸೋಮೇಶ್ವರನ (೧೨೩೩–೧೨೫೪) ವಿನೋದಾಕರ್ಣನಕ್ಕಾಗಿ ರಚಿಸಿದಂತೆ ಹೇಳುತ್ತಾನೆ.

ವೆಂಗಿಯ ಅರಸರು ಅಥವಾ ಪೂರ್ವದೇಶದ ಚಾಲುಕ್ಯರು — ಗುಣಗಾಂಕವಿಜಯಾದಿತ್ಯನ (ಲಳಿ-ಲುಲ) ಕಾಲದಲ್ಲಿ ಗುಣಗಾಂಕಿಯಂ ಎಂಬ ಕರ್ನಾಟಕ ಛಂದೋಗ್ರಂಥವು ಹುಟ್ಟಿದಂತೆ ಹಿಂದೆಯೇ ತಿಳಿಸಿದ್ದೇನೆ. ರಾಜರಾಜನ (೧೦೨೨-೧೦೬೩) ಆಸ್ಥಾನಕವಿಯಾದ ನನ್ನಯ್ಯಭಟ್ಟನಿಗೆ ಸಹಾಯಕನಾಗಿದ್ದ ನಾರಾಯಣಭಟ್ಟನು ಕನ್ನಡದಲ್ಲಿಯೂ ಕವಿಯಾಗಿದ್ದಂತೆಯೂ ಕವೀಭವಜ್ರಾಂಕುಶ ಎಂಬ ಬಿರುದನ್ನು ಪಡೆದಿದ್ದಂತೆಯೂ ಈ ಶ್ಲೋಕಗಳಿಂದ ತಿಳಿಯುತ್ತದೆ—

ಯಸ್ಸಂಸ್ಕೃತಕರ್ನಾಟಪ್ರಾಕೃತಪೈಶಾಚಿಕಾಂಧ್ರಭಾಷಾಸು ।
ಕವಿರಾಜಶೇಖರ ಇತಿ ಪ್ರಥಿತಸ್ಸು ಕವಿತ್ವವಿಭವೇನ ॥
ಕವೀನ್ಮನೀಷಾಲವದುರ್ವಿದಗ್ಧಾ ಮನೋಹರಾಭಿರ್ನಿಜಸೂಕ್ತಿಭಿರ್ಯಃ ।
ಕುರ್ವನ್ನಗರ್ವಾ ಪಟುಭಿರ್ಬಿಭರ್ತಿ ಕವೀಭವಜ್ರಾಂಕುಶನಾಮ ಸಾರ್ಥಂ ॥

ಸೌಂದತ್ತಿಯ ರಟ್ಟರು — ಪಾರ್ಶ್ವನಾಥಪುರಾಣವನ್ನು ಬರೆದ ಪಾರ್ಶ್ವಪಂಡಿತನು ೪ನೆಯ ಕಾರ್ತವೀರ್ಯನ (೧೨೦೨-೧೨೨೦) ಆಸ್ಥಾನಕವಿಯಾಗಿದ್ದನು. ಅದೇ ರಾಜನ ಕಾಲದಲ್ಲಿ ಬಾಳಚಂದ್ರಕವಿ ಕಂದರ್ಪನು ಬಾಳಿದಂತೆ ತಿಳಿಯುತ್ತದೆ. ಪುಷ್ಪದಂತಪುರಾಣವನ್ನು ಬರೆದ ೨ನೆಯ ಗುಣವರ್ಮನು ತಾನು ಅದೇ ದೊರೆಯ ಕೈಯ ಕೆಳಗೆ ನಾಲ್ಪ್ರಭುವಾಗಿದ್ದ ಶಾಂತಿವರ್ಮನ ಆಶ್ರಿತನೆಂದು ಹೇಳಿಕೊಂಡಿದ್ದಾನೆ.

ಕರಹಾಟದ ಶಿಲಾಹಾರರು — ಗಂಡರಾದಿತ್ಯನ ಮಗನಾದ ವಿಜಯಾದಿತ್ಯನ (೧೧೪೫) ತಮ್ಮ ಲಕ್ಷ್ಮಣರಾಜನ ಆಜ್ಞಾನುಸಾರವಾಗಿ ಕಣ್ಣವಾರ್ಯನು ನೇಮಿನಾಥಪುರಾಣವನ್ನು ಬರೆದಂತೆ ಹೇಳುತ್ತಾನೆ. ಅದೇ ಲಕ್ಷ್ಮಣರಾಜನ ಆಳಿಕೆಯಲ್ಲಿ ನೇಮಿಚಂದ್ರನು ಲೀಲಾವತಿಯನ್ನು ಬರೆದನು. ಈ ಗ್ರಂಥದ ಕೊನೆಯಲ್ಲಿ " ಧರೆಯುಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ " ಎಂದು ಹೇಳಿದೆ.

ಸಾಂತರರು — ತೈಲಪದೇವನ ಮಂತ್ರಿಯಾದ ಕನ್ನಗನಿಗೆ ೧೦೦೦ ರಲ್ಲಿ ಬರೆದ ಒಂದು ಶಾಸನದಲ್ಲಿ (ಸಾಗರ ೧೦೩) ವಿಬುಧಜನಮನಃಪದ್ಮಿನೀರಾಜಹಂಸ ಎಂಬ ಬಿರುದು ಉಕ್ತವಾಗಿದೆ.

ಕೊಂಗಾಳ್ವರು — ಚಂದ್ರನಾಥಾಷ್ಟಕವನ್ನು ಬರೆದ ಮೌಕ್ತಿಕಕವಿ ವೀರ ಕೊಂಗಾಳ್ವನ (ಸು. ೧೧೨೦) ಕಾಲದಲ್ಲಿ ಬಾಳಿದಂತೆ ತೋರುತ್ತದೆ.

ಚೆಂಗಾಳ್ವರು — ಸಂಯುಕ್ತ ಕೌಮುದಿ (೧೨೦೨) ಮುಂತಾದ ಗ್ರಂಥಗಳನ್ನು ಬರೆದ ೩ನೆಯ ಮಂಗರಸನು ತಾನು ಚೆಂಗಾಳರಾಜನ ಕುಲಕ್ಕಮಾಗತಮೆಂತಿಯಾದ

ಕಲ್ಲಹಳ್ಳಿಯ ಪ್ರಭು ವಿಜಯನ ಮಗನೆಂದು ಹೇಳಿಕೊಂಡಿದ್ದಾನೆ. ಚೆಂಗಾಳ್ವನಂಜರಾಯನ (೧೫೦೨–೧೫೨೩) ಆಳಿಕೆಯಲ್ಲಿ ನಂಜುಂಡನು ಕುಮಾರರಾಮಕಥೆಯನ್ನು ಬರೆದಂತೆ ತಿಳಿಯುತ್ತದೆ.

ತುಳುದೇಶದ ಅರಸರು— ಕಲ್ಯಾಣಕೀರ್ತಿ ತುಳುವದೇಶದ ದೊರೆ ಭೈರವನ ಸುತ ಪಾಂಡ್ಯರಾಯನ ಇಷ್ಟಾನುಸಾರವಾಗಿ ಜ್ಞಾನಚಂದ್ರಾಭ್ಯುದಯವನ್ನು ೧೪೯೯ರಲ್ಲಿ ಬರೆದಂತೆ ಹೇಳುತ್ತಾನೆ. ಸುಮಾರು ೧೫೦೦ರಲ್ಲಿ ಜೀವಂಧರಷಟ್ಪದಿಯನ್ನು ಬರೆದ ಕೋಟೀಶ್ವರನು ಹೈವನೃಪಸುತ ಸಂಗೀತಪುರದ ದೊರೆ ಸಂಗಮನ ಆಜ್ಞಾನುಸಾರವಾಗಿ ತನ್ನ ಗ್ರಂಥವನ್ನು ಬರೆದನು. ಭರತೇಶ್ವರಚರಿತೆಯನ್ನು ೧೫೫೫ರಲ್ಲಿ ಬರೆದ ರತ್ನಾಕರವರ್ಣೀ ತುಳುದೇಶದ ಭೈರಸ ಒಡೆಯರ ಸಭೆಯಲ್ಲಿ ಶೃಂಗಾರಕವಿ ಎಂಬ ಬಿರುದನ್ನು ಪಡೆದಂತೆ ತಿಳಿಯುತ್ತದೆ. ಭಾರತ, ರಸರತ್ನಾಕರ, ಶಾರದಾವಿಲಾಸ ಮುಂತಾದ ಗ್ರಂಥಗಳನ್ನು ರಚಿಸಿದ ನಾಳ್ವನು (ಸು. ೧೫೭೦) ತೌಳವಹೈನ ಕೊಂಕಣದೇಶಾಧಿನಾಥನಾದ ಸಾಳ್ವಮಲ್ಲನ ಆಸ್ಥಾನಕವಿಯಾಗಿದ್ದನು. ಬಾಹುಬಲಿ (ಸು. ೧೫೬೦) ಕೆಲವನೆ ಸಿಂಹಾಸನದ ಅರಿರಾಯರ ಗಂಡರದಾವಣಿ ಭೈರವೇಂದ್ರನ ಆಜ್ಞಾನುಸಾರವಾಗಿ ನಾಗಕುಮಾರಚರಿತೆಯನ್ನು ಬರೆದನು. ಅರಿರಾಯರ ಗಂಡರದಾವಣಿ ಭೈರವನೃಪನ ಆಜ್ಞೆಯಿಂದ ಚಂದ್ರಮನು ೧೬೪೬ರಲ್ಲಿ ಕಾರ್ಕಳದ ಗೊಮ್ಮಟೇಶ್ವರ ಚರಿತೆಯನ್ನು ರಚಿಸಿದನು. ಗೇರಸೊಪ್ಪೆಯ ದೊರೆ ಭೈರವರಾಯನ ಆಳಿಕೆಯಲ್ಲಿ ಆದಿಯಪ್ಪನು (ಸು. ೧೬೫೦) ಧನ್ಯಕುಮಾರ ಚರಿತೆಯನ್ನು ಬರೆದನು. ಅಹಿಂಸಾಚರಿತೆಯನ್ನು ೧೬೪೮ರಲ್ಲಿ ರಚಿಸಿದ ಪಾಯಣ್ಣನು ಸಂಗೀತಪುರದರಸ ಸಂಗಮರಾಯಪುತ್ರನ ಆಶ್ರಿತನಾಗಿದ್ದನು. ರಾಮಚಂದ್ರಚರಿತ್ರದ ಪೂರ್ವಭಾಗವನ್ನು ಬರೆದ ಚಂದ್ರಶೇಖರನು ತುಳುದೇಶದ ಲಕ್ಷ್ಮಣಬಂಗರಾಜನ ಆಸ್ಥಾನಕವಿ. ತೌಳವದೇಶದ ಮೂಲಿಕೆಯ ರಾಜನಾದ ಚನ್ನರಾಯನಿಂದ ಪೋಷಿತನಾಗಿ ಪದ್ಮನಾಭನು ರಾಮಚಂದ್ರಚರಿತ್ರದ ಉತ್ತರಭಾಗವನ್ನು ೧೭೫೫ರಲ್ಲಿ ರಚಿಸಿದನು.

ಕೊಡಗು ಅರಸರು—ವೀರರಾಜೇಂದ್ರನು ೧೮೯೮ರಲ್ಲಿ ರಾಜೇಂದ್ರನಾಮೆಯನ್ನು ಬರೆದನು.

ತೌಟರು–ಚೆನ್ನಮಾಂಬಿಯ ಆಳಿಕೆಯಲ್ಲಿ ತಿರುಮಲಸಾಮಂತನ ಕೋಶಾಧ್ಯಕ್ಷ ಪದ್ಮರಾಜನು (ಸು. ೧೬೨೦) ಪದ್ಮಾವತೀಚರಿತೆಯನ್ನೂ, ಅಬ್ಬಕ್ಕದೇವಿಯ ಆಳಿಕೆ

ಯಲ್ಲಿ ಪಟ್ಟಾಭಿರಾಮನು (ಸು. ೧೬೨೫) ರತ್ನಶೇಖರ ಚರಿತ್ರೆಯನ್ನೂ, ಚಂದ್ರಶೇಖರ
ಚಿಕ್ಕರಾಯನ ರಾಣಿವಾಸದ ಚೆನ್ನಮ್ಮದೇವಿಯ ಆಜ್ಞಾನುಸಾರವಾಗಿ ಸುರಾಲನ
೧೬೬೦ರಲ್ಲಿ ಪದ್ಮಾವತೀ ಚರಿತೆಯನ್ನೂ ರಚಿಸಿದಂತೆ ತಿಳಿಯುತ್ತದೆ.

ವಿಜಯನಗರದ ಅರಸರು–ಕನ್ನಡಕ್ಕೆ ಈ ದೊರೆಗಳ ಪ್ರೋತ್ಸಾಹವು ಕಡಿಮೆ
ಎಂದು ಕೆಲವರಿಗೆ ಭಾವನೆಯಿರುವಂತೆ ತೋರುತ್ತದೆ. ಈ ಭಾವನೆಗೆ ಎಷ್ಟರ ಮಟ್ಟಿಗೆ
ಆಧಾರವಿದೆ ಎಂಬುದನ್ನು ಕೆಳಗಣ ವಿಷಯಗಳು ವ್ಯಕ್ತಪಡಿಸದೆ ಇರಲಾರವು. ವಿಜಯ
ನಗರದ ಸಂಸ್ಥಾನವು ಸ್ಥಾಪಿತವಾದಂದಿನಿಂದ ಕೊನೆಯವರೆಗೆ ಆ ವಂಶದ ದೊರೆಗಳ
ಪ್ರೋತ್ಸಾಹವು ಕನ್ನಡಕ್ಕೆ ಲಭಿಸಿದೆ. ೧ನೆಯ ಹರಿಹರನ (೧೩೩೬–೧೩೫೭) ಆಳಿಕೆ
ಯಲ್ಲಿ ಮುಗುಳಿಯುರದ ಅಧಿಪನಾದ ೧ನೆಯ ಮಂಗರಾಜನು ವಿಷಚಿಕಿತ್ಸಾರೂಪ
ವಾದ ಖಗೇಂದ್ರಮಣಿ ದರ್ಪಣವನ್ನು ರಚಿಸಿದನು. ಗ್ರಂಥಾಂತ್ಯದಲ್ಲಿ "ಧರೆಗನುರಾ
ಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂದು ಹೇಳಿದ್ದಾನೆ. ಧರ್ಮನಾಥ
ಪುರಾಣವನ್ನು ಬರೆದ ಮಧುರನು ೨ನೆಯ ಹರಿಹರನ (೧೩೭೭–೧೪೦೪) ಆಸ್ಥಾನ
ಕವಿಯಾಗಿದ್ದನು. ೧ನೆಯ ಬುಕ್ಕನ (೧೩೫೫–೧೩೭೭) ಮಗನಾದ ಕಂಪರಾಜನ
ಪುತ್ರ ದೇವರಾಜನು ಸೊಬಗಿನಸೋನೆ, ಅಮರುಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ.
೨ನೆಯ ದೇವರಾಯನ (೧೪೧೯–೧೪೪೬) ಆಳಿಕೆಯಲ್ಲಿ ವೀರಶೈವ ಕವಿಗಳಿಗೆ ವಿಶೇಷ
ಪ್ರೋತ್ಸಾಹವುಂಟಾಗಿ ಅನೇಕ ಗ್ರಂಥಗಳು ಹುಟ್ಟಿದುವು. ಈ ರಾಜನ ಮಂತ್ರಿಗಳಲ್ಲಿ
ಲಕ್ಕಣ್ಣದಂಡೇಶನು ಶಿವತತ್ವಚಿಂತಾಮಣಿಯನ್ನೂ, ಜಕ್ಕಣಾರ್ಯನು ನೂರೊಂದು
ಸ್ಥಲವನ್ನೂ ಬರೆದಿದ್ದಾರೆ. ಇವನ ಮಹಾಪ್ರಧಾನನಾದ ಗುರುರಾಜನ ಪ್ರೇರಣೆಯಿಂದ
ಚಂದ್ರಕವಿ ವಿರೂಪಾಕ್ಷಸ್ತಾನ ಮೊದಲಾದ ಗ್ರಂಥಗಳನ್ನು ರಚಿಸಿದನು. ಅಲ್ಲದೆ ಈ
ದೊರೆಯ ಪ್ರೋತ್ಸಾಹದಿಂದ ಚಾಮರಸನು ಪ್ರಭುಲಿಂಗಲೀಲೆಯನ್ನೂ ಮಗ್ಗೆಯ
ಮಾಯಿದೇವನು ಶತಕತ್ರಯವನ್ನೂ ಗುರುಬಸವನು ಶಿವಯೋಗಾಂಗಭೂಷಣವೇ
ಮುಂತಾದ ಸಪ್ತಕಾವ್ಯಗಳನ್ನೂ ಬತ್ತಲೇಶ್ವರನು ರಾಮಾಯಣವನ್ನೂ ರಚಿಸಿದರು.
ತುಮಾರವ್ಯಾಸನೂ ಇದೇ ರಾಜನ ಆಳಿಕೆಯಲ್ಲಿ ಭಾರತವನ್ನು ಬರೆದಂತೆ ತೋರುತ್ತದೆ.
ದೇವರಾಯನ ಮಗ ಮಲ್ಲಿಕಾರ್ಜುನನ (೧೪೪೬–೧೪೬೫) ಆಳಿಕೆಯಲ್ಲಿ ಕಲ್ಲರಸನು
ಜನವಶ್ಯವನ್ನು ಬರೆದಿದ್ದಾನೆ. ಷಟ್ಸ್ಥಲಜ್ಞಾನಸಾರಾಮೃತವನ್ನು ರಚಿಸಿದ ತೋಂಟದ
ಸಿದ್ಧಲಿಂಗನು ವಿರೂಪಾಕ್ಷನ (೧೪೬೨–೧೪೭೭) ಆಳಿಕೆಯಲ್ಲಿ ಬಾಳಿದನು. ಕವಿ
ಲಿಂಗನಪದ ಎಂಬ ಗ್ರಂಥವನ್ನು ರಚಿಸಿದ ಕವಿಲಿಂಗನು ಸಾಳುವ ನರಸಿಂಗರಾ

(೧೪೮೭-೧೫೪೩) ಆಸ್ಥಾನಕವಿಯಾಗಿದ್ದನು. ಶ್ರೀಪಾದರಾಯರೆಂಬ ಮಾಧ್ವಗುರು ಈ ರಾಜನಿಂದ ಸನ್ಮಾನಿತರಾಗಿದ್ದಂತೆ —

ಶ್ರೀಮದ್ವೀರನೃಸಿಂಗರಾಜನೃಪತೇರ್ಭೂದೇವಹತ್ಯಾವ್ಯಥಾಂ ।
ದೂರೀಕೃತ್ಯತದರ್ಪಿತೋಜ್ವಲಮಹಾಸಿಂಹಾಸನೇ ಸಂಸ್ಥಿತಃ ॥

ಎಂಬ ಶ್ರೀಪಾದರಾಯಾಷ್ಟಕದ ಶ್ಲೋಕದಿಂದ ತಿಳಿಯುತ್ತದೆ. ಕೃಷ್ಣರಾಯನ (೧೫೧೦-೧೫೩೯) ಆಜ್ಞಾನುಸಾರವಾಗಿ ತಿಮ್ಮಣ್ಣಕವಿ ಭಾರತದ ಉತ್ತರ ಭಾಗವನ್ನು ಬರೆದನು. ವ್ಯಾಸರಾಯರೆಂಬ ಮಾಧ್ವಗುರು ಈ ದೊರೆಯಿಂದ ಮನ್ನಣೆಯನ್ನು ಹೊಂದಿದಂತೆ ತಿಳಿಯುತ್ತದೆ. ಚಾಟುವಿಠ್ಠಲನಾಥ ಎಂಬ ಬಿರುದುಳ್ಳ ಸದಾನಂದಯೋಗಿ ಅಚ್ಯುತರಾಯನ ಆಳಿಕೆಯಲ್ಲಿ ಭಾಗವತವನ್ನು ಬರೆದಂತೆ ತೋರುತ್ತದೆ. ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನ ಗುರುವಾದ ಭಟ್ಟಾಕಳಂಕನು ಶ್ರೀರಂಗರಾಯನ (೧೫೭೨-೧೬೧೪) ಆಸ್ಥಾನದಲ್ಲಿ ಆತನ ಪ್ರೇರಣೆಯಿಂದ ಸಾರತ್ರಯವನ್ನೂ ಅಲಂಕಾರತ್ರಯವನ್ನೂ ಓದಿ ಕೀರ್ತಿವಡೆದಂತೆ—

ಶ್ರೀರಂಗರಾಜನೃಪತಿ । ಪ್ರೇರಣೆಯಿಂ ವಿಜಯಮುನಿಪನುಪದೇಶನದಿಂ ।
ಸಾರತ್ರಿತಯಮುಮನಲಂ । ಕಾರತ್ರಿತಯಮುಮನೋದಿ ಜಸಮಂ ಪಡೆದಂ॥

ಎಂಬ ಬಿಳಿಗಿ ತಾಲ್ಲೂಕಿನಲ್ಲಿರುವ ಒಂದು ಶಾಸನದ ಪದ್ಯದಿಂದ ತಿಳಿಯುತ್ತದೆ. ಅದೇ ಶಾಸನದಿಂದ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನು ಪನುಗೊಂಡೆ ವೆಂಕಟಪತಿರಾಯನ (೧೬೨೮-೧೬೭೭) ಆಳಿಕೆಯಲ್ಲಿ ಬಾಳಿದಂತೆ ತಿಳಿಯುತ್ತದೆ.

ಸಲಕರಾಜನ ಮಗನಾದ ತಿರುಮಲರಾಜನು ಕಾಲಜ್ಞಾನವನ್ನು ಬರೆದ ಎಮ್ಮೆಡಸವನೆಂಬ ವೀರಶೈವಗುರುವಿಗೆ ಕೊಮರಕೆರೆ ಎಂಬ ಗ್ರಾಮವನ್ನು ೧೫೫೫ರಲ್ಲಿ ಕೊಟ್ಟಂತೆ ಒಂದು ಶಾಸನದಿಂದ ತಿಳಿಯುತ್ತದೆ. ಈ ಗುರುವನ್ನು ಸ್ತುತಿಸುವ ಕೆಳಗಣ ಪದ್ಯದಿಂದ ಹಂಪೆಯಬಳಿ ಬಿಟ್ಟದ ಮೇಲಿರುವ ಜಂಬುನಾಥನು ಇವನಿಗೆ ಉಪಾಸ್ಯದೇವತೆಯೆಂದು ತಿಳಿವುದರಿಂದ ಇವನ ಸ್ಥಳವು ಹಂಪೆಯೇ ಆಗಿರಬಹುದು—

ಜಾಂಬೂನದಾದ್ರಿಕೋದಂಡಜಂಬುನಾಥಪ್ರಭಾವತಃ ।
ಪ್ರಾಪ್ತಕಾಲತ್ರಯೋದಂತಪರಿಜ್ಞಾನಾಯ ಧೀಮತೇ ॥

ಮೈಸೂರರಸರು— ಇವರು ಕನ್ನಡನುಡಿಗೆ ಪ್ರೋತ್ಸಾಹವನ್ನು ಮಾಡಿರುವ ಗತಿ ಪ್ರಸಿದ್ಧವಾಗಿಯೇ ಇದೆ. ರಾಜನೃಪನ (೧೫೭೮-೧೬೧೭) ಪ್ರಧಾನಿಯಾದ ಸಮಲಾರ್ಯನು ಕಣ್ವವೃತ್ತಾಂತ ಕಥೆಯನ್ನು ಬರೆದಿದ್ದಾನೆ. ಈ ಕವಿಯ ದೌಹಿತ್ರನೇ

ಚಿಕ್ಕದೇವರಾಯನಲ್ಲಿ ಮಂತ್ರಿಯಾಗಿದ್ದ ತಿರುಮಲಾರ್ಯನು. ಚಾಮರಾಜನು (೧೬೧೭–೧೬೩೭) ರಾಮಾಯಣ, ಬ್ರಹ್ಮೋತ್ತರಖಂಡ ಇವುಗಳನ್ನು ರಚಿಸಿದನು. ಇವನ ಪ್ರೋತ್ಸಾಹದಿಂದ ರಾಮಚಂದ್ರನು ಅಶ್ವತಾಸ್ತ್ರವನ್ನೂ, ಪದ್ಮಣಪಂಡಿತನು ಹಯಸಾರ ಸಮುಚ್ಚಯವನ್ನೂ ಬರೆದರು. ಭಾರತಿನಂಜ, ಗೋವಿಂದವೈದ್ಯ ಇವರು ಕಂಠೀರವ ನರಸರಾಜನ (೧೬೫೮–೧೬೫೯) ಪೋಷಣೆಯಲ್ಲಿ ಕಂಠೀರವನರಸರಾಜ ವಿಜಯವನ್ನು ಬರೆದರು. ಭಾಸ್ಕರನು ಇದೇ ರಾಜನ ಆಶ್ರಿತನಾಗಿ ಬೇಹಾರಗಣಿತವನ್ನು ರಚಿಸಿದನು. ಚಿಕ್ಕದೇವರಾಜನು (೧೬೭೨–೧೭೦೪) ಸ್ವತಃ ಕವಿಯಾಗಿಯೂ, ಕವಿಪೋಷಕನಾಗಿಯೂ ಇದ್ದನು. ಇವನು ಚಿಕ್ಕದೇವರಾಜವಿನ್ನಪ, ಗೀತಗೋಪಾಲ ಮೊದಲಾದ ಗ್ರಂಥಗಳನ್ನು ಮಾಡಿದನು. ಇವನ ಆಶ್ರಿತರಲ್ಲಿ ತಿರುಮಲಾರ್ಯನು ಅಪ್ರತಿಮವೀರಚರಿತೆ ಮೊದಲಾದ ಗ್ರಂಥಗಳನ್ನೂ, ಚಿಕ್ಕುಪಾಧ್ಯಾಯನು ವಿಷ್ಣುಪುರಾಣ, ಕಮಲಾಚಲಮಾ ಹಾತ್ಮ್ಯ ಮುಂತಾದುವನ್ನೂ, ತಿಮ್ಮಕವಿ ಯಾದವಗಿರಿ ಮಾಹಾತ್ಮ್ಯ ಮೊದಲಾದ ಗ್ರಂ ಥಗಳನ್ನೂ, ಮಲ್ಲಿಕಾರ್ಜುನನು ಶ್ರೀರಂಗಮಾಹಾತ್ಮ್ಯವನ್ನೂ, ಸಿಂಗರಾರ್ಯನು ಮಿತ್ರ ವಿಂದಾಗೋವಿಂದವೆಂಬ ನಾಟಕವನ್ನೂ, ವೇಣುಗೋಪಾಲವರಪ್ರಸಾದನು ಚಿಕ್ಕದೇವ ರಾಜವಂಶಾವಳಿಯನ್ನೂ, ಚಿದಾನಂದಕವಿ ಮುನಿವಂಶಾಭ್ಯುದಯವನ್ನೂ, ಮಲ್ಲರಸನ ದಶಾವತಾರಚರಿತೆಯನ್ನೂ, ಹೊನ್ನಮ್ಮನು ಹದಿಬದೆಯ ಧರ್ಮವನ್ನೂ ರಚಿಸಿದರು. ಈ ಕವಿಗಳಲ್ಲಿ ಚಿಕ್ಕುಪಾಧ್ಯಾಯನು ಸುಮಾರು ೩೦ ಗ್ರಂಥಗಳಿಗೆ ಮೇಲೆ ಬರೆದಿದ್ದಾನೆ ಗಿನೆಯ ಕೃಷ್ಣರಾಜನ (೧೭೧೩–೧೭೩೧) ಆಶ್ರಿತನಾಗಿ ಬಾಲವೈದ್ಯದ ಚೆಲುವನ ಕನ್ನಡಲೀಲಾವತಿ, ರತ್ನಶಾಸ್ತ್ರ ಇವುಗಳನ್ನು ಬರೆದನು. ರಾಮಾಯಣಂ ತಿರುಮಲೆಯಾ ಚಾರ್ಯ ಎಂಬ ಕವಿಯೂ ಈ ದೊರೆಯ ಆಶ್ರಿತನು. ಈ ರಾಜನ ಮಹಿಷಿಯಾದ ಚೆಲ್ವಾಂಬೆ ವರನಂದೀ ಕಲ್ಯಾಣ ಮೊದಲಾದ ಗ್ರಂಥಗಳನ್ನು ಬರೆದಿದ್ದಾಳೆ. ರಾಮಾಯಣ, ಇಂದ್ರ ರಾಭ್ಯುದಯ ಮೊದಲಾದ ಗ್ರಂಥಗಳನ್ನು ಬರೆದ ವೆಂಕಾಮಾತ್ಯನು ೨ನೆಯ ಕೃಷ್ಣರಾಜನ (೧೭೩೪–೧೭೬೬) ಆಶ್ರಿತನು. ಈ ರಾಜನ ಮಾವನಾದ ಗೋಪಾಲರಾಜನು ಕಮಲಾ ಚಲಮಾಹಾತ್ಮ್ಯವನ್ನು ರಚಿಸಿದ್ದಾನೆ. ಸಿಂಗರಾಚಾರ್ಯನು ಚಾಮರಾಜನ (೧೭೩೦–೧೭೭೬) ಆಶ್ರಿತನಾಗಿ ಶ್ರೀರಂಗಮಾಹಾತ್ಮ್ಯವನ್ನು ಬರೆದನು. ೩ನೆಯ ಕೃಷ್ಣರಾಯನ (೧೮೦೯–೧೮೬೮) ಸ್ವತಃ ಅನೇಕ ಗ್ರಂಥಗಳನ್ನು ರಚಿಸಿರುವದಲ್ಲದೆ ಕವಿಗಳಿಗೆ ಉದಾ ರಾಶ್ರಯವನ್ನು ಕೊಟ್ಟು ಕನ್ನಡಸಾಹಿತ್ಯವನ್ನು ವೃದ್ಧಿಗೊಳಿಸಿದ ಸಂಗತಿ ಸರ್ವಜನ ವಿದಿತವಾಗಿದೆ.

ಪಾಳೆಯಗಾರರು— ಉಮ್ಮತ್ತೂರು ವೀರನಂಜೇಂದ್ರನ (೧೪೬೨–೧೪೯೪) ಪ್ರೋತ್ಸಾಹದಿಂದ ನೀಲಕಂಠಾಚಾರ್ಯನು ಅರಾಧ್ಯಚಾರಿತ್ರವನ್ನೂ, ಅಚ್ಯುತರಾಯನ ಸಾಮಂತನಾದ ನುಗ್ಗೆಹಳ್ಳಿಯ ರಾಯಭೂಪರನ ಪ್ರೋತ್ಸಾಹದಿಂದ ಲಿಂಗಮಂತ್ರಿ ಕಬ್ಬಿಗರ ಕೈಪಿಡಿಯನ್ನೂ, ಸುಗಟೂರ ಪ್ರಭುವಾದ ಮುಮ್ಮಡಿತಮ್ಮನು ಶಂಕರಸಂಹಿತೆಯನ್ನೂ, ಅವತಿ ಸೊಣ್ಣಬೈರೆಗೌಡನ ಆಶ್ರಿತನಾದ ಚಿಕ್ಕರಸನು ಸೊಣ್ಣಬೈರೆಗೌಡನ ಚರಿತ್ರವನ್ನೂ, ಪಿರಿಯಪಟ್ಟಣದ ವಿರುಪರಾಜೇಂದ್ರನಿಂದ ಪ್ರೋಷಿತನಾಗಿ ದೊಡ್ಡಯ್ಯನು ಚಂದ್ರಪ್ರಭಚರಿತೆಯನ್ನೂ, ಹದಿನಾಡು ಚೆನ್ನರಾಜನ ಆಜ್ಞಾನುಸಾರವಾಗಿ ಎಳಂದೂರ ನಾರಸಿಂಹಭಟ್ಟನು ವೈದ್ಯಸಾರಸಂಗ್ರಹವನ್ನೂ, ಬೇಲೂರು ವೆಂಕಟಾದ್ರಿನಾಯಕನ (೧೬೨೬–೧೬೪೩) ಪ್ರೋತ್ಸಾಹದಿಂದ ಸೂರ್ಯಕವಿ ಕವಿಕಂಠಹಾರವನ್ನೂ, ಚಿತ್ರದುರ್ಗದ ಮದಕೇರಿರಾಜನ ಆಶ್ರಿತನಾದ ಚಂದ್ರಭೀಮಕವಿ ಮದಕೇರಿರಾಜೇಂದ್ರದಂಡಕವನ್ನೂ ಬರೆದರು. ಸೋಸಲೆ ರೇವಣಾಚಾರ್ಯನು ಚಿಕ್ಕನಾಯಕನಹಳ್ಳಿ ಮುದಿಯಪ್ಪನಾಯಕನ (೧೬೨೩) ಆಜ್ಞಾನುಸಾರವಾಗಿ ಮಹಿಮ್ನಸ್ತವಟೀಕೆಯನೂ, ಮುಪ್ಪಗೆರೆ ರಘುವಪ್ಪನಾಯಕನ ಪ್ರೇರಣೆಯಿಂದ ಶಿವಾಧಿಕ್ಯಶಿಖಾಮಣಿಟೀಕೆಯನ್ನೂ ರಚಿಸಿದನು. ವಿಜ್ಜವರದ ತೋಟದ ಸಿದ್ಧಲಿಂಗಭೂಪನ ಆಶ್ರಿತನಾದ ವಿರಕ್ತ ತೋಂಟದಾರ್ಯನು ಸಿದ್ಧೇಶ್ವರಪುರಾಣ ಕರ್ನಾಟಕ ಶಬ್ದಮಂಜರಿ ಮೊದಲಾದ ಗ್ರಂಥಗಳನ್ನು ಬರೆದನು. ವಿಜ್ಜವರದ ಇಮ್ಮಡಿ ಚಿಕ್ಕಭೂಪನ (೧೭೯೩) ಪ್ರೋತ್ಸಾಹದಿಂದ ಮಲ್ಲಿಕಾರ್ಜುನಕವಿ ಶಂಕರಕವಿಕೃತಬಸವಪುರಾಣಕ್ಕೆ ಟೀಕೆಯನ್ನು ಬರೆದನು. ಇಕ್ಕೇರಿ ವೆಂಕಟಪ್ಪನಾಯಕನ (೧೭೫೨–೧೭೯೫) ಆಜ್ಞೆಯಿಂದ ತಿರುಮಲಭಟ್ಟನು ಶಿವಗೀತೆಯನ್ನು ಬರೆದನು. ಬಸವಪ್ಪನಾಯಕನು (೧೮೨೩–೧೮೭೫) ಸೂಕ್ತಿಸುಧಾಕರವನ್ನು ರಚಿಸಿದನು. ಸೋಮಶೇಖರನಾಯಕನ (೧೮೭೫–೧೮೯೯) ಮಂತ್ರಿಯಾದ ನಿರ್ವಾಣಯ್ಯನು ಶಿವಪೂಜಾವಿಧಾನವನ್ನು ಬರೆದನು. ಕಳಲೆ ವೀರರಾಜನು ವೈದ್ಯಸಂಹಿತಾಸಾರಾರ್ಣವವನ್ನು ಬರೆದನು. ಇವನ ಆಶ್ರಿತನಾದ ಚೆನ್ನಯ್ಯನು ಪದ್ಮಿನೀಪರಿಣಯವನ್ನು ರಚಿಸಿದನು. ಕಳಲೆ ದೇವರಾಜನ ಆಶ್ರಿತನಾದ ರಂಗಯ್ಯನಿಂದ ತುಲಾಕಾವೇರೀಮಹಾತ್ಮ್ಯವು ರಚಿತವಾಯಿತು. ಕಳಲೆ ನಂಜರಾಜನು ಕಕುದ್ಗಿರಿಮಹಾತ್ಮ್ಯ ಮೊದಲಾದ ಅನೇಕಗ್ರಂಥಗಳನ್ನು ಬರೆದಿದ್ದಾನೆ. ಇವನ ಆಶ್ರಿತರಲ್ಲಿ ನೂರೊಂದನು ಸೌಂದರಕಾವ್ಯವನ್ನೂ ವೆಂಕಟೇಶನು ಹಾಲಾಸ್ಯಮಾಹಾತ್ಮ್ಯವನ್ನೂ ಬರೆದಿದ್ದಾರೆ.

ಅಲ್ಲದೆ ಕುಸುಮಾವಳಿಕಾವ್ಯವನ್ನು ಬರೆದ ದೇವಕವಿಗೆ (ಸು. ೧೬೦೦) ಚಿಕ್ಕ ರಾಜಚಮೂಪನೂ, ನೇಮಿನಾಥಪುರಾಣವನ್ನು ರಚಿಸಿದ ಮಹಾಬಲಕವಿಗೆ (೧೬೫೪) ಕೇತಯನಾಯಕನೂ, ದ್ವಾದಶಾನುಪ್ರೇಕ್ಷಾಕಾರನಾದ ವಿಜಯಣ್ಣನಿಗೆ (೧೪೪೮) ಬೆಳವಲನಾಡಿನ ವೆಮ್ಮನಭಾವಿಯ ಪ್ರಭು ಹೊನ್ನಬಂದಿಯ ದೇವರಾಜನೂ, ಸೌಂದರ್ಯಪುರಾಣಕರ್ತೃವಾದ ಬೊಮ್ಮರಸನಿಗೆ (ಸು. ೧೪೫೦) ಡೆಂಕಣಿಕೋಟೆ ಪುರವರಾಧೀಶ್ವರ ತಿಪ್ಪರಸನೂ ಪೋಷಕರಾಗಿದ್ದಂತೆ ಆ ಗ್ರಂಥಗಳಿಂದ ತಿಳಿಯುತ್ತದೆ.

ಇನ್ನು ಕೆಲವರು ಕವಿಗಳು ಕೆಲವು ಪ್ರಾಂತಗಳಿಗೂ ಗ್ರಾಮಗಳಿಗೂ ವಿಭುಗಳಾಗಿದ್ದಂತೆ ತಿಳಿಯುತ್ತದೆ. ಅವರುಗಳ ಹೆಸರನ್ನೂ ತತ್ಕೃತಗ್ರಂಥನಾಮವನ್ನೂ ಕೆಳಗೆ ಸೂಚಿಸುತ್ತೇನೆ—

ಕವಿ	ಗ್ರಂಥ	ಕಾಲ
ಚೋಳರಾಜನಾದ ಸೋಮನಾಥನ ಮಗ ಉದಯಾದಿತ್ಯ	ಉದಯಾದಿತ್ಯಾಲಂಕಾರ	ಸು ೧೧೫೫
ಇಂದುಶೇಖರರಾಜನಮಗ ಸೋಮರಾಜ	ಉದ್ಭಟ ಕಾವ್ಯ	೧೨೭೫
ಹಿರಿಯೂರಪ್ರಭು ಮಾಧವ	ಮಾಧವಾಲಂಕಾರ	ಸು ೧೩೫೦
ಚೋಳರಭೀಮ ಏಳುಬೀಡಿನ ಗೋವ ವಿರುಪರಾಜ	ತ್ರಿಭುವನತಿಲಕ	೧೩೫೦
ಚೋಳರಭೀಮ ಏಳುಬೀಡಿನ ಗೋವ ವೀರಭದ್ರರಾಜ	ವೀರಭದ್ರವಿಜಯ	ಸು ೧೩೫೦
ಕಾಕೊಳಲಧಿಪ ರಾಮಭೂಪತಿಪುತ್ರ ರಾಮೇಂದ್ರ	ಸೌಂದರ್ಯಕಥಾರತ್ನ	ಸು ೧೩೫೦
ಅಯ್ಯಣಭೂಪಪುತ್ರ ಅಣ್ಣಾಜಿ	ಸೌಂದರವಿಳಾಸ	ಸು ೧೬೫೦
ರಸವಾಳಿಪ್ರಭು ಬೊಮ್ಮರಸನ ಮಗ ಶೃಂಗಾರಕವಿ	ಕರ್ನಾಟಕಸಂಜೀವನ	ಸು ೧೬೫೦
ನೃಸಿಂಹರಾಜನ ಮಗ ವೀರಭದ್ರರಾಜ	ಪಾಲಕಾಪ್ಯಹಸ್ತ್ಯಾಯುರ್ವೇದ ಟೀಕೆ	ಸು ೧೭೦೦
ಜಕ್ಕಭೂಪಾಲ	ಭಾರತಕಥಾಸಂಗ್ರಹ	ಸು ೧೬೫೦
ಒಳ್ಳಳ್ಳಪುರದಪ್ರಭು ನರಹರಿ	ಪ್ರಹ್ಲಾದಚರಿತ್ರೆ	ಸು ೧೬೫೦
ಬೆಳಗೋಡ ಪ್ರಭು ವೀರಜನಪತಿ	ವಿಕ್ರಮವಿಲಾಸ	ಸು ೧೬೫೦
ಗಾಪುರಪುರೂವರಕಸುಬ್ಬೀಸ	ಗದಚರಿತ್ರೆ	ಸು ೧೬೫೦

ಬಸವರಾಜೇಂದ್ರ	ಮಹಾವಿಭೂತಿಮಹಿಮೆ	ಸು ೧೭೦೦
ನಂಜನಾಥಭೂಪಾಲ	ವೈದ್ಯಸಾರಸಂಗ್ರಹ	ಸು ೧೭೦೦
ಚೆನ್ನರಾಜ	ವೆಂಕಟೇಶ್ವರಶತಕ	ಸು ೧೭೫೦
ಶಿವವಿಜಯ ಲಿಂಗರಾಜೇಂದ್ರತನುಜ ನಂಜಯ್ಯ	ಕಪೋತವಾಕ್ಯ	ಸು ೧೭೫೦
ಶಾಲ್ಯದ ಕೃಷ್ಣರಾಜ	ಅನುಭವರಸಾಯನ, ವಿವೇಕಾಭರಣ ಇತ್ಯಾದಿ	೧೭೬೯

ಕನ್ನಡನುಡಿಯ ಪ್ರೋತ್ಸಾಹವನ್ನು ಕುರಿತು ಇಷ್ಟು ವಿಸ್ತಾರವಾಗಿ ನಿರೂಪಣ ಮಾಡಿ ನಿಮಗೆ ಬೇಸರವನ್ನು ಉಂಟುಮಾಡಿದೆನು. ಪೂರ್ವದಲ್ಲಿ ರಾಜರು ಮೊದಲು ಗೊಂಡು ಚಿಕ್ಕ ಅಧಿಕಾರಿಗಳವರೆಗೂ ಎಲ್ಲರೂ ಉತ್ಸಾಹದೊಡನೆ ಭಾಷಾಸೇವೆಯನ್ನು ಮಾಡುತ್ತಿದ್ದ ಅಂಶವು ತಮ್ಮ ಮನಸ್ಸಿಗೆ ಹತ್ತಬೇಕೆಂಬುದೇ ನನ್ನ ಉದ್ದೇಶ. ಈ ಗ್ರಂಥಕರ್ತೃಗಳಲ್ಲಿ ಅನೇಕರು ಖ್ಯಾತಿಲಾಭಪೂಜೆಗಳಲ್ಲಿ ದೃಷ್ಟಿಯಿಡದೆ ಲೋಕೋಪಕಾರಕ್ಕಾಗಿ ಕೆಲಸ ಮಾಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಪೂರ್ವಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಲ್ಲ. ಹಿಂದಿನ ಪ್ರೋತ್ಸಾಹದಲ್ಲಿ ಶತಾಂಶವಾದರೂ ಈಗ ಇದ್ದಿದ್ದ ಪಕ್ಷದಲ್ಲಿ ಕನ್ನಡನುಡಿ ಇಷ್ಟು ಹೀನ ಸ್ಥಿತಿಗೆ ಬರುತ್ತಿರಲಿಲ್ಲ.

ಕವಿಗಳ ಜನ್ಮಸ್ಥಾನ.

ಕನ್ನಡ ಕವಿಗಳಲ್ಲಿ ಸುಪ್ರಸಿದ್ಧರಾದ ಅನೇಕರಿಗೆ ಧಾರವಾಡ ಜಿಲ್ಲೆಯೂ ಅದಕ್ಕೆ ಸುತ್ತುಮುತ್ತಿನ ಪ್ರಾಂತವೂ ಜನ್ಮಸ್ಥಾನವಾಗಿದ್ದಿತು. ಈ ವಿಷಯವು ಕೆಳಗಣ ಪಟ್ಟಿಯಿಂದ ಸ್ಪಷ್ಟವಾಗಬಹುದು —

ಕವಿ.	ಗ್ರಂಥ.	ಕಾಲ.	ಜನ್ಮಸ್ಥಳ.
ಆದಿಪಂಪ	ಆದಿಪುರಾಣ ಇತ್ಯಾದಿ	೯೪೧	ಪುಲಿಗೆರೆ.
ಪೊನ್ನ	ಅಜಿತಪುರಾಣ ಇತ್ಯಾದಿ	೯೯೩	ಜಂಬುಖಂಡಿಗೆ ಸೇರಿದ ಮುದುವೊಳಲ್.
ನಾಗರಾಜಾರ್ಯ	ಜಾತಕತಿಲಕ	೧೦೮೯	ಬೆಳುವಲನಾಡಿನ ನರಿಗುಂದ.

ಅಭಿನವಪಂಪ	ರಾಮಾಯಣ ಇತ್ಯಾದಿ	ಸು. ೧೧೦೦	ವಿಜಯಪುರ (ಬಿಜಾಪುರ)
ನಯಸೇನ	ಧರ್ಮಾಮೃತ	೧೧೧೨	ಮುಳುಗುಂದ
ಬ್ರಹ್ಮಶಿವ	ಸಮಯಪರೀಕ್ಷೆ ಇತ್ಯಾದಿ	ಸು. ೧೧೨೫	ಪೊಟ್ಟಣಗೆರೆ
ದುರ್ಗಸಿಂಹ	ಪಂಚತಂತ್ರ	ಸು. ೧೧೭೫	ಕಿಸುಕಾಡಿನಲ್ಲಿಸಯ್
ಸಿದ್ಧರಾಮ	ಯೋಗಿನಾಥವಚನ ಇತ್ಯಾದಿ	ಸು. ೧೧೮೦	ಸೊನ್ನಲಿಗೆ
ಅಗ್ಗಳ	ಚಂದ್ರಪ್ರಭಪುರಾಣ	೧೧೮೯	ಇಂಗಳೇಶ್ವರ
ಅಚ್ಚಣ್ಣ	ವರ್ಧಮಾನ ಪುರಾಣ ಇತ್ಯಾದಿ	ಸು. ೧೧೯೫	ಪುಲಿಗೆರೆ
ಗುಣವರ್ಮ II	ಪುಷ್ಪದಂತಪುರಾಣ	ಸು. ೧೨೧೫	ಕೂಂಡಿ
ಚೌಂಡರಸ	ಅಭಿನವದಶಕುಮಾರಚರಿತೆ	ಸು. ೧೨೦೦	ಪಂತರಾಪುರ
ನಾಗರಾಜ	ಪುಣ್ಯಾಸ್ರವ	೧೨೧೨	ಮಾಸಿವಾಳ
ಅಭಿನವಚಂದ್ರ	ಅಶ್ವಶಾಸ್ತ್ರ	ಸು. ೧೨೦೦	ಬಾಗೆವಾಡಿ
ಕುಮಾರವ್ಯಾಸ	ಭಾರತ	ಸು. ೧೨೫೦	ಗದಗು
ಸುರಂಗಕವಿ	ತ್ರಿಷಷ್ಟಿಪುರಾತನಚರಿತ್ರೆ	ಸು. ೧೨೫೦	ಪುಲಿಗೆರೆ
ಕುಮಾರವಾಲ್ಮೀಕಿ	ರಾಮಾಯಣ	ಸು. ೧೨೫೦	ತೊರವೆ
ಕನಕದಾಸ	ಮೋಹನತರಂಗಿಣಿ ಇತ್ಯಾದಿ	ಸು. ೧೨೫೦	ಕಾಗಿನೆಲೆ
ಅದೃಶ್ಯಕವಿ	ಸ್ಕೌಢರಾಯನಕಾವ್ಯ	ಸು ೧೨೫೦	ತೊರೆಸಾಲ ಪರ ಕೊಲ್ಹಾಪುರ.
ಗೋವಿಂದ	ನಂದಿಮಾಹಾತ್ಮ್ಯ	ಸು. ೧೨೫೦	ಭೀಮರಥೀತೀರ ಖೇಡಬುಯ್ಯರ
ಸಿಂಹರಾಜ	ಚಿನ್ಮಯಚಿಂತಾಮಣಿ	ಸು. ೧೨೫೦	ಪುಲಿಗೆರೆ
ನಾರಸಿಂಹ	ಅನುಭವಶಿಖಾಮಣಿ	ಸು. ೧೨೫೦	ಕುರುತುಕೋಟೆ

ನೃಪತುಂಗನು ಕಿಸುವೊಳಲ್, ಕೊಪಣನಗರ, ಪುಲಿಗೆರೆ, ಒಂಕುಂದ ಇವೆ ಮಧ್ಯಪ್ರದೇಶವೇ ತಿರುಳುಗನ್ನಡದ ನೆಲೆಯೆಂದು ಹೇಳಿದ್ದಾನೆ. ಆದಿಪಂಪನು "ಗೆರೆಯಂ ತಿರುಳುಕನ್ನಡದೊಳ್" ತನ್ನ ಗ್ರಂಥವನ್ನು ಬರೆದುದಾಗಿ ಹೇಳಿದ್ದಾನೆ,

ದರಿಂದ ಧಾರವಾಡ ಜಿಲ್ಲೆಯಲ್ಲಿರುವ ಪುಲಿಗೆರೆಯ ಕನ್ನಡವು ಪೂರ್ವದಲ್ಲಿ ಕವಿಗಳಿಗೆ ಹರ್ಷಪ್ರಾಯವಾಗಿದ್ದಂತೆ ತಿಳಿಯುತ್ತದೆ. ಇದು ಈ ಪ್ರಾಂತದವರಿಗೆ ನಿಜವಾಗಿ ಯೂ ಹೆಮ್ಮೆಯನ್ನು ಉಂಟುಮಾಡಬೇಕಾದ ವಿಷಯವಿಷಯವಾಗಿದೆ. ಪ್ರಕೃತಸ್ಥಿ ತುಲ್ಲಿ ಇಲ್ಲಿಯ ಕನ್ನಡನುಡಿ ಕಾರಣಾಂತರಗಳಿಂದ ಸ್ವಲ್ಪ ಮಾರುಪಾಡುಗಳನ್ನು ತಾಳಿರಬಹುದು. ಅದನ್ನು ಸಾಧ್ಯವಾದ ಮಟ್ಟಿಗೆ ಪೂರ್ವಸ್ಥಿತಿಗೆ ತರವುದಕ್ಕೆ ಐಕ ಮತ್ಯದಿಂದಲೂ ಅಭಿಮಾನದಿಂದಲೂ ಪ್ರಯತ್ನಿಸಿದರೆ ಆ ಪ್ರಯತ್ನವು ಪ್ರಾಯಶಃ ಫಲವಾಗಲಿತರದೆಂದು ನಂಬಿದ್ದೇನೆ.

ಕನ್ನಡನುಡಿಯ ಈಗಿನ ಸ್ಥಿತಿ.

ಇದುವರೆಗೂ ಪೂರ್ವ ಚರಿತ್ರವನ್ನು ತಿಳಿಸಿದುದಾಯಿತು. ಈಗಲಾದರೋ ನ್ನಡನುಡಿ, ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃಷಿಮಾಡಿದ ನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹಪಡಬಹುದಾದಷ್ಟು ಹೀನ ತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಹೃದ ಯವು ತಾನೇ ಶೋಕರಸಪೂರಿತವಾಗದು ? ಯಾವ ದೇಶಬಾಂಧವನಾದ ಕನ್ನಡಿಗನ ಮುಖವು ತಾನೇ ಕಂದದು ? ಯಾವ ಭಾಷಾಭಿಮಾನಿಯಾವ ಕನ್ನಡಿಗನ ಕಣ್ಣು ತಾನೇ ರಿಂದ ತುಂಬದು ? ಈ ಹೀನಸ್ಥಿತಿಯನ್ನು ನಿವಾರಣ ಮಾಡಲಿಕ್ಕೆ ಬದ್ಧಕಂಕಣ ಗಿ ಸರ್ವಪ್ರಯತ್ನವನ್ನೂ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ನ ಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಡಿಗರಿಗೆ ತಮ್ಮ ಭಾಷೆಯಲ್ಲಿರಬೇಕಾದ ಅದರಾತಿಶಯಕ್ಕೆ ಪ್ರತಿಯಾಗಿ ಅಸಡ್ಡೆ ಗೊಂಡಿರುವುದು ಪ್ರಬಲಕಾರಣವೆಂದು ಹೇಳಬಹುದು ಅನೇಕರು ಕನ್ನಡ ಷೆಯಲ್ಲಿ ಮಾತನಾಡುವುದೂ ಪತ್ರಗಳನ್ನು ಬರೆವುದೂ ಅಪಮಾನಕರವೆಂದು ನಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೇ ? ಈಗಿನ ಶಿಕ್ಷ ಣಪದ್ಧತಿಯೂ ಈ ಅಸಡ್ಡೆಗೆ ಸಹಕಾರಿಯಾಗಿದೆ. ಪಾಠಶಾಲೆಗಳಲ್ಲಿ ಎಲ್ಲಾ ವಿಷಯ ಗಳನ್ನೂ ಇಂಗ್ಲಿಷ ಭಾಷೆಯಲ್ಲಿಯೇ ಕಲಿಸುತ್ತಾರೆ. ಬ್ರಿಟಿಶ ಕರ್ನಾಟಕದ ಪ್ರಾಂತ ದಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ದೊರೆವುದಿಲ್ಲ. ಭಾಷೆಗೂ ಸಾಹಿತ್ಯಕ್ಕೂ ರ್ವದಂತೆ ರಾಜರ ಪ್ರೋತ್ಸಾಹವಿಲ್ಲ. ನಮ್ಮಲ್ಲಿಯೂ ಇಂಗ್ಲಿಷ ಬಲ್ಲವರೇ ಬುದ್ಧಿ ಕ್ಷರು ದೇಶಬಾಂಧವ ಪಂಡಿತರು ಅಪ್ರಯೋಜಕರು ಎಂಬ ನಿಷ್ಕಾರಣವಾದ ಭಾವನೆ

ಹುಟ್ಟಿದೆ. ಸರಕಾರದ ಕಾಗದಪತ್ರಗಳೆಲ್ಲಾ ಇಂಗ್ಲಿಷ ಭಾಷೆಯಲ್ಲಿಯೇ ಇವೆ. ಮ
ಬಯಿ, ಮದ್ರಾಸ, ಕೊಡಗು ಎಂಬ ಬ್ರಿಟಿಶ ಕರ್ನಾಟಕದ ದೇಶವಿಭಾಗವು ಭಾಷೆ
ಅನವಸ್ಥೆಗೂ ಭಿನ್ನರೂಪತೆಗೂ ಕಾರಣವಾಗಿದೆ. ಮೇಲೆ ಹೇಳಿದ ಕಾರಣಗ
ಕೆಲವು ಪ್ರಕೃತಸ್ಥಿತಿಯಲ್ಲಿ ಅಪರಿಹಾರ್ಯವೆಂದು ತೋರಿದರೂ ನಮ್ಮಲ್ಲಿ ನೆಲೆಗೊ
ರುವ ಅಸಡ್ಡೆ ಎಂಬ ಪಿಶಾಚವನ್ನು ದೇಶಾಭಿಮಾನ ಭಾಷಾಭಿಮಾನಗಳೆಂಬ ಮಂತ್ರ
ಬಲದಿಂದ ಉಚ್ಚಾಟನ ಮಾಡಿದರೆ ಭಾಷೋನ್ನತಿಯು ಕೆಲಸವು ಕೂಡಿದಮಟ್ಟ
ಫಲಕಾರಿಯಾಗಬಹುದು.

ಕನ್ನಡನುಡಿಯ ಏಳಿಗೆಗೆ ಉಪಾಯಗಳು.

ಪೂರ್ವದಂತೆ ಉದ್ದಾಮಕವಿಗಳು ಹುಟ್ಟಬೇಕೆಂದಾಗಲಿ, ಪೂರ್ವದಂತೆ ರಾಜ
ಮಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿ
ಫಲವಿಲ್ಲ. ಪ್ರಕೃತಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊ
ಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನ
ನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವ
ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯಗ್ರಂಥಗಳೇ ಮೊದಲಾದುವನ್ನು ಅನ್ಯಭಾಷೆಗಳಿ
ಪರಿವರ್ತಿಸಬೇಕು. ಕೋಶಗಳನ್ನೂ ಸಾಂಕೇತಿಕಶಬ್ದಗಳ ಪಟ್ಟಿಯನ್ನೂ ಏರ್ಪಡಿ
ಬೇಕು. ಗ್ರಂಥಸ್ಥಭಾಷೆಗೆ ಏಕರೂಪತೆಯನ್ನು ಉಂಟುಮಾಡಬೇಕು. ವಿದ್ಯಾವ
ನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿ:ತ ವಿದ್ಯೆಯಲ್ಲಿ ಕಡಮೆಯಾದ ಕನ್ನಡ
ಉಪಯೋಗಾರ್ಥವಾಗಿ ಗ್ರಂಥನಿರ್ಮಾಣವನ್ನು ಮಾಡುವುದು ತನ್ನ ಕರ್ತವ್ಯವೆ
ತಿಳಿಯಬೇಕು. ಜ್ಞಾನವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆ
ಏಕೀಭಾವ, ಪರಸ್ಪರ ಮೈತ್ರಿ, ಮುದ್ರಣ ಸೌಕರ್ಯ, ಗ್ರಂಥಪ್ರಚಾರಕ್ಕೆ ಅನುಕೂ
ಇವುಗಳನ್ನು ಉಂಟುಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾಸಂಪಾದ
ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲಾ ಕರ್ನಾಟಕ ಭಾಗಗಳ ವಿದ್ವಾ
ರನ್ನು ಸೇರಿಸಿ ಒಂದು ಗ್ರಂಥಪರಿಶೀಲಕ ಮಂಡಲಿಯನ್ನೂ ಏರ್ಪಡಿಸಬಹುದು.

ಉಪಸಂಹಾರ.

ಭಕ್ತಶಿರೋಮಣಿಯಾದ ಕನಕದಾಸನು ಬಕ್ತಿರಸದಿಂದ ತುಂಬಿ ತುಳುಕುತ್ತಿ
ತನ್ನ ಹೃದಯದಲ್ಲಿ ಹಾಸ್ಯರಸಕ್ಕೂ ಸ್ಥಳ ಎಷ್ಟಿವಾಗಿದೆ ಎಂಬುದನ್ನು

ಬರೆದ ಗ್ರಂಥಗಳಲ್ಲಿ ರಾಗಿಯ ಮಹತ್ವವನ್ನು ಬೋಧಿಸುವ ರಾಮಧಾನ್ಯಚರಿತೆ ಎಂಬು
ಒಂದು. ಈ ಗ್ರಂಥದಲ್ಲಿ ಕವಿ ಈ ಧಾನ್ಯಕ್ಕೆ ನರೆದಲಿಗೆ ಎಂಬ ಹೆಸರನ್ನು ಹೇಳಿ
ಇದಕ್ಕೆ ಶ್ರೀರಾಮನು ರಾಘವ ಎಂಬ ತನ್ನ ಹೆಸರನ್ನು ಇಟ್ಟುದರಿಂದ ರಾಗಿ ಎಂಬ ಹೆಸ
ರು ಪ್ರಸಿದ್ಧಿಗೆ ಬಂದಿತೆಂದು ಹೇಳಿದ್ದಾನೆ. ಹಳೆಯ ಶಾಸನಗಳಲ್ಲಿ ಈ ಧಾನ್ಯದ ಹೆಸರು
" ರಾಘಿ " ಎಂದು ದೊರೆವುದು (ಮುಳುಬಾಗಿಲು ೧೬೨) ಈ ಹೇಳಿಕೆಗೆ ಉಪಸ್ಥಂಭ
ವಾಗಿದೆ. ಈ ಗ್ರಂಥದಲ್ಲಿ ರಾಗಿಗೂ ವ್ರೀಹಿ (ಭತ್ತ) ಗೂ ಸಂವಾದರೂಪವಾದ
೫ ಪದ್ಯಗಳು ದೊರೆಯುತ್ತವೆ—

ವ್ರೀಹಿಯ ಮಾತು.

ಕ್ಷಿತಿಯಮರರುಪನಯನದಲಿ ಸು । ವ್ರತಸುಭೋಜನಗಳಲಿ ಮಂತ್ರಾ ।
ಕ್ಷತೆಗಳಲಿ ಶುಭಶೋಭನದಲಾರತಿಯ ಬೆಳಗುವಲಿ ॥
ಕ್ರತುಗಳಿಡೆಯೊಳಗರಮನೆಗಳಲಿ । ಪ್ರತಿದಿನವು ರಂಜಿಸುತ ದೇವರಿ ।
ಗತಿಶಯದ ನೈವೇದ್ಯವಾಗಿಹೆನೆಂದನಾ ವ್ರಿಹಿಗ ॥
ಜನಪರಿಗೆ ಶಿಶುಗಳಿಗೆ ಬಾಂಧವ । ಜನರೆಡೆಗೆ ಬ್ರಾಹ್ಮರ ಸಮಾರಾ ।
ಧನಿಗೆ ವಿದ್ಯಾರಂಭಕಲಿಸುವ ಸಕಲಭೂಸುರರ ॥
ಮನೆಗಳಲಿ ಹರಿದಿವಸದೌಪಾ । ಸನಗಳಲಿ ತಾ ಯೋಗ್ಯನಹುದೆಂ ।
ದೆನಿಸಿಕೊಂಬೆನು ನೀನಯೋಗ್ಯನು ಭ್ರಷ್ಟ ತೊಲಗೆಂದ ॥

ರಾಗಿಯ ಮಾತು.

ಸತ್ವಹೀನರ ಬಡವರನು ಕ । ಣ್ಣೆತ್ತಿನೋಡೆ ಧನಾಢ್ಯರನು ಬೆಂ ।
ಬತ್ತಿ ನಡೆವೆಯುಪೇಕ್ಷೆ ನಿನ್ನದು ಪೇಳಲೇನದನು ॥
ಹೆತ್ತಬಾಣತಿಯರಿಗೆ ರೋಗಿಗೆ । ಪಥ್ಯಪಾನದಿ ಹೆಣದಬಾಯಿಗೆ ।
ತುತ್ತುನೀನಹೆ ನಿನ್ನ ಜನ್ಮ ನಿರರ್ಥಕರವೆಂದ ॥
ಸತ್ತವರ ಪ್ರತಿಬಿಂಬರೂಪವನು । ವಿಸ್ತರಿಸಿ ಪಿತೃನಾಮಗಳ ನಿನ ।
ಗಿತ್ತು ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ ॥
ನೆತ್ತಿನೆತ್ತಿಯ ಬಡಿದು ಕಡೆಯಲಿ । ತುತ್ತನಿಡುವರು ಶಿಶುಗಳಿಗೆ ನೀ ।

ನಿರ್ದೋಷವಾಗಿಯೂ ನಿರ್ಗುಣವಾಗಿಯೂ ಇರುವ ವಸ್ತುಗಳು ಪ್ರಪಂಚದ ಲ್ಲಿಲ್ಲ. ಆದುದರಿಂದ ಮೇಲಣಪದ್ಯಗಳಲ್ಲಿ ಹೇಳಿರುವಂತೆ ಭಿನ್ನಪ್ರಾಂತಗಳ ಕನ್ನಡಿಗರು ನಾನು ಹೆಚ್ಚು ತಾನು ಹೆಚ್ಚು ಎಂದು ಮತ್ಸರದಿಂದ ಹೋರಾಡಿ ಅಲ್ಪಸ್ವಲ್ಪವಾದ ವ್ಯತ್ಯಾಸಗಳನ್ನು ಹೆಚ್ಚಿಸಿ ಕನ್ನಡನುಡಿಯ ಏಳಿಗೆಗೆ ಕುಂದಕವನ್ನು ಉಂಟುಮಾಡಕೂಡ ದೆಂಬುದು ನನ್ನ ಪ್ರಾರ್ಥನೆ. ಅಲ್ಪಸ್ವಲ್ಪವಾದ ಅಭಿಪ್ರಾಯ ಭೇದಗಳಿದ್ದರೂ ಅವುಗಳ ನ್ನೆಲ್ಲಾ ಒತ್ತಟ್ಟಿಗಿಟ್ಟು ಎಲ್ಲರೂ ಪರಸ್ಪರಮೈತ್ರಿಯಿಂದಲೂ ಐಕಮತ್ಯದಿಂದಲೂ ಭಾವ ಸೇವೆಯನ್ನು ಉತ್ಸಾಹದೊಡನೆ ಮಾಡಬೇಕಾದದು ಅತ್ಯಾವಶ್ಯಕ. ಇದೂ ಅಲ್ಲದ

ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ

ಎಂದು ಕೃಷ್ಣಪರಮಾತ್ಮನು ಅರ್ಜುನನಿಗೆ ಮಾಡಿದ ಉಪದೇಶಕ್ಕೆ ಅನುಸಾರವಾಗಿ ಫಲಾಭಸಂಧಿಯಿಲ್ಲದೆ ಕರ್ತವ್ಯಬುದ್ಧಿಯಿಂದ ಕನ್ನಡಮಾತೆಯ ಮಕ್ಕಳಾದ ನಾವೆಲ್ಲರೂ ಏಕೀಭವಿಸಿ ಪ್ರಯತ್ನಮಾಡಿದರೆ ಕನ್ನಡ ನಾಡಿನ ಮತ್ತು ಕನ್ನಡನುಡಿಯ ಉನ್ನತಿ ಕ್ಷಿಪ್ರದಲ್ಲಿಯೇ ಲಭಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

ಕರ್ನಾಟಕ ಶಿಕ್ಷಕಮಂಡಲ ಧಾರವಾಡ.

ದ್ವಿತೀಯ ವಾರ್ಷಿಕ–ಸಮ್ಮೇಲನ.

ವರದಿ

ಈ ಮೊದಲೇ ಗೊತ್ತಾದ ಪ್ರಕಾರ ಮಂಡಲದ ಸಮ್ಮೇಲನವು ಗಂಡುಮಕ್ಕಳ ಟ್ರೇನಿಂಗಕಾಲೇಜದ ವಿಶಾಲವಾದ ಹಾಲಿನಲ್ಲಿ ತಾ. ೬ನೆಯ ಜೂನ ೧೯೧೮ ಇ. ದಿವ ಪ್ರಾರಂಭವಾಯಿತು; ಹಾಯಸ್ಕೂಲ, ಫ್ರಿಕ್ಟೋರಿಯಾ ಹಾಯಸ್ಕೂಲ, ಮ್ಯುನಸಿಪಾಲಿ ಈ ಸಂಸ್ಥೆಗಳಲ್ಲಿಯ ಶಿಕ್ಷಕರೂ ಶಿಕ್ಷಿಕೆಯರೂ ಸಭೆಗೆ ಬಂದಿದ್ದರು; ಬೇರೆ ಬೇರೆ ಜಿಲ್ಲೆ ಗಳಿಂದ ಬಂದ ೫೦ ಜನ ಶಿಕ್ಷಕರೂ, ೧೦ ಜನ ಶಿಕ್ಷಿಕೆಯರೂ ನೆರೆದಿದ್ದರು. ದಕ್ಷಿಣ ಭಾಗದ ಹೆಣ್ಣುಮಕ್ಕಳ ಶಾಲೆಗಳ ಇನಸ್ಪೆಕ್ಟೆಸ್‌ರಾದ ಮೆಹರಬಾನ ಮಿಸ್. ಮೆಕಾಳೆ ಸಾಹೇಬರೂ, ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಲೇಡಿ ಸುಪರಿಂಟಿಂಡೆಂಟರಾದ ಮೆಹರಬಾನ ಮಿಸ್. ನ್ಯೂಲಂಡಸಾಹೇಬರೂ, ಪುಣೆಯ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಲೇಡೀ ಸುಪರಿಂಟಿಂಡೆಂಟರಾದ ಮೆಹರಬಾನ ಮಿಸೆಸ್ ನವಲಕರ ಸಾಹೇ ಬರೂ, ಕರ್ನಾಟಕ ಕಾಲೇಜದ ಪ್ರಿನ್ಸಿಪಾಲರಾದ ಮೆಹರಬಾನ ರಾಲಿನ್‌ಸನ್ ಸಾಹೇ

ಬರೂ, ರಾ. ಬ. ಜೋಶಿ ಪೆನಶನರ ಎ. ಇ. ಸಾ. ರವರೂ ಸಭೆಯನ್ನು ಅಲಂಕರಿಸಿ ದ್ದರು; ಅಲ್ಲದೆ ಧಾರವಾಡ ಮ್ಯುನಸಿಪಾಲಿಟಿಯ ಸ್ಕೂಲಬೋರ್ಡ ಚೇರಮನ್ನರಾದ ಸಿ. ಹುಲಕೋಟಿ ಬಿ. ಎ. ಎಲ್‌ಎಲ್. ಬಿ. ಇವರಂ ಎರಡು ದಿವಸ ಸಭೆಗೆ ಬಂದಿದ್ದರು; ಎರಡೂ ಟ್ರೇನಿಂಗಕಾಲೇಜಗಳ ವಿದ್ಯಾರ್ಥಿಗಳ ಸಮುದಾಯವೂ ನೆರೆದಿತ್ತು. ಮೆಹ ರ್ಬಾನ ಇ. ಜಿ. ಟರ್ನರ ಸಾಹೇಬರೂ ಸ್ವಲ್ಪ ಹೊತ್ತು ಸಭೆಗೆ ಬಂದು ಕಾರ್ಯವನ್ನು ನೋಡಿ ತೆರಳಿದರು.

ಮುಂಡಲದ ಕಾರ್ಯವು ಪ್ರಾರಂಭವಾಗುವ ಮೊದಲು, ಮಂಡಲದ ವ್ಹಾಯಿಸ ಪ್ರೆಸಿಡೆಂಟರಾದ ರಾವಸಾಹೇಬ ರಾಮರಾವ ಕುಲಕರ್ಣಿ ಇವರು ಸಭಾಧ್ಯಕ್ಷರನ್ನು ಆರಿಸುವ ಸೂಚನೆಯಬಗ್ಗೆ ಮಾತಾಡಿದ್ದೇನಂದರೆ:—

ಪ್ರಿಯ ಬಂಧುಗಳೆ, ಭಗಿನಿಯರೆ, ಈಹೊತ್ತು ನಮ್ಮ ಈ ಮಂಡಲದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವದಕ್ಕಾಗಿ, ನಾವು ಮುಂಚಿತವಾಗಿಯೇ ಆನರೇಬಲ್ ರಾ. ಬ. ವೆಂಕಣ್ಣಾನಾಯಿಕ ಇವರಿಗೆ ವಿಜ್ಞಾಪನೆ ಮಾಡಿಕೊಂಡಿದ್ದೆವು. ಆದರೆ ಅವರಿಗೆ ಸರ ಕಾರೀ ಕಾರ್ಯದ ನಿಮಿತ್ತವಾಗಿ ಮುಂಬಯಿಗೆ ಹೋಗುವ ಪ್ರಸಂಗವು ಬಂದದ್ದರಿಂದ ತಮಗೆ ಸಭೆಗೆ ಬರಲಿಕ್ಕಾಗುವದಿಲ್ಲವೆಂದು ಬರೆದು ತಿಳಿಸಿದ್ದರಿಂದ ಆ ಕಾರ್ಯಭಾರವನ್ನು ಸಹಿಸುವದಕ್ಕಾಗಿ ವಿದ್ಯಾಖಾತೆಯಲ್ಲಿ ಒಳ್ಳೇ ಉತ್ತಮ ಕೆಲಸವನ್ನು ಮಾಡಿ ಒಳ್ಳೇ ಶಿಕ್ಷ ಕರೆಂದು ಹೆಸರುಪಡೆದು ಪೆನಶನ ಹೊಂದಿದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾ. ಬ. ಜೋಶಿ ಇವರಿಗೆ ವಿನಂತಿ ಮಾಡಿಕೊಳ್ಳಲ್ಪಟ್ಟಿತು. ಅವರು ದಯವಿಟ್ಟು ನಮ್ಮ ವಿನಂತಿ ಯನ್ನು ಮಾನ್ಯಮಾಡಿದರು. ಈಗ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಕಾರ್ಯ ವನ್ನು ನಡೆಯಿಸುವ ಬಗ್ಗೆ ಸೂಚನೆಯನ್ನು ನಿಮ್ಮೆಲ್ಲರ ಮುಂದೆ ಇಟ್ಟಿದ್ದೇನೆ. ಈ ಸೂಚ ನೆಗೆ ತಮ್ಮೆಲ್ಲರ ಸಂಪೂರ್ಣ ಅನುಮತಿಯಿರುವದೆಂದು ನಂಬಿದ್ದೇನೆ.

ಆಬಳಿಕ ರಾವಬಹಾದ್ದೂರರವರು ಸಭಿಕರ ಕರತಳಧ್ವನಿಯೊಂದಿಗೆ ಅಧ್ಯಕ್ಷಸ್ಥಾನ ವನ್ನು ಸ್ವೀಕರಿಸಿ ಮಾತಾಡಿದ್ದೇನಂದರೆ:—

ಸಭ್ಯಗೃಹಸ್ಥರೆ, ಭಗಿನಿಯರೆ, ಈವೊತ್ತಿನ ದಿವಸ ನನ್ನನ್ನು ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಆರಿಸಿದ್ದಕ್ಕಾಗಿ ನನಗೆ ಆನಂದವೂ ಅಭಿಮಾನವೂ ಎನಿಸುವದು. ನಾನು ನನ್ನ ಇಡೀ ಆಯುಷ್ಯವನ್ನು ಶಿಕ್ಷಕನ ಹೋರೆಯಲ್ಲಿ ಕಳೆದಿರುವದರಿಂದ ಈ ಸಭೆಯ ವಿಷಯ ವಾಗಿಯೂ, ಶಿಕ್ಷಕಸಮಾಜದ ವಿಷಯವಾಗಿಯೂ ನನಗೆ ಬಹಳ ಆದರವಿರುವದು. ಆನರೇಬಲ್ ರಾವಬಾಹದ್ದೂರ ವೆಂಕಣ್ಣನಾಯಿಕ ಇವರು ಒಪ್ಪಿಕೊಂಡಂತೆ ಈ ಸಭೆಯ

ಅಧ್ಯಕ್ಷಸ್ಥಾನವನ್ನು ಅವರಿಗೆ ಅಲಂಕರಿಸುವದಕ್ಕೆ ಅನುಕೂಲವಾಗಿದ್ದರೆ ಸಮ್ಮೇಲನಕ್ಕೆ ಹೆಚ್ಚು ಉಪಯೋಗವಾಗಬಹುದಾಗಿತ್ತೆಂದು ನನಗೆ ತೋರುತ್ತದೆ. ಅನನುಕೂಲತೆಯ ಮೂಲಕ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲಿಕ್ಕೆ ಬಾರದಿದ್ದದ್ದು ವ್ಯಸನಕರವಾದ ಸಂಗತಿಯಾಗಿರುತ್ತದೆ.

ಇನ್ನು ಸಭೆಯ ಕಾರ್ಯಕ್ಕೆ ಆರಂಭಮಾಡುವ ಪೂರ್ವದಲ್ಲಿ ಸಭೆಯ ಮುಂದೆ ಒಂದು ಸಂಗತಿಯನ್ನು ಇಡುವದು ಅತ್ಯವಶ್ಯವೆಂದು ತೋರುತ್ತದೆ. ಆ ಸಂಗತಿಯು ಯಾವದೆಂದರೆ, ಈಗ ಯುರೋಪಖಂಡದಲ್ಲಿ ನಡೆದಿರುವ ಮಹಾಯುದ್ಧವು. ಇದರಿಂದ ಯುರೋಪಖಂಡದ ರಾಷ್ಟ್ರಗಳಿಗೆ ಉಂಟಾಗಿರುವ ಚಿಂತೆಯನ್ನೂ ಕಷ್ಟಗಳನ್ನೂ ವರ್ಣಿಸುವದು ಅಸಾಧ್ಯವು. ಪ್ರತ್ಯಕ್ಷ ಲಂಡನದಲ್ಲಿ ಕೂಡ ಜನರಿಗೆ ತಮ್ಮ ತಲೆಯ ಮೇಲೆ ಆಕಾಶಯಾನಗಳೊಳಗಿಂದ ಯಾವಾಗ ತೋಫಿನ ಗುಂಡುಗಳು ಬೀಳುವವೆಂಬದು ತಿಳಿಯದಂತಾಗಿದೆ ಯುದ್ಧದಲ್ಲಿ ಪ್ರತ್ಯಕ್ಷ ತೊಡಗಿದ ರಾಷ್ಟ್ರಗಳಲ್ಲಿ ಪ್ರತಿ ಒಂದು ಕುಟುಂಬಕ್ಕೆ ಒಂದಿಲ್ಲೊಂದು ರೀತಿಯಿಂದ ಯುದ್ಧದಿಂದ ನಷ್ಟವಾಗಿರುವದು. ಆದರೆ ಇಂಥ ಸ್ಥಿತಿಯು ಅಲ್ಲಿ ಇರಲಾಗಿ, ನಾವು ಬ್ರಿಟಿಶ ಸಾಮ್ರಾಜ್ಯದ ಛತ್ರದಲ್ಲಿ ಇನ್ನೂವರೆಗೆ ಶಾಂತ ಮನಸ್ಸಿನಿಂದ ಕಾಲಕಳೆಯಲು ಸಾಧ್ಯವಾಗಿರುವದು, ಮತ್ತು ಈಗ ಕೂಡಿದ ಈ ಸಮ್ಮೇಲನವೇ ಆ ಶಾಂತತೆಯ ಸಾಕ್ಷಿಯಾಗಿರುವದು. ದುರ್ಬಲರಾಷ್ಟ್ರಗಳ ಸ್ವಾತಂತ್ರ್ಯರಕ್ಷಣಕ್ಕಾಗಿಯೂ, ಜರ್ಮನಕಾಯಸರನ ರಾಕ್ಷಸೀಮಹತ್ವಾಕಾಂಕ್ಷೆಯನ್ನು ತಗ್ಗಿಸುವದಕ್ಕಾಗಿಯೂ ನಮ್ಮ ಬ್ರಿಟಿಶ ರಾಷ್ಟ್ರವೂ ಅವರ ಸ್ನೇಹಿತ ರಾಷ್ಟ್ರಗಳೂ ಹೂಡಿದ ಈ ಯುದ್ಧದಲ್ಲಿ ಕಟ್ಟಕಡೆಗೆ ಸತ್ಯಪಕ್ಷಕ್ಕೇ ಜಯದೊರೆಯುವದೆಂಬದರಲ್ಲಿ ಸಂದೇಹವಿಲ್ಲ. ಈ ಧರ್ಮಯುದ್ಧದಲ್ಲಿ ನಮ್ಮ ಸಾಮ್ರಾಜ್ಯ ಸರಕಾರಕ್ಕೂ ಅವರ ಸಹಮಂಡಲದವರಿಗೂ ಬೇಗನೆ ಜಯದೊರೆಯುಲೆಂದು ನಾವೆಲ್ಲರೂ ದೇವರನ್ನು ಪ್ರಾರ್ಥಿಸುವದು ನಮ್ಮ ಕರ್ತವ್ಯವಾಗಿರುವದು.

ಇನ್ನು ಈವೊತ್ತು ನಡೆಯುವ ಸಮ್ಮೇಲನದ ವಿಷಯದಲ್ಲಿ ಹೇಳತಕ್ಕದ್ದೇನೆಂದರೆ, ಪ್ರತಿಯೊಂದು ಜನಾಂಗದ ಉನ್ನತಿಗೆ ಲೌಕಿಕಶಿಕ್ಷಣವು ಅವಶ್ಯವಾದದ್ದು; ಅದರಲ್ಲಿಯೂ ಮುಂದಿನ ಎಲ್ಲ ಪ್ರಕಾರದ ಶಿಕ್ಷಣದ ಆಸ್ಥಿವಾರವಾದ ಪ್ರಾಥಮಿಕ ಶಿಕ್ಷಣವು ಹೆಚ್ಚು ಮಹತ್ವವುಳ್ಳದ್ದು. ಸದ್ಯದ ಕಾಲದಲ್ಲಿ ಸುಧಾರಿಸಿದ ಎಲ್ಲ ಜನಾಂಗದವರು ತಮ್ಮ ತಮ್ಮ ದೇಶಗಳಲ್ಲಿ ಶಿಕ್ಷಣವನ್ನು ಬೆಳಿಸುವ ವಿಷಯವಾಗಿ ಪ್ರಯತ್ನ

ವದು ಒಳಿತಲ್ಲ. ಇದರಿಂದ ಈ ಮಂಡಲದವರು ಕೈಕೊಂಡಕಾರ್ಯವು ಬಹಳ ಸ್ತುತ್ಯವಾದದ್ದೆಂಬದರಲ್ಲಿ ಸಂದೇಹವಿಲ್ಲ. ಈ ಮಂಡಲದ ಉದ್ದೇಶಗಳಲ್ಲಿ ಮೊದಲನೇ ಉದ್ದೇಶವು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವ ಯೋಗ್ಯ ಶಿಕ್ಷಣಪದ್ಧತಿಗಳನ್ನು ಪ್ರತ್ಯಕ್ಷ ಅನುಭವದಿಂದ ನಿರ್ಣಯಿಸುವದಿರುತ್ತದೆ. ಈ ಉದ್ದೇಶವನ್ನು ಕೊನೆಗಾಣಿಸುವದಕ್ಕಾಗಿಯೇ ಈ ಸಮ್ಮೇಲನದಲ್ಲಿ ಅನುಭವಿಕರಾದ ಶಿಕ್ಷಕರು ಹಲವು ಮಾದರಿಯ ಪಾಠಗಳನ್ನು ಕಲಿಸಿ ತೋರಿಸತಕ್ಕವರಿದ್ದಾರೆ. ಈ ಮಂಡಲದ ಎರಡನೇ ಉದ್ದೇಶವು ಶಿಕ್ಷಣ ವಿಷಯಕ ಗ್ರಂಥಗಳನ್ನು ಒದಗಿಸಿಕೊಡುವದು. ಈ ಉದ್ದೇಶವನ್ನನುಸರಿಸಿ ಈ ಮಂಡಲದವರು ಕಳೆದ ವರ್ಷದಲ್ಲಿ ಪಾಠಮಾಲೆ ಎಂಬ ಪುಸ್ತಕವನ್ನು ಪ್ರಸಿದ್ಧ ಪಡಿಸಿದ್ದು ಸಂತೋಷದ ಸಂಗತಿಯಾಗಿರುತ್ತದೆ. ಈ ಮಂಡಲದ ಮತ್ತೊಂದು ಮಹತ್ವದ ಉದ್ದೇಶವು ಶಿಕ್ಷಕಶಿಕ್ಷಕಿಯರಿಗೆ ಉತ್ತಮವಾದ ಕನ್ನಡ ಮರಾಠೀ ಗ್ರಂಥಗಳ ಒಂದು ಪುಸ್ತಕಾಲಯವನ್ನು ಸ್ಥಾಪಿಸುವದು, ಇರುತ್ತದೆ. ಈ ಉದ್ದೇಶವು ಅತಿ ಮಹತ್ವದ್ದೆಂದು ನನಗೆ ತೋರುತ್ತದೆ. ಹಾಗೂ ಇಂಥ ಪುಸ್ತಕಾಲಯಗಳು ಈ ಮಂಡಲದ ಸಹಾಯದಿಂದ ಪ್ರತಿ ಒಂದು ತಾಲೂಕಿನಲ್ಲಿ ಸ್ವಲ್ಪಕಾಲದಲ್ಲಿಯೇ ಸ್ಥಾಪಿಸಲ್ಪಡುವವೆಂದು ನಾನು ಆಶಿಸುತ್ತೇನೆ.

ಒಟ್ಟಿಗೆ, ಈ ಮಂಡಲವು ಸ್ಥಾಪಿತವಾಗಿ ಎರಡೇ ವರ್ಷಗಳಾದರೂ ಇಷ್ಟು ಸ್ವಲ್ಪ ಅವಧಿಯಲ್ಲಿ ಮಂಡಲವು ಮಾಡಿದ ಕೆಲಸವು ಶ್ಲಾಘನೀಯವಾಗಿದೆ. ಹಾಗೂ ಈ ಮಂಡಲದಿಂದ ಬರಬರುತ್ತ ಶಿಕ್ಷಣಕ್ಕೆ ಬಹಳ ಪ್ರೋತ್ಸಾಹವುಂಟಾಗುವದೆಂದು ಎಣಿಸುತ್ತೇನೆ. ಇನ್ನು ಇವತ್ತಿನ ಕಾರ್ಯಕ್ರಮದ ಪ್ರಕಾರ ಅನುಭವಿಕ ಶಿಕ್ಷಕರಾದ ರಾ॥ ಬಾ॥ ರ. ಕದಡಿಯವರು ಳನೆಯ ಇಯತ್ತೆಗೆ ಕವಿತಾ ಪಾಠವನ್ನು ಕಲಿಸಿ ತೋರಿಸುವರು ಎಂದು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲು— ಕಾರ್ಯಕ್ರಮ ಪತ್ರಿಕೆಯ ಪ್ರಕಾರ ಎಲ್ಲಕ್ಕೂ ಮೊದಲು ಮಿ. ಬಾಳಕೃಷ್ಣರಾವ ಕದಡಿ ಇವರು ಳನೇ ಇಯತ್ತೆಗೆ ಕವಿತಾ ಪಾಠವನ್ನು ಕಲಿಸಿ ತೋರಿಸಿದರು.

'ಭರತನು ರಾಮನ ಪಾದುಕೆಗಳನ್ನು ತಂದದ್ದು" ಈ ಪಾಠದ ಗನೇ ಕವಿತೆಯನ್ನು ಕಲಿಸಿದರು; ಹಿಂದಿನ ಇಯತ್ತೆಯಲ್ಲಿ ಕಲಿತ ರಾಮಾಯಣ ಕಥೆಯ ಸಂಬಂಧದ ಒಂದು ಕವಿತೆಯನ್ನು ಅನ್ನಹೇಳಿ ಪಾಠವನ್ನು ಉಪಕ್ರಮಿಸಿ ಕಥಾನುಸಂಧಾನವನ್ನು ಮಾಡಿಕೊಂಡರು. ತರುವಾಯ ಹುಡುಗರಿಗೆ ಪುಸ್ತಕವನ್ನು ನೋಡಲಿಕ್ಕೆ ಹೇಳಿ ತಾವು ಸ್ವತಃ ಓದಿ ತೋರಿಸಿದರು. ಆ ಬಳಿಕ ಒಂದೊಂದೇ ವಾಕ್ಯದ ಅರ್ಥವಿವರಣೆ

ಯನ್ನು ಮಾಡಿದರು. ಅದೇ ಕಾಲಕ್ಕೆ ಕಠಿಣ ಶಬ್ದಗಳ ಅರ್ಥಗಳನ್ನು ಕರೇ ಹಲಿಗೆಯು ಮೇಲೆ ಬರೆದರು. ಅರ್ಥವು ಪೂರ್ಣವಾದ ಮೇಲೆ ಅರ್ಥದ ಪ್ರಕಾರ ಹುಡುಗರಿಂದ ಓದಿಸಿಕೊಂಡರು. ಕಟ್ಟಕಡೆಗೆ ಪುಸ್ತಕವನ್ನು ಮುಚ್ಚಲಿಕ್ಕೆ ಹೇಳಿ ಕವಿತೆಯ ಭಾವ ವನ್ನು ಕುರಿತು ಹುಡುಗರ ಕೂಡ ಸಂಭಾಷಣವನ್ನು ಮಾಡಿ ಪಾಠವನ್ನು ಮುಗಿಸಿದರು.

ಕಡೆಗೆ ಅವರು ತಾವು ಅನುಸರಿಸಿದ ಪದ್ಧತಿಯ ಬಗ್ಗೆ ಹೇಳುವಾದ ಈ ವರ್ಗಕ್ಕೆ ವ್ಯಾಕರಣದ ಸಾಕಷ್ಟು ಜ್ಞಾನವಿರುವದಿಲ್ಲಾದ್ದರಿಂದ ವ್ಯಾಕರಣ ಸಹಾಯವಿಲ್ಲದೆ ಕವಿ ತಾವಪಾಠವನ್ನು ಕಲಿಸಿದ್ದೇನೆಂದು ಹೇಳಿದರು.

ಈ ಪಾಠದ ಬಗ್ಗೆ ಮಿಸ್ತರ ತಾಳೀಕೋಟೆ ಇವರು ಕವಿತೆಯ ದಾಟಿಯನ್ನು ಕಲಿ ಸಲಿಲ್ಲೆಂದು ಆಕ್ಷೇಪವನ್ನು ತಕ್ಕೊಂಡರು. ಅದಕ್ಕೆ ಮಿ. ಕದಡಿ ಇವರು ಕಟ್ಟಕಡೆಗೆ ಕವಿತೆಯ ದಾಟಿಯನ್ನು ಹೇಳತಕ್ಕದ್ದು. ಆದರೆ ನನ್ನಲ್ಲಿ ಗಾಯನದ ಕೊರತೆ ಇದ್ದದ ರಿಂದ ನಾನು ಅಷ್ಟಕ್ಕೇ ಮುಗಿಸಿದ್ದೇನೆಂದು ಹೇಳಿದರು. ಅಧ್ಯಕ್ಷರವರು ಮಿಸ್ತರ ಕದಡಿ ಯವರು ತಮ್ಮಲ್ಲಿರುವ ಕೊರತೆಯನ್ನು ನಿರಭಿಮಾನದಿಂದ ಹೇಳಿದ್ದಕ್ಕಾಗಿ ಅವರನ್ನು ಗೌರವಿಸಿದರು.

ಟ್ರೇನಿಂಗ ಕಾಲೇಜಿನ ಗಣಿತ ಶಿಕ್ಷಕರಾದ ಮಿಸ್ತರ ಎಸ್. ಆರ್ ತಟ್ಟಿ ಇವರು "ವ್ಯವಹಾರಿ ಅಪೂರ್ಣಾಂಕದ ಭಾಗಾಕಾರ" ಈ ಪಾಠದ ಅರ್ಧಭಾಗವನ್ನು ಕಲಿಸಿ ದರು. ಈ ಪಾಠವನ್ನು ಅವರು ಪೂರ್ಣಾಂಕವಿದ್ದ ಸಂಖ್ಯೆಗಳಿಗೆ ಪೂರ್ಣಾಂಕವಿದ್ದ ಸಂಖ್ಯೆಗಳಿಂದ ಭಾಗಿಸುವ ಕೆಲವು ಉದಾಹರಣೆಗಳನ್ನು ತಕ್ಕೊಂಡು ಉಪಕ್ರಮಿಸಿದರು. ಇಂಥ ಭಾಗಾಕಾರಗಳಲ್ಲಿ ಭಾಜ್ಯಭಾಜಕಗಳು ಒಂದೇ ಹೆಸರಿನವು ಇರಬೇಕಾಗುತ್ತದೆ. ಎಂಬ ತತ್ವವನ್ನು ಲಕ್ಷ್ಯದಲ್ಲಿಟ್ಟು, ವ್ಯವಹಾರಿ ಅಪೂರ್ಣಾಂಕದ ಅನೇಕ ಉದಾಹರಣೆ ಗಳನ್ನು ಹೇಳಿ ಛೇದವು ಸರಿ ಇದ್ದರೆ ಅಂಶಕ್ಕೆ ಅಂಶದಿಂದ ಭಾಗಿಸಬೇಕೆಂಬ ನಿಯಮ ವನ್ನು ಹೊರಡಿಸಿದರು. ಇಷ್ಟಾದ ಬಳಿಕ ಪ್ರಾತಃಕಾಲದ ಕಾರ್ಯವು ಮುಗಿಯಿತು.

ಮಧ್ಯಾಹ್ನದಲ್ಲಿ ಪ್ರಾರಂಭಕ್ಕೆ ಮಿಸ್ತರ ಎನ್. ಪಿ. ಕೋಲ್ಹಟಕರ ಇವರು "ಪ್ರಾಥಮಿಕ ಪುಸ್ತಕದೊಳಗಿನ ಶಾಸ್ತ್ರೀಯ ಪಾಠಗಳು" ಈ ವಿಷಯವನ್ನು ಕುರಿತು ಬರೆದ ನಿಬಂಧವನ್ನು ಓದಿದರು.

ಈ ನಿಬಂಧದಲ್ಲಿ ಅವರು ಪ್ರಾಥಮಿಕ ಪುಸ್ತಕದಲ್ಲಿ ಬರೆಯಲ್ಪಟ್ಟ ಶಾಸ್ತ್ರೀಯ ಪಾಠಗಳು ಸಮಸ್ತ ಪಂಚೇಂದ್ರಿಯದಿಂದವೂ ಉಪಕರಣಗಳ ಆಭಾವದಿಂದ ಕಲಿಯಲಿಕ್ಕೆ

ಬಾರದಂಥವೂ ವ್ಯವಹಾರಕ್ಕೆ ಬಹಳ ಮಟ್ಟಿಗೆ ಸಂಬಂಧವಿಲ್ಲದಂಥವೂ ಆಗಿರುತ್ತವೆ. ಗಳನ್ನು ತೆಗೆದು ಸುಲಭವಾದಂಥ ಉಪಯುಕ್ತವಾದಂಥ ಪಾಠಗಳನ್ನು ಬರೆಯಿಸಬೇ ಇಲ್ಲವೆ ಇಂಥ ವಿಷಯಗಳ ಮೇಲೆ ಸಣ್ಣ ಸಣ್ಣ ಪುಸ್ತಕಗಳನ್ನು ಬರೆಯಿಸಬೇಕು ಎಂ ವಿವರಿಸಿದ್ದರು. ಈ ಬಗ್ಗೆ ಚರ್ಚೆಯಾಗಿ ಸರ್ವಾನುಮತದಿಂದ ಒಂದು ಠರಾವನ್ನು ಪ ಮಾಡಿ ಸರಕಾರಕ್ಕೆ ತಿಳಿಸಬೇಕೆಂದು ಗೊತ್ತಾಯಿತು.

ಶರುವಾಯ ಗಂಡುಮಕ್ಕಳ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲ ಮಿಸ್ಟ್ರೆಸ್‌ರಾದ ಮಿಸೆಸ್ ಕುಪ್ಪಮ್ಮಾ ಪಂಚಾಳ ಇವರು ಕಾಗದದಿಂದ ಪೆಟ್ಟಿಗೆಯನ್ನು ಮಾಡುವ ಕೈಕೆಲಸದ ಒಂದು ಪಾಠವನ್ನು ಕಲಿಸಿದರು. ಹುಡುಗರು ತಮಗೆ ಕೊಟ್ಟ ಉಪಕರಣಗಳನ್ನು ವ್ಯವಸ್ಥೆಯಿಂದ ಉಪಯೋಗ ಮಾಡಿಕೊಂಡು ಆಕೃತಿಯನ್ನು ಸಿದ್ಧ ಮಾಡಿದರು.

ಆ ಬಳಿಕ ಬೆಳಗಾವ ಜಿಲ್ಲೆಯ ಬೈಲಹೊಂಗಲ ಹೆಣ್ಣುಮಕ್ಕಳ ಶಾಲೆಯ ಹೆಡ್ ಮಿಸ್ಟ್ರೆಸ್‌ರಾದ ಮಿಸೆಸ್ ಸಂತುಬಾಯಿ ನೀಲಗಾರ ಇವರು " ಚಿಕ್ಕಮಕ್ಕಳ ಆಟಗಳು " ಈ ವಿಷಯವಾಗಿ ಒಂದು ನಿಬಂಧವನ್ನು ಓದಿದರು. " ನಿಬಂಧದ ಕಟ್ಟಕಡೆಯ ಭಾಗವು ಚನ್ನಾಗಿತ್ತು. ಲೇಖಕಿಯು ಕೊಟ್ಟ ಆಟಗಳ ವಿಷಯವಾಗಿ ಯಾರಾದರೂ ಒಂದು ಪುಸ್ತಕವನ್ನು ಬರೆದರೆ ಅದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ ತಕ್ಕದ್ದಾಗಿರುವದು " ಎಂದು ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಇಲ್ಲಿಗೆ ಮೊದಲನೆಯ ದಿವಸದ ಕಾರ್ಯವು ಮುಗಿಯಿತು.

ಶುಕ್ರವಾರ ತಾರೀಖು ೭ನೇ ಜೂನ ೧೯೧೭ ಇಸವಿ.

ಈ ದಿವಸ ಪುನಃ ಸಮ್ಮೇಲನದ ಕಾರ್ಯವು ೧೦ ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಎಲ್ಲಕ್ಕೂ ಮೊದಲು, ಮಿಸ್ತರ ಹಳೇಪ್ಯಾಟಿ ಅ. ಮಾಸ್ತರ ಪ್ರ್ಯಾಕ್ಟಿಸಿಂಗ ಸ್ಕೂಲ ಗಂಡುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ ಇವರು ಧ್ವನಿಯ ವಿಷಯವಾಗಿ ಒಂದು ಶಾಸ್ತ್ರೀಯ ಪಾಠವನ್ನು ಕಲಿಸಿದರು. ಅಧ್ಯಕ್ಷ ಸಾ. ರವರು ಈ ಪಾಠದ ಬಗ್ಗೆ " ಈ ಪಾಠವು ಪದ್ಧತಿಗೆ ಸರಿಯಾಗಿ ಕಲಿಸಲ್ಪಟ್ಟಿತು. ಆದರೆ ಹಳ್ಳಿಯಲ್ಲಿ ಸಿಗುವ ಉಪಕರಣಗಳಿಂದಲೇ ಈ ಪಾಠವನ್ನು ಕಲಿಸಬೇಕಾಗಿತ್ತೆ "ಂದು ಅಭಿಪ್ರಾಯಪಟ್ಟರು.

ಆ ಬಳಿಕ ಮಿಸೆಸ್ ಸಂತೂಬಾಯಿ ನೀಲಗಾರ ಇವರು " ಅಲ್ಲಾಉದ್ದೀನನ ಚರಿತ್ರ " ಈ ಇತಿಹಾಸದ ಪಾಠವನ್ನು ಕಲಿಸಿದರು. ಈ ಪಾಠವು ಪದ್ಧತಿಗೆ ಸರಿಯಾಗಿ ಕಲಿಸಲ್ಪಟ್ಟರೂ, ಸ್ಥಿತಿಯ ದೃಷ್ಟಿಯಿಂದ ಹೆಣ್ಣುಮಕ್ಕಳಿಗೆ ಕಲಿಸಲಿಕ್ಕೆ ಆಕ್ಷೇಪಾರ್ಹವಾ

ದದ್ದೆಂದು ಕೆಲವರ ಅಭಿಪ್ರಾಯವಾಯಿತು. ಅಧ್ಯಕ್ಷರ ಅಭಿಪ್ರಾಯವಾದರೂ ಹಾಗೇ ಇತ್ತು; ಆದರೆ ಒಳ್ಳೇ ಸಂಗತಿಗಳನ್ನು ಕೆಟ್ಟ ಸಂಗತಿಗಳಿಂದ ಒರೆ ಹಚ್ಚಲಿಕ್ಕೆ ಇಂಥ ಪಾಠಗಳಾದರೂ ಬೇಕಾಗುವವೆಂತಲೇ ಇತಿಹಾಸದಲ್ಲಿ ಆ ಪಾಠಗಳನ್ನು ಹಾಕಿರುವರು. ಆದ್ದರಿಂದ ಅವುಗಳನ್ನು ಕಲಿಸಲಿಕ್ಕೆ ಅಡ್ಡಿಯಿಲ್ಲೆಂತಲೂ ಕೆಲವರು ಅಭಿಪ್ರಾಯಪಟ್ಟರು. ಇಲ್ಲಿಗೆ ಈ ದಿನದ ಮುಂಜಾನೆಯ ಕಾರ್ಯವು ಮುಗಿಯಿತು.

ಮಧ್ಯಾಹ್ನದಲ್ಲಿ ಮೊದಲು ಟ್ರೇ. ಕಾಲೇಜದ ಅಸಿ॥ ಮಾಸ್ತರರಾದ ಬೋಧರಾವ ಪುರೋಹಿತ ಇವರು ಪ್ರಾಥಮಿಕ ಶಾಲೆಗಳಲ್ಲಿ ಹಸ್ತಶಿಕ್ಷಣವನ್ನು ಕೊಡುವ ಅವಶ್ಯಕತೆಯ ಬಗ್ಗೆ ಒಂದು ನಿಬಂಧವನ್ನು ಓದಿದರು. ಅದು ಒಳ್ಳೇ ಮಹತ್ವವಾದದ್ದೂ ವಿಚಾರದಿಂದ ತುಂಬಿದ್ದೂ ಆಗಿತ್ತು. ಇದನ್ನು ಪ್ರಕಟಪಡಿಸಿ ಪ್ರತಿಯೊಬ್ಬ ಶಿಕ್ಷಕನಿಗೆ ವಿಚಾರಪೂರ್ವಕವಾಗಿ ಓದಲನುಕೂಲಮಾಡಿಕೊಡುವದು ಅತ್ಯವಶ್ಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು.

ಆ ಬಳಿಕ ಮಿಸ್ತರ ವೆಂಕಟರಾವ ಮಗಡಾಲ ಇವರು ಸೂರ್ಯನ ವಿಷಯವಾಗಿ ಎರಡನೇ ಇಯತ್ತೆಯವರಿಗೆ ಸೃಷ್ಟಿಜ್ಞಾನದ ಪಾಠವನ್ನು ಕಲಿಸಿದರು. ಪಾಠದ ರಚನೆಯು ಒಳ್ಳೇ ಮನೋರಂಜಕವಾಗಿದ್ದದರಿಂದಲೂ ಭಾಷೆಯು ಚಿಕ್ಕಮಕ್ಕಳಿಗೆ ಯೋಗ್ಯವಾದದ್ದು ಇದ್ದದರಿಂದಲೂ ಪಾಠವು ಮುಗಿಯುವ ವರೆಗೆ ಹುಡುಗರ ಉತ್ಸಾಹವು ಕುಗ್ಗಲಿಲ್ಲ.

ತರುವಾಯ ಮಿ. ನುಗಡಾಲರವರು ಅನೇಕ ಹೊಸ ವಿಚಾರಗಳಿಂದ ತುಂಬಿದ ಚಿಕ್ಕಮಕ್ಕಳ ಶಿಕ್ಷಣವೆಂಬ ನಿಬಂಧವನ್ನು ಓದಿದರು. ಇಲ್ಲಿಗೆ ಎರಡನೇ ದಿವಸದ ಕಾರ್ಯವು ಮುಗಿಯಿತು.

ಶನಿವಾರ ತಾರೀಖು ೪ ನೆಯ ಜೂನ ೧೯೧೪ ಇಸವಿ.

ಈ ದಿವಸ ಪುನಃ ಸಮ್ಮೇಲನದ ಕಾರ್ಯವು ೧೦ ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಎಲ್ಲಕ್ಕೂ ಮೊದಲು ಟ್ರೇನಿಂಗ ಕಾಲೇಜದ ಅ. ಮಾಸ್ತರರಾದ ಮಿಸ್ತರ ಮಧ್ವರಾವ ಡಾಬಳೆ ಇವರು ಆತ್ಮಸಂಯಮನ ಈ ವಿಷಯದ ನೀತಿಪಾಠವನ್ನು ಕಲಿಸಿದರು.

ಆ ಬಳಿಕ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಅ. ಮಾಸ್ತರರಾದ ಮಿಸ್ತರ ಹಿರೇಹಾಳ ಇವರು ೩ ನೇ ಇಯತ್ತೆಗೆ ವಾಚನಪಾಠವನ್ನು ಕಲಿಸಿದರು. ತರುವಾಯ

ಟ್ರೇ. ಕಾಲೇಜಿನ ಅ. ಮಾಸ್ತರರಾದ ಶೇಖ ಇವರು ಉರ್ದು ವಾಚನಪಾಠವನ್ನು ಕಲಿಸಿದರು.

ಶೇಖ ಇವರ ಪಾಠವು ಮುಗಿದ ಮೇಲೆ ಚಿಕ್ಕಮಕ್ಕಳಿಗೆ ದೇಹದಂಡನ ಶಿಕ್ಷೆಯನ್ನು ಕೊಡಬಾರದೆಂಬ ಬಗ್ಗೆ ಅಲ್ಲಲ್ಲಿಗೆ ವ್ಯಾಖ್ಯಾನಗಳನ್ನು ಕೊಡುತ್ತಬಂದಿದ್ದ ಇಂದೂರಿನ ಕಾಲೇಜಿನ ಪ್ರೊಫೆಸರರಾದ ಮಿ. ಕುಲಕರ್ಣಿ ಇವರು ಈ ಸಮ್ಮೇಲನದಲ್ಲಿ ನೆರೆದ ಶಿಕ್ಷಕರಿಗೆ ತಮ್ಮ ಉದ್ದೇಶವನ್ನು ತಿಳಿಸಿ ಹೇಳಿದರು. ದೇಹದಂಡನ ಶಿಕ್ಷೆಯಿಂದ ಕೆಟ್ಟ ಪರಿಣಾಮವಾಗುತ್ತದೆ ಎಂದು ಸಪ್ರಮಾಣವಾಗಿ ಹೇಳಿದರು. ಇಲ್ಲಿಗೆ ಮಧ್ಯಾಹ್ನದ ಕಾರ್ಯವು ಮುಗಿಯಿತು.

ಮಧ್ಯಾಹ್ನದಲ್ಲಿ ಸಮ್ಮೇಲನದ ಕಾರ್ಯವು ಪ್ರಾರಂಭವಾದ ಕೂಡಲೆ ಮೊದಲೇ ಗೊತ್ತಾದ ಪ್ರಕಾರ ಸರ್ವಾನುಮತದಿಂದ ಮೂರು ಠರಾವುಗಳು ಪಾಸ ಮಾಡಲ್ಪಟ್ಟವು. ಅವು ಯಾವವೆಂದರೆ:—

೧ನೇ ಠರಾವು:—ಸದ್ಯದ ಮಹಾಯುದ್ಧದಲ್ಲಿ ನಮ್ಮ ಬಾದಶಹರೂ ಸಖಮಂಡಲದವರೂ ನಮ್ಮ ಕ್ಷೇಮಕ್ಕಾಗಿಯೂ ಚಿಕ್ಕಪುಟ್ಟ ರಾಷ್ಟ್ರಗಳ ಸಂರಕ್ಷಣಕ್ಕಾಗಿಯೂ ಕಾದುತ್ತಿರುವರು. ಈ ಯುದ್ಧದಲ್ಲಿ ನಮ್ಮ ಬಾದಶಹರವರಿಗೂ ಸಖಮಂಡಲಕ್ಕೂ ಬೇಗನೆ ವಿಜಯ ಪ್ರಾಪ್ತಿಯಾಗಲೆಂದು ನಾವು ದಿನಾಲು ದೇವರನ್ನು ಪ್ರಾರ್ಥಿಸತಕ್ಕದ್ದೆಂದು ಈ ಸಮ್ಮೇಲದ ಅಭಿಪ್ರಾಯವಿರುತ್ತದೆ.

೨ನೇ ಠರಾವು:—ಕರ್ನಾಟಕ ಶಿಕ್ಷಕ ಮಂಡಲದ ಪತಿಯಿಂದ ರಾವಬಹಾದ್ದುರ ವ್ಹಿ. ಬಿ. ಜೋಶಿ ಇವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಕೂಡಿದ ಸಮ್ಮೇಲನದಲ್ಲಿ ನೆರೆದ ಸಭಿಕರು ೪, ೫, ೬ ಹಾಗು ೭ನೇ ಕ್ರಮಿಕ ಪುಸ್ತಕಗಳೊಳಗಿನ ಪದಾರ್ಥವಿಜ್ಞಾನ ಹಾಗು ರಸಾಯನ ಶಾಸ್ತ್ರಗಳ ಪಾಠಗಳ ಬಗ್ಗೆ ಕೆಳಗೆ ಕಾಣಿಸಿದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

(೧) ಇವುಗಳಲ್ಲಿ ಬಹಳ ಪಾಠಗಳೊಳಗಿನ ವಿಷಯವು ವಿದ್ಯಾರ್ಥಿಗಳ ಯೋಗ್ಯತೆಯನ್ನು ಮೀರಿರುವದರಿಂದಲೂ,

(೨) ಈ ಪಾಠಗಳ ಅನುಕ್ರಮವು ತಕ್ಕದ್ದಿಲ್ಲದ್ದರಿಂದಲೂ,

(೩) ಬೇರೆ ಬೇರೆ ಪುಸ್ತಕಗಳಲ್ಲಿ ಒಂದೇ ವಿಷಯದ ಒಂದು ಭಾಗವನ್ನು ಒಮ್ಮೆ ಕಲಿಸಿ ಬಹಳ ದಿವಸಗಳಾದ ಬಳಿಕ ಮುಂದಿನ ಭಾಗವನ್ನು ಕಲಿಸಬೇಕಾಗುವದರಿಂದಲೂ,

ದದ್ದೆಂದು ಕೆಲವರ ಅಭಿಪ್ರಾಯವಾಯಿತು. ಅಧ್ಯಕ್ಷರ ಅಭಿಪ್ರಾಯವಾದರೂ ಹಾಗೇ ಇತ್ತು; ಆದರೆ ಒಳ್ಳೇ ಸಂಗತಿಗಳನ್ನು ಕೆಟ್ಟ ಸಂಗತಿಗಳಿಂದ ಒರೆ ಹಚ್ಚಲಿಕ್ಕೆ ಇಂಥ ಪಾಠಗಳಾದರೂ ಬೇಕಾಗುವವೆಂತಲೇ ಇತಿಹಾಸದಲ್ಲಿ ಆ ಪಾಠಗಳನ್ನು ಹಾಕಿರುವರು. ಆದ್ದರಿಂದ ಅವುಗಳನ್ನು ಕಲಿಸಲಿಕ್ಕೆ ಅಡ್ಡಿಯಿಲ್ಲೆಂತಲೂ ಕೆಲವರು ಅಭಿಪ್ರಾಯಪಟ್ಟರು. ಇಲ್ಲಿಗೆ ಈ ದಿನದ ಮುಂಜಾನೆಯ ಕಾರ್ಯವು ಮುಗಿಯಿತು.

ಮಧ್ಯಾಹ್ನದಲ್ಲಿ ಮೊದಲು ಟ್ರೇನಿಂಗ್ ಕಾಲೇಜಿನ ಅಸಿ॥ ಮಾಸ್ತರರಾದ ಬೋಧರಾವ ಪುರೋಹಿತ ಇವರು ಪ್ರಾಥಮಿಕ ಶಾಲೆಗಳಲ್ಲಿ ಹಸ್ತಶಿಕ್ಷಣವನ್ನು ಕೊಡುವ ಅವಶ್ಯಕತೆಯ ಬಗ್ಗೆ ಒಂದು ನಿಬಂಧವನ್ನು ಓದಿದರು. ಅದು ಒಳ್ಳೇ ಮಹತ್ವವಾದದ್ದೂ ವಿಚಾರದಿಂದ ತುಂಬಿದ್ದೂ ಆಗಿತ್ತು. ಇದನ್ನು ಪ್ರಕಟಪಡಿಸಿ ಪ್ರತಿಯೊಬ್ಬ ಶಿಕ್ಷಕನಿಗೆ ವಿಚಾರಪೂರ್ವಕವಾಗಿ ಓದಲನುಕೂಲವಾಡಿಕೊಡುವದು ಅತ್ಯವಶ್ಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು.

ಆ ಬಳಿಕ ಮಿಸ್ತರ ವೆಂಕಟರಾವ ಮಗಡಾಲ ಇವರು ಸೂರ್ಯನ ವಿಷಯವಾಗಿ ಎರಡನೇ ಇಯತ್ತೆಯವರಿಗೆ ಸೃಷ್ಟಿಜ್ಞಾನದ ಪಾಠವನ್ನು ಕಲಿಸಿದರು. ಪಾಠದ ರಚನೆಯು ಒಳ್ಳೇ ಮನೋರಂಜಕವಾಗಿದ್ದದರಿಂದಲೂ ಭಾಷೆಯು ಚಿಕ್ಕಮಕ್ಕಳಿಗೆ ಯೋಗ್ಯವಾದದ್ದು ಇದ್ದದರಿಂದಲೂ ಪಾಠವು ಮುಗಿಯುವ ವರೆಗೆ ಹುಡುಗರ ಉತ್ಸಾಹವು ಕುಗ್ಗಲಿಲ್ಲ.

ತರುವಾಯ ಮಿ. ನುಗಡಾಲರವರು ಅನೇಕ ಹೊಸ ವಿಚಾರಗಳಿಂದ ತುಂಬಿದ ಚಿಕ್ಕಮಕ್ಕಳ ಶಿಕ್ಷಣವೆಂಬ ನಿಬಂಧವನ್ನು ಓದಿದರು. ಇಲ್ಲಿಗೆ ಎರಡನೇ ದಿವಸದ ಕಾರ್ಯವು ಮುಗಿಯಿತು.

ಶನಿವಾರ ತಾರೀಖು ೪ ನೆಯ ಜೂನ ೧೯೧೪ ಇಸವಿ.

ಈ ದಿವಸ ಪುನಃ ಸಮ್ಮೇಲನದ ಕಾರ್ಯವು ೧೦ ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಎಲ್ಲಕ್ಕೂ ಮೊದಲು ಟ್ರೇನಿಂಗ ಕಾಲೇಜದ ಅ. ಮಾಸ್ತರರಾದ ಮಿಸ್ತರ ಮಧ್ವರಾವ ಡಾಬಳ ಇವರು ಆತ್ಮಸಂಯಮನ ಈ ವಿಷಯದ ನೀತಿಪಾಠವನ್ನು ಕಲಿಸಿದರು.

ಆ ಬಳಿಕ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ಅ. ಮಾಸ್ತರರಾದ ಮಿಸ್ತರ ಹಿರೇಹಾಳ ಇವರು ೩ ನೇ ಇಯತ್ತೆಗೆ ವಾಚನಪಾಠವನ್ನು ಕಲಿಸಿದರು. ತರುವಾಯ

ಟ್ರೇ. ಕಾಲೇಜದ ಅ. ಮಾಸ್ತರರಾದ ಶೇಖ ಇವರು ಉರ್ದು ವಾಚನಪಾಠವನ್ನು ಕಲಿಸಿದರು.

ಶೇಖ ಇವರ ಪಾಠವು ಮುಗಿದ ಮೇಲೆ ಚಿಕ್ಕಮಕ್ಕಳಿಗೆ ದೇಹದಂಡನ ಶಿಕ್ಷೆಯನ್ನು ಕೊಡಬಾರದೆಂಬ ಬಗ್ಗೆ ಅಲ್ಲಲ್ಲಿಗೆ ವ್ಯಾಖ್ಯಾನಗಳನ್ನು ಕೊಡುತ್ತಬಂದಿದ್ದ ಇಂದೂರಿನ ಕಾಲೇಜಿನ ಪ್ರೊಫೆಸರರಾದ ಮಿ. ಕುಲಕರ್ಣಿ ಇವರು ಈ ಸಮ್ಮೇಲನದಲ್ಲಿ ನೆರೆದ ಶಿಕ್ಷಕರಿಗೆ ತಮ್ಮ ಉದ್ದೇಶವನ್ನು ತಿಳಿಸಿ ಹೇಳಿದರು. ದೇಹದಂಡನ ಶಿಕ್ಷೆಯಿಂದ ಕೆಟ್ಟ ಪರಿಣಾಮವಾಗುತ್ತದೆ ಎಂದು ಸಪ್ರಮಾಣವಾಗಿ ಹೇಳಿದರು. ಇಲ್ಲಿಗೆ ಮಧ್ಯಾಹ್ನದ ಕಾರ್ಯವು ಮುಗಿಯಿತು.

ಮಧ್ಯಾಹ್ನದಲ್ಲಿ ಸಮ್ಮೇಲನದ ಕಾರ್ಯವು ಪ್ರಾರಂಭವಾದ ಕೂಡಲೆ ಮೊದಲೇ ಗೊತ್ತಾದ ಪ್ರಕಾರ ಸರ್ವಾನುಮತದಿಂದ ಮೂರು ಠರಾವುಗಳು ಪಾಸ ಮಾಡಲ್ಪಟ್ಟವು. ಅವು ಯಾವವೆಂದರೆ:—

೧ನೇ ಠರಾವು:—ಸದ್ಯದ ಮಹಾಯುದ್ಧದಲ್ಲಿ ನಮ್ಮ ಬಾದಶಹರೂ ಸಖಮಂಡಲದವರೂ ನಮ್ಮ ಕ್ಷೇಮಕ್ಕಾಗಿಯೂ ಚಿಕ್ಕಪುಟ್ಟ ರಾಷ್ಟ್ರಗಳ ಸಂರಕ್ಷಣಕ್ಕಾಗಿಯೂ ಕಾದುತ್ತಿರುವರು. ಈ ಯುದ್ಧದಲ್ಲಿ ನಮ್ಮ ಬಾದಶಹರವರಿಗೂ ಸಖಿಮಂಡಲಕ್ಕೂ ಬೇಗನೆ ವಿಜಯ ಪ್ರಾಪ್ತಿಯಾಗಲೆಂದು ನಾವು ದಿನಾಲು ದೇವರನ್ನು ಪ್ರಾರ್ಥಿಸತಕ್ಕದ್ದೆಂದು ಈ ಸಮ್ಮೇಲದ ಅಭಿಪ್ರಾಯವಿರುತ್ತದೆ.

೨ನೇ ಠರಾವು:—ಕರ್ನಾಟಕ ಶಿಕ್ಷಕ ಮಂಡಲದ ವತಿಯಿಂದ ರಾವಬಹಾದ್ದುರ ವ್ಹಿ. ಬಿ. ಜೋಶಿ ಇವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಕೂಡಿದ ಸಮ್ಮೇಲನದಲ್ಲಿ ನೆರೆದ ಸಭಿಕರು ೪, ೫, ೬ ಹಾಗು ೭ನೇ ಕ್ರಮಿಕ ಪುಸ್ತಕಗಳೊಳಗಿನ ಪದಾರ್ಥವಿಜ್ಞಾನ ಹಾಗು ರಸಾಯನ ಶಾಸ್ತ್ರಗಳ ಪಾಠಗಳ ಬಗ್ಗೆ ಕೆಳಗೆ ಕಾಣಿಸಿದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

(೧) ಇವುಗಳಲ್ಲಿ ಬಹಳ ಪಾಠಗಳೊಳಗಿನ ವಿಷಯವು ವಿದ್ಯಾರ್ಥಿಗಳ ಯೋಗ್ಯತೆಯನ್ನು ಮೀರಿರುವದರಿಂದಲೂ,

(೨) ಈ ಪಾಠಗಳ ಅನುಕ್ರಮವು ತಕ್ಕದ್ದಿಲ್ಲದ್ದರಿಂದಲೂ,

(೩) ಬೇರೆ ಬೇರೆ ಪುಸ್ತಕಗಳಲ್ಲಿ ಒಂದೇ ವಿಷಯದ ಒಂದು ಭಾಗವನ್ನು ಒಮ್ಮೆ ಕಲಿಸಿ ಬಹಳ ದಿವಸಗಳಾದ ಬಳಿಕ ಮುಂದಿನ ಭಾಗವನ್ನು ಕಲಿಸಬೇಕಾಗುವದರಿಂದಲೂ,

(೪) ಈ ಪಾಠಗಳನ್ನು ಕಲಿಸಲಿಕ್ಕೆ ಬೇಕಾಗುವ ಉಪಕರಣಗಳನ್ನು ಎಲ್ಲ ಶಾಲೆಗಳಿಗೆ ಪೂರೈಸಿ ಕೊಡುವದು ಅಸಾಧ್ಯವಿರುವದರಿಂದಲೂ ಅವುಗಳಿಂದ ಆಗಬೇಕಾದ ಪ್ರಯೋಜನವು ಆಗುವ ಸಂಭವವಿಲ್ಲ.

ಈ ಮೂಲಕ ಶಿಕ್ಷಕರು ಅವುಗಳನ್ನು ಕಲಿಸದೆ ಬಿಟ್ಟುಬಿಡುವರು ಇಲ್ಲವೆ ಯಾಂತ್ರಿಕ ರೀತಿಯಿಂದ ಬಾಯಿಪಾಠ ಮಾಡಿಸುವರು. ಆದ್ದರಿಂದ ಆ ಪಾಠಗಳನ್ನು ಕ್ರಮಿಕ ಪುಸ್ತಕಗಳಿಂದ ತೆಗೆದು ಹಾಕಿ ತಕ್ಕ ಉಪಕರಣಗಳುಳ್ಳ ಶಾಲೆಗಳಲ್ಲಿ ಕಲಿಸಲಿಕ್ಕೆ ಬಹುವಂತೆ ಆಯಾ ವಿಷಯಗಳ ಬಗ್ಗೆ ಸಣ್ಣ ಸಣ್ಣ ಪ್ರತ್ಯೇಕ ಪುಸ್ತಕಗಳನ್ನು ಬರೆಯಿಸುವದು ಅವಶ್ಯವೆಂದು ಈ ಸಭೆಯು ಮತವಿರುವದು.

ಈ ಠರಾವನ್ನು ಶಾಲಾಖಾತೆಯ ಮೇಲಧಿಕಾರಿಗಳಿಗೆ ತಿಳಿಸಲಿಕ್ಕೆ ಪ್ರೆಸಿಡೆಂಟರಿಗೆ ಅಧಿಕಾರವು ಕೊಡಲ್ಪಟ್ಟಿದೆ.

ಮೂರನೇ ಠರಾವು— ಕರ್ನಾಟಕ ಶಿಕ್ಷಣಮಂಡಲದ ವತಿಯಿಂದ ಪ್ರತಿವರ್ಷ ಕೂಡುವ ಶಿಕ್ಷಕಶಿಕ್ಷಕಿಯರ ಸಮ್ಮೇಲನದಿಂದ ಹೆಚ್ಚು ಉಪಯೋಗವಾಗುವದು ಇಷ್ಟವಿರುವದರಿಂದಲೂ, ಪ್ರಾಥಮಿಕ ಶಾಲೆಗೆ ಶಿಕ್ಷಕಶಿಕ್ಷಕಿಯರ ಆರ್ಥಿಕ ಸ್ಥಿತಿಯ ಮೂಲಕ ಎಷ್ಟೋ ಜನರಿಗೆ ಸಮ್ಮೇಲನಕ್ಕೆ ಬರುವದು ಅಶಕ್ಯವಿರುವದರಿಂದಲೂ ಈ ಬಗ್ಗೆ ಅನುಕೂಲತೆ ಮಾಡಿಕೊಡಲಿಕ್ಕಾಗಿ, ಸಮ್ಮೇಲಕ್ಕೆ ಕರೆಸಿದ ಶಿಕ್ಷಕರ ಅವರ ಬರಹೋಗುವ ಖರ್ಚಿನ ಕೆಲವು ಹಣವನ್ನಾದರೂ ಶಾಲಾಖಾತೆಯವರು ಕೊಟ್ಟರೆ ಮಂಡಲದ ಕೆಲಸಕ್ಕೆ ಸಹಾಯವಾಗುವದೆಂದೂ ಈ ಬಗ್ಗೆ ಶಾಲಾಖಾತೆಯ ಅಧಿಕಾರಸ್ಥರಿಗೆ ವಿನಂತಿಮಾಡಿಕೊಳ್ಳುವದು ಇಷ್ಟವಿರುವದೆಂದೂ ಈ ಸಭೆ ಮತವಿರುವದು.

ಈ ಠರಾವನ್ನು ಶಾಲಾಖಾತೆಯ ಮೇಲಧಿಕಾರಿಗಳಿಗೆ ತಿಳಿಸಲಿಕ್ಕೆ ಪ್ರೆಸಿಡೆರವರಿಗೆ ಅಧಿಕಾರವು ಕೊಡಲ್ಪಟ್ಟಿದೆ.

ತರುವಾಯ ಅಧ್ಯಕ್ಷರವರ ಸಮಾರೋಪಣದ ಭಾಷಣವಾಯಿತು. ಮೊದಲು ಸಮ್ಮೇಲನದಲ್ಲಿ ಆದ ಪಾಠಗಳ ವಿಷಯವಾಗಿಯೂ ಓದಿದ ನಿಬಂಧಗಳ ವಿಷಯವಾಗಿಯೂ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಆ ಅಭಿಪ್ರಾಯಗಳನ್ನು ಮೇಲೆ ಆಗಾಗ್ಗೆ ಕೊಡುತ್ತ ಬಂದಿರುವೆವು. ತರುವಾಯ ಅವರು ಈಗಿನಕಾಲಕ್ಕೆ ಣದ ಧ್ಯೇಯವು ಏನಿರಬೇಕೆಂಬ ಬಗ್ಗೆಯೂ ಶಿಕ್ಷಕರ ಕರ್ತವ್ಯದ ಬಗ್ಗೆಯೂ ವಾಗಿ ವಿವೇಚನೆಮಾಡಿದರು. ಅವರ ಭಾಷಣದ ಸಾರವೇನಂದರೆ:—

ಈ ಸಮ್ಮೇಲನದ ಮುಖ್ಯ ಉದ್ದೇಶವು ಶಿಕ್ಷಣದ ಉತ್ತಮಪದ್ಧತಿಗಳನ್ನು ನಿರ್ಣಯಿಸುವದಿರುತ್ತದಷ್ಟೇ. ಆದಕಾರಣ ಇವತ್ತಿನ ಸಮಾರೋಪದ ಭಾಷಣದಲ್ಲಿ ನಿಮಗೆ ಶಿಕ್ಷಣಸಂಬಂಧದ ಕೆಲವು ಸಂಗತಿಗಳನ್ನು ಹೇಳಬೇಕೆಂದು ನನ್ನ ಅಪೇಕ್ಷೆ ಇದೆ. ಆದರೆ ಈಗಿನ ಕಾಲದಲ್ಲಿ ಪಾಶ್ಚಿಮಾತ್ಯದೇಶಗಳಲ್ಲಿ ಆಗಿರುವ ಶಿಕ್ಷಣಶಾಸ್ತ್ರದ ಬೆಳವಣಿಗೆಯನ್ನು ವಿಚಾರಿಸಿದರೆ, ಈ ಸ್ವಲ್ಪ ಅವಧಿಯಲ್ಲಿ ನಿಮಗೆ ಯಾವ ಸಂಗತಿಗಳನ್ನು ಹೇಳಬೇಕೆಂಬದು ನನಗೆ ಅರಿಯದಾಗಿದೆ. ಆದರೂ ಮಹಾಸಾಗರದಲ್ಲಿ ಹಡಗಗಳನ್ನು ನಡಿಸುವ ನಾವಿಕರಿಗೆ ಮಾರ್ಗಸೂಚಕವಾಗಿದ್ದಂಥ ಉತ್ತರಧ್ರುವದಂತೆ ಅಥವಾ ದೀಪಸ್ತಂಭದಂತೆ, ಶಿಕ್ಷಣ ಶಾಸ್ತ್ರವೆಂಬ ಮಹಾಸಾಗರದಲ್ಲಿ ಮಾರ್ಗದರ್ಶಕವಾದಂಥ ಒಂದೆರಡು ಸಂಗತಿಗಳನ್ನು ಮಾತ್ರ ಈ ಸ್ವಲ್ಪ ಅವಧಿಯಲ್ಲಿ ಹೇಳಲು ಸಾಧ್ಯವೆಂದು ನನಗೆ ತೋರುತ್ತದೆ.

ಯಾವದೇ ಉದ್ಯೋಗವಿರಲಿ, ಅದರಲ್ಲಿ ಏನಾದರೊಂದು ಸರ್ವಮಾನ್ಯವಾದ ಧ್ಯೇಯವು, ಅಂದರೆ ಸಾಧಿಸತಕ್ಕಂಥ ಸಂಗತಿಯು ಇದ್ದೇ ಇರುತ್ತದೆ. ಆಯಾ ಉದ್ಯೋಗದಲ್ಲಿ ನಿರತರಾದವರು ಆ ಧ್ಯೇಯದ ಕಡೆಗೇ ದೃಷ್ಟಿಯನಿಟ್ಟು ತಾವು ಮಾಡುವ ಎಲ್ಲ ಕೆಲಸಗಳು ಆ ಧ್ಯೇಯಕ್ಕೆ ಅನುರೂಪವಾಗಿವೆಯೋ ಇಲ್ಲವೋ ಎಂಬದನ್ನು ನೋಡಿಕೊಳ್ಳುತ್ತ ತಮ್ಮ ಉದ್ಯೋಗವನ್ನು ಸಾಗಿಸಬೇಕಾಗುತ್ತದೆ. ಅದರಂತೆಯೇ, ಶಿಕ್ಷಣದ ಉದ್ಯೋಗದಲ್ಲಿ ತೊಡಗಿದವರು ಕೂಡಾ ಶಿಕ್ಷಣದ ಧ್ಯೇಯವನ್ನು ಲಕ್ಷ್ಯದಲ್ಲಿಟ್ಟುಕೊಂಡು, ತಮ್ಮ ಶಿಕ್ಷಣಕ್ರಮವು ಆ ಧ್ಯೇಯಕ್ಕನುಸಾರವಾಗಿ ಇದೆಯೋ ಇಲ್ಲವೋ ಎಂಬದನ್ನು ಯಾವಾಗಲೂ ನೋಡುತ್ತಾ ಹೋದರೆ, ತಮ್ಮ ಶಿಕ್ಷಣಕ್ರಮವು ಸರಿಯಾಗಿದೆಯೋ ಇಲ್ಲವೋ ಎಂಬದು ಅವರಿಗೆ ತಾನೇ ಗೊತ್ತಾಗುವದು. ಇನ್ನು, ಶಿಕ್ಷಣದ ಈ ದಿಗ್ದರ್ಶಕವಾದ ಧ್ಯೇಯವು ಯಾವುದೆಂಬದನ್ನು ವಿಚಾರಿಸುವಾ.

ಪ್ರತಿಯೊಂದು ಕಾಲದಲ್ಲಿ ಇರುವ ಯಾವತ್ತು ಸಾಮಾಜಿಕ, ಔದ್ಯೋಗಿಕ, ರಾಜಕೀಯ, ಧಾರ್ಮಿಕ ಇವೇ ಮೊದಲಾದ ಸಂಸ್ಥೆಗಳು ಆಯಾಕಾಲದ ಪರಿಸ್ಥಿತಿಯನ್ನನುಸರಿಸಿ ಜನರಿಗೆ ಪರಮಾವಧಿಯ ಸೌಖ್ಯವನ್ನುಂಟುಮಾಡುವಂಥವಾಗಿರುತ್ತವೆ. ಆದಕಾರಣ, ಯಾವದೇ ಕಾಲದ ಸಂಸ್ಥೆಗಳ ಯುಕ್ತಾಯುಕ್ತತೆಗಳನ್ನು ವಿಮರ್ಶಿಸಬೇಕಾದರೆ ಆಯಾಕಾಲದ ಪರಿಸ್ಥಿತಿಯನ್ನು ಲಕ್ಷಿಸಬೇಕಾಗುವದು. ಇಪ್ಪತ್ತನೆಯ ಶತಮಾನದಲ್ಲಿ ತಲೆದೋರಿದ ಸಂಸ್ಥೆಗಳು ೨೦೦ ವರ್ಷಗಳ ಹಿಂದೆ ಇಲ್ಲದಿರುವದು ಆ ಕಾಲದ ಜನಾವಸ್ಥೆಯ ಕುರುಹೆಂದು ತಿಳಿದರೆ ತಪ್ಪಾಗುವದು. ಈಗಿನ ಮಾದರಿಯ ಲೋಕಶಿಕ್ಷಣದ ಸಂಸ್ಥೆಗಳೂ, ಅಂತರ್ಜಲನಾವೆಗಳೂ ಹಿಂದಿನ ಕಾಲದಲ್ಲಿ ಇಲ್ಲದಿರುವದು

ಆ ಕಾಲಕ್ಕೆ ದೋಷಾಸ್ಪದವಾಗಲಾರದು. ಇದೇ ಪ್ರಕಾರ, ಯಾವದೊಂದು ದೇಶದ ಯಾವದೊಂದು ಕಾಲದ ಪ್ರಗತಿಯ ವಿಷಯವಾಗಿ ವಿಚಾರಿಸಬೇಕಾದರೆ, ಅದನ್ನು ಅದೇ ದೇಶದ ಹಿಂದಿನಸ್ಥಿತಿಗೆ ಹೋಲಿಸದೆ, ಅದೇ ಕಾಲದಲ್ಲಿ ಇರುವ ಇತರ ದೇಶಗಳ ಪ್ರಗತಿಗೆ ಹೋಲಿಸಿದರೆ ನಮಗೆ ಯಥಾರ್ಥಜ್ಞಾನವಾಗುವದು. ಈ ಪ್ರಕಾರ ಈ ನಮ್ಮ ಭರತ ಖಂಡದ ವಿಷಯವಾಗಿ ವಿಚಾರಿಸಿದರೆ, ಕೆಲವು ಶತಮಾನಗಳ ಹಿಂದೆ ಸಂಪತ್ತುವಿದ್ಯಾ ಕಲಾಕೌಶಲ್ಯಗಳಲ್ಲಿ ಆಗಿನ ಕಾಲದಲ್ಲಿ ಗೊತ್ತಾಗಿದ್ದ ಇಡೀ ಭೂಮಂಡಲದಲ್ಲಿ ಅದು ಮೇಲಾಗಿತ್ತು. ಆದರೆ ಈಗಿನ ಪಾಶ್ಚಿಮಾತ್ಯರಾಷ್ಟ್ರಗಳೊಡನೆ ಅದರ ತುಲನೆಮಾಡಿದರೆ, ಅದು ತೀರ ಹೀನಾವಸ್ಥೆಯಲ್ಲಿದ್ದದ್ದು ಕಂಡುಬರುವದು. ಇದೇ ಮೇರೆಗೆ ಪ್ರತಿಯೊಂದು ಕಾಲದ ಶಿಕ್ಷಣಸಂಸ್ಥೆಗಳೂ ಶಿಕ್ಷಣದ ಧ್ಯೇಯವೂ ಆಯಾಕಾಲದ ಸಮಾಜರಚನೆಯನ್ನು ಅವಲಂಬಿಸಿರುವವು.

ಈ ದೇಶದಲ್ಲಿ ಪ್ರಾಚೀನಕಾಲದಲ್ಲಿ ಸಮಾಜರಚನೆಯು ಈಗಿನಂತೆ ಕೇವಲ ಜೀವನಕಲಹದ ತತ್ವವನ್ನೇ ಅವಲಂಬಿಸಿರದೆ, ಚಾತುರ್ವರ್ಣ್ಯವ್ಯವಸ್ಥೆಯು ನೆಲೆಗೊಂಡಿದ್ದು ಪ್ರತಿ ಒಂದು ವರ್ಣದವರಿಗೆ ಸಮಾಜದ ಸುಸ್ಥಿತಿಗೂ ಸೌಖ್ಯಕ್ಕೂ ಅವಶ್ಯವಾದ ಒಂದೊಂದು ಕರ್ತವ್ಯವು ಒಪ್ಪಿಸಲ್ಪಟ್ಟಿತ್ತು. ಹಾಗೂ ಆಗಿನ ರಾಜ್ಯಕರ್ತರ ಕರ್ತವ್ಯವು ಪ್ರತಿಯೊಂದು ವರ್ಣದವರು ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಜರುಗಿಸುವಂತೆ ನೋಡಿಕೊಳ್ಳತಕ್ಕದ್ದೇ ಆಗಿತ್ತು. ಬುದ್ಧಿಸಂಬಂಧವಾದ ಕೆಲಸಗಳನ್ನು ಬ್ರಾಹ್ಮಣ ವರ್ಗದವರೂ, ದೇಶವನ್ನು ಪರಚಕ್ರಗಳಿಂದಲೂ ಅಂತಸ್ಥ ಶತ್ರುಗಳಿಂದಲೂ ರಕ್ಷಿಸುವ ಕೆಲಸವನ್ನು ಕ್ಷತ್ರಿಯರೂ, ಉದ್ಯೋಗ ಕಲಾಕೌಶಲ್ಯ ವ್ಯಾಪಾರ ಇವೇ ಮೊದಲಾದ ದೇಶದ ಸಾಂಪತ್ತಿಕ ಸ್ಥಿತಿಗೆ ಸಂಬಂಧಿಸಿದ ಉದ್ಯೋಗಗಳನ್ನು ವೈಶ್ಯರೂ, ಎಲ್ಲ ತರದ ಮೈದುಡತದ ಕೆಲಸಗಳನ್ನು ಶೂದ್ರರೂ ತಮ್ಮ ತಮ್ಮ ಧರ್ಮವೆಂದೆಣಿಸುತ್ತ ಸುಖ ಸಮಾಧಾನಗಳಿಂದಲೂ ನಿರ್ಮಾತ್ಸರ್ಯದಿಂದಲೂ ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಪ್ರತಿ ಒಂದು ವರ್ಣದ ಪ್ರತಿ ಒಂದು ಕುಟುಂಬವು, ತಮ್ಮತಮ್ಮ ವರ್ಣಕ್ಕೆ ವಿಶಿಷ್ಟವಾದ ವಿದ್ಯಾ, ಶೌರ್ಯ, ಧೈರ್ಯಾದಿ ಗುಣಗಳಲ್ಲಿ ವಂಶಪರಂಪರಾಗತವಾದ ಜ್ಞಾನದಿಂದಲೂ ಅವುಗಳಿಗೆ ಪೋಷಕವಾದ ಅನುವಂಶಿಕ ಪ್ರವೃತ್ತಿಗಳಿಂದಲೂ ಹೆಚ್ಚಳವನ್ನು ಹೊಂದುತ್ತಾ ಆಯಾ ವಿದ್ಯೆಗಳನ್ನೂ ಗುಣಗಳನ್ನೂ ಕಲಿಸುವಂಥ ಶಾಲೆಯೇ ಆಗಿತ್ತೆಂದು ಹೇಳಲು ಪ್ರತ್ಯವಾಯವಿಲ್ಲ. ಆಗಿನ ಸಮಾಜರಚನೆಯಲ್ಲಿ ಈ ನ ತರದ ಸಾಮಾನ್ಯ ಸಾರ್ವಜನಿಕ ಶಿಕ್ಷಣಸಂಸ್ಥೆಗಳಿಗೆ ಅವಕಾಶವೇ ಇರಲಿಲ್ಲ; ಹಾಗೂ ಶಿಕ್ಷಣದ ಧ್ಯೇಯವೂ

ಸಾರ್ವಜನಿಕ ಸ್ವರೂಪದ್ದಾಗಿರದೆ, ಹೆಚ್ಚು ಕಡಿಮೆಯಾಗಿ ವ್ಯಕ್ತಿಸಂಬಂಧವಾಗಿತ್ತು. ರಾಜಕೀಯ ಸಂಬಂಧದಿಂದಾದರೂ ಆಗಿನ ಕಾಲದ ಗ್ರಾಮವ್ಯವಸ್ಥೆಯ ಮೂಲಕ, ರಾಜ್ಯ ಕರ್ತರಿಗೆ ಸಲ್ಲಿಸುವ ಕಪ್ಪಕಾಣಿಕೆಗಳು ಹೊರ್ತಾಗಿ, ಉಳಿದ ಯಾವತ್ತು ವ್ಯವಹಾರಗಳಲ್ಲಿ ಪ್ರತಿ ಒಂದು ಗ್ರಾಮವು ಸ್ವತಂತ್ರವಾದ ಸಮಾಜವಾಗಿತ್ತೆಂದು ಹೇಳಲು ಅಡ್ಡಿ ಇಲ್ಲ. ಆದ್ದರಿಂದ ಆಗಿನ ಕಾಲದ ರಾಜಕೀಯ ವ್ಯವಸ್ಥೆಯ ದೃಷ್ಟಿಯಿಂದ ನೋಡಿದರೂ ಶಿಕ್ಷಣದ ಧ್ಯೇಯವು ಈಗಿನಂತೆ ಗ್ರಾಮಕ್ಕಿಂತಲೂ ಹೆಚ್ಚು ವಿಸ್ತಾರವಾದ ಕ್ಷೇತ್ರಕ್ಕೆ ಸಂಬಂಧಿಸಿ ಇರಲು ಕಾರಣವಿರಲಿಲ್ಲ. ಆದರೆ ಕಾಲಕ್ರಮದಲ್ಲಿ ಹಿಂದುಸ್ತಾನದ ಮೇಲೆ ಪರದೇಶದವರ ದಾಳಿಗಳು ಬರಲಾರಂಭಿಸಲಾಗಿ ಈ ಮನ್ವಂತರವು ಬದಲಾಗಿ, ಚಾತುರ್ವರ್ಣ್ಯವ್ಯವಸ್ಥೆಯು ವಿಸ್ಖಲಿತವಾಗಲಾರಂಭಿಸಿತು. ಮುಂದೆ ಬರಬರುತ್ತ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರವೇಶವು ಆದಂದಿನಿಂದಂತೂ ಈ ಭರತಖಂಡದಲ್ಲಿ ಪ್ರಾಚೀನಕಾಲದಿಂದ ನೆಲೆಗೊಂಡಿದ್ದ ಸಮಾಜವ್ಯವಸ್ಥೆಯು ಒತ್ತರದಿಂದ ಮುರಿಯಲಾರಂಭಿಸಿ, ಜೀವನಕಲಹದ ತತ್ವವೂ ಸಮಾಜದ ಬೇರೆಬೇರೆ ವರ್ಗಗಳಲ್ಲಿ ಪರಸ್ಪರರೊಡನೆ ಸ್ಪರ್ಧೆಯೂ ಕಲೆದೋರಿದವು. ಆದಕಾರಣ, ಈ ಸ್ಥಿತ್ಯಂತರಕ್ಕನುರೂಪವಾಗಿ ಶಿಕ್ಷಣದ ಧ್ಯೇಯವೂ ಶಿಕ್ಷಣದ ಸಂಸ್ಥೆಗಳೂ ಬದಲಾಗುವದು ಅವಶ್ಯವಾಯಿತು. ಹಿಂದಿನಕಾಲದಲ್ಲಿ ಕೌಟುಂಬಿಕ ಅಥವಾ ವೈಯ್ಯಕ್ತಿಕವಾಗಿದ್ದ ಶಿಕ್ಷಣದ ಧ್ಯೇಯವು ಈಗ ಸಾರ್ವಜನಿಕವಾಗಬೇಕಾಯಿತು; ಮತ್ತೂ ಅದಕ್ಕೆ ತಕ್ಕಂತೆ ಶಿಕ್ಷಣಸಂಸ್ಥೆಗಳೂ ಉಂಟಾಗಬೇಕಾಯಿತು. ರಾಜಕೀಯ ದೃಷ್ಟಿಯಿಂದ ನೋಡಿದರೂ ಹಿಂದಿನ ಕಾಲದಲ್ಲಿ ಕೇವಲ ಗ್ರಾಮದ ಆವಶ್ಯಕತೆಗಳನ್ನನುಲಕ್ಷಿಸಿ ನಾಗುತ್ತಿದ್ದ ಶಿಕ್ಷಣವು, ಸಾಂಪ್ರತದಲ್ಲಿ ಇಡೀ ಭೂಖಂಡದಲ್ಲಿ ಪಸರಿಸಿದ್ದ ಸಾಮ್ರಾಜ್ಯದ ಆವಶ್ಯಕತೆಗಳಿಗನುರೂಪವಾಗಿ ನಡೆಯಬೇಕಾಗಿರುವದು. ಇದೇ ಆಶಯವನ್ನು ಬೇರೆ ರೀತಿಯಿಂದ ಹೇಳಬೇಕಾದರೆ, ಈಗಿನ ಶಿಕ್ಷಣದ ಉದ್ದೇಶವು ಬರೇ ಪಂಡಿತರನ್ನೂ ಕಾರಕೂನರನ್ನೂ ತಯಾರಮಾಡುವದಿರದ, ಇಡೀ ಭೂಮಂಡಲದಲ್ಲಿ ಬೇರೆಬೇರೆ ರಾಷ್ಟ್ರಗಳ ನಡುವೆ ಉದ್ಯೋಗವಿದ್ಯಾಕಲಾಕೌಶಲ್ಯಗಳ ಸಂಬಂಧದಿಂದ ನಡೆದಿರುವ ಹೋರಾಟದಲ್ಲಿ ಮೇಲುಪಡೆಯುವದಕ್ಕೂ, ಇಡೀ ಸಾಮ್ರಾಜ್ಯದ ಸಂಬಂಧದಿಂದ ತಾವು ಮಾಡತಕ್ಕ ಕರ್ತವ್ಯಗಳನ್ನು ಮಾಡುವದಕ್ಕೂ, ತಮ್ಮ ಹಕ್ಕುಗಳನ್ನು ಕಾಪಾಡುವದಕ್ಕೂ ತಕ್ಕವರಾದ ನಾಗರಿಕರನ್ನು ತಯಾರಮಾಡುವದಿರುತ್ತದೆಂದು ಹೇಳಬಹುದು. ಇದೇ ಈಗಿನ ಶಿಕ್ಷಣದ ಧ್ಯೇಯವು. ಹಾಗೂ ಈಗಿನ ಶಿಕ್ಷಣವು ಈ ಧ್ಯೇಯಕ್ಕನುರೂಪವಾಗಿ ಇದ್ದರೇ ಅದು ಸರಿಯಾದ ಶಿಕ್ಷಣ

ವೆನಿಸುವದು; ಇಲ್ಲದಿದ್ದರೆ ಇಲ್ಲ. ಇನ್ನು, ಈ ಧ್ಯೇಯವನ್ನನುಸರಿಸಿ ಶಿಕ್ಷಣವನ್ನು ಸಾಗಿಸಬೇಕಾದರೆ ಯಾವ ಸಂಗತಿಗಳನ್ನು ಲಕ್ಷಿಸಬೇಕೆಂಬದನ್ನು ವಿಚಾರಿಸುವಾ. ಈಗಿನ ಕಾಲದಲ್ಲಿ ಮೊದಲಿನಂತೆ ಹುಡುಗರ ಜ್ಞಾಪಕ ಶಕ್ತಿಯನ್ನು ಮಾತ್ರ ಬೆಳಿಸುವಂಥ ಶಿಕ್ಷಣವನ್ನು ಕೊಟ್ಟರೆ ಅದು ಸರಿಯಾದ ಶಿಕ್ಷಣವೆನಿಸಲಾರದು. ಹುಡುಗರ ಮಾನಸಿಕ ಶಾರೀರಿಕ ಶಕ್ತಿಗಳು ವಿಕಾಸಹೊಂದಿ, ಅವರ ಸಾಮಾಜಿಕ ನೈತಿಕ ಪ್ರವೃತ್ತಿಗಳು ಬಲವಾಗಿ, ಅವರು ಈಗಿನ ಕಾಲದ ಸಮಾಜಕ್ಕೆ ತಕ್ಕವರಾಗಬೇಕಾಗಿರುವದು; ಅವರು ಈಗಿನ ಕಾಲಕ್ಕೆ ಯೋಗ್ಯರಾದ ಪೂರ್ಣನಾಗರಿಕರಾಗಲಿಕ್ಕೆ ಬೇಕು. ಆದಕಾರಣ ಶಿಕ್ಷಕರ ಶಿಕ್ಷಣದ ಧೋರಣವು ಯಾವಾಗಲೂ ವಿದ್ಯಾರ್ಥಿಗಳಿಗೆ ಸ್ವತಂತ್ರವಿಚಾರ ಮಾಡುವದಕ್ಕೆ ಅಸ್ಪದ ಕೊರೆಯುವಂತೆ ಇರಬೇಕು. ಈಗ ವಿದ್ಯಾಖಾತೆಯವರು ಪ್ರಚಾರಕ್ಕೆ ತರಬೇಕೆಂದು ಪ್ರಯತ್ನಪಡುತ್ತಿರುವ ಬಾಲೋದ್ಯಾನ, ಹಸ್ತಶಿಕ್ಷಣ ಇವೇ ಮೊದಲಾದ ಶಿಕ್ಷಣ ಪದ್ಧತಿಗಳ ಉದ್ದೇಶವು ಇದೇ ಇರುವದು. ಆದರೆ ಅವು ಸಫಲವಾಗುವದೂ ನಿಷ್ಫಲವಾಗುವದೂ ತಿಳುವಳಿಕೆಯುಳ್ಳ ಶಿಕ್ಷಕವರ್ಗವನ್ನು ಅವಲಂಬಿಸಿರುವದು. ಹುಡುಗರ ಶಾರೀರಿಕ ಶಕ್ತಿಗಳನ್ನು ಬೆಳಿಸುವದಕ್ಕೂ ಅವರಲ್ಲಿ ಸಹಕಾರಿತ್ವ, ವಿಧೇಯತ್ವ, ವ್ಯವಸ್ಥಿತತ್ವ ಇವೇ ಮೊದಲಾದ ಗುಣಗಳನ್ನು ವೃದ್ಧಿಪಡಿಸುವದಕ್ಕೂ ನಿಯಮಬದ್ಧವಾದ ಆಟಗಳು ಬಹಳ ಉಪಯುಕ್ತವಾಗಿರುವವು.

ಈ ಸಾಮಾನ್ಯ ಸಂಗತಿಗಳಲ್ಲದೆ, ಈಗಿನ ಕಾಲಕ್ಕನುಸರಿಸಿ ಶಿಕ್ಷಕರು ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಲಕ್ಷಿಸಬೇಕಾದ ಇನ್ನೂ ಹಲವು ಸಂಗತಿಗಳಿರುವವು. ಅವರು ವಿದ್ಯಾರ್ಥಿಗಳಿಗೆ ಹೆಚ್ಚಿನ ಜ್ಞಾನವನ್ನು ಸಂಪಾದಿಸುವದಕ್ಕೆ ಉತ್ತೇಜನವಾಗುವಂತೆ ವಿದ್ಯಾರ್ಥಿವಾಚನಾಲಯಗಳನ್ನು ಸ್ಥಾಪಿಸಿ ಅವರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವದಕ್ಕೆ ಪ್ರಯತ್ನ ಮಾಡಬೇಕು. ವ್ಯಾಪಾರ ಉದ್ಯೋಗಗಳ ಸಂಬಂಧದಿಂದ ಹಿಂದುಸ್ಥಾನದ ಈಗಿನ ಹೀನ ಸ್ಥಿತಿಯು ಸುಧಾರಿಸಬೇಕಾದರೆ, ಬಹುಜನರು ಬಂಡವಲು ಕೂಡಿಸಿ ದೊಡ್ಡ ಕಂಪನಿಗಳನ್ನು ಮಾಡಿ ವ್ಯಾಪಾರ ಉದ್ಯೋಗಗಳನ್ನು ಬಹಳ ದೊಡ್ಡ ಪ್ರಮಾಣದಿಂದ ನಡಿಸಿದ ಹೊರ್ತು ಈಗಿನ ಔದ್ಯೋಗಿಕ ಸ್ಪರ್ಧೆಯ ಕಾಲದಲ್ಲಿ ನಮ್ಮ ದೇಶವು ಎಂದೂ ಮುಂದರಿಯುವ ಸಂಭವವಿಲ್ಲ. ಇಷ್ಟೇ ಅಲ್ಲ; ನಮ್ಮ ದೇಶದವರು ಇಷ್ಟರೊಳಗೆ ಎಚ್ಚರಿಯದಿದ್ದರೆ, ಈಗ ನಡೆದಿರುವ ಮಹಾಯುದ್ಧವು ಮುಗಿದ ಕೂಡಲೆ ಪ್ರಾರಂಭವಾಗುವ ಔದ್ಯೋಗಿಕ ಮಹಾಯುದ್ಧದಲ್ಲಿ ಹಿಂದುಸ್ಥಾನದ ಗತಿಯು ಏನಾಗುವದೋ ಎಂಬದು ಅತರ್ಕ್ಯವಾಗಿದೆ. ಒಂದು ಮೇಳೆ, ಈಗಿನ ದುರ್ಬಲ ಸ್ಥಿತಿಯು ಹಾಗೇ ಉಳಿದರೆ, ಇವತ್ತಿನಿಂದ

೫೦ ವರ್ಷದ ಅವಧಿಯಲ್ಲಿ ಹಿಂದುಸ್ಥಾನವಾಸಿಗಳೆಲ್ಲ ಈ ದೇಶದಲ್ಲಿ ಪಾಶ್ಚಿಮಾತ್ಯರಿಂದ ನಡಿಸಲ್ಪಟ್ಟ ಪ್ರಚಂಡವಾದ ಉದ್ಯೋಗಗಳಲ್ಲಿ ದುಡಿಯುವಂಥ ಬರೀ ಕೂಲಿಕಾರರು, ಅಥವಾ ಗುಲಾಮರು ಆಗಬಹುದೆಂಬ ಲಕ್ಷಣಗಳು ತೋರಹತ್ತಿವೆ. ಈ ಭರತಖಂಡದ ಭಾವೀನಿವಾಸಿಗಳಾದ ನಿಮ್ಮ ಮೊಮ್ಮಕ್ಕಳುಮರಿಮಕ್ಕಳಿಗೆ ಇಂಥ ದುರವಸ್ಥೆಯು ಬರಬಾರದೆಂದು ನಿಮ್ಮ ಇಚ್ಛೆಯಿದ್ದರೆ, ಈಗ ಶಾಲೆಗಳಿಗೆ ಹೋಗುವ ಚಿಕ್ಕಬಾಲಕರ ಮನಸಿನಲ್ಲಿ ಪರಸ್ಪರ ಸಹಕಾರಿತ್ವದ ತತ್ವವನ್ನು ಚೆನ್ನಾಗಿ ಊರುವದು ಅವಶ್ಯವಾಗಿದೆ. ಈಗ ಕೆಲವು ಶಾಲೆಗಳಲ್ಲಿ ಸ್ಥಾಪಿಸಲ್ಪಟ್ಟಿರುವ ವಿದ್ಯಾರ್ಥಿಸಹಕಾರಿತ್ವದ ಸಂಘಗಳು ಈ ದೃಷ್ಟಿಯಿಂದ ಬಹಳ ಉಪಯುಕ್ತವಾದ ಸಂಸ್ಥೆಗಳಾಗಿವೆ. ಇದಲ್ಲದೆ, ಊರಲ್ಲಿ ಸಮಾಜಸೇವೆಯನ್ನು ಮಾಡುವದಕ್ಕೆ ಅನುಕೂಲವಾದಂಥ ಪ್ರತಿವಂದು ಸಮಯದಲ್ಲಿ ಹುಡುಗರಿಂದ ಲೋಕೋಪಯುಕ್ತವಾದ ಕೆಲಸಗಳನ್ನು ಮಾಡಿಸಿ ಅವರಿಗೆ ಸಾರ್ವಜನಿಕ ಕೆಲಸಗಳನ್ನು ನಿರಪೇಕ್ಷಬುದ್ಧಿಯಿಂದ ಮಾಡುವ ಕಟವನ್ನು ಹಚ್ಚುವದು ಮಾಸ್ತರರ ಮಹತ್ವದ ಕರ್ತವ್ಯವಾಗಿರುತ್ತದೆಂದು ನಾನು ತಿಳಿಯುತ್ತೇನೆ. ಈ ಪ್ರಕಾರ ಹುಡುಗರ ಮನಸ್ಸಿನಲ್ಲಿ ತಾವು ಪ್ರತಿಯೊಬ್ಬರು ತಮ್ಮಷ್ಟಕ್ಕೆ ತಂತ್ರರಾಗಿರದೆ, ಇಡೀ ದೇಶದ ಸಂಬಂಧದಿಂದಲೂ ತಮ್ಮ ಕರ್ತವ್ಯಗಳಿರುತ್ತವೆಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸುವದು ಅವಶ್ಯವಾಗಿರುತ್ತದೆ. ಇದಲ್ಲದೆ, ಶಾಲೆಯೊಳಗಿನ ಶಿಕ್ಷಣದ ಸಂಬಂಧದಿಂದ ಶಿಕ್ಷಕರು ಮಾಡತಕ್ಕ ಮತ್ತೊಂದು ಮಹತ್ವದ ಕರ್ತವ್ಯವಿರುತ್ತದೆ. ಅದು ನೀತಿಶಿಕ್ಷಣಕ್ಕೆ ಸಂಬಂಧವಾದದ್ದು. ಸತ್ಯನಿಷ್ಠೆ ಮತ್ತು ಸ್ವಾಭಿಮಾನವು ಎಲ್ಲ ನೀತಿಶಿಕ್ಷಣದ ಅಸ್ತಿವಾರವಾಗಿರುತ್ತವೆಂದು ಹೇಳಿದರೆ ಅತಿಶಯೋಕ್ತಿಯಾಗದಿಲ್ಲ. ಇವು ಹುಡುಗರಲ್ಲಿ ಓತಪ್ರೋತವಾಗಿ ತುಂಬುವಂತೆ ಶಿಕ್ಷಕರು ಉಪದೇಶದಲೂ ತಮ್ಮ ಸ್ವಂತನಡತೆಯಿಂದಲೂ ಯತ್ನಿಸತಕ್ಕದ್ದು. ಈ ಗುಣಗಳನ್ನು ಆಚರಣೆಗೆ ತರುವದಕ್ಕೆ ಹುಡುಗರಿಗೆ ಪ್ರತಿಯೊಂದು ಪ್ರಸಂಗದಲ್ಲಿ ಉತ್ತೇಜನ ಕೊಡತಕ್ಕದ್ದು.

ಈಪ್ರಕಾರ ಶಿಕ್ಷಕರು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಬಂಧದಿಂದ ಮಾಡತಕ್ಕ ಕೆಲವು ಕರ್ತವ್ಯಗಳನ್ನು ಹೇಳಿಯಾಯಿತು. ಆದರೆ ಶಿಕ್ಷಕರ ಕರ್ತವ್ಯದಕ್ಷೇತ್ರವು ಇಷ್ಟಕ್ಕೇ ಮುಗಿಯಿತೆಂದು ತಿಳಿಯಕೂಡದು. ಶಿಕ್ಷಕರೂ ಎಲ್ಲ ಸುಶಿಕ್ಷಿತ ಗೃಹಸ್ಥರೂ ತಮಗೆ ದೊರೆದ ವಿದ್ಯೆಯು ಹಗಲಿರುಳು ದುಡಿಯುವ ರೈತರಿಂದ ವಸೂಲು ಮಾಡಲ್ಪಟ್ಟ ಕಂದಾಯದ ಹಣದ ಫಲವಾಗಿರುತ್ತದೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು. ಆದ್ದರಿಂದ ಅವರು ರೈತರಿಂದ ಸಂಪಾದಿಸಿದ ತಮ್ಮ ಜ್ಞಾನದ ಕೆಲಭಾಗವನ್ನಾದರೂ ರೈತರ ಅಜ್ಞಾನವನ್ನು ನೀಗಲಿಕ್ಕೆ ಉಪಯೋಗಿಸದಿದ್ದರೆ ಕೃತಘ್ನತಾದೋಷಕ್ಕೆ ಪಾತ್ರರಾಗುವಾ

ರೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು. ಈ ಸಂಗತಿಯು ಶಿಕ್ಷಣದ ಉದ್ಯೋಗವನ್ನೇ ಕೈಕೊಂ ಡಂಥ ಶಿಕ್ಷಕವರ್ಗದವರಿಗಂತೂ ವಿಶೇಷ ಸರಿಬೀಳುತ್ತದೆ. ಅದಕಾರಣ, ಪ್ರತಿಯೊಬ್ಬ ಶಿಕ್ಷಕನು ಶಾಲೆಯಲ್ಲಿ ತನ್ನ ವಿದ್ಯಾರ್ಥಿಗಳ ಸಂಬಂಧದಿಂದ ಮಾಡತಕ್ಕ ಕರ್ತವ್ಯಗಳ ಕ್ಷೇತ್ರವನ್ನು ಬೆಳಿಸಿ, ತ ನಿರುವ ಊರ ಜನರೊಳಗೆ ಜ್ಞಾನಪ್ರಸಾರವೂ, ಐಕಮತ್ಯವೂ, ಸಹಕಾರಿತ್ವವೂ ಉಂಟಾಗುವಂತೆ ಯತ್ನಿಸತಕ್ಕದ್ದು. ಸದ್ಯದಲ್ಲಿ ವಾಚನಾಲಯಗಳಿಲ್ಲದಂಥ ಊರುಗಳು ಬಹಳ ಇರುತ್ತವೆ. ಶಾಲೆ ಇದ್ದಂಥ ಊರಲ್ಲಿ ಸಾರ್ವಜನಿಕ ವಾಚನಾ ಲಯವಿಲ್ಲದಿರುವದು, ಆ ಶಾಲೆಯ ಶಿಕ್ಷಕವರ್ಗಕ್ಕೆ ಲಜ್ಜಾಸ್ಪದವಾದದ್ದೆಂದು ನಾನು ತಿಳಿಯುತ್ತೇನೆ. ಯಾಕಂದರೆ ಅವರು ಯತ್ನಮಾಡಿದರೆ ಅಲ್ಲಿ ವಾಚನಾಲಯವನ್ನು ಸ್ಥಾಪಿ ಸುವದು ಅಸಾಧ್ಯವಲ್ಲವೆಂದು ನಾನು ತಿಳಿಯುತ್ತೇನೆ. ಇಂಥ ವಾಚನಾಲಯಗಳನ್ನು ಸ್ಥಾಪಿಸಿ, ಅಲ್ಲಿ ಚಲೋ ವರ್ತಮಾನ ಪತ್ರಗಳನ್ನೂ ಮಾಸಿಕ ಪುಸ್ತಕಗಳನ್ನೂ ಮನೋ ರಂಜಕವಾದ ಇತರ ಪುಸ್ತಕಗಳನ್ನೂ ಇಟ್ಟು, ಕೆಲವು ದಿವಸಗಳವರೆಗೆ ಶಿಕ್ಷಕರೇ ಅವುಗ ಳನ್ನು ಜನರಿಗೆ ಓದಿ ಹೇಳಿದರೆ, ಸ್ವಲ್ಪ ದಿವಸದಲ್ಲಿ ಆ ಊರ ಜನರಲ್ಲಿ ಜ್ಞಾನಾಭಿರುಚಿಯೂ ವಾಚನಾಭಿರುಚಿಯೂ ನಿಃಸಂದೇಹವಾಗಿ ತಲೆದೋರುವವು. ಈ ಪ್ರಕಾರ ಎಲ್ಲ ಶಿಕ್ಷ ಕರು ಯತ್ನಮಾಡಿದರೆ, ಸ್ವಲ್ಪ ಕಾಲದಲ್ಲಿ ಬಹು ಜನರಲ್ಲಿ ವಾಚನಾಭಿರುಚಿಯು ಉಂಟಾಗಿ, ಒಳ್ಳೇ ವರ್ತಮಾನ ಪತ್ರಗಳೂ ಗ್ರಂಥಗಳೂ ಹುಟ್ಟುವದಕ್ಕೆ ಸಹಾಯವಾ ಗುವದು; ಮತ್ತು ಇದರಿಂದ ವರ್ತಮಾನಪತ್ರಕರ್ತರಿಗೂ ಗ್ರಂಥಕರ್ತರಿಗೂ ಉತ್ತೇಜನ ವಿಲ್ಲವೆಂಬ ಮಾತು ಹಳೆಯದಾಗುವದು. ಇದಲ್ಲದೆ ಶಿಕ್ಷಕರು ಊರಲ್ಲಿ ಆಗಾಗ್ಗೆ ಉಪಯುಕ್ತ ವಿಷಯಗಳ ಮೇಲೆ ವ್ಯಾಖ್ಯಾನಗಳನ್ನು ಕೊಟ್ಟು ಜನರ ಜ್ಞಾನವನು ಬೆಳಿಸಬಹುದು. ಈ ಪ್ರಕಾರ ಶಿಕ್ಷಕವರ್ಗದವರೆಲ್ಲರೂ ತಮ್ಮ ಕರ್ತವ್ಯಗಳನ್ನು ಮಾಡಿ ಶ್ರೇಯಸ್ಸು ಪಡೆಯುವರೆಂದು ನಂಬುತ್ತೇನೆ.

ಈ ಪ್ರಕಾರ ಅಧ್ಯಕ್ಷರು ಶಿಕ್ಷಕವರ್ಗದವರನ್ನುದ್ದೇಶಿಸಿ ಮಾತಾಡಿದನಂತರ, ಶಿಕ್ಷಣ ಯತ್ನವನ್ನುದ್ದೇಶಿಸಿ ಅವರಾದರೂ ಇದುವರೆಗೆ ಹೇಳಿದ ಶಿಕ್ಷಣ ತತ್ವಗಳನ್ನೇ ಅನುಸರಿಸ ತಕ್ಕದ್ದೆಂತಲೂ, ಒಂದು ರೀತಿಯಿಂದ ಅವರ ಜವಾಬದಾರಿಯು ಶಿಕ್ಷಕವರ್ಗದವರಿಗಿಂ ತಲೂ ಹೆಚ್ಚು ಇರುವದೆಂತಲೂ, ಹಿಂದುಸ್ಥಾನದ ಇತಿಹಾಸಪುರಾಣಾದಿಗಳಲ್ಲಿ ಪ್ರಸಿದ್ಧಿ ಪಡೆದಂಥ ಸ್ತ್ರೀಯರ ಮತ್ತು ಪುರುಷರ ಕೀರ್ತಿಗೆ ಅನುರೂಪವಾದಂಥ ಸ್ತ್ರೀಪುರುಷರ ಉದಯಿಸುವದಕ್ಕೆ ಈಗ ಕನ್ಯಾಶಾಲೆಗಳಲ್ಲಿ ಕಲಿಯುತ್ತಿದ್ದಂಥ ಹೆಣ್ಣುಮಕ್ಕಳೇ ಕಾರಣ ರಾಗುವರೆಂತಲೂ, ಪುರುಷರು ಕೈಕೊಳ್ಳುವಂಥ ಸತ್ಕಾರ್ಯಗಳಲ್ಲಿ ಸುಶಿಕ್ಷಿತರಾದ ಸ್ತ್ರೀ ಯರ ಬೆಂಬಲವಿಲ್ಲದಿದ್ದರೆ ಅವರ ಕಾರ್ಯಗಳು ಎಂದೂ ಪರಿಪೂರ್ಣವಾದಲಾರವೆಂತಲೂ

ಅದಕಾರಣ ಶಿಕ್ಷಕಿಯರು ತಮ್ಮ ಪವಿತ್ರವಾದ ಕರ್ತವ್ಯವನ್ನು ದಕ್ಷತೆಯಿಂದ ಮಾಡಿ ಕೀರ್ತಿಯನ್ನು ಪಡೆಯಬೇಕೆಂತಲೂ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಅಬಳಿಕ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಾದ ರಾ. ಸಾ. ಕುಲಕರ್ಣಿಯವರು ಅಧ್ಯಕ್ಷರ ಆಭಾರಮನ್ನಿಸುವಾಗ, ಕಳೆದ ವರ್ಷಕ್ಕಿಂತ ಈ ವರ್ಷ ರಾ. ಬ. ಜೋಶಿಯವರ ಅಧ್ಯಕ್ಷತೆಯ ಕೆಳಗೆ ನಮ್ಮ ಸಮ್ಮೇಲನದ ಕಾರ್ಯವು ಸ್ವತಂತ್ರವಾದ ವಾತಾವರಣದಲ್ಲಿ ಒಳ್ಳೇ ಉತ್ಸಾಹದಿಂದ ಜರಗಿತು. ಮುಂದಿನ ವರ್ಷ ಇದಕ್ಕೂ ಮುಂದೆ ಒಂದು ಮೆಟ್ಟು ಕ್ರಮಿಸೋಣ, ಎಂದು ಹೇಳಿ ಅಧ್ಯಕ್ಷರ ಆಭಾರಮನ್ನಿಸಿದರು.

ಕಡೆಗೆ ಮಂಡಲದ ಸೆಕ್ರೆಟರಿಗಳಾದ ಮಿ. ಮಗಡಾಲರವರು ಈ ಸಮ್ಮೇಲನಕ್ಕೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಸಹಾಯಮಾಡಿದ ಜನರ ಆಭಾರವನ್ನು ಮನ್ನಿಸಿದರು. ಮೆ. ಕಲೆಕ್ಟರ ಸಾ. ರವರು ಈ ಸಮ್ಮೇಲನದ ವಿಷಯವಾಗಿ ಒಳ್ಳೇ ಸಹಾನುಭೂತಿಯನ್ನು ಪ್ರದರ್ಶನಮಾಡಿದರು. ಅವರು ಮೊದಲನೆಯ ದಿವಸ ಸಮ್ಮೇಲನಕ್ಕೆ ಬಂದು ತಿರುಗಿಹೋಗುವಾಗ ಇಷ್ಟೆಲ್ಲ ಸಮುದಾಯವು ಒತ್ತಟ್ಟಿಗೆ ನೆರೆದದ್ದು ಕಂಡು ನನಗೆ ಬಹಳ ಸಂತೋಷವಾಗುತ್ತದೆ. ಇವರಿಗೆ ಸರಿಯಾದ ಮಾರ್ಗವನ್ನು ತೋರಿಸುವದು ನಿಮ್ಮ ಕರ್ತವ್ಯವು; ಈ ಶಿಕ್ಷಕರಿಗೆ ಭತ್ತಿಸಿಗುವದೇ ಹೇಗೆ? ಈ ಮೊದಲಾದ ಉದ್ಗಾರಗಳಿಂದ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ರವರಿಂದ ತಾವು ಅಜಾರಿ ಇದ್ದ ಮೂಲಕ ಸಮ್ಮೇಲನಕ್ಕೆ ಬರುವದು ಆಗಲಿಲ್ಲಾದಕಾರಣ ವಿಷಾದವಾಗುತ್ತದೆಂದು ಅವರ ಸಹಾನುಭೂತಿ ಪರವಾದ ಪತ್ರವು ಬಂದಿತ್ತು. ಶಿಕ್ಷಣಖಾತೆಯ ಮುಖ್ಯಮುಖ್ಯ ಅಧಿಕಾರಿಗಳು ಈ ಕಾರ್ಯಕ್ಕೆ ತಕ್ಕಸಹಾಯವನ್ನು ಮಾಡಿದರು. ಹೊರಗಿನಿಂದ ಬಂದ ಶಿಕ್ಷಕಶಿಕ್ಷಕಿಯರಿಗೆ ನಾಲ್ಕು ದಿವಸಗಳ ಕಿರುಕಳರಜೆಯನ್ನು ಮಂಜೂರ ಮಾಡಿದ್ದರು. ಇಲ್ಲಿಯ ಸ್ಕೂಲಬೋರ್ಡದ ಚೇರಮನ್ನರ ದ ಮಿ. ಹುಲಕೋಟಿ ಬಿ ಎ. ಎಲ್. ಎಲ್. ಬಿ. ಇವರು ಊಟ ಶಾಲೆಗಳಿಗೆ ಸೂಟಿಯನ್ನು ಕೊಟ್ಟಿದ್ದರು. ಹಾಗು ಕಲಿಸುವ ಇಯತ್ತೆಗಳನ್ನು ಸಹ ಕಳಿಸಿಕೊಡಲು ಒಪ್ಪಿಕೊಂಡಿದ್ದರು. ಹುಬ್ಬಳ್ಳಿಯ ಮ್ಯುನಸಿಪಾಲಿಟಿಯ ಚೇರಮನ್ನರಾದ ಮಿ. ಕಂಬಳಿ ಬಿ. ಎ. ಎಲ್. ಎಲ್.ಬಿ ಇವರಾದರೂ ಸಮ್ಮೇಲನದ ಬಗ್ಗೆ ಸಹಾನುಭೂತಿ ಪರವಾದ ಸಂದೇಶವನ್ನು ಕಳಿಸಿಕೊಟ್ಟಿದ್ದರು.

ಈ ವರುಷ ಹೊರಗಿನ ಪ್ರಾಂತಗಳ ಅನುಭವಿಕರಾದ ಶಿಕ್ಷಕರ ಅನುಭವವನ್ನು ಪಡಿಕೊಳ್ಳುವ ಬಗ್ಗೆ ವ್ಯವಸ್ಥೆಯಾಗಿತ್ತು. ಪುಣೆಯ ಹೆಣ್ಣುಮಕ್ಕಳ ಕಾಲೇಜದಿಂದ ಬಂದಿರುವ ಗೃಹಸ್ಥರಿಗೆ ಅಕಸ್ಮಿಕ ಅಡಚಣೆಗಳು ಒದಗಿದ್ದರ ಮೂಲಕ ನನಗೆ

ಬಹಳ ವಿಷಾದವೆನಿಸುತ್ತದೆ. ಅನುಭವಿಕರಾದ ಇಬ್ಬರು ಶಿಕ್ಷಕರನ್ನು ದಯವಿಟ್ಟು ಕಳಿಸಿ ಕರ್ನಾಟಕದ ಈ ಭಾಗದ ಪ್ರಾಥಮಿಕ ಶಿಕ್ಷಕರು ಆರಂಭಿಸಿರುವ ಈ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ಮೈಸೂರಪ್ರಾಂತದ ವಿದ್ಯಾಧಿಕಾರಿಗಳನ್ನು ಕೇಳಿಕೊಂಡಿದ್ದಾಯಿತು; ಈ ವರುಷ ಶಿಕ್ಷಕರನ್ನು ಕಳಿಸಿಕೊಡುವದಾಗುವದಿಲ್ಲವಾದ್ದರಿಂದ ತಮಗೆ ವಿಷಾದವಾಗುತ್ತದೆಂದೂ, ಸಂಮೇಲನದಲ್ಲಿ ನಡೆದ ಕಾರ್ಯಗಳ ಬಗ್ಗೆ ತಮಗೆ ತಿಳಿಸಿದರೆ ಬಹಳ ಸಂತೋಷವಾಗುವದೆಂದೂ ಮೈಸೂರು ಪ್ರಾಂತದ ವಿದ್ಯಾಖಾತೆಯ ಮೇಲಧಿಕಾರಿಗಳು ಬರೆದಿರುವರು. ಇನ್ನು ಮುಂದೆಯಾದರೂ ಅವರ ಸಹಾಯವು ನಮಗೆ ಲಭಿಸುವದೆಂಬ ಆಶೆಯು ಬಹು ಸಮಾಧಾನಕರವಾದದ್ದು. ಈ ಬಗ್ಗೆ ಅವರ ಉಪಕಾರವೂ ಸ್ಮರಣೀಯವಾಗಿರುವದು.

ಆ ಮೇಲೆ ತಾಂಬೂಲ ಹೂಮಾಲೆಗಳಿಂದ ನೆರದವರನ್ನೆಲ್ಲ ಮನ್ನಿಸಿ, ಹೆಣ್ಣು ಮಕ್ಕಳ ಟ್ರೇನಿಂಗಕಾಲೇಜದ ವಿದ್ಯಾರ್ಥಿನಿಯರು ರಾಷ್ಟ್ರಗೀತವನ್ನು ಅಂದಬಳಿಕ ಸಭಾವಿಸರ್ಜನವಾಯಿತು.

ಸವಿನಯ ಪ್ರಾರ್ಥನೆ.

ಕಳೆದ ವರ್ಷದಲ್ಲಿ ಸುಮಾರು ೫೦ ಜನರಿಂದ ಕರ್ನಾಟಕ ಶಿಕ್ಷಕಮಂಡಲದ ವರ್ಗಣೀ ಹಣವು ಇನ್ನೂ ಬರಲಿಲ್ಲ. ಅವರು ದಯವಿಟ್ಟು ಆ ಹಣವನ್ನು ಬೇಗ ಕಳಿಸಬೇಕೆಂದು ವಿನಂತಿಯುದೆ. ಕಳೆದ ವರ್ಷದಲ್ಲಿ ಕ. ಶಿ. ಮಂಡಲದಿಂದ ಪ್ರಸಿದ್ಧಿಸಲ್ಪಟ್ಟ ಪಾಮಾಲೆ ಪುಸ್ತ ೧. ಈ ಪುಸ್ತಕಗಳು ಕೆಲವರಿಗೆ ಈ ಮೊದಲೇ ದೊರೆತಿರುವವು. ಇ ಸಾರೆ ಅವುಗಳನ್ನು ಎಲ್ಲರಿಗೂ ಮುಟ್ಟಿಸುವ ವ್ಯವಸ್ಥೆಯು ಆಗಲಿಲ್ಲ. ಮುಟ್ಟದೆ ಇ ಶಿಕ್ಷಕಶಿಕ್ಷಿಕೆಯರು ತಮ್ಮ ಹೆಸರುಗಳನ್ನು ದಯವಿಟ್ಟು ತಿಳಿಸಿದಲ್ಲಿ ಅವುಗಳನ್ನು ಮುಂದಿ ವರ್ಷದ ವರ್ಗಣೀ ಹಣದೊಂದಿಗೆ ವಿ. ಪಿ. ಮೂಲಕ ಕಳಿಸುವ ವ್ಯವಸ್ಥೆಯು ಮಾಲ್ಪಡುವದು. ಅವರು ಅದನ್ನು ದಯವಿಟ್ಟು ಸ್ವೀಕರಿಸಬೇಕೆಂದು ಅಪೇಕ್ಷಿಸುವೆನು. ಈ ಸಾಯ ವಾರ್ಷಿಕ ಸಭೆಯಲ್ಲಿಯೇ ಕೆಲವು ಶಿಕ್ಷಕಶಿಕ್ಷಿಕೆಯರು ಹೊಸದಾಗಿ ಸಭಾಸದರಾದರು. ಇದರಂತೆ ಉಳಿದ ಶಿಕ್ಷಕಶಿಕ್ಷಿಕೆಯರು ಕೂಡ ಪ್ರೋತ್ಸಾಹಿಸಿ ಈ ಮಂಡಲದ ಉದ್ದೇಶಗಳನ್ನು ಸಫಲಗೊಳಿಸಬೇಕೆಂದು ಕೋರುತ್ತೇವೆ. ಹಾಗೂ ಇದರ ಬಗ್ಗೆ ಏನಾದರೂ ಸೂಚನೆಗಳನ್ನು ಮಾಡುವದಿದ್ದರೆ ಅವರು ಎಲ್ಲ ಸಂಗತಿಗಳನ್ನು ಬರೆದು ತಿಳಿಸಬೇಕು. ಅವುಗಳ ಬಗ್ಗೆ ಕಾರ್ಯನಿರ್ವಾಹಕ ಸಭೆಯವರು ಯೋಗ್ಯವಿಚಾರವನ್ನು ಮಾಡುವರು.

V. N. MAGDAL,
ಸೆಕ್ರೆಟರಿ.

ಪ್ರಾಥಮಿಕ ಶಾಲೆಗಳೊಳಗಿನ ಶಾಸ್ತ್ರೀಯಪಾಠಗಳ ಶಿಕ್ಷಣವು.

ಪ್ರಾಥಮಿಕ ಶಾಲೆಗಳೊಳಗಿನ ಶಿಕ್ಷಕರಿಗೆ ಆಯಾ ವಿಷಯಗಳನ್ನು ಕಲಿಸಲಿಕ್ಕೆ ಅನುಕೂಲತೆಯನ್ನು ಮಾಡಿಕೊಡುವದು ಈ ಮಂಡಲದ ಮುಖ್ಯ ಉದ್ದೇಶವಾಗಿರುವದು. ಪ್ರಾಥಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಶಾಸ್ತ್ರೀಯಪಾಠಗಳು ಸೇರಿಸಲ್ಪಟ್ಟದ್ದರಿಂದ ಅವುಗಳ ಬಗ್ಗೆ ವಿಚಾರಮಾಡುವದು ಶಿಕ್ಷಣಮಂಡಲದ ಮಹತ್ವದ ಕೆಲಸಗಳಲ್ಲಿ ಒಂದಾಗಿರುವದು ಈ ವಿಷಯವನ್ನು ಕ್ರಮಿಕಪುಸ್ತಕಗಳಲ್ಲಿ ಸುಮಾರು ೫ ಪ್ರಮಾಣದಿಂದ ಸೇರಿಸಿರುವರೆಂದು ಹೇಳಬಹುದು. ಇತಿಹಾಸ ಭೂಗೋಲ ಗಣಿತ ಮುಂತಾದ ವಿಷಯಗಳನ್ನು ಕಲಿಸಲಿಕ್ಕೆ ಇತ್ತಿತ್ತಲಾಗಿ ಶಿಕ್ಷಕರಿಗೆ ತುಸು ಮಟ್ಟಿಗೆ ಅನುಕೂಲತೆಯನ್ನುಂಟುಮಾಡಿಕೊಡುವ ಪ್ರಯತ್ನವು ನಡೆದಿರುತ್ತದೆ. ಆದರೆ ಶಾಸ್ತ್ರೀಯವಿಷಯದ ಬಗ್ಗೆ ಆ ಪ್ರಕಾರದ ಅನುಕೂಲತೆಯನ್ನು ಉಂಟುಮಾಡಿಕೊಡಲಿಕ್ಕೆ ಈ ಹೊತ್ತಿನವರೆಗೆ ಯಾವ ಪ್ರಯತ್ನವೂ ಆದದ್ದು ಕಂಡುಬರುವದಿಲ್ಲ; ಆದ್ದರಿಂದ ಈ ದಿವಸ ಈ ನಿಬಂಧದ ದ್ವಾರದಿಂದ ಕ್ರಮಿಕಪುಸ್ತಕಗಳೊಳಗಿನ ಎಲ್ಲ ಶಾಸ್ತ್ರೀಯಪಾಠಗಳ ಸಿಂಹಾವಲೋಕನವನ್ನು ಮಾಡಿ ಅವುಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಬೇಕೆಂದು ಎಣಿಸಿಕೊಂಡಿರುವೆನು. ಇದರಲ್ಲಿ ಕೆಲವು ಕಡೆಯಲ್ಲಿ ವಿರುದ್ಧಟೀಕೆಯನ್ನು ಮಾಡುವ ಪ್ರಸಂಗವು ಬರುವ ಸಂಭವವಿರುತ್ತದೆ. ಆದರೆ ಈ ವಿಷಯವನ್ನು ಕಲಿಸುವಾಗ ಬರುವ ತೊಂದರೆಗಳ ಮೂಲಕ ಈ ಮಾತುಗಳನ್ನು ನಾನು ಸ್ಪಷ್ಟವಾಗಿ ಆಡಿತೋರಿಸಬೇಕಾಗಿದೆ. ಈ ಟೀಕೆಯು ಸರ್ವಮಾನ್ಯವಾಗಲಿಕ್ಕಿಲ್ಲ; ಯಾಕಂದರೆ ಅದು ಕೇವಲ ಒಬ್ಬ ವ್ಯಕ್ತಿಯ ಮತವಾಗಿರುವದು. ಇದರಲ್ಲಿ ಕೆಲವು ದೋಷಗಳಿದ್ದರೆ ಅದಕ್ಕೆ ನನ್ನ ತಪ್ಪುವಿಚಾರವೇ ಕಾರಣೀಭೂತವಾಗಿರುವದು. ಈ ಲೇಖದಲ್ಲಿ ವ್ಯಕ್ತಿವಿಷಯಕ ಟೀಕೆ ಮಾಡುವ ಉದ್ದೇಶವು ಇಲ್ಲ; ಆದರೆ ನನ್ನ ಮತದಂತೆ ವಸ್ತುಸ್ಥಿತಿಯ ನಿದರ್ಶನವನ್ನು ಪ್ರಾಂಜಲತೆಯಿಂದ ತಮ್ಮೆಲ್ಲರ ಮುಂದೆ ಮಾಡಿರುತ್ತೇನೆ.

ಸದ್ಯಕ್ಕೆ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ಕ್ರಮಿಕಪುಸ್ತಕಗಳಲ್ಲಿ ಸೃಷ್ಟಿಜ್ಞಾನದ ಪಾಠಗಳೆಂದು ಒಂದು ಭಾಗವು ಸೇರಿಸಲ್ಪಟ್ಟಿದೆ. ಆ

ಭಾಗವು ಇಡೀ ಪುಸ್ತಕದ ೫ ಭಾಗವಿರುತ್ತದೆ. ಇದರಿಂದ ಈ ವಿಷಯಕ್ಕೆ ಅಭ್ಯಾಸಕ್ರಮದಲ್ಲಿ ಕೊಟ್ಟ ಮಹತ್ವವು ಕಂಡು ಬರುತ್ತದೆ. ಈ ನಿಬಂಧದಲ್ಲಿ ೪, ೫, ೬, ೭ ಈ ಕ್ರಮಿಕಪುಸ್ತಕಗಳೊಳಗಿನ ಪಾಠಗಳ ಬಗ್ಗೆ ಮಾತ್ರ ವಿಚಾರಮಾಡಿರುತ್ತದೆ. ಯಾಕಂದರೆ ಮೊದಲಿನ ಮೂರು ಪುಸ್ತಕಗಳೊಳಗಿನ ಪಾಠಗಳು ನಿಜವಾಗಿ ಶಾಸ್ತ್ರೀಯ ಪಾಠಗಳೆಂದು ಎನ್ನಿಸಿಕೊಳ್ಳುವದಿಲ್ಲ; ಮೇಲೆ ಹೇಳಿದ ಪ್ರತಿಯೊಂದು ಪುಸ್ತಕದಲ್ಲಿ ಸುಮಾರು ೨೫ ಶಾಸ್ತ್ರೀಯ ಪಾಠಗಳಿರುವವು. (೪ನೇ ಪುಸ್ತಕದಲ್ಲಿ ಮಾತ್ರ ೨೪ ಇರುವವು) ಈ ೯೩ ಪಾಠಗಳಲ್ಲಿ ಪದಾರ್ಥವಿಜ್ಞಾನ, ರಸಾಯನ, ಶಾರೀರ, ಜ್ಯೋತಿಷ, ವನಸ್ಪತಿ, ಪ್ರಕೃತಿವಿಮರ್ಶೆ ಮುಂತಾದ ವಿಷಯಗಳೂ ಸಮಾವೇಶವಾಗುವವಲ್ಲದೆ "ಅರ್ವಾಚೀನ ಶಾಸ್ತ್ರಶೋಧಕ ಕೌತುಕಗಳು" "ಭೂಮಿಯ ಇತಿಹಾಸ" "ಮನುಷ್ಯನ ಅತಿ ಸಮೀಪದ ಸಂಬಂಧಿಕರು" ಮೊದಲಾದ ಆಧುನಿಕ ವಿಷಯಗಳು ಸಹ ಸೇರಿಸಲ್ಪಟ್ಟಿವೆ ಆಯಾ ವಿಷಯಗಳ ಪಾಠಗಳ ಸಂಖ್ಯೆಯು ಕೆಳಗೆ ಬರೆದಂತಿರುವದು.

ಪ. ವಿ. ಶಾಸ್ತ್ರ.	೩೮	ಜ್ಯೋತಿಷಶಾಸ್ತ್ರ.	೭
ರಸಾ. ಶಾಸ್ತ್ರ.	೧೦	ವನ. ಶಾಸ್ತ್ರ.	೭
ಶಾರೀರ. ಶಾಸ್ತ್ರ.	೫	ಪ್ರ. ವಿಮರ್ಶೆ.	೨೪
		ಇತರ.	೨

ಅಂತು ೯೩

"ಈ ವಿಷಯಗಳನ್ನು ಹಾಕುವ ಉದ್ದೇಶವು ಸಹಜವಾಗಿ ತಿಳಿಯುವಂತಿದೆ. ಅದು ಯಾವದೆಂದರೆ–ಮುಲ್ಕೀಪರೀಕ್ಷೆಯನ್ನು ಉತ್ತೀರ್ಣನಾದ ವಿದ್ಯಾರ್ಥಿಯ ಶಿಕ್ಷಣವು ತುಸುಮಟ್ಟಿಗೆ ಸರ್ವಾಂಗಪರಿಪೂರ್ಣವಾಗಬೇಕು." ಈ ಉದ್ದೇಶವು ಸ್ತುತ್ಯವೇ ಸರಿ. ಆದರೆ ಹುಡುಗನ ವಯಸ್ಸು, ಹಾಗೂ ಅವನ ಪರಿಸ್ಥಿತಿ, ಇವುಗಳನ್ನು ನೋಡಿದರೆ, ಇದರಿಂದ ಅವನಿಗೆ ಉಪಾಯವಾಗದೆ ಅಪಾಯವಾಗುವ ಸಂಭವವು ಹೆಚ್ಚು ಇರುವದೆಂದು ಕಂಡುಬರುತ್ತದೆ. ಅದು ಹ್ಯಾಗಂದರೆ, ಈ ಹಲವು ವಿಷಯಗಳಿಗೆ ಸಂಬಂಧಿಸಿದ ಕೆಲವು ಗಡಚಾದ ಸಂಗತಿಗಳನ್ನು ಮಾತ್ರ ತಿಳಕೊಳ್ಳಲಿಕ್ಕೆ ಪ್ರಯತ್ನಮಾಡುವ ಕಾಲದಲ್ಲಿ ಹುಡುಗನು ಇತರ ಯಾವದೊಂದು ವಿಷಯದ ಅಭ್ಯಾಸವನ್ನು ಸುಲಭವಾಗಿ ಮಾಡಿಕೊಂಡು ನಿಜವಾದ ಜ್ಞಾನವನ್ನು

ಪಡೆದುಕೊಳ್ಳಲಿಕ್ಕೆ ಆತಂಕವಾಗುವದು. ಮೇಲೆ ಹೇಳಿದ ವಿಷಯಗಳನ್ನು ತಿಳಿಕೊಳ್ಳುವ ಬುದ್ಧಿಸಾಮರ್ಥ್ಯವಂತೂ ಅವನಿಗೆ ಇರುವದಿಲ್ಲ. ಇಂಗ್ಲಂಡ, ಅಮೇರಿಕಾ ಮುಂತಾದ ದೇಶಗಳ ಶಾಲೆಗಳೊಳಗಿನ ಕ್ರಮಿಕ ಪುಸ್ತಕಗಳಲ್ಲಿ ಈ ಪ್ರಕಾರದ ವಿಷಯಗಳನ್ನು ಸೇರಿಸಿದ್ದನ್ನು ನೋಡಿ, ಈ ತರದ ಪಾಠಗಳನ್ನು ನಮ್ಮ ಪ್ರಾಥಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಸೇರಿಸಿರುವರೆಂದು ತಿಳಿದುಬರುತ್ತದೆ. ಆದರೆ ಅಲ್ಲಿಯ ವಿದ್ಯಾರ್ಥಿಗಳ ಪರಿಸ್ಥಿತಿ, ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಪರಿಸ್ಥಿತಿ ಇವುಗಳಲ್ಲಿ ಬಹಳೇ ಹೆಚ್ಚು ಕಡಿಮೆಯುಂಟು. ಆ ದೇಶಗಳಲ್ಲಿ ಪ್ರತಿಯೊಂದು ಮನೆಯಲ್ಲಿ ವಿದ್ಯುದ್ದೀಪ. ಬ್ಯಾಟರಿ, ಎಂಜಿನ ಮುಂತಾದ ಸಾಮಾನುಗಳು ಆಟದ ವಿಷಯಗಳಾಗಿವೆ ಹಾಗೂ ಶಾಸ್ತ್ರೀಯ ಉಪಕರಣಗಳನ್ನು ತಯಾರಿಸುವ ಕಾರಖಾನೆಗಳಂತೂ ಬೀದಿಬೀದಿಗಳಲ್ಲಿರುತ್ತವೆ. ಆದ್ದರಿಂದ ಈ ವಿಷಯಗಳನ್ನು ಕಲಿಸಲಿಕ್ಕೂ, ಹಾಗೂ ತಿಳಿಕೊಳ್ಳಲಿಕ್ಕೂ ಅಲ್ಲಿ ಎಷ್ಟು ಅನುಕೂಲತೆಯಿರುವದೋ ಅದರ ಸಿಕ್ಕಿ ಪಾಲು ಅನುಕೂಲತೆಯು ಹಿಂದುಸ್ತಾನದಲ್ಲಿ ಇರುವದಿಲ್ಲ. ಮೇಲೆ ಹೇಳಿದ ಸಾಮಾನುಗಳನ್ನು ವಿದ್ಯಾರ್ಥಿಗಳಿಗೆ ತೋರಿಸಬೇಕಾದರೆ, ಜಿಲ್ಲೆಯ ಸ್ಥಳಕ್ಕೆ ಹೋಗಬೇಕಾಗುವದು. ಅಲ್ಲಿಯೂ ಅವುಗಳನ್ನು ನೋಡಲಿಕ್ಕೆ ಸಾಕಷ್ಟು ಅನುಕೂಲತೆಯು ಇರುವದಿಲ್ಲ. ಪ್ರಯೋಗಶಾಲೆಗಳಂತೂ ಇಲಾಖೆಯಲ್ಲಿ ಕೈಬೆರಳಿನಿಂದ ಎಣಿಸಲಿಕ್ಕೆ ಬರುವಷ್ಟು ಅವೆಯೋ ಇಲ್ಲವೋ ಎಂಬದರ ಬಗ್ಗೆ ಸಂಶಯವಿರುವದು. ಉಪಕರಣಗಳನ್ನು ತಯಾರಿಸುವ ಕಾರಖಾನೆಗಳಂತೂ ಇಡೀ ಹಿಂದುಸ್ಥಾನದಲ್ಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈ ಪಾಠಗಳನ್ನು ಕಲಿಸುವದು ಎಂತಹ ಕಠಿಣ ಕೆಲಸವಿರುವದೆಂಬದನ್ನು ತಾವೇ ಊಹಿಸಬಹುದು. ಮತ್ತೊಂದು ತೊಂದರೆ ಯಾವದೆಂದರೆ ಈ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದೊರಕಿಸಲಿಕ್ಕೆ ಶಿಕ್ಷಕರಿಗೆ ಉಪಯುಕ್ತವಾದ ಪುಸ್ತಕಗಳು ಈ ಭಾಷೆಯಲ್ಲಿಲ್ಲ. ಶಿಕ್ಷಕರು ಟ್ರೇನಿಂಗಕಾಲೇಜದಲ್ಲಿದ್ದಾಗ (೧೦-೨೦-೩೦) ವರ್ಷಗಳ ಹಿಂದೆ ತಮ್ಮ ಶಿಕ್ಷಕನ ಬಾಯಿಂದ ಹೊರಟ ಮಾತುಗಳನ್ನು ನೆನಪಿಗೆ ತಂದು, ಅವೇ ಮಾತುಗಳನ್ನು ಪ್ರಮಾಣವಾಗಿ ತಿಳಿದು ಕಲಿಸುವ ಪ್ರಸಂಗವು ಅವನಿಗೆ ಬರುತ್ತದೆ. ಕಾಲಾಂತರದಿಂದ ಈ ಮಾಹಿತಿಯಲ್ಲಿ ವಿಶೇಷ ಹೆಚ್ಚು ಕಡಿಮೆಯಾಗುವದು ಸಹಜವು. ಇದಕ್ಕಾಗಿ ಶಿಕ್ಷಕನಿಗೆ ದೋಷಕೊಡುವದು ಸರ್ವಥಾ ಸರಿಯಲ್ಲ.

ಕ್ರಮಿಕಪುಸ್ತಕಗಳಲ್ಲಿ ಮೇಲೆ ಹೇಳಿದ ಎಲ್ಲ ಶಾಸ್ತ್ರಗಳಲ್ಲಿ ಪದಾರ್ಥವಿಜ್ಞಾನಶಾಸ್ತ್ರಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಂತೆ ಕಂಡುಬರುವದು ಹೇಗಂದರೆ–ಶಾಸ್ತ್ರೀಯ ವಿಷಯದ ೯೩ ಪಾಠಗಳಲ್ಲಿ ೩೮ ಪಾಠಗಳು ಈ ವಿಷಯಕ್ಕೆ ಸಂಬಂಧಿಸಿರುವವು. ಆಯಾ ವಿಷಯಗಳ ಮೇಲಿನ ಪಾಠಗಳ ಸಂಖ್ಯೆಯು ಕೆಳಗೆ ಬರೆದಂತೆ ಇರುವದು.

ಯಂತ್ರಶಾಸ್ತ್ರ.	೭	ಘ. ವಿದ್ಯುತ್ತು.	೨	ಧ್ವನಿ.	೩
ಪ್ರಕಾಶದ ಧರ್ಮ.	೧೨	ಲೋಹ.	೧	ಪ್ರಕಾಶ.	೫
ಉಷ್ಣತೆ.	೭	ಪ್ರ. ವಿಮರ್ಶೆ.	೧		———
				ಅಂತು.	೩೮

ಇದರಿಂದ ಪದಾರ್ಥವಿಜ್ಞಾನಶಾಸ್ತ್ರದ ಎಲ್ಲ ಮೂಲತತ್ವಗಳನ್ನು ಕಲಿಸುವ ಉದ್ದೇಶವು ಸ್ಪಷ್ಟವಾಗಿ ಕಂಡುಬರುತ್ತದೆ. ಯಾವದಾದರೊಂದು ಶಾಸ್ತ್ರವನ್ನು ಕಲಿಸಬೇಕಾದರೆ, ಅದರಲ್ಲಿ ಕೆಲವು ಔಪೋದ್ಘಾತಿಕ ಸಂಗತಿಗಳ ಜ್ಞಾನವು ಅವಶ್ಯವಾಗಿ ಬೇಕಾಗಿರುವದು. ಅವುಗಳನ್ನು ಕಲಿಸದೆ ಆ ಶಾಸ್ತ್ರಗಳನ್ನು ಕಲಿಸಲು ಪ್ರಾರಂಭಿಸುವದು ಸರಿಯಲ್ಲ. ಉದಾಹರಣಾರ್ಥವಾಗಿ ಈ ಶಾಸ್ತ್ರವನ್ನು ಕಲಿಸಲಿಕ್ಕೆ ಪ್ರಾರಂಭಿಸುವದಕ್ಕಿಂತ ಮುಂಚೆ ದ್ರವ್ಯ, ಶಕ್ತಿ, ಪದಾರ್ಥ, ಅಣು, ಪರಮಾಣು, ದ್ರವ್ಯದ ೩ ರೂಪಗಳು, ಗುರುತ್ವಾಕರ್ಷಣ, ಸ್ನೇಹಾಕರ್ಷಣ, ರಸಾಯನಾಕರ್ಷಣ ಇವುಗಳ ಸಾಧಾರಣ ಕಲ್ಪನೆಯನ್ನು ಹುಡುಗರಿಗೆ ಮಾಡಿಕೊಡದೆ ಪದಾರ್ಥವಿಜ್ಞಾನಶಾಸ್ತ್ರದೊಳಗಿನ ಯಾವ ಪಾಠವೂ ಕಲಿಸಲಿಕ್ಕೆ ಬರುವಂತಿಲ್ಲ. ಒಂದು ವೇಳೆ ಹಟದಿಂದ ಕಲಿಸಿದರೂ ಹುಡುಗರಿಗೆ ಆ ವಿಷಯದ ಬಗ್ಗೆ ಸ್ಪಷ್ಟವಾದ ಕಲ್ಪನೆಯು ಆಗುವ ಸಂಭವವಿಲ್ಲ. ಇನ್ನು ಕೆಲವು ಪುಸ್ತಕಗಳೊಳಗಿನ ಪಾಠಗಳನ್ನು ನೋಡಿದರೆ, ಇಂಥ ಔಪೋದ್ಘಾತಿಕ ಜ್ಞಾನದಬಗ್ಗೆ ಇದ್ದ ಪಾಠಗಳು ೬ ನೇ ಪುಸ್ತಕದಲ್ಲಿ ಸೇರಿಸಲ್ಪಟ್ಟಿರುತ್ತವೆ.

ಆದ್ದರಿಂದ ೪ನೆಯ, ೫ನೆಯ ಪುಸ್ತಕಗಳಲ್ಲಿರುವ ಈ ವಿಷಯದ ಪಾಠಗಳನ್ನು ಹಾಗೇ ಕಲಿಸಬೇಕಾಗುವದು. ಒಟ್ಟಿನಮೇಲೆ ಈ ಪಾಠಗಳಲ್ಲಿ ತಕ್ಕಕ್ರಮದ ಅಭಾವವಿರುವದರಿಂದ ಇವುಗಳಿಂದ ವಿದ್ಯಾರ್ಥಿಗಳಿಗೆ ಎಷ್ಟು ಪ್ರಯೋಜನವಾಗಬೇಕೋ ಅಷ್ಟು ಆಗುವ ಸಂಭವವಿಲ್ಲ. ಎಂದು ನನ್ನ ಅಭಿಪ್ರಾಯವಿರುವದು. ಇದಲ್ಲದೆ ಒಂದಕ್ಕೊಂದು ಸಂಬಂಧಿಸಿದ

ಪಾಠಗಳು ಬೇರೆ ಬೇರೆ ಪುಸ್ತಕಗಳಲ್ಲಿರುವವು. ಇದರಿಂದ ಒಂದು ವಿಷಯದ ಮೇಲಿನ ಒಂದು ಪಾಠವನ್ನು ಒಂದು ಕಾಲದಲ್ಲಿ ಕಲಿತು ಅದಕ್ಕೆ ನಿಕಟವಾಗಿ ಸಂಬಂಧಿಸಿದ ಬೇರೆ ಪಾಠಗಳನ್ನು ಕಲಿಯಬೇಕಾದರೆ ವಿದ್ಯಾರ್ಥಿಗಳು ಒಂದೆರಡು ವರ್ಷಗಳ ವರೆಗೆ ಮಾರ್ಗಪ್ರತೀಕ್ಷೆಯನ್ನು ಮಾಡಬೇಕಾಗುವದು. ಅಷ್ಟು ಅವಧಿಯಲ್ಲಿ ಹಿಂದಿನ ಪಾಠದ ನೆನವು ಹಾರಿ ಹೋಗಿ, ಮುಂದಿನಪಾಠಕ್ಕೆ ಅದು ಸಾಕಷ್ಟು ಪೋಷಕವಾಗುವ ಸಂಭವವಿಲ್ಲ. ಶಾಸ್ತ್ರೀಯದೃಷ್ಟಿಯಿಂದ ಇಂಥ ಪಾಠಗಳ ಬೆಲೆಯು ಇಲ್ಲದಂತಾಗುವದು. ಮೇಲಾಗಿ ವಿಷಯದ ಒಂದು ಭಾಗವನ್ನು ಕಲಿಸಿದ ಶಿಕ್ಷಕನು ಬದಲಾಗುವದರಿಂದ ಹಿಂದಿನ ಪಾಠಕ್ಕೂ ಮುಂದಿನ ಪಾಠಕ್ಕೂ ಸಂಬಂಧವನ್ನುಂಟುಮಾಡುವ ಹೊಣೆಗಾರಿಕೆಯನ್ನು ಒಬ್ಬರೂ ಹೊರುವದಿಲ್ಲ. ಇದಾದರೂ ಶಾಸ್ತ್ರಾಭ್ಯಾಸದೃಷ್ಟಿಯಿಂದ ಘಾತಕವೇ ಸರಿ.

ಈ ಪಾಠಗಳಲ್ಲಿ ಮತ್ತೊಂದು ದೋಷವು ಯಾವದಿರುವದೆಂದರೆ:– ಪದಾರ್ಥವಿಜ್ಞಾನಶಾಸ್ತ್ರದ ಬೇರೆ ಬೇರೆ ಭಾಗಗಳಿಗೆ ಸರಿಯಾದ ಲಕ್ಷ್ಯವು ಕೊಡಲ್ಪಟ್ಟಿಲ್ಲ. ಒಂದೊಂದು ಭಾಗದೊಳಗಿನ ಮನಸ್ಸಿಗೆ ಬಂದಷ್ಟು ಪಾಠಗಳನ್ನು ಸೇರಿಸಿರುವರು. ಉದಾ: ಪ. ವಿ. ಶಾಸ್ತ್ರದೊಳಗಿನ ಅತಿ ಮಹತ್ವವಾದ ಪ್ರವಾಹಿವಿದ್ಯುತ್ತೆಂಬ ವಿಷಯದ ಮೇಲೆ ಒಂದೇ ಒಂದು "**ತಂತೀಟಪಾಲಂ**"ಬ ಪಾಠವಿದೆ. ಆದರೆ ಈ ಪಾಠವನ್ನು ಚನ್ನಾಗಿ ತಿಳಕೊಳ್ಳಬೇಕಾದರೆ ಸೆಲ್ (ಬ್ಯಾಟರಿ) ಇವುಗಳ ಜ್ಞಾನವು ಅತ್ಯವಶ್ಯವಾದದ್ದು. ಆ ಪಾಠವು ಈ ಪುಸ್ತಕದಲ್ಲಿಲ್ಲದ್ದರಿಂದ ಅಷ್ಟು ಮಾಹಿತಿಯನ್ನು ಮಾಡಿಕೊಡುವ ಭಾರವು ಶಿಕ್ಷಕನ ಮೇಲೆ ಬೀಳುವದು. ಇದರಿಂದ ಪಾಠಗಳನ್ನು ಕಲಿಸಲಿಕ್ಕೆ ಎಷ್ಟು ತೊಂದರೆಯಾಗುವದೋ ಶಿಕ್ಷಕರೇ ಬಲ್ಲರು. ಈ ವಿಷಯದ ಬೇರೆ ಕೆಲವು ಭಾಗಗಳಲ್ಲಿ ಹೆಚ್ಚಿನ ಪಾಠಗಳನ್ನು ಸೇರಿಸಿ ಆ ಬೇರೆ ಬೇರೆ ಪಾಠಗಳನ್ನು ಜೋಡಿಸುವ ನಡುವಿನ ಪಾಠಗಳನ್ನು ಬಿಟ್ಟಿರುವರು. ಇದರಿಂದ ಸಹ ವಿಷಯಜ್ಞಾನವು ಚನ್ನಾಗಿ ಆಗುವ ಸಂಭವವಿಲ್ಲ.

ಈ ಪಾಠಗಳನ್ನು ವಾಚನಪಾಠ ಹಾಗೂ ಶಾಸ್ತ್ರೀಯಪಾಠಗಳಂತೆ ಎರಡು ಪ್ರಕಾರದಿಂದ ಕಲಿಸಬಹುದು. ಈ ಎರಡು ಪ್ರಕಾರಗಳಲ್ಲಿ ಯಾವ ಪದ್ಧತಿಯಿಂದ ಕಲಿಸಬೇಕೆಂಬದನ್ನು ಸ್ಪಷ್ಟವಾಗಿ ಹೇಳಿಲ್ಲ. ಮೊದ

ಲನೇ ಪ್ರಕಾರಕ್ಕೆ ಉಪಕರಣಗಳ ಅವಶ್ಯಕತೆಯಿಲ್ಲ. ಆದರೆ ಈ ಉದ್ದೇ
ಶವನ್ನು ಮುಂದಿಟ್ಟು ಬರೆದ ಪಾಠಗಳ ಭಾಷೆಯಲ್ಲಿ ಪಾರಿಭಾಷಿಕ ಶಬ್ದ
ಗಳು ಅದಷ್ಟು ಕಡಿಮೆಯಿರಲಿಕ್ಕೆಬೇಕು. ವಿಷಯವು ಸಾಮಾನ್ಯಭಾಷೆ
ಯಲ್ಲಿ ಎಲ್ಲರಿಗೆ ತಿಳಿಯುವಂತೆ ಬರೆದಿರಬೇಕು ಅದರೆ ಅನನುಭೂತೋ
ಷ್ಣತೆ, ಪರಿಮೇಯತ್ವ, ನಿರ್ಭೇದ್ಯತ್ವ, ವಿದ್ಯುಲ್ಲೋಹಚುಂಬಕ ಮುಂತಾದ
ಈ ಪುಸ್ತಕದೊಳಗಿನ ಶಬ್ದಗಳನ್ನು ನೋಡಿದರೆ ಎರಡನೇ ಪದ್ಧತಿಯಿಂದ
ಕಲಿಸಬೇಕೆಂಬ ಉದ್ದೇಶವು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಪ್ರಕಾರ
ದಿಂದ ಪಾಠಗಳನ್ನು ಕಲಿಸಬೇಕಾದರೆ ಸಂಪೂರ್ಣ ಉಪಕರಣಗಳ ಅವ
ಶ್ಯಕತೆಯಿರುವದು. ಆದರೆ ಎಲ್ಲಿಯೂ ಆ ಪ್ರಕಾರದ ಅನುಕೂಲತೆ
ಯನ್ನು ಮಾಡಿಕೊಟ್ಟಂತೆ ಕಾಣುವದಿಲ್ಲ. ಇನ್ನು ಸದ್ಯಕ್ಕೆ ನಮ್ಮ ಪ್ರಾಥ
ಮಿಕ ಶಾಲೆಗಳಲ್ಲಿ ಇದರ ಬಗ್ಗೆ ಯಾವ ಕ್ರಮವು ನಡೆಯುತ್ತದೆಂಬದರ
ಬಗ್ಗೆ ವಿಚಾರಮಾಡೋಣ. ಟ್ರೇನಿಂಗಕಾಲೇಜುಗಳೊಳಗಿನ ಪ್ರಯೋಗ
ಶಾಲೆಗಳನ್ನು ಬಿಟ್ಟು ಉಳದ ಕಡೆಗೆ ಎಲ್ಲಿಯೂ ಸಾಕಷ್ಟು ಉಪಕರಣಗಳು
ಇಲ್ಲೆಂದು ಹೇಳಬಹುದು. ಜಿಲ್ಲೆಯ ಶಾಲೆಗಳಲ್ಲಿ ಸಹ ಮದ್ಯಾರ್ಕ
ದೀಪ, ಪರೀಕ್ಷಾನಲಿಕೆ ಇವುಗಳ ಹೊರತು ಉಪಕರಣಗಳು ಸಿಗುವದು
ದುರ್ಲಭವು. ಹಳ್ಳಿಯಶಾಲೆಗಳಲ್ಲಂತೂ, ಉಪಕರಣಗಳ ಹೆಸರನ್ನೆ
ಎತ್ತುವಂತಿಲ್ಲ. ಇತ್ತಲಾಗಿ ಶಿಕ್ಷಕರು ಒಂದೆರಡು ಶಾಲೆಗಳಲ್ಲಿ ಹಣವನ್ನು
ಕೂಡಿಸಿ ಉಪಕರಣಗಳನ್ನು ಕೂಡಿಸುವ ಪ್ರಯತ್ನಗಳನ್ನು ಮಾ
ಡಿದಂತೆ ಕಂಡುಬರುತ್ತದೆ. ಆದರೆ ಈ ಪ್ರಕಾರದ ಉಪಕರಣಗಳಿಂ
ದ ಸಾಕಷ್ಟು ಪ್ರಯೋಜನವುಂಟಾಗುವ ಸಂಭವವಿಲ್ಲ. ಎಲ್ಲ ಪಾಠಗಳನ್ನ
ಕಲಿಸಬೇಕಾದರೆ ಯಂತ್ರಶಾಸ್ತ್ರದ ಎಲ್ಲ ಸಾಮಾನುಗಳ, ಉಷ್ಣತಾಮಾ
ಪಕಯಂತ್ರ, ಭಾರಮಾಪಕಯಂತ್ರ, ಕಿರಣವಕ್ರೀಭವನಯಂತ್ರ, ವಿದ್ಯು
ದ್ಯಂತ್ರ, ಲೋಹಚುಂಬಕ, ಫೋನೋಗ್ರಾಫ, ತಂತೀಟಪಾಲು ಮು
ತಾದ ದೊಡ್ಡ ದೊಡ್ಡ ಯಂತ್ರಗಳ ಸಹಾಯವು ಬೇಕಾಗುವದು
ನಮ್ಮ ಪ್ರಾಥಮಿಕ ಶಾಲೆಗಳಿಗೆ ಇದರೊಳಗಿನ ಒಂದು ಯಂತ್ರ ಸಹ ಕೊಡ
ವದು ಕಷ್ಟ; ಎಲ್ಲ ಯಂತ್ರಗಳ ಹೆಸರುಗಳಂತೂ ದೂರೇ ಇರಲಿ.

ಈ ವಿಷಯದಲ್ಲಿ ಕೆಲವರ ಅಭಿಪ್ರಾಯವೇನಂದರೆ, ಶಿಕ್ಷಕನು ಆಯಾ
ಪಾಠಗಳನ್ನು ಕಲಿಸಲಿಕ್ಕೆ ಬೇಕಾಗುವ ಉಪಕರಣಗಳನ್ನು ತಾನಾಗಿ ಸಿದ್ಧ

ಪಡಿಸಿ ಆ ಪಾಠಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡಬೇಕು. ಉಪಕರಣಗಳನ್ನು ತಯಾರಿಸುವ ಕೆಲಸವು ಇಷ್ಟು ಸುಲಭಸಾಧ್ಯವಿದ್ದರೆ ಇಂಗ್ಲಂಡ ಮುಂತಾದ ದೇಶಗಳಲ್ಲಿ ಹೆಸರು ಪಡೆದಂಥ ಕಾರಖಾನೆಗಳನ್ನು ನಡಿಸುವ ಅವಶ್ಯಕತೆಯು ಉಂಟಾಗುತ್ತಿದ್ದಿಲ್ಲ. ಒಂದೆರಡು ಪ್ರಸಂಗಗಳಲ್ಲಿ ಆ ವಿಷಯದ ಜ್ಞಾನವನ್ನು ಸುಲಭವಾದ ಪ್ರಯೋಗಗಳಿಂದ ಮಾಡಿಕೊಡಲಿಕ್ಕೆ ಬರಬಹುದು. ಆದರೆ ಅದರಿಂದ ಎಲ್ಲ ಪಾಠಗಳನ್ನು ಕಲಿಸುವ ವ್ಯವಸ್ಥೆಯಾಗುವಂತಿಲ್ಲ. ಮೇಲಾಗಿ, ಹಾಗೂ ಹೀಗೂ ತಯಾರಿಸಿದ ಯಂತ್ರಗಳಿಂದ ಹುಡುಗರ ಮನಸ್ಸಿನ ಮೇಲೆ ಆಗತಕ್ಕ ಪರಿಣಾಮದಲ್ಲಿ ನ್ಯೂನತೆಯುಂಟಾಗುವ ಸಂಭವವಿರುತ್ತದೆ. ಅದ್ದರಿಂದ ಯಾವ ಮೊಂದು ಪಾಠವನ್ನು ಕಲಿಸಲಿಕ್ಕೆ ಅದರಲ್ಲಿ ಹೇಳಿರುವ ಉತ್ತಮವಾದ ಉಪಕರಣಗಳನ್ನು ಉಪಯೋಗಿಸುವದೇ ನೆಟ್ಟಗೆ. ಹಾಗೆ ಸಾಧ್ಯವಿಲ್ಲದಿದ್ದರೆ ಆ ಪಾಠಗಳನ್ನು ಕಲಿಸಬಾರದು.

ಆದರೆ ಪಾಠಗಳನ್ನು ಕಲಿಸಬಾರದೆಂದು ಹೇಳಿದರೆ ಕಾರ್ಯವಾಗುತಿಲ್ಲ. ಯಾಕಂದರೆ, ಪ್ರತಿವರ್ಷ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿರುವದು. ಹಾಗು ಪರೀಕ್ಷಕರು ಬಂದಕೂಡಲೆ ಶಿಕ್ಷಕ ಎಷ್ಟು ಶಾಸ್ತ್ರೀಯಪಾಠಗಳಾಗಿವೆಯೆಂದು ಕೇಳುವರು. ಅವುಗಳಿಗೆ ಲೆ ಬರೆದ ಉತ್ತರವನ್ನು ಕೊಟ್ಟರೆ ಶಿಕ್ಷಕನು ಕೆಲಸದಿಂದ ದೂರಾಗುವ ಸಂಗವು ಬರುವದು. ಅವರು ಇಂಥ ಪ್ರಸಂಗದಲ್ಲಿ ಏನು ಾಡಬೇಕೆನ್ನುವದು ಮಹತ್ವದ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಉತ್ತರ ನ್ನು ಹೇಳುವದು ಕಠಿಣವಾಗಿರುವದು. ಆದರೆ **ಅಪದ್ಧರ್ಮವೆಂದು** ದು ಒಂದು ರೀತಿಯಿಂದ ಆದರೂ ಇದಕ್ಕೆ ಉತ್ತರವನ್ನು **ಕೊಡಬೇ**ಗಿರುವದು. ಅದು ಯಾವದೆಂದರೆ—ಪ್ರತಿ ಒಬ್ಬ ಶಿಕ್ಷಕನು ಆಯಾ ಠಗಳೊಳಗಿನ ವಿಷಯಗಳನ್ನನುಸರಿಸಿ ತನಗೆ ಕಲಿಸಲಿಕ್ಕೆ ಅನುಕೂಲಗುವಂತೆ ಅವೇ ಪಾಠಗಳಲ್ಲಿ ಸ್ವಲ್ಪಹೆಚ್ಚುಕಡಿಮೆಗಳನ್ನುಮಾಡಿ ಬರೆಬೇಕು. ಅವನ್ನೇ ಹುಡುಗರಿಗೆ ಕಲಿಸಬೇಕು. ಹಾಗೂ ಪರೀಕ್ಷಕರು ದಾಗ್ಗೆ ಪುಸ್ತಕದೊಳಗಿನ ಪಾಠಗಳನ್ನು ಕಲಿಸದೆ, ನಾನು ಅದರೊಳಗ ವಿಷಯವನ್ನು ಬೇರೆ ರೀತಿಯಿಂದ ಕಲಿಸಿರುವೆನೆಂದು **ಧೈರ್ಯದಿಂದ** ಳಬೇಕು. ಇದಕ್ಕಾದರೂ ಪರೀಕ್ಷಕರು ಸಮ್ಮತಿಸದಿದ್ದರೆ, ಸಭ್ಯಕ್ಕೆದ ಮಾರ್ಗದಿಂದ ಕಣ್ಣುಮುಚ್ಚಿ ನಡೆಯಬೇಕು.

ಈ ಪ್ರಕಾರ ಪಾಠಗಳನ್ನು ಬರೆಯುವದು ಸಹ ಸುಲಭವಾದದ್ದಲ್ಲ ಹಾಗೂ ಪ್ರತಿ ಒಬ್ಬ ಶಿಕ್ಷಕನಿಗೆ ಸಾಧ್ಯವಾಗುವ ಸಂಭವವು ಕಡಿಮೆ. ಆದರಿಂದ ಕೆಲವು ಅನುಭವಿಕ ಶಿಕ್ಷಕರು ಮುಖಂಡರಾಗಿ ಈ ಕಾರ್ಯವನ್ನು ಕೈಕೊಂಡರೆ ಎಲ್ಲರಿಗೆ ಅನುಕೂಲವಾಗುವದು. ಈ ಮಾರ್ಗವನ್ನು ತೋರಿಸಿಕೊಡುವ ಹೊಣೆಯು ನಮ್ಮ ಮೇಲೆ ಸಹ ಇರುವದರಿಂದ ಈ ಪ್ರಕಾರದ ಪಾಠವನ್ನು ರಚಿಸಿತೋರಿಸುವದು ನಮ್ಮ ಅವಶ್ಯವಾದ ಕರ್ತವ್ಯವಾಗಿ ಇದಕ್ಕಾಗಿ ಒನೇ ಪುಸ್ತಕದೊಳಗಿನ ಅತಿಕಠಿಣವೆನಿಸುವ ಒಂದೇ ಪಾಠವಾದ " ಕಾರ್ಯವೂ ಕರ್ತೃತ್ವ ಶಕ್ತಿಯೂ " ಎಂಬ ಪಾಠವನ್ನು ಈ ನಿಬಂಧನೆಯ ಕೊನೆಯ ಭಾಗದಲ್ಲಿ ಹೊಸದಾಗಿ ಬರೆದು ತೋರಿಸಿರುತ್ತದೆ.

ಈ ಪ್ರಕಾರ ಎಲ್ಲ ಪಾಠಗಳನ್ನು ಸುಲಭವಾಗಿ ಬರೆಯುವ ಸಂಭವವಿಲ್ಲ. ಯಾಕಂದರೆ, ಕಾರ್ಯವೂ ಕರ್ತೃತ್ವಶಕ್ತಿಯೂ, ತೇಜೋಮೇಘ, ತೇಜೋಮೇಘದಿಂದ ಗ್ರಹನಕ್ಷತ್ರಗಳ ಉಪಪತ್ತಿ, ಉಷ್ಣತೆಯ ಉಪಪತ್ತಿ, ಮುಂತಾದ ಪಾಠಗಳು ಬಹಳೇ ಕಠಿಣವಿರುವದರಿಂದ ಅವುಗಳನ್ನು ಬಿಟ್ಟು ಬಿಡುವದೇ ಯೋಗ್ಯವು. ಇಂಥದೊಂದು ಪಾಠವನ್ನು ತೆಗೆದುಕೊಂಡು ಅದನ್ನು ಎಷ್ಟರ ಮಟ್ಟಿಗೆ ತಿಳಿಸಿಕೊಡಲಿಕ್ಕೆ ಬರುವದೆಂದರ ಬಗ್ಗೆ ನಾನು ಪ್ರಯತ್ನಮಾಡಿರುವೆನು ಅದು ಎಷ್ಟು ಸಾಧ್ಯವಾಗಿರ ದೆಂಬದನ್ನು ನೀವೇ ಊಹಿಸತಕ್ಕದ್ದು.

ಇನ್ನು ಉಳಿದ ಶಾಸ್ತ್ರೀಯ ಪಾಠಗಳ ಬಗ್ಗೆ ವಿಚಾರಿಸುವಾ. ರಯನ ಶಾಸ್ತ್ರದ ಮೇಲೆ ೧೦ ಪಾಠಗಳಿರುವವು. ಅವುಗಳನ್ನು ನೋಡಿ (ಪಾಠಗಳ ಯಾದಿಯನ್ನು ಪರಿಶಿಷ್ಟದಲ್ಲಿ ಕೊಟ್ಟಿರುತ್ತದೆ ಅದನ್ನು ನೋಬಹುದು.) ಅವು ಒಂದಕ್ಕೊಂದು ಸಂಬಂಧವಿಲ್ಲದ ಬೇರೆ ಬೇರೆ ಪಗಳಿದ್ದಂತೆ ತೋರುವವು. ಹಾಗೂ ಇವುಗಳ ನಿಜವಾದ, ತಿಳುವಳಿಕೆನ್ನುಂಟು ಮಾಡಿಕೊಡುವ ನಡುವಿನ ಪಾಠಗಳಂತೂ ಇಲ್ಲೇ ಇಲ್ಲ. ರಯನ ಶಾಸ್ತ್ರದಲ್ಲಿ ಬೇರೆ ಬೇರೆ ಪಾಠಗಳ ಸಂಬಂಧನ್ನು ತೋರಿಸುವಷ್ಯಕತೆಯು ವಿಶೇಷವಾಗಿರುತ್ತದೆ ಮತ್ತು ಅದರಲ್ಲಿ ಪಾರಿಭಾಷಿಕ ಶಗಳು ಬಹಳ. ಆದ್ದರಿಂದ ಈ ಪುಸ್ತಕಗಳಲ್ಲಿ ಹಾಕಿದ ಪಾಠಗಳಿಂದ ಸಷ್ಟು ಪ್ರಯೋಜನವು ಆಗುವ ಸಂಭವವಿಲ್ಲ.

ಜೋತಿಷಶಾಸ್ತ್ರದ ಬಗ್ಗೆ ೭ಪಾಠಗಳಿರುವವು. ಅವುಗಳಲ್ಲಿ ೭ನೇ ಪು
ಸ್ತಕದೊಳಗಿನ ೯೬, ೯೭ನೆಯ ಪಾಠಗಳನ್ನು ಬಿಟ್ಟರೆ ಉಳಿದ ಪಾಠಗಳನ್ನು
ಕಲಿಸಲಿಕ್ಕೆ ಯಾವಪ್ರಕಾರದ ಅಡ್ಡಿಯೂ ಕಂಡುಬರುವದಿಲ್ಲ. ಈ ಪಾಠ
ಳಿಂದ ಜೋತಿಷಶಾಸ್ತ್ರದ ಎಲ್ಲ ಮೂಲತತ್ವಗಳ ಜ್ಞಾನವಾಗುತ್ತದೆಂದು
ಮಾತ್ರ ತಿಳಿಯಕೂಡದು. ಯಾಕಂದರೆ ಈ ಶಾಸ್ತ್ರದೊಳಗೆ ಸಹ ಕೆಲವು
ಮಹತ್ವದಪಾಠಗಳನ್ನು ಬಿಟ್ಟಿರುವರು.

ವನಸ್ಪತಿ ಶಾಸ್ತ್ರದ ಬಗ್ಗೆ ಪಾಠಗಳನ್ನು ತಕ್ಕ ಮಟ್ಟಿಗೆ ಕಲಿಸಲಿಕ್ಕೆ
ಅನುಕೂಲ ವಿರುತ್ತವೆಂದು ನಮ್ಮ ಅಭಿಪ್ರಾಯವದೆ ಆದರೆ ಆ ವಿಷಯು
ನನ್ನು ಕಲಿಸುವ ಅನುಭವವು ನಮಗೆ ಇಲ್ಲದ್ದರಿಂದ ಆ ವಿಷಯದ ಬಗ್ಗೆ
ಹೆಚ್ಚಿಗೆ ಹೇಳಲಾರೆನು

ಶಾರೀರಿಕ ಶಾಸ್ತ್ರದ ಮೇಲೆ ೭ ಪಾಠಗಳು ಇರುತ್ತವೆ. ಇವುಗಳಲ್ಲಾ
ವರೂ ಪರಸ್ಪರ ಸಂಬಂಧವನ್ನುಂಟು ಮಾಡಿಕೊಡುವ ಪಾಠಗಳ ಅಭಾ
ವವು ಇದ್ದೇಇರುತ್ತದೆ. ಶಿಕ್ಷಕನು ಆ ಕೆಲಸವನ್ನು ವಹಿಸಿಕೊಂಡರೆ
ಮಾತ್ರ ಈ ಪಾಠಗಳನ್ನು ಹೆಚ್ಚು ಪ್ರಯೋಜನವಾಗುವಂತೆ ಕಲಿಸಬಹುದು.

ಪ್ರಕೃತಿವಿಮರ್ಶೆಯ ಪಾಠಗಳ ಸಂಬಂಧದಿಂದ ಮತವನ್ನು ಕೊಡ
ಲಿಕ್ಕೆ ನಾನುಎಲ್ಲ ತರದಿಂದ ಅಸಮರ್ಥನಿರುತ್ತೇನೆ.

ಮೇಲೆ ಪದಾರ್ಥವಿಜ್ಞಾನಶಾಸ್ತ್ರದ ಪಾಠಗಳ ಬಗ್ಗೆ ತೋರಿಸಿದ
ದೋಷಗಳು ಉಳಿದ ಎಲ್ಲ ಶಾಸ್ತ್ರಗಳಲ್ಲಿ ಹೆಚ್ಚುಕಡಿಮೆ ಪ್ರಮಾಣದಿಂದ
ಕಂಡುಬರುವವು.

ಎಷ್ಟೋ ಪ್ರಾಥಮಿಕಶಾಲೆಗಳೊಳಗಿನ ಶಿಕ್ಷಕರು ೭ನೆಯ ಪುಸ್ತಕ
ದೊಳಗಿನ ೭೬ನೆಯ ಪಾಠವು ಬಹಳ ಕಠಿಣವಿರುತ್ತದೆಂದು ಸೂಚನೆಗಳನ್ನು
ಮಾಡಿದ್ದರಿಂದ ನಾನು ಇದೇ ಪಾಠನ್ನು ಇದ್ದ ಸ್ಥಿತಿಯಲ್ಲಿಯೇ ಸುಲಭವಾಗಿ
ಆಗಿಯುವಂತೆ ಮಾಡಲಿಕ್ಕೆ ಪ್ರಯತ್ನ ಮಾಡಿರುತ್ತೇನೆ. ಪಾಠದ ವಿಷಯವು
ವಿದ್ಯಾರ್ಥಿಗಳ ವಯಸ್ಸು ಹಾಗೂ ಬುದ್ಧಿ ಇವುಗಳನ್ನು ಮೀರಿರುವದರಿಂದ
ಕಲಿಸುವವರಿಗೂ ಕಲಿಯುವವರಿಗೂ ಬಹಳೇ ತೊಂದರೆಗಳನ್ನುಂಟು
ಮಾಡುವಂಥದೆಂಬದರಲ್ಲಿ ಸಂದೇಹವಿಲ್ಲ. ಆದರೂ ಅದರೊಳಗಿನ ಕೆಲವು
ವಾಕ್ಯಗಳನ್ನು ಒಟ್ಟು ಕೆಲವೆಡೆಯಲ್ಲಿ ಹೆಚ್ಚಿನ ವಿವರಣೆಯನ್ನು ಹಾಕಿ ತಿಳಿ

ಯುವಂತೆ ಮಾಡಲಿಕ್ಕೆ ಪ್ರಯತ್ನ ಪಟ್ಟಿರುವೆನು. ವಾಚಕರು ಎರಡ
ಪಾಠಗಳನ್ನು ಲಕ್ಷ್ಯಪೂರ್ವಕವಾಗಿ ಓದಿ ನೋಡಿದರೆ ಅದರಲ್ಲಿ ಮಾಡಿ
ಹೆಚ್ಚು ಕಡಿಮೆಗಳು ಸುಲಭವಾಗಿ ತಿಳಿಯುವಂತಿವೆ.

ಆ ಪಾಠದ ಈಗಿನ ಸ್ವರೂಪವು ಕೆಳಗೆ ಬರೆದಂತಿರುವದು.

ಕಾರ್ಯವೂ ಕರ್ತೃತ್ವಶಕ್ತಿಯೂ.

ವ್ಯವಹಾರದಲ್ಲಿ 'ಕಾರ್ಯ' ಶಬ್ದಕ್ಕೆ ಅನೇಕ ಅರ್ಥಗಳುಂಟು
ಆದರೆ ಪದಾರ್ಥವಿಜ್ಞಾನಶಾಸ್ತ್ರದಲ್ಲಿ ಈ ಶಬ್ದವನ್ನು ಒಂದೇ ಅರ್ಥದಲ್ಲಿ
ಉಪಯೋಗಿಸುತ್ತಾರೆ. ಆ ಅರ್ಥವು ಯಾವದೆಂಬದು ಕೆಳಗಿನ ಉದಾಹ
ರಣೆಗಳಿಂದ ಸ್ಪಷ್ಟವಾಗುವದು. ನೆಲದ ಮೇಲೆ ಬಿದ್ದಿರುವ ಪದಾರ್ಥವ
ನ್ನು ಆ ಸ್ಥಳದಿಂದ ಸರಿಸಿದರೆ, ಅಥವಾ ತಿರುಗುತ್ತಿರುವ ಗಾಲಿಯನ್ನು
ನಿಲ್ಲಿಸಿದರೆ, ಅಥವಾ ಅದರ ವೇಗವನ್ನು ಹೆಚ್ಚು ಇಲ್ಲವೆ ಕಡಿಮೆಮಾಡಿದರೆ
ನಾವು ಕಾರ್ಯಮಾಡಿದಂತಾಗುವದು. ಇದರಿಂದ ಕಾರ್ಯವೆಂದರೆ
ಪದಾರ್ಥದ ಗತಿಯಲ್ಲಿ ಮಾಡಿದ ಹೆಚ್ಚುಕಡಿಮೆಯೆಂದು ತಿಳಿಯಕೂ
ಡದು ಯಾಕಂದರೆ ಮೇಣವನ್ನು ಕರಗಿಸಿದರೂ ಕಬ್ಬಿಣವನ್ನು ಕಾಸಿ
ದರೂ ಬೆಂಕಿಯನ್ನುಂಟುಮಾಡಿದರೂ ನಾವು ಕಾರ್ಯವನ್ನೇ ಮಾಡಿದಂ
ತಾಗುವದು. ಆದರೆ ಈ ಪ್ರಕಾರದ ಕಾರ್ಯಗಳಲ್ಲಿ ಪದಾರ್ಥಗಳ
ಗತಿಯಲ್ಲಿ ಹೆಚ್ಚುಕಡಿಮೆ ಆಗದೆ ಅವುಗಳ ಸ್ಥಿತಿಯಲ್ಲಿ ಆಗುವದು. ಸಾ
ರಾಂಶವೇನಂದರೆ, ಒಂದು ಪದಾರ್ಥದ ಗತಿಯಲ್ಲಾಗಲಿ, ಸ್ಥಿತಿಯಲ್ಲಾ
ಗಲಿ, ಹೆಚ್ಚುಕಡಿಮೆಯನ್ನುಂಟುಮಾಡಿದರೆ ಕಾರ್ಯವಾಯಿತೆಂದು ತಿಳಿ
ಯಬೇಕು. ಗತಿಯಲ್ಲಿ ಹೆಚ್ಚುಕಡಿಮೆಯುಂಟಾದರೆ ಕಾರ್ಯವು, ಇಡೀ
ವಸ್ತುವಿನ ದೃಶ್ಯಗತಿಯ ರೂಪವನ್ನು ಧರಿಸುವದು. ಉದಾ:—ತಿರುಗು
ವಗಾಲಿ, ಚಲನೆಯುಳ್ಳ ಪದಾರ್ಥ ಇತ್ಯಾದಿ ಸ್ಥಿತಿಯಲ್ಲಿ ಹೆಚ್ಚುಕಡಿಮೆ
ಯುಂಟಾದರೆ ಆ ವಸ್ತುವಿನ ಅಣುಪರಮಾಣುಗಳಲ್ಲಿ ಅದು ಅದೃಶ್ಯಗತಿಯ
ರೂಪವನ್ನು ಧರಿಸುವದು. ಉದಾ:—ಕರಗಿಸಿದ ಮೇಣವು ಹೊತ್ತಿಸಿದ
ಬೆಂಕಿಯು ಇತ್ಯಾದಿ.

ನೆಲದ ಮೇಲೆ ಬಿದ್ದಿರುವ ಒಂದು ಪದಾರ್ಥಕ್ಕೆ ಚಲನೆ ಕೊಡಲು
ಅದಕ್ಕೆ ಒಂದೇಸವನೇ ಭೂಮಿಯ ಹುರುಬರಕಾದ ಪೃಷ್ಠಭಾಗದಿಂದ

ಲೂ ಹವೆಯಿಂದಲೂ ಪ್ರತಿಬಂಧವಾಗುವದು. ಕಲ್ಲನ್ನು ಒಗೆಯಲು ಅದು ಮುಂದು ಹೋಗುವಾಗ ಅದಕ್ಕೆ ಹವೆಯಿಂದಲೂ ಭೂಮಿಯ ಆಕರ್ಷಣದಿಂದಲೂ ಅಡ್ಡಿಯಾಗುವದು. **ಘರ್ಷಣ, ಹವೆಯಪ್ರತಿಬಂಧ, ಭೂಮಿಯ ಆಕರ್ಷಣ** ಮುಂತಾದ ಸ್ವಾಭಾವಿಕವಾದ ಪ್ರತಿಬಂಧಕ ಕಾರಣಗಳಿಗೆ **ರೋಧಕಪ್ರೇರಣೆಗೆ** ಎಂಬ ಹೆಸರನ್ನು ಕೊಡಬಹುದು. ಮೇಲೆ ಹೇಳಿದ ಕಾರ್ಯಶಬ್ದದ ವ್ಯಾಖ್ಯೆಯನ್ನು ಹೆಚ್ಚು ಅಚ್ಚುಕಟ್ಟಾಗಿ ಬರೆಯಬೇಕಾದರೆ ಕೆಳಗೆ ಬರೆದಂತೆ ಆಗುವದು. ರೋಧಕ ಪ್ರೇರಣೆಗೆ ವಿರುದ್ಧವಾಗಿ ಯಾವದೊಂದು ಪದಾರ್ಥದ ಸ್ಥಿತಿಗತಿಗಳಲ್ಲಿ ಹೆಚ್ಚುಕಡಿಮೆಯಾದರೆ ಅಥವಾ ಆ ತರದ ಪ್ರಯತ್ನವಿದ್ದರೆ **ಕಾರ್ಯ**ವಾಯಿತೆಂದು ತಿಳಿಯಬೇಕು. ಇಂಥ ಕಾರ್ಯವನ್ನು ಮಾಡಲಿಕ್ಕೆ ಬೇಕಾಗುವ ಸಾಮರ್ಥ್ಯಕ್ಕೆ 'ಶಕ್ತಿ' ಎಂಬ ಹೆಸರನ್ನು ಕೊಟ್ಟಿರುತ್ತದೆ. ಹಾಗಾದರೆ ಶಕ್ತಿಯುಂದರೆ ಪದಾರ್ಥದ ಸ್ಥಿತಿಗತಿಗಳಲ್ಲಿ ಬದಲುಮಾಡುವ ಸಾಮರ್ಥ್ಯವೆಂದು ಹೇಳಬಹುದು.

ಈ ಶಕ್ತಿಯು ಪದಾರ್ಥಗಳಲ್ಲಿ ಎರಡು ರೂಪಗಳಿಂದ ಕಂಡುಬರಬಹುದು. ಈ ಮಾತು ಕೆಳಗೆ ಕೊಟ್ಟ ಉದಾಹರಣೆಯಿಂದ ಸ್ಪಷ್ಟವಾಗುವದು. ಕಡವಾಡಿಯಮೇಲೆ ಒಂದು ಬಂಡೆಗಲ್ಲು ಅದೆಂದು ತಿಳಿಯೋಣ. ಅದನ್ನು ಅಲ್ಲಿಂದ ಕೆಳಗೆ ಬೀಳಗೊಟ್ಟರೆ, ಅದು ಒಂದು ಕೆಲಸವಾಡಬಹುದು. ಅದು ಕೆಳಗೆ ಬೀಳುವಾಗ ಅಥವಾ ಬಿದ್ದ ಬಳಿಕ ಕೆಳಗೆ ಸಿಕ್ಕ ಕಲ್ಲುಗಳನ್ನು ಪುಡಿ ಮಾಡಬಹುದು; ಶಕೆಯನ್ನು ಹುಟ್ಟಿಸಬಹುದು; ಸಪ್ಪಳವನ್ನುಂಟುಮಾಡಬಹುದು; ಒಮ್ಮೊಮ್ಮೆ ಪ್ರಕಾಶವನ್ನಾದರೂ ಉಂಟುಮಾಡಬಹುದು. ಆ ಬಂಡೆಗಲ್ಲಿನ ಪ್ರಥಮ ಕಾರ್ಯವು ಅಂದರೆ ಕೆಳಗಿಳಿಯುವ ಗತಿಯು, ಆ ಕಲ್ಲಿನ ಪೂರ್ವಸ್ಥಿತಿಯ ಪರಿಣಾಮವು. ಬೇರೆ ಕಲ್ಲುಗಳನ್ನು ಒಡೆಯುವದೂ ಪ್ರಕಾಶ ಉಷ್ಣತೆಗಳನ್ನು ಹುಟ್ಟಿಸುವದೂ ಮುಂತಾದ ಕಾರ್ಯಗಳು ಅದರ ಗತಿಯ ಪರಿಣಾಮಗಳಾಗಿವೆ. ಈ ಮೇರೆಗೆ ಆ ಕಲ್ಲಿನಲ್ಲಿ ಎರಡು ಬಗೆಯ ಸಾಮರ್ಥ್ಯವುಂಟೆಂದು ಹೇಳಬಹುದು. ಸ್ಥಿತಿಗೆ ಸಂಬಂಧಿಸಿದ್ದು ಒಂದು; ಗತಿಗೆ ಸಂಬಂಧಿಸಿದ್ದು ಇನ್ನೊಂದು. ಅನುಕೂಲವಾದ ಸ್ಥಳದಲ್ಲಿದ್ದ ಮೂಲಕ ಅದರಲ್ಲಿ ಗರ್ಭಿತವಾಗಿರುವ ಮೊದಲನೇ ಸಾಮರ್ಥ್ಯಕ್ಕೆ ಸಂಚಿತಶಕ್ತಿಯೆಂದು ಹೆಸರಿಡ

ಬಹುದು. ಇದರಿಂದ ಆ ಪದಾರ್ಥವನ್ನು ಬೀಳಗೊಟ್ಟರೆ ಅದರಲ್ಲಿ ಗತಿ ಯುಹುಟ್ಟುವದು. ಇದು ಆ ಸಾಮರ್ಥ್ಯದ ಎರಡನೆಯ ಸ್ಥಿತಿಯು. ಇದಕ್ಕೆ **ಚಲನ ಶಕ್ತಿ** ಎಂಬ ಹೆಸರು. ಇದರಿಂದ ಶಕ್ತಿಯು ಎರಡು ಭಿನ್ನವಾದ ಸ್ಥಿತಿಯಲ್ಲಿರಬಹುದೆಂದು ವ್ಯಕ್ತವಾಗುವದು. ಇದೇ ಮಾತನ್ನು ಮತ್ತೊಂದುಉದಾಹರಣೆಯಿಂದ ಸೃಷ್ಟೀಕರಿಸಬಹುದು. ಕಿಸೆಯೊಳಗಿನ ಸಣ್ಣ ಗಡಿಯಾರಗಳ ಕಮಾನು ಎಂಬ ತಂತಿಯ ಸಿಂಬಿಯನ್ನು ಅದರೊಳಗಿನ ಕೀಲಿಯಿಂದ ತಿರುವಲು ಆ ಕಮಾನಿನಲ್ಲಿ ಸಂಚಿತ ಕರ್ತೃತ್ವ ಶಕ್ತಿಯನ್ನುಂಟು ಮಾಡಿದಂತಾಗುವದು ಇದು ಶಕ್ತಿಯ ಮೊದಲನೆಯ ಸ್ಥಿತಿಯು. ಈ ಶಕ್ತಿಯ ಕಾರ್ಯವು ಗಡಿಯಾರದ ಚಕ್ರಗಳನ್ನು, ತಿರುಗಿಸುವದರಲ್ಲಿ ಪ್ರಕಟವಾಗುವದು. ಇದು ಎರಡನೆಯ ಸ್ಥಿತಿಯು. ದೊಡ್ಡ ದೊಡ್ಡ ತಡಸಲುಗಳ ನೀರಲ್ಲಿ ಸಂಚಿತಶಕ್ತಿಯು ಸಂಗ್ರಹಿಸಲ್ಪಟ್ಟಿರುತ್ತದೆ. ಅದು ಶಕ್ತಿಯ ಮೊದಲನೆಯ ಸ್ಥಿತಿಯು. ಎತ್ತರದಲ್ಲಿದ್ದ ಆ ನೀರು ಕೆಳಗೆ ಬೀಳಲಾಗಿ ದೊಡ್ಡ ದೊಡ್ಡ ಗಾಲಿಗಳನ್ನು ತಿರುಗಿಸುತ್ತದೆ. ಇದು ಎರಡನೆಯ ಸ್ಥಿತಿಯು.

ಈ ಪಾಠದ ಮುಂದಿನ ಭಾಗವು ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೆ ತಿಳಿಯುವಂತಿರುವದರಿಂದ ಅದನ್ನು ತಿರುಗಿ ಬರೆದು ತೋರಿಸಿಲ್ಲ. ಆ ತಿದ್ದುವ ಭಾಗವು ಯಾವದೆಂದರೆ "ಇವೆಲ್ಲ ಶಕ್ತಿಗಳು ಸ್ಪಷ್ಟ ಶಕ್ತಿಗಳೆನಿಸುತ್ತವೆ" ಈ ವಾಕ್ಯವನ್ನು ಬಿಡಬೇಕು. ಯಾಕಂದರೆ ಅದು ಸ್ಪಷ್ಟ ತಿಳಿಯುವಂತಿಲ್ಲ. ಹಾಗೂ ಪಾಠಗಳ ಕೊನೆಯಲ್ಲಿ ಕೆಳಗೆ ಬರೆದ ಒಂದು ವಾಕ್ಯವನ್ನು ಸ್ಪಷ್ಟೀಕರಣಾರ್ಥವಾಗಿ ಹಾಕಬೇಕು ಅದುಯಾವದೆಂದರೆ:— ಉಷ್ಣತೆಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಬಹುದು. ವಿದ್ಯುಚ್ಛಕ್ತಿಯಿಂದ ಪ್ರಕಾಶ ಹುಟ್ಟಿಸಬಹುದು. ಇತ್ಯಾದಿ.

ಪರಿಶಿಷ್ಟ.

ಪದಾರ್ಥವಿಜ್ಞಾನಶಾಸ್ತ್ರ.

ಪುಸ್ತಕ	ಅ. ಸಂ.	ಪಾಠ.	
(೪)	೧	೬೮	ಶಕ್ತಿ
	೨	೬೯	ಚಳಿ ಅಥವಾ ತಂಪು
೫)	೩	೭೬	ಹವೆ, ವಾಯು, ಉಗ್ಗೆ.
	೪	೭೭	ಪ್ರತಿಧ್ವನಿ
	೫	೭೯	ಕಾರಂಜಿ
	೬	೮೦	ಪಾರಜವೂ, ಉಷ್ಣತಾಮಾಪಕಯಂತ್ರವೂ
	೭	೮೧	ಹವೆಯಭಾರವೂ, ನೀರಿನ ಬಂಬೂ.
	೮	೮೨	ಹವೆಯಭಾರವೂ, ಭಾರಮಾಪಕಯಂತ್ರವೂ
	೯	೯೭	ಸೊನ್ನೆ
	೧೦	೯೮	ಗಡಗಡೆಯೂ, ಗಾಲಿಯೂ.
	೧೧	೭೬	ಸೃಷ್ಟಪದಾರ್ಥಗಳೂ, ಅವುಗಳ ೩ ರೂಪಗಳೂ.
	೧೨	೭೭	ಪದಾರ್ಥಗಳ ಗುಣಧರ್ಮಗಳು
	೧೩	೭೮	ಶಕ್ತಿಯೂ, ಅದರ ಸಮತೋಲನವೂ
	೧೪	೭೯	ಇಳುಕಲು
	೧೫	೮೦	ಬಿಗಿಯೂ ಮಲಸೂತ್ರವೂ
	೧೬	೮೧	ನೂಟನ್ನನ ಗುರುತ್ವಾಕರ್ಷಣ
	೧೭	೮೨	ಗುರುತ್ವ ಮಧ್ಯ
	೧೮	೮೩	ಧ್ವನಿಯೂ, ಅದರ ಹಬ್ಬುವಿಕೆಯೂ
	೧೯	೮೪	ಉಷ್ಣತೆಯ ಉಪಪತ್ತಿ
	೨೦	೮೫	ಉಷ್ಣತೆಯ ವಹನವೂ, ಸಹಚಲನವೂ, ಕೇಂದ್ರೋದ್ಗಮನವೂ.

	೨೧	೬೬	ಅನನುಭೂತೋಷ್ಣತೆ
	೨೨	೬೭	ಪ್ರಕಾಶದ ಉತ್ಪತ್ತಿಯೂ, ಅದರ ಹಬ್ಬುವಿಕೆಯೂ
	೨೩	೬೮	ಕಿರಣ ಪರಾವರ್ತನ
	೨೪	೬೯	ಕಿರಣ ವಕ್ರೀಭವನ
	೨೫	೭೦	ವಿದ್ಯುತ್ತು
	೨೬	೭೧	ಮಿಂಚು
(೭)	೨೭	೭೨	ಲೋಹಚುಂಬಕವೂ, ಹೋಕಾಯಂತ್ರವೂ
	೨೮	೭೩	ಕಾರ್ಯವೂ, ಕರ್ತೃತ್ವಶಕ್ತಿಯೂ.
	೨೯	೭೪	ಯಂತ್ರಗಳೂ, ಯಾಂತ್ರಿಕಲಾಭವೂ
	೩೧	೭೫	ಪ್ರವಾಹಿ ಪದಾರ್ಥಗಳ ಒತ್ತುವಿಕೆ
	೩೨	೭೬	ಆರ್ಕಿಮಿಡಸನ ಸಿದ್ಧಾಂತ
	೩೩	೭೭	ಕೇಶಾಕರ್ಷಣ ಶಕ್ತಿ
	೩೪	೭೮	ವಾಯುರೂಪ ಪದಾರ್ಥಗಳ ಪ್ರಸರಣಶೀಲತ್ವ
	೩೫	೭೯	ಧ್ವನಿ
	೩೬	೮೦	ಪ್ರಕಾಶದ ಕೆಲವು ಧರ್ಮಗಳು (೧ ನೇ ಭಾಗ)
	೩೭	೮೧	,, (೨ ನೇ ಭಾಗ)
	೩೮	೮೨	ತಂತೀಟೆಪಾಲು
	೩೯	೮೩	ಹವೆಯೊಳಗಿನ ಆರ್ದ್ರತೆಯು

ಜ್ಯೋತಿಷಶಾಸ್ತ್ರವು.

(೮)	೧	೮೬	ಸೂರ್ಯ
	೨	೮೭	ಚಂದ್ರ
	೩	೮೮	ಅಂತರ್ಗ್ರಹಪಳು
	೪	೮೯	ಗ್ರಹಗಳು (೧ ನೇ ಭಾಗ)
	೫	೯೦	,, (೨ ನೇ ಭಾಗ)
	೬	೯೧	ತೇಜೋಮೇಘ
	೭	೯೨	ತೇಜೋಮೇಘದಿಂದ ಗ್ರಹನಕ್ಷತ್ರಗಳ ಉತ್ಪತ್ತಿ

ವನಸ್ಪತಿ ಶಾಸ್ತ್ರ.

ಪುಸ್ತಕ	ಅ.	ನಂ.	ಪಾಠ.
(೪)	೧	೭೩	ಹೂವ್ಗೊ, ಅದರ ಅವಯವಗಳೂ.
	೨	೭೪	ಹಣ್ಣ್ಗೂ, ಅದರ ಭಾಗಗಳೂ.
	೩	೭೫	ಬೀಜವು.
	೪	೭೬	ಎಲೆಗಳೂ ಅವುಗಳ ರಚನೆಯೂ.
(೫)	೫	೮೩	ಹೂವಾಗುವ ಗಿಡಗಳ ಮುಖ್ಯ ಎರಡು ವರ್ಗಗಳು.
	೬	೮೪	ಹೂಗಿಡಗಳ ಪುನರುತ್ಪತ್ತಿ.
	೭	೮೫	ಹೂವಾಗದ ಗಿಡಗಳೂ, ಅವುಗಳ ಪುನರುತ್ಪತ್ತಿಯೂ.

ರಸಾಯನಶಾಸ್ತ್ರ.

(೬)		೭೮	ಕಲ್ಲಿದ್ದಲಿಯೂ, ಕಲ್ಲಿದ್ದಲಿಯ ಹೊಗೆಯೂ.

ರಸಾಯನ ಶಾಸ್ತ್ರವು.

(೭)	೧	೯೩	ಹವೆಯು ಘಟಕಗಳು.
	೨	೯೪	ಹವೆಯ ಘಟಕಗಳ ಗುಣಧರ್ಮಗಳು.
	೩	೯೬	ರಸಾಯನ ವ್ಯಾಪಾರವೂ, ರಸಾಯನ ಪ್ರೀತಿಯೂ
	೪	೯೭	ನೀರಿನ ಘಟನೆಯು.
	೫	೯೮	ವಿದ್ರಾವ್ಯತ್ವವು ಅಥವಾ ಕರಗುವ ಗುಣವು,
	೬	೯೯	ಆಮ್ಲ, ಅಲ್ಕಲಿ, ಲವಣ.
	೭	೧೦೧	ಪ್ರಕಾಶವೂ, ದೀಪದ ಕಡ್ಡಿಗಳೂ
	೮	೧೦೨	ಜ್ವಲನವೂ, ಶ್ವಾಸೋಚ್ಛ್ವಾಸವೂ.
	೯	೧೦೩	ಕಾರ್ಬನ್ನವೂ, ಅಂಗಾರಾಮ್ಲ ವಾಯುವೂ.

ಶಾರೀರ ಶಾಸ್ತ್ರವು

(೮)	೧	ಎಲವುಗಳೂ ಸ್ನಾಯುಗಳೂ.
	೨	ಮೈದೊಗಲು

(೪) ೩ ೬೬ ರಕ್ತಾಶಯವೂ, ರಕ್ತಾಭಿಸರಣವೂ.

೪ ೬೭ ಅನ್ನಾಶಯವೂ, ಅನ್ನಪಚನಃ

(೫) ೫ ೬೩ ಮಿದುಳೂ, ಮಜ್ಜಾತಂತುಗಳ

೬ ೬೪ ಪುಪ್ಪುಸಗಳೂ, ಶ್ವಾಸೋಚ

೭ ೬೫ ಪಿತ್ತಾಶಯ, ಪ್ಲೀಹ, ಮೂತ್ರ

ಪ್ರಕೃತಿ ವಿಮರ್ಶ.

(೧) ಅನೆ

ಮಾನ.

ಹಾವು.

ಕಪ್ಪೆ.

ಜಿಟ್ಟೆ

ಗುಂಗಾಡು ಮುಂತಾದವು.

(೫) ರೇಶಿಮೆಯ ಹುಳ.

ತತ್ತಿಯೂ ಅದರ ಬಿಳವಣಿಗೆಯೂ,

ಇವುಗಳ ಹೊರತು ೫ನೇ ಪುಸ್ತಕದ ೬ನೇ ಪಾಠ.

(೪) ಕಟ್ಟಿಗೆಯೂ, ಹಸ್ತಿದಂತವೂ.

ಚಹಾ ಕಾಪಿ.

ಹತ್ತಿಯೂ, ಹತ್ತಿಯ ಗಿಡವೂ.

(೫) ಸಾಲೆಯ ತೋಟವೂ ಅದರ ಉಪಯೋಗವೂ.

ತೇಗಿನಮರವೂ, ಆಲದ ಮರವೂ.

ತೆಂಗಿನ ಮರವೂ, ಜಾಲಿಯ ಮರವೂ,

ಮನುಷ್ಯನ ಅತಿ ಸಮೀಪದ ಸಂಬಂಧಿಕರು.

(೭) ೭ ೩೭ ಅರ್ವಾಚೀನ ಶಾಸ್ತ್ರಶೋಧದ ಕೌತುಕಗಳು.

೭ ೬೮ ಭೂಮಿಯ ಇತಿಹಾಸವು.

ಕರ್ನಾಟಕ ಶಿಕ್ಷಕಮಂಡಲ

೨ನೆಯ ವಾರ್ಷಿಕ ಸಭೆ.

೧೯೧೮.

ಕರ್ನಾಟಕ ಶಿಕ್ಷಕಮಂಡಲದ ೨ನೆಯ ವಾರ್ಷಿಕ ಸಭೆಯು ಈ ಸಾರೆ ಗದಗ ಮಕ್ಕಳ ಟ್ರೇನಿಂಗಕಾಲೇಜಿನಲ್ಲಿ ಜರುಗಿತು. ಮೊದಲು ಕಾರ್ಯನಿರ್ವಾಹಕ ಸಭೆಯ ಚೇರಮನ್ನರಾದ ಮಿ. ನವಲಗುಂದ ಇವರು ಕೆಳಗೆ ಕೊಟ್ಟ ವಾರ್ಷಿಕ ವರದಿಯನ್ನು ಸಭಿಕರಿಗೆ ಸಾದರಮಾಡಿದರು.

ಕರ್ನಾಟಕ ಶಿಕ್ಷಕಮಂಡಲದ ಎಲ್ಲ ಸಭಾಸದರಿಗೆ—

ಕಳೆದ ವರ್ಷ ಅಂದರೆ ೧೯೧೭ನೇ ಇಸವಿಯ ಜೂನ ತಿಂಗಳ ೩ನೇ ತಾರೀಖಿನಿಂದ ಇಂದಿನವರೆಗೆ ಮಂಡಲದಲ್ಲಿ ವ್ಯವಸ್ಥಾಪಕ ಸಭೆಯವರು ಮಾಡಿದ ಕಾರ್ಯಭಾಗವನ್ನು ಕುರಿತು ತಮ್ಮೆಲ್ಲರಿಗೆ ಕೆಳಗೆ ಬರೆದ ವರದಿಯನ್ನು ಸಾದರಮಾಡುತ್ತೇನೆ.

ಕಳೆದ ವರುಷ ಸಭಿಕರ ಸಂಖ್ಯೆಯು ೩೭೫ ಇತ್ತು. ಇವರಲ್ಲಿ ಎಷ್ಟೋ ಜನರು ತಮ್ಮ ವರ್ಗಣಿಯ ಹಣವನ್ನು ಕೊಡದೆ ಬಹಳ ಸಾರೆ ಪತ್ರಹಾಕಿದರೂ ತಿರುಗಿ ಉತ್ತರವನ್ನು ಸಹ ಬರೆಯಲಿಲ್ಲ. ಇವರಲ್ಲಿ ಶಿಕ್ಷಕರಲ್ಲದವರೂ ಕೆಲವರು ಇದ್ದದ್ದರಿಂದ ಇವರ ಹೆಸರುಗಳನ್ನು ಸಭಿಕರ ಯಾದಿಯಿಂದ ತೆಗೆದು ಹಾಕುವದಾಯಿತು. ಆದ್ದರಿಂದ ಕಳೆದ ವರ್ಷದ ಕೊನೆಗೆ ೩೬೮ ಜನ ಸಭಿಕರಿದ್ದರು. ಈ ವರುಷದ ಕೊನೆಗೆ ೪೦೩ ಸಭಿಕರಿರುವರು. ಇವರಲ್ಲಿ ೬೦ ಜನರಿಂದ ವರ್ಗಣಿಯ ಹಣವು ಇನ್ನೂ ಬಂದಿಲ್ಲ. ಈ ಸದ್ಗೃಹಸ್ಥರು ವರ್ಗಣಿಯಹಣವನ್ನು ತೀವ್ರವೇ ಕಳಿಸುವರೆಂದು ನಂಬಿದ್ದೇನೆ ಮಂಡಲದ ಸಭಿಕರ ಸಂಖ್ಯೆಯು ಭರದಿಂದ ಬೆಳೆಯಲು ಬಹಳ ತೊಂದರಿರುವದು ಈ ಬಗ್ಗೆ ಸದ್ಯಕ್ಕೆ ಸಭಿಕರಾಗಿರುವವರಲ್ಲಿ ಪ್ರತಿಯೊಬ್ಬರು ತಮ್ಮ ಇಬ್ಬರು ಮಿತ್ರರಿಗೆ ವಿಜ್ಞಾಪಿಸಿ ಮಂಡಲಕ್ಕೆ ಇಬ್ಬರು ಹೊಸ ಸಭಾಸದರನ್ನು ಕೂಡಿಸಿ ಕೊಟ್ಟರೆ ಸಭಿಕರ ಸಂಖ್ಯೆಯು ಸಾವಿರ ಮೀರಿ ಹೆಚ್ಚು ಕೆಲಸ ಮಾಡಲು ಅನುಕೂಲವಾಗುವದು. ಈ ಮಂಡಲದ ಸಹಾಯಕರು ಕಳೆದ ವರುಷ ೩೬ ಜನರು ಇದ್ದರು. ಸದ್ಯಕ್ಕೆ ಅವರು ೩೦ ಜನರಿರುವರು ಸಹಾಯಕರ ಸಂಖ್ಯೆಯು ಹೆಚ್ಚುವದೂ ಅತ್ಯವಶ್ಯವಿರುವದು. ಆಜೀವ ಸಭಾಸದರ ಸಂಖ್ಯೆಯು ಹಿಂದಿನವರ್ಷದಷ್ಟೇ ಅಂದರೆ ಮೂರೇ ಇರುವದು

ಹಸ್ತಪತ್ರಿಕೆಗಳ ದ್ವಾರದಿಂದ ಶಿಕ್ಷಕಶಿಕ್ಷಕಿಯರಿಗೆ ಕಲಿಸುವ ಕೆಲಸದಲ್ಲಿ ಉಪ
ಯುಕ್ತ ಮಾಹಿತಿಯನ್ನು ಕೊಡುವ ಬಗ್ಗೆ "ಪಾಠಗಳ ಟಪ್ಪಣಿ" ಎಂಬ ಪಾಠಮಾಲೆಯ
ಮೊದಲನೆಯ ಪುಷ್ಪವನ್ನು ಪ್ರಸಿದ್ಧಪಡಿಸಿ ಹಂಚುವದಾಗಿದೆ. ಪುಸ್ತಕಾಲಯದ ಬಗ್ಗೆ
ಸೂಚನೆಗಳೇನೂ ಬರಲಿಲ್ಲವಾದ್ದರಿಂದ ಪುಸ್ತಕಾಲಯದ ಆರಂಭವು ಆಗಿಲ್ಲವೆನ್ನಬಹುದು.
ಪುಸ್ತಕಾಲಯದ ಬಗ್ಗೆ ನಿಯಮಿಸಿದ ಕಮಿಟಿಯವರ ಅಭಿಪ್ರಾಯದ ಮೇರೆಗೆ ಹಿಂದು
ಸ್ತಾನದೊಳಗಿನ ಬಾಲೋದ್ಯಾನ ಶಿಕ್ಷಣವೆಂಬ ೩ ಚಿಕ್ಕ ಪುಸ್ತಕಗಳನ್ನು ಮಾತ್ರ ತರಿಸಿರು
ತ್ತದೆ. ಪುಸ್ತಕಾಲಯದ ಬಗ್ಗೆ ವಿಶೇಷ ಕೆಲಸವಾಗುವಂತೆ ಯತ್ನಿಸುವದು ಅವಶ್ಯವೆಂದು
ತೋರುತ್ತದೆ.

ಶಿಕ್ಷಣದ ಉತ್ತೇಜನಕ್ಕಾಗಿ ೧೦೦ ರೂ. ಇನಾಮು ಕೊಡಲೊಪ್ಪಿದ ಗೃಹಸ್ಥರು
ಕಳಿಸಿದ ಶರ್ತುಗಳನ್ನು ಪ್ರಸಿದ್ಧಮಾಡಿದ್ದಾಯಿತು. ಕಳೆದ ಏಪ್ರಿಲ ತಿಂಗಳ ೧೫ನೇ ತಾರೀಖಿ
ನೊಳಗಾಗಿ ಪುಸ್ತಕವನ್ನು ಬರೆಯುವವರು ಹಸ್ತಪ್ರತಿಯನ್ನು ಕಳಿಸಿರಬೇಕೆಂಬ ನಿರ್ಬಂ
ಧಕ್ಕೆ ಯಾರೂ ಉತ್ತರಕೊಟ್ಟಿಲ್ಲ. ಇನ್ನಾದರೂ ಪ್ರಾಥಮಿಕಶಿಕ್ಷಕರು ಈ ಕೆಲಸವನ್ನು
ಆರಂಭಿಸುವಿರೆಂದು ಕೋರುತ್ತೇನೆ.

ಉಪಸಂಘಗಳನ್ನು ಈ ಮಂಡಲಕ್ಕೆ ಜೋಡಿಸಿಕೊಳ್ಳುವ ಬಗ್ಗೆ ಕೆಲವು ಸೂಚನೆ
ಗಳು ಬಂದಿರುವವು. ಬೇರೆ ಬೇರೆ ಜಿಲ್ಲೆಗಳಲ್ಲಿ ಆಗುಂಡಲದ ಸಮ್ಮೇಲನಗಳನ್ನು ಏರ್ಪಡಿ
ಸುವದು ಹಿತಕರವೆಂಬ ಬಗ್ಗೆಯೂ ಸೂಚನೆಗಳು ಬಂದಿವೆ. ಇವೆರಡೂ ಮಹತ್ವದ ಪ್ರಶ್ನೆ
ಗಳ ಬಗ್ಗೆ ಸದ್ಯದ ಮಹಾಸಭೆಯಲ್ಲಿಯೇ ನಿರ್ಣಯವಾಗುವದು ಇಷ್ಟವೆಂದು ತೋರಿ
ದ್ದರಿಂದ ನೀವು ಅದನ್ನು ಕುರಿತು ವಿಚಾರಮಾಡುವಿರೆಂದು ಕೋರುತ್ತೇನೆ.

ಈ ವರುಷದ ಸಮ್ಮೇಲನದಲ್ಲಿ ಹಿಂದಿನ ಸಮ್ಮೇಲನಕ್ಕಿಂತ ಹೆಚ್ಚು ಜನ ಕಾಲೇಜಿನ
ಶಿಕ್ಷಕರು ಪಾಠ ಕಲಿಸಿ ತೋರಿಸುವ ವ್ಯವಸ್ಥೆಯು ಆಗಿತ್ತು. ಬೇರೆ ಪ್ರಾಂತಗಳಿಂದ
ಅನುಭವಿಕರಾದ ಶಿಕ್ಷಕರನ್ನೂ ಪಾಠಕಲಿಸಿತೋರಿಸಲಿಕ್ಕಾಗಿ ಸಮ್ಮೇಲನಕ್ಕೆ ಕರೆಯಿ
ಸುವ ಪ್ರಯತ್ನವೂ ಮಾಡಲ್ಪಟ್ಟಿತು. ಮುಂದಿನ ವರುಷ ಈ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ
ಬರಬಹುದೆಂಬ ಆಶೆಯಿದೆ. ಹೋದಸಾರೆ ನಿಶ್ಚಯಿಸಿದಂತೆ ಈ ಸಾರೆಯ ಸಮ್ಮೇಲನದಲ್ಲಿ
ಒಂದು ಉರ್ದುಪಾಠವು ನಡೆಯಿತು ಮುಂದಿನ ಸಮ್ಮೇಲನದ ಬಗೆ ಏನಾದರೂ
ವಿಶೇಷ ಸೂಚನೆಗಳನ್ನು ಈಗಲೇ ಮಾಡಿದರೆ ಒಳ್ಳೆಯದೆಂದು ತೋರುತ್ತದೆ. ಈ ವರುಷ
ಸಮ್ಮೇಲನದ ಕಾರ್ಯಕ್ರಮದಲ್ಲಿ ನಿಬಂಧವಾಚನವನ್ನು ಹೊಸದಾಗಿ ಸೇರಿಸಿದ್ದಾಯಿತು

ಸಮ್ಮೇಲನದ ಬಗ್ಗೆ ಸಹಾಯ ಮಾಡಿದ ವಿದ್ಯಾಖಾತೆಗೆ ಸೇರಿದ ಎಲ್ಲ ಅಧಿಕಾರಸ್ಥರ ಉಪಕಾರವು ಸ್ಮರಣೀಯವಾಗಿರುವದು. ಈ ವರುಷ ಸಮ್ಮೇಲನದಲ್ಲಿ ಶಿಕ್ಷಣದ ಕೆಲ ಸಕ್ಕೆ ಸಂಬಂಧಿಸುವ ವಸ್ತುಗಳ ಸಣ್ಣದೊಂದು ಪ್ರದರ್ಶನವನ್ನು ಮಾಡಬೇಕೆಂಬ ಯೋಜನೆಯು ಕಾಲಾನುಕೂಲ್ಯವಿಲ್ಲದೆ ನೆರವೇರಲಿಲ್ಲ. ಮುಂದಿನ ವರ್ಷ ಈ ಬಗ್ಗೆ ಯಾವ ವ್ಯವಸ್ಥೆಯನ್ನು ಮಾಡಲಿಕ್ಕೆ ವಿಶೇಷಸೂಚನೆಗಳು ನಿಮ್ಮಿಂದ ಬರುವವೆಂದು ಕೋರುತ್ತೇನೆ.

ಪ್ರಾರಂಭದಿಂದ ೧೯೧೭ನೇ ಮಾರ್ಚ ೩೧ನೇ ತಾರೀಖಿನವರೆಗೆ ಮುಂಡಲದ ಆಯ ಯದ ಲೆಕ್ಕವು ಕೆಳಗೆ ಬರೆದಂತೆ ಇರುವದು.

ಜಮಾ —

೬ – ೦ – ೦	ಮೆಂಬರ ಜನರ ಪರ್ಗ ಣಿಯಿಂದ
೩ – ೦ – ೦	ಸಹಾಯಕರಿಂದ.
೫ – ೦ – ೦	ಆಜೀವಸಭಾಸದರಿಂದ
೪ – ೦ – ೦	ಅಂತೂ.

ಖರ್ಚು —

೧೬ – ೯ – ೩	ಜೂನ ೧೯೧೬ರವರೆಗೆ ಟಪಾಲ ಖರ್ಚು.
೪ – ೧೪ – ೯	ಏಪ್ರಿಲ ೧೯೧೭ರವರೆಗೆ ಟಪಾಲ ಖರ್ಚು.
೨೦ – ೯ – ೬	ನೋಟಬುಕ್ಕು ಕಾಗದ ಹಾಗು ಸಾದಿಲವಾರ.
೪ – ೪ – ೦	ಹಸ್ತಪತ್ರಿಕೆಗಳು ಪಾತ ಮಾಲೆ ಇತ್ಯಾದಿ. ಮು ದ್ರಿಸಿದ ಖರ್ಚು.
೧ – ೧೧ – ೦	ಪುಸ್ತಕ.
೧೫೮ – ೦ – ೬	
೩೨೫ – ೧೫ – ೬	ಮುಂದಿನ ಶಿಲ್ಕು.
೪೬೪ – ೦ – ೦	



ಶಿಲ್ಕು ಹಣದ ತಪಶೀಲು.

ಅ. ಕೋ. ಕ್ರೆ. ಸೊಸಾಯಿಟಿಯಲ್ಲಿ ೧೯೦ – ೦ – ೦ ರೂ. ಕ್ಯಾಶ್ ಸರ್ಟಿಫೀಕೆಟ ೧೦೦ – ೦ ರೂ. ಸೆಕ್ರೆಟರಿಯಬಳಿಯಲ್ಲಿ ೨೫ – ೦ – ೦ ರೂ. ಟ್ರೇಝರರ ಕೈಯಲ್ಲಿ ೫. ೨೨ – ೨ – ೬ ರೂ. ಅಂತೂ — ೩೨೫–೧೫–೬ ರೂ.

ಮಂಡಲದ ಕಾರ್ಯ ನಿರ್ವಾಹಕ ಸಭಿಕರೆಲ್ಲರೂ ನಮಗೆ ಸಹಾಯ ಮಾಡಿದ ಕ್ಕಾಗಿಯೂ, ಸೆಕ್ರೆಟರಿಗಳು ಅವರಿಗೊಪ್ಪಿಸಿದ ಕೆಲಸವನ್ನು ಚನ್ನಾಗಿ ಮಾಡಿದ್ದಕ್ಕಾಗಿಯೂ ಈ ವರುಷದ ಮಂಡಲದ ಕೆಲಸವು ಸಮಾಧಾನಕರವಾಗಿ ಜರುಗಿತು. ಇವರೆಲ್ಲರ ಉಪ ಕಾರವನ್ನು ನಾನು ಸ್ಮರಿಸುತ್ತೇನೆ.

ಈ ವರದಿಯು ಸರ್ವಾನುಮತದಿಂದ ಪಾಸಾದ ಬಳಿಕ ಮುಂದಿನ ವರ್ಷದ ಅಂದಾಜು ಪತ್ರಿಕೆಯ ಚರ್ಚೆಯಾಗಿ ಕೆಳಗೆ ಬರೆದ ಮೇರೆಗೆ ಆಯವ್ಯಯದ ಪಟ್ಟಿಯು ಪಾಸಾಯಿತು. ಕಳೆದ ವರ್ಷದ ಶಿಲ್ಕಿನ ೩೨೬ ರೂಪಾಯಿಗಳಲ್ಲಿ ಸಹಾಯಕರಿಂದಲೂ ಆಜೀವ ಸಭಾಸದರಿಂದಲೂ ಬಂದ ೧೩೮ ರೂಪಾಯಿಗಳೊಳಗೆ ಸಭಾಸದರಿಂದ ಬಂದ ರಕಮಿನಲ್ಲಿಯು ೧೧೨ ರೂ॥ ಗಳನ್ನು ಕೂಡಿಸಿ, ಒಟ್ಟಿಗೆ ೨೫೦ ರೂಪಾಯಿಗಳನು ರಿಝರ್ವ್‌ಫಂಡಿನಲ್ಲಿ ಸೇರಿಸಬೇಕೆಂದು ಸರ್ವಾನುಮತದಿಂದ ನಿಶ್ಚಿತವಾಯಿತು. ಹಾಗೂ ಕೆಳಗೆ ಕಾಣಿಸಿದ ಅಂದಾಜಪತ್ರಿಕೆಯು ಪಾಸಾಯಿತು.

೬೫ ರೂ. ಹೋದ ವರ್ಷದ ಶಿಲ್ಕು.

೬೦ ರೂ. ಸಭಾಸದರಿಂದ ಬರತಕ್ಕ ಹಣ.

೪೦೦ ಈ ವರ್ಷದಿಂದ ಸಭಾಸದರಿಂದ ಬರಬೇಕಾದ ಹಣ.

---

೫೨೫ ಅಂತು.

೨೫—೦—೦ ಸಮ್ಮೇಲನದ ಖರ್ಚು.
೨೫—೦—೦ ಸಭಾಸದರ ಮಧ್ಯಾನ್ಹದ ಉಪಹಾರದ ಬಗ್ಗೆ
೭೫—೦—೦ ಪುಸ್ತಕಾಲಯದ ಬಗ್ಗೆ.
೧೦೦—೦—೦ ಮುದ್ರಣದ ಬಗ್ಗೆ.
೬೫—೦—೦ ಸಾದಿಲವಾರು.
೨೫—೦—೦ ಟಪಾಲು.

೨೭೫—೦—೦

೨೬೦—೦—೦ ಉಳಿಯಬಹುದಾದ ಶಿಲ್ಕು.

೫೨೫—೦—೦ ಅಂತು.

ಆ ಬಳಿಕ ಮಂಡಲದ ನಡೆದ ವರ್ಷದ ಅಧಿಕಾರಿಗಳನ್ನು ಆರಿಸುವದಾಯಿತು. ಅವರ ಹೆಸರುಗಳು ಕೆಳಗೆ ಬರೆದಂತೆ:—

ಪ್ರೆಸಿಡೆಂಟರು.

ರಾವಬಹಾದ್ದೂರ ವ್ಹಿ. ಬಿ. ಜೋಶಿ ಬಿ. ಎ.

ಸಹಾಯಿಸ ಪ್ರೆಸಿಡೆಂಟರು.

ಮಿ. ಆರ್. ಎನ್. ಕುಲಕರ್ಣಿ ಎಲ್. ಸಿ. ಇ.

ಮಿಸ್. ಎಫ್. ಎಲ್. ಮೆಕ್‌ಆಫಿ.

ಎಕ್ಸಅಫಿಸೀಓ ವ್ಹಾಯಿಸ್ ಪ್ರೆಸಿಡೆಂಟರು.

ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಫಾರ ಮೆನ್ ಧಾರವಾಡ.

ಲೇಡೀ ಸುಪರಿಂಟಿಂಡೆಂಟ ಹೆಣ್ಣುಮಕ್ಕಳ ಟ್ರೇ. ಕಾಲೇಜ ಧಾರವಾಡ.

ಸೆಕ್ರೆಟರಿಗಳು.

ಮಿ. ವ್ಹಿ. ಎನ್, ಮಗದಾಲ ಬಿ. ಎ.

ಮಿಸೆಸ್ ವೆಂಕಟ ಲಕ್ಷ್ಮಮ್ಮ.

ಕೋಶಾಧ್ಯಕ್ಷರು.

ಮಿ. ಬಿ. ಎಸ್. ಪುರೋಹಿತ ಬಿ. ಎ.

ಕಾರ್ಯನಿರ್ವಾಹಕ ಮಂಡಲ

ಮಿ. ವ್ಹಿ. ಡಿ. ನವಲಗುಂದ ಬಿ. ಎ.	ಮಿ. ಬಿ. ಆರ್. ಕದಡಿ.
,, ಎನ್. ಹ್ಹಿ. ಕೋಲ್ಹಟಕರ ಬಿ. ಎ.	,, ವ್ಹಿ. ಎಮ್. ತಟ್ಟಿ.
,, ಆರ್. ಜಿ. ತೆರಗುಂಡಿ ಎಮ್. ಎ.	,, ಸಿ. ಎಸ್. ಪಶುಪತಿ.
,, ಆರ್. ಎನ್. ಹುಕ್ಕೇರಿಕರ ಎಮ್. ಎ.	,, ಎಲ್. ಆರ್. ಐರಣಿ.
,, ಎಸ್. ಆರ್ ತಟ್ಟಿ ಬಿ. ಎ.	ಆರ್. ಎಸ್. ಹಾವಿಗೆ

ಮಿ. ಲ. ಗು. ನಾಡಿಗೇರ ಧಾರವಾಡಜಿಲ್ಲೆ, ಮಿಸೆಸ್ ಲಿಂಗವ್ವಾ ನೂಲ್ವಿ,
,, ಪೆ. ಸ. ತಾಳಿಕೋಟ ವಿಜಾಪುರಜಿಲ್ಲೆ, ,, ಗದಿಗೆವ್ವಾ ಕುರಹಟ್ಟಿ.
,, ಎ. ಫ್ಹಿ. ಜೋಶಿ ಬೆಳಗಾವಜಿಲ್ಲೆ, ,, ಗಂಗವ್ವಾ ಸಿಂಧೆ, ಮಿಸೆಸ್
,, ಏಮ್. ವಾಯ್. ಗಿಂಡೆ ಕಾರವಾರ ಜಿಲ್ಲೆ.

(೧) ಆ ಬಳಿಕ ಮುಂದಿನವರ್ಷದ ಸಮ್ಮೇಲನವು ಎಲ್ಲ ಜಿಲ್ಲೆಗಳ ಶಿಕ್ಷಕಶಿಕ್ಷಿಕೆಯರಿಗೆ ಅನುಕೂಲವಾಗುವಂತೆ ಪ್ರಾಥಮಿಕ ಸಾಲೆಗಳಿಗೆ ದೊರೆಯುವ ಬೇಸಿಗೆಯ ಸೂಟಿಯಲ್ಲಿ ಜರುಗುವ ವ್ಯವಸ್ಥೆಯು ಆಗಬೇಕು. ಈಬಗ್ಗೆ ಎಲ್ಲ ಸಾಲೆಗಳಿಗೂ ಬೇಸಿಗೆಯ ಸೂಟಿಯು ಒಂದೇ ಕಾಲದಲ್ಲಿ ದೊರೆಯುವ ಹುಕುಮುಮಾಡಲಿಕ್ಕೆ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರರವರಿಗೆ ವಿನಂತಿ ಮಾಡಿಕೊಳ್ಳಬೇಕು. (೨) ಮುಂಡಲದ ಉದ್ದೇಶಗಳಲ್ಲಿ ಪ್ರಾಥಮಿಕ ಶಿಕ್ಷಕಶಿಕ್ಷಿಕೆಯರ ಸಾಮಾನ್ಯ ಹಿತಾಹಿತದ ಬಗ್ಗೆ ವಿಚಾರ ಮಾಡುವದು ಎಂಬದನ್ನು ಸೇರಿಸುವದರ ಸಂಬಂಧದಿಂದ ಮುಂದಿನ ವಾರ್ಷಿಕ ಸಭೆಯಲ್ಲಿ ಮೊದಲು ವಿಚಾರಮಾಡತಕ್ಕದ್ದೆಂದು ನಿರ್ಣಯವಾಯಿತು. (೩) ಹಾಗು ಮುಂಡಲದ ಸಮ್ಮೇಲನದ ಕಾಲಕ್ಕೆ ಶಿಕ್ಷಣದ ಸಂಬಂಧದಿಂದ ಒಂದು ಪ್ರದರ್ಶನ ಮಾಡಬೇಕೆಂದು ನಿಶ್ಚಯವಾಯಿತು. ಮುಂದಿನವರ್ಷ ಪ್ರಾಥಮಿಕ ಶಿಕ್ಷಕಶಿಕ್ಷಿಕೆಯರಲ್ಲಿ ಶಿಕ್ಷಣ ವಿಷಯದ ಬಗ್ಗೆ ಬರೆದು ಕಳಿಸಿದ ಎಲ್ಲಕ್ಕೂ ಮೇಲಾದ ನಿಬಂಧಕ್ಕೆ ಮಂಡಲದಿಂದ ಒಂದು ಇನಾಮು ಕೊಡಬೇಕೆಂದು ಈ ಬಗ್ಗೆ ಕಾರ್ಯನಿರ್ವಾಹಕ ಮಂತಲದವರು ವ್ಯವಸ್ಥೆಮಾಡಬೇಕೆಂದು ಪಾಸಾಯಿತು. (೪) ಮುಂಡಲದ ಉದ್ದೇಶಗಳನ್ನು ಕಾರ್ಯವಿಸ್ತಾರವನ್ನು ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ತಿಳಿಸಿ ಮಂಡಲದ ಸಭಾಸದರನ್ನು ಹೆಚ್ಚಿಸುವ ಬಗ್ಗೆ ಪ್ರತಿಯೊಂದು ತಾಲೂಕಿನ ಪ್ರಮುಖ ಶಿಕ್ಷಕಶಿಕ್ಷಿಕೆಯರು ಪ್ರಯತ್ನಿಸಲಿಕ್ಕೆ ಅವರಿಗೆ ವಿನಂತಿ ಮಾಡಿಕೊಳ್ಳಬೇಕೆಂದು ನಿರ್ಣಯವಾಯಿತು. (೫) ಪ್ರತಿವರ್ಷ ಮಂಡಲದ ವತಿಯಿಂದ ಬೇರೆ ಬೇರೆ ಸ್ಥಳಗಳಲ್ಲಿ ಸಭೆಗೂಡಿಸುವ ಬಗ್ಗೆ ವಿಚಾರವಾಯಿತು. ಸಮೇಲನದ ಯಾವತ್ತೂ ವ್ಯವಸ್ಥೆಯನ್ನು ಮಾಡಲಿಕ್ಕೆ ಆಯಾ ಸ್ಥಳದವರು ಒಪ್ಪಿಕೊಂಡರೆ ಈ ಬಗ್ಗೆ ಮಂಡಲದವರು ಕೈಲಾದ ಸಹಾಯವನ್ನು ಮಾಡುವದು ಉಚಿತವೆಂದು ನಿರ್ಣಯವಾಯಿತು. ಹಾಗು ಬೇರೆ ಬೇರೆ ಸ್ಥಳದಲ್ಲಿರುವ ಉಪಸಂಘಗಳನ್ನು ಮುಂಡಲಿಕ್ಕೆ ಜೋಡಿಸಿಕೊಳ್ಳುವ ಬಗ್ಗೆಯೂ ವಿಚಾರವಾಯಿತು. ಈ ಬಗ್ಗೆ ಉಪಸಂಘದವರು ತಮ್ಮ ಉದ್ದೇಶ, ಕಾರ್ಯಕ್ರಮ, ಸಂಘಟನೆ ಮುಂತಾದವು ಮಾಡಿದ ಕೆಲಸ ಮೊದಲಾದವುಗಳ ಬಗ್ಗೆ ಮುಂಚಿತವಾಗಿಯೇ ಮಾಹಿತಿಯನ್ನು ಕಳಿಸಿದರೆ ಮುಂದಿನ ವರ್ಷದ ವಾರ್ಷಿಕ ಸಭೆಯಲ್ಲಿ ವಿಚಾರಮಾಡತಕ್ಕದ್ದೆಂದು ಗೊತ್ತಾಯಿತು

ಕರ್ನಾಟಕಶಿಕ್ಷಕಮಂಡಲ, ಧಾರವಾಡ.

(ಕಾರ್ಯ ನಿರ್ವಾಹಕ ಸಭೆಯು.)

——:[೦]:——

ಮಂಡಲದ ಕಾರ್ಯನಿರ್ವಾಹಕ ಸಭೆಯು ತಾ. ೩೦-೬-೧೯೨೫ ಈ ದಿವಸ ಮುಂಜಾನೆ ೮ ಗಂಟೆಗೆ ಟ್ರೇ. ಕಾಲೇಜದಲ್ಲಿ ಕೂಡಿತ್ತು. ಸೆಕ್ರೆಟರಿಯವರ ವಿನಂತಿಯ ಮೇರೆಗೆ ಮಂಡಲದ ಪ್ರೆಸಿಡೆಂಟರಾದ ರಾವಬಹಾದ್ದೂರ ವಿನಾಯಕರಾವ ಜೋಶಿ ಇವರು ಈ ಸಭೆಗೆ ಬಂದಿದ್ದರು. ಸಭೆಯಲ್ಲಿ ಇದ್ದ ಇತರ ಸಭಿಕರು:— ಮಿ. ವ್ಹಿ. ಡಿ. ನವಲಗುಂದ ಬಿ. ಎ, ಮಿ. ಆರ್. ಜಿ. ತೆರಗುಂಡಿ. ಎಮ್. ಎ, ಮಿ. ಆರ್. ಎಸ್. ಹುಕ್ಕೇರಿಕರ. ಎಮ್. ಎ, ಮಿ. ಎನ್. ವ್ಹಿ. ಕೋಲಟಕರ ಬಿ. ಎ, ಮಿ. ಎಸ್. ಆರ್. ತಟ್ಟಿ. ಬಿ. ಎ, ಮಿ. ಬಿ. ಎನ್. ಪುರೋಹಿತ. ಬಿ. ಎ, ಮಿ. ವ್ಹಿ. ಎನ್. ಮಗದಾಳ ಬಿ.ಎ, ಮಿ. ಚ. ಶಿ. ಪಶುಪತಿ, ಮಿ. ಬಾ. ರ. ಕದಡಿ, ಮಿ. ಆರ್. ಎನ್. ಜಾತಿಗೇರ ಮಿಸೆಸ್ ವೆಂಕಟಲಕ್ಷ್ಮಮ್ಮ, ಮಿಸೆಸ್ ಗಂಗವ್ವ ಸಿಂದೆ, ಮಿಸೆಸ್ ಗದಿಗೆವ್ವ ಕುರಹಟ್ಟಿ ಬೇರೆಬೇರೆ ಜಿಲ್ಲೆಗಳ ಸಭಿಕರ ಸೂಚನೆಗಳೂ ಪತ್ರಮೂಲಕವಾಗಿ ಬಂದಿದ್ದವು.

ಮಿ. ವ್ಹಿ. ಡಿ. ನವಲಗುಂದ ಇವರನ್ನು ಈ ವರುಷದ ಕಾರ್ಯನಿರ್ವಾಹಕ ಮಂಡಲದ ಸಭಾಧ್ಯಕ್ಷರನ್ನಾಗಿ ಆರಿಸುವದಾದ ಬಳಿಕ ಕೆಳಗೆ ಬರೆದ ಮುಖ್ಯ ತರಾವುಗಳು ಸರ್ವಾನುಮತದಿಂದ ಪಾಸಾದವು:—

(೧) ಮುಂದಿನ ಸಮ್ಮೇಲನವನ್ನು ೧೯೨೬ನೇ ಇಸವಿಯ ಮೇ ತಿಂಗಳ ಕೊನೆಯ ವಾರದಲ್ಲಿ ಇಡಬೇಕು. ಈ ಸಮ್ಮೇಲನಕ್ಕೆ ಬರುವದಕ್ಕೋಸ್ಕರ ಎಲ್ಲ ಶಿಕ್ಷಕ ಶಿಕ್ಷಕಿಯರಿಗೆ ಅನುಕೂಲವಾಗುವಂತೆ ಪ್ರಾಥಮಿಕ ಶಾಲೆಗಳಿಗೆ ಕೊಡುವ ಜೀಸಿಗೆಯ ಸೂಟಿಯನ್ನು ಎಲ್ಲ ಜಿಲ್ಲೆಗಳಲ್ಲಿ ಇದೇ ಕಾಲದಲ್ಲಿ ದೊರೆಯುವ ವ್ಯವಸ್ಥೆ ಮಾಡಬೇಕೆಂದು ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ ಇವರಿಗೂ ಮ್ಯುನಿಸಿಪಾಲಿಟಿಯ ಸ್ಕೂಲಬೋರ್ಡ ಚೇರಮನ್ನರಿಗೂ ವಿನಂತಿ ಮಾಡಿಕೊಳ್ಳತಕ್ಕದ್ದು.

(೨) ಮುಂದಿನ ಸಮ್ಮೇಲನದಲ್ಲಿ ಕಲಿಸಿ ತೋರಿಸುವ ಪಾಠಗಳು ಮಾದರಿಯ ಪಾಠಗಳಾಗುವಂತೆ ಶಿಕ್ಷಣದಲ್ಲಿ ನುರಿತ ಕೆಲವು ಗೃಹಸ್ಥರಿಗೆ ಕಾರ್ಯನಿರ್ವಾಹಕ ಮಂಡಲದವರು ವಿನಂತಿ ಮಾಡಿಕೊಳ್ಳಬೇಕು. ಇಂಥವರ ಮಾದರಿಯ ಪಾಠಗಳ ಸಂಖ್ಯೆಯೇ ಸಮ್ಮೇಲನದಲ್ಲಿ ಹೆಚ್ಚಾಗಿರಬೇಕು. ಸಮ್ಮೇಲನದಲ್ಲಿ ನಡೆಯತಕ್ಕ ಪಾಠಗಳ ಹಾಗು ನಿಬಂಧವು

ಮಿ. ಪಶುಪತಿ, ಮಿ. ವ. ಮ. ತಟ್ಟಿ, ಮಿಸೆಸ್ ರಮಾಬಾಯಿ, ಮಿ. ಎನ್. ಪ್ಹಿ. ಕೋಲ್ಹಟ್ಕರ ಬಿ. ಎ. ಇವರದೊಂದು ಕವಿಒಟಿಯು ಇರಬೇಕು. ಮಿ. ಎನ್. ಪ್ಹಿ. ಕೋಲ್ಹಟ್ಕರ ಇವರು ಈ ಕವಿಒಟಿಯ ಸಭಾನಾಯಕರು ಇರಬೇಕು. ಈ ಕವಿಒಟಿಯವರು ಈ ಸಪ್ಟಂಬರ ತಿಂಗಳ ಕೊನೆಯೊಳಗೆ ಪಾಠಗಳ ಹಾಗು ನಿಬಂಧಗಳ ಯಾದಿಯನ್ನು ಸೆಕ್ರೆಟರಿಯವರಿಗೆ ಕಳಿಸಿಕೊಡಬೇಕು. ಜನವರಿ ನಿರ್ಗಿರ ಒಳಗಾಗಿಯೇ ಸೆಕ್ರೆಟರಿಯವರು ಈ ಯಾದಿಯನ್ನು ಪ್ರಸಿದ್ಧಮಾಡಬೇಕು. ಇವುಗಳಲ್ಲಿ ಯಾವವಾದರೂ ಪಾಠಗಳನ್ನು ಕಲಿಸುವ ಇಚ್ಛೆಯುಳ್ಳ ಶಿಕ್ಷಕಶಿಕ್ಷಿಕೆಯರು ತಾವು ಕಲಿಸಲಿಚ್ಛಿಸುವ ಪಾಠದ ಟಿಪ್ಪಣಿಯನ್ನು ವಿವರವಾಗಿ ಬರೆದು ಮಾರ್ಚ ತಿಂಗಳ ಕೊನೆಯೊಳಗೆ ಕಳಿಸಬೇಕು. ಬಂದ ಟಿಪ್ಪಣಿಗಳನ್ನು ನೋಡಿ ಮೇಲ್ಕಾಣಿಸಿದ ಕವಿಒಟಿಯವರು ಎಷ್ಟು ಜನ ಶಿಕ್ಷಕ ಶಿಕ್ಷಿಕೆಯರಿಗೆ ಪಾಠಕಲಿಸಲು ಹೊತ್ತು ಸಿಗುವದೆಂಬದನ್ನು ನಿರ್ಣಯಿಸಿ ಅವರಿಗೆ ಸೆಕ್ರೆಟರಿಯವರ ಮುಖಾಂತರ ತಿಳಿಸತಕ್ಕದ್ದು.

(೩) ಮುಂಡಲದ ಸಮ್ಮೇಲನವು ನಡೆಯುವ ತಾರೀಖು ಏನಿಲ್ಲೆಂದರೂ ಎರಡು ತಿಂಗಳು ಮುಂಚಿತವಾಗಿ ಪ್ರಸಿದ್ಧವಾಗಬೇಕು.

(೪) ಹಳ್ಳಿಯ ಶಾಲೆಗಳಲ್ಲಿ ಒಬ್ಬೊಬ್ಬರಿಗೆ ಎರಡೆರಡು ವರ್ಗಗಳಂತೂ ಬರುವವು. ಆದ್ದರಿಂದ ನಿಯಮಿತ ಅವಧಿಯಲ್ಲಿ ಎರಡು ವರ್ಗಗಳ ಪಾಠಗಳನ್ನು ಯಾದರೂ ಕಲಿಸಿ ತೋರಿಸುವಂತಿದ್ದರೆ ಅದಕ್ಕೆ ಸಮ್ಮೇಲನದಲ್ಲಿ ಅವಕಾಶವಿರತಕ್ಕದ್ದು.

(೫) ಮುಂದಿನ ವರುಷದ ಸಮ್ಮೇಲನದ ಸಂಗಡ ಒಂದು ಶಿಕ್ಷಣವಿಷಯ ಪ್ರದರ್ಶನವನ್ನು ಏರ್ಪಡಿಸಬೇಕು. ಈಬಗ್ಗೆ ವಿಚಾರ ಮಾಡಿ ಪ್ರದರ್ಶನದಲ್ಲಿ ಇಡಬೇಕಾದ ಸಾಮಾನುಗಳು ಮೊದಲಾದ ಬಗ್ಗೆ ಕೆಳಗೆ ಕಾಣಿಸಿದ ಒಂದು ಕವಿಒಟಿಯವರು ತಮ್ಮ ವರದಿಯನ್ನು ಅಗಸ್ಟ ತಿಂಗಳ ಕೊನೆಯೊಳಗಾಗಿ ಸೆಕ್ರೆಟರಿಯವರ ಕಡೆಗೆ ಕಳಿಸಿಕೊಡಬೇಕು. ಪ್ರದರ್ಶನ ಕವಿಒಟಿಯ ಸಭಿಕರು:—

ಮಿ. ಆರ್. ಜಿ. ತೆರಗುಂಡಿ ಎಮ್. ಎ. ಮಿ. ಎನ್. ಪ್ಹಿ. ಕೋಲ್ಹಟ್ಕರ ಬಿ. ಎ. (ಕವಿಒಟಿಯ ಅಧ್ಯಕ್ಷ). ಮಿ ಎಮ್. ರಾಮಬ್ರಹ್ಮ ಬಿ. ಎ. ಮಿ. ಎಸ್. ಪುರೋಹಿತ ಬಿ. ಎ. ಮಿ. ಆರ್. ಎನ್. ಜಾತಿಗೌರ ಮಿಸೆಸ್ ವೆಂಕಟಲಕ್ಷ್ಮಮ್ಮ ಮಿಸೆಸ್ ರಂಗನಾಥಪಿಳ್ಳೆ

(೬) ಈ ಸಾರೆ ಪ್ರಸಿದ್ಧಪಡಿಸುವ ಪಾಠಮಾಲೆಯಲ್ಲ ಅನುಭವಿಕರಾದ ಶಿಕ್ಷಕರು ತಮ್ಮ ಸಾಲೆಗಳಲ್ಲಿ ಕಲಿಸಿ ನೋಡಿದ ವಿಷಯಗಳಬಗ್ಗೆ ತೀರ ಕಡಿಮೆಯೆಂದರೆ ೫ ಪಾಠಗಳಾದರೂ ಒಂದೊಂದು ವಿಷಯದಲ್ಲಿ ಇರಬೇಕು. ವಿಷಯದ ಆರಂಭದ ಪಾಠಗಳಿಂದ ಟಿಪ್ಪಣಿ ಬರೆದು ಕಳಿಸುವದು ಮೇಲಾದದ್ದು. ಸಪ್ಟಂಬರ ತಿಂಗಳ ಗಣನೆಯ ತಾರೀಖಿನೊಳಗಾಗಿ ಅನುಭವಿಕ ಶಿಕ್ಷಕರು ಈ ಸಾರೆಯ ಪಾಠಮಾಲೆಗೆ ಪಾಠಗಳ ಟಿಪ್ಪಣಿಯನ್ನು ಬರೆದು ಕಳಿಸುವರೆಂಬ ನಂಬಿಗೆಯಿದೆ. ಈ ಐದು ಪಾಠಗಳು ಬಿಡಿಬಿಡಿಯಾಗಿರದೆ ಕ್ರಮವಾದ ಪಾಠಗಳಿರಬೇಕು.

(೭) " ಮಾದರಿಯ ಶಿಕ್ಷಕ " ಎಂಬ ಹೆಸರಿನಿಂದ ಪ್ರಾಥಮಿಕ ಸಾಲೆಗಳ ಬಾಲಕರವರ್ಗಕ್ಕೆ ಕಲಿಸಬೇಕಾಗುವ ಯಾವತ್ತು ವಿಷಯಗಳ ಎಲ್ಲ ಪಾಠಗಳ ಟಿಪ್ಪಣಿಯನು ಬರೆದು ಕಳಿಸಿದವರ ಬಹುಮಾನಕ್ಕಾಗಿ ೧೦೦ ರೂಪಾಯಿ ಇನಾಮು ಇಟ್ಟಿರುವ ಗೃಹಸ್ಥರಿಗೆ ತಮ್ಮ ಶರ್ತುಗಳನ್ನು ಹೆಚ್ಚು ಸ್ಪಷ್ಟವಾಗಿ ತಿಳಿಸಲು ವಿನಂತಿಮಾಡಿಕೊಳ್ಳಬೇಕು. ಎಲ್ಲ ವಿಷಯಗಳ ಎಲ್ಲ ಪಾಠಗಳ ಟಿಪ್ಪಣಿಯು ಸುಮಾರು ೫೦೦ ಪುಟದ ಪುಸ್ತಕವೇ ಆಗಬಹುದು. ಇಂತಿಷ್ಟು ಪುಟಗಳೊಳಗೆ ಇಂಥ ವಿಷಯಗಳ ಬಗ್ಗೆ ಇಂತಿಷ್ಟು ಪಾಠದ ಮೇಲೆ ಇಂಥ ಟಿಪ್ಪಣಿಗಳನ್ನು ಬರೆಯಬೇಕೆಂದು ಅವರು ನಿರೂಪಿಸಿದರೆ ಬರೆಯುವವರಿಗೆ ಅನುಕೂಲವಾಗುವದು.

(೮) ವಾರ್ಷಿಕ ಸಭೆಯಲ್ಲಿ ನಿರ್ಣಯವಾದ ಮೇರೆಗೆ ಪ್ರಾಥಮಿಕ ಶಿಕ್ಷಕ ಶಿಕ್ಷಿಕೆಯರು ಬರೆದು ಕಳಿಸುವ ಮೇಲಾದ ನಿಬಂಧಗಳಿಗೆ ೧೫ ರೂಪಾಯಿಯ ಎರಡು ಇನಾಮುಗಳನ್ನು ಕೊಡಬೇಕು. ಇವುಗಳಲ್ಲಿ ಒಂದು ಇನಾಮು ಶಿಕ್ಷಕರ ನಿಬಂಧಗಳಲ್ಲಿ ಎಲ್ಲವುಗಳಲ್ಲಿ ಮೇಲಾದವೆಂದು ನಿರ್ಣಯಿಸಲ್ಪಟ್ಟವರಿಗೂ, ಎರಡನೆಯದು ಶಿಕ್ಷಿಕೆಯರ ನಿಬಂಧಗಳಲ್ಲಿ ಎಲ್ಲವುಗಳಲ್ಲಿ ಮೇಲಾದವೆಂದು ನಿರ್ಣಯಿಸಲ್ಪಟ್ಟವರಿಗೂ ದೊರೆಯತಕ್ಕದ್ದು. ಶಿಕ್ಷಕರು ಬರೆಯಬಹುದಾದ ನಿಬಂಧದ ವಿಷಯವನ್ನೂ ಶಿಕ್ಷಿಕೆಯರು ಬರೆಯಬಹುದಾದ ನಿಬಂಧದವಿಷಯವನ್ನೂ ಕೆಳಗೆ ಕಾಣಿಸಿದ ಕಮಿಟಿಯವರು ಜುಲೈ ತಿಂಗಳ ಕೊನೆಯೊಳಗೆ ಸೆಕ್ರೆಟರಿಯವರಿಗೆ ತಿಳಿಸಿ ಪ್ರಸಿದ್ಧಪಡಿಸಬೇಕು. ನಿಬಂಧವು ಶಾಲಾಪತ್ರಕದ ೫೦ ಪುಟಗಳಿಗಿಂತ ಹೆಚ್ಚು ಆಗಿಬಾರದು. ಈ ನಿಬಂಧಗಳನ್ನು ಪ್ರಸಿದ್ಧಪಡಿಸುವ ಹಕ್ಕೂ ಮುಂಡಲಿಕ್ಕೆ ಇರುವದು. ಕಮಿಟಿಯವರ ಹೆಸರು ರಾವಬಹಾದ್ದೂರ ಬ್ಹ. ಬ. ಜೋಶಿ, ಬಿ. ಎ. ಮಿ॥ ಆರ್. ಎಸ್. ಹುಕ್ಕೇರಿಕರ ಎಮ್. ಎ. ಮಿ॥ ಬಿ. ಆರ್. ಕದಡಿ.

(೯) ಕಾರ್ಯನಿರ್ವಾಹಕ ಮಂಡಲದ ಎರಡನೆಯು ಸಭೆಯು ಸಪ್ಟಂಬರ ತಿಂಗ ೪ ಕೂಡಿ ಮೇಲೆ ಕಾಣಿಸಿದ ಸಂಗತಿಗಳಬಗ್ಗೆ ಎಷ್ಟು ಕಾರ್ಯವು ಆಗಿರುವದಂಬ ದನ್ನೂ ಇತರ ಸಂಗತಿಗಳನ್ನೂ ಕುರಿತು ವಿಚಾರಮಾಡತಕ್ಕದ್ದು.

(೧೦) ಸದ್ಯದ ಸಭೆಗೆ ಮಂಡಲದ ಪ್ರಸಿಡೆಂಟರಾದ ರಾವಬಹಾದ್ದೂರ ವ್ಹಿ. ಬಿ. ಜೋಶಿ, ಬಿ. ಎ. ಇವರು ಹಾಜರ ಇದ್ದು ತಮ್ಮ ಅನುಭವಪೂರ್ಣವಾದ ವಿಚಾರಗಳ ಲಾಭವನ್ನು ಕಾರ್ಯನಿರ್ವಾಹಕ ಸಭೆಯವರಿಗೆ ಒದಗಿಸಿಕೊಟ್ಟದ್ದಕ್ಕಾಗಿ ಅವರ ಉಪಕಾರವು ಸ್ಮರಣೀಯವಾಗಿರುವದು.

(೧೧) ಮಂಡಲದ ರಿಸರ್ವಫಂಡಿನಲ್ಲಿರುವ ಹಣದಲ್ಲಿ ೨೦೦ ರೂಪಾಯಿಗಳನ್ನು ಫಿಕ್ಸಡಡಿಪಾಜಿಟದಲ್ಲಿ ಇಡಬೇಕು.

(೧೨) ಮಂಡಲದ ಆಜೀವಸಭಾಸದರಿಂದ ವರ್ಗಣಿಯು ಹಣವನ್ನು ತೀವ್ರವೇ ವಸೂಲು ಮಾಡುವ ವ್ಯವಸ್ಥೆಯಾಗಬೇಕು.

(೧೩) ಕಾರ್ಯನಿರ್ವಾಹಕ ಮಂಡಲದ ವಿನಂತಿಯ ಮೇರೆಗೆ ರಾಃ ದ್ದೂರ ವ್ಹಿ. ಬಿ. ಜೋಶಿ ಬಿ. ಎ. ಇವರು ಮಂಡಲದ ಆಜೀವಸಭಾಸದರಾಗಲು ಒಪ್ಪಿ ಕೊಂಡದ್ದಕ್ಕಾಗಿ ಸಭೆಯವರು ಅವರಿಗೆ ಉತಕೃತರಾಗಿರುವರು.

V. D. Navalgund,

ಕಾರ್ಯನಿರ್ವಾಹಕಮಂಡಲದ ಅಧ್ಯಕ್ಷ.

ಕಾರ್ಯನಿರ್ವಾಹಕ ಸಭೆಯವರು ಮಾಡಿದ ಠರಾವುಗಳಿಂದ ಮಂಡಲದ ಸದ್ಯದ ವರುಷದ ಕಾರ್ಯವು ಹೆಚ್ಚು ಅಸ್ಥೆಯಿಂದ ನಡೆದಿರುವದೆಂದು ಸಭಿಕರಿಗೆ ಮನವರಿಕೆ ಯಾಗುವದೆಂದು ನಂಬಿರುವೆನು. ಮುಂದಿನ ಸಮ್ಮೇಲನಕ್ಕೆ ಹೊರಗಿನಿಂದ ಅದಷ್ಟು ಹೆಚ್ಚು ಜನ ಶಿಕ್ಷಕಶಿಕ್ಷಿಕೆಯರು ಬರುವರೆಂದೂ ನಂಬಿರುವೆನು. ಶಿಕ್ಷಕಶಿಕ್ಷಿಕೆಯರು ಈ ಕಾರ್ಯವು ತಮ್ಮದೇ ಎಂದು ಬಗೆದು ಮಂಡಲವು ಕೈಕೊಂಡ ಕಾರ್ಯವನ್ನು ಯಶಸ್ವಿಯಾಗಿ ಮಾಡುವರೆಂದು ಕೋರುತ್ತೇನೆ.

ಪ್ರಾಥಮಿಕ ಶಾಲೆಗಳ ಬೇಸಿಗೆಯ ಸೂಟ್ಟಿಯು ಮೂ ತಿಂಗಳ ಕೂಸಿನೆಯ ಎರಡು ವಾರಗಳಲ್ಲಿ ಆಗುವಂತೆ ವ್ಯವಸ್ಥೆ ಮಾಡುವ ಬಗ್ಗೆ ಮೈ॥ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಇವರಿಗೆ ವಿನಂತಿ ಮಾಡಿಕೊಂಡಿರುವೆನು.

ಈ ಸಾರೆ ಸಮ್ಮೇಲನದಲ್ಲಿ ಕಲಿಸಲಿಕ್ಕೆ ಅನುಭವಿಕರಾದ ಶಿಕ್ಷಕರಿಗೆ ಕಾರ್ಯ ನಿರ್ವಾಹಕ ಸಭೆಯವರು ವಿನಂತಿಮಾಡಿಕೊಳ್ಳುವರಷ್ಟೇ, ಬೇರೆ ಬೇರೆ ತಾಲೂಕುಗಳಲ್ಲಿರುವ ಸಭಿಕರು ಸಮ್ಮೇಲನದಲ್ಲಿ ಪಾಠಕಲಿಸಲು ಯೋಗ್ಯತೆಯೂ ಇಚ್ಛೆಯೂ ಉಳ್ಳ ಶಿಕ್ಷಕಶಿಕ್ಷಿಕೆಯರ ಹೆಸರುಗಳನ್ನು ತಿಳಿಸಿದರೆ ಕಾರ್ಯನಿರ್ವಾಹಕ ಸಭೆಯವರ ಮುಂದೆ ಈ ಬಗ್ಗೆ ಮಾಹಿತಿಯನ್ನಿಡಲು ನನಗೆ ಅನುಕೂಲವಾಗುವದು. ಸಮ್ಮೇಲನದಲ್ಲಿ ನಡೆಯುವ ಪಾಠಗಳು ಪರೀಕ್ಷಾರ್ಥವಾಗಿ ನಡೆಯುವದಿಲ್ಲೆಂದೂ, ಅನುಭವಿಕರಾದ ಶಿಕ್ಷಕರು ಕಲಿಸಿನೋಡಿ ಸಮಾಧಾನಕಾರವೂ ಪರಿಣಾಮಕಾರಿಯೂ ಆಗುವಂಥ ಪಾಠಗಳ ಮಾದರಿಗಳನ್ನು ತೋರಿಸುವದೇ ಸಮ್ಮೇಲನದ ಉದ್ದೇಶವೆಂಬದನ್ನು ಮರೆಯುವಾರದೆಂದೂ ಸೂಚಿಸುವದು ಅವಶ್ಯವೆಂದು ತೋರುತ್ತದೆ. ಅನುಭವಿಕ ಶಿಕ್ಷಕರೇ ಪಾಠಗಳನ್ನು ಕಲಿಸುವವರಿರುವದರಿಂದ ಪ್ರಾಥಮಿಕ ಶಿಕ್ಷಕರಿಗೆ ಕಲಿಸಲಿಕ್ಕೆ ವಿಶೇಷ ಗಡಚಾದವೆಂದು ತೋರುವ ಪಾಠಗಳನ್ನು ಮೊದಲೇ ಬರೆದು ತಿಳಿಸಿದರೆ ಆ ಪಾಠಗಳನ್ನೇ ಹ್ಯಾಗೆ ಕಲಿಸಿ ತೋರಿಸತಕ್ಕದ್ದೆಂಬದನ್ನು ನಿಷ್ಕರ್ಷೆಪಡಿಸಲು ಅವರಿಗೆ ವಿನಂತಿ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವದು.

ಮುಂದಿನ ವರುಷದ ಸಮ್ಮೇಲನದೊಡನೆ ಕೂಡಿಸುವ ಪ್ರದರ್ಶನದ ಬಗ್ಗೆ ಯಾರಿಗಾದರೂ ಸೂಚನೆಗಳನ್ನು ಮಾಡುವದಿದ್ದರೆ, ಅವರು ತೀವ್ರವೇ ಮಿ. ವ್ಹಿ. ಎನ್. ಕೋಲ್ಹಟಕರ ಬಿ. ಎ. ಟ್ರೇನಿಂಗಕಾಲೇಜ ಫಾರಮೆನ್ ಧಾರವಾಡ ಇವರಿಗೆ ಬರೆದರೆ ಒಳಿತಾಗುವದು.

ಪಾಠಮಾಲೆಯನ್ನು ಪ್ರಸಿದ್ಧಪಡಿಸುವದು ಅವಶ್ಯವಿರುವದರಿಂದಲೂ ಸಮ್ಮೇಲನದಲ್ಲಿ ಒಂದೊಂದು ಪಾಠವನ್ನು ಮಾತ್ರ ಕಲಿಸಿ ತೋರಿಸಲು ಸಾಧ್ಯವಿರುವದರಿಂದಲೂ ವಿಷಯಗಳನ್ನು ಮೊದಲಿನಿಂದ ಮೇಲಿನ ಇಯತ್ತೆಯವರೆಗೆ ಕಲಿಸಿ ಕಲಿಸಿ ನುರಿತ ಶಿಕ್ಷಕ ಶಿಕ್ಷಿಕೆಯರು ಪಾಠಗಳ ಟಿಪ್ಪಣಿಯನ್ನು ತೀವ್ರ ಕಳಿಸುವರೆಂದು ಕೋರುತ್ತೇನೆ. ಸಾಮಾನ್ಯ ಶಿಕ್ಷಕರಿಗೆ ಪಾಠದರಚನೆಯೂ ವಿಶೇಷಾಂಶಗಳೂ ತಿಳಿಯುವಷ್ಟು ವಿವರವಾಗಿಯೂ ಅದಷ್ಟು ಸಂಕ್ಷೇಪವಾಗಿಯೂ ಬರೆದು ಕಳಿಸಿದರೆ ಹೆಚ್ಚು ಪಾಠಗಳ ಬಗೆ ಮುದ್ರಿಸಲು ಅವಕಾಶವು ದೊರೆಯುವದು.

ಇನಾಮಿನ ನಿಬಂಧವನ್ನು ಬರೆಯಲಪೇಕ್ಷಿಸುವವರು ಈ ಮೊದಲೇ ಮಂಡಲದ

ಕಾರ್ಯನಿರ್ವಾಹಕ ಸಭೆಯು ಸಪ್ಟಂಬರ ತಿಂಗಳ ಮಧ್ಯದಲ್ಲಿ ಕೂಡಬಹುದು ಮುಂಡಲದ ಕಾರ್ಯದ ಬಗ್ಗೆ ವಿಶೇಷ ಸೂಚನೆಗಳನ್ನು ಮಾಡಲಿಚ್ಛಿಸುವವರು ಅದಕ್ಕೂ ಮೊದಲೇ ಅಂದರೆ ಸಪ್ಟಂಬರ ತಿಂಗಳ ಆರಂಭದಲ್ಲಿಯೇ ತಮ್ಮ ಸೂಚನೆಗಳನ್ನು ಬರೆದು ತಿಳಿಸಿದರೆ ಅವುಗಳನ್ನು ಕಾರ್ಯನಿರ್ವಾಹಕ ಸಭೆಯ ಮುಂದೆ ಇರಿಸಲು ಅನುಕೂಲವಾಗುವದು.

ಕಳೆದ ವರುಷದ ವರ್ಗಣಿಯ ಹಣವನ್ನು ಕಳಿಸದೆ ಉಳಿದ ಸಭಿಕರು ಮುಯಾರ್ದರ ಮಾಡಿ ತಮ್ಮ ಎರಡೂ ವರ್ಷಗಳ ವರ್ಗಣಿಯನ್ನು ತೀವ್ರ ಕಳಿಸುವರೆಂದು ಆಶಿಸುತ್ತೇನೆ. ವರ್ಗಣಿಯು ಬಾಕಿಯುಳಿಯುತ್ತ ಹೋದರೆ ಎರಡು ವರ್ಷಗಳ ವರ್ಗಣಿಯ ಹಣವನ್ನು ಈ ತುಟ್ಟಿಯ ಕಾಲದಲ್ಲಿ ಒಮ್ಮೆಲೆ ಕೈಬಿಟ್ಟು ಕೊಡುವದು ಶ್ರಮವೆನಿಸುವದು. ವರ್ಗಣೀದಾರರ ಸಂಖ್ಯೆಯೂ ವರ್ಗಣಿಯ ಹಣವೂ ಹೆಚ್ಚದಿದ್ದರೆ ಮಂಡಲವು ಕೈಕೊಂಡ ಕಾರ್ಯವು ಭರದಿಂದ ಸಾಗಲಾರದೆಂಬದನ್ನು ಒಡೆದು ಹೇಳಬೇಕಾಗಿಲ್ಲ. ಶಿಕ್ಷಣದಂಥ ಪವಿತ್ರವಾದ ಕಾರ್ಯದಲ್ಲಿ ತೊಡಗಿರುವ ಶಿಕ್ಷಕ ಶಿಕ್ಷಕಿಯರು ತಮ್ಮ ಉದ್ಯೋಗದ ಉತ್ಕರ್ಷವನ್ನು ಬಯಸಲಿಕ್ಕೂ ಸಾಧ್ಯಮಾಡಿಕೊಳ್ಳಲಿಕ್ಕೂ ಸಂಘಶಕ್ತಿಯಿಂದ ಕೆಲಸಮಾಡುವದನ್ನು ಕೈಕೊಂಡ ಬಳಿಕ, ಹಿಂದೆ ಸರಿಯರೆಂದು ನಂಬಿದ್ದೇನೆ. ಈಗ ಸಭಿಕರಾಗಿರುವವರು ತಮ್ಮ ಮಿತ್ರರನ್ನು ಸಭಿಕರಾಗಲಿಕ್ಕೆ ವಿನಂತಿಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

V. N. MAGDAL.

ಸೆಕ್ರೆಟರಿ.

ಪ್ರತಿವ್ಯವಹಾರ.

ಮ್ಯಾ. ರಾ. ರಾ. ಕನ್ನಡ ಶಾಲಾಪತ್ರಕದ ಎಡಿಟರ ಇವರ ಸನ್ನಿಧಿಗೆ:-

ಸಾ. ನ. ವಿ. ವಿ. ಪ್ರೋ. ಮಾಣಿಕರಾವ ಇವರ ವ್ಯಾಯಾಮದ ಸಾಮಾನ್ಯ ನಿಯಮಗಳು ಶಾಳಾ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾದವುಗಳಿರುವವೆಂದು ನನ್ನ ಭಾವನೆಯಾದ್ದರಿಂದ ಅವನ್ನು ಬರೆದು ತಮ್ಮ ಕಡೆಗೆ ಕೊಟ್ಟುಕಳುಹಿದ್ದೇನೆ. ಅದ ತಮ್ಮ ಪತ್ರದಲ್ಲಿ ಸ್ಥಳ ದೊರೆಯಬೇಕಾಗಿ ಬೇಡಿಕೊಳ್ಳುವೆನು.

ಪ್ರೊ. ಮಾಣಿಕರಾವ (ಜುಮ್ಮಾದಾದಾ ವ್ಯಾಯಾಮ ಶಾಳಾ) ಇವರ ವ್ಯಾಯಾಮದ ಕೆಲವು ಸಾಮಾನ್ಯ ನೇಮಗಳು.

(ಲೇ. ಫ್ರಿ. ಎಸ್. ಕಟ್ಟಿ. ಅಸಿ. ಮಾಸ್ತರ ಬೊಮ್ಮನಹಳ್ಳಿ.)

ಮನುಷ್ಯಜನ್ಮವನ್ನು ಸಾರ್ಥಕಮಾಡಿಕೊಳ್ಳಲು, ಬಹು ಶ್ರೇಷ್ಠ ಹಾಗು ಉತ್ತಮವಾದ ಕಾರ್ಯವನ್ನು ಮಾಡಶಕ್ಕದ್ದು. ಅಂಥಕಾರ್ಯವನ್ನು ಕೈಕೊಳ್ಳಬೇಕಾದರೆ ನಿರೋಗಿ ಶರೀರವುಳ್ಳವನೂ ಚಿಂತೆರಹಿತ ಮನಸ್ಸುಳ್ಳವನೂ ಇರುವದು ಬಹು ಅವಶ್ಯಕವು. ಶರೀರವು ಯಾವದೊಂದು ರೋಗದಿಂದ ಪೀಡಿತವಾದರೆ ಇಲ್ಲವೆ ಮನಸ್ಸು ನಾನಾಪ್ರಕಾರದ ಚಿಂತೆಯೊಳಗೆ ಮುಳುಗಿ ಹೋದರೆ, ನಮ್ಮ ಕೈಯಿಂದ ಯಾವ ಕಾರ್ಯವೂ ಸಿದ್ಧಿಗೆ ಹೋಗಲಾರದು. ಶಾರೀರಿಕ ಮಾನಸಿಕ ನೈತಿಕಾರೋಗ್ಯಗಳು ಒಂದಕ್ಕೊಂದು ಅವಲಂಬಿಸಿರುವವು. ಅಂದರೆ ಒಂದು ಸುಧಾರಿಸಿದರೆ ಅದರ ಯೋಗದಿಂದ ಉಳಿದವುಗಳು ಸುಧಾರಿಸುವವು.

ಸಾಮಾನ್ಯವಾಗಿ ಜನರ ಕಲ್ಪನೆಯು 'ಯಾವನು ಮನದಣಿ ತಿಂದುಂಡು ಬೇಸರಿಯದಂತೆ ತಿರುಗುವನೋ ಅವನು ನಿರೋಗಿ' ಎಂದಿರುವದು. ಆದರೆ ಇದು ಕೇವಲ ಭ್ರಾಂತಿ ಮೂಲಕವಾದದ್ದು. ಹಲಕೆಲವು ಜನರು ಎಷ್ಟೋಸಾರೆ ವ್ಯಾಧಿಪೀಡಿತರಾಗಿದ್ದರೂ ಅದನ್ನು ತೋರಗೊಡದೆ, ಮನದಣಿ ತಿಂದುಂಡು ಚಕ್ಕಂದದಿಂದ ತಿರುಗುವವರಂತೆ ತೋರಿಸುವರು (ಬೇಕಾದರೆ ಕುನ್ನಿಯವರ ತತ್ವವನ್ನು ನೋಡಿರಿ) ಇದರಿಂದ ಅವರು ನಿರೋಗಿಯುಳ್ಳವರೆಂದು ನಿರ್ಣಯಿಸುವದು ಅತೀವ ತಪ್ಪಾದದ್ದು. ಯಾವನ ನಿರ್ಮಲವಾದ ಮನಸ್ಸು ಶುದ್ಧವಾದ ಶರೀರದಲ್ಲಿ ವಾಸಮಾಡಿಕೊಂಡಿರುವದೋ ಅವನು ಮಾತ್ರ ನಿರೋಗಿಯು. ಶಾರೀರಿಕ ಇಲ್ಲವೆ ಮಾನಸಿಕ ಬೇನೆಗಳು ಎಂದೂ ಅಡಗಿಕೊಂಡು ಕುಳಿತಿರುವದಿಲ್ಲ. ಮೊದಲನೇದು ನಮ್ಮ ಕಣ್ಣಿಗೆ ಸ್ಪಷ್ಟವಾಗಿ ತೋರುವದು. ಎರಡನೇಯದು ನಮ್ಮ ಕಣ್ಣಿಗೆ ಒಂದುವೇಳೆ ತೋರಲಿಕ್ಕಿಲ್ಲ; ಆದರೂ ಅದರ ಪರಿಣಾಮವು ನಮ್ಮ ಶರೀರದ ಮೇಲಾಗದೆ ಹೋಗಲಾರದು. ಆ ಮಾನಸಿಕ ವ್ಯಥೆಯಿಂದ ಕೃಶವಾಗಿ ನಿಶ್ಯಕ್ತವಾದ ಶರೀರವು ನಮಗೆ ಸ್ಪಷ್ಟವಾಗಿ ತೋರುವದು.

ಶರೀರವು ಒಂದು ಗುಲಾಬಿ ಹೂವಿನಂತೆಯೂ, ಮನಸ್ಸು ಅದರೊಳಗಿನ ಸುಗಂಧವಾದ ವಾಸನೆಯಂತೆಯೂ ಇರುವವು. ಗುಲಾಬಿ ಹೂವಿಗೆ ಒಂದುವೇಳೆ ವಾಸನೆ ಇಲ್ಲದಿದರೆ ನಾವು ಆ ಹೂವನ್ನು ಬಿಸಾಟು ದೂರ ಒಗೆಯುತ್ತೇವಲ್ಲಿ

ಸುವಾಸನೆ ರಹಿತವಾದ (ವಿಕಾರಯುಕ್ತ) ಮನಸ್ಸಿನಿಂದೊಡಗೂಡಿದ ಶರೀರವು ಅಸು
ಪಮ ಸೌಂದರ್ಯವಾಗಿದ್ದರೇನು? ಅದು ನಿರುಪಯೋಗಿಯೇ! ಅದರ ಮೋಹಕ
ಸ್ವರೂಪವನ್ನು ಒಂದು ಮಾತಿಗೆ ಒತ್ತಿಡಬೇಕಾಗುವದು. ಎಲ್ಲಿ ಯಾವನ ಚರಿತ್ರವು
ಹೀನವಾದದ್ದಿರುವದೋ ಅವನ ಆರೋಗ್ಯವು ಎಂದೂ ಉತ್ತಮವಾದದ್ದಿರುವದಿಲ್ಲ.
(ಉದಾ:ಗಳು ಅನೇಕ ಸಿಗಬಹುದು) ಉದಾತ್ತ ವಿಚಾರಗಳಿಂದ ಮನಸ್ಸನ್ನು ತಿರುಗಿಸು
ವದು, ನಮ್ಮ ಕೈಯಿಂದ ಶ್ರೇಷ್ಠವಾದ ಕಾರ್ಯಗಳು ಆಗುವಂತೆ ಯತ್ನಮಾಡುವದು,
ಈ ಯೋಗದಿಂದ ಶರೀರ ಹಾಗು ಮನಶ್ಶುದ್ಧಿಯನ್ನಿಡುವದು ಇವೆಲ್ಲ ಆರೋಗ್ಯದ
ಲಕ್ಷಣಗಳಾಗಿರುತ್ತವೆ. ಆರೋಗ್ಯದ ಬೆಲೆಯು ಕೋಟ್ಯವಧಿ ರೂಪಾಯಿಗಳಿಗಿಂ
ತಾವಿರಾರು ಪಾಲು, ಅದೇಕೆ? ಅವಕ್ಕೂ ಹೆಚ್ಚು ಪಾಲು ಮಹತ್ವದ್ದಿರುತ್ತದೆ.

ಯಾವನು ಪೂರ್ಣನಿರೋಗಿ ಇರುವನೋ ಅವನಿಗೆ ಮರಣದ ಭಯವು ಎಷ್ಟು
ಮಾತ್ರಕ್ಕೂ ಇರಲಾರದು. ಒಂದು ವೇಳೆ ನಮಗೆ ಮರಣದ ಭಯವು ಉಂಟಾದರೆ
ನಿಶ್ಚಯವಾಗಿ ನಾವು ನಿರೋಗಿಗಳಲ್ಲವೆಂದೇ ತಿಳಿಯುತಕ್ಕದ್ದು. ಮೃತ್ಯುದೇವತೆಯು
ನಿರೋಗಿ ಮನುಷ್ಯನಿಂದ ದೂರ ದೂರ ಓಡಿಹೋಗುತ್ತಿರುತ್ತಾಳೆ. युक्ताहार विहारस्य
युक्त चेष्टस्य कर्मसु ॥ युक्तस्वप्नावबोधस्य योगो भवति दुःखहा ॥ १ ॥ 'ಭಗವದ್ಗೀತಾ
ಮನುಷ್ಯನು ನಿಯಮಿತತನದಿಂದ ಯೋಗ್ಯ ವ್ಯವಸಾಯದಲ್ಲಿ ಕಾಲವನ್ನು ಕಳೆಯು
ಲಿದ್ದರೆ ನೂರು ವರ್ಷ ಸಹಜ ಬದುಕಬಹುದು. "ಈ ಜಗತ್ತಿನಲ್ಲಿ ಮನು
ಜನ್ಮವನ್ನು ತಳೆದ ಪ್ರತಿಯೊಬ್ಬನು ಅತಿ ಕಡಿಮೆಯಂದರೂ ನೂರು ವರ್ಷ ಬದುಕ
ಬೇಕು." ಹೀಗೆ ಇಂಗ್ಲೆಂಡದ ಪ್ರಸಿದ್ಧವಿದ್ವಾನ್ ಸರ್‌ಜೇಮ್ಸ ಕ್ರೀಕೆಟನ್ ಬ್ರಾವು
ಎಂಬ ಹೆಸರಿನ ಭಿಷ್ಮಗ್ವರ್ಯರು ಪ್ರತಿಪಾದನ ಮಾಡಿರುವರು. ಇವರ ಅಭಿಪ್ರಾಯ
ನಿಶ್ಚಯಾತ್ಮಕವಾದದ್ದಿರುತ್ತದೆ. ನಿರೋಗಿಯಾಗಿದ್ದು ದೀರ್ಘಾಯು ಆಗುವದ
ಯಾವ ನಿಯಮ-ಳ ಅವಶ್ಯಕತೆ ಇರುವದೆಂಬದನ್ನು ವಿಚಾರಮಾಡುವಾ.

ಕೈಕಾಲು ಮುಂತಾದ ಅವಯವಗಳ ವಿಚಾರಮಾಡುವಾ:-

ಈಗಿನ ಕಾಲದಲ್ಲಿ ಎಲ್ಲ ಕಡೆಯಲ್ಲಿಯೂ ಕೂದಲು ಬಿಡುವ ಪರಿಪಾಠವು ಬಿದ್ದು
ಹೋಗಿದೆ. ಈ ಕೂದಲುಗಳನ್ನು ಉತ್ತಮವಾಗಿಡುವದಕ್ಕೋಸುಗ ಸುವಾಸನೆ
ಎಣ್ಣೆಯನ್ನು ಹಚ್ಚುವದಂತೂ ಮಿತಿಮೀರಿರುವದು. ಕಾ

ತಲೆ ಮತ್ತು ಕೂದಲು.

ಲು, ಕಾಮಿನಿಯಾ ಆಯಿಲ್, ಹೇತರ ಆಯಿಲ್. ಕ

ಹೋಗುವ ಎಣ್ಣೆಗಳನ್ನು (ಒಳಿತು ಹೀನಗಳನ್ನು ಲೆಕ್ಕಿಸದೆ) ಉಪಯೋಗಿಸುವರು. ಇವು ಬಹಿರಂಗಕ್ಕೆ ನಮಗೆ ಉತ್ತಮವೆಂದು ತೋರಿದರೂ ಅವುಗಳ ಪರಿಣಾಮವು ಉತ್ತಮವಾಗಿರುವದಿಲ್ಲ. ಅತ್ತರದ ಪ್ರಚಾರವಂತೂ ಹೇಳಕೂಡದವ್ವಾಗಿದೆ. ತರುಣವೃದ್ಧರು ದರಿದ್ರ ಶ್ರೀಮಂತರು ಒಂದೇ ಸಮನಾಗಿ ಅದರ ಉಪಯೋಗ ಮಾಡಿಕೊಳ್ಳುತ್ತಿರುವರು. ಎಷ್ಟೋ ಮಂದಿ ತಮ್ಮ ಮೀಸೆಗಳಿಗೆ ಅತ್ತರ ಹಚ್ಚಿಕೊಳ್ಳದೆ ಎಂದೂ ಹೊರಬೀಳುವದಿಲ್ಲ. ಈ ಮನೋಹರವಾದ ತೈಲಗಳಿಗೂ ಅತ್ತರಕ್ಕೂ ಮರುಳಾದ ಆ ಜನರ ಕೇಶಗಳು ತೀವ್ರವೇ ಬಿಳ್ಳಗಾಗಹತ್ತಿರುತ್ತವೆ. ಅವರ ಮಿದುಳಿಗಾದರೂ ಇದರಿಂದ ಹಾನಿಯಾಗದೆ ಇರಲಿಕ್ಕಿಲ್ಲ. ಮಿದುಳನ್ನು ಉತ್ತಮ ಮತ್ತು ಶಾಂತವಾಗಿ ಇಡುವದಕ್ಕಾಗಿ ಸೆಲ್ಲಿನ್ನೆ ಖೊಬ್ಬರಿಯಣ್ಣೆ ಮದರಂಗಿಯೆಣ್ಣೆಗಳನ್ನು ಹಚ್ಚಿಕೊಳ್ಳಬೇಕಲ್ಲದೆ ಸ್ಪಿರಿಟದಿಂದ ತಯಾರ ಮಾಡಿದ ಅತ್ತರ ಸೆಂಟ್ಸ ಮುಂತಾದ ಸುಗಂಧಿತೈಲಗಳನ್ನು ಉಪಯೋಗಿಸಬಾರದು. ಮದರಂಗಿಯಣ್ಣೆ ಮುಂತಾದ ತೈಲಗಳನ್ನು ಹಚ್ಚುವದರಿಂದ ಮಿದುಳು ಶಾಂತವಾಗಿರುವದು. ಕೇಶಗಳು ಅತಿ ಮೃದುವಾಗಿಯೂ, ನುಣುಪಾಗಿಯೂ ಕಪ್ಪಾಗಿಯೂ ಆಗಿ ನೋಡುವದಕ್ಕೂ ಮನಸ್ಸಿಗೂ ಕೂಡೆಯೇ ಆನಂದವಾಗುವದು. ಪ್ರತಿ ಎರಡು ದಿವಸಕ್ಕೊಮ್ಮೆ ಎಣ್ಣೆಯನ್ನು ಹಚ್ಚಲೇಬೇಕು. ಎಣ್ಣೆಯನ್ನು ಹಚ್ಚದಿದ್ದರೆ ಕೂದಲುಗಳು ಬಿರುಸಾಗಿ ಒಂದಕ್ಕೊಂದು ಕೂಡಿ ಜಡೆಗಟ್ಟುತ್ತವೆ. ಜಡೆಗಟ್ಟಿ ಬಿರುಸಾದ ಕೂದಲುಗಳು ತಲೆಯಲ್ಲಿಯ ರಕ್ತವನ್ನು ಹೀರಿಕೊಳ್ಳುತ್ತವೆ. ತಲೆಯಲ್ಲಿ ಕೂದಲು ಬಿಟ್ಟ (ಕ್ರಾಪ್ ಜನರು) ಇದನ್ನು ಪೂರ್ಣ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ತಲೆಯ ಕೂದಲುಗಳಿಗೆ ಶಕ್ಯವಿದ್ದಮಟ್ಟಿಗೆ ಸಾಬಣದ ಉಪಯೋಗ ಮಾಡಬಾರದು. ಸಾಬಣದಲ್ಲಿ ಎಷ್ಟೋ ವಿಘಾತಕ ದ್ರವ್ಯಗಳನ್ನು ಕೂಡಿಸಿರುತ್ತಾರೆ. ಶುದ್ಧವಾದ ಸಾಬಣವು ಸಿಗುವದರಲ್ಲೂ ದುರ್ಲಭವೇ! ಕಾರಣ ನಾವು ಸಾಬಣದ ಉಪಯೋಗವನ್ನು ಅದಷ್ಟು ಕಡಿಮೆಮಾಡಬೇಕು. ಸಾಬಣದ ಬದಲು ಅಂಟಾಳಕಾಯಿ ಶೀಗೇಕಾಯಿಗಳ ಉಪಯೋಗ ಮಾಡಿಕೊಳ್ಳುವದು ಉತ್ತಮವಾದದ್ದು ನಾವು ಸ್ನಾನಮಾಡಿದ ಕೂಡಲೇ (ತಲೆಕೂದಲು ತೊಳೆದುಕೊಂಡ ಕೂಡಲೆ) ತಲೆಕೂದಲುಗಳನ್ನು ಬಣದಾದ ಉರುಟು ವಸ್ತ್ರದಿಂದ ಸ್ವಚ್ಛ ಒರಿಸಿಕೊಳ್ಳಬೇಕು. ಯಾರ ತಲೆಕೂದಲುಗಳು ಉದ್ದವಾಗಿರುವವೋ ಅವರು ಕವಡಿಲೋ ಬಾನದ ಹೊಗೆತೆಗೆದುಕೊಳ್ಳತಕ್ಕದ್ದು. ತಲೆಯಲ್ಲಿ ಸಿಕ್ಕಿಕೊಂಡಿರುವ ಹೊಲಸು ಮಣ್ಣುಗಳನ್ನು ತೆಗೆಯುವದಕ್ಕಾಗಿ ಹೇಅರಬ್ರೆಶ್ ಉಪಯೋಗ ಮಾಡಿಕೊಂಡರೆ ಉತ್ತಮವು. ಪೇಯರು ತಮ್ಮ ಕೂದಲುಗಳನ್ನು ಶೀಗೇಕಾಯಿ ಜೀಕಿನಗಡ್ಡೆ ನೆಲ್ಲಿಚಟ್ನಿಗಳಿಂದ

ತಿಕ್ಕಿಕೊಳ್ಳಬಹುದು. ಇಲ್ಲವೆ ಕೂದಲುಗಳನ್ನು ಸ್ವಚ್ಛವಾಗಿ ಒರಿಸಿಕೊಂಡು, ಅವುಗಳ ಹೊಗೆಯನ್ನು ತೆಗೆದುಕೊಳ್ಳಬೇಕು. ಮಿದುಳಿನ ಶಕ್ತಿಯು ಕಡಿಮೆಯಾಗಿರುವದೆಂದು ತೀರದಕೂಡಲೇ ಬಾದಾಮಿಯ ಎಣ್ಣೆಯನ್ನು ಎರಡು ವೇಳೆ ಹತ್ತು ಹದಿನೈದು ನಿಮಿಷಗಳ ವರೆಗೆ ತಿಕ್ಕಿಸಿಕೊಳ್ಳಬೇಕು. ಬಾದಾಮಿಯ ಎಣ್ಣೆಯು ಸಿಗದಂತಿದ್ದರೆ ಖೊಬ್ಬರಿಯ ಎಣ್ಣೆಯನ್ನು ಉಪಯೋಗಿಸಿಕೊಂಡರೂ ಲಾಭವಾಗುವದು. ತಲೆಕೂದಲುಗಳನ್ನು ಉತ್ತಮವಾಗಿ ಜೋಪಾನಮಾಡಿಕೊಳ್ಳುತ್ತಲಿದ್ದರೆ ಸ್ಮರಣಶಕ್ತಿ ಹೆಚ್ಚಾಗುವದು ನಿದ್ದೆಯು ಉತ್ತಮ ಹತ್ತುವದು. ಸ್ವಪ್ನ ಮುಂತಾಗಿ ಅರನಿದ್ದೆಯ ಲಕ್ಷಣಗಳು ತೋರಲಿಕ್ಕಿಲ್ಲ. ಕೂದಲುಗಳಾದರೂ ಬಹು ಸುಂದರವಾಗಿ ಕಾಣಹತ್ತುವವು. ತಲೆನೋವಂತೂ ಎತ್ತೋ ಓಡಿಹೋಗುವದು.

ಕಂಣು ತೇಜಃಪುಂಜವಾಗಿಯೂ ಸುಂದರವಾಗಿಯೂ ಇರುವದೆಂದರೆ ಆರೋಗ್ಯದ ಲಕ್ಷಣವೇ. ಹಾಗಿರಬೇಕಾದರೆ ನಿದ್ದೆಯ ಅವಶ್ಯಕತೆಯು ವಿಶೇಷವಾಗಿರುವದು ಅತಿಕಡಿಮೆಯಂದರೂ ಏಳು ತಾಸು ನಿದ್ದೆಯು ಬೇಕೇ ಬೇಕು. ಪ್ರಾತಃಕಾಲದಲ್ಲಿ ಸ್ವಚ್ಛವಾದ ತಣ್ಣೀರು ಸೋಸಿ ತಕ್ಕೊಂಡು ಪ್ರತಿದಿನ ಕಂಣುಗಳನ್ನು ಉತ್ತಮರೀತಿಯಿಂದ ತೊಳೆದುಕೊಳ್ಳತಕ್ಕದ್ದು. ಸ್ವಲ್ಪ ಅರಳೆಯನ್ನು ತಕ್ಕೊಂಡು ಅಕಳ ಹಾಲಿನಲ್ಲಿ ತೋಯಿಸಿ ಅದನ್ನು ರಾತ್ರಿ ಮಲಗುವಾಗ ಕಣ್ಣಿನ ಮೇಲೆ ಇಟ್ಟುಕೊಳ್ಳಬೇಕು. (ಅಕಳ ಹಾಲು ಕಾಸಿ ಸೋಸಿ ತಕೊಳ್ಳಬೇಕು. ಹಾಲಿನಲ್ಲಿ ತೋಯಿಸಿದ ಅರಳೆಯನ್ನು ಕಣ್ಣಿನ ಮೇಲೆ ಒಂದು ತಾಸಿನವರೆಗೆ ಇಟ್ಟುಕೊಳ್ಳಬೇಕು) 'ಗುಲಾಬಪಾಣಿ'ಯಾದರೂ ಇಷ್ಟೋ ಹಿತಾವಹವಾಗಿರುತ್ತದೆ. ಸದ್ಯಕ್ಕೆ ಪ್ರಚಲಿತವಾಗಿರುವ ಸುರಮೆಯನ್ನು ಎಂದೂ ಕಣ್ಣಿಗೆ ಹಚ್ಚಿಕೊಳಬಾರದು. ಈ ತರದ ಅಂಜನಗಳು ಕಣ್ಣಿಗೆ ಬಹಳೇ ವಿಘಾತವಾಗಿರುತ್ತವೆ. ಇದರಿಂದ ನಮಗೆ ಉಪಯೋಗವೇನೂ ಆಗದೆ, ತಿರುಗಿ ಎಷ್ಟೋ ಅಪಾಯವಾಗುವದು. ಸತೇಜವಾದ ಕಣ್ಣುಗಳು ಇರುವಂತೆ ಯತ್ನ ಮಾಡಬೇಕು. ಅಜೀರ್ಣ, ಹೊಟ್ಟಮುರಿಯೋಣಿ ಮುಂತಾದ ವಿಕಾರಗಳು ಕಣ್ಣು ಕೆಡುವ ಲಕ್ಷಣಗಳು. ಅತಿಕಾರ, ಹುಳಿ ಮುಂತಾದ ನಾಲಿಗೆಗೆ ಸಹ ಸಹನವಾಗದಂಥ ಪದಾರ್ಥಗಳನ್ನು ತಿನ್ನುವದರಿಂದ ಕಂಣುಗಳು ಬೇಗನೇ ಕೆಡುವವು. ಇಂಥ ಪದಾರ್ಥಗಳ ಸೇವನೆ ಮಾಡುವವರ ಮತ್ತು ಬೇಡದವರ ಕಂಣುಗಳು ಯಾವಾಗಲೂ ಕೆಂಪಗಿರುವವು. ಇಂಥವರು 'ಗುಲಾಬಪಾಣಿ'

ುಲ್ಲಿ ರಕ್ತಚಂದನವನ್ನು ತೆಯ್ದು ಅದನ್ನು ಕಣ್ಣುಗಳ ಹೊರಮಗ್ಗಲು ಹಚ್ಚಬೇಕು. ಇದರಿಂದ ಕಣ್ಣುಗಳ ಕೆಂಬಣ್ಣವು ಕಡಿಮೆಯಾಗಿ ಉತ್ತಮಕಾಣುಹತ್ತುವವು. ಕಣ್ಣುಗಳ ಉರಿಯೆಲ್ಲ ಹೋಗಿ ಶಾಂತವಾಗುವವು. ಎರಡನೆಯದಿನ್ನೊಂದು ಪ್ರಯೋಗವು ಇದಕ್ಕಿಂತ ಉತ್ತಮತರದ್ದಾಗಿರುವದು. ಜಾಲಿಯ ಎಳಿಎಲೆಗಳನ್ನು ತೆಗೆದುಕೊಂಡು ಸಂಣ್ಣಾಗಿ ಕುಟ್ಟಿ ಅದರವೆರಡು ಹಲಿಪೆಗಳನ್ನು ಮಾಡಬೇಕು. ತಣ್ಣೀರಿಂದ ತುಂಬಿದ ಒಂದು ಕೊಡವನ್ನು ತೆಗೆದುಕೊಂಡು ಅದರ ಮೇಲ್ಮೈಯನ್ನು ಅತ್ಯುಷ್ಣತೀತಿಯಿಂದ ಒರಿಸಿ ತೆಗೆಯಬೇಕು. ಅದರ ಮೇಲೆ ಜಾಲಿಯ ಎಲೆಯ ಹಲಿಪೆಳನ್ನು (ಒಡೆಗಳನ್ನು) ಇಡಬೇಕು. ಅದರ ಮೇಲೆ ಸ್ವಚ್ಛತಿಳುವಾದ ಬಿಳೇ ಅರಿವೆಯನ್ನು ಮುಚ್ಚಿಡಬೇಕು. ಕೆಲಹೊತ್ತಿನ ಮೇಲೆ ಒಂದು ಒಡೆಯನ್ನು ತೆಗೆದುಕೊಂಡು ಅದನ್ನು ಕಣ್ಣಿನ ಮೇಲಿಟ್ಟುಕೊಳ್ಳಬೇಕು. ಅದು ಬಿಚ್ಚಿಗಾದ ಕೂಡಲೇ ಅದನು ಪುನಃ ಪಾತ್ರೆಯ ಮೇಲಿಟ್ಟು ಮತ್ತೊಂದು ಒಡೆಯನ್ನು ಕಣ್ಣಿನ ಮೇಲಿಟ್ಟುಕೊಳ್ಳಬೇಕು. ಇದರಂತೆ ಕೆಲವು ದಿವಸ ಮಾಡಿದ್ದಾದರೆ ಕಂಣು ಸತೇಜವಾಗಬಹುದು. ಪ್ರಾತಃಕಾಲದಲ್ಲಿ ಎದ್ದಕೂಡಲೇ ಮೊದಲು ಉತ್ತಮ ತಣ್ಣೀರು ತೆಗದುಕೊಂಡು ಕಣ್ಣು ಚನ್ನಾಗಿ ತೊಳೆದುಕೊಳ್ಳಬೇಕು. ಸ್ವಲ್ಪ ವೇಳೆಯವರೆಗೆ ಕಣ್ಣಿನಲ್ಲಿ ನೀರನ್ನು ಂಪಡಿಸಿಕೊಂಡರೆ ಹೊಲಸು ಇಲ್ಲದಂತಾಗುವದು.

ಆಕಳ ತುಪ್ಪವನ್ನು ನಿದಾನ ಎಂಟು ದಿವಸಕ್ಕೊಮ್ಮೆಯಾದರೂ ಮೂಗಿನಲ್ಲಿ ಹಚ್ಚಿಕೊಳ್ಳಬೇಕು. ಬಾದಾವಿಯ ತೈಲವಾದರೂ ಉತ್ತಮವಾದದ್ದು. ತೈಲವನ್ನಾಗಲಿ ತುಪ್ಪವನಾಗಲಿ ಸೋಸಿ ತೆಗೆದುಕೊಳ್ಳುವದಕ್ಕೆ ಎಂದೂ ಮರೆಯಕೂಡದು. ಹೀಗೆ ಮಾಡುವದರಿಂದ ಮೇಧಾಶಕ್ತಿಯು ಬೆಳೆಯುವದು. ಮೂಗಿನೊಳಗಿನ ಕೂದಲುಗಳನ್ನು ಎಂದೂ ಕಿತ್ತಿಸಬಾರದು ಇಲ್ಲವೆ ಬೋಳಿಸಬಾರದು. ಯಾಕಂದರೆ ಇದರಿಂದ ಕಣ್ಣಿಗೆ ಬಹಳೇ ತ್ರಾಸವಾಗುವದು. ನಾವು ಶ್ವಾಸವನ್ನು ತೆಗೆದುಕೊಳ್ಳುವಾಗ ಹೊರಗಿನಿಂದ ಬರುವ ಹೊಲಸನ್ನು ಪ್ರತಿಬಂಧ ಮಾಡುವದಕ್ಕಾಗಿ ಈ ಕೂದಲುಗಳ ಉಪಯೋಗವಿರುತ್ತದೆ. ಇಲ್ಲದಿದ್ದರೆ ಹೊಲಸು ಒಳಸೇರಿ ಫುಪ್ಫುಸವು ತೀವ್ರವೇ ಕೆಡುವ ಸಂಭವವಿದೆ. ಮೂಗಿನೊಳಗಿನ ಕೂದಲುಗಳು ಫುಪ್ಫುಸಗಳ ಸಂರಕ್ಷಕಗಳಾಗಿರುತ್ತವೆ. ಈ ಕೂದಲುಗಳು ಒಂದುನೇಳಿ ಹೊರಗೆ ಬಂದಿದ್ದರೆ, ಹೊರಗೆ ಬಂದವುಗಳನ್ನಷ್ಟೇ ಕತ್ತರಿಯಿಂದ ಕತ್ತರಿಸಿ ತೆಗೆಯಬೇಕು. ಮುಂಜಾವಿನಲ್ಲಿ ಮೋರೆ ತೊಳೆದುಕೊಳ್ಳುವಾಗ ಮೂಗಿನ

ನಾಶಿಕ

ತೊಳೆದುಕೊಳ್ಳಬೇಕು. ನಶ್ಯದ ಚಟವು ಬಹು ಕೆಟ್ಟದ್ದು. ಶರೆ ಕುಡಿಯುವದರಿಂದ ಮೂಗಿನೊಳಗಿನ ನರಗಳು ಒಂದಕ್ಕೊಂದು ಕೂಡಿ ಗಂಟು ಕಟ್ಟುತ್ತವೆ. ಅತಿ ಸುಡುವ ಪೇಯಪದಾರ್ಥಗಳ ಸೇವನೆಯಿಂದ ಪಿನಸಿಯಂಥ ರೋಗಗಳು ಉತ್ಪನ್ನವಾಗುತ್ತವೆ. ಮೂಗಿನಲ್ಲಿ ಒಂದು ತರದ ಕೆಂಪು ರಸವು ಹೊರಬೀಳುವದು. ಈ ತರದ ವ್ಯಸನದಿಂದಲೇ.

ಕರ್ಣ (ಕಿವಿ)

ಕಟ್ಟಗೆಯ ಇಲ್ಲವೆ ಕಾಗದದ ಅಥವಾ ಅರಿವೆಯ ಸುರುಳಿಯನ್ನು ಕಿವಿಯಲ್ಲಿ ಹಾಕಿಕೊಂಡು ಎಂದೂ ಹೊಲಸು ತೆಗೆದುಕೊಳ್ಳತಕ್ಕದ್ದಲ್ಲ. ಕರ್ಣಪಟಲವು ಅತಿಸೂಕ್ಷ್ಮವಾಗಿರುವದರಿಂದ ಒಂದು ವೇಳೆ ಕಟ್ಟಗೆಯು ಅದಕ್ಕೆ ಬಡೆಯಿತೆಂದರೆ ಬಹಳ ನೋಯಹತ್ತುವದು. ಒಂದೊಂದು ವೇಳೆ ಅದು ಬಾತು ಕೆಡುವ ಸಂಭವವೂ ವಿಶೇಷವಾಗಿರುವದು. ಹೀಗಾಗಿ ನಾವು ಸದೋದಿತ ಕರ್ಣರೋಗದಿಂದ ಕೊಳೆಯಬೇಕಾಗುವದು. ಎಂಟು ದಿವಸಕ್ಕೊಮ್ಮೆ ಯಾದರೂ ಎಳ್ಳೆಣ್ಣೆಯನ್ನು ಸೋಸಿ ತಕ್ಕೊಂಡು, ಅದನ್ನು ಸಾಧಾರಣ ಬಿಸಿಯಾಗಿ ಮಾಡಿ ಕಿವಿಯಲ್ಲಿ ಹಾಕಿಕೊಳ್ಳಬೇಕು. ಒಂದು ಕಿವಿಯಲ್ಲಿ ಹೀಗೆ ಎಂಟೆಯನ್ನು ಹಾಕಿಕೊಂಡು ೧೫ ನಿನಿಟನವರೆಗೆ ಹಾಗೇ ಮಲಗಿಕೊಳ್ಳಬೇಕು. ಸ್ವಲ್ಪ ಅರಳೆಯನ್ನು ಕಿವಿಯಲ್ಲಿಟ್ಟುಕೊಂಡು ಎರಡನೇ ಕಿವಿಯಲ್ಲಿ ಎಣ್ಣೆಯನ್ನು ಹಾಕಿಕೊಳ್ಳಬೇಕು. ಅರಳೆಯನ್ನು ಇಟ್ಟುಕೊಳ್ಳುವದರಿಂದ ಹೊರಗಿನ ಹೊಲಸು ಒಳಗೆ ಸೇರುವ ಸಂಭವವಿಲ್ಲ. 'ಕಿವಿಯಲ್ಲಿಯ ಹೊಲಸು ತೆಗೆಯಿಸಿರಿ' ಎಂದು ಒದರುತ್ತ ತಿರುಗುವ ಜನರ ಕೈಯಿಂದ ಎಂದೂ ಹೊಲಸು ತೆಗೆಯಿಸಿಕೊಳ್ಳಬಾರದು. ಅದು ಬಹಳೇ ಅಪಾಯಕಾರಕವಿದೆ. ಮೇಲಿಂದ ಮೇಲೆ ಎಣ್ಣೆಯನ್ನು ಹಾಕಿಕೊಳ್ಳುತ್ತಲಿದ್ದರೆ ಕಿವಿಯೊಳಗಿನ ಹೊಲಸು ಕೂಡಲೇ ಇಲ್ಲದಂತಾಗುವದು. ಅರ್ಥಾತ್ ಇದು ಸುಲಭ ಹಾಗು ಸುಖದಾಯಕ ಉಪಾಯವಾಗಿರುವದು.

ಮುಖ ತೇಜ.

ಮುಖಕ್ಕೆ ಬಾದಾವಿಯ ಹಾಲನ್ನು ಹಚ್ಚಿ ತಿಕ್ಕಿಕೊಳ್ಳಬೇಕು. ಅದರಿಂದ ತ್ವಚೆಯು ಮೃದುವಾಗಿಯೂ ಸತೇಜವಾಗಿಯೂ ಆಗುವದು. ಮೋರೆಯ ಮೇಲೆಯೂ, ಕಪಾಳದ ಮೇಲೆಯೂ ಎಷ್ಟೋ ಸಾರೆ ಮಡೆ ಬಕ್ಕೆಗಳು ಏಳುತ್ತವೆ. ಅವನ್ನು ಉಗುರಿನಿಂದ ಎಂದೂ ಕಿತ್ತಿ ತೆಗೆಯಬಾರದು. ಎಷ್ಟೋ ಜನರು ಅವನ್ನು ಹಿಚಕಿ ಒಳಗಿನ ಮೆಳಿಕೆಗಳನ್ನು ತೆಗೆಯುತ್ತಾರೆ. ಅದರಿಂದಲೂ

ಕಾಲಗಳಲ್ಲಿ ಚಾರೋಳಿಯನ್ನು (ಚಾರೊಂಜಾ) ಅರೆದು ಅದನ್ನು ಹಚ್ಚಿಕೊಳ್ಳಬೇಕು. ಈ ಲೇಪನದಿಂದ ಮಡಿಬಕ್ಕೆಗಳು ಸತ್ತು ಹೋಗುವವು. ಅತಿ ಬಕ್ಕೆಗಳಿಂದ ಕಲೆಬಿದ್ದ ವಗು ಲಿಂಬಿಯ ರಸದಲ್ಲಿ ಚಾರೋಳೆಯ ಬೀಜವನ್ನು ತೆಯ್ದು ಅವಕ್ಕೆ ಹಚ್ಚಿಕೊಳ್ಳಬೇಕು. ಇದರಿಂದ ಮುಖದ ಮೇಲಿನ ತೇಜವು ಬೆಳೆದು, ಸತೇಜವಾಗಿ ಕಾಣಹತ್ತುವದು; ಯಾವಾಗಲೂ ಚಾರೋಳೆಯ ಉಪಯೋಗ ಮಾಡಿಕೊಂಡರೆ ಬಹಳ ಲಾಭದಾಯಕವಿದೆ.

ಅಮೇರಿಕೆಯ ಶಿಕ್ಷಣದ ಅನುಕೂಲತೆ.

ಈ ಲೇಖವು "अमेरिकेतील गरीब विद्यार्थी" ಎಂಬ ಪುಸ್ತಕದೊಳಗಿನ "अमेरिकेतील शिक्षणाच्या सोयी" ಎಂಬ ಭಾಗದ ಭಾವಾಂತರವಾಗಿದೆ.

ಸದ್ಯದ ಪ್ರಗತಿಪರ ಕಾಲದಲ್ಲಿ ಹಿಂದುಸ್ತಾನದಲ್ಲಿ ಎಲ್ಲಿ ನೋಡಿದರೂ ಶಿಕ್ಷಣದ ವಿಷಯವಾಗಿ ಕುದಿಯು ಆರಂಭವಾಗಿದೆ. 'ಶಿಕ್ಷಣದ ಪ್ರಸಾರವು ಜೋರಿನಿಂದ ಆದ ಹೊರತು, ನಮ್ಮ ದೇಶವು ಮುಂದುವರಿಯುವ ಸಂಭವ ಕಡಿಮೆ!' ಎಂದು ಸಮಾಜ ಹಿತೇಚ್ಛುಗಳು ದುಃಖದ ಉದ್ಗಾರವನ್ನು ತೆಗೆಯಹತ್ತಿರುವರು. ಇಂಥ ವೇಳೆಯಲ್ಲಿ ಪರದೇಶಗಳ ಶಿಕ್ಷಣದ ಸ್ಥಿತಿಯು, ಅದರಲ್ಲಿಯೂ ಅಮೇರಿಕೆಯಲ್ಲಿ ಬಡವಿದ್ಯಾಗಳ ಸ್ಥಿತಿಯು ಹೇಗಿರುವದೆಂಬದನ್ನು ತಿಳಿಯುವದು ಅವಶ್ಯವು. ಯಾಕಂದರೆ ನಮ್ಮ ದೇಶದಲ್ಲಿ ಬಡವಿದ್ಯಾರ್ಥಿಗಳ ಸಂಖ್ಯೆಯು ವಿಪುಲವಾಗಿದೆ.

ನಮ್ಮಲ್ಲಿಯ ಬಡವಿದ್ಯಾರ್ಥಿಗಳು ಪ್ರಾಚೀನ ಪದ್ಧತಿಯಂತೆ ಭಿಕ್ಷೆಯನ್ನು ಬೇಡಿ ಅಧ್ಯಯನ ಮಾಡುವರು; ಕಾಶಿಯಲ್ಲಿ ಕೆಲವರು ವಿದ್ಯಾರ್ಥಿಗಳು ಅನ್ನಹೊಟ್ಟಿ ಉಂಡು ವಿದ್ಯಾರ್ಜನೆ ಮಾಡುವರು; ಆದರೆ ಅಮೇರಿಕೆಯ ಬಡವಿದ್ಯಾರ್ಥಿಗಳ ಸ್ಥಿತಿಯು ಬೇರೆಯಾಗಿದೆ.

ಅಮೇರಿಕೆಯಲ್ಲಿ ಪ್ರತಿಯೊಂದು ಸಂಸ್ಥಾನದೊಳಗೆ ಒಂದು ಸರಕಾರೀ ವಿಶ್ವವಿದ್ಯಾಲಯವೂ, ಒಂದು ಕೃಷಿವಿದ್ಯಾಲಯವೂ ಇದ್ದೇಇರುವವು; ಹಲಕೆಲವು ಸಂಸ್ಥಾನಗಳಲ್ಲಿ ಒಂದಕ್ಕಿಂತಲೂ ಅಧಿಕ ವಿದ್ಯಾಲಯಗಳುಂಟು. ಅವುಗಳಲ್ಲಿ ಸಾಹಿತ್ಯಶಾಸ್ತ್ರ, ಭೌತಿಕಶಾಸ್ತ್ರ, ಶಿಲ್ಪಶಾಸ್ತ್ರ ಇವೇ ಮೊದಲಾದವುಗಳು ಕಲಿಸಲ್ಪಡುವವು. 'ಫೀ' ಆದರೂ ಸ್ವಲ್ಪವೇ ತೆಗೆದುಕೊಳ್ಳಲ್ಪಡುವುದು. ಇಂಥ ವಿಶ್ವವಿದ್ಯಾಲಯಗಳ ಪದಾರ್ಥಸಂಗ್ರಹಾ

ಲಯಗಳಲ್ಲಿ ಒಂದು ಲಕ್ಷ ರೂಪಾಯಿಗಳ ಶಿಕ್ಷಣೋಪಕರಣಗಳಿರುವವು. ಅಲ್ಲದೆ ಆಗ್ಗ ತಿಂಗಳುಗಳಿಗೊಮ್ಮೆ ಮುಖ್ಯ ಪರಿಕ್ಷೆಯು ತೆಗೆದುಕೊಳ್ಳಲ್ಪಡುವುದು.

ವಿಶ್ವವಿದ್ಯಾಲಯದ ಪ್ರಾರಂಭವು ಸಪ್ಟಂಬರ ತಿಂಗಳಲ್ಲಿ ಆಗಿ, ಜನವರಿ ಅಂತ್ಯದೊಳಗಾಗಿ ಮುಗಿಯುವದು. ವಿದ್ಯಾರ್ಥಿಗಳು ತಾವು ಕಲಿಯಬಹುದಾದ ವಿಷಯಗಳನ್ನು ತಮ್ಮ ಮನಸಿಗೆ ಬಂದಷ್ಟು ದಿವಸಗಳವರೆಗೆ ಅಧ್ಯಯನ ಮಾಡಬಹುದು ಅರ್ಧವರುಷದ ಮೇಲೆ ಬಿಡಬೇಕೆಂಬ ಇಚ್ಛೆಯಿದ್ದುದಾದರೆ, ಅದಕ್ಕೆ ಯಾವತರದ ನಿರ್ಬಂಧವೂ ಇರಲಾರದು. ಈ ಕಾರಣದಿಂದ ವಿದ್ಯಾರ್ಥಿಗಳು ತಮ್ಮ ಬಾಹುಬಲದಿಂದ ಗಳಿಸಿದ ದುಡ್ಡಿನಿಂದಲೇ ವಿದ್ಯಾರ್ಜನೆಯನ್ನು ಮಾಡುವರು. ಯಾವನೊಬ್ಬನ ಬಳಿಯಲ್ಲಿದ್ದ ದ್ರವ್ಯವು ತೀರಿತೆಂದರೆ, ಅವನು ವಿಶ್ವವಿದ್ಯಾಲಯವನ್ನು ಬಿಡಬೇಕಾಗುವದು ಬಹಳವಾಡಿ ಪ್ರವೇಶ ಪರೀಕ್ಷೆಯ ವರೆಗೆ ಶಿಕ್ಷಣವು ಫುಕ್ಕಟಿಯಾಗಿ ದೊರೆಯುವದು ಆದರೆ, ವಿಶ್ವವಿದ್ಯಾಲಯವನ್ನು ಸೇರಿದಮೇಲೆ 'ಫೀ' ಕೊಡಬೇಕಾಗುವದು. ಎಲ್ಲ ಕಡೆಯಲ್ಲಿಯೂ ಒಂದೇ ತರದ ಫೀ ಇಲ್ಲ. ಕೆಲವೆಡೆಯಲ್ಲಿ ಹೆಚ್ಚು, ಕೆಲವೆಡೆಯಲ್ಲಿ ಕಡಿಮೆ ಉಂಟು. ಆದರೂ ವಿದ್ಯಾರ್ಥಿಗಳಿಗೆ ಜಡವೆನಿಸದು. ಈ ತೆರನಾದ ಅನುಕೂಲತೆಯಿರುವ ದೇಶವು 'ಯುನಾಯಿಟೆಡ್‌ಸ್ಟೇಟ್ಸ, ಅಥವಾ ಅಮೇರಿಕೆಯ ಸಂಯುಕ್ತ ಸಂಸ್ಥಾನವೆಂಬದು, ಇದರಲ್ಲಿ ಬಹಳ ಸಂಸ್ಥಾನಗಳುಂಟು. ಪ್ರತಿಯೊಂದು ಸಂಸ್ಥಾನವು ವಿಶ್ವವಿದ್ಯಾಲಯಕ್ಕೋಸುಗ ಅನೇಕ ಅನುಕೂಲತೆಗಳನ್ನು ಮಾಡಿಕೊಡುವುದು. ಬಾಲಕನೇ ಆಗಲಿ, ಬಾಲಕಿಯೇ ಆಗಲಿ ವಿದ್ಯಾವಿಹೀನರಾಗಿರಬಾರದೆಂದು ಅವರ ಮುಖ್ಯ ಧ್ಯೇಯವಿದೆ.

ಇದು ಸಂಸ್ಥಾನದ ಪದ್ಧತಿಯು. ಅಮೇರಿಕೆಯೊಳಗಿನ ಧನವಾನ್ ಜನರು ತಮ್ಮ ಹಣದಿಂದ ಹಲವು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿರುವರು. ಅವುಗಳಲ್ಲಿ ಹಾರವರ್ಡ, ಕೋಲಂಬಿಯಾ, ಶಿಕಾಗೋ, ಯೇಲ ಇವೇ ಮೊದಲಾದ ಸಂಸ್ಥೆಗಳು ಪ್ರಸಿದ್ಧವುಂಟು ಇವುಗಳಲ್ಲಿ 'ಫೀ' ವಿಶೇಷವಾಗಿದ್ದರೂ, ಬಡಹುಡುಗರಿಗೋಸುಗ ಮಾಫಮಾಡಲ್ಪಡುವದು. ಹಲಕೆಲವು ದೊಡ್ಡ ಶಹರಗಳಲ್ಲಿ ರಾತ್ರಿಯಶಾಲೆಗಳುಂಟು. ಅಲ್ಲಿ ಕೂಲಿಯ ಜನರು ವಿದ್ಯಾಧ್ಯಯನ ಮಾಡುವರು. ಬೇರೆ ಕೆಲವೆಡೆಯಲ್ಲಿ 'ಟೆಕ್ನಿಕಲ್ ಕಾಲೇಜು' (ಔದ್ಯೋಗಿಕಸಂಸ್ಥೆ)ಗಳುಂಟು. ಆ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಸ್ವಲ್ಪವಿರ್ಚಿನಿಂದ ಕಲಾಕೌಶಲ್ಯದಲ್ಲಿ ನೈಪುಣ್ಯವಡೆಯವರು. ದ್ವಿತೀಯಕುಬೇರನಂತಿರುವ ಆಂಡ್ರೂ ಕಾರ್ನೇಜಿಯು ಸುಪ್ರಸಿದ್ಧವಿದ್ಯಾಲಯದಲ್ಲಿ ಸ್ವಲ್ಪ 'ಫೀ' ಕೊಟ್ಟು, ವಿದ್ಯಾಲಾಭವನ್ನು ಹೊಂದುವರು. ನಮ್ಮಲ್ಲಿ ವಯಸ್ಸು ಬಹಳವಾದೊಡನೆಯೇ

ಅಧ್ಯಯನವನ್ನು ಬಂದು ಮಾಡುವರು ಅದಕ್ಕೆ, ಅಮೇರಿಕೆಯಲ್ಲಿ ವಯೋವೃದ್ಧನಾದರೂ ಅಭ್ಯಾಸಮಾಡುವನು. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಒಬ್ಬ ಐವತ್ತು ವರುಷದ ವಿದ್ಯಾರ್ಥಿಯು ಎಮ್ ಏ. ಪರೀಕ್ಷೆಯ ಅಭ್ಯಾಸಮಾಡುತ್ತಿರುವಾಗ, ಅವನ ಹೆಂಡತಿಯೂ ಸಹಾಧ್ಯಾಯಿಯಾಗಿ ಅಲ್ಲಿಯೇ ಇದ್ದಳು. ಹೀಗೆ ಅಭ್ಯಾಸಮಾಡುವವರು ಯಾವದೊಂದು ವಿಷಯದಲ್ಲಿ ಅರಕಳಿ ಇದ್ದರೆ. ಅವರಿಗೆ ಪುನಃಪುನಃ ಅದೇ ವಿಷಯವನ್ನು ಕಲಿಯಹಚ್ಚುವರು. ಅಮೇರಿಕನ್ನರಿಗೆ ಶಿಕ್ಷಣದ ಮಹತ್ವವು ಚನ್ನಾಗಿ ತಿಳಿದ ಹೊರತು ಹೀಗೆ ಮಾಡುವದು ಅಸಂಭವ.

ವಿದ್ಯಾರ್ಜನೆಯಲ್ಲಿಯೇ ಅಲ್ಲದೆ, ಪರೀಕ್ಷೆಯಲ್ಲಿಯೂ ಅನುಕೂಲತೆಯನ್ನು ಮಾಡಿಕೊಡುವರು. ಎಲ್ಲಿ ಮೂರು ತಿಂಗಳ ಟರ್ಮು ಇದೆಯೋ ಅಲ್ಲಿ ಮೂರು ತಿಂಗಳಿಗೊಮ್ಮೆ ಪರೀಕ್ಷೆಯು ತೆಗೆದುಕೊಳ್ಳಲ್ಪಡುವುದು. ಆ ಪರೀಕ್ಷೆಯಲ್ಲಿ ನಂಬರ ಕೊಡಲ್ಪಡುವವು. ಯಾವನೊಬ್ಬನ ಕೈಯಲ್ಲಿ ಮುಂದಿನ ಟರ್ಮಿನವರೆಗೆ ಆಗುವಷ್ಟು ದ್ರವ್ಯವಿರದಿದ್ದರೆ, ಅಷ್ಟಕ್ಕೇ ಅಧ್ಯಯವನ್ನು ಬಂದುಮಾಡಿ, ಯಾವದೊಂದು ಉದ್ಯೋಗದಲ್ಲಿ ತೊಡಗಿ, ದುಡ್ಡು ಗಳಿಸಿಕೊಂಡು ಬರುವನು. ಅವನು ಒಂದು ವರುಷ ತಡೆದು ಬಂದರೂ ಚಿಂತೆಯಿಲ್ಲ, ಪುನಃ ವಿದ್ಯಾಲಯಗಳಲ್ಲಿ ಸೇರಿಸಿಕೊಳ್ಳುವರು. ಈ ಕಾರಣದಿಂದ ಯಾವನೊಬ್ಬನ ಕೈಯಲ್ಲಿ ಸಂಪೂರ್ಣ ಹಣವಿದ್ದ ಹೊರತು ಯಾವದೊಂದು ಪದವಿಯನ್ನು ಹೊಂದಬೇಕಾದರೆ, ಐದೇಳು ವರುಷಗಳು ಬೇಕು. ಒಬ್ಬ ಮನುಷ್ಯನು ಪರೀಕ್ಷೆಯಲ್ಲಿ ನಾಪಾಸಾದನೆಂದರೆ, ಅವನಿಗೆ ನಾಪಾಸಾದ ವಿಷಯವನ್ನೇ ಪುನಃ ಕಲಿಯಲಿಕ್ಕೆ ಹಚ್ಚಿ, ತಿಂಗಳು ಅಥವಾ, ದೀಡತಿಂಗಳುಗಳ ಮೇಲೆ ಪರೀಕ್ಷೆ ತೆಗೆದುಕೊಳ್ಳುವರು. ಬಹಳ ಅಪೂರ್ಣಾವಸ್ಥೆಯಲ್ಲಿದ್ದರೆ, ಮೊದಲಿನಿಂದ ಅಭ್ಯಾಸಮಾಡಲಿಕ್ಕೆ ಹಚ್ಚುವರು. ಹೇಳಬೇಕಾದುದೇನಂದರೆ, ಅಮೇರಿಕೆಯಲ್ಲಿ ಶಿಕ್ಷಣದ ವಿಷಯವಾಗಿ ಬಹಳ ಅನುಕೂಲತೆಗಳುಂಟು. ಇದರಿಂದ ಅಲ್ಲಿ ಅನೇಕ ವಿದ್ವನ್ಮಣಿಗಳು ಹೊರಟು ದೇಶವನ್ನು ಸುಧಾರಿಸಹತ್ತಿರುವರು. ಸದ್ಯಕ್ಕೆ ಆ ದೇಶವು ಸುಧಾರಣೆಯ ಶಿಖರವನ್ನು ಮುಟ್ಟಿದೆ. ಆ ದೇಶದವರಲ್ಲಿ 'ವಿದ್ಯಾವಿಹೀನಃ ಪಶುಃ' ಎಂದು ದೃಢತರ ನಂಬುಗೆಯಿದೆ. ಈ ನಂಬುಗೆಯೇ ಅವರಲ್ಲಿ ಪ್ರಗತಿಯನ್ನುಂಟು ಮಾಡಿದೆ. ಪತ್ರ ವಿಸ್ತಾರಕ್ಕೆ ಕ್ಷಮೆಯನ್ನು ಯಾಚಿಸಿ,

ತಮ್ಮ ವಿಧೇಯ ಶಿಷ್ಯ

ಚನ್ನಬಸವಪ್ಪ ಯಲ್ಲಪ್ಪ ಕವಲಿ.

೧-೭-೧೯೧೮. ಗಿನೆಯ ವರುಷದ ವಿದ್ಯಾರ್ಥಿ ಟೀ. ಕಾ. ಗಾಗವಾಡ

ಬರೆಯುವ ಕೋಣೆ.

॥ ಪದ ॥

॥ ರಾಗ—ಎರಕಲ ಕಾಂಬೋದಿ. ತಾಳ—ಜಂಪೆ॥

ಎನ್ನ ಕೋಣೆಯ ಸುಖವೆ ಸಾಕೆನೆಗೆ ಜಗದೀಶ ।
ಇನ್ನಾವುದನ್ನು ನಾನೊಲ್ಲೆನಯ್ಯಾ ॥ ಪಲ್ಲ ॥
ಬೆಳುಗಾಗದದ ಗಡ್ಡಿ ಚಲುವ ಲೆಕ್ಕಣಿಕೆಗಳು ।
ತಿಳಿಮಸಿಯು ತುಂಬಿದ್ದ ಹವಣಿ ದವುತಿ ॥
ಸಲೆ ಸೀಸಗಡ್ಡಿಗಳು ಹೊಸವೊತ್ತುಗರಡುಗಳು ।
ಪೊಳೆವ ಕತ್ತರಿ, ಚೂರಿ, ರೂಳುಗಳಿಹಾ ॥ ೧ ॥
ಬೆಳಕದೆಡಗಡೆಯಿಂದಲೈತರುವ ಮೆಲ್ಲೆಲರ ।
ಸುಳಿಗಳಾಟದ ಸೊಗಸು ಮೈ ಸೋಂಕುವ ॥
ಬೆಳೆದ ಶಾಂತಿಯ ಸೌಖ್ಯದೇಕಾಂತವಾಗಿರುವ ।
ಕುಳಿತುಕೊಳ್ಳಲು ತೂಲದಾಸನವಿಹಾ ॥ ೨ ॥
ಪರಕವಿಗಳೈದೆ ಸ್ಮರಣಕ್ಕೆ ಬರುವಂದದಿಂ ।
ಸುರುಚಿರ ಗ್ರಂಥಗಳು ಕಣ್ಣೆದುರಿಗೆ ॥
ಸೆರೆ ಮಂಡಿಸಿಹುದರಿಂ ಭಾರತಿಯ* ವಾಸಮಂ ।
ದಿರದಂತೆ ಕಂಗೊಳಿಪ ಸೌಂದರ್ಯದಾ ॥ ೩ ॥
ಅನುಕೂಲವಿನಿತಿರ್ದ ಕೋಣೆಯೊಳಗೇಕಾಗ್ರ ।
ಮನದಿಂದ ಗ್ರಂಥವಂ ಬರೆಯುವಾಗ ॥
ಎನಗಾಗುವಾನಂದವಪ್ರತಿಮಮಹುದಹೋ ।
ಎನಗದೇ ಸರ್ವಾರ್ಥ ಸಂಸಿದ್ಧಿಯು ॥ ೪ ॥
ಶ್ರೀಶಾಂತವಿಶ್ವಲನೆಂಬೆನ್ನೊಳಿಹ ತವಕೃಪಾ ।
ಕೋಶದೌದಾರ್ಯದಿಂ ಹೆಚ್ಚಿಗಿನ್ನ ॥
ಐಸಲೇ ಕೊಡುವಿಯಾದರೆ ನೀನೆ ಕೊಡು ಕವ್ಯ ।
ತಾಸಿಯಂ ಬರೆವ ಸುಸ್ಫೂರ್ತಿಯನ್ನ ॥ ೫ ॥

ಬಾಳಾಚಾರ್ಯ ಸಕ್ಕರಿ (ಶಾಂತಕವಿ)

* ಸರಸ್ವತಿ

ವಿದ್ಯಾಖಾತೆಯ ನೋಟೀಸುಗಳು.

ವ್ಹರ್ನಾಕ್ಯುಲರ ಫಾಯಿನಲ್ ಪರೀಕ್ಷೆಯು

ದಕ್ಷಿಣ ಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:—ಸನ್ ೧೯೧೩ನೇ ಇಸವಿಯ ೨. ೨ಳನೇ ಜೂನ ತಿಂಗಳ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧೩ನೇ ಭಾಗದ ೬೨೫ರಿಂದ ೧೬೨೪ನೇ ಪುಟಗಳಲ್ಲಿ ಪ್ರಸಿದ್ಧಮಾಡಿದ ನಿಯಮಗಳಿಗನುಸಾರವಾಗಿ ವರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯು ಸೋಮವಾರ ತಾರೀಖು ೨೩ನೇ ಸಪ್ಟಂಬರ ೧೯೧೩ನೇ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣ ಭಾಗದ ಕೆಳಗೆ ರೆದ ಸೆಂಟರುಗಳಲ್ಲಿ ನಡೆಯುವದು.

ಧಾರವಾಡ	ಕಾರವಾರ	ಅಲೀಬಾಗ
ಬೆಳಗಾವ	ರತ್ನಾಗಿರಿ	ಕೊಲ್ಲಾಪೂರ
ವಿಜಾಪೂರ		

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮೀಟಿಯ ಮುಖಾಂತರವಾಗಿ ನಡೆಯುವದು; ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ, ರತ್ನಾಗಿರಿ ಹಾಯಸ್ಕೂಲುಗಳ ಹೆಡ್‌ಮಾಸ್ತರರು ಸದರೀ ಪರೀಕ್ಷಾ ಕಮಿಟಿಗಳ ಅಧ್ಯಕ್ಷರಿರುವರು. ಅಲೀಬಾಗದಲ್ಲಿ ಕುಲಾಬಾ ಜಿಲ್ಲೆಯ ಡಿ. ಎ. ಇನಸ್ಪೆಕ್ಟರರೂ ಕೊಲ್ಲಾಪೂರದಲ್ಲಿ ಕೊಲ್ಲಾಪೂರ ಸಂಸ್ಥಾನದ ಎ. ಇನಸ್ಪೆಕ್ಟರರೂ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಕಮೀಶನರವಾ ರನು ಯಾವ ಜಿಲ್ಲೆಯಲ್ಲಿ ಇರುವನೋ ಆ ಜಿಲ್ಲೆಯ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಿಗೆ ತಾ॥ ೧೫ನೇ ಅಗಷ್ಟ ೧೯೧೩ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಫಾರೀ ನಮೂನೆಗಳ ಮೇಲೆಯೇ ಮಾಡಲಿಕ್ಕೆ ಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು

೪. ಧಾರವಾಡ ಮತ್ತು ಕಾರವಾರ ಜಿಲ್ಲೆಗಳ ಮಾನ್ಯವಾದ ದೇಶಭಾಷೆಯ ಕನ್ನಡ ಇರುವದು. ಬೆಳಗಾವ ಮತ್ತು ವಿಜಾಪೂರ ಜಿಲ್ಲೆಗಳ ಮಾನ್ಯವಾದ ದೇಶಭಾಷೆಯು ಕನ್ನಡ ಮತ್ತು ಮರಾಠಿ ಇರುವವು. ಮತ್ತು ರತ್ನಾಗಿರಿ, ಕುಲಾಬಾ, ಕೊಲ್ಲಾಪೂರ ಈ ಜಿಲ್ಲೆಗಳ ಮಾನ್ಯವಾದ ದೇಶಭಾಷೆಯು ಮರಾಠ ಇರುವದು. ಧಾರವಾಡ ಮತ್ತು ಕಾರವಾರ ಜಿಲ್ಲೆಯ ಮರಾಠೀ ಉಮೇದವಾರರು ಧಾರವಾಡದಲ್ಲಿ ಕೂಡ್ರಬೇಕೋ, ಕಾರವಾರದಲ್ಲಿ ಕೂಡ್ರಬೇಕೋ, ಬೆಳಗಾವಿಯಲ್ಲಿ ಕೂಡ್ರಬೇಕೋ ಎಂಬದನ್ನು ತರುವಾಯದಲ್ಲಿ ಮೆ. ಎಜ್ಯು. ಇನ. ಸಾ. ರವರು ನಿರ್ಣಯಿಸುವರು. ತಾ. ೮ನೇ ಜನವರಿ ೧೯೧೫ಗಿಳ ಇಸವಿಯ ಮುಂಬಯಿ ಸರಕಾರೀ ಗ್ಯಾಝೆಟಿನ ೧ನೇ ಭಾಗದ ೩೧ನೇ ಪುಟದಲ್ಲಿ ಮುದ್ರಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹೀರಾತ ನಂ. ೩೮೩೪ ತಾ॥ ೨೩ನೇ ದಿಶಂಬರ ೧೯೧೩ನೆಯ ಪ್ರಕಾರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ದ್ವಾರಾ ಪರೀಕ್ಷಿಸಲ್ಪಡಲಪೇಕ್ಷಿಸುವ ಉಮೇದವಾರರಿಗೋಸ್ಕರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ಪ್ರಶ್ನಕಾಗದಗಳು ಕೊಡಲ್ಪಡುವವು.

೫. ಕಾರವಾರ ಜಿಲ್ಲೆಯೊಳಗಿನ ಹಳಿಯಾಳ ತಾಲೂಕಿನ ಮತ್ತು ಸಿರ್ಸಿ ತಾಲೂಕಿನ ಬನವಾಸಿಯ ಉಮೇದವಾರರು ಕುಲಾಬಾ ಜಿಲ್ಲೆಯ ಕರ್ಜತ ತಾಲೂಕಿನ ಉಮೇದವಾರರು ಠಾಣಾಸೆಂಟರಿನಲ್ಲಿಯೂ, ಧಾರವಾಡ ಸೆಂಟರಿನಲ್ಲಿಯೂ, ಮತ್ತು ಸಾಂಗಲಿ ಸಂಸ್ಥಾನ ಕುಚ್ಚಿ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಿಯೂ ಆಗುವ ಪರೀಕ್ಷೆಗೆ ಕೂಡ್ರಬಹುದು.

೬. ಇದಕ್ಕೂ ಹೆಚ್ಚಿನ ಮಾಹಿತಿಯ ಬಗ್ಗೆ ಧಾರವಾಡ, ಬೆಳಗಾವ, ವಿಜಾಪೂರ ಕ್ಯಾನರಾ, ರತ್ನಾಗಿರಿ ಮತ್ತು ಕುಲಾಬಾ ಜಿಲ್ಲೆಗಳ ಕಲೆಕ್ಟರ ಸಾಹೇಬರವರಿಂದ ಮತ್ತು ಕೊಲ್ಲಾಪೂರ ದಿವಾನರಿಂದ ಪ್ರಸಿದ್ಧಿಸಲ್ಪಡುವ ಜಾಹೀರಾತುಗಳನ್ನು ನೋಡತಕ್ಕದ್ದು.

ಧಾರವಾಡ ಎಜ್ಯುಕೇಶನಲ್
ಇನಸ್ಪೆಕ್ಟರ ದಕ್ಷಿಣಭಾಗ ಇವರ ಆಫೀಸು
ತಾ॥ ೨೬ ೬–೧೯೧೫.

K. S. Hungund.
Educational Inspector, S.D.

ಪದ್ಮನಾಭಪುರ ವರ್ತಮಾನ ಪತ್ರಿಕೆ.

ವರ್ಷ ೫೪. | ಅಗಷ್ಟ, ಸಪ್ಟಂಬರ ೧೯೧೫. | ಸಂಚಿಕೆ ೮, ೯.

ಈಗಿನ ಯುದ್ಧದಲ್ಲಿ ಸೇರಿದ ಜನರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸರಕಾರದವರು ಕೊಡಬೇಕೆಂದು ಗೊತ್ತು ಮಾಡಿದ ಸವಲತುಗಳು.

ಸದ್ಯದ ಯುದ್ಧದಲ್ಲಿ ೪ನೇ ಅಗಷ್ಟ ೧೯೧೪ನೇ ಇಸವಿಯ ನಂತರ ಯಾವನೊಬ್ಬನು ಶಿಪಾಯಿಯಾಗಿ ಇಲ್ಲವೆ ಸಂಗಡಿಗನಾಗಿ ಸೇರಿ, ಯುದ್ಧಕ್ಕೆ ಹೋದ ಕಾಲಕ್ಕೆ ಅಥವಾ ಇಲ್ಲಿಯೇ ತನ್ನ ಹೆಸರನ್ನು ದಾಖಲ ಮಾಡಿರುವ ಕಾಲಕ್ಕೆ ಮರಣ ಹೊಂದಿದರೆ ಅಥವಾ ಗಾಯ ಹೊಂದಿ ಕೆಲಸಕ್ಕೆ ಅಯೋಗ್ಯನಾದರೆ ಅವನ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಕೆಳಗೆ ಬರೆದ ಸವಲತುಗಳನ್ನು ಸರಕಾರದವರು ಕೊಡುವದನ್ನು ಗೊತ್ತು ಮಾಡಿರುತ್ತಾರೆ. ಆ ಬಗ್ಗೆ ವಿವರವಾದ ನಿಯಮಗಳು ತೀವ್ರ ಪ್ರಸಿದ್ಧವಾಗಲಿಕ್ಕವೆ.

೧ ಪ್ರತಿಯೊಬ್ಬ ಹುಡುಗನಿಗೆ ಅಥವಾ ಹುಡಿಗೆಗೆ ಪುಕ್ಕಟೆಯಾಗಿ ಪ್ರಾಥಮಿಕ-ಶಿಕ್ಷಣವು ದೊರೆಯುವದು. ಇದಲ್ಲದೆ ಬೇಕಾಗುವ ಪುಸ್ತಕ ಪಾಟ ಮುಂತಾದವುಗಳ ಬಗ್ಗೆ ಸ್ವಲ್ಪ ಹಣವೂ ಆರಂಭದಲ್ಲಿ ದೊರೆಯುವದು.

೨ ಮಧ್ಯಮ-ತರದ ಶಾಲೆಯಲ್ಲಿ ಕಲಿಯುವಾಗ್ಗೆ ಫೀ ಮುಂತಾದವುಗಳ ಬಗ್ಗೆ ಶಿಷ್ಯವೃತ್ತಿಯು ದೊರೆಯುವದು.

೩ ಕಾಲೇಜುಗಳಲ್ಲಿಯೂ ಹಾಯಸ್ಕೂಲುಗಳಲ್ಲಿಯೂ ಇಂಥ ಹುಡುಗರ ಸಲುವಾಗಿ ಬೇರೆಯಾಗಿ ಶಿಷ್ಯವೃತ್ತಿಗಳನ್ನು ಇಡುವರು. ಇಂಥ ಯಾವನೊಬ್ಬ ಹುಡುಗನು ಬೋರ್ಡಿಂಗ ಶಾಲೆಯಲ್ಲಿದ್ದರೆ, ಆ ಶಿಷ್ಯವೃತ್ತಿಯಿಂದ ಅವನ ಊಟ ಮುಂತಾದ್ದರ ಖರ್ಚು ಸಾಲದಂ

ತಾಗಿದ್ದರೆ ಅವನಿಗೆ ಸಾಕಷ್ಟು ಮೇಲು ಹಣವನ್ನು ಕೊಡುವ ವ್ಯವ
ಸ್ಥೆಮಾಡುವರು

ಯುದ್ಧದಲ್ಲಿ ಸೇರಿ ಈಗ ಕೆಲಸ ಮಾಡುತ್ತಿರುವ ಜನರ ಮಕ್ಕಳ ಬಗ್ಗೆಯಾದರೂ ನೋಲೆ ಕೊಟ್ಟವುಗಳಲ್ಲಿ ಯೋಗ್ಯ ಕಂಡ ಸವಲತುಗಳನ್ನು ಕೊಡುವದು ಅವರ ಇಚ್ಛೆಯದೆ.

ಸರಕಾರದವರು ಯುದ್ಧದಲ್ಲಿ ಶಿಪಾಯಿಗಳಂತೆ ಮತ್ತು ಸಂಗಡಿಗರಂತೆ ಸೇರಿ ಕೆಲಸಮಾಡುತ್ತಿರುವ ಜನರಿಗೆ ಉತ್ತೇಜನವಾಗಬೇಕೆಂದು ಅವರ ಮಕ್ಕಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಫೀ ಇಲ್ಲದೆ ತೆಗೆದುಕೊಳ್ಳಬೇಕೆಂದು ತರಾವು ಮಾಡಿರುತ್ತಾರೆ

ಬುಧವಾರ ತಾ. ೧೬ನೇ ಜುಲೈ ಸನ್ನ ೧೯೧೭ನೇ ಇಸವಿಯ ದಿವಸ
ಧಾರವಾಡದಲ್ಲಾದ ರಿಕ್ರೂಟಿಂಗ ಸಭೆಯಲ್ಲಿ

ನೇ. ನಾ. ಗವರ್ನರ ಸಾಹೇಬರು ಮಾಡಿದ

ಭಾಷಣವು.

ಧಾರವಾಡ ಜಿಲ್ಲೆಯ ನಾಗರಿಕರೊಡನೆ ಪುನಃ ಕೂಡಿರುವ ಪ್ರಸಂಗವು ನಮಗೆ ಬಂದದ್ದಕ್ಕಾಗಿ ನಾವು ಬಹಳವಾಗಿ ಆನಂದಪಡುತ್ತೇವೆ. ಮತ್ತು ನೀವು ಅಂತಃಕರಣಪೂರ್ವಕವಾಗಿ ನಮಗೆ ಮಾಡಿದ ಸ್ವಾಗತಕ್ಕಾಗಿ ನಿಮ್ಮ ಉಭಾರ ನೆನಿಸಬೇಕಾಗಿದೆ. ಮುಖ್ಯ ಮಂತ್ರಿಗಳು ೫೦೦೦೦ ಜನ ದಂಡಾಳುಗಳನ್ನು ಕೊಡಬೇಕೆಂದು ಮಾಡಿದ ವಿಜ್ಞಾಪನೆಯನ್ನು ಮನ್ನಿಸಿ ನಾವು ಮಾಡಬೇಕಾಗಿರುವ ಪ್ರಯತ್ನದಲ್ಲಿ ನಿಮ್ಮ ಕೈಯಿಂದಾದಷ್ಟು ನಮಗೆ ಸಹಾಯ ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುವದಕ್ಕೆ ನಾವು ಬಂದಿದ್ದೇವೆ; ಮತ್ತು ಹಿಂದುಸ್ತಾನವು ಯುದ್ಧದ ವೆಚ್ಚಕ್ಕಾಗಿ ಸಾಮ್ರಾಜ್ಯಕ್ಕೆ ಕೊಡಲೊಪ್ಪಿದ ನೂರಾಐವತ್ತು ಕೋಟಿ ರೂಪಾಯಿಗಳ ಪೂರ್ತತೆಗಾಗಿ ನಾವು ತೆಗೆಯುತ್ತಿರುವ ಯುದ್ಧದ ಸಾಲಕ್ಕೆ ನೀವು ಉದಾರ ಬುದ್ಧಿಯಿಂದ ಹಣ ಕೊಡಬೇಕೆಂದು ಕೇಳುವದು ಇಲ್ಲಿ ನಾವು ಬಂದ ಉದ್ದೇಶವಾಗಿದೆ.

ಈಗ ಸುಮಾರು ನಾಲ್ಕು ವರ್ಷಗಳಿಂದ ನಾವು ಇಡೀ ಪೃಥ್ವಿಯಲ್ಲಿ ಎಂದೂ ಆಗದಿದ್ದಂಥ ಅತಿ ಪ್ರಚಂಡವಾದ ಯುದ್ಧದಲ್ಲಿ ತೊಡಗಿರುತ್ತೇವೆ. ಈ ಯುದ್ಧವು ಪ್ರಶ್ಯನ್ ರಾಜ್ಯಾಡಳಿತೆಯ ಪಶುತುಲ್ಯ ಜುಲುಮೆಯ ವಿರುದ್ಧವಾಗಿ ಪೃಥ್ವಿಯ ಸ್ವಾತಂತ್ರ್ಯವನ್ನು ಕಾಯುವದಕ್ಕೆ ನಡೆದದೆ. ಈ ಯುದ್ಧದ ಪರಿಣಾಮದಿಂದ ಅನೇಕ ದೇಶಗಳು ಹಾಳಾದವು, ಲೂಟಿ ಮಾಡಲ್ಪಟ್ಟವು, ನಾಶಹೊಂದಿದವು. ಮತ್ತು ಈ ಯುದ್ಧದ ದಿವಸಗಳಲ್ಲಿ ಬೇರೆ ಎಷ್ಟೋ ದೇಶಗಳು ಭಯಂಕರ ಕಷ್ಟಕ್ಕೂ ಆಪತ್ತಿಗೂ ಗುರಿಯಾದವು. ಬ್ರಿಟಿಶ್ ಸಾಮ್ರಾಜ್ಯದ ಒಂದು ಭಾಗವೆಂದು ಈ ದೊಡ್ಡ ದೇಶವು ತನ್ನ ಮಕ್ಕಳನ್ನು ಬೇರೆಬೇರೆ ರಣಕ್ಷೇತ್ರಗಳಲ್ಲಿ ಕಾದಾಡಿ ಪ್ರಾಣಕೊಡುವದಕ್ಕೂ ಕಳಿಸಿರುತ್ತದೆ; ಮತ್ತು ನಾವು ಯಾವ ಸತ್ಪಕ್ಷಕ್ಕಾಗಿ ಯುದ್ಧ ಮಾಡುತ್ತಿರುವೆವೋ ಅದನ್ನು ಎತ್ತಿ ಹಿಡಿಯುವ ಕೆಲಸವನ್ನು ಉತ್ಕೃಷ್ಟ ರೀತಿಯಿಂದ ಮಾಡಿರುತ್ತದೆ. ಆದರೂ ಈ ಜಿಲ್ಲೆಯಲ್ಲಿರುವ ನೀವು ನಿಮ್ಮ ಸುತ್ತುಮುತ್ತು ನಡೆದಿರುವ ಭಯಂಕರ ಸಂಗತಿಗಳನ್ನು ಬಲ್ಲವರಾದರೂ ಇಂಥ ಹೊತ್ತಿನಲ್ಲಿ ಸಂಪೂರ್ಣ ಶಾಂತತೆಯಲ್ಲಿ ನಿಶ್ಚಿಂತೆಯಿಂದ ಇರುವದು ಹ್ಯಾಗೆ ಸಾಧ್ಯವಾಗಿರುವದೆಂಬ ಮಾತು ನಿಮಗೆ ಎಂದಾದರೂ ಹೊಳೆದಿರುವದೆ? ಇತ್ತಿತ್ತಲಾಗಿ ಸಂಸಾರದ ವೆಚ್ಚವು ಬಹಳವಾಗಿ ಬೆಳೆದಿರುವದರಿಂದ ನಿಮಗೆ ಅಲ್ಪಸ್ವಲ್ಪ ತಾಪವಾಗುವದು ನಿಜ. ಆದರೂ ಈ ಯುದ್ಧದ ಭಯಂಕರ ಪರಿಣಾಮಗಳು ನಿಮ್ಮಿಂದ ಬಹಳ ದೂರವಾಗಿದ್ದು ನೀವೆಲ್ಲರೂ ಶಾಂತತಾಪೂರ್ಣ ಮತ್ತು ಅತ್ಯಂತ ಸಮೃದ್ಧಸ್ಥಿತಿಯಲ್ಲಿ ಈ ವರ್ಷಗಳನ್ನು ಹ್ಯಾಗೆ ಕಳಿಯಲಾದಿರಿ ಎಂಬ ವಿಷಯವನ್ನು ನೀವು ಎಂದಾದರೂ ವಿಚಾರಿಸಿರುವಿರೊ?

ಈ ದೇಶವು ಬ್ರಿಟಿಶ್ ಸಾಮ್ರಾಜ್ಯದ ಪಾಲುಗಾರವಾಗಿರುವದರಿಂದ ಬ್ರಿಟಿಶ್ ಹಡಗುಪಡೆಯ ಪ್ರಚಂಡ ಸಾಮರ್ಥ್ಯದಿಂದ ಪರಕೀಯ ಶತ್ರುಗಳು ಮಾಡಬೇಕೆನ್ನುವ ದಾಳಿಗಳ ಎಲ್ಲ ಪ್ರಯತ್ನಗಳು ನಿಮ್ಮಿಂದ ತಡೆಯಲ್ಪಟ್ಟಿವೆ. ಆದದರಿಂದ ನಿಮಗೆ ದೊರೆತಿರುವ ದೊಡ್ಡ ಲಾಭಗಳ ಮನವರಿಕೆಮಾಡಿಕೊಂಡು ಈ ಲಾಭಗಳಿಗಾಗಿ ನೀವು ನಿಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ಅತ್ಯಂತ ಆತುರತೆಯಿಂದ ಸ್ವದೇಶಾಭಿಮಾನ ಪ್ರೇರಿತರಾಗಿ ನಿಮ್ಮಿಂದಾದಷ್ಟು ಮಟ್ಟಿಗೆ ಸಹಾಯಮಾಡಬೇಕೆಂದು ನಾವು ಹೇಳಬಾರದೆ?

ಜನಸಹಾಯ ಧನಸಹಾಯ ಬೇಡುವದಕ್ಕೆ ನಿಮ್ಮ ಕಡೆಗೆ ಬಂದಿ
ತ್ತೇವೆ. ಸ್ವದೇಶ ಸೇವೆಯನ್ನು ಮಾಡುವದಕ್ಕೆ ಸಿದ್ಧರಾದ ಜನರು ಬೇಕಾ
ದ್ದಾರೆ; ಮತ್ತು ನಮಗೆ ಜಯಪ್ರಾಪ್ತಿಯಾಗುವಂತೆ ಮಾಡುವ ಬಂಗಾ
ದಂಥ ಗುಂಡುಗಳನ್ನು ಮಾಡುವದಕ್ಕೆ ಹಣವು ಬೇಕಾಗಿದೆ. ಪೂರ್ವರಣಾ
ಗಣದಲ್ಲಿ ಯುದ್ಧ ಮಾಡುತ್ತಿರುವ ನಮ್ಮ ಸೈನ್ಯದ ಬೆಂಬಲಕ್ಕಾಗಿ ಬಹ
ಜನರು ಅಗತ್ಯವಾಗಿ ಬೇಕಾಗಿದ್ದಾರೆ. ಇವರಿಂದಲೇ ಈ ದೇಶದ ಮೇ
ಗಳ ಮೇಲೆ ನಮ್ಮ ಶತ್ರುವು ಮಾಡಬಹುದಾದ ಅಭಿಯೋಗದ ಪ್ರಯತ್ನ
ಗಳನ್ನು ತಡೆದುಹಿಡಿದು ನಾವು ನಿಮ್ಮ ದೇಶಬಾಂಧವರ ಮನೆಮಾರುಗ
ಳನ್ನು, ಜೀವಿತವಿತ್ತಗಳನ್ನು ಸಂರಕ್ಷಿಸಿ ಶತ್ರುಗಳ ಅಭಿಯೋಗದಿಂದ ಬೇರೆ
ದೇಶಗಳು ಅನುಭೋಗಿಸಿರುವ ಭಯಂಕರ ಯಾತನೆಗಳಿಗೀಡಾಗದಂತೆ
ಅವರನ್ನು ಸಂರಕ್ಷಿಸಬೇಕಾಗಿದೆ. ನಮ್ಮ ತಲೆಯ ಮೇಲೆ ಇದೊಂದು
ದೊಡ್ಡ ಜವಾಬುದಾರಿಯು ಬಂದು ಬಿದ್ದದೆ. ಆದರೂ ಅದರೊಡನೆಯೇ
ಅದನ್ನು ತಾತ್ಕಾಲ ಹಾಗು ಉತ್ಸುಕತಾಪೂರ್ವಕ ಹೊರು ವ ಮಹತ್ಪದ
ಸಂಧಿಯೂ ನಮಗೆ ಒದಗಿರುತ್ತದೆ.

ನೀವೆಲ್ಲರೂ ನಿಮ್ಮ ದೇಶವನ್ನು ಪ್ರೀತಿಸುತ್ತೀರಿ. ಅದರ ಪ್ರಗತಿ
ಮತ್ತು ಉತ್ಕರ್ಷಗಳಿಗಾಗಿ ಮಾಡಬೇಕಾದದ್ದೆಲ್ಲವನ್ನು ಮಾಡುತ್ತೀರೆ
ಬದನ್ನು ನಾವು ಅರಿತಿರುವೆವು. ದೇಶವು ಆಪತ್ತಿನಲ್ಲಿದ್ದಾಗ್ಗೆ, ದೇಶದ
ಮೇಲೆ ಶತ್ರುಗಳ ದಾಳಿಯು ಬರುವ ಸಂಭವವು ಕೂಡ ಇರುವಾಗ್ಗೆ, ತರ
ಣ ಜನರು ತಮ್ಮ ಮಾತೃ ಭೂಮಿಯ ಸಂರಕ್ಷಣೆಗಾಗಿ ಮತ್ತು ಅದರ
ಅಖಂಡತ್ವವನ್ನು ಕಾಯುವದಕ್ಕಾಗಿ ಯುದ್ಧಮಾಡಲು ಮುಂದೆ ಬರಲಾರ
ರೆಂಬದು ಶಕ್ಯವಾಗಿದೆಯೋ? ನಾವು ಇದನ್ನು ನಂಬಲಾರೆವು. ಪ್ರಬಲ
ವಾದ ಕರ್ತವ್ಯಭಾವನೆಯೂ, ರಾಜಭಕ್ತಿ ಮತ್ತು ಸ್ವದೇಶಾಭಿಮಾನಿಗಳ
ವಿಚಾರವೂ ನಮ್ಮ ಬಾದಶಹರ ದಂಡಿನಲ್ಲಿ ಬಹು ಸಂಖ್ಯಾಕ ಜನರು
ಸೇರುವಂತೆ ಪ್ರೇರೇಪಿಸುವವೆಂದು ನಾವು ನಂಬಿರುತ್ತೇವೆ.

ಈ ಜಿಲ್ಲೆಯೊಳಗಿನ ಸೈನ್ಯಭರತಿಯ ಕೆಲಸವು ಕಳೆದ ವರ್ಷದಲ್ಲಿ
ಸಮಾಧಾನಕರವಾಗಿ ಜರಗುತ್ತ ನಡೆದಿರುವದೆಂಬದನ್ನು ಹಾಗು ಎಲ್ಲ
ಜಾತಿಯ ಮತ್ತು ಪಂಗಡದ ಜನರು ಸೈನ್ಯದಲ್ಲಿ ಸೇರುತ್ತಿರುವದನ್ನು
ಕಂಡು ನಮಗೆ ಆನಂದವಾಗಿದೆ. ನಮ್ಮ ಸ್ವಂತ ದೇಶದಲ್ಲಿಳ ಕೋಟಿ
ಜನಸಂಖ್ಯೆಯಿದ್ದು ಈಗಾಗ[illegible]೭೦ ಲಕ್ಷ ಜನರು ಈ ಯುದ್ಧಕ್ಕಾಗಿ ಸೈನ್ಯ

ಲ್ಲಿ ಸೇರಿದ್ದಾರೆಂಬದನ್ನು ನೀವು ಧ್ಯಾನದಲ್ಲಿ ತರತಕ್ಕದ್ದು. ಅಂದಬಳಿಕ
ಾವತ್ತು ಕೋಟಿ ಜನಸಂಖ್ಯೆಯುಳ್ಳ ಈ ದೊಡ್ಡಖಂಡದಿಂದ ಈಗಾ
ಲಿ ಹತ್ತುಲಕ್ಷ ಜನರು ಸೈನ್ಯಭರತಿಯಾಗಿರುವರಾದರೂ ರಣಾಂಗಣದ
ಯ ನಮ್ಮ ದಂಡುಗಳ ಬೆಂಬಲಕ್ಕಾಗಿ ಇನ್ನೂ ೫ ಲಕ್ಷ ಜನರು ಬೇಕೆಂ
ಹೇಳುವದು ಬಹಳ ಆದೀತೆ? ನಮ್ಮ ಇಲಾಖೆಯ ರಾಜಭಕ್ತಿ ಮತ್ತು
ಾಮ್ರಾಜ್ಯಪ್ರೇಮ ಇವುಗಳ ಜ್ಞಾನವು ನಮಗಿರುವಮಟ್ಟಿಗೆ ವಿಚಾರಮಾಡಿ
ರೂ ಈ ಜಿಲ್ಲೆಗಳ ತರುಣರಿಗೆ ತಮ್ಮ ಕರ್ತವ್ಯದ ಮಹತ್ವವು ತಿಳಿಯಿ
ದರೆ ನಾವು ಅವರನ್ನು ಕರೆಯುವ ದಂಡಿನ ಕೆಲಸಕ್ಕೆ ಅವರು ಉತ್ಸುಕ
ನಿಂದ ಮುಂದೆ ಬರುವರೆಂದು ನಮಗೆ ತುಂಬಾ ವಿಶ್ವಾಸವುಂಟು.

ತಾಲೂಕುಗಳಲ್ಲಿ ಕಮೀಟಿಗಳನ್ನು ಮಾಡಿಕೊಂಡು ಸೈನ್ಯಭರತಿಯ
ಲಸವನ್ನು ಒತ್ತರದಿಂದ ಸಾಗಿಸುತ್ತಿರುವ ಎಲ್ಲರಿಗೆ ನಾವು ನಮ್ಮ ಕೃತ
ತೆಗಳನ್ನು ವ್ಯಕ್ತಪಡಿಸಬೇಕೆಂದೆನ್ನುತ್ತೇವೆ. ಅವರು ನಿಜವಾಗಿಯೂ
ಾಮ್ರಾಜ್ಯದ ಸೇವೆಯನ್ನು ಮಾಡುತ್ತಾರೆ. ಮತ್ತು ಈ ಅವರ ಸೇವೆಯು
ಚ್ಚುಹೆಚ್ಚು ಯಶಸ್ವಿಯಾಗುವದೆಂದು ನಮಗೆ ನಂಬಿಗೆಯುಂಟು.
ಸಮಾಜದಲ್ಲಿ ವರ್ಚಸ್ವವುಳ್ಳ ಯಾವತ್ತೂ ಜನರಿಗೆ ವಿಶೇಷವಾಗಿ ದೇಸಾ
ಯ, ಇನಾಮದಾರ ಮುಂತಾದವರಿಗೆ ಈ ಕಮೀಟಿಗಳ ಕೆಲಸಕ್ಕೆ ಎಲ್ಲ
ತಿಯಿಂದಲೂ ಸಹಾಯ ಮಾಡಬೇಕೆಂದು ನಾವು ಆಗ್ರಹಪೂರ್ವಕವಾ
ಹೇಳುತ್ತೇವೆ. ಪೂರ್ವಕಾಲದಲ್ಲಿ ಉತ್ತಮ ಸೇವೆಮಾಡಿದ್ದರಿಂದ
ಾಮಿಗಳನ್ನು ಇನಾಮಾಗಿ ಸಂಪಾದಿಸಿದ ಇನಾಮದಾರರ ವಂಶಸ್ಥರು
ಸಂಗತಿಯನ್ನು ವಿಶೇಷತಃ ಧ್ಯಾನದಲ್ಲಿ ತಂದು ನಾವು ಅಂಗೀಕರಿಸಿದ
ಮಹತ್ವದ ಕಾರ್ಯಕ್ಕೆ ವಿಶೇಷವಾಗಿ ಸಹಾಯಮಾಡಬೇಕೆಂದು
ೇಳಬೇಕೆನ್ನುತ್ತೇವೆ. ಅವರು ಮತ್ತು ಈ ಜಿಲ್ಲೆಯೊಳಗಿನ ಯಾವತ್ತೂ
ಸನದಾರ ಜನರು ತಮ್ಮ ಕರ್ತವ್ಯವನ್ನು ಮಾಡಿ ತಮ್ಮ ಸುತ್ತುಮುತ್ತಲಿ
ಜನರಿಗೆ ಉತ್ತೇಜನಕೊಟ್ಟು ಅವರಲ್ಲಿ ಕರ್ತವ್ಯಜಾಗ್ರತೆಯನ್ನು ಹುಟ್ಟಿ
ದರೆ ಅದರ ಪರಿಣಾಮವು ಅತ್ಯುತ್ತಮವಾಗುವದೆಂದು ನಮಗೆ ದೃಢ
ವಾದ ನಂಬಿಗೆಯುಂಟು.

ಈ ಯುದ್ಧವನ್ನು ಜಯಿಸುವದರಮೇಲೆಯೇ ಹಿಂದುಸ್ಥಾನದ
ಾಗು ಜಗತ್ತಿನ ಭವಿತವ್ಯತೆಯು ಅವಲಂಬಿಸಿರುತ್ತದೆ. ಬ್ರಿಟಿಶರ ಹಾಗು

ದೆಯೂ ಮನಸ್ಸಿಗೆ ತುಸುವಾದರೂ ಸ್ವಸನವಾಗದಯೂ ಮನುಷ್ಯ
ದೆನಿಸಿಕೊಳ್ಳುವ ಯಾವ ಮನುಷ್ಯನೂ ಇಂಥ ಪರಿಸ್ಥಿತಿಯನ್ನು ಸ
ಮಾಡಲಾರನು. ಸ್ವತಃ ಯುದ್ಧಕ್ಕೆ ಸಿದ್ಧರಾಗಲಾರದ ನೀವು ನಿಮ್ಮ ಕ
ವ್ಯವನ್ನು ಮಾಡುವಕ್ಕೆ ಬೇರೆ ಮಾರ್ಗಗಳೂ ಉಂಟು, ಮತ್ತು ಈ
ದುರ್ಧರಪ್ರಸಂಗದಲ್ಲಿ ಸಾಮ್ರಾಜ್ಯಕ್ಕೆ ಬೇಕಾಗಿರುವ ಜನರನ್ನು ಎ
ಡದೆ ಪೂರೈಸಿ ಕೊಡುವದೂ ಆ ಅನೇಕ ಮಾರ್ಗಗಳಲ್ಲಿ ಒಂದಾ
ಈಗ ಯುದ್ಧದಲ್ಲಿ ತೊಡಗಿರುವ ಪ್ರತಿಯೊಂದು ರಾಷ್ಟ್ರವು ಬಲಾತ್ಕಾ
ಲಸ್ಕರೀ ನವಕರಿಯನ್ನು ಪ್ರಾರಂಭಿಸಿದ್ದು ಚಂತಿಷ್ಟು ವಯಸ್ಸಿನ
ಗಂಡಸರು ಈ ಯುದ್ಧದಲ್ಲಿ ಸೇರಬೇಕೆಂದು ನಿರ್ಬಂಧ ಮಾಡಿರುವ
ಅದರೆ ಸಾಮ್ರಾಜ್ಯಕ್ಕೆ ಕಂಟಕಭೂತನಾಗಿರುವ ಶತ್ರುವಿನಿಂದ ಹಿಂ
ಸ್ಥಾನದ ಸೀಮೆಗಳನ್ನು ಸಂರಕ್ಷಿಸುವದಕ್ಕೂ ಮತ್ತು ಹಿಂದುಸ್ತಾನದ
ಯುದ್ಧಮಾಡುವದಕ್ಕೂ ಬೇಕಾಗುವ ಹೊಸ ಸೈನ್ಯವನ್ನು ಕೂಡಿಸುವ
ತಾವು ಬಲಾತ್ಕಾರದ ಮಾರ್ಗವನ್ನು ಅವಲಂಬಿಸಬೇಕಾಗಲಾರದೆಂ
ಹಿಂದೀ ಜನರ ರಾಜಭಕ್ತಿಯ ಮೂಲಕವಾಗಿ ಸರಕಾರವು ತುಂಬಾ ನಂ
ರುತ್ತದೆ. ಈ ನಂಬಿಗೆಯು ಯಥಾರ್ಥವಾಗುವಂತೆ ಮಾಡಿರಿ.

ಧಾರವಾಡ ಜಿಲ್ಲೆಯವರೆದುರಿಗಿರುವ ಮಹತ್ಕಾರ್ಯವೆಂದರೆ ಪ್ರ
ತಿಂಗಳಿಗೆ ೨೦೦ ದಂಡಾಳುಗಳನ್ನು ಪೂರೈಸಿಕೊಡುವದು. ಹೋದತಿಂಗ
ಹೊಲಗೆಲಸದ ಹಂಗಾಮಿನದಾದರೂ ಆ ತಿಂಗಳಲ್ಲಾದ ಸೈನ್ಯಭರತಿ
ಅಂಕಿಯು ಪ್ರಗತಿಯನ್ನು ತೋರಿಸುವದಲ್ಲದೆ ನಿಮ್ಮ ಕಲೇಕ್ಟರರಾದ ವಿ
ಟರ್ನರಸಾಹೇಬರ ಯೋಗ್ಯ ಮೇಲ್ವಿಚಾರಣೆಯಿಂದ ನಡೆದಿರುವ ವ್ಯ
ಸ್ಥೆಗೆ ಭೂಷಣಾಸ್ಪದವಾಗಿದೆ. ಆದರೂ ಧಾರವಾಡ ಜಿಲ್ಲೆಯ ಪಾಲಿ
ಹೊಸದಾಗಿ ಬಂದಿರುವ ೨೦೦ ಸಂಖ್ಯೆಯನ್ನು ಪೂರ್ಣಮಾಡಲು ಹೆಚ
ಪ್ರಯತ್ನವು ಬೇಕಾಗಿದೆ. ಧಾರವಾಡ ಜಿಲ್ಲೆಯ ಜನಸಂಖ್ಯೆಯು ಹತ್ತ
ಲಕ್ಷಕ್ಕೆ ಮಿಕ್ಕಿದೆ. ಆದದರಿಂದ ನೀವು ಪೂರೈಸಿಕೊಡಬೇಕಾಗುವ ದಂಡ
ಳುಗಳ ಪ್ರಮಾಣವು ವರ್ಷಕ್ಕೆ ೫೦ ಕ್ಕೆ ೧ ರಂತೆ ಆಗುತ್ತದೆ. ಇನ್ನೂ
ಒಂದು ಪರಿಯಾಗಿ ಇದನ್ನು ಪರಿಶೀಲಿಸಿರಿ. ನಿಮ್ಮಲ್ಲಿ ಲಿಂಗಾಯತರೊಳ
೧೯೦೦೦ ಮರಾಠರಲ್ಲಿ ೨೬೦೦೦ ಮತ್ತು ಬೇಡರಲ್ಲಿ ೩೪೦೦೦ ಗಂ
ಸರಿರುತ್ತಾರೆ. ಈ ಸಂಖ್ಯೆಗಳನ್ನಷ್ಟೇ ವಿಚಾರಕ್ಕೆ ತೆಗೆದುಕೊಂಡರೂ ನಿಮ್
ಪಾಲು ವರ್ಷಕ್ಕೆ ೧೦೦ಕ್ಕೆ ಒಂದಕ್ಕಿಂತ ಕಡಿಮೆ ಬೀಳುತ್ತದೆ. ಆದರ

ಂದ ಮೇಲೆ ನಿರ್ದಿಷ್ಟವಾದ ಸಂಖ್ಯಾಪರಿಮಿತಿಯು ಬೇಗನೆ ಪೂರ್ಣವಾ
ಹತ್ತುವದೆಂದು ನನಗೆ ನಿಜವಾಗಿಯೂ ಭರವಸವಿದ್ದಂತೆ ಆ ಸಂಖ್ಯೆಯು
ೂರ್ತತೆಯಾಗಲೆಂದು ಬಯಸುವದು ಅತ್ಯಾಶೆಯಾಗಲಿಕ್ಕಿಲ್ಲ. ಆದರೆ
ೀರಿಯವರ ಪಾಲಿಗೆ ಈ ಕೆಲಸವನ್ನೊಪ್ಪಿಸಿ ಎಲ್ಲವೂ ಚನ್ನಾಗಿ ಸಾಗುವ
ಂದು ತಿಳಿಯುವದು ಸರ್ವಥಾ ಯೋಗ್ಯವಲ್ಲ. ಪ್ರತಿಯೊಬ್ಬನು ದಂಡಾ
ುಗಳನ್ನು ಪೂರೈಸಿಕೊಡಲು ಪ್ರಯತ್ನ ಮಾಡದಿದ್ದರೆ ಅಥವಾ ತಾನೇ
ಂಡಿನಲ್ಲಿ ಸೇರುವದಕ್ಕೆ ಆನಂದದಿಂದ ಮುಂದೆ ಬರದಿದ್ದರೆ ಈ ಉದ್ದೇ
ವು ನೆಟ್ಟಗೆ ಕೈಗೂಡಲಿಕ್ಕಿಲ್ಲ. ಈ ಮಹತ್ಕಾರ್ಯದಲ್ಲಿ ದೇಸಾಯಿ,
ೀಶಪಾಂಡೆ ಮೊದಲಾದ ಇನಾಮದಾರರೂ, ವತನದಾರರೂ, ಪ್ರಮುಖ
ೀನ ತಮಗೆ ಸಹಾಯ ಮಾಡಬೇಕೆಂದು ಸರಕಾರದವರು ೨,೪೦,೦೦೦
ಕರೆ ಭೂಮಿಯನ್ನು ಕೊಟ್ಟದ್ದು ೬ ಲಕ್ಷಕ್ಕಿಂತ ಹೆಚ್ಚು ಕಂದಾಯವು
ವರಿಗೆ ಬಿಟ್ಟುಕೊಡಲಾಗಿದೆ. ಇನಾಮು ಹೊಂದಿದವರು ಸರಕಾರಕ್ಕೆ
ರಾಜನಿಷ್ಠ ಪ್ರಜೆಗಳಾಗಿ ಉಳಿಯುವರೆಂಬ ಪೂರ್ಣನಂಬಿಗೆಯಿಂದಲೇ
ಇನಾಮುಗಳು ನಡಿಸಲ್ಪಟ್ಟಿರುತ್ತವೆಂಬದನ್ನು ನೀವೆಲ್ಲರೂ ಬಲ್ಲಿರಿ, ಮತ್ತು
ಈ ಮಹಾಯುದ್ಧದಲ್ಲಿ ಸಹಾಯ ಮಾಡುವದಕ್ಕೆ ಸೈನಿಕರನ್ನು ಪೂರೈಸಿ
ಕೊಡುವದಕ್ಕಿಂತ ಹೆಚ್ಚು ನಿಶ್ಚಿತವಾದ ಮತ್ತು ಹೆಚ್ಚು ನಿಜವಾದ ರಾಜ
ಭಕ್ತಿಯ ನಿದರ್ಶನವು ಬೇರೆ ಯಾವದಿರಬಹುದು? ಬ್ರಿಟಿಶ್ ಸರಕಾ
ರದ ಯೋಗದಿಂದ ತನಗೂ ತನ್ನ ಪೂರ್ವಜರಿಗೂ ದೊರೆತಿದ್ದ ದೊಡ್ಡ
ಲಾಭಗಳಿಗೆ ಪ್ರತಿಯಾಗಿ ತಾನು ತನಗೆ ಶಕ್ಯವಾದದ್ದನ್ನೆಲ್ಲ ಸರಕಾರಕ್ಕೆ
ಕೊಟ್ಟಿರುವನೋ ಮತ್ತು ತಾನು ನಿಜವಾಗಿಯೂ ಅಂತಃಕರಣ ಪೂರ್ವ
ಕವಾಗಿಯೂ ಮಾಡಬಹುದಾದದ್ದನ್ನು ಮಾಡಿರುವನೋ ಎಂಬದಾಗಿ
ನಮ್ಮೊಳಗಿನ ಪ್ರತಿಯೊಬ್ಬ ಇನಾಮದಾರನೂ ವತನದಾರನೂ ತನ್ನಷ್ಟಕ್ಕೆ
ವಿಚಾರಮಾಡಿ ನೋಡಬೇಕು. ಸರಕಾರದವರು ತಮ್ಮ ಇನಾಮುದಾರ
ವತನದಾರರಲ್ಲಿ ವಿಶ್ವಾಸವನ್ನಿಟ್ಟಿರುತ್ತಾರೆ; ಮತ್ತು ಈ ವಿಶ್ವಾಸವು ಸಂಪೂ
ರ್ಣವಾಗಿ ಯೋಗ್ಯವಾಗಿರುವದೆಂದು ತೋರಿಸಿ ಕೊಡುವ ಭಾರವು ನಿಮ್ಮ
ಮೇಲಿರುವದು.

ಧಾರವಾಡ ಜಿಲ್ಲೆಯಲ್ಲಿ ದಂಡಾಳುಗಳನ್ನು ಪೂರೈಸಿಕೊಡುವ
ಮುಖ್ಯವಾದ ಜನಾಂಗವೆಂದರೆ ಲಿಂಗಾಯತ ಜನಾಂಗವೇ ಸರಿ. ಈ

ದೊಡ್ಡ ಮತ್ತು ಸಮರ್ಥ ಜನಾಂಗವು ಕರ್ನಾಟಕದಲ್ಲಿ ಎಲ್ಲಕ್ಕೂ ದೊಡ್ಡ
ದಾಗಿದೆ. ಇದರಲ್ಲಿ ೧,೯೦,೦೦೦ ಗಂಡಸರು ಇರುತ್ತಾರೆ. ಇತ್ತಲಾಗಿನ ಕಾಲ
ದಲ್ಲಿ ಈ ಜನಾಂಗವು ರಣೋತ್ಸಾಹಪ್ರವೃತ್ತಿಯನ್ನು ತೋರಿಸಿರುವದಿಲ್ಲ
ದರೂ ಇನ್ನೂರು ವರ್ಷಗಳ ಹಿಂದೆ ಹೈದರಾಬಾದಿನ ನಿಜಾಮನೂ ವಿಜ
ಯನಗರದ ಅರಸರೂ, ವಿಜಾಪುರದವರೂ, ಸವಣೂರಿನವರೂ, ಮರಾ
ಠರೂ, ಮೈಸೂರವರೂ ತಮ್ಮ ತಮ್ಮೊಳಗೆ ಬೇರೆ ಬೇರೆ ಕಾಲಕ್ಕೆ ಯುದ್ಧ
ಮಾಡಿ ಕರ್ನಾಟಕವನ್ನು ಸುಲಿದಾಗ್ಗೆ ಇಲ್ಲಿ ಬಡದಾಡುತ್ತಿರುವ ಸೈನ್ಯ
ಳಲ್ಲಿ ಲಿಂಗಾಯತರು ಕಂಡು ಬರುತ್ತಿದ್ದರು. ೧೫೭೫ ರಲ್ಲಿ ಬಂಕಾಪುರದ
ವೇಲಪರಾಯನು ವಿಜಾಪುರದ ಅರಸರಿಂದ ಮುತ್ತಲ್ಪಟ್ಟಾಗ್ಗೆ ತಮ್ಮ ಪ್ರಾಣ
ಗಳನ್ನೂ ಲೆಕ್ಕಿಸದೆ ಮೈಗೆಲ್ಲ ಎಣ್ಣೆನವರಿಕೊಂಡು ಶತ್ರುಗಳ ಶಿಬಿರವನ್ನ
ಹೊಕ್ಕು ಅವರ ಎದೆಯೊಳಗೆ ಕಠಾರಿಗಳನ್ನು ತಿವಿದುಬಂದ ಕರ್ನಾಟಕ
ಕಾಲ್ದಳದ ರಾತ್ರಿಯ ಹಲ್ಲೆಗಳಿಂದ ವೈರಿಗಳು ವಿಶೇಷವಾಗಿ ತೊಂದರೆಗೀ
ಡಾದರೆಂಬದನ್ನು ನಾವು ಇತಿಹಾಸದಲ್ಲಿ ಓದುತ್ತೇವೆ.

ಈಗ ನೀವು ಮಿ. ಕಿತ್ತೂರ ಇವರ ಅಧ್ಯಕ್ಷತೆಯಲ್ಲಿ ನಿಮ್ಮ ಲಿಂಗಾ
ಯತ ರಿಕ್ರೂಟ ಕಮೀಟಿಯನ್ನು ಸ್ಥಾಪಿಸಿರುವಿರಿ ಮತ್ತು ನೀವೇ ಸಂಬ
ಕೊಟ್ಟು ರಿಕ್ರೂಟರರನ್ನು ನೇಮಿಸಿರುವಿರಿ. ಇತ್ತಿತ್ತಲಾಗಿ ನೀವು ತಾಲೂ
ಕ ಕಮೀಟಿಗಳನ್ನೂ ಮಾಡಿರುವಿರಿ. ಮತ್ತು ನೀವೇ ಕೂಡಿಸಿದ ಫಂಡಿನ
ದ ದಂಡಿನೊಳಗೆ ಸೇರಿದ ಜನರಿಗೆ ಸಹಾಯದ್ರವ್ಯವನ್ನೂ ಕೊಡುತ್ತೀರಿ
ಇವೆಲ್ಲ ಸಂಗತಿಗಳು ಧಾರವಾಡ ಜಿಲ್ಲೆಯ ಮುಂದಿನ ಸೈನ್ಯಭರತಿಯ
ಕೆಲಸದ ವಿಷಯದಲ್ಲಿ ಶುಭಶಕುನಗಳಾಗಿವೆ. ನೀವು ಈಗ ಏರ್ಪಡಿ
ರುವ ಒಂದು ಕಂಪನಿಯನ್ನು ನಿಮ್ಮೊಳಗಿನ ಅನೇಕ ಜನರು ಬೆಳಗಾವಿಯ
ರಿಂದೇ ದಂಡಿನ ಮುಖ್ಯಾಧಿಕಾರಿಗಳ ದಯದಿಂದ ನೋಡಿ ಬಂದಿರು
ಹುದು. ಅದಕ್ಕೆ ಸಂಪೂರ್ಣ ಬೆಂಬಲವಾಗುವಂತೆ ಹೆಚ್ಚಿನ ಸೈನಿಕರನ್ನು
ನೀವು ಕೂಡಿಹಾಕಿ ಈ ಬೆಂಬಲದ ದಂಡೇ ಎರಡನೆಯ ಕಂಪನಿ
ಪ್ರೋತ್ಸಾಹಕವಾಗಬೇಕೆಂಬದನ್ನು ಮನಸ್ಸಿನಲ್ಲಿಡಿರೆಂದು ನಾನು ಎಲ್ಲ
ಲಿಂಗಾಯತ ಗೃಹಸ್ಥರಿಗೆ ಹೇಳುತ್ತೇನೆ. ಬಳಿಕ ನೀವೆಲ್ಲರೂ ಒಂದು
ಬ್ಯಾಟೇಲಿಯನ್ ಅಂದರೆ ನಾಲ್ಕು ಕಂಪನಿಗಳನ್ನು ಸಜ್ಜುಗೊಳಿಸಲು
ಪ್ರಯತ್ನಮಾಡಿ ಈ ಮೊದಲು ಲಿಂಗಾಯತರ ಹೆಸರನ್ನು ಎಂದೂ ಕೇಳ

ದಿದ್ದ ಪ್ರದೇಶಗಳಲ್ಲಿಯೂ ಹೆಸರು ಪಡೆದು ಬರುವಂತೆ ಒಂದು ಲಿಂಗಾಯುತ ದಂಡನ್ನೇ ಸಿದ್ಧಪಡಿಸಿ ಸಾಮ್ರಾಜ್ಯದ ರಕ್ಷಣೆಯ ಕಾರ್ಯಕ್ಕೆ ನೆರವಾಗಬೇಕು.

ತಮ್ಮ ಬಾದಶಹರನ್ನೂ ದೇಶವನ್ನೂ ಸೇವಿಸುವಾಗ್ಗೆ ನಿಮ್ಮ ತರುಣರು ಸಂಪಾದಿಸಬಹುದಾದ ಗುಣಗಳ ಉಲ್ಲೇಖವನ್ನು ಮಾಡುವ ಕಾರಣವಿಲ್ಲ. ತಾಳ್ಮೆ, ಶಿಸ್ತು, ಧೈರ್ಯ, ಅಧಿಕಾರಿಗಳ ವಿಷಯವಾಗಿ ಮಾನ ಮರ್ಯಾದೆ ಮುಂತಾದ ನಿಮ್ಮ ಸಮಾಜದ ಪ್ರತಿಯೊಂದು ಬಗೆಯ ಆಯುಷ್ಕ್ರಮಣಕ್ಕೆ ಅತ್ಯಂತ ಮಹತ್ವದವಾದ ಗುಣಗಳಿಂದ ನಿಮ್ಮ ತರುಣ ಜನರು ಅಲಂಕೃತರಾಗುವರು. ಇವೇ ಗುಣಗಳು ಮಾತ್ರ ಯಾವದಾದೊಂದು ಜನಾಂಗವನ್ನು ಅಭಿವೃದ್ಧಿಗೊಳಿಸುವವು; ಮತ್ತು ಇವೇ ಗುಣಗಳಿಂದಲೇ ಜನರಲ್ಲಿ ಮಾನ ಮರ್ಯಾದೆಯುಂಟಾಗುವದು.

ಸದ್‌ಗೃಹಸ್ಥರೇ ನೀವು ಇವತ್ತಿನ ದಿವಸ ನಾಮದಾರ ಗವ್ಹರ್ನರ ಸಾಹೇಬರವರಿಂದ ಕೇಳಿಕೊಳ್ಳುವ ಶಬ್ದಗಳು ನಿಮ್ಮಲ್ಲಿ ಕರ್ತವ್ಯ ದಕ್ಷತೆಯನ್ನುಂಟುಮಾಡಿ ಕಾರ್ಯಸಾಧನಕ್ಕೆ ನಮ್ಮನ್ನು ಪ್ರೋತ್ಸಾಹಿಸುವವೆಂದು ನಾನು ನಂಬುತ್ತೇನೆ. ಮತ್ತು ನನ್ನ ಭಾಷಣವು ಪೂರ್ಣವಾಗುವ ಮೊದಲು ಇವತ್ತಿನ ದಿವಸ ನೀವೆಲ್ಲರೂ ಬಹುದೂರದಿಂದ ಇಲ್ಲಿಗೆ ಬಂದಿರುವದಕ್ಕಾಗಿ ನಿಮಗೆಲ್ಲರಿಗೂ ಆಭಾರವನ್ನು ಸಮರ್ಪಿಸುತ್ತೇನೆ.

ಹಿಂದುಸ್ತಾನವೂ ಜರ್ಮನಿಯಿಂದ ಗಂಡಾಂತರವೂ.

ತಾರೀಖು ೨೦ನೇ ಅಗಷ್ಟ ೧೯೧೪ನೇ ಇಸವಿಯ ದಿವಸ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ **ಮೆ. ಎಚ್. ಜಿ. ರಾಲಿನ್‌ಸನ್** ಸಾಹೇಬರು "ಹಿಂದುಸ್ತಾನವೂ ಜರ್ಮನಿಯಿಂದ ಗಂಡಾಂತರವೂ" ಎಂಬ ವಿಷಯದ ಮೇಲೆ ವ್ಯಾಖ್ಯಾನ ಕೊಟ್ಟರು. ಈ ವಿಷಯವು ನಮ್ಮೆಲ್ಲರಿಗೆ ಅತ್ಯುಪಯುಕ್ತವಾದದ್ದೂ ಅವಶ್ಯ ಶೋಧನೀಯವಾದದ್ದೂ ಇರುವದರಿಂದ ಧಾರವಾಡ ಪಟ್ಟಣದ ವಾಲೋನ ಕಮಿಟಿಯವರು ಮೆ. ರಾಲಿನ್‌ಸನ್ ಸಾಹೇಬರಿಗೆ ಅದರ ಪ್ರವಚನ ಮಾಡಬೇಕೆಂದು ಸೂಚಿಸಿದ್ದರು. ಆ ಸಭೆಯಲ್ಲಿ ಇಲ್ಲಿಯ **ಡಿಸ್ಟ್ರಿಕ್ಟ ಜಜ್ಜರಾದ ಮೆ. ಕ್ಲೀವೆಮಂಟ** ಸಾಹೇಬರು ಅಧ್ಯಕ್ಷರಾಗಿದ್ದರು. ವ್ಯಾಖ್ಯಾನವು ಚಿತ್ತಾಕರ್ಷಕವಾದದ್ದಿದ್ದು ಶ್ರೋತೃಜನರ ಮನಸ್ಸಿನಲ್ಲಿ ತುಂಬಾ ಬಿಂಬಿಸಿತು. ಅವರ ಭಾಷಣದ ಆಶಯವೇನಂದರೆ:—

"ಹೋದ ಬೇಸಿಗೆಯಲ್ಲಿ ಮುಖ್ಯ ಪ್ರಧಾನರು ವ್ಹಾಯಿಸ್‌ರಾಯ ಸಾಹೇಬರಿಗೆ "ಯುದ್ಧವು ಪೂರ್ವದಕಡೆಗೆ ಹಬ್ಬಲಾರಂಭಿಸಿದೆ. ಆದ್ದರಿಂದ ಹಿಂದುಸ್ತಾನದವರು ಆ ಕುತ್ತಿಗೆ ಸರಿಯಾದ ಯೋಜನೆಯನ್ನು ಮಾಡಬೇಕೆಂದು" ಹೇಳಿಕಳಿಸಿದರು. ಗಂಡಾಂತರವ್ಯಾವದು? ಅದು ನಮಗೆ ಹ್ಯಾಗೆ ಸಂಬಂಧಿಸಿರುವದೆಂಬಬಗ್ಗೆ ವಿಚಾರಿಸುವಾ ಮೊದಲು ಜರ್ಮನ್ನರ ಪೂರ್ವದಿಕ್ಕಿನ ಯುದ್ಧ ಮತ್ತು ರಾಜ್ಯಪದ್ಧತಿಗಳ ಬಗ್ಗೆ ಚನ್ನಾಗಿ ವಿಚಾರಮಾಡಬೇಕಾಗುವದು. ಈ ಮಹಾಯುದ್ಧವು ಪ್ರಾರಂಭವಾಗುವ ಕಾಲಕ್ಕೆ ಅಂದರೆ ಸನ್ ೧೯೧೪ನೇ ಇಸವಿಯಲ್ಲಿ, ಜರ್ಮನ್ ರಾಜನೀತಿಯ ಒಲವು ಮೂರು ವಿಷಯಗಳ ಕಡೆಗಿತ್ತು. ೧. ದಕ್ಷಿಣ ಅಮೇರಿಕೆಯಲ್ಲಿ ಒಪ್ಪಿಗೆಯಿಂದ ಪ್ರವೇಶ ಮಾಡುವದು. ೨. ಜರ್ಮನಿಯ ಸರಹದ್ದನ್ನು ಉತ್ತರಸಮುದ್ರದವರೆಗೆ ಬೆಳಿಸಿ, ಮೆಡಿಟರೇನಿಯನ್ ಸಮುದ್ರಧುನಿಯನ್ನು ತಮ್ಮ ಅಂಕಿತದಲ್ಲಿ ತಂದು ಲಂಡನ್ ಶಹರಕ್ಕೆ ಭೀತಿಯನ್ನುಂಟು ಮಾಡುವದು. ೩. ತಮ್ಮ ರಾಜ್ಯದ ಪೂರ್ವದಿಕ್ಕಿನಲ್ಲಿ ತಮ್ಮ ಅಧಿಕಾರವನ್ನು ನೆಲೆಗೊಳಿಸಿ ಅದರಿಂದ ಏಶಿಯಾಖಂಡದಲ್ಲಿ ತಮ್ಮ ಪ್ರಾಬಲ್ಯವನ್ನುಂಟುಮಾಡುವದು. ಈ ಹೇತುಗಳಲ್ಲಿ ಎಷ್ಟೋ ಉಪಹೇತುಗಳು ಅಂತರ್ಭೂತವಾಗಿರುವವೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ಮೇಲೆ ಹೇಳಿದ ಹೇತುಗಳಲ್ಲಿ ೩ನೇ ಹೇತುವೇ ಈವೊತ್ತಿನ ವಿಷಯಕ್ಕೆ ಸಂಬಂಧಿಸಿರುತ್ತದೆ. ಈಗಿನ ಕೈಸರನು ಪಟ್ಟಕ್ಕೇರಿದಂದಿನಿಂದ ಅಂದರೆ ಸನ್



ಬಲಲಸೇ ಇಸವಿಯಿಂದ ಈ ವಿಷಯವೇ ಜರ್ಮನಿಯ ರಾಜನೀತಿಯ ಮೂಲವಾಗಿರು
ದರಿಂದ ಅದು ಜರ್ಮನ್ ಜನರ ದೃಷ್ಟಿಯಿಂದ ಎಷ್ಟುಮಹತ್ವದ್ದಾಗಿರುವದೆಂಬದು ಸ್ಪಷ್ಟ
ವಾಗುವದು. ಒಂದುವೇಳೆ ಸಮ್ಮಿಲಿತರಾಷ್ಟ್ರಗಳ(Allies) ಪ್ಲೋನೌಕಾಬಲವು ಜರ್ಮ
ನ್ನರ ಕಡೆಗುಂತಿಂದು ಊಹಿಸಿದರೂ ಅವರಿಗೆ ಸಮುದ್ರದಿಂದ ಏತಿಯಾಖಂಡದ ಮೇಲೆ
ಕಾಳೀಮಾಡುವದು ಸಾಧ್ಯವಿಲ್ಲ. ಯಾಕಂದರೆ, ಇದ್ದಲಿಯನ್ನು ಪೂರೈಸುವ ಸ್ಥಳಗಳೂ,
ಉಕ್ಕಿನ ಸ್ಥಳಗಳೂ ಆದ ಜಿಬ್ರಾಲ್ಟರ, ಮಾಲ್ಟಾ, ಸುಯೇಜಕ್ಯಾನಲ್, ಕೇಪ
ಆಫ್ ಗುಡ್‌ಹೋಪ್ ಎಂಬವುಗಳು ಇಂಗ್ಲಿಷರ ಕೈಯಲ್ಲಿರುವವು. ಇವುಗಳನ್ನು ನಮ್ಮ
ಕೈಯಲ್ಲಿಯೇ ಇಟ್ಟುಕೊಳ್ಳುವ ಅವಶ್ಯಕತೆಯು ಫ್ರೆಂಚರ ಸಂಗಡ ಸನ್ ೧೭೫೭ರಿಂದ
ಇಂದಿರ ವರೆಗೆ ನಡೆದ ಜಗಳಗಳಲ್ಲಿ ನಮಗೆ ಕಂಡುಬಂತು. ಇನ್ನು ದೂರಿನಿಂದ ಸಮು
ದ್ರಯಾನ ಮಾಡಿ ಬಂದ ಶತ್ರುನೌಕಾಸೇನೆಗೆ ತನ್ನ ಕೊರತೆಯನ್ನು ಪೂರೈಸಿಕೊಳ್ಳಲಿಕ್ಕೆ
ಯೋಗ್ಯ ತಳವಿಲ್ಲದ ಹೊರತು ಯುದ್ಧಮಾಡುವದು ಸಾಧ್ಯವಲ್ಲ. ಇದಕ್ಕೆ ಅಡ್‌ಮಿ
ರಲ್ ರಾಡ್‌ಜೇವ್ಡೆನ್ಸಕಿ ಇವರು ಸುಸಿಮಾ ಎಂಬಲ್ಲಿ ಜಪಾನದವರಿಂದ ಪರಾಜಿತ
ರಾದದ್ದೇ ಸಾಕ್ಷಿಯು. ಆದ್ದರಿಂದ ಜರ್ಮನ್ನರಿಗೆ ಮೇಲೆ ಹೇಳಿದ ತಮ್ಮ ಉದ್ದೇಶವನ್ನು
ನೆರವೇರಿಸಲಿಕ್ಕೆ 'ಬ' ತ್ರಯಾತ್ಮಕವಾದ (ಬರ್ಲಿನ್, ಬಾಕು, ಬಟಾವ್ಯಮ್) ಲೋಹ
ಮಾರ್ಗವನ್ನೇ ಅವಲಂಬಿಸಬೇಕಾಯಿತು. ಆ ಮಾರ್ಗದ ಮಹತ್ವವು ಮೂರು ಪ್ರಕಾರ
ದಿಂದ ವ್ಯಕ್ತವಾಗುತ್ತದೆ. (೧) ಯುದ್ಧಕಲೆಯಲ್ಲಿ ಪ್ರವೀಣರಾದವರ ದೃಷ್ಟಿಯಿಂದ ನೋ
ಡಿದರೆ ಡಾರ್ಡನೆಲ್ಸವನ್ನು ಸಮ್ಮಿಲಿತರಾಷ್ಟ್ರದವರು ಗೆದ್ದುಕೊಳ್ಳುವದರಲ್ಲಿ ಅಸಮರ್ಥರಾ
ದರೆ, ಜರ್ಮನಿಯವರಿಗೆ ಅಲ್ಲಿಂದ ಹಾಗೂ ಬೇರೆ ತಕ್ಕ ತಳಗಳಿಂದ ಅವ್ಯಾಹತವಾಗಿ ತಮ್ಮ
ಪೂರೈಕೆಯನ್ನು ಮಾಡಿಕೊಂಡು ಇಜಿಪ್ತ ಹಿಂದುಸ್ತಾನ ಮತ್ತು ಇರಾಣಗಳಿಗೆ ಅಂಜಿಕೆ
ಯುನ್ನುಂಟು ಮಾಡುವದು ಸುಲಭವಿದ್ದು, ಡಾರ್ಡನೆಲ್ಸಿಗೂ ಈ ತಳಗಳಿಗೂ ಹೊಂದಿದ
ಮಾರ್ಗಗಳನ್ನು ನಿರ್ಬಂಧಿಸಲಿಕ್ಕೆ ನಮಗೆ ಸಾಧ್ಯವಿದ್ದಿಲ್ಲ. ಮತ್ತು ಆ ಮಾರ್ಗಗಳ ಸೌಕ
ರ್ಯದಿಂದ ಸಮ್ಮಿಲಿತರಾಷ್ಟ್ರಗಳ ನೌಕಾಶ್ರೇಷ್ಠತ್ವವು ಪ್ರತಿಷೇಧಿಸಲ್ಪಡುತ್ತಿತ್ತು. ಡಾರ್ಡ
ನೆಲ್ಸವನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವು ಶತ್ರುಗಳಲ್ಲಿ ಇತ್ತೆಂದು ಚರ್ಚಿಲ್
ಸಾಹೇಬರ ಹೊರತು ಎಲ್ಲರಿಗೂ ತೋರುತ್ತಿತ್ತು. (೨) ವ್ಯಾಪಾರದ ದೃಷ್ಟಿ
ಯಿಂದ ನೋಡಿದರೆ ಅನಾಟೋಲಿಯಾ ಮತ್ತು ಮೇಸಾಪೊಟೇಮಿಯಾ ಈ
ನಾಡುಗಳನ್ನು ತುರ್ಕಸ್ತಾನವರು ತುಸುವಾದರೂ ಊರ್ಜಿತಸ್ಥಿತಿಗೆ ತಂದಿದ್ದಿಲ್ಲವಾದರೂ
ಸೆಳೆಯನ್ನೀಯಲಿಕ್ಕೆ ಜಗತ್ತಿನಲ್ಲಿ ಅತಿಶ್ರೇಷ್ಠವಾದವುಗಳಿರುತ್ತವೆ. ಆ ದೇಶದ ಕೃಷಿ

ಮತ್ತು ಖನಿಜಸಂಪತ್ತಿಗಳು ಅಪರಿಮಿತವಾದವಾಗಿರುತ್ತವೆ. ಆದ್ದರಿಂದ ಆ ದೇಶದ ಜರ್ಮನಿಯ ಧನಿಕರಿಗೆ ತಮ್ಮ ಹಣದಿಂದ ಮಿಗಿಲಾದ ಲಾಭವನ್ನು ಮಾಡಿಕೊಳ್ಳಲಿ ಅನುವಾಗಿತ್ತು. ಆದ್ದರಿಂದಲೇ ಜರ್ಮನ್ನರು ಕೋನೀಯಾದಲ್ಲಿ ಸನ್ ೧೯೧೪ನೆ ಇಸವಿಯಲ್ಲಿ ಭವ್ಯವಾದ ಕಾಲುವೆಗಳನ್ನು ಕಟ್ಟಿ ಅವುಗಳಿಂದ ೧,೩೦,೦೦೦ ಯಕ್ಷ ಭೂಮಿಯು ನಾಗುವಳಿಯಾಗುವಂತೆ ಮಾಡಿದರು. ಇದಲ್ಲದೆ, ಅನಾಟೋಲಿಯಾ ಹವೆಯು ಉತ್ತಮವಾದದ್ದೂ ಜರ್ಮನ್ನರ ವನಾಹತಿಗೆ ಅನುಕೂಲವಾದದ್ದೂ ಇರ ತ್ತದೆ. ಮತ್ತು ಅಲ್ಲಿ ನೆಲೆಗೊಳ್ಳುವ ಜರ್ಮನ್ನರಿಂದ ಜರ್ಮನಿಗೆ ಕಾನಡಾದಲ್ಲಿ ಅಥವಾ ಅಮೇರಿಕೆಯಲ್ಲಿ ನೆಲೆಗೊಂಡವರಿಗಿಂತ ಹೆಚ್ಚು ಉಪಯೋಗವಾಗುವದೆಂದು ಸಹಜ ವಾಗಿ ಕಂಡು ಬರುವಂತಿದೆ.

ಇನ್ನು ಅಲೆಪ್ಪೋದ ವರೆಗಿನ ಮಾರ್ಗದ ಸಂಬಂಧದಿಂದ ವಿಚಾರಮಾಡೋಣ:- ಯಾಕಂದರೆ ಅದು ಸಮಗ್ರ ಏಶಿಯಾಮೈನರದ ಮಾರ್ಗಗಳ ಕೇಂದ್ರಸ್ಥಾನವಾಗಿರ ತ್ತದೆ. ಅಲೆಪ್ಪೋದಲ್ಲಿ ಆ ಮಾರ್ಗವು ಬಕ್ಕಟ್ಟಿನಲ್ಲಿ ಒಡೆದಿರುತ್ತದೆ. ಪೂರ್ವದ ಶಾಖೆಯು ಮೋಸಲದಲ್ಲಿ ಪಾಯ್ಟು ಬಗದಾದದವರೆಗೆ ಹೋಗುತ್ತದೆ. ಬಗದಾದ ಶಿ ರವು ರಾಜಧಾನಿಯೂ, ವ್ಯಾಪಾರದ ಪಡಿಮೂಲೆಯೂ ಆಗಿರುವದಲ್ಲದೆ ಯುದ್ಧ ಪ್ರಸಂಗದಲ್ಲಿ ಬಹು ಅನುಕೂಲವಾದ ಸ್ಥಿತಿಯುಳ್ಳದ್ದಾಗಿರುತ್ತದೆ. ಯಾಕಂದರೆ– ಯುಫ್ರೆತೀಸನದಿಯ ವಿಶಾಲವಾದ ಜಲಮಾರ್ಗವು ಅದರ ಕೆಳಗಿನ ಶೀಮೆಯಲ್ಲಿಯೆ ಇರುತ್ತದೆ. ಅದು ಇರಾಣೇ ಅಖಾತಕ್ಕೆ ಹೋಗುವ ಮುಖ್ಯಮಾರ್ಗದಲ್ಲಿಯೇ ಇ ತ್ತದೆ. ಹಾಗು ಅದು ಇರಾಣದಲ್ಲಿರುವ ಖಾನಕಿನ್ ಮತ್ತು ಕರ್ಮನ್‌ಶ್ಯಾ ಇವುಗ ಮೇಲಿಂದ ಇರಾಣದ ರಾಜಧಾನಿಯಾದ ತೆಹರಾನಕ್ಕೆ ಹೋಗುವ ಅತಿಮಹತ್ವವಾ ದಾರಿಯ ಮೇಲೆ ಇರುತ್ತದೆ. ಈ ಮಾರ್ಗದ ಮೂಲಕವಾಗಿಯೇ ಜರ್ಮನ್ನರಿಂ ಇರಾಣಕ್ಕೆ ಅಂಜಿಕೆಯಿತ್ತು. ಆದ್ದರಿಂದಲೇ ಯುದ್ಧಮಂತ್ರಿಗಳು ಟೌನ್‌ಶೆಂ ಸಾಹೇಬರನ್ನು ಸೈನ್ಯಸಹಿತವಾಗಿ ಸನ್ ೧೯೧೫ನೇ ಇಸವಿಯಲ್ಲಿ ಅಲ್ಲಿಗೆ ಕಳಿಸಿದರು ಆದರೆ ದುರ್ದೈವದಿಂದ ಆ ಸ್ವಾರಿಯಲ್ಲಿ ಅಪಜಯವುಂಟಾಯಿತು. ಟೌನಶೆಂ ಸಾಹೇಬರಿಗೆ ರಶಿಯನ್ನರು ಇದೇ ಮಾರ್ಗದಿಂದಲೇ ಸಹಾಯವನ್ನು ಯಲಿಕ್ಕೆ ಯತ್ನಿ ಸಿದರು.

ಇನ್ನು ಪಶ್ಚಿಮಶಾಖೆಯ ಬಗ್ಗೆ ವಿಚಾರಮಾಡೋಣ:– ಈ ಶಾಖೆಯು ದಮಸ್ಕ ಹತ್ತರ ಡೇರಾಯಿಯಾ ಎಂಬ ಸಂಯೋಗ ಸ್ಥಳಕ್ಕೆ ಹೋಗುತ್ತದೆ. ಆ ಪ್ಪಗಃ ಎರಡು ಶಾಖೆಗಳಾಗಿ ಒಡೆಯುತ್ತದೆ. ಅವುಗಳಲ್ಲೊಂದು ಶೀರಿಯನ್ ರೇಲ್ವೆಯ

ದು ಶೀರಿಯಾದ ಸರಹದ್ದಿನಲ್ಲಿ ಜೆರೂಸಲೇಮಿನ ಮೇಲಿಂದ ಬೀರಬಾಕ್ಕೆ ಹೋ
ತ್ತದೆ. ಮೇಲೆ ಹೇಳಿದ ಮತ್ತೊಂದು ಶಾಖೆಯೇ ಹೆಡಝೂಜ ರೇಲ್ವೆಯು. ಅದು
ಮದೀನಾದ ಮೇಲಿಂದ ಜಿದ್ದಾಕ್ಕೆ ಹೋಗುತ್ತದೆ. ಹೆಡಝೂಜ ರೇಲ್ವೆಯ ಮಾ
ರ್ಗಕ್ಕೆ ಅತಿಶಯ ಸೌಕರ್ಯವುಂಟಾಗುವಂಥ ಕೆಲವು ಮಹತ್ವದ ಸಂಗತಿಗಳು
ಯಾವವೆಂದರೆ—(೧) ಕೆಂಪುಸಮುದ್ರದ ದಂಡೆಯ ಮೇಲಿರುವ ಜೆಡ್ಡಾ ಶಹರವು ಸೌದನ್
ಬಂದರದ ಎದುರಾಗಿ, ಯುದ್ಧೋಪಯುಕ್ತವಾದ ಒಂದು ತಳವನ್ನು ಮಾಡಲಿಕ್ಕೆ ಬರು
ತಿದೆ. (೨) ಈ ರೇಲಮಾರ್ಗವು ಮಕ್ಕಾಕ್ಕೆ ಮುಟ್ಟುತ್ತಿರುವದರಿಂದ ಇದರ ಮಹ
ತ್ವವು ವಿಿಗಿಲಾದದ್ದಾಗಿರುವದು. ಯಾಕಂದರೆ—ಮಕ್ಕೆಯು ಯಾವತ್ತು ಮುಸಲ್ಮಾನರ
ಮುಖ್ಯ ಧರ್ಮಪೀಠವಿದ್ದು ಪೂರ್ವಕಾಲದಲ್ಲಿ ಕ್ರಿಶ್ಚನ್ನರಿಗೆ ರೋಮಶಹರವು ಪ್ರೀತ್ಯಾಸ್ಪ
ದ ಸ್ಥಾನವಾದಂತೆಯೇ ಇದು ಮುಸಲ್ಮಾನರಿಗೆ ಪ್ರೀತ್ಯಾಸ್ಪದ ಸ್ಥಲವಾಗಿರುವದು.
ಮಕ್ಕೆಯ ಪಾವಿತ್ರ್ಯವೂ ಅದು ಹೆಡ್‌ಝೂಜ ರೇಲ್ವೆಗೆ ಸೇರಿರುವದೂ, ಇವೆರಡು ಸಂಗತಿ
ಗಳು ಇಡೀ ಮುಸಲ್ಮಾನ ಜನತೆಗೆ ತಮ್ಮದೊಂದು ಒಕ್ಕಟ್ಟಾದ ಜನಾಂಗವನ್ನು ಉತ್ಪನ್ನ
ಮಾಡಿಕೊಳ್ಳಲಿಕ್ಕೆ ಪ್ರೋತ್ಸಾಹನೆಯನ್ನುಂಟು ಮಾಡುವ ಒಲವತ್ತರವಾದ ಕಾರಣಗಳಾ
ಗಿರುತ್ತವೆ. ಅದು ಹ್ಯಾಗೆಂಬದನ್ನು ಮುಂದೆ ಹೇಳುವೆನು. ಮಕ್ಕೆಗೆ ಹೋಗಿಬರುವ
ಯಾತ್ರಿಕರಿಂದ ಈ ರೇಲ್ವೆಗೆ ಅಪರಿಮಿತ ದ್ರವ್ಯವು ದೊರೆಯುತ್ತದೆ. ಈ ರೇಲಮಾರ್ಗ
ವನ್ನು ನಿರ್ಮಾಣಮಾಡುವ ಮುಖ್ಯ ಉದ್ದೇಶವು ಅದನ್ನು ಹೋಡೀದಾದ ವರೆಗೆ
ಒಯ್ದು ಅಲ್ಲಿ ಏಡನ್ನದ ಮಗ್ಗಲಿಗೆ ಒಂದು ನೌಕಾತಳವನ್ನು ನಿರ್ಮಾಣಮಾಡುವ
ಸಂಕೇತವಿತ್ತು. ಆದರೆ ಜರ್ಮನಿಯವರ ದುರ್ದೈವದ ಮೂಲಕವಾಗಿ ಹೆಡಝೂಜ
ದೇಶದ ರಾಜನು ಬಂಡುಮಾಡಿ ಈ ದೀರ್ಘವ್ಯಾಪಿಯಾದ ಹಂಚಿಕೆಯನ್ನು ಪೂರ್ಣ
ವಾಗಿ ಹಾಳುಮಾಡಿ ಬಿಟ್ಟಿದ್ದಲ್ಲದೆ ಏಡನ್ನಕ್ಕೆ ಅಂಜಿಕೆಯನ್ನುಂಟು ಮಾಡುತ್ತಿರುವ
ತುರ್ಕಸ್ತಾನದ ಕೋಟೆಯಲ್ಲಿರುವ-ಸೈನ್ಯವನ್ನು, ಶತ್ರುಗಳ ಇತರ ಸೈನ್ಯಕ್ಕೆ ಸಂಬಂಧ
ವಿಲ್ಲದಂತೆ ಮಾಡಿ ಬಿಟ್ಟನು.

ಇತರ ಸಂಬಂಧಗಳನ್ನು ಲಕ್ಷ್ಯದಲ್ಲಿ ತರದಿದ್ದರೂ, ಶೀರಿಯನ್ ರೇಲ್ವೆಯಾದರೂ
ಕಿಷ್ಟಕ್ಕೇ ಮಹತ್ವವುಳ್ಳದ್ದಾಗಿರುತ್ತದೆ. ತುರ್ಕರು ಸನ್ ೧೯೧೫ನೇ ಇಸವಿಯಲ್ಲಿ ಆ
ರೇಲ್ವೆಯ ಸಹಾಯದಿಂದ ಸುಯೇಜ ಕಾಲುವೆಯ ಮೇಲೆ ದಾಳೀ ಮಾಡಲಿಕ್ಕೆ ಸಮರ್ಥ
ರಾದರು. ಈ ಯುದ್ಧವು ಜರ್ಮನ್ನರ ಇಚ್ಛೆಗೆ ಅನುಕೂಲವಾಗಿ ನಾಗಿದ್ದರೆ, ಮತ್ತು
ಇಜಿಪ್ತದಲ್ಲಿ ಗೊಂದಲವೆದ್ದು ತುರ್ಕಸ್ತಾನದವರಿಗೆ ಅವನ್ನು ತಮ್ಮ ದೇಶದಲ್ಲಿ ಕೂಡಿ

ಸಿಕೊಳ್ಳಲಿಕ್ಕೆ ಆಸ್ಪದ ಸಿಕ್ಕಿದ್ದರೆ, ಈ ರೇಲ್ವೆಯನ್ನು ಬರ್ಲಿನದಿಂದ ಜರ್ಮನ್ ಈ ಆಫ್ರಿಕಾಕ್ಕೆ ಒಯ್ದು ಮುಟ್ಟಿಸುವ ಜರ್ಮನಿಯ ಅಭಿಲಾಷೆಯು ಪೂರ್ಣವಾಗುತ್ತಿತ್ತ ಇಂಥ ರೇಲಮಾರ್ಗವನ್ನು ನಿರ್ಮಾಣಮಾಡುವದರಿಂದ ಜರ್ಮನಿಗೆ ವ್ಯಾಪಾರದ ಬಹು ಸೌಕರ್ಯವಾಗುತ್ತಿತ್ತೆಂಬದು ಸಹಜವದೆ. ಯುದ್ಧರಚನೆಯಲ್ಲಂತೂ ಆಂ ರೇಲಮಾರ್ಗದಿಂದ ಅನೇಕ ಪ್ರಕಾರದ ಲಾಭಗಳು ಜರ್ಮನಿಗೆ ಪ್ರಾಪ್ತವಾ ವಂತಿವೆ. ಫ್ರಾನ್ಸದಲ್ಲಿ ಸಮ್ಮಿಲಿತರಾಷ್ಟ್ರಗಳ ಪಕ್ಷಕ್ಕೆ ಝೂನಾವೋ ಮುಂತಾ ಶ್ವೇತೇತರವರ್ಣದವರ ಸೈನ್ಯವು ಸೇರಿದ್ದನ್ನು ನೋಡಿ ಜರ್ಮನಿಗೆ ಅಪರಿಮಿತವಾದ ಕೋಪವುಂಟಾಯಿತು. ಇಂಥ ಯುದ್ಧವು ಇನ್ನೊಮ್ಮೆ ಪ್ರಾಪ್ತವಾದರೆ ಸಾಂಪ್ರ ತದ ಯುದ್ಧದಲ್ಲಿ ತಾವು ಮಾಡಿದ ಧೋರಣಕ್ಕಿಂತ ಮಿಗಿಲಾದ ಧೋರಣವನ್ನು ಮಾಡ ಬೇಕೆಂಬ ನಿಶ್ಚಯವು ಜರ್ಮನರ ಮನಸಿನಲ್ಲಿದ್ದಂತೆ ತೋರುತ್ತದೆ. ಮತ್ತು ಸಾಧ್ಯ ವಾದರೆ ಮುಂದಿನ ಯುದ್ಧದಲ್ಲಿ ಜರ್ಮನ್ ನಾಯಕರಿಂದ ಯುದ್ಧಕಲೆಯನ್ನು ಕಲಿತಂಥ ಆಫ್ರಿಕೆಯ ಸೈನ್ಯವನ್ನೊಡಗೂಡಿ ಶತ್ರುಗಳ ಸಂಗಡ ಕಾದಬೇಕೆಂಬ ಅಭಿಲಾಷೆಯು ಳ್ಳವರಾಗಿರುವರು. ಮನ್ಯಆಫ್ರಿಕಾಖಂಡದ ಕಾಡುಜಾತಿಯವರಿಗೆ ಶಸ್ತ್ರಾಸ್ತ್ರವಿದ್ಯೆಯ ನ್ನಿತ್ತು ಅವರ ಸುರಿಮಳೆಯನ್ನು ಜಗತ್ತಿನಲ್ಲಿ ಮಾಡಿದರೆ ಅದರಿಂದ ಏಶಿಯಾ ಮತ್ತು ಯುರೋಪಖಂಡಗಳಲ್ಲಿಯು ಸುಧಾರಣೆಗೆ ಒದಗುವ ತೊಂದರೆಯು ಇಷ್ಟೆಂದು ಹೇಳ ಲಾಗದು. ಇಂಥ ಕಯುಕ್ತಿಯ ಪ್ರತೀಕಾರ ಮಾಡಬೇಕಾದರೆ ಬರಹೋಗು ಮಾರ್ಗಗಳನ್ನೆಲ್ಲ ನಮ್ಮ ಕೈಯಲ್ಲಿಟ್ಟುಕೊಳ್ಳದ ಹೊರತು ಬೇರೆ ಸಾಧನವಿಲ್ಲ.

ಈ ವರೆಗೆ ಹೇಳಿದ ತುಸು ಸಂಗತಿಗಳಿಂದ 'ಬ' ಚತುಷ್ಟಯಾತ್ಮಕ (ಬರ್ಲಿನ ಬಾಕು, ಬಟಾವುಮ್, ಬಗದಾದ) ರೇಲ್ವೆಯ ಪರುಪರೆಯು ಎಷ್ಟು ಮಹತ್ ದ್ದಾಗಿರುವದೆಂಬದು ಸ್ಪಷ್ಟವಾಗುವದು. ಇಷ್ಟು ವಿಶಾಲವಾದ ರೇಲವೆಯನ್ನ ಜರ್ಮನ್ನರು ಯಾವ ಕ್ರಮದಿಂದ ವಶಮಾಡಿಕೊಂಡಿರುವರು, ಅದೇಂದ ತುರ್ಕ ಸ್ಥಾನದ ಮತ್ತು ಸಮೀಪದ ಪೂರ್ವಭಾಗದ ಕುತ್ತಿಗೆಯು ಹ್ಯಾಗೆ ಅವ ಹಿಡಿಕೆಯಲ್ಲಿ ಸಿಕ್ಕಿತು, ಇದನ್ನು ತಿಳಕೊಳ್ಳುವದು ಬಹು ಚಿತ್ತಾಕರ್ಷಕ ಸಂಗತಿಯಿರುತ್ತದೆ. ಸನ್ ೧೯೧೪ನೇ ಇಸವಿಗಿಂತ ಮೊದಲು ಬರ್ಲಿನದಿಂ ಕಾನಸ್ಟಾಂಟಿನೋಪಲ್ಲಕ್ಕೆ ರೇಲಮಾರ್ಗವೇ ಇದ್ದಿಲ್ಲ. ಏಶಿಯಾ ಮೈನರದಲ್ಲಾ ರೂ ಆಗ್ಗೆ ಒಂದಕ್ಕೊಂದು ಸಂಬಂಧವಿಲ್ಲದ ಹಲವು ರೇಲಮಾರ್ಗಗಳು ಇದ್ದವು ಅವು ಭಿನ್ನಭಿನ್ನವಾದ ಇಂಗ್ಲಿಷ ಮತ್ತು ಫ್ರೆಂಚ ಕಂಪನಿಗಳ ಸ್ವಾಮಿತ್ವಕ್ಕೆ ಸೇರಿದ್ದವ

ಸನ್ ೧೮೬೭ರಲ್ಲಿ ಇಸವಿಯಲ್ಲಿ ಈಗಿನ ಕೈಸರನು ಪಟ್ಟವೇರಿದನು. ಕೂಡಲೆ **ಪ್ರಿನ್ಸ್, ಬಿಸ್ಮಾರ್ಕ್ ಮತ್ತು ವ್ಹಾನ್‌ಮೋಲ್ಟಕ್ಕೆ** ಇವರೀರ್ವರಿಂದ ಕಲ್ಪಿತವಾದ ಜರ್ಮನ್ ಸಾರ್ವಭೌಮತ್ವ ಪ್ರಾಪ್ತಿಯೆಂಬ ರಾಜನೀತಿಗೆ ಘನತರವಾದ ಪ್ರೋತ್ಸಾಹನೆಯು ದೊರಕಿತು. ಕೈಸರನ ಕಟಾಕ್ಷವು ಪೂರ್ವದಿಕ್ಕಿಗೆ ಒಲೆಯಿತು. ಅವನು ಮರುವರ್ಷ ಅಂದರೆ ೧೮೬೮ನೇ ಇಸವಿಯಲ್ಲಿ ಕಾನಸ್ಟಾಂಟಿನೋಪಲಕ್ಕೆ ತನ್ನ ಪ್ರಥಮ ದರ್ಶನವನ್ನು ಕೊಟ್ಟನು. **ಮಾರ್ಮೋರಾ** ಸಮುದ್ರತೀರಗಳ ಮೇಲೆ ಒಂದು ಸ್ಥಾನಿಕ ರೇಲ ಮಾರ್ಗವನ್ನು ಕಟ್ಟಲಿಕ್ಕೆ ಆಸ್ಪದವಾಗಬೇಕೆಂಬದೇ ಅವನ ಪ್ರಯಾಣೋದ್ದೇಶವಾಗಿತ್ತು. ಇದೇ ಸುಮಾರಕ್ಕೆ **ಬ್ಯಾರನ್ ವ್ಹಾನ್ ಹರ್ಷ್ಟ್**ನು ಬಾಲ್ಕನ್ ಪ್ರದೇಶದೊಳಗಿನಿಂದ ತುರ್ಕಸ್ಥಾನ ರಾಜಧಾನಿಗೂ **ಹ್ಯಾಂಬರ್ಗ್**ಕ್ಕೂ ಕೂಡಿಸುವಂಥ ರೇಲಮಾರ್ಗವನ್ನು ಕಟ್ಟಲಾರಂಭಿಸಿದ್ದನು. ಬಳಿಕ ಬ್ರಿಟಿಶ ಕಂಪನಿಯವರಿಗೆ **ಅನೆಟೋಲಿಯನ್** ರೇಲವೆಯನ್ನು ಕಟ್ಟಲಿಕ್ಕೆ ಕೊಟ್ಟ ಅಧಿಕಾರವನ್ನು ಸ್ಥಿರಪಡಿಸಬಾರದೆಂಬ ಬುದ್ಧಿಯನ್ನು ಸುಲತಾನನ ಮನಸ್ಸಿನಲ್ಲಿ ಜರ್ಮನ್ನರು ಹುಟ್ಟಿಸಿದರು. ಆದ್ದರಿಂದ ಆ ಅಧಿಕಾರವು ಬರ್ಲಿನ್ನಿನ **ಡ್ಯೂಟಸೆ** ಬ್ಯಾಂಕಿನ ಕೈಸೇರಿತು. ಮತ್ತು ಆ ಬ್ಯಾಂಕಿನವರು ಸನ್ ೧೮೯೨ನೇ ಇಸವಿಯಲ್ಲಿ **ಅಂಗೋರಾದ** ವರೆಗೆ ರೇಲಮಾರ್ಗವನ್ನು ಕಟ್ಟಿಸಿದರು. ಸನ್ ೧೮೯೩ನೇ ಇಸವಿಯಲ್ಲಿ ಜರ್ಮನ್ನರಿಗೆ ಇದಕ್ಕೂ ಹೆಚ್ಚಿನ ಹಕ್ಕು ಪ್ರಾಪ್ತವಾಗಿ ಕೋನಿಯಾದ ರೇಲ್ವೆಯು ಸನ್ ೧೮೯೬ನೇ ಇಸವಿಯಲ್ಲಿ ಸಿದ್ಧವಾಯಿತು. ಸನ್ ೧೮೯೮ನೇ ಇಸವಿಯಲ್ಲಿ ಕೈಸರನು ಎರಡನೇ ಸಾರೆ ಪೂರ್ವದೇಶಕ್ಕೆ ಹೋದನು. ಆ ಕಾಲಕ್ಕೆ ತಾನು ಇಡೀ ಮುಸಲ್ಮಾನ ಜನರ ಅಗ್ರಣಿಯೂ ಹಿತಚಿಂತಕನೂ ಆಗಿರುವೆನೆಂದು ಸಾರಿಹೇಳಿದನು. ಈಪ್ರಕಾರ ಕಾರ್ಯಕ್ರಮವು ಸಾಗಿ, ಕೊನೆಗೆ ಸನ್ ೧೯೦೩ನೇ ಇಸವಿಯ ಪ್ರಖ್ಯಾತವಾದ ಒಪ್ಪಂದದ ಯೋಗದಿಂದ ಬಸರಾ ರೇಲ್ವೆಯ ಗುತ್ತಿಗೆಯು ಇಂಪೀರಿಯಲ್ ಬಗದಾದರೇಲ್ವೆ ಕಂಪನಿಗೆ ಸಿಕ್ಕದ್ದಲ್ಲದೆ, ಏಶಿಯಾಮಾಯನರದಲ್ಲಿರುವ ಯಾವತ್ತು ರೇಲಮಾರ್ಗಗಳ ಮೇಲ್ವಿಚಾರಣೆಯ ಅಧಿಕಾರವಾದರೂ ಡ್ಯೂಟಸೆ ಬ್ಯಾಂಕಿಗೆ ದೊರೆಯಿತು. ಈ ಯಾವತ್ತು ಕೃತಿಗಳಿಗೆ ಇಂಗ್ಲಂಡನವರು ಸ್ವಲ್ಪವಾದರೂ ವಿರೋಧ ಮಾಡಲಿಲ್ಲ. ಇದು ಬಹು ಸೋಜಿಗವಾಗಿರುತ್ತದೆ. ರಶಿಯನ್ನರು ಮಾತ್ರ ಜರ್ಮನ್ನರ ಈ ಕೃತಿಗಳ ಸಂಬಂಧದಿಂದ ತಮ್ಮ ಅಸಮ್ಮತಿಯನ್ನು ಬಲವತ್ತರವಾಗಿ ಪ್ರಕಟಿಸಿದರು. ಆದರೆ ಬ್ರಿಟಿಶ ಜನರು ಪೂರ್ವದೇಶದಲ್ಲಿ ರಶಿಯನ್ನರೇ ತಮ್ಮ ನಿಜವಾದ ಶತ್ರುಗಳಾಗಿರುವರೆಂದು ನಂಬಿದ್ದರು. ಇದಲ್ಲದೆ ಹಿಮಸ್ತಾನದ ಸಂಬಂಧದಿಂದ ರಶಿಯನ್ನರು ಕೈಕೊಳ್ಳುತ್ತಿರುವ ಸಂಚುಗಳಿಗೆ ಜರ್ಮನ್ನರ

ಕೃತಿಗಳೇ ತಕ್ಕ ಪ್ರತೀಕಾರವೆಂದು ನಿಶ್ಚಯಿಸಿ ಜರ್ಮನ್ನರ ಕೃತಿಗಳಿಗೆ ಅನುಮೋದಿಸುತ್ತಿದ್ದರು. ಇದೇ ಸಂಧಿಯಲ್ಲಿ ಜರ್ಮನ್ನರು ಇರಾಣೀ ಅಖಾತದಲ್ಲಿ ಒಂದು ತಳವನ್ನು ಸ್ಥಾಪಿಸಬೇಕೆಂಬ ಬಗ್ಗೆ ದೀರ್ಘಪ್ರಯತ್ನವನ್ನು ನಡಿಸಿದ್ದರು. ಸನ್ ೧೯೮೬ನೇ ಇಸವಿಯಲ್ಲಿ ಹ್ಯಾಂಬರ್ಗದ **ವಾಣಿಜ್ಯಾಸ** ಕಂಪನಿಯವರು **ಲಿಂಗಾ** ಮತ್ತು **ಬೆಹರೀನ** ಎಂಬ ಸ್ಥಳಗಳಲ್ಲಿ ಒಂದು ಮುತ್ತಿನ ಕಾರಖಾನೆಯನ್ನು ಆರಂಭಿಸಿದರು. ಮತ್ತು ಅದೇ ಸಂಧಿಯಲ್ಲಿ ಇರಾಣೀ ಅಖಾತದಲ್ಲಿ ಕೇವಲ ೬ ಜನ ಜರ್ಮನ್ ಪ್ರಜೆಗಳಿದ್ದರೂ ಬುಶಾಯರದಲ್ಲಿ ಒಬ್ಬ ವಕೀಲನ್ನು ನೇಮಿಸಿದರು. ಸನ್ ೧೯೮೯ನೇ ಇಸವಿಯಲ್ಲಿ ಅನ್ವೇಷಣಾರ್ಥವಾಗಿ ಸಮುದ್ರಪರ್ಯಟನ ಮಾಡುವ **ಅಕ್ರೋನಾ** ಎಂಬ ಜರ್ಮನರ ಹಡಗವು ಚಾಯನಾದಿಂದ ತಿರುಗಿಹೋಗುವಾಗ ಇರಾಣೀ ಅಖಾತಕ್ಕೆ ದರ್ಶನಕೊಟ್ಟಿತು. ಇಷ್ಟೇ ಅಲ್ಲ. ಜರ್ಮನರು **ಕೋಬೀಟ**ದ ಮೇಲೆ ದಾಳೀ ಮಾಡಲಿಕ್ಕೆ ತುರ್ಕರಿಗೆ ದುರ್ಬೋಧನೆಯನ್ನು ಮಾಡಿದರು. ಸುದ್ದಿವದಿಂದ ಈ ಪ್ರಸಂಗದಲ್ಲಿ **ಲಾರ್ಡಕರ್ಝನ್** ದೊರೆಗಳು ಹಿಂದು ಸ್ಥಾನಕ್ಕೆ ವ್ಹಾಯಿಸರಾಯರಾಗಿ ಬಂದರು. ಅವರೂ **ಸರ್ ಪರ್ಸಿಕಾಕ್ಸ್** ಇವರೂ ಲಿಟೋರಲ್ ಅಖಾತದಲ್ಲಿರುವ ಶೇಖ ಜನರ ಕಡೆಯಿಂದ ಪರರಾಷ್ಟ್ರಗಳೊಡನೆ ಬ್ರಿಟನ್ನದವರ ಸಮ್ಮತಿಯಿಲ್ಲದೆ ಯಾವ ಪ್ರಕಾರದ ಒಪ್ಪಂದವನ್ನೂ ಮಾಡುವದಿಲ್ಲೆಂಬ ವಚನವನ್ನು ತೆಗೆದುಕೊಂಡರು. ಆದರೂ ಈ ವಚನದ ಯೋಗದಿಂದ **ಹ್ಯಾಂಬರ್ಗ ಅಮೇರಿಕಾ** ಎಂಬ ಹೆಸರಿನ ಕಂಪನಿಯವರು ಸಾರ್ವಜನಿಕ ಉಪಯೋಗಕ್ಕಾಗಿ ಅಡ್ಡಾಡಿಸಲಾರಂಭಿಸಿದ ಹೊಗೆಹಡಗವನ್ನು ತಡೆಯುವದಾಗಲಿಲ್ಲ. ಅದ್ದರಿಂದ ಮೊದಲನೇ ಜರ್ಮನ್ ಹಡಗವು ಸನ್ ೧೯೦೬ನೇ ಇಸವಿಯಲ್ಲಿ ಬಂದು ತಲುಪಿತು. ಅದರ ಮುಖ್ಯ ಸರಕುಗಳೆಂದರೆ ಮಧುರತರವಾದ ಮದ್ಯಗಳೇ. ಆ ಹಡಗವು ವಾದ್ಯವೈಭವಗಳೊಡನೆ ಮುಖ್ಯ ಮುಖ್ಯ ಬಂದರಗಳಲ್ಲಿ ಪ್ರವೇಶಮಾಡಿ ಶೇಖ ಜನರಿಗೆ ಮದ್ಯದ ಪೆಟ್ಟಿಗೆಗಳನ್ನು ಕಾಣಿಕೆಯಾಗಿ ಕೊಟ್ಟಿತು. ಜಗತ್ತಿನಲ್ಲಿಯ ಯಾವತ್ತೂ ಮುಸಲ್ಮಾನರ ಸಂಗಡ ಯಾವತ್ತೂ ಜರ್ಮನ್ನರ ಸಖ್ಯದ ಸಂಧಿಯನ್ನು ನೆರವೇರಿಸಬೇಕೆಂದು ಕೇಸರನ ಮತ್ತೊಂದು ಉದ್ದೇಶವಾಗಿತ್ತು. ತುರ್ಕಸ್ತಾನದ ಸುಲ್ತಾನನು ಜಗತ್ತಿನಲ್ಲಿಯ ಎಲ್ಲ ಮುಸಲ್ಮಾನರ ಜಗದ್ಗುರುವಾಗಿರುತ್ತಾನೆ. ಮತ್ತು ಯಾವ ಯಾವ ದೇಶಗಳಲ್ಲಿ ಈ ರೇಲಮಾರ್ಗಗಳು ಹಾಯ್ದಿರುವವೋ ಆ ದೇಶಗಳೆಲ್ಲ ಮುಸಲ್ಮಾನರವು. ಅವೆಲ್ಲ ದೇಶಗಳು ಈ ಮಾರ್ಗದಿಂದ ಮಕ್ಕೆಗೆ ತಳಕುಗೂಡಿರುತ್ತವೆ. ಮಕ್ಕೆಯು ಮುಸಲ್ಮಾನರ ಪರಮಪವಿತ್ರಸ್ಥಾನವಾಗಿರುತ್ತದೆ. ಹೀಗಿದ್ದರೂ ಈ ಕಾಲ

ನಲ್ಲಿ ಎಲ್ಲ ಮುಸಲ್ಮಾನರಿಗೆ ಹಿತಕರವೆಂದು ತೋರುವಂಥ ನೆವಹೇಳಿ ಅವರನ್ನು ಎಬ್ಬಿಸಿ ಕೂಡ್ರಿಸುವದು ಜರ್ಮನ್ನರಿಗೆ ಸಾಧಿಸಲಿಲ್ಲ. ಮುಸಲ್ಮಾನರದೊಂದು ದೊಡ್ಡ ಗೊಂದಲವೆಬ್ಬಿಸಿದ್ದರೆ ಅದು ಇರಾಣ ಮತ್ತು ಅಫಗಾಣಿಸ್ತಾನಗಳಲ್ಲಿ ಹಬ್ಬಿ, ಇಜಿಪ್ತ ಹಾಗೂ ಹಿಂದುಸ್ತಾನಗಳಲ್ಲಿಯು ಮುಸಲ್ಮಾನರಲ್ಲಿಯೂ ಹಬ್ಬಬಹುದಾಗಿತ್ತು. ಹೀಗಾಗಬೇಕೆಂಬ ಹೇತುವಿನಿಂದಲೇ ಕೈಸರನು ಸನ್ ೧೯೧೭ನೇ ಇಸವಿಯಲ್ಲಿ ದಮಾಸ್ಕಸದಲ್ಲಿ ತನ್ನ ವಿಖ್ಯಾತಭಾಷಣವನ್ನು ಮಾಡುವ ಕಾಲಕ್ಕೆ ಹೊಗಳಿಕೊಂಡದ್ದೇನಂದರೆ—"ಜರ್ಮನ್ ಮಹಾರಾಜನು ಸುಲ್ತಾನನ ಮತ್ತು ಅವನನ್ನು ಖಲೀಫನೆಂದು ಪೂಜಿಸುವ ೩೦,೦೦,೦೦,೦೦ ಮುಸಲ್ಮಾನರ ನಿರಂತರ ಹಿತಚಿಂತಕನಿರುವನೆಂದು ಎಲ್ಲರೂ ನಿಜವಾಗಿ ತಿಳಿಕೊಳ್ಳಲಿ" ಸುದ್ದಿವದಿಂದ ಈ ಭಯಪ್ರದವಾದ ಯುಕ್ತಿಯು ಫಲದ್ರೂಪವಾಗಲಿಲ್ಲ. ತುರ್ಕರು ಕೊಲೆಸುಲಿಗೆಗಳನ್ನು ಮಾಡುವವರೂ, ಅನೀತಿಪರ ವ್ಯವಹಾರಾಸಕ್ತರೂ, ರಾಜ್ಯಶಾಸನದಲ್ಲಿ ಕುಮಾರ್ಗಪ್ರವರ್ತಕರೂ, ಆಗಿರುವರೆಂಬ ದುಷ್ಕೀರ್ತಿಯು ಎಲ್ಲ ಕಡೆಗೂ ಹಬ್ಬಿತ್ತು; ಮತ್ತು ಜರ್ಮನಿಯ ಕವಚೆಯುಕ್ತ ಮುಷ್ಟಿಯು ಬಹುಕ್ರೂರವಾದದ್ದೆಂದು ಎಲ್ಲರೂ ಮನಗಂಡಿದ್ದರು. ಆದ್ದರಿಂದ ಹಲವು ಧರ್ಮೋನ್ಮತ್ತವ್ಯಕ್ತಿಗಳನ್ನು ಹೊರತುಪಡಿಸಿ ಇಜಿಪ್ತ ಹಿಂದುಸ್ತಾನಗಳಲ್ಲಿಯು ಮುಸಲ್ಮಾನರು ಶಾಂತವಾದ ಬ್ರಿಟಿಶ ಆಳಿಕೆಯನ್ನು ಬಿಟ್ಟು ತುರ್ಕರ ಕೆಟ್ಟ ಆಳಿಕೆಯನ್ನು ಸ್ವೀಕರಿಸಲಿಕ್ಕೆ ಒಪ್ಪಲಿಲ್ಲ. ಹೆಡಝೂಜ ದೇಶದ ಅರಸನು ಅದಷ್ಟು ಬೇಗನೆ ತಿರುಗಿ ಬಿದ್ದನು. ಆದರೂ ಮೇಲೆ ಹೇಳಿರುವ ಜರ್ಮನ್ನರ ಕುಯುಕ್ತಿಯಿಂದ ಸಿದ್ಧವಾಗುವದೇನಂದರೆ:—ಈ ರೇಲಮಾರ್ಗದ ಯೋಗದಿಂದ ಎಲ್ಲ ಮುಸಲ್ಮಾನರೂ ಜರ್ಮನಿಯೂ ಒಂದಾಗುವ ಅಂಜಿಕೆಯು ಉಂಟೋ ಉಂಟು.

ಈವರೆಗೆ ವಿವರಿಸಿದ ಸಂಗಗಳ ಮೇಲಿಂದ ಈ ಮಹಾಯುದ್ಧದಲ್ಲಿ ಬಾಲ್ಕನ ಜನರ ಸಂಬಂಧವು ಎಷ್ಟು ಮಹತ್ವದ್ದಾಗಿರುವದೆಂಬದು ನಮಗೆ ಸ್ಪಷ್ಟವಾಗಿ ತಿಳಿಯುವದು. ಬಾಲ್ಕನ್ ಸಂಸ್ಥಾನಗಳು ಈ ರೇಲ ಮಾರ್ಗದ ಮಧ್ಯಭಾಗದಲ್ಲಿ ಒಂದು ಗಟ್ಟಿಯಾದ ಬಂಡೆಯಂತೆ ಪ್ರತಿಬಂಧಕವಾಗಿರುತ್ತವೆ. ತುರ್ಕರನ್ನು ಸುಮಳು ಮಾಡುವದು ಸುಲಭವಿದ್ದರೂ ಈ ತುಂಟರಾದ ಬಾಲ್ಕನರನ್ನು ಕೈವಶ ಮಾಡಿಕೊಳ್ಳುವದು ಅಷ್ಟು ಸುಲಭವಲ್ಲ. ಈವರೆಗೆ ಜರ್ಮನರ ಹಂಚಿಕೆಗಳಿಗೆ ರಶಿಯನ್ನರೇ ವಿಘ್ನವನ್ನೀಯುತ್ತಿದ್ದರು. ಅವರೇ ಯಾವತ್ತು ಸ್ಲಾವ ಜನಾಂಗಗಳಿಗೆ ರಕ್ಷಕರಾಗಿದ್ದರು. ಅವರಿಂದಲೇ ಬಲ್ಗೇರಿಯಾ ಪ್ರಾಂತವು ತುರ್ಕರಿಂದ ಸ್ವತಂತ್ರವಾಗಿದ್ದಲ್ಪಟ್ಟಿತ್ತು. ರಶಿಯನ್ನರೇ ತಮ್ಮ ಸುರಕ್ಷಕ

ರೆಂದು ಬಲ್ಗೇರಿಯರ ಜನರಾದರೂ ತಿಳುಕೊಂಡಿದ್ದರು. ಈ ಪರಸ್ಪರ ವಿಶ್ವಾಸಕ್ಕೆ ಧರ್ಮಾಭಿಮಾನವೇ ಮುಖ್ಯಕಾರಣವಾಗಿತ್ತು. ರೋಮಾನಿಯಾ ಹೊರತು ಪಡಿಸಿ ಉಳಿದ ಯಾವತ್ತೂ ಬಾಲ್ಕನ್ನರು ಧರ್ಮಾಸಕ್ತರಾಗಿದ್ದು ಅವರೆಲ್ಲರ ಬಯಕೆಯು ಪರಕೀಯರ ವಶಕ್ಕೆ ಹೋಗಿರುವ ತಮ್ಮ ಪವಿತ್ರಸ್ಥಾನವು ಪುನಃ ಕ್ರೈಸ್ತರ ಹಸ್ತಗತವಾಗಬೇಕೆಂಬದಾಗಿತ್ತು. ಇದು ರಶಿಯಾದವರಿಗಷ್ಟೇ ಸಾಧ್ಯವಿತ್ತು. ಬಾಲ್ಕನರನ್ನು ಆಸ್ಟ್ರಿಯದವರ ವಶಕ್ಕೆ ಕೊಡಬೇಕೆಂದು ಜರ್ಮನಿಯ ಉದ್ದೇಶವಿತ್ತು. ಅದಕ್ಕಾಗಿ ವಿಯೆನ್ನಾದಿಂದ ಕಾನಸ್ಟಾಂಟಿನೋಪಲಿಗೆ ಹೋಗುವ ರೇಲ ಮಾರ್ಗವನ್ನು ಅದಷ್ಟು ಸಾಹಸ ಮಾಡಿ ತಮ್ಮ ವಶದಲ್ಲಿಟ್ಟುಕೊಳ್ಳಬೇಕೆಂದು ಜರ್ಮನ್ನರ ನಿಶ್ಚಯವಿತ್ತು. ಆದ್ದರಿಂದಲೇ ಈ ವಿಷಯವು ಕಳೆದ ೫೦ ವರ್ಷಗಳಲ್ಲಿ ಜರ್ಮನ್ನರು ಇತರ ಯುರೋಪದ ಜನಾಂಗದವರ ಸಂಗಡ ನಡೆಯಿಸಿದ ರಾಜ್ಯವ್ಯವಹಾರದ ಮುಖ್ಯ ಬೀಜವಾಗಿತ್ತು. ಈ ಹೇತುವನ್ನು ಕೊನೆಗಾಣಿಸಲಿಕ್ಕೆ ಜರ್ಮನ್ನರು ಬಹು ಜಾಗ್ರತೆಯಿಂದಲೂ ದೂರ ದೃಷ್ಟಿಯಿಂದಲೂ ಪ್ರಯತ್ನ ಮಾಡುತ್ತಿದ್ದರು. ಈ ಸ್ವಾಭಾವಿಕ ಗುಣದಿಂದಲೇ ಅವರು ಬೇರುಗೊಳ್ಳುತ್ತಿರುತ್ತಾರೆ. ಮೇಲೆ ಹೇಳಿದ ಹೇತುವನ್ನು ಸಿದ್ಧಿಗೆ ಒಯ್ಯುವದಕ್ಕಾಗಿ ಜರ್ಮನ್ ರಾಜಕುಮಾರಿಯರನ್ನು ಬಾಲ್ಕನ್ನ ಸಂಸ್ಥಾನಿಕರೊಡನೆ ಮದುವೆ ಮಾಡಿ, ಅವರ ಮುಖಾಂತರವಾಗಿ ಜರ್ಮನ್ ಪರಿವಾರವನ್ನೂ ಜರ್ಮನ್ ಹಣವನ್ನೂ ತಂದು ತುಂಬಿ, ಅವುಗಳ ಯೋಗದಿಂದ ಬಾಲ್ಕನ್ ಪ್ರದೇಶಗಳಲ್ಲಿ ಜರ್ಮನಿಯ ವಿಷಯದಲ್ಲಿ ಪ್ರೀತಿಯನ್ನುಂಟು ಮಾಡಿದರು. ಬಾಲ್ಕನ್ ಯುದ್ಧವು ಆರಂಭವಾಗಲು ಅದರಿಂದುಂಟಾದ ತೊಂದರೆಗಳ ದ್ವಾರದಿಂದ ತಮಗೆ ಇಷ್ಟವಾದ ಲಾಭಗಳನ್ನು ಮಾಡಿಕೊಡಲಿಕ್ಕೆ ಜರ್ಮನ್ನರಿಗೆ ಅವಕಾಶ ದೊರಕಿತು. ಹೀಗಾಗಿ ಬಲ್ಗೇರಿಯವೂ ಗ್ರೀಸವೂ ಜರ್ಮನಿಯಿಂದ ಮೋಹಿತವಾದವು. ಸರ್ವಿಯವು ಮಾತ್ರ ಜರ್ಮನ್ನರ ಮೋಹ ಪಾಶದಲ್ಲಿ ಶಿಲ್ಕಲಿಲ್ಲ. ಆದದರಿಂದಲೇ ಸನ್ ೧೯೧೪ನೇ ಇಸವಿಯ ಜುಲಾಯಿ ತಿಂಗಳಲ್ಲಿ ಜರ್ಮನಿಯವರು ಆಸ್ಟ್ರಿಯಾ ಹಂಗೇರಿಯದವರಿಗೆ "ಎಷ್ಟು ತೊಂದರೆಯಾದರೂ ಚಿಂತೆಯಿಲ್ಲ. ಸರ್ವಿಯದ ಜನರನ್ನು ಮುರಿದು ಹಾಕಿರಿ; ಅದಕ್ಕಾಗಿ ರಶಿಯನ್ನರ ಸಂಗಡ ಯುದ್ಧವೊದಗಿದರೂ ಚಿಂತೆಯಿಲ್ಲ." ಎಂದು ಸೂಚಿಸಿ, ಆಸ್ಟ್ರಿಯನ್ನರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು. ಇದೆಲ್ಲ ಸಾಹಸವನ್ನು, ಬರ್ಲಿನ್-ಕಾನಸ್ಟಾಂಟಿನೋಪಲ್ ರೇಲ ಮಾರ್ಗಕ್ಕೆ ವಿರೋಧಿಯಾಗಬಹುದಾದವರೆಲ್ಲರನ್ನು ನಿರ್ಮೂಲ ಮಾಡಿ ಬಿಡುವದಕ್ಕಾಗಿಯೇ ಕೈಕೊಂಡಂತಾಯಿತು. ಆದ್ದರಿಂದಲೇ ರಶಿಯಾದಲ್ಲಿ ಅಕಸ್ಮಿಕವಾಗಿ ಒದಗಿದ ದುರ್ಧರ ಯಾದನಿಯಿಂದ ವ್ಯಾಪ್ತವಾದ ಬಲಹೀನತೆಯು

ಲೂ, ಸರ್ವನಾಶದಿಂದಲೂ ಸಮ್ಮಿಲಿತರಾಷ್ಟ್ರಗಳಿಗೆ ಬಹು ಹಾನಿಯುಂಟಾಯಿತು. ಏಕೆಂದರೆ ಈ ಅಪಘಾತಗಳ ಮೂಲಕವಾಗಿ ಯುರೋಪ ಖಂಡದಲ್ಲಿ ಜರ್ಮನ್ನರ ಬಿಳಿಗೆಯ ಪ್ರವಾಹವನ್ನು ನಿಲ್ಲಿಸುವ ಸಂಭವವೇ ಇಲ್ಲದಂತಾಯಿತು. ಪೂರ್ವ ದೇಶದಲ್ಲಿ ಂತತೆಯನ್ನು ಇಟ್ಟುಕೊಳ್ಳಲಿಕ್ಕೆ ನಮಗೆ ಇನ್ನು ಒಂದೇ ಮಾರ್ಗವು ಉಳಿದಿರುತ್ತದೆ. ದು ಯಾವದೆಂದರೆ— ಈ ರೇಲ ಮಾರ್ಗದ ತೀರ ದಕ್ಷಿಣ ಭಾಗದ ಮೇಲೆ ಹರಿದು ಳುವದು.

ನನ್ನ ೧೯೦೨ನೇ ಇಸವಿಯಲ್ಲಿಯೇ ನೌಕಾಶಾಸ್ತ್ರ ಪ್ರವೀಣನಾದ ಸುಪ್ರಸಿದ್ಧ ಮೀಹನ್ನ ನೆಂಬ ಸೇನಾನಾಯಕನು ಇಂಗ್ಲಂಡದವರಿಗೆ ಸಾರಿಹೇಳಿದ್ದೇನೆಂದರೆ, ರಾಣೀ ಆಖಾತದಲ್ಲಿ ಯಾವ ಪರರಾಷ್ಟ್ರವನ್ನೂ ಪ್ರಬಲವಾಗಗೊಡಬಾರದು. ಈ ೂಚನೆಯ ಸಮರ್ಥನಕ್ಕಾಗಿ ಅವನು ಮೂರು ಕಾರಣಗಳನ್ನು ತೋರಿಸಿದನು, ವು ಯಾವವೆಂದರೆ—

(೧) ಇರಾಣೀ ಆಖಾತದ ರಾಜಕೀಯ ಅಧಿಪತ್ಯವು ಇಂಗ್ಲಂಡಕ್ಕೆ ಪ್ರತಿಕೂಲವಾವರ ಕೈಯಲ್ಲಿ ಹೋದರೆ, ಹಿಂದುಸ್ತಾನದಲ್ಲಿ ಬ್ರಿಟಿಶರ ಸ್ಥಿರತೆಗೆ ಬಾಧೆಬರುವದು.

(೨) ಬ್ರಿಟಿಶ ಸಾಮ್ರಾಜ್ಯದ ಘನವಾದ ಸಮುದ್ರಮಾರ್ಗಕ್ಕೆ ಅಂಜಿಕೆಯುಂಟಾಗುದು. ಈ ಮಾರ್ಗವು ಸುಯೇಜಕಾಲುವೆಯ ಮೇಲಿಂದ ಹಿಂದುಸ್ತಾನಕ್ಕೂ ದೂರತರವಾದ ಪೂರ್ವದೇಶಗಳಿಗೂ, ಆಸ್ಟ್ರೇಲಿಯಕ್ಕೂ, ನ್ಯೂಝಿಲಂಡಕ್ಕೂ ಹೋಗುತ್ತಿದ್ದುದು ಇರಾಣೆ ವಿರೋಧಿಗಳ ಕೈವಶವಾದರೆ, ಏಡನ್ ಮತ್ತು ಸುಯೇಜದ ಕಾಲುವೆಗಳೇ ನಮಗೆ ಬೀಸರವಾಗುವವು.

(೩) ಬ್ರಿಟಿಶಸಾಮ್ರಾಜ್ಯದ ಮುಖಾಂತರವಾಗಿ ಹಿಂದುಸ್ತಾನಕ್ಕೆ ಉಂಟಾಗುತ್ತಿರುವ ದೇಶೋನ್ನತಿಯೂ ವ್ಯಾಪಾರಸಂಬಂಧವಾದ ಲಾಭವೂ ಹಾಳಾಗಿ ಹೋಗುವು. ಬಸರಾ ಅಥವಾ ಕೋವೇಟದಲ್ಲಿ ಜರ್ಮನ್ನರಿಗೆ ತಳವೊರೆತರೆ, ಕರಾಚಿ, ಮುಂಬಯಿ, ಕೋಲಂಬೋ ಈ ಬಂದರಗಳು ತುಬಾಕೆಯ ಬಾಯಿಗೆ ಗುರಿಯಾದಂತಾಗುವವು.

ಬಲಿಷ್ಠವಾದ ನೌಕಾತಳದ ಬೆಂಬಲವುಳ್ಳ ಪರರಾಷ್ಟ್ರದ ಕೈಯಲ್ಲಿ ಇರಾಣೀ ಆಖಾತದ ಆದಿಪತ್ಯವು ಸೇರಿದರೆ, ಭೂಮಧ್ಯಸಮುದ್ರದಲ್ಲಿ ಜಿಬ್ರಾಲ್ಟರ ಮತ್ತು ಮಾಲ್ಟಾ ದ್ವೀಪಗಳ ಯೋಗದಿಂದ ನಮಗೆ ಎಷ್ಟು ಸೌಕರ್ಯವು ಪ್ರಾಪ್ತವಾಗುತ್ತಿರುವದೋ ಅಷ್ಟೇ ಸೌಕರ್ಯವು ಪರರಾಷ್ಟ್ರಕ್ಕೆ ಹಿಂದೀ ಮಹಾಸಾಗರದಲ್ಲಿ ಪ್ರಾಪ್ತವಾಗುವದು. ಹೇಳಿಸಿದ ಪ್ರಸಂಗದಲ್ಲಿ ಮೇಲೆ ಇರಾಣೀ ಆಖಾತವು ಬ್ರಿಟಿಶ ಸಾಮ್ರಾಜ್ಯದ ಸರಳುಗಳ

ಜಲಮಾರ್ಗವನ್ನು ಸುತ್ತುಗಟ್ಟುವದು. ಈ ಪ್ರಕಾರದ ನೌಕಾತಳವನ್ನು ಹಾರಿಸಿಬಿಡ
ಸಾಮರ್ಥ್ಯವು ಇಂಗ್ಲಂಡಕ್ಕೆ ಇದ್ದರೂ ಅದು ಬಹು ಕಷ್ಟಸಾಧ್ಯವಾದ ಮಾ
ಯಾಕಂದರೆ, ಆ ತಳಕ್ಕೆ ಯುದ್ಧಸಾಹಿತ್ಯಗಳ ಪೂರೈಕೆಯು ಯುರೋಪಖಂಡದಿಂದ
ಆಗುವದಾದ್ದರಿಂದ ಅದನ್ನು ಕತ್ತಿಸುವದಾದರೆ ಬಹುಬಲಿಷ್ಠವಾದ ನೌಕಾಸೈನ್ಯವ
ಕಳುಹಬೇಕಾಗುವದು. ಇಂಥ ನೌಕಾಸೈನ್ಯವನ್ನು ಕಳುಹಿದರೆ ಇಂಗ್ಲಂಡಕ್ಕೆ ಉ
ಸಮುದ್ರದಲ್ಲಿರುವ ಶ್ರೇಷ್ಠತ್ವವು ಕಡಿಮೆಯಾಗಲಿಕ್ಕೆಬೇಕು. ಅಡ್ಮಿರಲ್ ಮೇಹನ್ನ
ತನ್ನ ಸೂಚನೆಯ ಕೊನೆಗೆ ಹೇಳಿರುವದೇನೆಂದರೆ— "ಹ್ಯಾಂಬರ್ಗದಿಂದ ಇರಾ
ಅಖಾತದವರೆಗೆ ಜರ್ಮನ್ನರು ಮಾಡಲಿಚ್ಛಿಸುವ ಲೋಹಮಾರ್ಗವನ್ನು ಯ
ನೆವ ಹೇಳಿದರೂ ಮಾಡಗೊಡಲೇಬಾರದು. ಅದನ್ನು ಮಾಡಗೊಡದಿರುವದ
ಎಷ್ಟು ಹಣ ವೆಚ್ಚವಾದರೂ ಚಿಂತೆಯಿಲ್ಲ. ಜರ್ಮನ್ನರ ಈ ಯೋಜನೆ
ಕೊನೆಗಂಡರೆ ಜಗತ್ತಿನೊಳಗಿನ ಎಲ್ಲ ರಾಷ್ಟ್ರದವರ ಸಮುದ್ರಾಧಿಪತ್ಯಕ್ಕೆ ಹ
ಯುಂಟಾಗದೆ ಬಿಡದು." ಈ ಮತವನ್ನು ನಿಷ್ಪಕ್ಷಪಾತಿಯಾದ ಮತ್ತು ಸಂಬ
ರಹಿತನಾದ ವಿದ್ವಾಂಸನು ಕೊಟ್ಟಿರುವದರಿಂದ ಅದು ಮಹತ್ವವುಳ್ಳದ್ದಾಗಿರುತ್ತ
ಅದರಿಂದ ಸ್ಪಷ್ಟವಾಗಿಯೂ ನಿರ್ಣಯಾತ್ಮಕವಾಗಿಯೂ ಕಂಡುಬರುವದೇನಂದರೆ
ಜರ್ಮನ್ನರಿಗೆ ಕೆಂಪು ಸಮುದ್ರದಲ್ಲಿಯಾಗಲಿ, ಇರಾಣೀ ಅಖಾತದಲ್ಲಿಯಾಗ
ನೌಕಾತಳವನ್ನು ಯಾವದೇ ಕಾರಣದಿಂದಲೂ ಸ್ಥಾಪಿಸಗೊಡದಂತೆ ಯತ್ನಿಸುವ
ಇಂಗ್ಲಂಡದ ಹಾಗು ಹಿಂದುಸ್ಥಾನದ ಸಮವಾದ ಕರ್ತವ್ಯವಾಗಿರುತ್ತದೆ. ಮತ್
ಈ ಕರ್ತವ್ಯಕ್ಕಾಗಿಯೇ ಈಗ ನಾವು ಸೀರಿಯಾ ಮತ್ತು ಮೆಸೋಪೊಟೇಮಿಯ
ಗಳಲ್ಲಿಯ ಯುದ್ಧಗಳಲ್ಲಿ ತೊಡಗಿರುತ್ತೇವೆ. ಇನ್ನು ನೌಕಾತಳವನ್ನು ಸ್ಥಾಪಿ
ವದಾದರೆ ಅದಕ್ಕೆ ರೇಲಮಾರ್ಗವು ಅವಶ್ಯವಾಗಿ ಬೇಕು. ಆದದರಿಂದಲೇ ಅಲೆಪ್ಪೊ
ಬಂದರವನ್ನು ನಮ್ಮ ಕೈಯಲ್ಲಿ ತಕ್ಕೊಳ್ಳುವದೂ, ಮತ್ತು ಅದರ ದಕ್ಷಿಣಕ್ಕಿರುವ ರೇ
ಮಾರ್ಗದ ಸ್ವಾಮಿತ್ವವನ್ನು ನಮ್ಮ ಆಧೀನದಲ್ಲಿಟ್ಟುಕೊಳ್ಳುವದೂ ಅತಿಮಹತ್ವದ ಸಂ
ತಿಗಳಾಗಿರುತ್ತವೆ. ಇಲ್ಲಿಯವರೆಗೆ ಹೇಳಿದ ವಿಚಾರಗಳ ಯೋಗದಿಂದ ಸಾಂಪ್ರತಕ್ಕೆ ನಡೆ
ಯುದ್ಧದಲ್ಲಿ 'ಬ' ಚತುಷ್ಟಯಾತ್ಮಕ ರೇಲಮಾರ್ಗವು ಅತಿ ಮಹತ್ವದ್ದಾಗಿರುವದೆಂಬದು
ಸಿದ್ಧವಾಯಿತೆಂದು ನಾನು ನಂಬುತ್ತೇನೆ.

ಇದೇ ಪೇರೆಗೆ ಮಧ್ಯಪೀಠಿಯಾದ ರೇಲ್ವೆ ಮಾರ್ಗದ ಮಾ[illegible]ಕೆ (ಸಮುದಾಯ
ಯಾದರೂ ಬಹುಮಹತ್ವದ್ದಾಗಿರುತ್ತದೆ. ಹಿಂದುಸ್ಥಾನದ ಮೇಲೆ ದಂಡೆತ್ತಿ ಬರುವ

ವಾಯವ್ಯದ ಸರಹದ್ದಿನ ಘಟ್ಟಗಳೊಳಗಿಂದ ಮಾತ್ರ ಅಸ್ಪದವುಂಟೆಂಬ ಸಂಗತಿಯು
ಗೆ ತಿಳಿದದೆ. ಆ ಘಟ್ಟಗಳಿಂದರೆ, ಉತ್ತರದಲ್ಲಿ ಖೈಬರಘಟ್ಟ ಮತ್ತು ಅದರ ಕೆಳ
ಗದಲ್ಲಿ ದಕ್ಷಿಣಕೆ ಬೋಲನ್ ಘಟ್ಟವು. ಈವೊತ್ತಿನವರೆಗೆ ಹಿಂದುಸ್ತಾನದ
ಲೆ ನೆಲದಮೇಲಿಂದ ಬಂದ ಎಲ್ಲ ದಾಳಿಗಳು ಈ ಘಟ್ಟಗಳಿಂದಲೇ ಬಂದಿರುವವು.
ಲೆಗ್ಯಾಂಡರ ದಿ ಗ್ರೇಟನೂ, ಮುಂಚಿನ ಮುಸಲ್ಮಾನರೂ, ತೈಮೂರಲಂಗ ಮತ್ತು
ಬಶ ಇವರ ಅನುಯಾಯಿಗಳಾದ ಮೊಗಲರೂ ನಾದಿರಶಹನ ಕೈಕೆಳಗಿರುವ ಇರಾ
ನೂ, ದುರಾನೀ ಅಹಮ್ಮದಶಹನ ಕೈಕೆಳಗಿನ ರೋಹಿಲರೂ ಇವೇ ಘಟ್ಟಗಳಿಂದ
ದರು.

ಆಧುನಿಕ ಕಾಲದಲ್ಲಿ ಭೂಮಿಯ ಮೇಲಿಂದ ಹಿಂದುಸ್ತಾನಕ್ಕೆ ದಾಳೀ ಮಾಡುವ
ಲ್ಪನೆಯನ್ನು ನೆಪೋಲಿಯನನು ಸನ್ ೧೮೦೭ನೇ ಇಸವಿಯಲ್ಲಿ ಪುನರುಜ್ಜೀವನ ಮಾಡಿ
ನು. ಯಾಕಂದರೆ ಆ ವರುಷ ಆತನು ಇಜಿಪ್ತದ ಮೇಲಿಂದ ಪೂರ್ವದೇಶಗಳಿಗೆ
ೋಗಬೇಕೆಂದು ಯೋಚಿಸಿದನು. ಯಾವತ್ತೂ ಯತ್ನಗಳು ಪೂರಾ ನಿಷ್ಫಲವಾ
ವು. ಫ್ರೇಂಚರೂ ರಶಿಯನ್ನರೂ ಒಂದಾಗಿ ಉತ್ತರ ಇರಾಣದೊಳಗಿಂದ ದಂಡೆತ್ತಿ ಬರ
ಕೆಂದು ನೆಪೋಲಿಯನ್ನನ ಅಭಿಪ್ರಾಯವಿತ್ತು. ಆದರೆ ಆತನ ಮನಸ್ಸು ಯುರೋಪ
ಂಡದಲ್ಲಿಯ ಯುದ್ಧಗಳಲ್ಲಿ ಪೂರ್ಣವಾಗಿ ತೊಡಗಿದ್ದರಿಂದ ಆತನು ಈ ಕಲ್ಪನೆಯನ್ನು
ಸ್ಟು ಬಿಟ್ಟನು. ಆದರೂ ಅಂದಿನಿಂದ ರಶಿಯನ್ನರು ಹಿಂದುಸ್ತಾನದ ಮೇಲೆ ದಂಡೆತ್ತಿ
ುವರೆಂಬ ಅಂಜಿಕೆಯು ಹಿಂದುಸ್ತಾನದ ರಾಜ್ಯನಿಯಾಮಕರ ಮನಸ್ಸಿನಲ್ಲಿ ಯಾವಾ
ೂ ಕುದಿಯಹತ್ತಿ ಏಶಿಯಾ ಮೈನರದ ಮೇಲಿಂದ ಜರ್ಮನ್ನರು ದಂಡೆತ್ತಿ ಬರುವ
ಜಗಂಡಾಂತರವನ್ನು ಪೂರಾ ದುರ್ಲಕ್ಷಿಸಿ ಬಿಟ್ಟರು. ರಶಿಯದವರ ದಾಳಿಯ ಅಂಜಿಕೆ
ು ಸ್ಥಿರವಾಗದಂತೆ ಜರ್ಮನ್ನರು ತಮ್ಮಿಂದಾದಷ್ಟು ಯತ್ನ ನಡೆಯಿಸಿ ಪಶ್ಚಿಮದಲ್ಲಿ
ವು ನಡಿಸಿದ ಯುಕ್ತಿಗಳ ನಿಜಸ್ವರೂಪವು ವ್ಯಕ್ತವಾಗದಂತೆ ಮಾಡಿದರು. ರಶಿಯ
ರು ಖಂಡಿತವಾಗಿ ಹಿಂದುಸ್ತಾನದ ಮೇಲೆ ಸಾಗಿ ಬರಬೇಕೆಂದು ಇಚ್ಛಿಸುತ್ತಿದ್ದರೋ,
ಥವಾ ಉತ್ತರ ಇರಾಣ ಮತ್ತು ತುರ್ಕಸ್ತಾನಗಳನ್ನು ತಮ್ಮ ಕೈವಶ ಮಾಡಿ
ಳ್ಳುವ ಮಟ್ಟಿಗೆ ಹವಣಿಸುತ್ತಿದ್ದರೋ ಇದನ್ನು ನಿಶ್ಚಯವಾಗಿ ಹೇಳಲಿಕ್ಕೆ ಬರು
ದಿಲ್ಲ. ಆದರೂ ಉತ್ತರ ಇರಾಣ ಮತ್ತು ತುರ್ಕಸ್ಥಾನಗಳು ದೊರೆಯುವದರಿಂ
ದೇ ರಶಿಯದ ಬಿಳವಣಿಗೆಗೆ ಬೇಕಾದ ಯಾವತ್ತು ಅನುಕೂಲಗಳ ಪೂರೈಕೆಯಾಗುವಂತಿ
ರುವದು ನಿಜವು. ಒಳ್ಳೇ ಕಸುವಿನ ಭೂಮಿಯುಳ್ಳ ಮತ್ತು ಅತ್ಯುತ್ತಮ ಹವೆಯುಳ್ಳ
ೀರಾತ ಪ್ರಾಂತದ ಮೇಲೆ ರಶಿಯನ್ನರು ಕಣ್ಣಿಟ್ಟಿದ್ದರೆಂಬದು ಪ್ರಸಿದ್ಧವಾದ ಮಾತು.

ರಶಿಯನ್ನರಿಗೆ ಹಿಂದುಸ್ತಾನದ ಮೇಲೆ ಪ್ರತ್ಯಕ್ಷವಾಗಿ ದಂಡೆತ್ತಿಬರುವದು ಸಾಧ್ಯ ಇದ್ದಿಲ್ಲ. ಯಾಕಂದರೆ ಅಷ್ಟು ದೀರ್ಘವಾದ ಮಾರ್ಗವನ್ನು ರಕ್ಷಿಸುವದು ಬಹು ಪ್ರಯಾಸವಾದ ಕೆಲಸವು. ಮತ್ತು ಅವರ ಹತ್ತರ ಸಾಕಷ್ಟು ಉಗೆಬಂಡಿಗಳ ಸಾಮಗ್ರಿಯು ಇಲ್ಲ. ಮೇಲಾಗಿ ತಮ್ಮ ದೇಶದಲ್ಲಿ ದಂಗೆಗಳಾಗುವ ಭೀತಿಯು ಅವರನ್ನು ಯಾವಾಗಲೂ ಎದೆಗುಂದಿಸುತ್ತಿತ್ತು. ಆದರೂ ರಶಿಯದ ರಾಜ್ಯವನ್ನು ಹೆಚ್ಚಿಸಬೇಕೆಂಬ ಮತವು ಪಕ್ಷದವರು ಕೆಲವು ಕಾಲ ಹಿಂದುಸ್ತಾನದ ಮೇಲೆ ಸಾಗಿ ಹೋಗುವ ಕಲ್ಪನೆಗೆ ತುಂಬ ಅನುಕೂಲರಾಗಿದ್ದರು. ಅದರಿಂದಲೇ ಸನ್ ೧೮೭೫ನೇ ಇಸವಿಯಲ್ಲಿ ಸ್ಕೊಬೆಲೆವ ನೆಂಬವನೂ ಮತ್ತು ಆಮೇಲೆ ಹತ್ತುವರ್ಷಗಳನಂತರ ಅವನ ಶಿಷ್ಯನಾದ ಕ್ಯೂರೋಪಟಕಿನ್‌ನೆಂಬುವನೂ ಈ ಸಾಹಸವನ್ನು ನೆರವೇರಿಸಲಿಕ್ಕೆ ಅವಶ್ಯವಿರುವ ಯಾವ ವಿಷಯಗಳ ಬಗ್ಗೆ ಬಹು ವಿಸ್ತಾರವಾಗಿ ಬರೆದಿಟ್ಟಿರುವರು. ಅದು ಹ್ಯಾಗೇ ಇರಲಿ. ನಾ ಈಗ ಲಕ್ಷ್ಯದಲ್ಲಿಡತಕ್ಕದ್ದೇನಂದರೆ, ರಶಿಯನ್ನರು ತಾವು ಆಕ್ರಮಿಸಿಕೊಂಡಪ್ರದೇಶಗಳ ಯುದ್ಧಪ್ರಸಂಗಕ್ಕೆ ಚನ್ನಾಗಿ ಉಪಯೋಗವಾಗುವಂಥ ರೇಲಮಾರ್ಗಗಳನ್ನು ನಿರ್ಮಾಣ ಮಾಡಿ ತಮ್ಮ ಸ್ಥಿತಿಯನ್ನು ಸೆಲೆಗೊಳಿಸುತ್ತಿದ್ದರು. ಇಂಥ ರೇಲಮಾರ್ಗಗಳು ಯಾವವೆಂದರೆ, (೧) ತೀರ ಉತ್ತರಕ್ಕಿರುವ ಮಾರ್ಗವು. ಮಾಸ್ಕೋದಿಂದ ಉತ್ತರ ತುರ್ಕಸ್ತಾನದ ರಾಜಧಾನಿಯಾದ ವೋರೆನ್‌ಬರ್ಗಕ್ಕೆ, ಬಂದು ಅಲ್ಲಿಂದ ಸಮರ್ಕಂದದ ಮೇಹಾಯ್ದು ಪಾಮೀರದ ಪರ್ವತಗಳವರೆಗೆ ಹೋಗಿರುವದು. (೨) ಇನ್ನೊಂದು ಮಾರ್ಗವೂ ಸ್ಕೋದಿಂದ ಬಾಕೂಕ್ಕೆ ಹೋಗುತ್ತದೆ. (೩) ಮತ್ತೊಂದುಮಾರ್ಗವು ಬಾಟುಮದಿಂದ ಬಾಕೂಕ್ಕೆ ಹೋಗುತ್ತದೆ. ಬಾಕೂದಿಂದ ಹೊಗೆ-ಡೋಣಿಗಳ ಸಹಾಯದಿಂದ ಕಾಸ್ಪಿಯನ್ ಸಮುದ್ರದ ಪೂರ್ವದಂಡೆಯ ಮೇಲಿರುವ ಕ್ರಾಸನೋವ್ಹೋಡಸ್ಕ ಹೋಗಲಿಕ್ಕೆ ಬರುತ್ತದೆ. ಈ ಕ್ರಾಸನೋವ್ಹೋಡಸ್ಕದಿಂದ ಅತಿ ಮಹತ್ವವುಳ್ಳ ಮತ್ತು ಚಿತ್ತಾಕರ್ಷಕವಾದ ರೇಲಮಾರ್ಗವು ಹೊರಟು ಮೊದಲು ಅಸ್ಕಾಬಾದಕ್ಕೆ ಹೋಗುತ್ತದೆ. ಅಲ್ಲಿಂದ ವ್ಯಾಪಾರಸ್ತರ ಗುಂಪುಗಳು ಉತ್ತರ ಇರಾಣಕ್ಕೆ ಕಾಲುದಾರಿಯಿಂದ ಹೋಗುತ್ತವೆ. ಮತ್ತು ಈ ಅಸ್ಕಾಬಾದವೇ ರಶಿಯನ್ನರ ಮತ್ತು ಇರಾಣದವರ ಹದ್ದುಗಳ ಮಧ್ಯಸ್ಥಳವಾಗಿರುತ್ತದೆ. ಅಸ್ಕಾಬಾದದಿಂದ ಈ ರೇಲಮಾರ್ಗವು ಮರ್ವಕ್ಕೆ ಹೋಗುತ್ತದೆ. ಅಲ್ಲಿಂದ ಹೀರಾಕ್ಕೆ ಮತ್ತು ಉತ್ತರ ಅಫಗಾಣಿಸ್ಥಾನಕ್ಕೆ ಅದರ ಶಾಖೆಗಳು ಹೊರಡುತ್ತವೆ. ಕಡೆಗೆ ಈ ಮಾರ್ಗವು ಬುಖಾರಿ ಸಮರ್ಕಂದಗಳ ಮೇಲೆ ಹಾಯ್ದು ಪಾಮೀರದ ಪರ್ವತಗಳಲ್ಲಿಯು ಉತ್ತರದಿಕ್ಕಿನ ಮುಖ್ಯ ರೇಲಮಾರ್ಗಕ್ಕೆ ಸೇರುತ್ತದೆ.

ಶಿಷ್ಟಾಗಮನವು.



ಪವಿತ್ರನಾದ ವಿದ್ಯಾದಾನದ ಕಾರ್ಯವು ಗುಪ್ತರೀತಿಯಿಂದ ನಡೆಯಬೇಕೆನ್ನುವದು ವ್ಯವಹಾರಕ್ಕೆ ಒಪ್ಪಿಗೆಯಾಗದ ಮಾತಾಗಿದೆ. ಅಂತೇ ಶಾಲೆಯ ಕೆಲಸವು ಹೇಗೆ ನಡೆಯುವದೆಂಬದನ್ನು ಪ್ರತಿಯೊಬ್ಬ ಸಂಭಾವಿತರು ನೋಡಲಿಕ್ಕೆ ಅಡ್ಡಿಯಿರುವದಿಲ್ಲ, ವಿದ್ಯಾಖಾತೆಯ ಅಧಿಕಾರಿಗಳ ಹೊರತು ಉಳಿದ ಖಾತೆಯ ಅಧಿಕಾರಿಗಳು, ಶಾಲೆಯ ಪಂಚರು, ಇನಾಮುದಾರರು, ಬೇರೆ ಖಾಸಗೀ ದೊಡ್ಡ ಮನುಷ್ಯರು ಮುಂತಾದವರು ಶಾಲೆಗೆ ಬರುವರು. ಇವರಂತೆ ತೀರ ಬಡವನಾದ ಒಬ್ಬ ಗೊಂಗಡಿಯ ಸಂಗಡಿಗನು ಶಾಲೆಗೆ ಬಂದು ದೂರ ಕುಳಿತು ತನ್ನ ಮಗನ ವಿದ್ಯಾ-ಬುದ್ಧಿಯನ್ನು ನೋಡುತ್ತಿರುವನು ಹೀಗೆ ಶಾಲೆಯು ಸಂಭಾವಿತರ ಬಗ್ಗೆ ಬಹಳ ಮಟ್ಟಿಗೆ ಸಾರ್ವಜನಿಕವಾಗಿದೆ.

शिष्टागमने अनध्यायः ಎಂಬವಾತು ಪ್ರಾಚೀನ ಕಾಲದ ಗುರುಕುಲಗಳೆಂಬ ವಿದ್ಯಾಪೀಠಗಳ ಬಗ್ಗೆಮಾತ್ರ ಇತ್ತು. (ನಾಲಂದ, ತಕ್ಷಶಿಲೆ) ಮುಂತಾದ ಗುರುಕುಲಗಳಲ್ಲಿ ಹತ್ತತ್ತು ಸಾವಿರ ವಿದ್ಯಾರ್ಥಿಗಳು ವಿದ್ಯೆ ಕಲಿಯುತ್ತಿದ್ದರು. ಇಂತಹ ಗುರುಕುಲಗಳಿಗೆ ರಾಜಾಧಿರಾಜರು ಎಲ್ಲ ಬಗೆಯಿಂದ ಸಹಾಯಮಾಡುತ್ತಿದ್ದರು. ತಾವು ಮಾಡುವ ಸಹಾಯವು ಸಾರ್ಥಕವೆಂದು ಮಣಗಾಣಲಿಕ್ಕೆ ರಾಜರು ಇಲ್ಲವೆ ರಾಜಪ್ರತಿನಿಧಿಗಳು ಗುರುಕುಲಗಳಿಗೆ ದಯಮಾಡಿಸುತ್ತಿದ್ದರು. ಅವರಂತೆ ಬೇರೆ ಲೋಕೋತ್ತರ ವಿದ್ವಾಂಸರೂ ದರ್ಶನಕೊಡುತ್ತಿದ್ದರು. ಅಂತಹ ಶಿಷ್ಟಜನರ ಆಗಮನವಾಗಲು ಗುರುಕುಲದೊಳಗಿನ ಶಿಷ್ಯಮಂಡಳಿಗೆ ಸಹಜವಾಗಿ ಅನಧ್ಯಾಯವು, ಅಂದರೆ ಅಭ್ಯಾಸಕ್ಕೆ ಸೂಟಿಯು ದೊರೆಯುತ್ತಿತ್ತು.

ಈಗ ಅಂಥ ದೊಡ್ಡ ದೊಡ್ಡ ಗುರುಕುಲಗಳಿಲ್ಲ. ಜನರಿಗೆ ತೀರಸುಲಭವಾಗಿ ವಿದ್ಯೆದೊರೆಯಬೇಕೆಂದು ಸಣ್ಣ ಸಣ್ಣ ಹಳ್ಳಿಗಳಲ್ಲಿ ಸಹ ಶಾಲೆಗಳು ಸ್ಥಾಪಿಸಲ್ಪಟ್ಟಿರುವವು. ವಿದ್ಯಾದಾನದ ಕೆಲಸವು ಚಲೋರೀತಿಯಿಂದ ಜರಗಬೇಕೆಂತಲೂ, ಆದಷ್ಟು ಹೆಚ್ಚು ಜನರ ಅನುಭವವು ವಿದ್ಯಾಖಾತೆಗೆ ದೊರೆಯಬೇಕೆಂತಲೂ ಪವಿತ್ರವಾದ ವಿದ್ಯಾದಾನದ ಕೆಲಸಕ್ಕೆ ಒದಗುವ ತೊಂದರೆಗಳನ್ನು ಪರಿಹರಿಸಲಿಕ್ಕೆ ಯೋಗ್ಯತೆಯುಳ್ಳ ಪ್ರತಿಯೊಬ್ಬ ದೇಶಾ

ಭಿಮಾನಿಯು ಮುಂದುವರಿಯಬೇಕೆಂತಲೂ ಶಾಲಾಮಂದಿರವು ಮೇಲೆ ಹೇಳಿದಂತೆ ಬಹಳ ಮಟ್ಟಿಗೆ ಸಾರ್ವಜನಿಕವಾಗಿ ಮಾಡಲ್ಪಟ್ಟಿದೆ. ಆದರೆ ಅದು ಬೇರೆ ತರದ ಕೆಲಸಗಳಿಗೂ ದುರ್ಜನರ ಪ್ರವೇಶಕ್ಕೂ ಅನರ್ಹವಿರುವದೆಂಬದನ್ನು ಮರೆಯಲಾಗದು. ಯೋಗ್ಯತೆಯುಳ್ಳ ಬಹುಜನರು ಪ್ರತಿವರ್ಷ ಶಾಲೆಗೆ ಬರುತ್ತಿರುವದರಿಂದ ಆ ಆ ಪ್ರಸಂಗಗಳಲ್ಲಿ ಸೂಟಿಯನ್ನು ಕೊಡುತ್ತ ಹೋದರೆ ವಿದ್ಯಾದಾನದ ಕೆಲಸವು ತೀರ ಕಡಿಮೆಯಾಗುವದು. ಆದ್ದರಿಂದ **शिष्टागमने अनध्यायः** ಎಂಬಮಾತು ಈಗಿನ ಪರಿಸ್ಥಿತಿಯಲ್ಲಿ ಸಾರ್ವಕಾಲಿಕವಾಗಲಾರದು.

ಶಿಷ್ಟಜನರು ಶಾಲೆಗೆ ಬಂದಾಗ ಶಿಕ್ಷಕರು ಶಾಲೆಯ ಕೆಲಸದ ಕೆಲವು ಭಾಗವನ್ನು ತೋರಿಸುವರು. ಪ್ರಾರಂಭಕ್ಕೆ ೧ ಸ್ವಾಗತಪರ ಪದ್ಯಗಳು, ೨ ವಿದ್ಯಾರ್ಥಿಗಳ ಡ್ರಿಲ್ಲು, ೩ ತಾಲೀಮು, ೪ ಸಂಭಾಷಣೆ, ೫ ಬಂದಸದ್ಗೃಹಸ್ಥರ ಸ್ತುತಿಪರಪದ್ಯಗಳು, ಇಷ್ಟು ಕಾರ್ಯಗಳು ಪ್ರಾಮುಖ್ಯವಾಗಿ ನಡೆಯುವವು. ಇವುಗಳ ಹೊರತು ೬ ಕಿಂಡರಗಾರ್ಟನದ ಕೆಲವು ಕೃತಿಗಳು, ೭ ಸಾಭಿನಯ ಪಾಠಗಳು, ೮ ಮೇಲಿನ ಇಯತ್ತೆಯ ಹುಡುಗರು ಕಾರ್ಯಕಾರಣಭಾವವನ್ನು ತಾವೇ ಹೇಳುತ್ತ ಮಾಡುವ ಸುಲಭ ಶಾಸ್ತ್ರೀಯ ಪ್ರಯೋಗಗಳು, ೯ ತಿಳ್ಳಿ ಫುಟ್‌ಬಾಲ್ ಮುಂತಾದ ಆಟಗಳು, ೧೦ ರಾಷ್ಟ್ರಗೀತ ಇವು ಸಹ ಕೆಲಕೆಲವು ಶಾಲೆಗಳಲ್ಲಿ ತೋರಿಸಲ್ಪಡುವವು. ಈ ಎಲ್ಲ ಸಂಗತಿಗಳು ಭಿನ್ನ ಭಿನ್ನ ಪರಿಸ್ಥಿತಿಯ ಮೂಲಕ ಎಲ್ಲ ಸಣ್ಣ ದೊಡ್ಡ ಶಾಲೆಗಳ ಶಿಕ್ಷಕರಿಗೆ ಸಾಧಿಸುವದಿಲ್ಲ. ಆದರೂ ಶಾಲೆಗೆ ಬಂದ ಸದ್ಗೃಹಸ್ಥರಿಗೆ ಬಹುಶಃ ಎಲ್ಲ ಶಿಕ್ಷಕರು ಮೇಲಿನವುಗಳಲ್ಲಿ ಒಂದೆರಡನ್ನಾಗಲಿ ಕೆಲವುಗಳನ್ನಾಗಲಿ ತೋರಿಸುತ್ತಿರುವರು. ಶಾಲೆಗೆ ಬಂದ ದೊಡ್ಡ ಮನುಷ್ಯರಿಗೆ ಆನಂದವಾಗಬೇಕು, ಅವರಿಗೆ ಶಾಲೆಯ ಕೆಲಸವು ಸಮಾಧಾನಕಾರಕವಾಗಿ ನಡೆದಿದೆ ಎಂದೆನಿಸಬೇಕು, ಎಂಬೀ ಉದ್ದೇಶಗಳಿಂದಲೇ ಶಿಕ್ಷಕರು ಮೇಲಿನ ಸಂಗತಿಗಳನ್ನು ತೋರಿಸುವರು.

ಮೇಲಿನ ಎಲ್ಲ ಸಂಗತಿಗಳು ಶಾಲೆಯ ಸುಸ್ಥಿತಿಯ ನಿದರ್ಶಕಗಳಾದರೂ ಅವೆಲ್ಲ ಬಹಿರಂಗದ ಕಾರ್ಯಗಳೆಂದು ಎಷ್ಟೋ ಶಿಷ್ಟಜನರು ತಿಳಕೊಳ್ಳುತ್ತಾರೆ. ಶಾಲೆಯ ಅಂತರಂಗದ ಸ್ಥಿತಿಯನ್ನು ಅಂದರೆ ವಿದ್ಯಾರ್ಥಿಗಳ ಅಭ್ಯಾಸಮಾನವನ್ನು ನೋಂಲಪೇಕ್ಷಿಸುವವರಿಗೆ ಮೇಲಿನ ಎಲ್ಲ

ಭಂಗತಿಗಳು ಗೌಣವಾಗಿ ತೋರುತ್ತವೆ. ಅಂತಹ ಕೆಲವರು "ಈಗಿನ ಕಾಲದಲ್ಲಿ ಎಲ್ಲಿ ನೋಡಿದರೂ ಶಾಲೆಗಳಲ್ಲಿ ಹೊರಗಿನ ಡೌಲು ಮಾತ್ರ ಹೆಚ್ಚಾಗಿದೆ. ನೋಡಿದಲ್ಲೆಲ್ಲ ಡ್ರಿಲ್ಲು, ತಾಲೀಮು, ಮುಖಸ್ತುತಿಯ ಪದ್ಯಗಳು ಇವೇ ಕಾಣುತ್ತವೆ. ಆದರೆ ಹುಡುಗರಿಗೆ ತೀರ ಸುಲಭಪ್ರಶ್ನಕೇಳಿದರೂ ಉತ್ತರ ದೊರೆಯುವದಿಲ್ಲ''ವೆಂದು ಉದ್ಗಾರ ತೆಗೆಯುತ್ತಾರೆ. ಅವರು ತಮಗೆ ಬಾಲ್ಯದಲ್ಲಿ ದೊರೆದ ಶಿಕ್ಷಣಕ್ಕೆ ಈಗಿನ ಶಿಕ್ಷಣವನ್ನು ಒರೆಹಚ್ಚುವರು. ಒಮ್ಮೊಮ್ಮೆ ಅವರಿಗೆ ಪ್ರತಿಯೊಂದು ವರ್ಗದ ಅಭ್ಯಾಸವಾನವು ಗೊತ್ತಿರುವದಿಲ್ಲ. ಅಂತಹ ಸದ್ಗೃಹಸ್ಥರೆದುರಿಗೆ ಹೊಸಪದ್ಧತಿಯ ಶಿಕ್ಷಣದ ಮಹತ್ವವನ್ನು ವರ್ಣಿಸುತ್ತ ಹೋಗುವದು ಅಲ್ಪಾವಕಾಶದಲ್ಲಿ ಸಾಧ್ಯವಲ್ಲ. ಆದರೆ ಹುಡುಗರ ಅಭ್ಯಾಸವು ಎಲ್ಲಿಯವರೆಗೆ ಆಗಿರುವದೆಂಬದನ್ನು ಪ್ರತ್ಯಕ್ಷಕೃತಿಯಿಂದ ತೋರಿಸಲಿಕ್ಕೆ ಬರುತ್ತದೆ. ಆ ಬಗ್ಗೆ ಪೂರ್ವಸಿದ್ಧತೆಯು ಮಾತ್ರ ವಿಶೇಷವಾಗಿ ಬೇಕಾಗುತ್ತದೆ. ಅದು ಒಂದೆರಡು ವಾರಗಳಲ್ಲಿ ಆಗುವಂತಿರುವದಿಲ್ಲ. ಪರೀಕ್ಷೆಯಾದ ಒಂದೆರಡು ವಾರಗಳಲ್ಲಿಯೇ ಆರಂಭಮಾಡಿ, ಪ್ರತಿದಿನ ಸತತವಾಗಿ ಅದರ ಬೆನ್ನು ಹತ್ತಿ ಆಗಿಂದಾಗ ಮಾಡಿದ ಹೊರತು ಸಿದ್ಧತೆಯಾಗಲಾರದು. ಶಿಕ್ಷಕರ ಕೆಲಸಕ್ಕೆ ಅತಿನಿಕಟವಾಗಿ ಸಂಬಂಧಿಸುವದರಲ್ಲಿ ಈ ಸಿದ್ಧತೆಯಂತೆ ಮುಖ್ಯವುದೂ ಇರುವದಿಲ್ಲ.

ಹೊರಗಿನಿಂದ ಬಂದ ದೊಡ್ಡ ಮನುಷ್ಯರು ವಿದ್ಯಾರ್ಥಿಗಳಿಗೆ ಯೋಗ್ಯತೆಯಿಲ್ಲದ ಪ್ರಶ್ನಕೇಳಲು, ಶಿಕ್ಷಕರು ಬರಿಯಬಾಯಿಂದ "ತಾವು ಕೇಳುವ ಪ್ರಶ್ನಕ್ಕೆ ಉತ್ತರ ಕೊಡುವಷ್ಟು ಮಟ್ಟಿಗೆ ವಿದ್ಯಾರ್ಥಿಗಳ ಅಭ್ಯಾಸವಾಗಿರುವದಿಲ್ಲ''ವೆಂದು ಹೇಳುವದು ಸರಿಯಾಗಲಾರದು. ಹುಡುಗರ ಅಭ್ಯಾಸವಾದಷ್ಟರ ಮಟ್ಟಿಗೆ ಅವರ ಕೈಕೆಲಸವನ್ನು ತೋರಿಸುವದು ಅವಶ್ಯವದೆ. ಮೇಲೆ ಹೇಳಿದ ಶಾಲೆಯ ಅಂತರಂಗದ ಸುಸ್ಥಿತಿಯ ನಿದರ್ಶಕವಾವುದೆಂದರೆ ವಿದ್ಯಾರ್ಥಿಗಳ ಕೈಕೆಲಸವೇ. ವಿದ್ಯಾರ್ಥಿಗಳ ಕೈಕೆಲಸದಲ್ಲಿ ಟಪ್ಪಣಿಯ ಪುಸ್ತಕಗಳು, ಕಾಪಿಯ ಬರಹ, ಡ್ರಾಯಿಂಗ, ಚಾಪಿಯ ಹೆಣಿಕೆ, ಸ್ಪ್ರಿಂಕಲ್ ವರ್ಕ್ಸ, ಕಾಗದ ಮಡಿಚಿಮಾಡಿದ ಆಕೃತಿಗಳು, ಕಾಗದ ಕತ್ತರಿಸಿ ಅಂಟಿಸಿ ಮಾಡಿದ ಆಕೃತಿಗಳು, ಅರಲಿನ ಆಕೃತಿಗಳು ಮುಂತಾದವುಗಳ ಸಮಾವೇಶವಾಗುತ್ತದೆ. ಇವೆಲ್ಲವು ಶಿಷ್ಟಜನರಿಗೆ

ರ್ಶನವೇ ಆಗುವದು. ಹುಡುಗರಲ್ಲಿ ಮೇಲಾಟ ಹುಟ್ಟುವಂತೆ ಚಲೊ
ಕೈಕೆಲಸಗಳನ್ನು ಒಡೆದುಕಾಣುವಂತೆ ಗೋಡೆಗೆ ಇಲ್ಲವೆ ಹಲಿಗೆಗೆ ಹಚ್ಚಿಡ
ವದೂ ಮೇಲಾದದ್ದು.

ಹೀಗೆ ಶಾಲೆಯ ಅಂತರಂಗದ ಸ್ಥಿತಿಯನ್ನು ವ್ಯಕ್ತಪಡಿಸುವ ಟಿಪ್ಪ
ಣಿಯ ಪುಸ್ತಕಗಳನ್ನು ಬರೆಯಿಸಲಿಕ್ಕೆ ಹಲವು ತೊಂದರೆಗಳುಂಟಾಗುವವು
ಹಳ್ಳಿಗಳಲ್ಲಿ ರೂಲುಹೊಡೆದ ಎಗ್ಜರಸಾಯಿಜ ಪುಸ್ತಕಗಳು, ಮಸಿಯಪುಡಿ
ಗಲಗು, ನಿಬ್ಬು, ಡ್ರಾಯಿಂಗಿನ ಕಾಗದಗಳು ಮುಂತಾದವುಗಳು ಸಿಕ್ಕುವ
ದಿಲ್ಲವೆಂಬದು ನಿಜವು. ಆದರೆ ಅವೆಲ್ಲವು ತಾಲೂಕಿನ ಸ್ಥಳದಲ್ಲಿ ಅಥವ
ಅಧರಷ್ಟೇ ಯೋಗ್ಯತೆಯ ದೊಡ್ಡ ಊರುಗಳಲ್ಲಿ ದೊರೆಯುವವು. ಪೆ
ಕಾಪಿ, ಕ್ರಮಿಕಪುಸ್ತಕ, ಇವುಗಳಿಗಾಗಿ ಸಹ ಹಣಕೊಡದಂಥ ದರಿದ್ರರಾದ
ತಾಯಿತಂದೆಗಳು ತಮ್ಮ-ಮಕ್ಕಳ ಕೈಕೆಲಸಗಳಿಗಾಗಿ ಹಣ ಕೊಡಲಿ
ಅಲ್ಲಗಳೆಯುವರೆಂಬದಾದರೂ ದಿಟವು. ಅಂಥ ಹುಡುಗರಿಗಾಗಿ ಸಮಥ
ಮಾಸ್ತರನು (Poor fund) ಪೂಅರ್ ಫಂಡನ್ನು ಕೂಡಿಸಿ ಅದರಿಂ
ಸಹಾಯ ಮಾಡಬಹುದು. ತನ್ನ ಶಾಲೆಯ ನಿತ್ಯಕಾರ್ಯದ ಪೂರ್ಣ
ಬೇರೀಜನ್ನು ಪ್ರತಿದಿನ ಮಾಡಿಯೇ ತೀರುವೆನೆಂಬ ನಿಶ್ಚಯವುಳ್ಳ ಶಿಕ್ಷಕರಿ
ಎಂಥ ದರಿದ್ರರಾದರೂ ಅನುಕೂಲರಾಗುವರು. ಮೇಲಿಂದ ಮೇಲೆ ಶಾ
ತಪ್ಪಿಸುವ ಹುಡುಗರಿಂದ ಹುಡುಗರ ಕೈಕೆಲಸಕ್ಕೆ ದೊಡ್ಡ ವಿಘ್ನವೊದಗ
ವದು. ಆದರೆ ಶಾಲೆಯಲ್ಲಿ ನಡೆದಷ್ಟು ಕೆಲಸವು ಹುಡುಗರ ಟಿಪ್ಪಣಿಯ
ಪುಸ್ತಕದಲ್ಲಿ ಇರಲೇಬೇಕೆಂಬ ನಿರ್ಧಾರದಿಂದ ಕೆಲಸ ಸಾಗಿಸಲು, ಹುಡ
ಗರ ಅನಿಯಮಿತತನದ ದೋಷವು ಬಹಳಮಟ್ಟಿಗೆ ಕಡಿಮೆಯಾಗುವದೆ
ಬದರಲ್ಲಿ ಸಂಶಯವಿಲ್ಲ.

ಶಾಲೆಗೆ ಶಿಷ್ಟರ ಆಗಮನವಾಗಲು, ಶಿಕ್ಷಕರು ಅಂತರಂಗದ ಹಾಗು
ಬಹಿರಂಗದ ಸುಸ್ಥಿತಿಗಳೆರಡನ್ನೂ ಅವರ ಕಣ್ಣಿಗೆ ಹಾಕುವದು ಶಿಕ್ಷಕರಿಗೆ
ಭೂಷಣವು. ಇಷ್ಟಾದರೂ ಒಮ್ಮೊಮ್ಮೆ ಅಡ್ಡತಿಡ್ಡ ಪ್ರಶ್ನೆಗಳಿರುವದರಿಂದಾ
ಗಲಿ, ಹೆದರಿಕೆಯಿಂದಾಗಲಿ, ಪುನರಾವರ್ತನದ ಅಭಾವದಿಂದಾಗಲಿ,
ಹುಡುಗರಿಂದ ಸಮರ್ಪಕ ಉತ್ತರಗಳು ದೊರೆಯುವದಿಲ್ಲ. ಅಂಥ ಪ್ರಸಂ
ಗದಲ್ಲಿ " ಕೇಳುವವರೆದುರಿಗೆ ಹೇಳುವವರು ದಡ್ಡರು " ಎಂಬ ಗಾದೆಯ
ಮಾತನ್ನು ಲಕ್ಷ್ಯದಲ್ಲಿಡಬೇಕು.

V. M. TATTI.

ವಿಚಾರ ಮಾಡದೆ ನಿಬಂಧವನ್ನು ಬರೆಯಬಾರದು

(ಲೇಖಕ:—ಚನಬಸಪ್ಪ ಯಲ್ಲಪ್ಪ ಕಸಲಿ. ೧ನೇ ಪ. ವಿದ್ಯಾರ್ಥಿ. ಟ್ರೇ ಕಾ. ಧಾರವಾಡ.)

ವಾಡಿಕೆಯಾಗಿ ನಿಬಂಧವನ್ನು ಬರೆಯುವದು ಕಠಿಣವಾದುದೆಂದು ಲ್ಲರೂ ಒಪ್ಪಬಹುದಾಗಿದೆ. ಚನ್ನಾದ ಭಾಷಾಪ್ರಗತಿಯಿದ್ದ ಹೊರತು ಬಂಧಲೇಖನವು ಹೇಗೆ ತಾನೆ ಸಾಧ್ಯವು? ಬಹಳ ಕಠಿಣವೆನಿಸುವ ಗಣಿ ದಲ್ಲಿ ಸಹ ಕೆಲವು ಮಾತುಗಳು ಕೊಡಲ್ಪಟ್ಟಿರುತ್ತವೆ. ನಿಬಂಧದಲ್ಲಿ ಬರೆ ುತಕ್ಕ ವಿಷಯವಲ್ಲದೆ ಬೇರೆ ಏನೂ ಇರದು. ಈ ನಿಬಂಧ ಲೇಖನವು ಂದು ಕಲೆಯಾಗಿದೆ, ಸಂಸ್ಕಾರ ಬಲದಿಂದ ಕೆಲಮಟ್ಟಿಗೆ ಸಾಧಿಸಬ ುದು.

ಪ್ರತಿಯೊಂದು ಸಂಗತಿಗೆ ವ್ಯವಸ್ಥೆಯು ಅವಶ್ಯವಾಗಿದ್ದಂತೆ ನಿಬಂಧ ೇಖನದಲ್ಲಿಯೂ ಅವಶ್ಯವಾಗಿದೆ. ಬರೆಯುವ ವಿಷಯವನ್ನು ಕುರಿತು ಕೆ ಹೊತ್ತು ವಿಚಾರಮಾಡಿ ಸರಿಯಾದ ಮುದ್ದೆಗಳನ್ನು ಮಾಡಬೇಕು; ಆ ುದ್ದೆಗಳು ಹಿಂದುಮುಂದೆ ಆಗದಂತೆ ಒಂದು ವಿಶಿಷ್ಟ ಕ್ರಮದಲ್ಲಿ ಬರೆ ುಬೇಕು; ತರುವಾಯ ಅವುಗಳ ವಿಷಯದಲ್ಲಿ ಕೆಲವು ಮಾತುಗಳನ್ನು ರೆಯುತ್ತ ಹೋಗಬೇಕು. ಹೀಗೆ ಮಾಡದೆ ಒಮ್ಮೆಲೆ ಯಾವದೊಂದು ವಿ ಯವನ್ನು ಕುರಿತು ಬರೆಯಹತ್ತಿದರೆ ಕೆಲವು ದೋಷಗಳಾಗುವ ಸಂಭ ವುಂಟು.

ಒಂದಾನೊಂದು ವಸ್ತುವು ಶೋಭಿಸಬೇಕಾದರೆ ಅದರಲ್ಲಿರಬೇಕಾ ಷ್ಟು ಸಂಗತಿಗಳಿರಲೇಬೇಕು. ಒಂದು ಪ್ರಾಣಿಗೆ ಕಣ್ಣಾಗಲಿ, ಕೈಯಾ ಲಿ, ಕಾಲಾಗಲಿ, ಸಾರಾಂಶ ಯಾವುದೊಂದು ಅವಯವವು ಕಡಿಮೆಯಿ ರೆ ಅದಕ್ಕೆ ಶೋಭೆಯುಂಟಾಗಲಾರದು. ನಿಬಂಧದಲ್ಲಿ ಬರತಕ್ಕಷ್ಟು ವಿ ಯವು ಅವಶ್ಯವಾಗಿ ಬರಬೇಕು. ಅಂದರೇನೇ ಓದುವವರಿಗೆ ಪ್ರಿಯ ುದುದಾಗುವದು. ವಿಚಾರಮಾಡದೆ ನಿಬಂಧಲೇಖನವನ್ನಾರಂಭಿಸಿದರೆ, ರಬೇಕಾದ ಬಹಳಭಾಗವು ಅದರಲ್ಲಿ ಸೇರುವದಿಲ್ಲ; ಇಷ್ಟೇ ಅಲ್ಲ, ಅತಿ ುಹತ್ವವಾದ ವಿಷಯವು ಸಹ ಒಮ್ಮೊಮ್ಮೆ ಮರೆತು ಹೋಗಬಹುದು. ನರಿಂದ ಕಷ್ಟವನ್ನು ಸಹಿಸಿ ಬರೆವ ವಿಷಯಕ್ಕೆ ಯೋಗ್ಯಫಲವು ದೊರೆಯು ುಕ್ಕಲ್ಲ.

ಜಗತ್ತಿನಲ್ಲಿರುವ ಪ್ರತಿಯೊಂದು ಪ್ರಾಣಿಯನ್ನು ನೋಡಿದರೂ, ಅದರ ಅವಯವಗಳು ಒಂದು ವಿಶಿಷ್ಟಕ್ರಮದಲ್ಲಿ ಕಾಣುವವು. ಒಂದು ವೇಳೆ ಕಣ್ಣಿನ ಸ್ಥಳದಲ್ಲಿ ಮೂಗೂ, ಮೂಗಿನ ಸ್ಥಳದಲ್ಲಿ ಮತ್ತೊಂದು ಅವಯವವೂ ಇರುತ್ತಿದ್ದರೆ, ನೋಡುವವರಿಗೆ ಅಸಹ್ಯ ವೆನಿಸುತ್ತಿದ್ದಿತು. ನಿ ಬಂಧವಾದರೂ ಹೀಗೆಯೇ ಯಾವುದೊಂದು ವಿಷಯಕ್ಕೆ ಮಾಡಲ್ಪಟ್ಟ ಮುದ್ದೆಗಳು ಒಂದು ಕ್ರಮದಲ್ಲಿರಲಿಕ್ಕೆಸಾಕು. ಮೊದಲು ಬರೆಯತಕ್ಕ ದನ್ನು ಮೊದಲಲ್ಲಿಯೂ, ಕೊನೆಗೆ ಬರೆಯಬೇಕಾದುದನ್ನು ಕೊನೆಯಲ್ಲಿಯೂ ಬರೆಯಬೇಕು. ಉಪೋದ್ಘಾತದಲ್ಲಿ ಉಪಸಂಹಾರವನ್ನೂ, ಉಪಸಂಹಾರದ ಸ್ಥಳದಲ್ಲಿ ಬೇರೊಂದುಭಾಗವನ್ನೂ ಬರೆದರೆ ಆ ನಿಬಂಧವು ಚೆನ್ನಾದುದೆಂದು ಯಾರು ತಾನೆ ಒಪ್ಪುವರು? ವಿಚಾರಮಾಡದೆ ಒಮ್ಮೆಲೆ ಬರೆಯಲಿಕ್ಕಾರಂಭಿಸಿದರೆ ಭಾಗಗಳು ಹಿಂದು ಮುಂದೆ ಆಗಬಹುದು.

ಕೈ, ಕಾಲು, ತಲೆ, ಕಣ್ಣು, ಮೊದಲಾದವುಗಳು ಸಜೀವಪ್ರಾಣಿಯ ಅವಯವಗಳಾಗಿರುವಂತೆ, ಮುದ್ದೆಗಳು ನಿಬಂಧವ ಅವಯವಗಳೆಂದು ಹೇಳಬಹುದು. ಮನುಷ್ಯನ ತಲೆಯು ಅವನ ಆಕಾರಮಾನಕ್ಕನುಸರಿಸಿ ಒಂದು ದೊಡ್ಡ ತೆಂಗಿನಕಾಯಿಯಷ್ಟಿರುವದು; ಹಾಗಿರದೆ ಒಂದು ದೊಡ್ಡ ಕುಂಬಳಕಾಯಿಯಷ್ಟಿದ್ದರೆ ಶೋಭಿಸುತ್ತಿರಲಿಲ್ಲ. ನಿಬಂಧದ ಮಾನಕ್ಕನುಸರಿಸಿ ಅದರ ಮುದ್ದೆಗಳನ್ನು ಕುರಿತು ಬರೆದ ವಾಕ್ಯಸಮೂಹಗಳಿರಬೇಕು. ಯಾವುದೊಂದು ಭಾಗವನ್ನು ಬೆಳೆಯಿಸಿ ಬರೆದು, ನಿಬಂಧವು ದೊಡ್ಡದಾಗುವದೆಂಬ ಅಂಜಿಕೆಯಿಂದ ಉಳಿದ ಭಾಗಗಳನ್ನು ಸಂಕ್ಷೇಪಿಸಿದರೆ, ಕೈಕಾಲುಗಳು ಸಣ್ಣವಿದ್ದು ಹೊಟ್ಟೆಬಾತಮನುಷ್ಯನಂತೆ ಕಾಣುವದು ಇದಾದರೂ ವಿಚಾರಮಾಡದೆ ಬರೆಯುವದರ ಪರಿಣಾಮವೇ ಆಗಿದೆ.

ನಿಬಂಧದಲ್ಲಿ ಅಸಹ್ಯವಾದ ದೋಷವೆಂದರೆ ವಿಷಯಾಂತರವು. ಇದರಿಂದ ವಿಷಯವೆಲ್ಲ ಕೆಟ್ಟು ಹೊಲಸೆದ್ದು ಹೋಗುವದು. ಎಷ್ಟು ವಿಚಾರಮಾಡಿ ಬರೆದರೂ ಈ ತಪ್ಪು ಆಗಿರುತ್ತದೆ. ವಿಚಾರಮಾಡದೆ ಬರೆಯಹತ್ತಿದ ಮೇಲೆ ಕೇಳುವದೇನು, ಬಹಳ ಮಟ್ಟಿಗೆ ವಿಷಯಾಂತರವಾಗುವದೆಂದು ಹೇಳಲಿಕ್ಕೆ ಪ್ರತ್ಯವಾಯವಿಲ್ಲ. ಜಾತ್ರೆಯನ್ನು ಕುರಿತು ಕೆಲವು ಮಾತುಗಳನ್ನು ಬರೆಯುವಾಗ " ಜಾತ್ರೆಯಲ್ಲಿ ಅನೇಕ ಅಪೂರ್ವ ವಸ್ತುಗಳು ಬರುವವು; ಮಿಠಾಯಿಗಳ ಅಂಗಡಿಗಳು ಬಹಳವಾಗಿರುವವು; ಈ ಮಿಠಾಯಿ

ಳು ಸಕ್ಕರೆಯಿಂದ ತಯಾರಿಸಲ್ಪಡುವವು. ಈ ಸಕ್ಕರೆಯು ಬೀಟದಿಂದ ಮಾಡಲ್ಪಡುವದು ಚೀನದೇಶದಲ್ಲಿ ಸಕ್ಕರೆಯ ಕಾರಖಾನೆಗಳು ಬಹಳ. ಚೀನವು ಬಹಳ ಬೆಳೆಯುಳ್ಳದು. ಇತ್ಯಾದಿ ಇದರಂತೆ ಮುಖ್ಯ ವಿಷಯವನ್ನು ಬಿಟ್ಟು ಅಡ್ಡಹಾದಿಬಿದ್ದರೆ, ಬರೆಯಲ್ಪಡುವ ವಿಷಯವು ಮಾನ್ಯವಾಗುದಾಗಲಾರದು. ಆದಷ್ಟು ಮಟ್ಟಿಗೆ ಈ ದೋಷವು ಆಗದಂತೆ ಎಚ್ಚರ ವಹಿಸತಕ್ಕದ್ದು.

ಒಮ್ಮೆಲೆ ನಿಬಂಧ ಲೇಖನಕ್ಕೆ ಆರಂಭಮಾಡಿದುದಾದರೆ ಅನೇಕ ವಾಕ್ಯದೋಷಗಳೂ, ಶಬ್ದದೋಷಗಳೂ ಆಗುವ ಸಂಭವವುಂಟು. ಒಂದು ವಾಕ್ಯಕ್ಕೆ ಮತ್ತೊಂದು ವಾಕ್ಯವು ಸಂಬಂಧವಿಲ್ಲದಂತಾಗುವುದು.

ಯಾವನೇ ಆಗಲಿ ತಾನು ಹಿಡಿದ ಕೆಲಸದಲ್ಲಿ ತಾದಾತ್ಮ್ಯವನ್ನು ಹೊಂದಿದ ಹೊರತು ಆ ಕೆಲಸವು ಪುರೋವೃದ್ಧಿಗೆ ಹೋಗಲಾರದು; ಅವನಿಗೂ ಸಮಾಧಾನವೆನಿಸದು; ಮುಂದಿಗೂ ಸರಿಗಾಣಲಿಕ್ಕಿಲ್ಲ. ಗಾಯಕನು ಹಾಡಿಕೆಯಲ್ಲಿ ತಲ್ಲೀನನಾದ ಹೊರತು ಅವನ ಮನಸಿಗೆ ಸೊಗಸೆನಿಸದು. ಕೇಳುವವರಿಗೂ ಇಂಪಾಗದು. ವಿಚಾರ ಮಾಡದೆ ಒಮ್ಮೆಲೆ ನಿಬಂಧವನ್ನು ಬರೆಯಲುಪಕ್ರಮಿಸಿದರೆ, ವಿಷಯವು ಹಿಂದು ಮುಂದೆ ಆಗಿ ತನ್ನದು ತನಗೇ ಸೇರದ ಮೇಲೆ ಅನ್ಯರಿಗೆ ರುಚಿಸುವುದೆಂತು?

ನಿಬಂಧಲೇಖನದ ಉದ್ದೇಶವಾವುದು? ಆ ನಿಬಂಧವನ್ನೋದುವದರಿಂದ ಅಜ್ಞಜನರ ಮನಸಿನ ಮೇಲೆ ಒಂದು ತರದ ಪರಿಣಾಮವಾಗಬೇಕಷ್ಟೇ! ವಿಚಾರಮಾಡದೆ ಬರೆದ ನಿಬಂಧವಾಚನದಿಂದ ಜನರ ಮೇಲೆ ಏನುತಾನೆ ಪರಿಣಾಮವಾಗುವುದಿದೆ? ಓದಿದ ವಿಷಯವು ಅವರಿಗೆ ತಿಳಿಯುವಲಿಕ್ಕಿಲ್ಲ. ವೇಳೆಯು ಮಾತ್ರ ವ್ಯರ್ಥವಾಗಿ ಹರಣವಾದಂತಾಗುವದು.

ಅನೇಕ ಜನವಿದ್ಯಾರ್ಥಿಗಳು ಪರೀಕ್ಷೆಯ ಕಾಲಕ್ಕೆ ವೇಳೆಯು ಸ್ವಲ್ಪವಾಗಿದೆಯೆಂದು ಒಮ್ಮೆಲೆ ನಿಬಂಧವನ್ನು ಬರೆಯಲುಪಕ್ರಮಿಸುವರು. ಅವರ ಬರಹದಲ್ಲಿ ಎಷ್ಟೋ ದೋಷಗಳಾಗುವವು; ವಿಷಯಾಂತರವಾಗುವ ಸಂಭವಹೆಚ್ಚು. ತಿರುಗಿನೋಡುವಾಗ ತಪ್ಪುಗಳಿದ್ದಲ್ಲಿ ತಿದ್ದಹೋದರೆ ಬಹಳ ಹೊಲಸಾಗುವುದು. ಹೊಲಸಾಯಿತೆಂದು ಪುನಃ ಬರೆಯ ಪತ್ತಿದರೆ ವೇಳೆಯು ಮುಗಿದು ಹಿಡಿಜೋಳಕ್ಕೆ ಪಡಿಜೋಳವನ್ನು ಕಳಕೊಂಡಂತೆ ಆಗು

ವುದು; ಅವರ ಇಚ್ಛೆಯು ಪೂರ್ಣವಾಗಲಲಂದು, [illegible] ದೊರೆಯಲಾರವು.

"ತುಸು ತಿನ್ನು, ಕಸತಿನ್ನಬೇಡ" ಎಂಬಗಾದೆಗನುಸರಿಸಿ ನಿಬಂ
ವನ್ನು ಸ್ವಲ್ಪನೇ ಬರೆದರೂ ಅಚ್ಚುಕಟ್ಟಾಗಿರಲಿಕ್ಕೆ ಬೇಕು. ವಿಷಯಾಂತ
ಮಾಡಿ ಹನುಮಂತನ ಬಾಲದಂತೆ ಉದ್ದಕ್ಕೆ ಬೆಳೆಯಿಸಿ ಬರೆದ ವಿಷಯ
ನಿಷ್ಪ್ರಯೋಜಕವೇಸರಿ! ಆದುದರಿಂದ ವಿಚಾರಮಾಡದೆ ಒಮ್ಮೆಲೆ ನಿಬ
ಧಲೇಖನವನ್ನು ಪ್ರಾರಂಭಮಾಡಬಾರದು.

ಮಾದರಿಗೋಸುಗ ಒಂದು ಪುಟ್ಟ ನಿಬಂಧವನ್ನು ಇದರಡಿಯಲ್ಲಿ
ಬರೆದಿರುವೆನು.

ಧ್ಯೇಯ.

ಪ್ರಾಯಶಃ ಪ್ರತಿಯೊಬ್ಬ ಮನುಷ್ಯನು ತನ್ನ ಆಯುಷ್ಯದಲ್ಲಿ ಇಂ
ಕೃತಿಗಳನ್ನು ಮಾಡಬೇಕು, ಇಲ್ಲವೆ, ಇಂಥ ಸ್ಥಿತಿಗೆ ಏರಬೇಕು ಎಂ
ಸಂಕೇತಮಾಡುವನು. ಇದು ಅವನ ಧ್ಯೇಯವೆಂದು ಹೇಳಲ್ಪಡುವು
ಅನೇಕರು ತಮ್ಮ ಮುಂದಿನ ಆಯುಷ್ಯದ ಸದ್ವ್ಯಯದ ಬಗ್ಗೆ ಏನೂ ವಿಚ
ರಮಾಡುವುದಿಲ್ಲ.

ಧ್ಯೇಯವು ಮನುಷ್ಯನ ಭಾವೀ ಆಯುಷ್ಯದ ಕಾರ್ಯಕ್ರಮ ಪತ್ರ
ಯು ಆದುದರಿಂದ ಯಾವುದೊಂದು ಧ್ಯೇಯವನ್ನಿಟ್ಟುಕೊಂಡಿರಲೇಬೇ
ಅಂದರೆ, ಅವನ ಜೀವನಕ್ರಮವು ವ್ಯವಸ್ಥಿತವಾಗಿ ಸಾಗುವುದು. ಮಾ
ಇಟ್ಟುಕೊಂಡ ಧ್ಯೇಯವು ಸ್ತುತ್ಯವಾದುದಿರಲಿಕ್ಕೆಬೇಕು. ನಿಂದ್ಯ ಧ್ಯೇ
ದಿಂದ ಅವನಿಗಾದರೂ ಸುಖವಾಗುವದೋ ಇಲ್ಲವೋ ಹೇಳಲಿಕ್ಕೆ ಬರು
ದಿಲ್ಲ.

ಈ ಜಡಸೃಷ್ಟಿಯು ಯಾರಿಂದ ಉತ್ಪನ್ನವಾಯಿತು? ಆ ವಿಧಾ
ಗೂ ತನಗೂ ಯಾವ ಸಂಬಂಧವಿದೆ? ಆತನಲ್ಲಿ ಐಕ್ಯವಾಗಬೇಕಾ
ನಾನು ಏನು ಮಾಡಬೇಕು? ಈ ತೆರನಾದ ಆಧ್ಯಾತ್ಮಿಕ ಧ್ಯೇಯವು ಸ್ತು
ವಾದುದು.

ತನುಮನೋಧನಗಳಿಂದ ಪ್ರಯತ್ನಮಾಡಿ ಹಿಂದುಳಿದ ತನ್ನ ಸ
ಬಾಂಧವರನ್ನು ಮುಂದೆ ತರಲೆತ್ನಿಸುವುದಾವರೂ ಉಚ್ಚಧ್ಯೇಯ

ಇದರಿ ಪರರಿಗೆ ಅಹಿತವನ್ನುಂಟುಮಾಡಿ, ತನ್ನ ಹಿತವನ್ನು ಸಾಧಿಸುವ ಧ್ಯೇಯವು ನಿಂದ್ಯವಾದುದು.

ಧ್ಯೇಯವು ಕೊನೆಸಾಗಬೇಕಾದರೆ ದೃಢನಿಶ್ಚಯ, ಶ್ರಮಸಹನಶಕ್ತಿ, ಅವಿಶ್ರಾಂತದ ದುಡಿಮೆ ಇವೇ ಮೊದಲಾದ ಅಲೌಕಿಕ ಗುಣಗಳು ಬೇಕು; ಇವುಗಳಲ್ಲದೆ ಯೋಗ್ಯ ಪದ್ಧತಿಯೂ, ಧೋರಣವೂ ಅವಶ್ಯವಾಗಿ ಇರತಕ್ಕದ್ದು, ಇಲ್ಲದಿದ್ದರೆ, ಜನರ ನಿಂದೆಗೆ ಪಾತ್ರರಾಗಬೇಕಾಗುವುದು.

ಶಿವಾಜಿಯು ತನ್ನ ದೇಶಬಾಂಧವರನ್ನು ಉದ್ಧಾರ ಮಾಡಬೇಕೆಂಬ ಧ್ಯೇಯವನ್ನು ಕೊನೆಗಾಣಿಸಬೇಕಾದರೆ, ಅನೇಕಸಾರಿ ಕಾರಾಗೃಹವಾಸವನ್ನನುಭವಿಸಬೇಕಾಯಿತು, ಕೂಳಿಲ್ಲದೆ ತಿರುಗುವ ಹೊತ್ತು ಬಂತು, ಆದರೂ ತನ್ನ ದೃಢನಿಶ್ಚಯವನ್ನು ಬಿಡಲಿಲ್ಲ. ವಿಶ್ವಾಮಿತ್ರನು "ತಾನು ಬ್ರಹ್ಮರ್ಷಿಯಾಗಬೇಕೆಂ"ಬುದನ್ನು ದೃಢನಿಶ್ಚಯದಿಂದ ಕೊನಗಾಣಿಸಿದನು. ಅಮೇರಿಕನ್ನರು ಹಗಲಿರಳು ಅವಿಶ್ರಾಂತ ಶ್ರಮಮಾಡಿ, ತಮ್ಮ ದೇಶವನ್ನು ಧನಾಢ್ಯವಾದುದನ್ನು ಮಾಡಿದರು. ಅಲ್ಲಿ ಆಂಡ್ರೂಕಾರ್ನೇಜಿಯೆಂಬವನು ದ್ವಿತೀಯ ಕುಬೇರನೆಂದು ಪ್ರಸಿದ್ಧನಾಗಿರುವನು. ಅದರೆ, ತಘಲಕ ಮಹಮ್ಮದನು ತಾನು ಸಾಮ್ರಾಟನಾಗಬೇಕೆಂದೆಣಿಸಿ, ಚೀನ ದೇಶವನ್ನು ಗೆಲ್ಲಹೋದರಿಂದ ತನ್ನ ಗತಿಯು ಏನಾಗಬಹುದೆಂಬ ಧೋರಣವಿಲ್ಲದೆ, ತನ್ನ ಸೈನ್ಯವನ್ನೆಲ್ಲ ಪಾಳುಮಾಡಿಕೊಂಡನು; ಅಂತೇ ಜನರ ಪರಿಹಾಸಕ್ಕೆ ಗುರಿಯಾಗಬೇಕಾಯಿತು.

ಆದುದರಿಂದ ಪರರಿಗೂ ತನಗೂ ಹಿತವಾಗುವ ಅರ್ಥಾತ ಸ್ತುತ್ಯ ಧ್ಯೇಯಗಳನ್ನಿಟ್ಟುಕೊಳ್ಳಬೇಕು. ಉಚ್ಚಧ್ಯೇಯದಿಂದ ಮನಸು ಪ್ರಫುಲ್ಲಿತವಾಗುವುದು, ಶ್ರಮಸಹನ ಶಕ್ತಿಯು ಬರುವುದು; ನಾಗರಿಕನಾಗಿ ಸುಖದಿಂದ ಬಾಳುವನು. ಅವನ ಹೆಸರು ಅಜರಾಮರವಾಗುವದು.

---

೨ ಅಕ್ಷರ ಸುಧಾರಣೆ.

ಲೇಖಕ:— ಬಸವಯ್ಯಾ ಚನ್ನಬಸವಯ್ಯಾ ಕಂಬಿ. ಶಾಲಾ ಮಾಸ್ತರ ಕಿತ್ತೂರ. ನಂ. ೧)

ಅಕ್ಷರ ಬರಹವು ಚಿತ್ರಕಲೆಯ ಒಂದು ಭಾಗವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಪ್ರವೀಣಬದ್ಧವಾದ ಚಿತ್ರಗಳು ಹೇಗೆ ರಮಣೀಯವಾಗಿ ಕಂಗೊಳಿಸುವವೋ ಹಾಗೆ

ಅಳತೆಗೆ ಸರಿಯಾಗಿ ತೆಗೆದ ಅಕ್ಷರಗಳಾದರೂ ಮುತ್ತಿನಂತೆ ಮನೋಹರವಾಗಿ ತೋರು
ವವು. ಚೆಂದವಿಲ್ಲದ ಚಿತ್ರಗಳನ್ನು ನೋಡಲಿಕ್ಕೆ ಹೇಗೆ ಮನಸ್ಸಾಗುವದಿಲ್ಲವೋ ಹಾಗೆ
ಅಂದಗೆಟ್ಟ ಅಕ್ಷರಗಳನ್ನು ಓದಲಿಕ್ಕೆ ಮನಸ್ಸು ಒಪ್ಪುವದಿಲ್ಲ. ಕನ್ನಡ ಅಕ್ಷರಗಳಿಗೆ
ರೂಢಿಯಲ್ಲಿ ಮುತ್ತಿನ ಉಪಮೆಯನ್ನು ಕೊಡುವರು. ಜನರು ದುಂಡ ಮುತ್ತುಗಳನ್ನೇ
ಪ್ರೀತಿಸುವವರಲ್ಲದೆ, ಬಂಕಡೊಂಕಾದ ಮುತ್ತುಗಳನ್ನು ಮೆಚ್ಚರು. ಅದರಂತೆ ಸೊಟ್ಟ
ಪಟ್ಟ ಅಕ್ಷರಗಳಿಗೆ ಯಾರೂ ಸೇರರು. ದುಂಡಕ್ಷರಗಳಿಂದ ಮಂಡಿತವಾದ ಪುಸ್ತಕ
ಕಾಗದ ಪತ್ರಗಳನ್ನು ನೋಡಲಿಕ್ಕೂ ಓದಲಿಕ್ಕೂ ಮನಸ್ಸು ಪ್ರಫುಲ್ಲವಾಗುವದು.
ಕಾರಣ ಎಲ್ಲ ಬಾಲಬಾಲಕಿಯರು ಚಲೋ ಅಕ್ಷರಗಳನ್ನು ಬರೆಯಲಿಕ್ಕೆ ಕಲಿಯು
ವದು ಅತ್ಯವಶ್ಯವಾಗಿರುವದು.

ಲೇಖನ ಪಟುಮಹಾಶಯನ ಉತ್ತಮವಾದ ಹಸ್ತಾಕ್ಷರಗಳು ವೀರಪುರುಷನ
ಕರವಾಲಂಕೃತವಾದ ತೀಕ್ಷ್ಣ ಶಸ್ತ್ರಾಸ್ತ್ರಗಳಂತಿರುತ್ತವೆ. ಉತ್ತಮವಾದ ಅಕ್ಷರಗಳು
ಎಲ್ಲಿದ್ದರೂ ಮನ್ನಿಸಲ್ಪಡುವವು. ಚಲೋ ಅಕ್ಷರಗಳಿಂದ ಜಮಾಖರ್ಚನ್ನು ಬರೆಯುವ
ಗುಮಾಸ್ತನನ್ನು ಎಲ್ಲ ವ್ಯವಹಾರಸ್ಥರು ಆದರಿಸುವರು. ಲೇಖನೀ ಬಹದ್ದೂರ ಕಾರ
ಕೂನನನ್ನು ಎಲ್ಲ ಅಧಿಕಾರಸ್ಥರು ಮರ್ಯಾದಿಸುವರು. ಲೇಖನಪಟು ಕುಲಕರ
ಣಿಯು ವರಿಷ್ಠರ ಅನುಗ್ರಹಕ್ಕೆ ಪಾತ್ರನಾಗುವನು. ಉತ್ತಮ ಪತ್ರವ್ಯವಹಾರ
ಮಾಡುವ ಮುತಾಲಿಕನನ್ನು ವರ್ತಕರು ಹೊಗಳುವರು. ಉತ್ತಮ ಅಕ್ಷರಗಳಿಂದ ಬ
ಯಲ್ಪಟ್ಟ ಪರೀಕ್ಷೆಯ ಉಮೇದವಾರರ ಉತ್ತರಗಳಿಗೆ ಹೆಚ್ಚು ಗುಣಗಳು ದೊರಕ
ವವು. ಎಲ್ಲ ಕಾರಕೂನರಿಗೂ, ಗುಮಾಸ್ತರಿಗೂ ಸರ್ವೋತ್ಕೃಷ್ಟ ಅಕ್ಷರಗಳಿರುವದ
ಭೂಷಣವಾಗಿರುವದು. ಉತ್ತಮಾಕ್ಷರಗಳನ್ನು ಬರೆಯುವ ವಿದ್ಯಾರ್ಥಿಗಳು ಪರೀಕ್ಷ
ಕರ ಪ್ರೇಮಕ್ಕೆ ಪಾತ್ರರಾಗುವರು. ಅಂದವಾದ ಅಕ್ಷರಗಳಿಂದ ಬರೆಯಲ್ಪಟ್ಟ ಕಾಗದ
ಪತ್ರಗಳೂ, ಹುಕುಮುಗಳೂ ಜಗಜ್ಜನರ ಶ್ಲಾಘನೆಗೆ ಕಾರಣವಾಗಿರುವವು. ಉತ್ತಮ
ಟೈಪುಗಳಿಂದ ಮುದ್ರಿತವಾದ ಪುಸ್ತಕಗಳು ಎಲ್ಲ ಜನರ ಮೆಚ್ಚಿಗೆಗೆ ಕಾರಣವಾಗಿರುವವು
ಸುಂದರವಾದ ಅಕ್ಷರಗಳುಳ್ಳ ನಕಾಶೆಗಳನ್ನೂ, ವರ್ಣಮಾಲೆಯ ಪಟಗಳನ್ನೂ, ನೀತಿ
ಯವಾಕ್ಯಗಳನ್ನೂ, ಕಿತ್ತೆಗಳನ್ನೂ ಎಲ್ಲ ಜನರು ಕೊಂಡಾಡುವರು; ಸಾರಾಂಶ ಸುಶಿ
ಕ್ಷಿತರೆಂಬವರ್ಗೆ ಸುಂದರಾಕ್ಷರಗಳಿರುವದು, ಅಲಂಕಾರವ್ರಾಯವಾಗಿರುವದು. ಈ
ಬಗೆಯಾಗಿ ಅಕ್ಷರಲೇಖನಕಲೆಯು ಅತಿ ಮಹತ್ವದ್ದಾಗಿದ್ದರೂ ಬಹುಶಃ ಎಲ್ಲ ಜನರು
ಈ ವಿಷಯದ ಕಡೆಗೆ ಕೊಡತಕ್ಕಷ್ಟು ಲಕ್ಷ್ಯಕೊಡುವದಿಲ್ಲೆಂಬದನ್ನು ತಿಳಿಸಲಿಕ್ಕೆ ಬಹು

್ಯಸನವಾಗುತ್ತದೆ. ಎಲ್ಲ ವಿಷಯಗಳ ಶಿಕ್ಷಣಕ್ಕೆ ಮುಖ್ಯವಾಗಿ ಓದು ಬರಹವು ಬೇಕ
ವೇ! ಓದಿಗೂ ಬರಹಕ್ಕೂ ಅಕ್ಷರಗಳೇ ಮೂಲವಲ್ಲವೆ ' ಸರ್ವಾರಂಭಾಸ್ತಂಡುಲಾ
ಸ್ಥಮೂಲಾಃ ' ಎಂಬಂತೆ ವಿದ್ಯಾರಂಭವು ಮೊದಲು ಅಕ್ಷರಗಳಿಂದಲೇ ಆಗುತ್ತದೆ.
ದ್ದರಿಂದ ಎಲ್ಲಕ್ಕೂ ಮೊದಲು ವಿದ್ಯಾರ್ಥಿಗಳು ಅಕ್ಷರಸುಧಾರಣೆಯನ್ನು ಹೊಂದತಕ್ಕ
ದ್ದಾಗಿದೆ.

ಸಕಲ ವಿದ್ಯಾಭ್ಯಾಸವು ಚಿಕ್ಕಂದಿನಲ್ಲಿಯೇ ಚನ್ನಾಗಿ ಸಾಧ್ಯವಾಗಿರುವಂತೆ ಅಕ್ಷರ
ಲಿಖನ ಕಲೆಯಾದರೂ ಬಾಲ್ಯದಲ್ಲಿಯೇ ಸುಲಭಸಾಧ್ಯವಾಗಿರುತ್ತದೆ. ಚಿಕ್ಕಂದಿನಲ್ಲಿ
ಮಕ್ಕಳು ಬಹುಶಃ ದೊಡ್ಡವರ ಅನುಕರಣವನ್ನೇ ಮಾಡುತ್ತಿರುತ್ತಾರೆಂಬದು ಅನುಭವ
ಸಿದ್ಧವಾದ ಮಾತು. ನೈಸರ್ಗಿಕವಾದ ಅವರ ಅನುಕರಣಶಕ್ತಿಯು ಬಾಲ್ಯಾವಸ್ಥೆಯ
ಲ್ಲಿಯೇ ಪ್ರಬಲವಾಗಿರುತ್ತದೆಂದು ಮಾನಸಶಾಸ್ತ್ರವು ಹೇಳುತ್ತದೆ. ಬಾಲತ್ವದಲ್ಲಿ ಬಾಲ
ಬಾಲಿಕೆಯರ ಸ್ನಾಯುಗಳು ಕೋಮಲವಿರುವದರಿಂದ ಅವರಿಂದ ಕಾರ್ಯಸೌಷ್ಟವವು
ಚನ್ನಾಗಿ ಸಾಧಿಸುತ್ತದೆ. ಇದೇ ವಯಸ್ಸಿನಲ್ಲಿ ಅವರ ಕೈಕೂತು ಹೋಗುತ್ತವೆ. ಬಳೆ
ಗಾರ ಹುಡುಗರಿಗೆ ಚಿಕ್ಕಂದಿನಲ್ಲಿ ಬಳೇ ಮಾಡಲಿಕ್ಕೆ ಕಲಿಸದೇ ಹೋದರೆ ದೊಡ್ಡವ
ಾದ ಬಳಿಕ ಕೈ ಒಲಿತು, ಅವರಿಗೆ ಆ ಉದ್ಯೋಗವು ಬರುವದೇ ಇಲ್ಲ. ಬಿದರು ಎಳೆ
ಯದಿದ್ದಾಗ್ಗೆ ಮಣಿಸಿದತ್ತ ಮಣಿಯುತ್ತದೆ; ಬಲಿತ ಮೇಲೆ ಬಾಗುವದಿಲ್ಲ. ಅದರಂತೆ,
ಅಕ್ಷರ ಸುಧಾರಣೆಯ ಕೆಲಸವು ಬಾಲ್ಯಾವಸ್ಥೆಯಲ್ಲಿಯೇ ಚನ್ನಾಗಿ ಸಾಧಿಸುತ್ತದೆ.

ಹಿಂದಿನ ಕಾಲದ ಹಳೆತರದ ಶಿಕ್ಷಣದಲ್ಲಿ ಅಕ್ಷರಗಳ ಕಡೆಗೆ ಒಳ್ಳೇ ಲಕ್ಷ್ಯಕೊಡ
ಲ್ಪಡುತ್ತಿದ್ದವೆಂಬದಕ್ಕೆ ಆಗಿನವರ ಸುಂದರವಾದ ಅಕ್ಷರಗಳೇ ಸಾಕ್ಷೀಭೂತವಾಗಿರು
ವವು. ಆಗಿನ ಎಲ್ಲ ಸರಕಾರಿ ಹಾಗೂ ಗಾವಠೀ ಶಾಲೆಗಳಲ್ಲಿ ಮುಂಜಾನೆ ಒಂದೆರಡು
ತಾಸುಗಳು ಅಕ್ಷರ ಸುಧಾರಣೆಯಲ್ಲಿಯೇ ವ್ಯಯವಾಗುತ್ತಿದ್ದವು. ಹುಡುಗರು ಶಾಲೆಗೆ
ಬಂದಕೂಡಲೆ ಎಲ್ಲಕ್ಕೂ ಮೊದಲು ಉತ್ತಮವಾದ ಅಕ್ಷರಗಳುಳ್ಳ ಕಿತ್ತೇ ತೀಡಿ, ಪಿರಡು
ಬರೆದು, ಕಡೆಗೆ ಕಾಪೀ ಬರೆಯುವದಾದ ಮೇಲೆ ಮುಂದಿನ ಅಭ್ಯಾಸದ ಕಡೆಗೆ ಹೊರ
ಳುತ್ತಿದ್ದರು. ಅಂದರೆ ಅಕ್ಷರ ಬರಹವೆಂಬದೊಂದು ಮಹತ್ವದ ವಿಷಯವಾಗಿತ್ತೆಂದು
ಹೇಳಬಹುದು.

ಈ ಕ್ರಮವು ಬಹಳ ದೂರಿನ ಮಾತಲ್ಲ. ಇಪ್ಪತ್ತು ಮೂವತ್ತು ವರ್ಷಗಳ
ಹಿಂದಿನ ಮಾತಾಗಿದೆ. ಶಿಕ್ಷಕರೂ, ವಿದ್ಯಾರ್ಥಿಗಳೂ ಆಗ ಅಕ್ಷರ ಸುಧಾರಣೆಯ
ಕಡೆಗೆ ಪೂರ್ಣ ಲಕ್ಷ್ಯಕೊಡುತ್ತಿದ್ದದರಿಂದ ಅವರ ಅಕ್ಷರಗಳು ಅಂದವಾಗುತ್ತಿದ್ದವು.

ಅಕ್ಷರಗಳನ್ನು ಅರ್ಥಾತ್ ಕಿತ್ತೆಗಳನ್ನು ತೀಡಲಿಕ್ಕೆ ಮೊದಲಿನ ವಿದ್ಯಾರ್ಥಿಗಳು ಬಹಃ ಪ್ರಯತ್ನಿಸುತ್ತಿದ್ದಂತೆ, ಬರಹದ ಕೆಲಸವನ್ನಾದರೂ ಬೇಸರಿಯದೆ ಮಾಡುತ್ತಿದ್ದರು. ಈಗಿನಂತೆ ಆಗ ಎಲ್ಲ ತಂದ ಪುಸ್ತಕಗಳು ಬಿಲೆಕೊಟ್ಟ ಮಾತ್ರದಿಂದ ಬಂದು ಬೀಳುತ್ತಿದ್ದಿಲ್ಲ. ಅದರಿಂದ ಅವರು ಪುಸ್ತಕಗಳನ್ನು ಬರೆದುಕೊಳ್ಳಲೇ ಬೇಕಾಗುತ್ತಿತ್ತು. ಅದರ ಹೊರತು ಅವರಿಗೆ ಗತಿಯೇ ಇದ್ದಿಲ್ಲ. ಅದರಿಂದಲವರ ಲೇಖನ ಕಲೆಯೂ ಅಕ್ಷರ ಸುಧಾರಣೆಯೂ, ಜಾಗ್ರತವಾಗುತ್ತಿದ್ದವು. ಇದಕ್ಕೆ ಹಿಂದಿನವರು ಬರೆದ ತಾಡಪತ್ರದ ಹೊತ್ತಿಗೆಗಳೂ, ಕೈ ಬರಹದ ಎಷ್ಟೋ ಹೆಬ್ಬೊತ್ತಿಗೆಗಳೂ, ಕಾಗದ ಪತ್ರಗಳೂ ಸಾಕ್ಷಿಯಾಗಿವೆ.

ಧಾರವಾಡದ ಚಂದ್ರೋದಯ ಪತ್ರದ ಮೂಲ ಸಂಪಾದಕ ದಿವಂಗತ ಹುಚ್ಚಯ್ಯ ಸಂಗಯ್ಯ ವಿಭೂತಿ ಎಂಬ ಲೇಖನಪಟು ಮಹಾಶಯರು ತಮ್ಮ ಅಖಂಡಾಯುಷ್ಯವನ್ನು ಅಕ್ಷರ ಬರಹದಲ್ಲಿ ಕಳೆದು ಸ್ವಹಸ್ತಾಕ್ಷರಗಳಿಂದ ಬೇಸರಿಲ್ಲದೆ ಬರೆದಿಟ್ಟ ಅನಂತ ಪುಸ್ತಕಗಳನ್ನು ನೋಡಿ ಲೇಖನಾಲಸಿಗಳೂ, ಸ್ವಯಂಮನ್ಯಸುಧಾರಣಾವಾದಿಗಳೂ ಆದ ನಾವು ನಾಚಿ ತಲೆದೂಗಬೇಕಾಗುವದು. ಅವರ ಕಿತ್ತೆಗಳನ್ನು ತೀಡಿ, ಅವರ ಹಸ್ತಾಕ್ಷರದ ಹೊತ್ತಿಗೆಗಳನ್ನೇ ಓದಿದ ಆಗಿನವರ ಅಕ್ಷರಗಳೆಲ್ಲ ಬಹುಶಃ ಆ ಅಯ್ಯನವರ ಅಕ್ಷರಗಳನ್ನೇ ಹೋಲುತ್ತಿದ್ದವು. ಆಹಹ! ಮುತ್ತಿನಂತೆ ದುಂಡಾದ ಅವರ ಅಕ್ಷರಗಳ ಅಂದವನ್ನೂ, ಸಾಲುಗಳ ಸೊಬಗನ್ನೂ, ಕೋಚುಗಳ ಕೌಶಲವನ್ನೂ, ಒತ್ತಕ್ಕರಗಳ ಒಯ್ಯಾರವನ್ನೂ ಶೂನ್ಯದೀರ್ಘಾದಿಗಳ ಸೌಂದರ್ಯವನ್ನು ಎಷ್ಟು ಬಣ್ಣಿಸಿದರೂ ಸ್ವಲ್ಪವೇ ಸರಿ ಆ ಯಮಕಿನ ಅಕ್ಷರಗಳ ಅವಲೋಕನದಿಂದುಂಟಾಗುವ ಆನಂದ ಸಾಮ್ರಾಜ್ಯವನ್ನು ಅನುಭವಿಸಲಿಕ್ಕೆ ಅಂಥ ಅಕ್ಷರ ಲೇಖನ ಕಲಾವಿಶಾರದನಾದ ತಜ್ಞ ಪುರುಷನೇ ಸಮರ್ಥನು!

ಆಗಿನ ಪ್ರತಿಯೊಬ್ಬ ವಿದ್ಯಾರ್ಥಿಯ ಗಂಟಿನಲ್ಲಿ ತೀಡಿತೀಡಿ ಮುಪ್ಪಾದ ಒಂದೆರಡು ಕಿತ್ತೆಗಳೂ, ಸ್ವಲ್ಪವೂ ಸ್ಥಳವುಳಿಯದಂತೆ ಬರೆದ ಖರಡುಗಳ ಪುಡಿಕೆಗಳೂ, ಚಲೊ ಚಲೋ ಲೆಕ್ಕಣಿಕೆಗಳುಳ್ಳ ಒಂದು ಚೀಲವೂ ಕಂಡು ಬರುತ್ತಿದ್ದವು, ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ ಒಂದೊಂದು ದೌತಿಯಿರುತ್ತಿದ್ದು, ಅದರಲ್ಲಿ ಮಿಂಚುಳ್ಳ ಕಪ್ಪು ಮಸಿಯು ಇದ್ದೇ ಇರುತ್ತಿತ್ತು. ಸಾರಾಂಶ ಅವರ ಬಳಿಯಲ್ಲಿ ಲೇಖನೋಪಕರಣಗಳು ಸಾಕಷ್ಟು ಇರುತ್ತಿದ್ದವೆಂದೂ, ಅವುಗಳನ್ನವರು ಸರಿಯಾಗಿ ಉಪಯೋಗಿಸಿ ಅಕ್ಷರಗಳನ್ನು ಸುಧಾರಿಸಿಕೊಳ್ಳುತ್ತಿದ್ದರೆಂದೂ ಧಾರಳವಾಗಿ ಹೇಳಬಹುದು.

ಅಕ್ಷರ ಸುಧಾರಣಾ ವಿಷಯವಾಗಿ ಆಧುನಿಕ ಪರಿಸ್ಥಿತಿಯನ್ನು ಹಿಂದಿನ ಸ್ಥಿತಿಗೆ ಪಚ್ಚಿ ನೋಡಿದರೆ, ಅಜಗಜಾಂತರವು ಕಂಡುಬರುವದು. ಈಗಿನ ವಿದ್ಯಾರ್ಥಿಗಳ ಪತ್ತರ ದೌತಿಗಳೇ ಕಂಡುಬರುವದಿಲ್ಲ. ವರ್ಗಕ್ಕೆ ಒಂದೆರಡು ಇದ್ದರೂ ಕೂಡ ಅವು ಗಳಲ್ಲಿ ಮಸಿಯೇ ಇಲ್ಲ. ಇದ್ದದೂ ಅದು ತರತರದ ಬಣ್ಣದಿಂದ ಕೂಡಿದ ನಿರೇ ನೀರು. ಕತ್ತೆಗಳಂತೂ ಇಲ್ಲೇಇಲ್ಲ. ಅವು ಅವರಿಗೆ ಬೀಡೇಬೇಡ. ಅಂದ ಮೇಲೆ ತೀಡುವ ಪ್ರಸವು ತಾನಾಗಿ ತಪ್ಪಿಹೋಯಿತು. ಖರಡುಗಳನ್ನಂತೂ ಅವರು ಕಂಡೇ ಇಲ್ಲ. ಔಷಧಕ್ಕೆ ಸಹ ಅವರ ಗಂಟುಗಳಲ್ಲಿ ಒಂದು ಖರಡು ಸಿಗುವಂತಿಲ್ಲ. ಮುತ್ತಿನಂಥ ಅಕ್ಷರಗಳನ್ನು ಕರೆದುಕೊಡುವ ಲೆಕ್ಕಣಿಕೆಗಳನ್ನು ಚಲ್ಲಿಕೊಟ್ಟು, ಈಗಿನ ವಿದ್ಯಾರ್ಥಿ ಗಳು ಸೊಟ್ಟಪಟ್ಟ ಅಕ್ಷರಗಳನ್ನುಂಟು ಮಾಡುವಂಥ ಬಗೆಯಬಗೆಯ ಬಣ್ಣದಿಂದ ವಿಂಚು ಹೊಡೆಯುವಂಥ ಟಾಕುಗಳನ್ನು ಗ್ರಹಿಸುವವರಾಗಿದ್ದಾರೆ. ಇದು ಹಿಂಡುವ ಎಮ್ಮೆಯನ್ನು ಕೊಟ್ಟು ಒಗೆಯುವ ಕತ್ತೆಯನ್ನು ತಕ್ಕೊಂಡಂತೆ ಆಗಿದೆಯೆಂದೆನ್ನಲಿಕ್ಕೆ ಅಡ್ಡಿಯಿಲ್ಲ. ಬರಹದಂಥ ಬೀಸರದ ಕೆಲಸವು. ನಮ್ಮ ಪ್ರಿಯ ವಿದ್ಯಾರ್ಥಿಗಳಿಗೆ ಮೊದಲಿಗೇ ಬೀಡ. ವಾರದಲ್ಲಿ ಒಂಡೆರಡುಸಾರೆ ನಾಲ್ಕೈದು ಮಿನಿಟುಗಳ ಅಲ್ಪಾವಧಿ ಯಲ್ಲಿ ಮನಬಂದಂತೆ ದಿನದ ಕಾಪೀ ಗೀಚಿ, ವಾರದ ಕಾಪಿಯೊಂದನ್ನು ಬಿಟ್ಟೇಬೀಸರ ದಿಂದ ಬರೆದು ಬಿಟ್ಟರೆ ಇವರು ಕೃತಕೃತ್ಯರಾದರು. ಇಂಥ ನಮ್ಮ ಸಂಪನ್ನ ವಿದ್ಯಾರ್ಥಿ ಗಳ ಕರಕಮಲವನ್ನು ಅಕ್ಷರ ದೇವಿಯು ಹ್ಯಾಗೆ ಹಿಡಿಯಬೇಕು? ಅಂದಮೇಲೆ ಇವರ ಅಕ್ಷರಗಳು ಕತ್ತೆಯಕಾಲೋ ನಾಯಿಯಕಾಲೋ ಆಗುವದರಲ್ಲಿ ಸಂಶಯವಿಲ್ಲ.

ಈ ಅನಾಸ್ಥೆಯ ತಪ್ಪನ್ನು ಕೇವಲ ವಿದ್ಯಾರ್ಥಿಗಳ ಮೇಲೆ ಹಾಕುವದು ಯೋಗ್ಯ ವಲ್ಲ. ಈ ತಪ್ಪು, ಸುದಾರಣೆ ಸುಧಾರಣೆ ಎಂದು ಓಡುತ್ತಿರುವ ಈಗಿನ ಶಿಕ್ಷಣ ಪದ್ಧ ತಿಯ ಕಡೆಗೆ ಉಂಟೋ ಅಥವಾ ನಿರರ್ಥಕವಾದ ಈ ಕ್ಷುದ್ರ ವಿಷಯದ ಕಡೆಗೆ ಅಷ್ಟೊಂದು ಶ್ರಮವನ್ನು ಯಾರು ವಹಿಸಬೇಕೆಂದೆನ್ನುವ ಅದೂರ ದರ್ಶಿಗಳಾದ ಶಿಕ್ಷ ಕರ ಕಡೆಗುಂಟೋ ಎಂಬದನ್ನು ಯೋಚಿಸತಕ್ಕದ್ದಾಗಿದೆ. ಶಿಕ್ಷಣ ಪದ್ಧತಿಯ ಮೇಲೆ ಈ ದೋಷವನ್ನು ಹೊರಿಸಬೇಕೆಂದರೆ:– ಪ್ರತಿಯೊಂದು ವಿಷಯವು ಸರಾಸ್ಯವಾಗಿ ಸಪ್ರ ಯೋಗವಾಗಿ ಕಲಿಸಲ್ಪಡಬೇಕೆಂದು ವಿದ್ಯಾಖಾತೆಯವರಿಂದ ಮೇಲಿಂದಮೇಲೆ ಸೂಚನೆ ಗಳೂ ಪಾಠದ ಟಿಪ್ಪಣಿಗಳೂ–ಶಿಕ್ಷಣಕ್ರಮಗಳೂ ಪ್ರಕಟವಾಗುತ್ತಿರುತ್ತವೆ. ಈ ಬಗ್ಗೆ ಸಾರ್ವತ್ರಿಕವಾಗಿ ಶಿಕ್ಷಕ ಸಮ್ಮೇಲನಗಳು ಆಗೇ ಆಗುತ್ತಿರುತ್ತವೆ. ಶಿಕ್ಷಣ ಪ್ರಸರಣ ಕ್ಕಾಗಿ ತಜ್ಞ ಅಧಿಕಾರಿಗಳು, ಅವಿಶ್ರಾಂತ ಶ್ರಮಬಡುತ್ತಿರುತ್ತಾರೆ. ಶಿಕ್ಷಣ ಸುಧಾ

ರಣೆಗಾಗಿ ಪ್ರತಿವರ್ಷ ಲಕ್ಷಾವಧಿ ರೂಪಾಯಿಗಳು ವೆಚ್ಚ ಮಾಡಲ್ಪಡುತ್ತಿರುತ್ತವೆ ಅಂದ ಮೇಲೆ ಶಿಕ್ಷಣ ಪದ್ಧತಿಯು ತನ್ನ ಕರ್ತವ್ಯದಲ್ಲಿ ದಕ್ಷವಾಗಿಯೇ ಇರುತ್ತದೆಂದು ಹೇಳಬೇಕಾಗುತ್ತದೆ. ಕಾರಣ ಈ ಅನಾವಸ್ಥೆಯಲ್ಲಿ ಶಿಕ್ಷಣಕಾರ್ಯವನ್ನೂ ಕೈಕೊಂಡ ನಮ್ಮೆಲ್ಲ ಶಿಕ್ಷಕರ ಕಡೆಗೇ ಉಂಟಿಂದು ಹೇಳುವದು ಯೋಗ್ಯ ತೋರುತ್ತದೆ. ಅಂದ ಮೇಲೆ ವಿದ್ಯಾರ್ಥಿಗಳ ಕಡೆಗೆ ಏನು ತಪ್ಪುಂಟು? ಈ ತಪ್ಪು ನಮ್ಮ ಕಡೆಗೇ ಉಂಟು ಯಾಕಂದರೆ, ನಾವು ಯಾವ ವಿಷಯದ ಕಡೆಗೆ ಲಕ್ಷ್ಯಗೊಟ್ಟು ಕಲಿಸುತ್ತೇವೋ ಆ ವಿಷಯವು ನೆಟ್ಟಗಾಗುವದೆಂಬುದು ನಮಗೆ ಪೂರ್ಣ ಗೊತ್ತಿರುತ್ತದೆ. ಹುತಿಯು ಹೊಡೆದಂತೆ ನುರಿಯುತ್ತದೆ. ಅದರಂತೆ ವಿದ್ಯಾರ್ಥಿಗಳು ಕಲಿಸಿದಂತೆ ಕಲಿಯುತ್ತಾರೆ. ಗಣಿತ ವ್ಯಾಕರಣಾದಿ ವಿಷಯಗಳ ಕಡೆಗೆ ನಾವು ಲಕ್ಷ್ಯಕೊಡುತ್ತಿರುವಂತೆ ಅವರ ಅಕ್ಷರ ಸುಧಾರಣೆಯ ಕಡೆಗೂ ಲಕ್ಷ್ಯ ಪೂರೈಸಿದರೆ ಅವರ ಅಕ್ಷರಗಳೂ ಸುಧಾರಿಸುವವೆಂದು ಹೇಳಲಿಕ್ಕೆ ಬೇಡ.

ಅಕ್ಷರಸುಧಾರಣೆಗಾಗಿ ಎಲ್ಲ ಶಿಕ್ಷಕಶಿಕ್ಷಕಿಯರು ಅವಶ್ಯ ಕೈಕೊಳ್ಳತಕ್ಕ ಉಪಾಯಗಳು.

(೧) ಪ್ರತಿದಿವಸ ಪ್ರಾತಃಕಾಲದಲ್ಲಿ ವಿದ್ಯಾರ್ಥಿಗಳು ಮೊದಲಿಗೆ ಕಿತ್ತೇ ತೀಡಿ, ಪಿರಡು ಬರೆದು, ಆ ಕಿತ್ತೆಯನ್ನು ಮುಂದಿಟ್ಟುಕೊಂಡು ದಿನದ ಕಾಪಿಯನ್ನು ಬರೆಯುವಂತೆ ಎಲ್ಲ ಶಿಕ್ಷಕರು ಕ್ರಮವನ್ನಿಡತಕ್ಕದ್ದು.

(೨) ವಿದ್ಯಾರ್ಥಿಗಳು ಬರೆದ ಕಾಪಿಯೊಳಗಿನ ಅಕ್ಷರಗಳನ್ನು ಶಿಕ್ಷಕರು ಮನ ವಿಟ್ಟು ನೋಡಿ ತಿದ್ದಿ ಕೊಡಬೇಕು. ಮತ್ತು ಕೆಟ್ಟ ಅಕ್ಷರಗಳಿಗೂ ಕಿತ್ತೆಯೊಳಗಿನ ಅಕ್ಷರಗಳಿಗೂ ಹಚ್ಚಿತೋರಿಸಿ ಅದರಂತೆ ಪುನಃ ಬರೆಯಲಿಕ್ಕೆ ಹಚ್ಚಬೇಕು. ಬರಹದ ಕಡೆಗೆ ಲಕ್ಷ್ಯ ಕೊಟ್ಟಷ್ಟು ಅವುಗಳನ್ನು ತಿದ್ದುವದರ ಕಡೆಗೂ ಲಕ್ಷ್ಯಕೊಡಬೇಕು.

(೩) ಯಾವ ಹುಡುಗರಿಗೆ ಯಾವ ಅಕ್ಷರಗಳನ್ನು ನೆಟ್ಟಗೆ ಬರೆಯುವದಕ್ಕೆ ಬರುವದಿಲ್ಲವೋ ಅವೇ ಅಕ್ಷರಗಳನ್ನು ಅವರಿಂದ ಪುನಃ ಪುನಃ ಬರೆಯಿಸುತ್ತಿರಬೇಕು. ಬಂದ ಅಕ್ಷರಗಳನ್ನು ಬಿಟ್ಟು ಬಾರದ ಅಕ್ಷರಗಳನ್ನೇ ಬರೆಯಿಸುವದು ಲೇಸು.

(೪) ದಿನಾಲು ಬರೆದ ಅಕ್ಷರಗಳನ್ನೇ ತಿರುತಿರುಗಿ ಬರೆಯಿಸದೆ ಬೇರೆಬೇರೆ ಅಕ್ಷರಗಳನ್ನು ಅಥವಾ ವಾಕ್ಯಗಳನ್ನು ಬರೆಯಿಸಬೇಕು.

(೫) ಕಿತ್ತೆ-ಕಾಗದ-ಮಸಿದೌತಿ-ಲೆಕ್ಕಣಿಕೆ ಪುಷ್ಪೀಪತ್ರ ಮೊದಲಾದ ಲೇಖನೋಪಕರಣಗಳು ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ ಇರುತ್ತವೆಂಬದನ್ನು ಶಿಕ್ಷಕರು

ದಿನಾಲು ತಪ್ಪದೆ ನೋಡುವದರಲ್ಲಿ ಜಾಗ್ರತರಿರಬೇಕು. ಪುಷ್ಟೀಪತ್ರವು ಮೃದುವಾಗಿ ರಬೇಕು.

(೬) ಬರೆಯಲಿಕ್ಕೆ ಕೂಡುವ ಪದ್ಧತಿಯು ಕಡೆಗೂ, ಸ್ವಚ್ಛತೆಯ ಕಡೆಗೂ ಲೇಕ್ಕಣಿಕೆಯನ್ನು ಹಿಡಿಯುವದರ ಕಡೆಗೂ ಹೆಚ್ಚು ಲಕ್ಷ್ಯಕೊಡಬೇಕು. ಶಿಕ್ಷಕರು ತಾವು ಸ್ವತಃ ಬರೆಯಲಿಕ್ಕೆ ಕೂತು ಲೆಕ್ಕಣಿಕೆಯನ್ನು ಹಿಡಿದು ಬರೆದು ತೋರಿಸಬೇಕು.

(೭) ಎಷ್ಟೋ ಹುಡುಗರು ಲೆಕ್ಕಣಿಕೆಯನ್ನು ಹಿಡಿಯಲಿಕ್ಕೆ ಬಾರದ್ದರಿಂದ ಅಕ್ಷರಗಳನ್ನು ಕೆಡಿಸಿಕೊಳ್ಳುತ್ತಿರುವರು. ಲೆಕ್ಕಣಿಕೆ ತೀರ ಗಿಡ್ಡವಿರದೆ, ಬರೆಯಲಿಕ್ಕೆ ತಕ್ಕಷ್ಟು ಉದ್ದವಾಗಿರಬೇಕು. ಅದು ಅಯಾ ಇಯತ್ತೆಗಳ ಅಕ್ಷರ ಪ್ರಮಾಣದಂತೆ ಕೆತ್ತಿದ ಅಲಗುಳ್ಳದ್ದಿರಬೇಕು. ಅದು ಚೆನ್ನಾಗಿ ಕೆತ್ತಲ್ಪಡದೆ ಇದ್ದರೆ ಅದರಿಂದ ಚಲೋ ಅಕ್ಷರಗಳು ಹೊರಡುವದಿಲ್ಲ.

(೮) ಚಲೋ ಲೆಕ್ಕಣಿಕೆ ಇದ್ದು ಅದನ್ನು ಹಿಡಿಯಲಿಕ್ಕೆ ಬಂದರೆ ಅದರಿಂದ ಗಡುತರ ಭಾಗವೂ, ಸಣ್ಣಭಾಗವೂ ಸ್ವಾಭಾವಿಕವಾಗಿ ಮೂಡಿ, ಅಕ್ಷರಗಳು ಸುಂದರವಾಗುತ್ತವೆ. ಅಕ್ಷರಗಳನ್ನು ಬಹಳ ಒತ್ತಿ ಬರೆಯದೆ ಅದಷ್ಟು ತೇಲಿಸಿ ಬರೆಯುವದು ನೆಟ್ಟಗೆ.

(೯) ಬರಹದ ಕೆಲಸಕ್ಕೆ ಅಂದರೆ ಅಕ್ಷರ ಸುಧಾರಣೆಗೆ ಲೆಕ್ಕಣಿಕೆಗಳನ್ನೇ ಉಪಯೋಗಿಸತಕ್ಕದ್ದು. ಟಾಕುಗಳಿಂದ ಅಕ್ಷರಗಳು ನೆಟ್ಟಗಾಗುವದಿಲ್ಲ. ತಿರುಗಿ ಕೇಳಿದರೆ ಅವುಗಳ ಬರವಣಿಗೆಯಿಂದ ಇದ್ದ ಅಕ್ಷರಗಳೂ ಕೂಡ ಕೆಟ್ಟುಹೋಗುವವೆಂದು ನನ್ನ ಅಭಿಪ್ರಾಯವದೆ.

(೧೦) ಮಸಿಯು ತೀರ ತೆಳ್ಳಗೂ ಹೆಚ್ಚು ದಡಸೂ ಇರದೆ ಬರೆಯಲಿಕ್ಕೆ ಹಾಳ ತಾಗುವಂತೆ ಇರಬೇಕು.

(೧೧) ಮಸಿ ಸಿಡಿಸುವ ಕೆಟ್ಟ ಚಟವು ಹತ್ತದಂತೆ ಶಿಕ್ಷಕರು ಆರಂಭದಿಂದಲೇ ದಕ್ಷರಾಗಿರಬೇಕು. ಬರೆಯುವಾಗ ಬೆರಳುಗಳಿಗೆ ಮಸಿ ಹತ್ತದಂತೆ ಎಚ್ಚರಪಡಬೇಕು ಅಕ್ಷರಗಳ ಅವಯವಗಳನ್ನೂ ಅವುಗಳ ಪ್ರಮಾಣವನ್ನೂ ಚೆನ್ನಾಗಿ ತಿಳಿಸಿ ಅವುಗಳನ್ನು ರೂಲಿನಲ್ಲಿ ಬರೆಯಿಸುವ ಪರಿಪಾಠವಿಡತಕ್ಕದ್ದು. ಕನ್ನಡ ಅಕ್ಷರಗಳು ಸ್ವಾಭಾವಿಕವಾಗಿ ವರ್ತುಲದ ತತ್ವಕ್ಕನುಸರಿಸಿ ಇರುವದರಿಂದ ಅದಷ್ಟು ದುಂಡು ಒರೆಯುವಂತೆ ಎಚ್ಚರಪಡೆಯತಕ್ಕದ್ದು.

(೧೨) ದೊಡ್ಡ ಅಕ್ಷರಗಳ ಕಡೆಗೆ ಲಕ್ಷ್ಯಕೊಟ್ಟಂತೆ ಸಣ್ಣ ಅಕ್ಷರಗಳ ಕಡೆಗೂ ಶುದ್ಧ ಬರಹದ ಕಡೆಗೂ ಲಕ್ಷ್ಯಕೊಡುತ್ತಿರಬೇಕು.

(೧೩) ಕಾಗದದ ಮೇಲಿನ ಅಕ್ಷರಗಳ ಕಡೆಗೆ ಲಕ್ಷ್ಯಕೊಟ್ಟಂತೆ ಸ್ಲೇಟಿನ ಮೇಲಿನ ಬರಹದ ಕಡೆಗೂ ಲಕ್ಷ್ಯಕೊಡುತ್ತಿರಬೇಕು.

(೧೪) ಅಕ್ಷರಗಳನ್ನು ವಿಂಗಡಿಸಿ ಬರೆಯಿಸದೆ ಶಬ್ದಗಳನ್ನು ವಿಂಗಡಿಸಿ ಬರೆಯಲಿಕ್ಕೆ ಕಲಿಸಬೇಕು.

(೧೫) ಪಾಠದ ಟಿಪ್ಪಣಿಗಳನ್ನೂ ಸ್ಮರಣದಲ್ಲಿಡತಕ್ಕ ಸಂಗತಿಗಳನ್ನೂ ಪತ್ರವ್ಯವಹಾರ ನಿಬಂಧ ಮೊದಲಾದವುಗಳನ್ನೂ ವಿದ್ಯಾರ್ಥಿಗಳ ಕಡೆಯಿಂದ ಆಗಾಗ್ಗೆ ಬರೆಯಿಸುತ್ತಿರಬೇಕು. ಕೆಲ ಹುಡುಗರು ಬೇರೊಬ್ಬರ ಕಡೆಯಿಂದ ಬರೆಯಿಸಿ ತರುತ್ತಿರುತ್ತಾರೆ. ಅದನ್ನು ತಪ್ಪಿಸಿ ಅವರೇ ಬರೆಯುವಂತೆ ಕಟ್ಟುಮಾಡತಕ್ಕದ್ದು. ಶಾಸ್ತ್ರಕ್ಕಿಂತ ರೂಢಿಯ ಬಲದಿಂದ ಹೆಚ್ಚು ಕೆಲಸವಾಗುತ್ತದೆ. ಕಾರಣ ಬರಹದ ರೂಢಿಯು ಅವರಿಗೆ ಹೆಚ್ಚಿಸಿರಬೇಕು. ಉದಾಹರಣಾರ್ಥವಾಗಿ— ಕನ್ನಡ ಬರಹದ ರೂಢಿಯನ್ನು ಬಿಟ್ಟು ಹಾಯಸ್ಕೂಲಿನ ವಿದ್ಯಾರ್ಥಿಗಳ ಅಕ್ಷರಗಳನ್ನು ನೋಡಿರಿ. ಅವರ ಅಕ್ಷರಗಳ ದುಂಡಕಟ್ಟು ತಪ್ಪಿ ಮಂಡವಾಗಿರುತ್ತವೆ.

(೧೬) ಕೆಲ ವಿದ್ಯಾರ್ಥಿಗಳು ಅಚ್ಚಿನ ಅಕ್ಷರಗಳ ಅನುಕರಣಮಾಡಿ ಕಾಪೀ ಬರೆಯತೊಡಗುತ್ತಾರೆ. ಅದು ನೆಟ್ಟಗಲ್ಲ. ಕಿತ್ತೆಯೊಳಗಿನ ಅಕ್ಷರಗಳ ಅನುಕರಣ ಮಾಡಲಿಕ್ಕೆ ಅವರಿಗೆ ಹೇಳಬೇಕು. ಅಚ್ಚಿನ ಅಕ್ಷರಗಳು ಕೇವಲ ನೋಟಕ್ಕೆ ಮಾತ್ರ ಮಾಟ ಕಾಣುವಂತೆ ತಿದ್ದಿ, ತೀಡಿದ ಅಕ್ಷರಗಳಿರುತ್ತವೆ. ಅವು ಶಾಸ್ತ್ರೋಕ್ತ ಅಕ್ಷರಗಳಲ್ಲ. (ಕೃತ್ರಿಮಾಕ್ಷರಗಳು) ಲೆಕ್ಕಣಿಕೆಯಿಂದ ಸ್ವಾಭಾವಿಕವಾಗಿ ಬರೆದ ಕಿತ್ತೆಯೊಳಗಿನ ಅಕ್ಷರಗಳೇ ಅನುಕರಣೀಯ ಸ್ವಾಭಾವಿಕ ಅಕ್ಷರಗಳೆಂದು ಅವರಿಗೆ ತಿಳಿಸಿ ಹೇಳಬೇಕು. ಬರಹದ ಪದ್ಧತಿಯನ್ನು ಮಾತ್ರ ಅಚ್ಚಿನ ಪುಸ್ತಕಗಳಲ್ಲಿದ್ದಂತೆ ಅನುಕರಿಸಲಿಕ್ಕೆ ಅಡ್ಡಿಯಿಲ್ಲ.

(೧೭) ಶಾಲೆಯೊಳಗೆ ತೂಗಹಾಕುವ ಪಣ್ಯಮಾಲೆಯು ಪಟಗಳೂ, ನೀತಿಯ ವಾಕ್ಯಗಳೂ ಕಿತ್ತೆಯ ಮಾದರಿಯ ಅಕ್ಷರಗಳುಳ್ಳವಿದ್ದು ವಿದ್ಯಾರ್ಥಿಗಳ ಲಕ್ಷ್ಯವನ್ನು ತೀವ್ರ ಸೆಳಕೊಳ್ಳುವಂತೆ ತರತರದ ಬಣ್ಣಗಳಿಂದ ಮೋಹಕವಾಗಿರಬೇಕು.

ಮನೆಗಳಲ್ಲಿ ಸಹ ಚಿತ್ರದ ಕನ್ನಡಿಗಳ ಜೊತೆಗೆ ನಡುನಡುವೆ ಅಂದವಾದ ಅಕ್ಷರಗಳಿಂದ ಬರೆಯಲ್ಪಟ್ಟ ನೀತಿಯ ವಾಕ್ಯಪಟಗಳನ್ನು ಕಟ್ಟುವದು ನೆಟ್ಟಗೆ. ಇದರಿಂದ ಮಕ್ಕಳ ಹೃದಯ ಪಟಲದ ಮೇಲೆ ಆ ವಾಕ್ಯಗಳಂತೆ ಅಕ್ಷರಗಳಾದರೂ ಮೂಡುವವು.

(೧೮) ಅತ್ಯುತ್ತಮ ಅಕ್ಷರಗಳನ್ನು ಬರೆಯುವ ವಿದ್ಯಾರ್ಥಿಗಳಿಗೆ ಶಿಕ್ಷಕಸಮ್ಮೇ
ನಗಳಲ್ಲಿ ಉತ್ತೇಜನ ದೊರೆಯುತ್ತಿರುವ ಏರ್ಪಾಡಾಗಬೇಕು.

(೧೯) ಪ್ರತಿಯೊಂದು ಶಾಲೆಯ ಶಿಕ್ಷಕರು ತಮ್ಮ ತಮ್ಮ ಶಾಲೆಗಳಲ್ಲಿ ವರ್ಷ
ಕ್ಕೊಮ್ಮೆಯಾದರೂ ಅಕ್ಷರ ಪರೀಕ್ಷೆಯನ್ನಿಟ್ಟು ಉತ್ತಮ ಅಕ್ಷರ ಬರೆದ ವಿದ್ಯಾರ್ಥಿಗಳಿಗೆ
ಉಚಿತ ಕೊಡಿಸತಕ್ಕದ್ದು.

ಸಾರಾಂಶ ಅಕ್ಷರಗಳು ಸಪ್ರಮಾಣವಾಗಿಯೂ, ದುಂಡಕಟ್ಟಾಗಿಯೂ, ಸರಿ
ಯಾಗಿಯೂ ನಾಲ್ಕೊಂಡು ಇರತಕ್ಕದ್ದು.

ಸೂಚನೆಃ— ಬಹಳ ದಿವಸಗಳಿಂದ ನಾನು ನಮ್ಮ ಶಾಲೆಯಲ್ಲಿ ಅಕ್ಷರಸುಧಾ
ರಣೆಯ ದಿಸೆಯಿಂದ ಇದೇ ಕ್ರಮವನ್ನು ಇಟ್ಟದ್ದರಿಂದ ಬಹುಶಃ ನನ್ನ ವಿದ್ಯಾರ್ಥಿಗಳ
ಅಕ್ಷರಗಳ ಹೋಲಿಕೆಯು ಕೇವಲ ನನ್ನ ಅಕ್ಷರಗಳಂತೆಯೇ ಆಗಿರುತ್ತದೆಂದು ಅನುಭವ
ದಿಂದ ಹೇಳುತ್ತೇನೆ. ಬಹು ದಿವಸದಿಂದ ನನ್ನೊಡನೆ ಇದ್ದ ಕೆಲ ಪ್ರೌಢವಿದ್ಯಾರ್ಥಿ
ಗಳ ಅಕ್ಷರಗಳೂ ನನ್ನ ಅಕ್ಷರಗಳೂ ಮಿಲಿತವಾಗಿ ಒಮ್ಮೊಮ್ಮೆ ಬದಲಾದಂತೆ ಭಾಸವಾ
ಗುತ್ತಿರುತ್ತದೆ. ನನ್ನ ಕೈಕೆಳಗೆ ಕಲಿತು ಶಿಕ್ಷಕರಾಗಿದ್ದ ಶಿಷ್ಯಮಂಡಳಿಯ ಅಕ್ಷರಗಳ
ಲಕ್ಷಣವೆಲ್ಲ ಬಹುಶಃ ನನ್ನ ಅಕ್ಷರಗಳಂತೆಯೇ ಇರುತ್ತದೆ. ಇದು ಕೇವಲ (೧) ಅಕ್ಷರ
ನಿರೀಕ್ಷಣ (೨) ಅನುಕರಣ (ಕಿತ್ತಿ ತೀಡೋಣ) (೩) ಲೇಖನ ಇವುಗಳ ಬಲವಾದ
ರೂಢಿಯಿಂದಲೇ ಆಗಿರುತ್ತದಲ್ಲದೆ ಬೇರೊಂದಿಲ್ಲ. ಆದದರಿಂದ ಅಕ್ಷರ ಸುಧಾರಣೆಗೆ
ಬರಹದ ರೂಢಿಯೇ ಬಲವಾದ ಸಾಧನವೆಂದು ಖಂಡಿತವಾಗಿ ಹೇಳುತ್ತೇನೆ.

ಅಕ್ಷರ ಸುಧಾರಣೆಗಾಗಿ ವರಿಷ್ಠಾಧಿಕಾರಿಗಳಾದರೂ ತುಸು ಪ್ರಯತ್ನಿಸತಕ್ಕ
ದ್ದಾಗಿದೆ.

(೧) ಒಳಗಡೆ ನಮ್ಮ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದ
ಗುರುವರ್ಯ ಕೈ. ರಾವಜಿ ಬಾಳಾಜಿ ಕರಂದೀಕರ ಇವರು ಉತ್ತಮ ಹಸ್ತಾಕ್ಷರ
ಗಳುಳ್ಳ ಕಿತ್ತೆಗಳನ್ನು ಪ್ರಸಿದ್ಧಪಡಿಸಿ ಅವೇ ಕಿತ್ತೆಗಳನ್ನು ಟ್ರೇನಿಂಗ ಕಾಲೇಜದ ವಿದ್ಯಾ
ರ್ಥಿಗಳಿಗೂ ಎಲ್ಲ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೂ ಉಪಯೋಗವಾಗಬೇ
ಕೆಂದು ಒತ್ತಾಯ ಪಡಿಸಿದರು. ಆ ಮೇರೆಗೆ ಈಗಾದರೂ ಶಾಲಾಖಾತೆಯ ವರಿಷ್ಠಾಧಿ
ಕಾರಿಗಳು ಹೊಸ ಕಿತ್ತೆಗಳನ್ನು ತೆಗಿಸಿ ಪ್ರಸಾರಗೊಳಿಸುವ ಏರ್ಪಾಡುಮಾಡುವದು
ಉಚಿತ ತೋರುವದು.

(೨) ಡೆಪೂಟಿ ಎ. ಇನಸ್ಪೆಕ್ಟರರು ಪರೀಕ್ಷೆಗೆ ಬಂದಕಾಲಕ್ಕೆ ಅಕ್ಷರಪರೀಕ್ಷ
ಕಾರ್ಯದಲ್ಲಿ ಇನ್ನಿಷ್ಟು ಲಕ್ಷ್ಯಕೊಡತಕ್ಕದ್ದು.

ಈ ಮೇರೆಗೆ ವಿದ್ಯಾರ್ಥಿಗಳೂ, ಶಿಕ್ಷಕರೂ, ಅಧಿಕಾರಿಗಳೂ ಪರಿಶ್ರಮಪಡು
ಹೋದರೆ ಅಕ್ಷರ ಸುಧಾರಣೆಯು ಚನ್ನಾಗಿ ಆಗುವದರಲ್ಲಿ ಸಂಶಯವಿಲ್ಲ.

---

೩. ಬಾಲಕರ ವರ್ಗಕ್ಕೆ ಅಂಕಿಮಗ್ಗಿಗಳನ್ನು ಕಲಿಸುವ ಪ್ರಕಾರವು.

(ಲೇಖಕ:— ಬಿ. ಎಸ್. ಗುಡಿನೋ ೧ನೇ ಅಸಿ. ಪೂ. ಸದಾಸಿವಗಡ.)

ಒಡವೆಗಳ ಅನೇಕತ್ವವು ಸಂಖ್ಯೆಯ ಉತ್ಪತ್ತಿಗೆ ಕಾರಣವಾಯಿತಷ್ಟೇ. ಶಾಲೆಯ
ಪ್ರವೇಶವಾಗುವ ಪೂರ್ವದಲ್ಲಿಯಾದರೂ ಬಾಲಕರಿಗೆ ಎಣಿಕೆಯ ಸಂಬಂಧದ ಅ
ಸ್ಪಲ್ಪ ಜ್ಞಾನವು ಇರುತ್ತದೆ. ಈ ಜ್ಞಾನವಾಗಲಿಕ್ಕೆ ಹಗಲೆಲ್ಲ ಅವರ ದೃಷ್ಟಿಗೆ ಬೀಳು
ಒಡವೆಗಳೇ ಕಾರಣವಾಗಿರುವವು. ಆದರೆ ೫–೬ರವರೆಗಿನ ಒಡವೆಗಳ ಜ್ಞಾನವು ಅ
ರಿಗೆ ಚನ್ನಾಗಿ ಆಗುತ್ತದೆ. ಅಂದರೆ ತಿರುತಿರುಗಿ ಅವರ ಲಕ್ಷ್ಯವನ್ನು ಎಳಕೊಳ್ಳುವ ಒಡ
ಗಳ ಮುಖಾಂತರ ಬಹುತರ ೫–೬ರ ವರೆಗೆ ಸ್ವಾಭಾವಿಕವಾಗಿ ಎಣಿಸುವ ಅಭ್ಯಾಸವಾ
ಗುತ್ತದೆಂದು ಅನ್ನಲಿಕ್ಕೆ ಅಡ್ಡಿಯಿಲ್ಲ. ಅಂದಮೇಲೆ ಮುಂದಿನ ಎಣಿಕೆಯನ್ನೂ ಒಡ
ಗಳ ಮುಖಾಂತರ ಕಲಿಸಬೇಕೆಂಬದು ನಿರ್ವಿವಾದವಾದದ್ದು. ದಿನಕ್ಕೊಂದುಸಾರೆಯಾ
ದರೂ ಮಣಿಗಳ ಹತ್ತತ್ತರ ರಾಶಿಮಾಡುತ್ತ ೧೦ರ ವರೆಗೆ ಎಣಿಸುವ ಅಭ್ಯಾಸವಿದು
ದರಿಂದ ಬಾಲಕರ ಮುಂದಿನ ಶಿಕ್ಷಣಕ್ಕೆ ಮೂಲಾಧಾರವಾದ ಕಾರ್ಯವು ಬಗೆಹ
ಯುತ್ತದೆ.

ಮೇಲಿನ ಕೆಲಸವು ನಡೆಯುತ್ತಲೇ ಬೇರೊಂದು ನಿಯಮಿತ ವೇಳೆಯಲ್ಲಿ ಹತ್ತ
ವರೆಗಿನ ಅಂಕೆಗಳನ್ನು ವಸ್ತುದರ್ಶನದಿಂದಲೇ ಕಲಿಸುವ ಕಾರ್ಯವು ಸಾಗಬೇಕ
ಅಮೇಲೆ ಹತ್ತರವರೆಗಿನ ಹತ್ತರ ಗಂಟುಗಳನ್ನು ಮಣಿಗಳ ಹತ್ತರ ರಾಶಿಗಳ ಆಧಾರದಿಂ
(ಮಣಿಗಳ ೨ ಹತ್ತರರಾಶಿ = ೨೦, ೩ ಹತ್ತರರಾಶಿ = ೩೦.....೧೦ ಹತ್ತರ ರಾಶಿ = ೧೦
ಅನ್ನಲಿಕ್ಕೂ ಬರೆಯಲಿಕ್ಕೂ ಕಲಿಸಬೇಕು. ೧೦ರವರೆಗೆ ಅಂಕೆಬರೆಯಲಿಕ್ಕೆ ತಿಳಿಯ
ವದರಿಂದ ೧೦ರ ವರೆಗಿನ ಎಲ್ಲ ಹತ್ತರ ಗಂಟುಗಳನ್ನು ಒಂದೆರಡು ದಿವಸದಲ್ಲಿ ಬರೆಯಲಿ
ಕಲಿಸುವದು ಬಿಗಿಯಲ್ಲ. ಈ ಪ್ರಕಾರ ಗಂಟುಗಳ ಬಗ್ಗೆ ಹುಡುಗರಿಗೆ ಜ್ಞಾನವಾ

ಮೇಲೆ ೨ ಹತ್ತು, ೩ ಹತ್ತು ಅನ್ನುವದಕ್ಕೆ ಬದಲಾಗಿ ಇಪ್ಪತ್ತು, ಮೂವತ್ತು ಎಂದೆ ನ್ನುವ ರೂಢಿಯುಂಟೆಂದು ಹೇಳಿ; ಅದರಂತೆ ಅನ್ನಲಿಕ್ಕೆ ಕಲಿಸಬೇಕು. ಆಮೇಲೆ ಸಂಯುಕ್ತಸಂಖ್ಯೆಗಳನ್ನು ಅವುಗಳೊಳಗಿನ ಹತ್ತರಗಂಟು ಬಿಡಿಕಾಳುಗಳಿಗೂ ಮಣಿ ಗಳ ಹತ್ತರರಾಶಿ ಬಿಡಿಕಾಳುಗಳಿಗೂ ಇರುವ ಸಾಮ್ಯದೊಡನೆ ಬರೆಯಲಿಕ್ಕೂ ಓದ ಲಿಕ್ಕೂ ಕಲಿಸಬೇಕು. ಇಷ್ಟಾದ ಬಳಿಕ ಕ್ರಮದಿಂದ ಎಣಿಸಿ ಬರೆಯುವ ರೂಢಿ ಮಾಡಿ ಸುವದಷ್ಟೇ ಕೆಲಸವು ಉಳಿಯುತ್ತದೆ.

ಸಂಖ್ಯೆಯ ಸಂಬಂಧದ ಜ್ಞಾನವು ಹುಡುಗರಿಗೆ ಚನ್ನಾಗಿ ಆದಮೇಲೆ, ಮಗ್ಗಿಕಲಿ ಸಲಾರಂಭಿಸಬೇಕು. ಮೊದಲು ಮಣಿಗಳ ಸಹಾಯದಿಂದ ಮಗ್ಗಿಗಳನ್ನು ಹುಡುಗರಿಂ ದಲೇ ನಿಶ್ಚಯಿಸಬೇಕು. ಆಮೇಲೆ ಬಾಯಿಪಾಠ ಮಾಡುವ ಅಭ್ಯಾಸ ಮಾಡಿಸಬೇಕು; ಮತ್ತು ಕನ್ನಡ ಶಾಲೆಗಳಲ್ಲಿ ಎಣಿಕೆಯನ್ನೂ ಮಗ್ಗಿಗಳನ್ನೂ ಕನ್ನಡದಲ್ಲಿಯೇ ಅನ್ನಲಿಕ್ಕೆ ಕಲಿಸಬೇಕು. ಕೆಲವು ಶಾಲೆಗಳಲ್ಲಿ ಎಣಿಕೆಯನ್ನೂ ಮಗ್ಗಿಯನ್ನೂ ಮರಾಠಿಯಲ್ಲಿ ಅನ್ನ ಲಿಕ್ಕೆ ಕಲಿಸುವ ಪ್ರಕಾರವು ಕಂಡುಬರುತ್ತದೆ. ಇದರಿಂದ ವೃಥಾ ಹುಡುಗರಿಗೆ ತೊಡ ಕಿನಲ್ಲಿ ಹಾಕಿದಂತಾಗುತ್ತದೆ. ಒಂದುವೇಳೆ ಎರಡೂ, ಮರಾಠಿಯಲ್ಲಿ ಅನ್ನಲಿಕ್ಕೆ ಕಲಿ ಸುವದರಿಂದ ಅಷ್ಟು ತೊಂದರೆಯಾಗುವ ಸಂಭವವಿರುವದಿಲ್ಲ. ಆದರೂ ಅದರಿಂದ ಇದರ ಕೆಳಗೆ ಬರೆದ ತೊಂದರೆಗಳು ಬರುತ್ತವೆ. ಅವಾವವೆಂದರೆ— ಸಂಯುಕ್ತಸಂಖ್ಯೆಗಳ ಮರಾಠೀ ಉಚ್ಚಾರವು ಕನ್ನಡ ರೂಢಿಗೆ ವಿರುದ್ಧವಾಗಿರುವದು; ಎಲ್ಲ ಹತ್ತರ ಗಂಟುಗ ಳಿಗೆ ವೀಸ, ತೀಸ ಎಂತ ಸ್ವತಂತ್ರ ಹೆಸರುಗಳಿರುವವು; ಇದಲ್ಲದೆ ಪ್ರತಿಯೊಂದು ಹತ್ತರ ಗಂಟುಪೂರ್ಣವಾಗುವ ಸಂಖ್ಯೆಯ ಹಿಂದಿನ ಸಂಖ್ಯೆಯು "ಏಕೋಣ" ಎಂಬ ವಿಶೇಷಣ ದೊಡನೆ ಅದೇ ಸಂಖ್ಯೆಯ ಹೆಸರಿನಿಂದ ಧ್ವನಿತವಾಗುತ್ತದೆ. ಸಣ್ಣ ಹುಡುಗರಿಗೆ ಇವು ಗಳ ಕಲ್ಪನೆ ಹುಟ್ಟಿಸುವದು ಬಿಗಿಯಾಗಿರುವದು.

---

೪ ಶ್ರದ್ಧೆ.

(ಲೇಖಕ:—ಚಿ ಆ. ರಾಘವೇಂದ್ರ ಮಾಸ್ತರ ಏಬೀಕುರಬೇಟ.)

ಯಾಜ್ಞಿಕರ ಸೋಮರಸದ ಆಹುತಿಯಿಂದ ವರ್ಷಾಕಾಲವೂ, ವರ್ಷಾಕಾಲದ ಆಹುತಿಯಿಂದ ಅನ್ನವೂ, ಅನ್ನದ ಆಹುತಿಯಿಂದ ರೇತವೂ, ರೇತದ ಆಹುತಿಯಿಂದ

ಗರ್ಭವೂ, ನಿರ್ವಾಣವಾಗಿರುವನು. ಇವೈದೂ ಮನುಷ್ಯನ ಶರೀರವೆಂಬ ಅಗ್ನಿಕುಂ
ದಲ್ಲಿ ಆಹುತಿಯಾಗಲು ಗರ್ಭಉತ್ಪನ್ನವಾಗುವದು. ಇದಕ್ಕೆ ಶ್ರದ್ಧೆಯೇ ಮೂಲಕಾರ
ವಾಗಿರುವದು. ಆದುದರಿಂದಲೇ ಗರ್ಭಕ್ಕೆ "ಶ್ರದ್ಧಾತನಯಃ" ಎಂದು ಅನ್ನುವ
"ಶ್ರದ್ಧಾಸಮಯೋऽಯಂಪುರುಷಃ" ಎಂಬಂತೆ ಪುರುಷಯುತ್ಪತ್ತಿಗೆ ಮುಖ್ಯ ಶ್ರದ್ಧೆಯು ಬೇಕಾಗಿ
ವದು. * ಶ್ರಾದ್ಧವನ್ನು ಶ್ರದ್ಧೆಯಿಂದ ಮಾಡಬೇಕು. ದಾನವನ್ನು ಶ್ರದ್ಧೆಯಿಂದ ಕೊ
ಬೇಕು. ಫಲಾಶೆಯು ಸರಿಯಲ್ಲ. ಇವುಗಳ ಲೆಕ್ಕವು ಚಿತ್ರಗುಪ್ತರಲ್ಲಿ ತಪ್ಪದೆ ಆಗುತ್ತಿರ
ವದು. ಕೆಲಸ ಮಾಡುವ ಉತ್ಕಟೇಚ್ಛೆಗೆ ಆಥವಾ ಆಸ್ತಿಕ ಬುದ್ಧಿಗೆ ಶ್ರದ್ಧೆಯೆಂಬ ಹೆಸರು
ಶತಪಥ ಬ್ರಾಹ್ಮಣ ಗ್ರಂಥದಲ್ಲಿ "ಶ್ರದ್ಧಾ ವಾ ಆಪಃ" ಎಂದು ಬರೆದಿರುವದು. ಇದರಂ
ಲಿಂದ ಕೈಗೊಂಡ ಕೆಲಸವನ್ನು ಅಂತಃಕರಣ ಪೂರ್ವಕವಾಗಿ ಮಾಡುವಕಾಲಕ
ಹೊರಡುವ ಅದೃಶ್ಯವಾದ ನೀರಿನ ಪ್ರವಾಹವೇ ಶ್ರದ್ಧೆಯೆಂದು ಹೇಳಲ್ಪಡುತ್ತದೆ.

ರೋಗಿಯ ಶ್ರದ್ಧೆಯು ಒಬ್ಬ ವಿವಕ್ಷಿತ ವೈದ್ಯನ ಮೇಲೆ ಇದ್ದರೆ ಆ ವೈದ್ಯನ ದರ್ಶ
ನ ಮಾತ್ರದಿಂದಲೇ ಅವನ ಅರ್ಧಬೇನೆಯು ವಾಸಿಯಾಗುವದು. ಮಾಂತ್ರಿಕನಮೇಲೆ
ಶ್ರದ್ಧೆ ಇದ್ದಲ್ಲಿ ಅವನ ಮಂತ್ರದಿಂದಲೇ ರೋಗನಿವಾರಣವಾಗುವದು. ಭಗವದ್ಗೀತೆಯಲ್ಲಿ
ಶ್ರೀಕೃಷ್ಣನು ಅರ್ಜುನನಿಗೆ ಮೇಲಿಂದ ಮೇಲೆ " ಅರ್ಜುನಾ, ನೀನು ಯಾವದೊಂದ
ಕೆಲಸದಲ್ಲಿ ಶ್ರದ್ಧೆಯುಳ್ಳವನಾಗು. ಅಂದರೆ ನಾನು ನಿನ್ನ ಹತ್ತರದಲ್ಲಿಯೇ ಇರುವೆನು."
ಎಂದು ಹೇಳಿರುವನು. ದೇವರಿಗೆ ಶ್ರದ್ಧೆಯ ಹೊರತು ಬೇರೆ ಏನೂ ಬೇಕಾಗಿರುವದಿಲ್ಲ
ದೇವರಮಾತು ಇರಲಿ ವ್ಯವಹಾರದಲ್ಲಿ ಸಹ ಹಿತಾಹಿತದಕಡೆ ಲಕ್ಷ್ಯಗೊಟ್ಟು ಸೇವೆಯ
ನ್ನು ಏಕನಿಷ್ಠೆಯಿಂದ ಮಾಡುತ್ತಿರುವ ಆಜ್ಞಾಧಾರಕನ ಕಲ್ಯಾಣದ ಕಡೆಗೆ ಮನಸಿನ
ಪ್ರವೃತ್ತಿಯಾಗದೆ ಉಳಿಯುವದಿಲ್ಲ. ದೇವರು ನಮ್ಮ ಸೂಕ್ಷ್ಮಶರೀರವನ್ನು ಶೋಧಿಸಿ
ನಿಜವಾಗಿ ಶ್ರದ್ಧೆಯುಳ್ಳವರಾಗಿದ್ದರೆ ಮಾತ್ರ ಕೃಪೆಮಾಡುವನು. ಆದಕಾರಣ ತೀರಕಡಿ
ಮೆ ಪ್ರತಿಯು ಕೂಲಿಕಾರನಿಂದ ಸಾರ್ವಭೌಮರಾಜನವರೆಗೆ ಮಾನವೀ ಕುಟುಂಬದವರೆ
ಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡಬೇಕೆಂಬದೇ ದೇವರ ಸಂಕೆ
ತವು. ಅವನಿಗೆ ಡಾಂಭಿಕತನವು ಸೇರುವದಿಲ್ಲ. ಅದರಂತೆ ಚಲೋ ಮನುಷ್ಯರ ಸ್ಥಿತಿ
ಯಾದರೂ ಇರುವದು. ನದಿಯಲ್ಲಿ ನಿಂತು ಮೂರು ಬೊಗಸೆ ನೀರನ್ನು ಬಿಡುವದರಿಂ
ಪ್ರಯೋಜನವಿಲ್ಲ. ಅಲ್ಲಿ ಶ್ರದ್ಧೆಯು ಬೇಕು.

---

* ॥ ಶ್ರದ್ಧಯಾದೀಯತೇ ಯಚ್ಚ ತಚ್ಛ್ರಾದ್ಧಂ ಪರಿಕೀರ್ತಿತಮ್ ॥ ಮರೀಚಿ ॥

ಮನುಷ್ಯನು ಪಶುಗಳಿಂದ ತನಗೆ ಅನುಕೂಲವಾಗುವಂತೆ ಕೆಲಸಗಳನ್ನು ಮಾಡಿ
ಕೊಳ್ಳುವನು. ಆದರೆ ಮನುಷ್ಯರು ಮಾತ್ರ ತಮ್ಮ ಕರ್ತವ್ಯಗಳನ್ನು ತಾವೇ ಶ್ರದ್ಧೆಯಿಂ
ಮಾಡಿದರೆ ಅನುಕೂಲವಾಗುವದು. ಇಲ್ಲದಿದ್ದರೆ ಆಗಲಾರದು. ಶ್ರದ್ಧೆಯಿಂದಲೇ
ಳಿದಾಸನು ವರಕವಿಯಾದನು. ಶ್ರದ್ಧೆಯಿಂದಲೇ ಹನುಮಂತನು ಶ್ರೀರಾಮಚಂ
ನ ಪ್ರೀತಿಗೆ ಪಾತ್ರನಾದನು. ಶ್ರದ್ಧೆಯಿಂದಲೇ ಮಾರ್ಕಂಡೇಯನು ದೀರ್ಘಾಯುಷಿ
ಾದನು. ಶ್ರದ್ಧೆಯಿಂದಲೇ ಶಿವಾಜೀ ಕಾಳಗದಲ್ಲಿ ಬಾಬರನು ಜಯಶಾಲಿಯಾದನು.
ದ್ಧೆಯಿಂದಲೇ ಸಾವಿತ್ರಿಯು ಗಂಡನ ಅಸುವನ್ನು ಪಡೆದಳು. ಅಹಾ! ಶ್ರದ್ಧೆಯ
ುಂದೆ ಯಾವದು ತಾನೆ ಅಸಾಧ್ಯವು? ಇನ್ನು ಇಂಥ ಶ್ರದ್ಧೆಯನ್ನು ಎಲ್ಲಿಂದ ತರಬೇ
ಂದು ಕೆಲವರು ಆಕ್ಷೇಪಗೊಳ್ಳಬಹುದು. ಅದ್ದರಿಂದ ಈ ಬಗ್ಗೆ ವಿದಗ್ಧ ಶಾಕಲ್ಯ
ಿಗಳಿಗೂ, ಶ್ರೀಯಾಜ್ಞವಲ್ಕ್ಯರಿಗೂ ಒಂದು ಪ್ರಸಂಗದಲ್ಲಿ ಆದ ಸಂವಾ
ರಣಿಯಲ್ಲಿ ಕೊಟ್ಟಿರುವೆನು:—

ವಿದಗ್ಧಶಾಕಲ್ಯ—ದಕ್ಷಿಣ ದಿಕ್ಕಿನ ದೇವತೆಯು ಯಾರು?

ಯಾಜ್ಞವಲ್ಕ್ಯ—ಯಮನು.

ವಿದಗ್ಧಶಾಕಲ್ಯ—ಯಮನು ಯಾತರಮೇಲೆ ಅಧಿಷ್ಠಿತನಾಗಿರುವನು?

ಯಾಜ್ಞವಲ್ಕ್ಯ—ಯಜ್ಞದ ಮೇಲೆ.

ವಿದಗ್ಧಶಾಕಲ್ಯ—ಯಜ್ಞವು ಯಾವದರ ಮೇಲೆ ಅಧಿಷ್ಠವಾಗಿರುವದು?

ಯಾಜ್ಞವಲ್ಕ್ಯ—ದಕ್ಷಿಣೆಯ ಮೇಲೆ.

ವಿದಗ್ಧಶಾಕಲ್ಯ—ದಕ್ಷಿಣೆಯು ಯಾತರ ಮೇಲೆ ಅಧಿಷ್ಠಿತವಾಗಿರುವದು?

ಯಾಜ್ಞವಲ್ಕ್ಯ—ಶ್ರದ್ಧೆಯ ಮೇಲೆ.

ವಿದಗ್ಧಶಾಕಲ್ಯ—ಶ್ರದ್ಧೆಯ ಸ್ಥಾನ ಯಾವದು?

ಯಾಜ್ಞವಲ್ಕ್ಯ—ಹೃದಯ.

ಅಂದಬಳಿಕ ಶ್ರದ್ಧೆಯು ಪ್ರತಿಯೊಂದು ಪ್ರಾಣಿಯಲ್ಲಿರುವದು. ಮಾನವೀ
ತಿಗೆ ಪರಿಪೂರ್ಣತ್ವವಿಲ್ಲದಿದ್ದರೂ ಶ್ರದ್ಧೆಯಿಂದ ಮಾಡಿದ ಕೆಲಸವು ಎದ್ದುಕಾಣು
ದು. ಅದರಲ್ಲಿ ವಿಶೇಷ ಕುಂದುಗಳು ದೊರೆಯಲು ಅಸ್ಪದವಿಲ್ಲ. ಕೇವಲ ಛಿದ್ರ
ಳನ್ನೇ ಹುಡುಕುವವರು ಕೀಳುತರದ ಮನುಷ್ಯರಾಗಿರುವರು.

---

೫ ಕಥೆ.

(ಲೇಖಕ:— ಬ. ಬ. ಪಟ್ಟಣಶೆಟ್ಟಿ. ಪ್ರಥಮೋಪಶಿಕ್ಷಕ ಕನ್ನಡ ಶಾಲಾ ಸಿಂದೀಕುರಬೇಟ.)

ಕಥೆಗಳನ್ನು ಕೇಳುವದರಲ್ಲಿ ವಿಶೇಷ ಆಸ್ಥೆಯನ್ನು ತೋರ್ಪಡಿಸುವದು ಎಲ್ಲ ಬಾಲಕರಲ್ಲಿಯೂ ಸಾಮಾನ್ಯವಾಗಿ ಕಾಣುವ ಒಂದು ಲಕ್ಷಣವಾಗಿರುವದು. ಕಥೆಗಳನ್ನು ಹೇಳಬೇಕೆಂದು ದೊಡ್ಡವರನ್ನು ಆಗಾಗ್ಗೆ ಪೀಡಿಸುವದು, ಅವರು ಹೇಳುವ ಕಥೆಯನ್ನು ಆದರದಿಂದ ಕೇಳುವದು, ಇವು ನಮ್ಮೆಲ್ಲರಿಗೂ ಗೊತ್ತಿದ್ದ ಸಂಗತಿಗಳು. ಚಿಕ್ಕ ಮಕ್ಕಳಲ್ಲಿರತಕ್ಕ ಈ ಕುತೂಹಲವನ್ನು ಪೂರೈಕೆ ಮಾಡುವದಕ್ಕಾಗಿ ನಾವು ಶಾಲೆಗಳಲ್ಲಿ ಕಥೆಯನ್ನು ಹೇಳಬೇಕಾಗುವದು.

ಕಥೆಗಳನ್ನು ಕೇಳುವದರಿಂದ ಅನೇಕ ಪ್ರಯೋಜನಗಳಿರುವವು.

(ಅ) ಕಥೆಗಳಿಂದ ಹುಡುಗರಿಗೆ ವ್ಯವಹಾರಜ್ಞಾನವನ್ನುಂಟುಮಾಡಬಹುದ ಹ್ಯಾಗಂದರೆ:— ಬಾಲಕರ ಸುತ್ತು ಮುತ್ತಲು ನಡೆಯುವ ವಿಷಯಗಳನ್ನು ಕಥೆಗಳ ಸೇರಿಸುವದರಿಂದ, ಇವು ಅವರಿಗೆ ಸಹಜ ತಿಳಿಯುವವು. ಇದಲ್ಲದೆ ಸುತ್ತುಮುತ್ತಲಿ ವಸ್ತುಗಳ ವಿಷಯಕ್ಕೂ. ಜನರ ವಿಷಯಕ್ಕೂ ಪ್ರೀತಿಯನ್ನುಂಟುಮಾಡುವದು. ಇ ರಿಂದ ಕೆಲಮಟ್ಟಿಗೆ ಎರಡನೇಯವರ ಸುಖದುಃಖಗಳು ತಮ್ಮವೇ ಎಂದು ತಿಳಿಯುವರು ಉದಾಹರಣಾರ್ಥವಾಗಿ " ನಿಜಗುಣಿ " " ಕಪ್ಪೆಗಳೂ ಹುಡುಗರೂ " ಈ ಕಥೆಗಳನ್ನ ಕೊಡಬಹುದು.

(ಬ) ಕಲ್ಪನಾಶಕ್ತಿಯು ಕಥೆಗಳಿಂದ ಸರಿಯಾದ ರೀತಿಯಲ್ಲಿ ಬೆಳೆಯುವದ ಈ ವಿಷಯದಲ್ಲಿ ಶಿಕ್ಷಕರು ಕಲ್ಪನೆಯನ್ನು ಅತಿಯಾಗಿ ವೃದ್ಧಿಪಡಿಸುವದರಿಂದ, ಅಂದ ಅಕ್ರಮವಾಗಿ ಮಾಡುವದರಿಂದ ವಿಶೇಷ ಅಪಾಯಗಳುಂಟಾಗುವದು. ಆದ್ದರಿಂ ಕಲ್ಪನೆಗೆ ಸರಿಯಾದ ಮಾರ್ಗದಲ್ಲಿ ಪ್ರವೃತ್ತಿಯುಂಟಾಗಲಿಕ್ಕೆ ಸಹಾಯವಾಗುವಂಥ ಕ ಗಳನ್ನು ಆರಿಸಿಕೊಳ್ಳಬೇಕಾಗುವದು.

(ಕ) ಕಥೆಗಳಿಂದ ಚಿಕ್ಕ ಬಾಲಕರಿಗೆ ಜನ್ಮ ಭಾಷೆಯ ಪರಿಚಯವಾಗುವದ ಶಾಲೆಗೆ ಪ್ರಾರಂಭಿಸುವ ಕಾಲಕ್ಕೆ ಮಕ್ಕಳಿಗೆ ಚನ್ನಾಗಿ ಮಾತಾಡಲಿಕ್ಕೆ ಬರುತ್ತಿರುವದಿ ಕಥೆಗಳನ್ನು ಹೇಳುವಾಗ ಬಾಲಕರ ಕೂಡ ವಿಶೇಷ ಮಾತಾಡಬೇಕಾಗುವದರಿ ಜನ್ಮ ಭಾಷೆಯ ಪರಿಚಯಕ್ಕೆ ಒಳ್ಳೇ ಸಹಾಯವಾಗುವದು.

(ಡ) ಸ್ಮರಣಶಕ್ತಿಯ ಬೆಳವಣಿಗೆಯು ಆಗುವದಲ್ಲದೆ, ಮನರಂಜನೆಯೂ ಆಗಿ ತಿಯ ಮಾತುಗಳು ದೃಢವಾಗುವವು. ಇದರಿಂದ ಮುಂದೆ ಅವರಿಗೆ ವ್ಯವಹಾರದಲ್ಲಿ ೀಷ ಸಹಾಯವಾಗುವದು.

ಕಥೆಗಳಲ್ಲಿ ಮುಖ್ಯವಾಗಿ ಎರಡು ಭಾಗಗಳನ್ನು ಮಾಡಬಹುದು.

(೧) ಕಲ್ಪಿತ ಕಥೆಗಳು.

(೨) ವಾಸ್ತವಿಕವಾಗಿ ನಡೆದ ಅಥವಾ ನಡೆಯಬಹುದಾದ ಕಥೆಗಳು.

ಕಲ್ಪಿತ ಕಥೆಗಳಲ್ಲಿ ಅನೇಕ ವಿಭಾಗಗಳಿರುವವು. ಕೆಲವು ಕಥೆಗಳು ದೇವತೆಗ ಿ ಸಂಬಂಧಪಟ್ಟವು. ಅಥವಾ ದೇವತೆಗಳ ಸಹಾಯದಿಂದ ಮನುಷ್ಯನ ವಿಷಯು ಲ್ಲಿ ನಡೆದ ಭಾಗಗಳನ್ನು ತಿಳಿಸುವಂಥವು. ಇನ್ನು ಕೆಲವು ತಿರ್ಯಗ್ಜಂತುಗಳಿಗೆ ಅಥವಾ ೃಗಳಿಗೆ ಭಾಷೆಯನ್ನಾರೋಪಿಸಿ ಬೆಳೆಸಿದ ಕಥೆಗಳಾಗಿರುವವು. ನಮ್ಮಲ್ಲಿಯು ಪಂಚ ತ್ರ, ಹಿತೋಪದೇಶ ಮೊದಲಾದ ಗ್ರಂಥಗಳಲ್ಲಿ ಹೇಳಿರುವ ಕಥೆಗಳಲ್ಲಿ ಅನೇಕ ಈ ಧದವು ಉಂಟು. ಕಲ್ಪಿತ ಕಥೆಗಳಿಂದ ಬಾಲಕರಿಗೆ ನೀತಿಯನ್ನು ಬೋಧಿಸುವದೇ ುಖ್ಯೋದ್ದೇಶವಾಗಿರುವದು. ಈ ವಿಧವಾದ ಕಥೆಗಳಿಂದ ಚಿಕ್ಕಮಕ್ಕಳ ನಡತೆ ನ್ನು ತಿದ್ದಲಿಕ್ಕೆ ವಿಶೇಷ ಪ್ರಯೋಜನವಾಗುವದು. ಆದರೆ ಪಶು, ಮೃಗ, ಸರ್ಪಾದಿ ಳು ಮಾತಾಡಬಲ್ಲವೇ? ಅಥವಾ ಕಥೆಯಲ್ಲಿ ಹೇಳಿದಂತೆ ನಡೆಯಬಲ್ಲವೇ? ಎಂದು ಲಕರ ಮನಸ್ಸಿನಲ್ಲಿ ಈ ಪ್ರಕಾರದ ಪರ್ಯಾಲೋಚನೆಯು ಹುಟ್ಟಿದಾಗ ಈ ಕಥೆಗ ಂದ ವಿಶೇಷ ಪ್ರಯೋಜನವಾಗಲಾರದು. ಯಾಕಂದರೆ — ಕಥೆಗಳಲ್ಲಿಯೇ ಮೊದಲು ವಿಶ್ವಾಸವುಂಟಾದರೆ, ಅದರಲ್ಲಿಯ ನೀತಿಯ ಮಾತುಗಳ ಮೇಲೆ ಎಷ್ಟು ವಿಶ್ವಾಸವಿಡ ರು? ಈ ಪ್ರಕಾರ ಪರ್ಯಾಲೋಚನೆಯು ಹುಟ್ಟಿದಾಗ ಈ ಕಥೆಗಳನ್ನು ಬಿಡಬೇಕಾ ುವದು. *

ವ್ಯವಹಾರಕ್ಕೆ ಸಂಬಂಧಪಟ್ಟ ಕಥೆಗಳಲ್ಲಿ ಅನೇಕ ಭಾಗಗಳಿರುವವು. ಕೆಲವು ಥೆಗಳು ಪ್ರಪಂಚದಲ್ಲಿ ನಿಜವಾಗಿ ನಡೆದ ಸಂಗತಿಯನ್ನು ತೋರಿಸುವವು. ಚರಿತ್ರೆ, ೀಶಸಂಚಾರ ಮೊದಲಾದ ಕಥೆಗಳು ಈ ವರ್ಗಕ್ಕೆ ಸೇರಿದವು. ಇನ್ನು ಬೇರೆ ಕೆಲವು ಜವಾಗಿ ಪ್ರಪಂಚದಲ್ಲಿ ನಡೆದ ಸಂಗತಿಗಳನ್ನು ತಿಳಿಸದಿದ್ದರೂ, ನಡೆಯಬಹುದಾದ ಂಗತಿಗಳನ್ನು ತಿಳಿಸುವವು. ಈ ವಿಧವಾದ ಕಥೆಗಳಿಂದಲೂ ಮಕ್ಕಳ ಕಲ್ಪನಾಶಕ್ತಿಯ

* ಈ ಪ್ರಕಾರ ಮೈಸೂರ ಗವರ್ನಮೆಂಟ ನಾರ್ಮಲ್ ಸ್ಕೂಲ ಆ| ಮಾಸ್ತರ ಮ. ರಾ ಎಂ. ವೆಂಕಟ ಾಚಾರ್ಯ ಬಿ. ಎ. ಇವರ ಅಭಿಪ್ರಾಯವದೆ.

ನ್ನು ಬೆಳೆಸಲಿಕ್ಕೂ ವ್ಯವಹಾರಜ್ಞಾನವನ್ನು ಉಂಟುಮಾಡಲಿಕ್ಕೂ ಬಳ್ಳೇ ಅನುಕೂಲ
ಳಾಗಿರುವವು.

ಕಥೆಗಳನ್ನು ಆರಿಸಿಕೊಳ್ಳುವಾಗ ಯೋಚಿಸುವ ಸಂಗತಿಗಳು.

(ಅ) ಮಕ್ಕಳ ವಯಸ್ಸಿಗೂ ಯೋಗ್ಯತೆಗೂ ತಕ್ಕಂತೆ ಇರಬೇಕು. ಸಣ್ಣ ಮಕ್ಕಳ
ಗೆ ಸಂತೋಷಕರವಾದ ಕಥೆಗಳು ಸ್ವಲ್ಪವಯಸ್ಸಾದವರಿಗೆ ರುಚಿಸದೆ ಇರಬಹುದು.
'ದೃಢನಿಶ್ಚಯ' ಇವನ್ನು ಬಾಲಕರಿಗೆ ಕಲಿಸಬೇಕಾದರೆ " ಜೀಡಹುಳ " " ಇನ್ನೊಮ್ಮೆ
ಪ್ರಯತ್ನಮಾಡು " ಮುಂತಾದ ವಾಚನ ಪಾಠಗಳಲ್ಲಿಯು ಕಥೆಗಳನ್ನು ಬಾಲಕರಿಗೆ ಹೇಳಿ
ದರೆ ಸಾಕಾಗುವದು. ಪ್ರೌಢವಿದ್ಯಾರ್ಥಿಗಳಿಗೆ ಇದನ್ನೇ ಕಲಿಸಬೇಕಾದರೆ ಪ್ರತಾಪ
ಸಿಂಹ, ಶಿವಾಜಿ ಮುಂತಾದವರ ಚರಿತ್ರೆಗಳನ್ನು ಹೇಳಿದರೆ ಆಸ್ಥೆಯಿಂದ ಕೇಳುವರು
ಮತ್ತು ಅವರ ಬಗ್ಗೆ ಪೂಜ್ಯಬುದ್ಧಿಯೂ ಹುಟ್ಟುವದು. ಇದರಂತೆ ಅರಸರ ವಿಷಯಕೂ
ದೇವರ ವಿಷಯಕ್ಕೂ ಸಣ್ಣ ಸಣ್ಣ ಕಥೆಗಳಿಂದ ಬಾಲಕರಿಗೂ, ಚರಿತ್ರೆ ಮುಂತಾದ ಕಥೆ
ಗಳಿಂದ ಪ್ರೌಢವಿದ್ಯಾರ್ಥಿಗಳಿಗೂ, ಪೂಜ್ಯಬುದ್ಧಿಯನ್ನುಂಟು ಮಾಡಬಹುದು.

(ಬ) ಕಥೆಗಳನ್ನು ಮನರಂಜನೆಯಾಗುವಂತೆಯೂ, ನೀತಿಯು ತತ್ವಗಳು ಸಹ
ವಾಗಿ ತಿಳಿಯುವಂತೆಯೂ ಕಲ್ಪಿಸುವದು ಸಾಮಾನ್ಯವಾದ ಸಂಗತಿಯಲ್ಲ. ಅಂದ
ಇದು ಎಲ್ಲರಿಗೂ ಸಾಧ್ಯವಾಗದ್ದಲ್ಲ. ಆದ್ದರಿಂದ ಪ್ರಸಿದ್ಧವಾದ ಗ್ರಂಥಗಳಿಂದ ಆರಿಸಿ
ಕಥೆಗಳನ್ನು ಹೇಳಲಿಕ್ಕೆ ಅಡ್ಡಿಯಿಲ್ಲ.

(ಕ) ನಾವು ಆರಿಸಿಕೊಂಡ ಕಥೆಗಳು ನಿರ್ದುಷ್ಟವಾದ ಅಂಶಗಳಿಂದೊಡಗೂಡಿ
ರಬೇಕು. ಬಾಲ್ಯದಲ್ಲಿ ನೆಲೆಸಿದ ಅಂಶಗಳು ಬಹುಕಾಲ ನಿಲ್ಲುವದರಿಂದ ಅತ್ಯುತ್ತಮ
ವಾದ ಕಥೆಗಳನ್ನು ಆರಿಸುವದು ಬಳ್ಳೇ ಮಹತ್ವದ ಸಂಗತಿಯು.

(ಡ) ನಾವು ಆರಿಸಿಕೊಂಡ ಕಥೆಗಳಿಂದ ಸಾಲಿಯ ಪಾಠಕ್ಕೆ ಕೆಲಮಟ್ಟಿಗೆ
ಸಹಾಯವಾಗುವಂಥವುಗಳಿರಬೇಕು.

ಕಥೆಗಳನ್ನು ಹೇಳುವಾಗ ಶಿಕ್ಷಕರು ಅನುಸರಿಸುವ ಕ್ರಮಗಳು.

(ಅ) ಕಥೆಗಳನ್ನು ಬಾಯಿಂದ ಹೇಳಬೇಕೇ ಹೊರತಾಗಿ ಪುಸ್ತಕದಿಂ
ಓದಬಾರದು.

(ಬ) ಸುಲಭವಾದ ಮಾತುಗಳನ್ನು ಆಡಬೇಕು.

(ಕ) ಅರ್ಥಕ್ಕನುಸಾರವಾಗಿ ಧ್ವನಿಯನ್ನು ಹೆಚ್ಚುಕಡಿಮೆ ಮಾಡಬೇಕು. ಕೆಲವ
ಪ್ರಸಂಗಗಳಲ್ಲಿ ಹಾವಭಾವವನ್ನೂ ಮಾಡಬೇಕಾಗುವದು.

(ಡ) ಒಂದೇ ಕಥೆಯನ್ನು ಪುನಃ ಪುನಃ ಹೇಳುವಾಗ ಮೊದಲು ಹೇಳಿದಂ ತೆಯೇ ಹೇಳಬೇಕು.

(ಇ) ಕಥೆಗಳನ್ನು ಹೇಳುವಾಗ ಅದರ ಭಾವವನ್ನು ತಿಳಿಸುವದಕ್ಕಾಗಿ ಚಿತ್ರಪತ ಗಳನ್ನು ಉಪಯೋಗಿಸಬೇಕು.

(ಫ) ಕಥೆಗಳಲ್ಲಿ ಬರುವ ಪಾತ್ರಗಳ ವಿಷಯವಾಗಿಯೂ ಮಕ್ಕಳ ವಿಷಯ ವಾಗಿಯೂ ಪ್ರೀತಿ ಇರಬೇಕು. ಇಲ್ಲದಿದ್ದರೆ ಕಥೆಯಲ್ಲಿ ಅವರಿಗೆ ಅದರ ಉಂಟಾಗಲಿಕ್ಕಿಲ್ಲ.

(ಗ) ಕಥೆಯನ್ನು ಹೇಳಿದ ತರುವಾಯ ಸಂಭಾಷಣ ಪದ್ಧತಿಯಿಂದ ಅದರ ಸಾರಾಂಶವನ್ನು ಅವರ ಬಾಯಿಂದ ಹೊರಡಿಸಬೇಕು.

(ಹ) ಅದಷ್ಟು ಮಟ್ಟಿಗೆ ನೀತಿಯನ್ನು ಹುಡುಗರಿಂದ ಹೊರಡಿಸಬೇಕೇ ಹೊರ ತಾಗಿ ತಾವಾಗಿಯೇ ಹೇಳಬಾರದು.

ಈ ಪ್ರಕಾರ ಕಥೆಗಳನ್ನು ಹೇಳಿದರೆ ವಿಶೇಷ ಪ್ರಯೋಜನವಾಗುವದೆಂದು ತೋರುವದು.

ಹಿಂದುಸ್ತಾನವೂ ಜರ್ಮನಿಯಿಂದ ಗಂಡಾಂತರವೂ.

(ಇದೇ ಸಂಚಿಕೆಯ ೨೪ನೇ ಪುಟದಿಂದ ಮುಂದೆ ಸಾಗಿದ್ದು)

ಇನ್ನು ಯುರ್ಪಿಯನ್ನರಲ್ಲಿಯು ಒಂದು ಮೂಲತತ್ವವು ಯಾವದೆಂದರೆ, ಯಾವದಾದ ರೊಂದು ನಿರ್ದಿಷ್ಟಸ್ಥಳಕ್ಕೆ ಸೈನ್ಯ ಒಯ್ಯುವದಾದರೆ, ಅದನ್ನು ಅದಷ್ಟು ಭಿನ್ನಭಿನ್ನ ವಾದ ಹಾಗೂ ಸಮಾನಾಂತರವಾದ ಮಾರ್ಗಗಳಿಂದ ಒಯ್ಯುತಕ್ಕದ್ದು. ಬರ್ಲಿನ್ನಿನಿಂದ ಮಧ್ಯವರ್ತಿಯದ ಮಾರ್ಗವಾಗಿ ಹಿಂದುಸ್ತಾನದ ಮೇಲೆ ದಾಳಿಬರಬಹುದೆಂದು ಕಲ್ಪಿಸಿ, ಸೈನ್ಯ ನೆರೆಯುವ ಸ್ಥಾನವು ಮರ್ವ ಇರುವದೆಂದು ಆಲೋಚಿಸಿ, ಮೇಲೆ ವಿವರಿಸಿದ ರೇಲಮಾರ್ಗಗಳು ಅದಕ್ಕೆ ಹ್ಯಾಗೆ ಸಂಬಂಧಿಸಿರುವವೆಂಬದನ್ನು ವಿಚಾರ ಮಾಡೋಣ:—

ಮರ್ವದಿಂದ ನಾಲ್ಕು ಸಮಾನಾಂತರವಾದ ಮಾರ್ಗಗಳು ಹೊರಡುತ್ತವೆ. ಅವುಗಳಲ್ಲಿ ತೀರ ದಕ್ಷಿಣ ದಿಕ್ಕಿನ ಮಾರ್ಗವು ಬರ್ಲಿನ್, ಕಾನಸ್ಟಾಂಟಿನೋಪಲ್, ಬಾಟೂಮ್, ಬಾಕೂಗಳ ಮೇಲೆ ಹಾಯುತ್ತದೆ. ಎರಡನೆಯದು ಬರ್ಲಿನ್, ಒಡೇಸಾ, ಬಾಟೂಮ್, ಬಾಕೂಗಳ ಮೇಲೆ ಹಾಯುತ್ತದೆ. ಈ ಎರಡನೇ ಮಾರ್ಗವು ಸೈನ್ಯಪ್ರಯಾಣಕ್ಕೆ ಬಹು ಅನುಕೂಲವಾದದ್ದೆಂದು ತಿಳಿಯಲ್ಪಡುತ್ತದೆ. ಯಾಕಂದರೆ ಒಡೇಸಾ ಬಂದರವು ನೌಕಾ

ಯುದ್ಧಕ್ಕೂ ಭೂಮಿಯ ಮೇಲಿನ ಯುದ್ಧಕ್ಕೂ ಅವಶ್ಯವಾದ ಎಲ್ಲ ಸಾಮಗ್ರಿಗಳಿಂದ ಪೂರ್ಣವಾದ ತಳವಿರುತ್ತದೆ. ವಾರನೆಯಮಾರ್ಗವು ಬರ್ಲಿನ್, ವಾರ್ಸಾ, ಮಾಸ್ಕೋ ಮತ್ತು ಬಾಕೂ ಶಹರಗಳ ಮೇಲಿಂದ ಹಾಯುತ್ತದೆ. ಈ ಎಲ್ಲ ಮಾರ್ಗಗಳಿಗೆ ಬಾಕೂದಲ್ಲಿ ಮೊದಲನೆಯ ತಳವಿರುವದು ಅವಶ್ಯವಾದದ್ದು. ನಾಲ್ಕನೆಯ ಮತ್ತು ಕಡೆಯ ಮಾರ್ಗವು ಬರ್ಲಿನ್, ವಾರ್ಸಾ, ವೋರೆನ್‌ಬರ್ಗ ಮತ್ತು ಸಮರ್ಕಂದಗಳ ಮೇಲಿಂದ ಹಾಯ್ದುಹೋಗುತ್ತದೆ. ಇನ್ನು ರಾಜಕೀಯ ಮತ್ತು ಬೇರೆತರವ ತೊಂದರೆಗಳೊಂದಾಗದಿದ್ದರೆ, ಮೇಲೆ ಹೇಳಿದ ೨ನೆಯ ಮತ್ತು ೪ನೆಯ ಮಾರ್ಗಗಳು ಮುಖ್ಯ ಮಾರ್ಗಗಳಾಗಿ, ಉಳಿದವುಗಳು ಅವಕ್ಕೆ ಸಹಕಾರಿಗಳಾಗುವವು. ಹೀಗಿದ್ದರೂ ಹಿಂದುಸ್ತಾನಕ್ಕೆ ಬರಬಹುದಾದ ದಾಳಿಯು ಸಂಭವನೀಯವಾದದ್ದೋ? ಎಂಬ ಪ್ರಶ್ನೆಯ ಉತ್ತರವು ಅತಿಗೂಢ ಮತ್ತು ಅಸ್ಪಷ್ಟ ಕಾರಣಗಳ ಮೇಲೆ ಅವಲಂಬಿಸಿರುತ್ತದೆ. ರೇಲ್ವೆ ಗಾಡಿಗಳನ್ನು ಪೂರೈಸುವದೇ ಎಲ್ಲಕ್ಕೂ ಮೊದಲಿನ ಮಾತು. ೨೦ ಸಾವಿರ ಆಳುಗಳೆಂದರೆ, ಸೈನ್ಯದ ಒಂದು ಡಿವ್ಹಿಜನ್ ಆಗುತ್ತದೆ. ಅಂಥ ಒಂದು ಡಿವಿಜನ್ನನ್ನು ಸ್ಥಳಾಂತರವಾಗಬೇಕಾದರೆ, ೧೫೦ ಹೊಗೆಬಂಡಿಯ ಟ್ರೇನುಗಳು (ಸಾಲುಗಳು) ಅವಶ್ಯವಾಗಿರುವವು. ರಶಿಯದವರ ಹತ್ತರ ಹೊಗೆಬಂಡಿಯ ಸಾಮಗ್ರಿಯೇ ಇಲ್ಲ. ಜಿಪಾನದವರ ಸಂಗಡ ಯುದ್ಧ ನಡೆದಾಗ ವ್ಲಾಡಿಹೋಸ್ಟಾಕ್ ರೇಲಮಾರ್ಗವನ್ನು ನಡಿಸುವದೇ ಅತಿ ಕಠಿಣವಾಗಿತ್ತು. ಜರ್ಮನ್ನರಿಂದ ರಶಿಯನ್ನರಿಗೆ ಹೊಗೆಬಂಡಿಗಳು ದೊರಕಬಹುದೆಂದು ಕಲ್ಪಿಸಲಿಕ್ಕೆ ಬರುವದಿಲ್ಲ. ಅಷ್ಟು ಹೊಗೆಬಂಡಿಗಳು ಜರ್ಮನಿಯ ಹತ್ತರ ಇರುವ ಸಂಭವನಿಲ್ಲ. ೨ನೆಯ ಮಾತು ಜನರ ಪೂರಯಿಕೆಗೆ ಸಂಬಂಧವಾದದ್ದು ಇರುತ್ತದೆ. ಜರ್ಮನಿಯ ಹತ್ತರ ಪರರಾಷ್ಟ್ರಕ್ಕೆ ಕಳಿಸುವದಕ್ಕೆ ಜನರೇ ಇಲ್ಲ. ಅವರು ಅವರು ಯುದ್ಧದಲ್ಲಿ ಕೈಸೆರೆ ಸಿಕ್ಕವರನ್ನೂ ಶ್ರಮಸಾಧ್ಯ ಕೆಲಸವನ್ನು ಮಾಡಲೊಲ್ಲದ ಅಸುತುಷ್ಟ ಜನರನ್ನೂ ಕಲೆ ಹಾಕಿ, ಸಾಧ್ಯವಾದರೆ ತುರ್ಕಸ್ತಾನದ ಕೆಲವು ಸೈನ್ಯವನ್ನು ಅವರಲ್ಲಿ ಕೂಡಿಸಿ, ಅವರೆಲ್ಲರ ಮೇಲೆ ಜರ್ಮನ್ ನಾಯಕರನ್ನು ನೇಮಿಸಿ, ಕೆಲ ಸೈನ್ಯವನ್ನು ಜರ್ಮನಿಯವರು ಸಿದ್ಧಮಾಡುವ ಸಂಭವವಿದೆ. ಇಷ್ಟಲ್ಲದೆ ಜರ್ಮನ್ನರು ಉತ್ತರ ಇರಾಣ ಮತ್ತು ಅಫಗಾಣಿಸ್ಥಾನಗಳಲ್ಲಿ ಎಷ್ಟೆಷ್ಟೊ ಒಳಸಂಚುಗಳನ್ನು ಮಾಡುತ್ತಲಿರುವರು. ಕಾಬೂಲದ ಅಮೀರನು ನಮ್ಮ ನಂಬಿಗೆಯ ಮಿತ್ರನಾಗಿದ್ದರೂ ತನ್ನ ತುಂಟ ಅನುಯಾಯಿಗಳನ್ನು ಯಾವಾಗಲೂ ನಿರ್ಬಂಧದಲ್ಲಿಡುವದು ಆತನಿಂದಾಗುವದಿಲ್ಲ. ಉತ್ತರದ ರಶಿಯದವರೂ ತುರ್ಕಸ್ಥಾನದವರೂ ಜಾಲುಮಂಯ ಅಡಳತೆಯ ಮೂಲಕ ರಶಿಯನ್ನರನ್ನು ಮನಃಪೂರ್ವಕವಾಗಿ ದ್ವೇಷಿಸುತ್ತಾರೆ. ಇದಲ್ಲದೆ ಆ

ಸ್ಥಾನಗಳಲ್ಲಿಯು ಧರ್ಮಮೂಢರು ಸ್ವಧರ್ಮದವರನ್ನೊಡಗೂಡಿ ಯುದ್ಧವಾಡುವ ಶಸ್ತ್ರದ ಒದಗಿದರೆ ಎದ್ದು ಕೂಡದೆ ಬಿಡರು. ಅದರಿಂದ ಸರಹದ್ದಿನಲ್ಲಿಯು ಭಿನ್ನ ಭಿನ್ನ ಕುಲಗಳ ಮನಸ್ಸು ಚಂಚಲವಾಗದೆ ಉಳಿಯುವು.

ಹೀಗಿದ್ದರೂ ಜರ್ಮನ್ನರಿಗೆ ರಶಿಯನ್ ರೇಲಮಾರ್ಗಗಳು ಎಷ್ಟರಮಟ್ಟಿಗೆ ಕೈವಶವಾಗುವವೆಂಬದನ್ನು ನಿಶ್ಚಿತವಾಗಿ ಹೇಳುವದು ದುಸ್ತರವದೆ. ಇದೆಲ್ಲ ಪರಿಸ್ಥಿತಿಯು ದುರ್ಬೋಧವಾದದ್ದೂ ಕ್ಷಣಕ್ಷಣಕ್ಕೆ ಬದಲಾಗುವದೂ ಇರುತ್ತದೆ. ಅದರೂ ಇಷ್ಟು ಮಾತ್ರ ನಮಗೆ ಗೊತ್ತಾಗಿರುತ್ತದೆ. ಕಪ್ಪು ಸಮುದ್ರವು ಜರ್ಮನ್ನರ ವಶವರ್ತಿಯಾದ ಸರೋವರವು. ಓಡೇಸಾ ಶಹರವಾದರೂ ಜರ್ಮನ್ನರ ಕೈವಶವಾಗಿರುತ್ತದೆ. ಬಾಟೂಮವು ಸಹ ಜರ್ಮನ್ನರ ಮತ್ತು ಅವರ ಹಸ್ತಕರಾದ ಬೋಲಸೇವಿಕ್ಕರ ವಶದಲ್ಲಿರುತ್ತದೆಂದು ಸುದ್ದಿಯುಂಟು. ಈ ಸುದ್ದಿಯು ಹುಟ್ಟಲಿಕ್ಕೆ ಬಾಕೂದಿಂದ ಪೆಟ್ರೋಲ ಮತ್ತು ಕಲ್ಲೆಣ್ಣೆಯ ಸಂಗ್ರಹವು ಬರುತ್ತಿರುವದೇ ಮುಖ್ಯಕಾರಣ. ಜರ್ಮನ್ನರಿಗೆ ಬಾಕೂದವರೆಗೆ ದಂಡೆತ್ತಿ ಬರುವದು ದುರ್ಘಟವಾಗಲಿಕ್ಕಿಲ್ಲ. ಈ ಎಲ್ಲ ಅನುಕೂಲ ಸಂಗತಿಗಳಿಗೆ ಪ್ರತಿಕೂಲ ಸಂಗತಿಗಳಾವವೆಂದರೆ ಅರೆನ್‌ಬರ್ಗವು ಜರ್ಮನ್ನರಿಗೆ ಪ್ರತಿಕೂಲಾದವರ ಮಧ್ಯಸ್ಥಳವು. ಅದರ ದಕ್ಷಿಣಕ್ಕಿರುವ ಬುಖಾರಾದ ಅಮೀರನು ತಾನು ಸ್ವತಂತ್ರನಿರುವೆನೆಂದು ಪ್ರಸಿದ್ಧಿಸಿರುವನು. ತುರ್ಕಸ್ತಾನದಲ್ಲಿ ಅರಾಜಕತೆಯಿರುವದು ಎಲ್ಲರಿಗೂ ಗೊತ್ತಿದ್ದ ಮಾತು. ಝಿಕೋಸ್ಲ್ಲಾವ್ಹರ ಜಯಾಪಜಯಗಳ ಮೇಲೆ ಮಿಕ್ಕಾದ ಸಂಗತಿಗಳು ಅವಲಂಬಿಸಿರುತ್ತವೆ. ಝಿಕೋಸ್ಲ್ಲಾವ್ಹರೊಡನೆ ಯುದ್ಧವಾಡುವದರಲ್ಲಿ ಜರ್ಮನ್ನರು ತೊಡಗಿದರೆ, ಜರ್ಮನ್ನರಿಂದ ನಮಗೆ ಬಾಧೆಯುಂಟಾಗುವ ಸಂಭವ ಕಡಿಮೆಯಾದರೂ ಮಧ್ಯ ಏಶಿಯಾ ದೇಶವು ಜರ್ಮನ್ನರ ಯುಕ್ತಿಗಳು ಫಲಿಸಲಿಕ್ಕೆ ಅತ್ಯನುಕೂಲವಾದ ಸ್ಥಳವಿರುವದರಿಂದ ಆ ದ್ವಾರದಿಂದಲೇ ಮುಂದಿನ ಚಳಿಗಾಲದಲ್ಲಿ ಜರ್ಮನ್ನರು ಕೊನೆಯ ಯತ್ನವನ್ನು ಮಾಡಬಹುದು. ಯಾಕಂದರೆ, ಫ್ರಾನ್ಸ ದೇಶದಲ್ಲಿ ಅವರು ಜಯಶಾಲಿಗಳಾಗುವ ಸಂಭವವೇ ಉಳಿಯಲಿಲ್ಲ. ಇನ್ನು ಪರಸ್ಪರ ಸಮ್ಮತಿಯಿಂದ ಈ ಯುದ್ಧವನ್ನು ನಿಲ್ಲಿಸಿದರೆ, ಜರ್ಮನ್ನರಿಂದ ಇದಕ್ಕೂ ಹೆಚ್ಚು ದೊಡ್ಡ ಗುಪ್ತಾಂತರವು ಹಿಂದುಸ್ತಾನಕ್ಕೂ ಬ್ರಿಟಿಶ ಸಾಮ್ರಾಜ್ಯಕ್ಕೂ ಉಂಟಾದೀತೆಂದು ನಾನು ತಿಳಿಯುತ್ತೇನೆ. ಮುಂದಿನ ಚಳಿಗಾಲದಲ್ಲಿ ಜರ್ಮನ್ನರು ಏಶಿಯಾ ಮೈನರದಲ್ಲಿ ತಮಗೆ ಪೂರ್ಣ ಸ್ವಾತಂತ್ರ್ಯವನ್ನಿತ್ತರೆ, ತಾವು ಅದರ ಬದಲು ಅಲ್ಸೆಸ್, ಬಿಲ್ಜಮ್‌ಗಳನ್ನು ಬಿಟ್ಟು ಕೊಡಲಿಕ್ಕೆ ಸಿದ್ಧರಿದ್ದೇವೆಂದು ಶ್ರುತಪಡಿಸಬಹುದು. ಯುರೋಪಖಂಡದ ಜನರು ಪಶ್ಚಿಮದೇಶದಲ್ಲಿಯ ಶಾಂತತೆಯನ್ನಷ್ಟೇ ಲಕ್ಷ್ಯಕ್ಕೆ ತಂದ

ಜರ್ಮನ್ನರ ಈ ಸೂಚನೆಗೆ ಒಪ್ಪಿಕೊಳ್ಳುವ ಸಂಭವವು ಯಾವಾಗಲೂ ಉಂಟು. ರ
ಯನ್ನರು ಕೊಲೂರಿನಿಂತಿದ್ದರೆ, ಈ ಯೋಜನೆಯು ಅಷ್ಟು ಅಹಿತಕರವಾದದ್ದಾಗುತ್ತಿದ್ದಿಲ್ಲ.
ರಶಿಯಾದೇಶವು ಕ್ಷಯಹೊಂದಿದ್ದರಿಂದ ಬಾಲ್ಕನ್ನರೂ ಕ್ಷಯ ಹೊಂದಿದಂತಾಯಿತು.
ಅದರಿಂದ ಜರ್ಮನ್ನರು ಕಾನಸ್ಟಾಂಟಸೋಪಲಕ್ಕೆ ಹೋಗುವದನ್ನು ನಿರ್ಬಂಧಿಸಲಿಕ್ಕೆ
ಸಾಮರ್ಥ್ಯವುಳ್ಳ ಸ್ಲಾವ್ಹ-ಮುಡಲವನ್ನು ನಿರ್ಮಾಣಮಾಡಬಲ್ಲ ಮಧ್ಯರಾಷ್ಟ್ರವು ಈಗ
ಉಳಿಯಲಿಲ್ಲ. ಇದಲ್ಲದೆ ರಶಿಯದ ಪತನದಿಂದ ಮಧ್ಯಪಶಿಯದ ಬಾಗಿಲವು ನಿರಂ
ತರವಾಗಿ ತೆರೆಯಿತು. ಅದನ್ನು ಮುಚ್ಚುವವರು ಯಾರೂ ಉಳಿಯಲಿಲ್ಲ.

ಇಂಥ ಪ್ರಸಂಗದಲ್ಲಿ ನಾವು ಯಾವ ಮಾರ್ಗವನ್ನವಲಂಬಿಸಬೇಕೆಂಬ ಬಗ್ಗೆ
ವಿಚಾರಿಸೋಣ. ಹೊಟ್ಟಮೊದಲು ಹಿಂದುಸ್ತಾನದಿಂದ ಒಹು ದೊಡ್ಡ ಸೈನ್ಯವನ್ನು
ರಣಾಂಗಣಕ್ಕೆ ಕಳುಹಿ, ಒಪ್ಪಿಗೆಯಿಂದ ಯುದ್ಧ ಸಮಾಪ್ತಿಮಾಡಬೇಕೆಂಬ ಕಲ್ಪನೆಯನ್ನೇ
ಹುಟ್ಟಗೊಡಬಾರದು. ಮೇಲಾಗಿ ಯುದ್ಧ ಸಮಾಪ್ತಿಗಾಗಿ ನೆರೆಯುವ ಪರಿಷತ್ತಿನಲ್ಲಿ
ಹಿಂದುಸ್ತಾನದವರ ಮತವು ಆದರಣೀಯವಾದದ್ದಾಗಬೇಕಾದರೆ ನಾವು ಸಾಕಷ್ಟು ಒಲ
ವುಳ್ಳವರೆಂದು ತೋರಿಸಬೇಕು. ಮುಂದಿನ ಚಳಿಗಾಲ ಬರುವಷ್ಟರಲ್ಲಿ ಬಗದಾದ ಜರೂಸ
ಲೇಮಗಳಲ್ಲಿಯ ಸೈನ್ಯಗಳು ಅಲೆಪ್ಪೋ ಬಂದರದವರೆಗೆ ಹೋಗಬಹುದೆಂದು ತೋರು
ತ್ತದೆ. ಅಲೆಪ್ಪೋ ಶಹರವು ಬಗದಾದ ರೇಲಮಾರ್ಗದ ಕೇಂದ್ರಸ್ಥಾನವೆಂದು ನಾನು
ಮೊದಲೇ ಹೇಳಿದ್ದೇನೆ. ಪಶ್ಚಿಮದಲ್ಲಿಯ ರಣಭೂಮಿಗೆ ಬಹಳ ಸೈನ್ಯವನ್ನು ಬ್ರಿ
ಶರು ಒಯ್ಯಬೇಕಾಗಿರುವದರಿಂದ ಮೇಲೆ ಹೇಳಿದ ಇಚ್ಛೆಯು ಕೊನೆಗಾಣುವ
ಸಂಭವ ತೋರುವದಿಲ್ಲ. ಯಾವ ಪ್ರಸಂಗದಲ್ಲಿಯಾದರೂ ಬಗದಾದ ರೇಲಮಾ
ರ್ಗವು ಅನೇಕ ರಾಷ್ಟ್ರಗಳ ಸಮೂಹಿಕ ಆಧಿಪತ್ಯದಲ್ಲಿರಬೇಕೆಂದು ನಾವು
ಆಗ್ರಹ ತೊಡಬೇಕು. ತುರ್ಕರು ಸಾಂಪ್ರತದಲ್ಲಿ ಆ ರೇಲಮಾರ್ಗದ
ಸಂಬಂಧವಾಗಿ ಕೊಟ್ಟ ಆಪ್ಪಣೆಯನ್ನು ತಿರುಗಿ ತೆಗೆದುಕೊಂಡು ಅದನ್ನು ಅಮೆ
ರಿಕನ್, ಫ್ರೇಂಚ, ಮತ್ತು ಇಂಗ್ಲಿಷ ಕಂಪನಿಗಳ ಕಯ್ಯಲ್ಲಿ ಒಪ್ಪಿಸಬೇಕು
ಮಧ್ಯಪಶಿಯದ ಸಂಬಂಧವಾಗಿ ನಮ್ಮ ಪೂರ್ವಜರು ಮಾಡಿದ ತಪ್ಪುಗಳನ್ನು
ನಾವು ಪುನಃ ಮಾಡತಕ್ಕದ್ದಲ್ಲ, ಮತ್ತು ದ್ರವ್ಯ ನಾಶಮಾಡುವ ಫಲರಹಿತವಾ
ದಾಳಿಗಳನ್ನು ಅಫಗಾಣಿಸ್ತಾನಕ್ಕೂ ಮಧ್ಯ ಎಶಿಯಾಕ್ಕೂ ಕಳುಹತಕ್ಕದ್ದಿರುವದಿಲ್ಲ
ಆದರೆ ಕಾಸ್ಪಸನೋವ್ಹಾಡಸ್ಕಡ ಪೂರ್ವಕ್ಕಿರುವ ಲೋಹ ಮಾರ್ಗಕ್ಕೆ ನಿಮ್ಮ ಸಂಬಂ
ಧವೇ ಬೇಡೆಂದು ಒರ್ಮನಿಯವರಿಗೆ ನಾವು ಸಾರಿ ಹೇಳತಕ್ಕದ್ದು; ಮತ್ತು ಇರಾಣ
ದೇಶವು ಬಲವುಳ್ಳದ್ದೂ ಸಂಪೂರ್ಣ ಹಕ್ಕುಳ್ಳದ್ದೂ ಸ್ವತಂತ್ರವಾದದ್ದೂ ಆಗುವಂತೆ ಮಾಡ

ಕ್ಕದ್ದು. ಈ ಸಂಗತಿಗಳನ್ನೆಲ್ಲ ನಾವು ನೆರವೇರಿಸಿದರೆ ಜರ್ಮನ್ನರೂ ಮುಸಲಮಾ
ನರೂ ಒಕ್ಕಟ್ಟಾಗುವ ಸಂಶಯವು ತೀವ್ರವಾಗಿಯೋ ಇಲ್ಲವಂತಾಗುವದು. ಹಿಂದುಸ್ತಾನ
ವರು ಈ ಪ್ರಕಾರ ಮಾಡಲಿಕ್ಕೆ ತಪ್ಪಿದರೆ ಅವರಿಗೆ ಸೈನ್ಯವನ್ನೂ ಹಡಗುಗಳನ್ನೂ ಅತಿ
ವಿಶಾಲವಾದ ಪ್ರಮಾಣದಿಂದ ಇಡಬೇಕಾಗುವದಲ್ಲದೆ ಅದಕ್ಕೆ ಹತ್ತುವ ವ್ಯಯ
ದಿಂದ ನಮ್ಮ ಅಸುವೆಲ್ಲ ಹೀರಿ ಹೋಗಿ, ನಮ್ಮ ಉತ್ತರೋತ್ತರ ಅಭಿವೃದ್ಧಿಯು ಕುಗ್ಗಿ
ಪಡುವದು. ತಮ್ಮ ದೇಶಕ್ಕಾಗಿ ತಕ್ಕ ರೀತಿಯಿಂದ ಯುದ್ಧ ಮಾಡುವವಿಷಯದಲ್ಲಿ
ನಿರ್ಭಿಕಾತ ಚಿತ್ತವುಳ್ಳವರಾದರೆ, ಹಿಂದೀ ಜನರು ಸ್ವರಾಜ್ಯವನ್ನೆಳೆದಲಿಕ್ಕೆ ತಕ್ಕವರಿ
ಲ್ಲವೆಂದು ತಿಳಕೊಳ್ಳಬೇಕು. ಯುದ್ಧ ಕಲೆಯು ಅಧುನಿಕ ಪ್ರಗತಿಯು ಮೇಲಿಂದ ಕಂಡು
ಬರುವದೇನಂದರೆ, ಇನ್ನು ಮುಂದೆ, ಯುದ್ಧ-ಪ್ರಾವೀಣ್ಯವನ್ನು ಹೊಂದಿದ ತುಸು ಜನರ
ಭೋಗದಿಂದಲೇ ಜಯದೊರಕಿಸುವದು ಅಶಕ್ಯವಾದದ್ದು. ಈಗಿನ ಕಾಲದ ಯುದ್ಧ
ವೆಂದರೆ ಎಲ್ಲ ಜನರ ಯುದ್ಧವು. ಆದ್ದರಿಂದ ಇಂಗ್ಲಂಡದಲ್ಲಿಯ ಮಧ್ಯಮವರ್ಗದ ಜನರು
ಏನೇನು ಮಾಡಿರುವರೋ ಅದನ್ನೆಲ್ಲ ನೆರವೇರಿಸಲಿಕ್ಕೆ ಹಿಂದೀ ಮಧ್ಯಮ ವರ್ಗದವರು
ಸಿದ್ಧರಾಗಬೇಕು. ಬೇರೆಯವರು ನಮ್ಮಗೋಸ್ಕರ ಯುದ್ಧ ಮಾಡುತ್ತಿರುವಾಗ ನಾವು
ಸುಖದಿಂದ ಕೂತುಕೊಂಡು ಅವರ ದಿಗ್ವಿಜಯದ ಫಲೋಪಭೋಗವನ್ನು ಬಯಸು
ವದು ಸರಿಯಾದ ಮಾತಲ್ಲ.

ಅಧ್ಯಕ್ಷರ ಭಾಷಣ.

ಈ ಪ್ರಕಾರ ವ್ಯಾಖ್ಯಾನವಾದ ಮೇಲೆ ಪ್ರೆಸಿಡೆಂಟರಾದ ಮಿ. ಕ್ಲೆಮೆಂಟ ಸಾಹೇ
ಬರು ಸವಾರೋಪ ಮಾಡುವಾಗ ಯುದ್ಧದ ಸಾಂಪ್ರತ ಪರಿಸ್ಥಿತಿಯನ್ನು ಎಲ್ಲರಿಗೂ
ಬೋಧವಾಗುವಂತೆ ಸ್ವಲ್ಪದರಲ್ಲಿ ವರ್ಣಿಸಿದರು, ಅವರು ಅಂದದ್ದೇನಂದರೆ:-

ಸ್ಥೂಲವಾನದಿಂದ ನೋಡಲಾಗಿ ಯುದ್ಧದ ಮುಖ್ಯರೇಖೆಯು ಬೆಲಜಮ್
ಮತ್ತು ಫ್ರಾನ್ಸಗಳ ಸರಹದ್ದಿನ ಮತ್ತು ಸ್ವಿತ್ಸರ್ಲಾಂಡದ ಮಧ್ಯದಲ್ಲಿರುತ್ತದೆ. ಆ ರೇಷೆ
ಯನ್ನು ನಾವು ಮೆಲ್ಲಮೆಲ್ಲನೆ ಜರ್ಮನಿಯ ಕಡೆಗೆ ನೂಕುತ್ತಲಿದ್ದೇವೆ. ಸ್ವಿತ್ಸ
ರ್ಲಾಂಡದ ತಟಸ್ಥಭಾವವನ್ನು ಭಂಗಮಾಡುವ ಧೈರ್ಯವು ಜರ್ಮನ್ನರಿಗೆ ಬರಲಿಲ್ಲ.
ಮತ್ತೊಂದು ಯುದ್ಧರೇಷೆಯು ಅರ್ಧವರ್ತುಲಾಕಾರವಾಗಿ ಇಟಲಿ ಮತ್ತು ಆಸ್ಟ್ರಿಯಗಳ
ಮಧ್ಯದಲ್ಲಿದ್ದು ಇಟಲಿಯ ಸರಹದ್ದಿನಲ್ಲಿ ಹೊಕ್ಕಿರುತ್ತದೆ. ಮೂರನೆಯ ಯುದ್ಧರೇಷೆಯು
ಅಡ್ರಿಯಾಟಿಕ್ ಸಮುದ್ರದ ತೀರದಿಂದ ಹೊರಟು ಗ್ರೀಸ ಮತ್ತು ಸಾಲೋನಿಕಾಗಳನ್ನು
ಆಕ್ರಮಿಸಿಕೊಂಡಿರುತ್ತದೆ. ನಾವು ಆ ರೇಷೆಯನ್ನು ಆಸ್ಟ್ರಿಯಾ ಹಂಗೇರೀಯಾಗಳ ಕಡೆಗೆ

ಪೆಟ್ಟುಮೆಟ್ಟಾಗಿ ನೂಕುತ್ತಲಿದ್ದೇವೆ. ಪಾಲಿಸ್ತೈನದಲ್ಲಿ ನಾವು ತುರ್ಕರಿಗೆ ಎದುರಾ
ನಿಂತಿದ್ದೇವೆ. ಮೆಸೋಪೋಟಾಮಿಯದಲ್ಲಿ ನಮಗೆ ಶತ್ರುಗಳೇ ಉಳಿದಿರುವದಿ
ಇವೆರಡು ಸ್ಥಳಗಳಿಗೆ ಸಂಬಂಧಿಸಿದ ಯುದ್ಧ ರೇಷೆಯು ಸಾಂಪ್ರತಕ್ಕೆ ಸ್ತಬ್ಧವಾಗಿರುವದ
ರಶಿಯಾ ದೇಶವು ಮುರುಗಡೆಹೊಂದಿರುವದರಿಂದ ತುರ್ಕರಿಗೆ ಕಾಕೇಸಸ್ ಪರ್ವತ
ಮೇಲಿಂದ ಇರಾಣದಲ್ಲಿ ಕದ್ದು ಹೋಗಲಿಕ್ಕೆ ಆಸ್ಪದದೊರೆತಿರುವದು. ಈ ಅವಾಯ
ನ್ನಾದರೂ ನಾವು ಪ್ರತಿಷೇಧಿಸುತ್ತಲಿದ್ದೇವೆ.

ಇನ್ನು ರಶಿಯದ ಸಂಬಂಧವಾಗಿ ಲಕ್ಷ್ಯದಲ್ಲಿ ತರಬೇಕಾದ ಸಂಗತಿಯು ಯಾ
ದೆಂದರೆ, ಅಲ್ಲಿ ರಾಜ್ಯಕ್ರಾಂತಿಯಾಗುವ ಪೂರ್ವದಲ್ಲಿ ಜರ್ಮನಿ ರಶಿಯಗಳ ನಡು
ಯುದ್ಧಸಮಾಪ್ತಿಯು ಬಹುಸಂದವಾಗುವ ಭಯವಿತ್ತು. ಹಾಗಾಗಿದ್ದರೆ ಹಿಂದುಸ್ತಾನ
ದೊಡ್ಡ ಸಂಕಟ ಪ್ರಾಪ್ತವಾಗುತ್ತಿತ್ತು. ಈ ಮಹಾಯುದ್ಧವು ಪ್ರಾರಂಭವಾಗುವ
ಕ್ಕಿಂತ ಮೊದಲಿಗಾದರೂ ರಶಿಯಾದೇಶವು ಜರ್ಮನಿಯವರ ನಾನಾಪ್ರಕಾರದ ತಂ
ಗಳಿಗೆ ವಶಪಟ್ಟಿತ್ತು. ಆ ತಂತ್ರಗಳಲ್ಲಿ ಮುಖ್ಯವಾದವುಗಳಾವವೆಂದರೆ—

೧. ವಿವಾಹ ಸಂಬಂಧವು:— ರಶಿಯದ ಮಹಾರಾಣಿಯು ಜರ್ಮನ್ ರಾಜಕ
ಮಾರಿಯಾಗಿದ್ದಳು.

೨. ಅತಿಪ್ರಬಲರಾದ ಜರ್ಮನ್ ಕಂಪನಿಯವರು, ರಶಿಯಾದೇಶದಲ್ಲಿ ಭೂಮಿ
ಳನ್ನು ಕೊಂಡು ಅವುಗಳಲ್ಲಿ ಜರ್ಮನ್‌ರನ್ನು ವಸಾಹತ ಮಾಡಿಸಿದ್ದರು.

೩. ಗುಪ್ತಹೇರರನ್ನು ಪ್ರಸ್ಥಾಪಿಸಿದ್ದರು.

೪. ಆರಂಭದಲ್ಲಿ ಸ್ವದೇಶಾಭಿಮಾನಿಗಳಾದ ಉಚ್ಚವರ್ಗದ ರಶಿಯನ್ನರು ರಾ
ಕ್ರಾಂತಿಯನ್ನು ಪಕ್ರಮಿಸಿ, ಝಾರನನ್ನು ಗಾದಿಯಿಂದ ತಳಿದರು. ಬಳಿಕ ಸಾಧ
ರಣ ಜನಸಮುದಾಯವು ಇವರ ಮೇಲೆ ಹರಿದುಬಿತ್ತು. ಜನಸಮುದಾಯದ
ಅಗ್ರೇಸರರೆನಿಸುವವರು ಜರ್ಮನಿಯು ದುಡ್ಡಿಗೆ ಮೋಹಿತರಾಗಿ ಜರ್ಮನ್ನರಿಗೆ ಅನುಕೂ
ವಾಗಿ ನಡೆಯಲಾರಂಭಿಸಿದರು. ಅವರ ಪರಿಣಾಮವೇ ರಶಿಯದಲ್ಲಿಯ ಈಗಿ
ಅರಾಜಕತೆಯು. ಜಪಾನದ ಮತ್ತು ಸಮ್ಮಿಲಿತ ರಾಷ್ಟ್ರಗಳ ಸೈನ್ಯಗಳ ಸಹಾಯ
ದಿಂದ ರಶಿಯಾ ದೇಶವು ಸುಸ್ಥಿತಿಯನ್ನು ಹೊಂದಬಹುದು. ಆದರೆ ಆ ಸೈನ್ಯಗಳಿ
ಝಿಕ್ ಮತ್ತು ಸ್ಲೋವ್ಹಾಕ್ ಜನರ ಸಹಾಯಬೇಕು ಝೆಕೋಸ್ಲಾವ್ಹ ಜನರ
ರಶಿಯಾ ಆಸ್ಟ್ರಿಯಾಗಳ ನಡುವೆ ಕಳೆದ ೩ ವರ್ಷಗಳವರೆಗೆ ನಡೆದ ಯುದ್ಧಗಳಲ್ಲಿ ಜೈಸೆ
ಸಿಕ್ಕಿರುತ್ತಾರೆ. ಸದ್ಯಕ್ಕೆ ಇವೆಲ್ಲ ಸೈನ್ಯಗಳು ಸೈಬೇರಿಯದಲ್ಲಿ ತೊಡಗಿರುತ್ತವೆ

ಆಸ್ಟ್ರಿಯಾ—ಹಂಗೇರಿ ರಾಜ್ಯವು ಶಿಥಿಲಾವಸ್ಥೆಯನ್ನು ಹೊಂದಿರುವದೆಂದು ಮುಖ್ಯ ಪ್ರಧಾನರಾದ ಮಿ. ಲಾಯಿಡ್ ಜಾರ್ಜ ಸಾಹೇಬರು ವರ್ಣಿಸಿರುವರು. ಬೋಹೇಮಿಯದಲ್ಲಿ ಝಿಕ್ ಜನರಿರುವರು. ದಕ್ಷಿಣ ದಿಕ್ಕಿಗೆ ಸ್ಲಾವ್ಹ ಜನರಿರುವರು. ಪೂರ್ವಕ್ಕೆ ಗ್ಯಾಲಿಸಿಯದಲ್ಲಿ ಪೋಲ ಜನರಿರುವರು. ಆಗ್ನೇಯದಿಕ್ಕಿಗೆ ರುಥೀನರೂ ರೋಮಾನಿಯನರೂ ಇರುವರು. ಇವರೆಲ್ಲರೂ ಜರ್ಮನರನ್ನು ಅವರ ನಿಷ್ಕ್ರಶಾಸನಕ್ಕಾಗಿ ವಿಷದೋಪಾದಿಯಲ್ಲಿ ದ್ವೇಷಿಸುತ್ತಿರುವರು. ಹಂಗೇರಿಯರನ್ನಾದರೂ ಅವರು ಇದೇ ಕಾರಣಕ್ಕಾಗಿ ದ್ವೇಷಿಸುತ್ತಾರೆ. ಈ ದ್ವೇಷವು ಬಹುಕಾಲದಿಂದ ನೆಲೆಗೊಂಡಿರುವದೆಂದು ತೋರಿಸುವದೊಂದು ದೃಷ್ಟಾಂತವು ಸನ್ ೧೯೧೮ನೇ ಇಸವಿಯ ಸುಮಾರಕ್ಕೆ ಕ್ರೋವಾಟಿಯಾ ಪಟ್ಟಣದಲ್ಲಿ ರಾಷ್ಟ್ರಸಭೆಗೆ ಪ್ರತಿನಿಧಿಗಳನ್ನಾರಿಸುವ ಒಂದು ಸಮ್ಮೇಲನದಲ್ಲಿ ಜರುಗಿತು. ಪ್ರತಿನಿಧಿಯಾಗಲಿಚ್ಛಿಸುವನೊಬ್ಬನ ಪಕ್ಷದವನು ಸಮ್ಮೇಲನದಲ್ಲಿ ಮಾತಾಡುವದಕ್ಕೆ ಎದ್ದುನಿಂತನು. ಅವನು ಹಂಗೇರಿಯ ಒಬ್ಬ ಕಾವ್ಯುಂಟ (ದೇಸಾಯಿ) ನಾಗಿದ್ದನು. ಅವನು ಮೇಗಿಯಾರ (ಹಂಗೇರಿ) ಭಾಷೆಯಲ್ಲಿ ಮಾತಾಡಲಾರಂಭಿಸಿದನು. ಕೂಡಲೆ ಜನರು ಸೀತ್ಕಾರಮಾಡಿ, ಅತನ ಮಾತನ್ನು ಸಾಗಗೊಡಲಿಲ್ಲ. ನಂತರ ಅವನು ಜರ್ಮನ್ ಭಾಷೆಯಲ್ಲಿ ಮಾತನಾಡಲಾರಂಭಿಸಲು ಜನರು ಸೀತ್ಕಾರಮಾಡಿ ಚೀರಾಡಹತ್ತಿದರು. ಆಮೇಲೆ ಅವನು ಇಂಗ್ಲಿಷ ಭಾಷೆಯಲ್ಲಿ ಮಾತಾಡಲಾರಂಭಿಸಿದ ಕೂಡಲೆ ಎಲ್ಲರೂ ಅವನ ಭಾಷಣವನ್ನು ಕಿವಿಗೊಟ್ಟು ಕೇಳಿದರು. ಇದರ ಮೇಲಿಂದ ಜರ್ಮನ್ ಮತ್ತು ಹಂಗೇರಿಯನ್ ಜನರನ್ನು ಸ್ಲಾವ್ಹ ಜಾತಿಯವರು ಎಷ್ಟು ಪ್ರಮಾಣದಿಂದ ದ್ವೇಷಿಸುತ್ತಾರೆಂಬುವದು ಸಿದ್ಧವಾಗುತ್ತದೆ. ಈ ಜನರಿಗೆ ಇಂಗ್ಲಿಷ ಬಾಷೆಯು ತಿಳಿಯುವ ಕಾರಣವೇನಂದರೆ, ಅವರು ಅಮೇರಿಕೆಗೆ ಪ್ರತಿಸುಗ್ಗಿಗೆ ಹೊಲದ ಕೂಲಿಯನ್ನು ಮಾಡಲಿಕ್ಕೆ ಹೋಗುತ್ತಿರುತ್ತಾರೆ."

ವ್ಯವಹಾರೀ ಅಪೂರ್ಣಾಂಕಗಳ ಭಾಗಾಕಾರ.

ಅಪೂರ್ಣಾಂಕಗಳ ಭಾಗಾಕಾರದ ಉಸಪತ್ತಿಯನ್ನು ಹೇಳುವ ರೀತಿಗಳು ಮೂರು ನಾಲ್ಕು ಇರುವವು. ಸದ್ಯಕ್ಕೆ ಶಾಲೆಗಳಲ್ಲಿ ಯಾವ ರೀತಿಯು ಉಪಯೋಗಿಸಲಿಕ್ಕೆ ಯೋಗ್ಯವದೆ ಎಂಬುವದನ್ನು ನಿರ್ಣಯಿಸಬೇಕಾದರೆ ಆ ರೀತಿಯನ್ನು ಹುಡುಗರಿಗೆ ಕಲಿಸಲಿಕ್ಕೆ ಎಷ್ಟು ದಿವಸಗಳು ಬೇಕಾಗುವವು ಎಂಬ ಪ್ರಶ್ನೆಯನ್ನು ಕೇಳಬೇಕಾಗುವದು. ಮೊದಲು ಬೇರೆಬೇರೆ ಪದ್ಧತಿಗಳನ್ನು ಕೆಳಗೆ ಕೊಟ್ಟಿರುತ್ತದೆ.

೧ನೆಯ ರೀತಿ:—

ಉದಾಹರಣೆಗಳು

$೧ \div ೨ = ೨ = ೧ \times ೨$ $\quad$ $೧ \div ೫ = ೫$

$೧ \div ೩ = ೩ = ೧ \times ೩$ $\quad$ $೧ \div ೬ = \frac{೧}{೬}$

$೧ \div ೪ = ೪ = ೧ \times ೪$ $\quad$ $೧ \div ೭ = \frac{೧}{೭}$

$೧ \div ೫ = ೫ = ೧ \times ೫$ $\quad$ $೧ \div ೮ = \frac{೧}{೮}$

ಸ್ಪಷ್ಟೀಕರಣ:— ಒಂದರಲ್ಲಿ ಒಂದು ಐದನೆಯ ಅಂಶವು ಅಯ್ದು ಸಾರೆ ಹೋಗುತ್ತದೆ. $\frac{೧}{೫}$ ಇದು ೫ ದ ೧ ಪಟ್ಟು. ∴ ಒಂದರಲ್ಲಿ $\frac{೧}{೫}$ ಇದು ಐದರ ಅರ್ಧಸಾರೆ ಹೋಗುತ್ತದೆ.

∴ $೧ \div \frac{೧}{೫} = \frac{೫}{೧} = ೧ \times \frac{೫}{೧}$

೧ಕ್ಕೆ $\frac{೧}{೫}$ ದಿಂದ ಭಾಗಿಸುವದಾದರೆ ಅದಕ್ಕೆ $\frac{೫}{೧}$ ದಿಂದ ಗುಣಿಸಿದರಾಯಿತು. ಆದ್ದರಿಂದ ಯಾವದೊಂದು ಅಪೂರ್ಣಾಂಕದಿಂದ ಭಾಗಿಸಬೇಕಾದರೆ ಅದರ ವ್ಯುತ್ಕ್ರಮದಿಂದ ಗುಣಿಸಬೇಕು.

೨ನೆಯ ರೀತಿ:—

ಉದಾಹರಣೆಗಳು

$\frac{೨}{೩} \div ೫ = \frac{೨}{೩ \times ೫}$

ಇಂಥ ಉದಾಹರಣೆಗಳ ಮೇಲಿಂದ ಒಂದು ಅಪೂರ್ಣಾಂಕಕ್ಕೆ ಒಂದು ಪೂರ್ಣಾಂಕದಿಂದ ಭಾಗಿಸಬೇಕಾದರೆ ಆ ಅಪೂರ್ಣಾಂಕದ ಛೇದಕ್ಕೆ ಆ ಪೂರ್ಣಾಂಕದಿಂದ ಗುಣಿಸಬೇಕು ಎಂಬ ನಿಯಮವನ್ನು ಹೊರಡಿಸುವದು. ಆಮೇಲೆ $\frac{೨}{೩}$ ಕ್ಕೆ ೫ ದಿಂದ ಭಾಗಿಸಬೇಕೆಂದು ತಿಳಿಯಿರಿ. $\frac{೨}{೩}$ ಕ್ಕೆ ೫ ರಿಂದ ಭಾಗಿಸಿದರೆ $\frac{೨}{೩}$ ಬರುತ್ತದೆ. ೫ ರ ಒನೆಯ ಅಂಶದಿಂದ ಭಾಗಿಸಿದರೆ ಉತ್ತರವು ಮೊದಲಿನ ನಾಲ್ಕು ಪಟ್ಟು ಬರಬೇಕು. ಯಾಕಂದರೆ ಭಾಜಕವು ಸಣ್ಣದಾದಂತೆ ಭಾಗಾಕಾರವು ದೊಡ್ಡದು ಬರುತ್ತದೆ.

$\frac{೨}{೩} \div ೫ = \frac{೨}{೩} \times ೪ = \frac{೨ \times ೪}{೩ \times ೫} = \frac{೨}{೩} \times \frac{೪}{೫}$

ಆದ್ದರಿಂದ ಯಾವದೊಂದು ಅಪೂರ್ಣಾಂಕದಿಂದ ಭಾಗಿಸಬೇಕಾದರೆ ಅದರ ವ್ಯುತ್ಕ್ರಮದಿಂದ ಗುಣಿಸಬೇಕು.

೩ನೆಯ ರೀತಿ:—

ಒಂದು ಸಂಖ್ಯೆಗೆ ೫ ರಿಂದ ಭಾಗಿಸಿದರೆ ಗಿಂತಲೆ ಬರುತ್ತದೆ. ಆ ಸಂಖ್ಯೆ ಯಾವದು? ಆ ಸಂಖ್ಯೆಯನ್ನು ತೆಗೆಯಲಿಕ್ಕೆ ಗಿಂತಲೆ ಕ್ಕೆ ೫ ರಿಂದ ಗುಣಿಸಬೇಕು. ಇಂಥ ಲೆಕ್ಕಗಳ ರೀತಿಗೆ ವ್ಯಸ್ತ ನಿಧಿ ಎಂಬ ಹೆಸರು. ಎಷ್ಟು ಬರುತ್ತದೆ ಎಂದು ಹೇಳಿರುತ್ತಾರೋ ಅದರ ಮೇಲೆ, ಯಾವ ಕೃತಿಯನ್ನು ಮಾಡಿದರೆ ಅಷ್ಟು ಬರುತ್ತದೆ ಎಂದು ಹೇಳಿರುತ್ತಾರೋ

ಅದರ ವಿರುದ್ಧ ಕೃತಿಯನ್ನು ಮಾಡಬೇಕು. ೨ ಕೂಡಿಸಿದರೆ ಕೆಲವೊಂದು ಸಂಖ್ಯೆಯು ಒರುವದೆಂದು ಹೇಳಿದರೆ ಆ ಸಂಖ್ಯೆಯಲ್ಲಿ ೨ ಕಳಿಯಬೇಕು ಕಳೆದರೆ ಒರುವದೆಂದು ಹೇಳಿದರೆ ಕೂಡಿಸಬೇಕು. ಗುಣಿಸಿದರೆ ಬರುವದೆಂದರೆ ಭಾಗಿಸಬೇಕು. ಭಾಗಿಸಿ ಬರುವದೆಂದರೆ ಗುಣಿಸಬೇಕು.

$\square \div \triangle = ?$ ಭಾಗಾಕಾರವು ಗುಣಾಕಾರದ ವಿರುದ್ಧ ಕೃತಿಯಾಗಿರುವದರಿಂದ ಈ ಲೆಕ್ಕದ ಅರ್ಥವು ಹೀಗೆ ಆಗುವದು.

ಯಾವ ಸಂಖ್ಯೆಗೆ $\triangle$ ದಿಂದ ಗುಣಿಸಿದರೆ $\square$ ಬರುತ್ತದೆ ಅಂದರೆ ಯಾವ ಸಂಖ್ಯೆಗೆ ಳರಿಂದ ಗುಣಿಸಿ ಖರಿಂದ ಭಾಗಿಸಿದರೆ $\square$ ಬರುತ್ತದೆ! ಳರಿಂದ ಗುಣಿಸಿ ಖರಿಂದ ಭಾಗಿಸಿದರೆ $\square$ ಬರುವದೆಂದು ಹೇಳಿರುವದರಿಂದ ಉತ್ತರವನ್ನು ತೆಗೆಯಲಿಕ್ಕೆ $\square$ ಕ್ಕೆ ಖರಿಂದ ಗುಣಿಸಿ ಳರಿಂದ ಭಾಗಿಸಬೇಕು.

$$\therefore \quad \square \div \triangle = \square \times \frac{ಳ}{ಖ}$$

ಳನೆಯ ರೀತಿ:—

$$\square \div \triangle \qquad \frac{ಗ}{ತ} = \square \times \frac{ಳ}{ಖ}$$

$$= \frac{ಗಳ}{ತ} \div \frac{ತಖ}{ತ}$$

$$\square \div \triangle = \square \times \frac{ಳ}{ಖ}$$

$$= \frac{ಗ}{ತ}$$

ಇದನ್ನು ಮುಂದೆ ವಾಕ ರೂಪದಿಂದ ಕಲಿಸಿ ತೋರಿಸಿರುವದರಿಂದ ಇಲ್ಲಿ ಅದನ್ನು ವಿಸ್ತರವಾಗಿ ಕೊಡಲಿಲ್ಲ.

ಈ ರೀತಿಗಳ ಗುಣದೋಷಗಳು.

ಮೊದಲನೇ ರೀತಿಯು:—ಇದನ್ನು ಸ್ವಲ್ಪ ದಿವಸಗಳಲ್ಲಿಯೇ ಕಲಿಸ ಹೋದರೆ ನಾವು ಹೇಳುವ ವಿಚಾರವು ಹುಡುಗರಿಗೆ ತಿಳಿಯುವದು ಕಠಿಣವದೆ. ಇದನ್ನು ಕಲಿಸಲಿಕ್ಕೆ ಎರಡು ವಾರಗಳಾದರೂ ಬೇಕು.

ಎರಡನೇ ರೀತಿಯು:—ಇದರಲ್ಲಿ ಒಂದು ಉಸಸಿದ್ಧಾಂತವನ್ನು ಮೊದಲು ಹುಡುಗರಿಗೆ ಕಲಿಸಬೇಕು. ಅದು ಯಾವದೆಂದರೆ ಯಾವದೊಂದು ಅಪೂರ್ಣಾಂಕಕ್ಕೆ ಒಂದು ಪೂರ್ಣಾಂಕದಿಂದ ಭಾಗಿಸಬೇಕಾದರೆ ಆ ಅಪೂರ್ಣಾಂಕದ ಛೇದಕ್ಕೆ ಆ ಪೂರ್ಣಾಂಕದಿಂದ ಗುಣಿಸಬೇಕು. ಇದಕ್ಕೆ ಮೊದಲಿನಕಿಂತ ಹೆಚ್ಚು ಅವಧಿಯು ಬೇಕಾಗಬಹುದೆಂದು ನಮಗೆ ಕಾಣುತ್ತದೆ.

ಮೂರನೇ ರೀತಿಯು:—ಈ ರೀತಿಯು ಹುಡುಗರಿಗೆ ತಿಳಿಯಬೇಕಾದರೆ ಪೂರ್ಣಾಂಕವು ಅಂಶಕ್ಕೆ ಛೇದದಿಂದ ಭಾಗಿಸಿ ಬಂದ ಭಾಗಲಬವು ಎಂಬ ಮಾತೂ

ಅಪೂರ್ಣಾಂಕಗಳ ಗುಣಾಕಾರವು ನಿಜವಾಗಿ ಗುಣಾಕಾರ ಭಾಗಾಕಾರಗಳನ್ನೆರಡ ಒಳಕೊಂಡಿರುತ್ತದೆಂಬ ಮಾತೂ ಅವರಿಗೆ ತಿಳಿದಿರಬೇಕು.

ನಾಲ್ಕನೇ ರೀತಿಯು:—ಇದನ್ನು ನಾವು ಪ್ರತ್ಯಕ್ಷ ಕಲಿಸಿ ನೋಡಿರುವದರಿಂದ ಇದನ್ನು ಹುಡುಗರಿಗೆ ಹ್ಯಾಗೆ ಕಲಿಸಬೇಕೆಂಬದನ್ನು ಸವಿಸ್ತರವಾಗಿ ಕೆಳಗೆ ಕೊಡುವೆವು. ಈ ಟಿಪ್ಪಣಿಗಳಲ್ಲಿ ತೋರಿಸಿದ ಕ್ರಮದಂತೆ ಕಲಿಸಿದರೆ ಒಂದು ವಾರದಲ್ಲಿ ಈ ವಿಷಯವನ್ನ ಹುಡುಗರಿಗೆ ಚನ್ನಾಗಿ ಬರುವದೆಂದು ನನ್ನ ನಂಬಿಗೆಯದೆ.

ಅಪೂರ್ಣಾಂಕಗಳ ಭಾಗಾಕಾರ. ೧ನೆಯ ಪಾಠ.

ಪೂರ್ವಸಿದ್ಧತೆ:—

ಇಯತ್ತೆ:— ೪ನೆಯ. ವೇಳೆ:— ೧ ತಾಸು.

ಉದ್ದೇಶ:— ಹುಡುಗರ ತಿಳುವಳಿಕೆಯು ಬೆಳೆಯುಬೇಕು ಮತ್ತು ವ್ಯವಹಾರದಲ್ಲಿ ಉಪಯೋಗವಾಗಬೇಕು.

ಉಪಕರಣ:— ಅಪೂರ್ಣಾಂಕಗಳನ್ನು ತೋರಿಸುವ ಕಟ್ಟಿಗೆಯ ಭಾಗಗಳ ಚೌಕಟ್ಟು.

ವಿಷಯದ ಜ್ಞಾನ:— ಹಿಂದಿನ ಅಪೂರ್ಣಾಂಕಗಳ ಬೇರೀಜು ವಜಾಬಾಕಿ ಗುಣಾಕಾರಗಳು.

ವಿಷಯ	ಕಲಿಸುವ ಕ್ರಮ.	
೧ (ಅ) ಬೇಕಾದ ಒಂದು ಪೂರ್ಣಾಂಕಕ್ಕೆ ಮತ್ತೊಂದು ಪೂರ್ಣಾಂಕದಿಂದ ಭಾಗಿಸುವದು. *	೧ (ಅ) ೧೮ ÷ ೩ = ? ೧೬ ÷ ೩ = ? ೧೪ ÷ ೩ = ? ೩ ÷ ೫ = ?	ಈ ಪ್ರಶ್ನೆಗಳನ್ನು ಕೇಳಿ ಹುಡುಗರಿಂದ ಉತ್ತರ ತೆಗೆದುಕೊಳ್ಳಬೇಕು.
	೩೨ ಚಟಾಕು	ಅಂದರೆ ಎಷ್ಟು ಸೇರು?
	೩೫ ಚಟಾಕು	ಅಂದರೆ ಎಷ್ಟು ಸೇರು?
	೩ ಚಟಾಕು	ಅಂದರೆ ಎಷ್ಟು ಸೇರು?

೧ (ಅ) ವಿಷಯು ಅಪೂರ್ಣಾಂಕಕ್ಕೆ ಭಾಗಾನುಬಂಧ ಪೂರ್ಣಾಂಕದ ರೂಪವನ್ನು ಕೊಡುವಾಗ ಹುಡುಗರು ಇದನ್ನು ಕಲಿತಿರುವರು. ೧೪÷೩=೬ ಇದನ್ನು $\frac{೧೪}{೩}$ = ೬ ಈ ರೀತಿಯಿಂದಲೂ ಬರೆಯಲಿಕ್ಕೆ ಕಲಿಸಬೇಕು.

೧ (ಅ)

ಈ ಲೆಕ್ಕಗಳು ಚನ್ನಾಗಿ ತಿಳಿಯುವಂತೆ ಹುಡುಗರಿಂದ ಮಾಡಿಸ ಬೇಕು. ಮೊದಲಿನ ಪ್ರಶ್ನೆಯನ್ನು ಬೇರೆ ರೀತಿಯಿಂದ ಹೀಗೆ ಕೇಳ ಬೇಕು. ೩೨ ಚಟಾಕಿನಲ್ಲಿ ೧ ಸೇರುಎಷ್ಟುಸಾರೆ ಹೋಗುತ್ತದೆ? ೩೨ಕ್ಕೆ ೧ರಿಂದ ಭಾಗಿಸಿದರೆ ಉತ್ತರವು ಯಾಕೆ ಬರುವದಿಲ್ಲ? ಇದಕ್ಕೆ ಹುಡು ಗರು ೩೨ ಚಟಾಕು ಅವೆ; ೧ ಸೇರು ಅದೆ ಎಂದು ಉತ್ತರ ಹೇಳಬ ಹುದು. ಮಾಸ್ತರರು ಈ ಉತ್ತರವನ್ನು ಸುಧಾರಿಸಿ ಎರಡೂ ಒಂದೇ ಹೆಸರಿನ ಪರಿಮಾಣಗಳಿಲ್ಲದ್ದರಿಂದ ಭಾಗಿಸಲಿಕ್ಕೆಬರುವದಿಲ್ಲೆಂದು ಹೇ ಳಬೇಕು. ಈ ಉತ್ತರವನ್ನು ಒಬ್ಬಿಬ್ಬ ಹುಡುಗರಿಂದ ತಿರುಗಿ ಅನ್ನಿಸಿಕೊ ಳ್ಳಬೇಕು. ೧ ಸೇರು ಅಂದರೆ ಎಷ್ಟು ಚಟಾಕು? ೩೨ ಚಟಾಕಿನಲ್ಲಿ ೮ ಚಟಾಕು ಎಷ್ಟುಸಾರೆ ಹೋಗುತ್ತದೆ? ಉತ್ತರವನ್ನು ಹ್ಯಾಗೆ ತೆಗೆದಿರಿ ಎಂದು ಕೇಳಿದರೆ ಹುಡುಗರು ಎಂಟುನಾಲ್ಕಲೆ ಮೂವತ್ತೆರಡು ಅಥವಾ ಲಕ್ಕೆ ೪ರಿಂದ ಗುಣಿಸಿದೆವೆಂದು ಒಮ್ಮೊಮ್ಮೆ ಹೇಳುವರು. ೩೨ಕ್ಕೆ ೮ ರಿಂದ ಭಾಗಿಸಿದೆವು ಎಂಬ ಉತ್ತರವು ಬರಲಿಕ್ಕಿಲ್ಲ. ಅದನ್ನು ಹೊರಡಿಸ ಲಿಕ್ಕೆ ೩೨ ಚಟಾಕಿನಲ್ಲಿ ೮ ಚಟಾಕು ಎಷ್ಟುಸಾರೆಹೋಗುತ್ತದೆ ಎಂಬ ಪ್ರಶ್ನೆಯನ್ನು ಕೇಳಿದರೆ ಹುಡುಗರಿಗೆ ತಾವು ಮಾಡಿದ್ದು ಸ್ಪಷ್ಟವಾಗಿ ತಿಳಿ ಯುವದು. ಎರಡನೇ ಲೆಕ್ಕದಲ್ಲಿ ೩೨ಕ್ಕೆ ೮ರಿಂದ ಭಾಗಿಸಿದೆವು. ಮೊ ದಲನೆಯದರಲ್ಲಿ ೩೨ ಕ್ಕೆ ೮ ರಿಂದ ಭಾಗಿಸಿದೆವು ಎಂದು ಹೇಳುವರು.

೩೫ ಚಟಾಕಿನಲ್ಲಿ ೮ ಚಟಾಕು ಎಷ್ಟು ಸಾರೆ ಹೋಗುತ್ತದೆ? ಮೊದಲಿನ ಲೆಕ್ಕವನ್ನು ಹ್ಯಾಗೆ ಮಾಡಿದಿರೆಂಬದನ್ನು ಹುಡುಗರಿಗೆ ನೆನ ಪಿಗೆ ತಂದುಕೊಟ್ಟರೆ ಈ ಲೆಕ್ಕದಲ್ಲಿ ೩೫ಕ್ಕೆ ೮ರಿಂದ ಭಾಗಿಸಬೇಕೆಂದು ಅವರು ಹೇಳುವರು. ೩೫ ಕ್ಕೆ ೮ ರಿಂದ ಭಾಗಿಸಿದರೆ ಎಷ್ಟು ಬರುತ್ತದೆಂ ಬದನ್ನು ಪೂರ್ವಸಿದ್ಧತೆಯಲ್ಲಿ ಕಲಿಸಿರುವದರಿಂದ ಇದರ ಉತ್ತರವನ್ನು ಹುಡುಗರಿಂದ ಹೊರಡಿಸಲಿಕ್ಕೆ ಏನೂ ತೊಂದರೆಯಾಗುವದಿಲ್ಲ.

"೩೫ ಚಟಾಕಿನಲ್ಲಿ ೮ ಚಟಾಕು ೪ಕ್ಕೆ ಸಾರೆ ಹೋಗುತ್ತದೆ." ಅದರ ಅರ್ಥವು ಹುಡುಗರ ಮನಸ್ಸಿನಲ್ಲಿ ಹೊಗುವದೇನು? ಇದನ್ನು ತಿಳಿಸಲಿಕ್ಕೆ ಹೀಗೆ ಪ್ರಯತ್ನ ಮಾಡಬಹುದು. "೩೫ ಚಟಾಕಿನಲ್ಲಿ ೧ ಸೇರು ೪ ಸಾರೆ ಹೋಗಿ ಮೇಲೆ ೧ ಸೇರಿನ ೩ ಉಳಿಯುತ್ತದೆ, ಎಂದು ಅನ್ನುವದರ ಬದಲಾಗಿ ನಾವು ಸ್ವಲ್ಪದರಲ್ಲಿ ೩೫ ಚಟಾಕಿನಲ್ಲಿ ೧ಸೇರು ೪ಕ್ಕೆ ಸಾರೆ ಹೋಗುತ್ತದೆ. ಎಂದು ಅನ್ನುತ್ತೇವೆ."

೩೨ ಚಟಾಕಿನಲ್ಲಿ ೮ ಚಟಾಕು ೪ ಸಾರೆ ಹೋಗುತ್ತದೆ ಎಂಬ ಮಾತನ್ನು ನಾವು ಹೀಗೆ ಬರೆಯುತ್ತೇವೆ.

೧ (ಜ) ವಿವಿಧ ಪರಿಣಾಮಗಳ ಭಾಗಾಕಾರದಿಂದ ಅಪೂರ್ಣಾಂಕಗಳ ಭಾಗಾಕಾರಕ್ಕೆ ಸಾಗುವದು.

೧ (ಬ) I ೩೨ ಚಟಾಕು ÷ ೮ ಚಟಾಕು = ೪

ಇದರಂತೆ ಹುಡುಗರಿಂದ ಮಾಡಿಸಿದ ಉಳಿದ ಲೆಕ್ಕಗಳನ್ನು ಅವರಂದಲೇ ಬರೆಯಿಸುವದು.

II ೩೫ ಚಟಾಕು ÷ ೮ ಚಟಾಕು = ೪೩

III ೩ ಛಟಾಕು ÷ ೮ ಛಟಾಕು = ೩

ಒಂದು ಅಪೂರ್ಣಾಂಕಕ್ಕೆ ಮತ್ತೊಂದು ಅಪೂರ್ಣಾಂಕದಿಂದ ಭಾಗಿಸುವದು ಈ ಮೇಲಿನ ಲೆಕ್ಕಗಳಂತೆ ಇರುತ್ತದೆ.

೧ (ಕ) ಈ ಪಾಠಕ್ಕೆ ಅಪೂರ್ಣಾಂಕದ ಅಂಶ ಛೇದಗಳ ಸರಿಯಾದ ಕಲ್ಪನೆಯು ಹುಡುಗರಿಗೆ ಇರುವದು ಅವಶ್ಯ. ಈ ಕಲ್ಪನೆಯು ಹುಡುಗರಿಗೆ ಆಗಿದೆಯೋ ಇಲ್ಲವೋ ಎಂಬದರ ಪರೀಕ್ಷೆಯು ಈ ಕೆಳಗಿನ ಪ್ರಶ್ನೆಗಳಿಂದ ಆಗುವದು.

೧ (ಕ) ಅಂಶ ಛೇದಗಳ ಸರಿಯಾದ ಕಲ್ಪನೆ

½ ದಲ್ಲಿ ಎಷ್ಟು ಭಾಗಗಳಿವೆ? ಅವು ಎಂಥ ಭಾಗಗಳು? "ಒಂದು ವಸ್ತುವಿನಲ್ಲಿ ೨ ಸರಿ ಭಾಗಗಳನ್ನು ಮಾಡಿ ೬ ಭಾಗಗಳನ್ನು ತೆಗೆದುಕೊಂಡದ್ದು" ಹೀಗೆ ಹೇಳುವದಕ್ಕಿಂತ "ಏಳನೆಯ ಅಂಶ ಹಸರಿನ ಆರು ಭಾಗಗಳು" ಎಂದುಕಲಿಸುವದು ಒಳ್ಳೇದು. ಹೀಗೆ ಕಲಿಸಿದರೆ ಅಂಶವು ಭಾಗಗಳ ಸಂಖ್ಯೆಯನ್ನೂ ಛೇದವು ಭಾಗಗಳ ಹೆಸರನ್ನೂ ತೋರಿಸುತ್ತವೆಂಬದು ಹುಡುಗರಿಗೆ ಸ್ಪಷ್ಟವಾಗಿ ತಿಳಿಯುವದು.

೨ ಛೇದಗಳು ಸರಿಇದ್ದರೆ ಅಂಶಗಳ ಭಾಗಾಕಾರವೇ ಉತ್ತರ.

೨ (ಅ) ಭಾಗಾಕಾರವು ಪೂರ್ಣಾಂಕ ಬರುವ ಉದಾಹರಣೆಗಳು.

೨ (ಅ) ೧೪/೭ ÷ ೨/೭ = ೧೪ ೧೪ ಹಣ್ಣು ÷ ೧ ಹಣ್ಣು = ?

೨/೭ ÷ ೨/೭ = ೧ ೧೪ ಅರ್ಧಹಣ್ಣು ÷ ೧ ಅರ್ಧಹಣ್ಣು = ?

೩/೭ ÷ ೧/೭ = ೩ ೧೪ ನಿರ್ಧಹಣ್ಣು ÷ ೧ ನಿರ್ಧಹಣ್ಣು = ?

೪/೭ ÷ ೧/೭ = ೪ ೧೪ ಅರ್ಧ ÷ ೧ ಅರ್ಧ = ?

೧೫/೭ ÷ ೩/೭ = ೫ ೫ ಎಂಟನೆಯಅಂಶ ÷ ೧ ಎಂಟನೆಯಅಂಶ

೧೬/೭ ÷ ೮/೭ = ೨ ಈ ಪ್ರಶ್ನೆಗಳನ್ನು ಕ್ರಮವಾಗಿ ಹುಡುಗರಿಗೆ ಕೇಳುತ್ತ ಬಂದರೆ

೨೮/೭ ÷ ೭/೭ = ೪ ೪ ಏಳನೆಯಅಂಶ ÷ ೭ ಏಳನೆಯಅಂಶ

೭/೭ ÷ ೭/೭ = ೧ ಇಂಥ ಲೆಕ್ಕವನ್ನು ೪ಕ್ಕೆ ೨ರಿಂದ ಭಾಗಿಸಿ

ಮಾಡುವರು. ಎಡಕ್ಕೆ ತೋರಿಸಿದ ಉದಾಹರಣೆಗಳನ್ನು ಬಾಯಿಂದ ಮಾಡಿಸಿ ಕರೇಹಲಿಗೆಯ ಮೇಲೆ ಬರೆಯಬೇಕು.

೨ (ಬ) ಉತ್ತರವು ವಿಷಮ ಅಪೂರ್ಣಾಂಕವಿರುವ ಉದಾಹರಣೆಗಳು

೨ (ಬ) $\frac{11}{13} \div \frac{7}{13} = 1\frac{4}{7}$

$\frac{9}{13} \div \frac{2}{13} = 4\frac{1}{2}$

$\frac{15}{16} \div \frac{5}{16} = 3$

೨ (ಕ) $\frac{3}{7} \div \frac{1}{7} = \frac{3}{1}$

$\frac{5}{8} \div \frac{1}{8} = \frac{5}{1}$

ಮೇಲಿನ ಪೆಟ್ಟಿನಲ್ಲಿ ಕಡೆಯ ಲೆಕ್ಕವನ್ನು ಮಾಡಿದರೀತಿಯನ್ನು ಹುಡುಗರಿಗೆ ನೆನಪಿಗೆ ತಂದುಕೊಟ್ಟು ಅವರಿಂದ ಉತ್ತರವನ್ನು ಹೊಂದಿಸಬೇಕು.

ಈ ಲೆಕ್ಕಗಳನ್ನು ಮೇಲಿನ II, III ಲೆಕ್ಕಗಳಿಗೆ ಹೋಲಿಸಿ ತೋರಿಸಬೇಕು.

೨ (ಕ) ಉತ್ತರವು ಸಮ ಅಪೂರ್ಣಾಂಕವಿರುವ ಉದಾಹರಣೆಗಳು.

ಈ ಅಪೂರ್ಣಾಂಕಗಳು ಎಂಥವು? ಇವುಗಳ ಛೇದಗಳು ಎಂಥವು? ಈ ಅಪೂರ್ಣಾಂಕಗಳ ಭಾಗಾಕಾರವನ್ನು ಹ್ಯಾಗೆ ಮಾಡಿದಿರಿ? ಒಂದು ಉದಾಹರಣೆಯನ್ನು ತಕ್ಕೊಂಡು ಅದನ್ನು ಉದ್ದೇಶಿಸಿ ಪ್ರಶ್ನೆ ಮಾಡಿದರೆ ಈ ಕೆಳಗಿನ ನಿಯಮವನ್ನು ಹುಡುಗರಿಂದ ಹೊರಡಿಸಬಹುದು. ಛೇದಗಳು ಸರಿ ಇದ್ದರೆ ಮೊದಲನೆಯ ಅಪೂರ್ಣಾಂಕದ ಅಂಶಕ್ಕೆ ಎರಡನೆಯ ಅಪೂರ್ಣಾಂಕದ ಅಂಶದಿಂದ ಭಾಗಿಸಬೇಕು.

ಅಪೂರ್ಣಾಂಕಗಳ ಭಾಗಾಕಾರ. ೨ನೆಯ ಪಾಠ

ವಿಷಯ.	ಕಲಿಸುವ ಕ್ರಮ
ಪೂರ್ವಸಿದ್ಧತೆ.	$\frac{2}{3}$ವನ್ನು ೧೫ ಛೇದಬರುವಂತೆ ಬರೆಯಿರಿ. $\frac{3}{5}$ವನ್ನು ೧೫ ಛೇದಬರುವಂತೆ ಬರೆಯಿರಿ. ಇತ್ಯಾದಿ ಪ್ರಶ್ನೆಗಳಿಂದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು.
೧. ಸಮಾನ ಛೇದವುಳ್ಳ ಅಪೂರ್ಣಾಂಕಗಳ ಭಾಗಾಕಾರ.	೧. ಒಂದೇ ಛೇದವುಳ್ಳ ಅಪೂರ್ಣಾಂಕಗಳ ಭಾಗಾಕಾರವನ್ನು ಹ್ಯಾಗೆ ಮಾಡುವಿರಿ? ಇವತ್ತಿನದಿನಸ ಬೇರೆಬೇರೆ ಛೇದಗಳುಳ್ಳ ಅಪೂರ್ಣಾಂಕಗಳ ಭಾಗಾಕಾರವನ್ನು ಹ್ಯಾಗೆ ಮಾಡಬೇಕೆಂಬುದನ್ನು ಕಲಿಯೋಣ.
೨. (ಅ) ಅಸಮಾನ ಛೇದಗಳುಳ್ಳ ಅಪೂರ್ಣಾಂಕಗಳ ಬೇರೀಜು.	೨ (ಅ) ಛೇದಗಳು ಬೇರೆ ಬೇರೆ ಇದ್ದಂಥ ಎರಡು ಅಪೂರ್ಣಾಂಕಗಳ ಬೇರೀಜು ಹ್ಯಾಗೆ ಮಾಡುವಿರಿ? ಯಾಕೆ?
೨) ಸದರ—ಮಜಾಬಾಕಿ	(ಬ) ಅದರಂತೆ ಅವುಗಳ ಮಜಾಬಾಕಿ ಹ್ಯಾಗೆ ಮಾಡುವಿರಿ? ಯಾಕೆ?

(ಕ) ಸದರ–ಭಾಗಾಕಾರ.

(ಕ) ಇದರಂತೆ ಎರಡು ಅಪೂರ್ಣಾಂಕಗಳ ಭಾಗಾಕಾರ ಮಾಡುವಾಗ ಅವುಗಳ ಛೇದಗಳು ಬೇರೆ ಬೇರೆ ಇದ್ದರೆ ಏನುಮಾಡಬೇಕು? ಛೇದಗಳನ್ನು ಒಂದೇ ಮಾಡಿಕೊಂಡು ಭಾಗಿಸಬೇಕು.

೩. ನಿಯಮ

ಉದಾ. ೧. $\frac{೫}{೬} \div \frac{೩}{೪}$ $= \frac{೫ \times ೪}{೬ \times ೩} \div \frac{೩ \times ೬}{೪ \times ೬}$ $= \frac{೨೦}{೧೮}$

೩. ಕೊಟ್ಟ ಅಪೂರ್ಣಾಂಕಗಳ ಛೇದಗಳು ಒಂದೇ ಇದ್ದರೆ ಮೊದಲನೆಯ ಅಪೂರ್ಣಾಂಕದ ಅಂಶಕ್ಕೆ ಎರಡನೆಯ ಅಪೂರ್ಣಾಂಕದ ಅಂಶದಿಂದ ಭಾಗಿಸಬೇಕು. ಇಲ್ಲದಿದ್ದರೆ ಮೊದಲು ಛೇದಗಳನ್ನು ಸರಿಮಾಡಿಕೊಂಡು ಆ ಮೇಲೆ ಮೊದಲನೆಯ ಅಂಶಕ್ಕೆ ಎರಡನೆಯ ಅಂಶದಿಂದ ಭಾಗಿಸಬೇಕು.

ಉದಾ. ೨. $\frac{೩}{೫} \div ೨\frac{೧}{೨}$ $= \frac{೩}{೫} \div \frac{೫}{೨}$ $= \frac{೩}{೫} \times \frac{೨}{೫}$ $= \frac{೬}{೨೫}$

೪. ಅಭ್ಯಸನಗಳು.

(ಅ) ಬಾಯಿಂದ ಮಾಡಿಸುವವು

(ಅ) ಈ ಕೆಳಗಿನ ಅಭ್ಯಸನಗಳನ್ನು ಬಾಯಿಂದ ಮಾಡಿಸಬೇಕು.

$\frac{೩}{೪} \div \frac{೩}{೪} = ?$ $\quad ೧ \div \frac{೧}{೨} = ?$ $\quad ೧ \div \frac{೧}{೫} = ?$

$೧ \div \frac{೧}{೩} = ?$ $\quad ೧ \div \frac{೨}{೩} = ?$ $\quad ೧ + \frac{೧}{೫} = ?$

$\frac{೧}{೪} \div \frac{೧}{೮} = ?$ $\quad \frac{೨}{೩} \div \frac{೨}{೩} = ?$ $\quad \frac{೩}{೪} + \frac{೧}{೪} = ?$

(ಬ) ಪಾಟಿಯ ಮೇಲಿನವು.

(ಬ) ಪಾಟಿಯ ಮೇಲೆ ಮಾಡಲಿಕ್ಕೆ ಉದಾಹರಣೆಗಳನ್ನು ಹೇಳಬೇಕು. (ಮುಂದೆ ಸಾಗಿದೆ.)

S. R. Tatti.

ಶಾಲಾಪತ್ರಿಕ.

ಸಂ. ೫೪. | ಅಕ್ಟೋಬರ ೧೯೧೫. | ಸಂಚಿಕೆ ೧೦.

ಪ್ರಾಥಮಿಕ ಶಿಕ್ಷಣದ ಸುಧಾರಣೆಯ ಸಂಬಂಧದಿಂದ ಸರಕಾರದವರ ವಿಚಾರಗಳು.

ಪ್ರಾಥಮಿಕ ಶಾಲೆಗಳಲ್ಲಿ ಕೊಡಲ್ಪಡುವ ಶಿಕ್ಷಣದ ಎಷ್ಟೋ ಭಾಗವು ವ್ಯರ್ಥವಾಗಿ ಹೋಗುತ್ತದೆಂದು ಸರಕಾರದವರ ನಜರಿಗೆ ಬಂದಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ಪಕ್ಷಕ್ಕೆ ನಾಲ್ಕುವರ್ಷ (ನಿದಾನ ೩ನೇಯ ಇಯತ್ತೆಗಳ ಅಭ್ಯಾಸ ಪೂರ್ಣ) ಅಭ್ಯಾಸ ಮಾಡಿದ ಹೊರ್ತು ಯಾವನೊಬ್ಬನು ಅಕ್ಷರಸ್ಥನೆನಿಸಿಕೊಳ್ಳಲಿಕ್ಕೆ ಯೋಗ್ಯನಾಗುವದಿಲ್ಲ. ಶಾಲೆಗಳಲ್ಲಿ ಸೇರುವಂಥ ಹುಡುಗರಲ್ಲಿ ೧೦೦ ರಲ್ಲಿ ೧೦ ವಿದ್ಯಾರ್ಥಿಗಳು ಈ ಪ್ರಕಾರ ಅಕ್ಷರಸ್ತರಾಗದೆ ಉಳಿಯುತ್ತಾರೆಂದು ಸರಕಾರದವರ ಅಂದಾಜು ಇರುವದು. ೩ ಕನಿಷ್ಟ ಪ್ರಾಥಮಿಕ ತರಗತಿ (೩ನೆಯ ಇಯತ್ತೆಗಳ ಅಭ್ಯಾಸ ಪೂರ್ಣ) ಯನ್ನು ಮುಗಿಸಿ, ಶಾಲೆ ಬಿಟ್ಟ ಜನರು ತಮ್ಮ ಅಕ್ಷರಸ್ತಿಕೆಯನ್ನು ಕಾಯ್ದುಕೊಳ್ಳಲಿಕ್ಕೆ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಾರೆಂಬದನ್ನು ಕುರಿತು, ಉಪಯುಕ್ತವಿಚಾರ ಮಾಡಿ ಹಿಂದುಸ್ಥಾನ ಸರಕಾರದ ವಿದ್ಯಾಸಂಬಂಧದ ಪಂಚವಾರ್ಷಿಕ (೧೯೦೩ ರಿಂದ ೧೯೧೭) ಅಹವಾಲಿನಲ್ಲಿ ೧೦೦ಕ್ಕೆ ೫೯ ಜನರು ಸ್ವಲ್ಪ ವರ್ಷಗಳಲ್ಲಿ ನಿರಕ್ಷರರಾಗಿರುತ್ತಾರೆಂದು ವಿಚಾರ ಮಾಡಿ ಪ್ರಸಿದ್ಧ ಪಡಿಸಿರುತ್ತಾರೆ. ಈ ಎರಡೂ ವಿಷಯದ ಪ್ರಮಾಣದ ಅಂಕೆಗಳ ವಿಷಯವಾಗಿ ಹೀರೆ ಬೀರೆ ಕಡೆಯಲ್ಲಿ ಮತಭೇದವಿರುತ್ತದೆಂಬದು ಕಂಡು ಬರುತ್ತದೆ. ಈ ಪ್ರಕಾರದ ಶಿಕ್ಷಣದ ನೈಷ್ಫಲ್ಯವನ್ನು ದೂರ ಮಾಡಲಿಕ್ಕೆ ಸರಕಾರದವರು ಹಲವು ಉಪಾಯಗಳನ್ನು ಯೋಜನೆ ಮಾಡಿರುತ್ತಾರೆ.

೧. ಬಾಲಕರ ವರ್ಗವನ್ನು ಕಲಿಸಲಿಕ್ಕೆ ಯೋಗ್ಯರಾದ ಶಿಕ್ಷಕರು ಇಲ್ಲದಲ್ಲಿ ನೇಮಿಸಿ ಕೊಟ್ಟು ಆ ವರ್ಗದ ಅಭ್ಯಾಸವನ್ನು ತೀವ್ರ ಮುಗಿಸುವದಕ್ಕೂ, ತಂದೆ ತಾಯಿಗಳಲ್ಲಿ ಶಾಲೆಯ ಶಿಕ್ಷಣದ ಸಂಬಂಧದಿಂದ ಆದರ ಹುಟ್ಟಿಸಲಿಕ್ಕೂ ಅನುಕೂಲಮಾಡಿಕೊಡುವದು.

೨. ಒಬ್ಬ ಶಿಕ್ಷಕನ ಕಡೆಗೆ ೨-೩ ವರ್ಗಗಳಿದ್ದಲ್ಲಿ ಮೇಲಿನ ವರ್ಗಗಳ ಕಡೆಗೆ ಶಿಕ್ಷಕರು ವಿಶೇಷ ಲಕ್ಷ್ಯಗೊಟ್ಟು ಬಾಲಕರ ವರ್ಗದ ಕಡೆಗೆ ದುರ್ಲಕ್ಷ್ಯ ಮಾಡುವದು ಕಂಡು ಬಂದದರಿಂದ ಅಂಥ ಶಾಲೆಗಳಲ್ಲಿ ಪ್ರತಿಯೊಬ್ಬ ಶಿಕ್ಷಕನು ತನ್ನ ಕೈಕೆಳಗಿನ ಪ್ರತಿಯೊಂದು ವರ್ಗಕ್ಕೆ ವಿವಕ್ಷಿತ ತಾಸುಗಳನ್ನು ಸ್ವತಂತ್ರವಾಗಿ ಕಲಿಸುವಂತೆ ಗೊತ್ತುಮಾಡಿ ವೇಳಾಪತ್ರಿಕೆಗಳನ್ನು ರಚಿಸುವದು. ಮತ್ತು ೩ನೇ ಇಯತ್ತೆಯವರೆಗಿನ ಅಭ್ಯಾಸವನ್ನು ಮೂರೇ ವರ್ಷಗಳಲ್ಲಿ ಮುಗಿಸುವಂತೆ ೩ ತರಗತಿಗಳನ್ನು ಗೊತ್ತು ಮಾಡುವದು.

೩. ಈಗಿದ್ದ ಪ್ರಾಥಮಿಕ ಶಾಲೆಗಳ ಉಚ್ಚತರಗತಿಗಳ ಅಭ್ಯಾಸ ಕ್ರಮಗಳುದಲ್ಲಿ ಕೆಲವು ವ್ಯವಹಾರಿಕ ವಿಷಯಗಳನ್ನು ಸೇರಿಸಿ, ಅದರಿಂದ ಶಾಲೆಯಲ್ಲಿ ವಿದ್ಯಾರ್ಥಿ ಬಹಳ ದಿವಸ ಉಳಿಯುವಂತೆ ಪಾಲಕರ ಮನಸ್ಸನ್ನು ಒಲಿಸುವದು.

ಶಾಲೆಗಳೊಳಗಿನ ವಿದ್ಯಾರ್ಥಿಗಳಿಗೂ ಮತ್ತು ಇತರ ಜನರಿಗೂ ಯುದ್ಧದ ಸಂಬಂಧದ ಯಾವತ್ತು ಸಂಗತಿಗಳು ಆರಂಭದಿಂದ ಇವತ್ತಿನವರೆಗೆ ಗೊತ್ತು ಇರುವದು ಅವಶ್ಯವದೆ ಎಂದು ಸರಕಾರದವರಿಗೆ ಕಂಡು ಬಂದದರಿಂದ ಆ ಸಂಬಂಧದ ಸಂಗತಿಗಳನ್ನು ಪ್ರಸಿದ್ಧ ಪಡಿಸುವದಕ್ಕಾಗಿ ಮುಂಬಯಿಯಲ್ಲಿ ಒಂದು ಸಂಸ್ಥೆಯು ಸರಕಾರದವರಿಂದ ಗೊತ್ತು ಮಾಡಲ್ಪಟ್ಟಿರುತ್ತದೆ. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಆ ಜ್ಞಾನವನ್ನು ಕೊಡುವದಕ್ಕೆ ಮೆ. ಡಾಯರೇಕ್ಟರ ಸಾಹೇಬರವರಿಂದ ಕೆಳಗೆ ಕೊಟ್ಟ ಸೂಚನೆಗಳು ಮಾಡಲ್ಪಟ್ಟವೆ.

೧ ಡೆಪೂಟಿ ಎಜ್ಯು. ಇನಸ್ಪೆಕ್ಟರರು ಅಥವಾ ಅಸಿ ಡೆಪೂಟಿ ಎಜ್ಯು. ಇನಸ್ಪೆಕ್ಟರರು ಪ್ರಾಥಮಿಕ ಶಾಲೆಗಳನ್ನು ನೋಡಲಿಕ್ಕೆ ಹೋದಾಗ್ಗೆ ಯುದ್ಧದ ಸಂಬಂಧದ ಚಿತ್ರಗಳು, ನಕಾಶಗಳು, ಮ್ಯಾಪ್ಸಿಕ್ ಲ್ಯಾಂಟರ್ನದ ಚಿತ್ರಗಳು ಇವುಗಳನ್ನು ಉಪಯೋಗಿಸಿ ಯುದ್ಧದ ವಿಷಯವಾಗಿ ವಾಖ್ಯಾನವನ್ನು ಕೊಡುವದು ಅಥವಾ ಯುದ್ಧದ ಮಾಹಿತಿಯನ್ನು ಹೇಳುವದು.

೨ ಮ್ಯುನಸಿಪಾಲಿಟಿ ಶಾಲೆಗಳಲ್ಲಿಯೂ ಇದೇ ಪ್ರಕಾರದ ವ್ಯವಸ್ಥೆಯನ್ನು ಮ್ಯುನಸಿಪಲ್ ಕಮಿಶನರಿಯವರು ಟ್ರೇಂಡ ಮಾಸ್ತರರ ಸಹಾಯದಿಂದ ಮಾಡುವದು.

೩. ಡೆಪೂಟಿ ಮತ್ತು ಅಸಿ. ಡೆಪೂಟಿ ಎಜ್ಯು. ಇನಸ್ಪೆಕ್ಟರರು ಯುದ್ಧ ವಿಷಯಕ ವ್ಯಾಖ್ಯಾನಗಳನ್ನು ತಯಾರಿಸಿ ತಮ್ಮ ಭಾಗದ ಇನಸ್ಪೆಕ್ಟರರ ಪರವಾನಿಗಿಯನ್ನು ತೆಗೆದು

ಕೊಳ್ಳಬೇಕು. ಈ ವ್ಯಾಖ್ಯಾನಗಳನ್ನು ಮೆ. ಫ್ರೇಜರ ಸಾಹೇಬರವರು ಬರೆದ 'ದಿವರ್ಲ್ಡ್ ಲೆಟ್‌ವಾರ್' ಎಂಬ ಪುಸ್ತಕದ ಆಧಾರದಿಂದ ಇಲ್ಲವೆ ಅದರ ಭಾಷಾಂತರ ಮೇಲಿಂದ ತಯಾರಿಸಬೇಕು.

೪. ದೇಶಭಾಷೆಯ ಶಾಲಾಪತ್ರಿಕೆಗಳಲ್ಲಿ ಯುದ್ಧದ ಸಂಬಂಧದ ವಿಶೇಷವಾದ ವ್ಯಾಖ್ಯಾನಗಳ ಟಿಪ್ಪಣಿಗಳನ್ನು ಮತ್ತು ಯುದ್ಧದ ಸ್ಥಿತಿಯ ವಿಷಯಕ ಸಂಗತಿಗಳನ್ನು ಕೊಡುವದು.

ಸರಕಾರದವರು ಈ ಬಗ್ಗೆ ಬೇಕಾಗುವ ಚಿತ್ರಗಳನ್ನು ಪೂರೈಸಿ ಕೊಡುವ ವಿಚಾರವನ್ನು ಮಾಡಿದ್ದಾರೆ. ಕೆಲವು ಚಿತ್ರಗಳು ಈಗಿನ ವರ್ತಮಾನಪತ್ರಗಳಲ್ಲಿಯೂ ಮಾಸಿಕ ಪುಸ್ತಕಗಳಲ್ಲಿಯೂ ದೊರೆಯುವವು.

ಶಾಲೆಗಳಲ್ಲಿಯ ವಿದ್ಯಾರ್ಥಿಗಳಿಗೆ ಬ್ರಿಟಿಶ್ ಸಾಮ್ರಾಜ್ಯದ ನಿಶಾನೆಯ ವಿಷಯವಾಗಿ ತಿಳಿಸಿಹೇಳಿ ಆ ನಿಶಾನೆಗಳನ್ನು ವ್ಯಾಖ್ಯಾನಗಳ ದಿವಸಗಳಲ್ಲಿ, ಹಬ್ಬದ ದಿವಸಗಳಲ್ಲಿ ಮತ್ತು ಸಾರ್ವಜನಿಕ ಕಾರ್ಯಗಳ ಪ್ರಸಂಗಗಳಲ್ಲಿ ಶಾಲೆಗಳ ಮೇಲೆ ಹಚ್ಚಿಸುವದು.

ಯುದ್ಧದ ಸಾಮಾನ್ಯಪರಿಸ್ಥಿತಿ.

(ಅ) ಹೋದ ಅಗಷ್ಟ ೧೪ನೇ ತಾರೀಖಿನಿಂದ ೨೫ರ ವರೆಗೆ ನಡೆದ ಯುದ್ಧದಲ್ಲಿ ಎರಡು ಫ್ರೆಂಚರ ಹಾಗು ಎರಡು ಬ್ರಿಟಿಷರ ಸೈನ್ಯದ ತಂಡಗಳೂ ನಾಯಸಾನ್ಸದಿಂದ ಆರಾಸವ ವರೆಗೆ (ಅಂದರೆ ಸರಾಸರಿ ೪೦ ಮೈಲು) ಹಬ್ಬಿರುವ ಶತ್ರು ಸೈನ್ಯದ ಸಂಗಡ ರೋಷದಿಂದ ಹೋರಾಡಿ ಜಯವನ್ನು ಹೊಂದಿ ಮುಂದಕ್ಕೆ ಸಾಗಲಾರಂಭಿಸಿವೆ. ಇವರಲ್ಲಿ ಅನೇಕ ಶತ್ರುಸೈನ್ಯದವರು ಸತ್ತರು. ಘಾಯ ಹೊಂದಿದರು ಹಾಗೂ ಶರಣಾಗತರಾದರು. ಇವರ ಹೊತ್ತಾಗಿ ತೋಪುಗಳೂ ಗುಂಡು ಮದ್ದುಗಳೂ ಸೈನ್ಯದವರಿಗೆ ಬೇಕಾಗುವ ಎಲ್ಲ ಸಾಮಗ್ರಿಗಳ ಸಂಗ್ರಹವು ಸಂಯುಕ್ತರ ಕೈಸೇರಿಸಿದವು.

(ಬ) ಈ ವಾರವು ಯುದ್ಧದ ದೃಷ್ಟಿಯಿಂದ ಬಹಳ ಮಹತ್ವದ್ದೂ, ಪರಿಣಾಮ ಜನಕವೂ ಆಗಿರುವದು. ನಾಲ್ಕು ತಿಂಗಳುಗಳ ವರೆಗೆ ಹೋರಾಡಿ ಕಠಿಣ ಪ್ರಸಂಗದಲ್ಲಿ ಬಿದ್ದಂಥ ಸಂಯುಕ್ತರ ಸೈನ್ಯದವರು. ಈ ವಾರದಲ್ಲಿ ಈ ರೀತಿಯಾಗಿ ಹೋರಾಡಿ ಜಯಪಡೆದದ್ದನ್ನು ನೋಡಿದರೆ ಸೇನಾನಾಯಕರ ಚತುರತನವೂ ಸೈನಿಕರಲ್ಲಿಯ ಉತ್ಸಾಹವೂ ಎಷ್ಟಿರಬೇಕೆಂಬದನ್ನು ವಾಚಕರೇ ಊಹಿಸಬಹುದು.

ಜರ್ಮನ್ನರನ್ನು ಕೊಂದು ಅವರ ಸೈನ್ಯವನ್ನು ಪೂರ್ಣವಾಗಿ ನಾಶಪಡಿಸುವ ನಮ್ಮ ಉದ್ದೇಶವು ಬಹಳ ಮಟ್ಟಿಗೆ ಕೈಗೂಡಿರುವದು. ೧೯ ವರ್ಷದಿಂದ ೪೮ ವರ್ಷದವರೆಗಿನ ಜನರೆಲ್ಲರೂ ಜರ್ಮನ್ನರ ಸೈನ್ಯದಲ್ಲಿರುವರು. ಇನ್ನು ತುಸು ದಿವಸಗಳಲ್ಲಿ ಜರ್ಮನಿಯಲ್ಲಿ ಮನುಷ್ಯ ಬಲವು ಪೂರ್ಣ ಇಲ್ಲದಂತಾಗುವದರಲ್ಲಿ ಸಂದೇಹವಿಲ್ಲ. ಸಿವಾಯರಲ್ಲಿಯೂ ಧೈರ್ಯ ಉತ್ಸಾಹ ನಂಬಿಗೆ ಮುಂತಾದವು ತೀರ ಇಲ್ಲದಂತಾಗಿದೆ.

ಅಮೇರಿಕನ್ನರ ಬಗ್ಗೆ ವಿಶೇಷವಾಗಿ ಎನೂ ಈ ವಾರ ಗೊತ್ತಿಲ್ಲದಿದ್ದರೂ ಇದು ವರೆಗೆ ೧೫೫ ಲಕ್ಷ ಜನರು ಫ್ರಾನ್ಸಿಗೆ ಬಂದು ಯುದ್ಧವನ್ನು ಉತ್ತಮರೀತಿಯಿಂದ ನಡಿಸಿದ್ದಾರೆ, ಮುಂದಾದರೂ ಬಹಳ ಮಟ್ಟಿಗೆ ಅವರು ಹೋರಾಡುವರೆಂಬದರಲ್ಲಿ ಸಂದೇಹವಿಲ್ಲ.

ಸದ್ಯಕ್ಕೆ ಜರ್ಮನಿಯಲ್ಲಿ ಯುದ್ಧ ಪಕ್ಷದವರು ಬಹಳ ಕಠಿಣ ಪ್ರಸಂಗದಲ್ಲಿ ತೊಡಿಕಿಕೊಂಡಿರುವರು. ಜಯದಿಂದಲೇ ಒಪ್ಪಂದವೆಂಬ ಸುದ್ದಿಯೇ ಸದ್ದಿಲ್ಲದೆ ಅಡಗಿತು. ಹಿಂಡೆನಬರ್ಗ, ಲುಡೆಂಡಾರ್ಫ ಮೊದಲಾದ ಸೇನಾನಾಯಕರ ವರ್ಚಸ್ಸು ಕಡಿಮೆಯಾಗುತ್ತ ನಡೆದದೆ. ಮುಖ್ಯ ಪ್ರಧಾನರಾದ ಕುಹಲಮಾನ ಎಂಬವರನ್ನು ತಳ್ಳಿ ಓಡಿಸಿದ ದಿನಸದಿಂದ ಜರ್ಮನ್ನರ ಅಪಜಯವಾಗುತ್ತ ನಡೆದದೆ. ಜರ್ಮನಿಯ ಸೈನ್ಯದಲ್ಲಿ ಪ್ರಜರಲ್ಲಿಯೂ ನಿರಾಶೆಯುಂಟಾಗಿದೆಯೆಂಬ ಬಗ್ಗೆ ಅನೇಕ ಚಿನ್ಹಗಳು ತೋರಲಿಕ್ಕೆ ಹತ್ತಿರುತ್ತವೆ.

(ಅ) ಇದೇ ಸಪ್ಟಂಬರ ೧೫ನೇ ತಾರೀಖಿನಿಂದ ೨೮ ವರೆಗೆ ನಡೆದ ಯುದ್ಧದಲ್ಲಿ ಆರು ಸಂಯುಕ್ತರ ತಂಡಗಳು ಪಶ್ಚಿಮ ರಣಾಂಗಣದ ರೀವ್ಸ-ಸೆಂಟಕ್ವೆಂಟಿನ ಲೆನ್ಸದ ಭಾಗದಲ್ಲಿ ಬಹಳ ಮಟ್ಟಿಗೆ ಮುಂದಕ್ಕೆ ಸಾಗಿರುವರು. ಬ್ರಿಟಿಷರು ೪ ದಿವಸಗಳಲ್ಲಿ ೧೬೦೦೦ ಜನರನ್ನು ಶರೆ ಹಿಡಿದು ೧೦೦ ತೋಪುಗಳನ್ನು ತೆಗೆದುಕೊಂಡರು ವಾತಾವರಣದಲ್ಲಿಯು ಯುದ್ಧವಂತೂ ಘನಘೋರವಾಗಿರುವದು. ಏರೋಪ್ಲೇನಗಳಲ್ಲಿ ಕುಳಿತು ಹೋಗಿ ಶತ್ರುಗಳ ಹಿಂಭಾಗವ ಜರ್ಮನೀ ದೇಶದ ಪಟ್ಟಣಗಳ ಮೇಲೆಯೂ ಬಾಂಬು ಗುಂಡುಗಳನ್ನು ಚೆಲ್ಲುತ್ತಿರುವರು. ಇತರ ರಣಾಂಗಣಗಳಲ್ಲಿ ಮಹತ್ವದ ಯುದ್ಧವೇನೂ ಎಸಗಿಲ್ಲ. ರಶಿಯಾದಲ್ಲಿ ಬೊಲ್ಶೆವಿಕ್ಕರು ಜೋಲಸೆವಿಕ್ಕರ ಸಂಗಡ ಹೋರಾಡುತ್ತಿರುವರು.

ಬ ಈ ವಾರದಲ್ಲಿ ಸಂಯುಕ್ತ ಸೈನ್ಯದವರು ಬಹಳ ಮಂದಕ್ಕೆವಾಗಿ ಹೆಚ್ಚುಕ್ಷೇತ್ರವನ್ನು ಆಕ್ರಮಿಸಿಕೊಂಡಿರುವರು. ಕಂದಕದ ಯುದ್ಧವು ನಡೆದಂದಿನಿಂದ ಇಷ್ಟು ಪ್ರಗ

ತಿಯಾಗಿದ್ದಿಲ್ಲ. ಹಿಂಡೆನಬರ್ಗದ ರೇಷೆಯವರೆಗೆ ತಿರುಗಿ ಹೋಗುವದು. ಜರ್ಮನ್ನರಿಗೆ ಅವಶ್ಯವಾಗಿದೆ. ೬ ವಾರಗಳ ಪೂರ್ವದಲ್ಲಿ ಜರ್ಮನ್ನರ ಸೈನ್ಯವನ್ನು ಮುರಿಯುವದು ಕಠಿಣವಾಗಿತ್ತು. - ಸದ್ಯಕ್ಕೆ ಅವರಲ್ಲಿ ನಿರಾಶೆಯುತ್ಪನ್ನವಾಗಿರುವದು. ಜಯವೆಂತೂ ದುಃಸಾಧ್ಯವಾಗಿದೆ. ಆವರೂ ಜರ್ಮನ್ನರು ಸಂಯುಕ್ತರನ್ನು ಅದಷ್ಟು ದಣಿಸಿ ತಮಗೆ ಅನುಕೂಲವಾದ ಒಪ್ಪಂದದ ಕರಾರುಗಳನ್ನು ದೊರಕಿಸಿಕೊಳ್ಳಬೇಕೆಂದು ಆಶಿಸುತ್ತಿದ್ದಾರೆ. ಶರದೃತುವಿನೊಳಗಾಗಿ ಸಂಯುಕ್ತರು ಶತೃಸೈನ್ಯವನ್ನು ಒಡೆದು ಹಿಂಡೆನ್ನಬರ್ಗದ ಶೇಷೆಯು ವರೆಗೆ ನಾಗಿ ಅಲ್ಲಿ ಘನಘೋರ ಯುದ್ಧವನ್ನುಮಾಡಿ ಜರ್ಮನಿಯು ಸೈನಿಕರಿಗೆ ಎಳ್ಳಷ್ಟಾದರೂ ವಿಶ್ರಾಂತಿಯಿಲ್ಲದಂತೆ ಮಾಡುವೆನೆಂದು ಸೇನಾನಾಯಕರಾದ ಫಾಕಸಾ ಹೇಬರು ಹೇಳುವರು.

ನೈತಿಕ ಪಾಠದ ಬಗ್ಗೆ ಬಂಗಾರದ ಪದಕದ ಇನಾಮು.

(ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಕೊಡಲ್ಪಟ್ಟದ್ದು)

ಮೊದಲೇ ಗೊತ್ತಾದ ಪ್ರಕಾರ ನೈತಿಕ ಶಿಕ್ಷಣವನ್ನು ಕೊಡುವದರಲ್ಲಿ ಮೇಲೆ ನಂಬರು ಪಡೆದ ವಿದ್ಯಾರ್ಥಿನಿಗೆ ಬಂಗಾರದ ಪದಕವನ್ನು ಕೊಡುವ ಸಮಾರಂಭವು ಇದೇ ತಿಂಗಳ ೭ನೇ ತಾರೀಖಿನ ದಿವಸ ಸಾಯಂಕಾಲ ನಾಲ್ಕುಗಂಟೆಗೆ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ನೆರವೇರಿತು. ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರಾದ ಕೃಷ್ಣರಾವ ಹುನಗುಂದ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಇಲ್ಲಿಯ ಹಾಯಸ್ಕೂಲ ಹೆಡ್ಡಮಾಸ್ತರರಾದ ರಾವಸಾಹೇಬ ಚಂದಾವರಕರ ಇವರೂ ಈ ಜಿಲ್ಲೆಯ ಡೆಪುಟೆ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾವಸಾಹೇಬ ಪೆರೂರ ಇವರೂ, ಸಭೆಯನ್ನು ಅಲಂಕರಿಸಿದ್ದರು.

ಮೊಪಲು, ಕಾಲೇಜಿನ ವಿದ್ಯಾರ್ಥಿನಿಯರು ಸ್ವಾಗತ ಪದ್ಯವನ್ನು ಹಾಡಿದ ಮೇಲೆ ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿನಿಯರು, ವಸ್ತುಪಾಠಕ್ಕೆ ಸಂಬಂಧಿಸಿದ ಕೆಲವು ಹಾಡುಗಳನ್ನು ಹಾಡಿದರು; ಕೆಲವು ಸಂಭಾಷಣಗಳನ್ನು ಆಡಿತೋರಿಸಿದರು. ಆ ಬಳಿಕ ಮೆ॥ ಎಜುಕೇಶನಲ್ ಇನಸ್ಪೆಕ್ಟರ ಸಾಹೇಬರವರು ಭಾಷಣವನ್ನು ಮಾಡಿದರು. ಅದರ ಸಾರಾಂಶವೇನಂದರೆ:—

ಮಿಸ್. ನ್ಯೂಲಂಡರವರೆ, ಬಂಧು ಭಗಿನಿಯರೆ, ಈ ಹೊತ್ತಿನ ದಿವಸ ನಾವೆಲ್ಲರೂ ಇಲ್ಲಿ ನೆರೆದ ಉದ್ದೇಶವು ನಿಮ್ಮೆಲ್ಲರಿಗೂ ಗೊತ್ತುಂಟು. ಕಳೆದ ಅಕ್ಟೋಬರ ತಿಂಗಳಲ್ಲಿ ಕವಿಯಿಟಿಯು ಮುಂದೆ ಒಂದು ನೀತಿ ಪಾಠವನ್ನು ಕಲಿಸಿ ತೋರಿಸಿ ಮೇಲೆ ನಂಬರು

ಪಡೆದ ವಿದ್ಯಾರ್ಥಿನಿಗೆ ಬಂಗಾರದ ಪದಕವನ್ನು ಕೊಡುವದು ಗೊತ್ತಾಗಿದೆ. ಮೊದಲು, ಈ ಪದಕದ ಸಲುವಾಗಿ ಹಣವನ್ನು ಯಾರು ಕೊಟ್ಟಿರುವರು? ಅದರ ವಿನಿಯೋಗವನ್ನು ಹೇಗೆ ಮಾಡತಕ್ಕದ್ದು? ಈ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವೆನು.

ಮುಂಬಯಿಯೊಳಗಿನ ಒಬ್ಬ ಉದಾರ ಗೃಹಸ್ಥನು ಒಂದು ಸಾವಿರ ರೂಪಾಯಿಗಳನ್ನು ಈ ಬಗ್ಗೆ ಕೊಟ್ಟಿರುವನು; ಅದರ ಬಡ್ಡಿಯು ವರ್ಷಕ್ಕೆ ೩೫ ರೂಪಾಯಿಗಳನ್ನು ಬರುವವು. ಈ ಹಣದಿಂದ ಎರಡು ಪದಕಗಳು ಪ್ರತಿವರ್ಷ ಮಾಡಿಸಲ್ಪಡುವವು. ಇವು ಸರತಿಯುಮೇಲೆ ಮುಂಬಯಿ ಇಲಾಖೆಯೊಳಗಿನ ಗಂಡುಹುಡುಗರ ಟ್ರೇ. ಕಾಲೇಜಿಗೆ ಒಂದು, ಹೆಣ್ಣುಮಕ್ಕಳ ಟ್ರೇ. ಕಾಲೇಜಿಗೆ ಮತ್ತೊಂದು, ಹೀಗೆ ಕೊಡಲ್ಪಡುವವು. ಕಮಿಟಿಯವರು ಗೊತ್ತುಮಾಡಿದ ಒಂದು ನೀತಿ ಪಾಠವನ್ನು ಕಮಿಟಿಯವರ ಮುಂದೆ ಕಲಿಸಿ ಮೇಲೆ ನಂಬರು ಪಡೆದವರಿಗೆ ಈ ಪದಕವನ್ನು ಕೊಡಬೇಕೆಂದು ಗೊತ್ತಾಗಿದೆ. ಹೋದ ವರ್ಷ ಇಲ್ಲಿಯ ಹೆಣ್ಣುಮಕ್ಕಳ ಟ್ರೇ. ಕಾ. ದ ಸರತಿಯು ಬಂದಿತ್ತು. ಬರುವ ವರ್ಷ ಇಲ್ಲಿಯ ಗಂಡುಮಕ್ಕಳ ಟ್ರೇ. ಕಾಲೇಜಿನ ಪಾಳಿಯು ಬರುವದು.

ಹಣವನ್ನು ಕೊಟ್ಟ ಗೃಹಸ್ಥನ ಸ್ವಾರ್ಥತ್ಯಾಗವೂ ಉದಾರಮನಸ್ಸೂ ಹೊಗಳತಕ್ಕಂಥವಿರುತ್ತವೆ. ಆ ಗೃಹಸ್ಥನು, ಎಲ್ಲ ವಿದ್ಯಾಭ್ಯಾಸವು ಸದಾಚರಣೆಯಲ್ಲಿ ಪರಿಣಮಿಸತಕ್ಕದ್ದೆಂಬ ಮಹತ್ವದ ಸಂಗತಿಯನ್ನು ಲಕ್ಷ್ಯಕ್ಕೆ ತಂದು, ಅದಕ್ಕಾಗಿ ಹಣವನ್ನು ತೆಗೆದಿಟ್ಟು, ಅದರ ಬಡ್ಡಿಯಲ್ಲಿ ಚಿಕ್ಕಮಕ್ಕಳಿಗೆ ನೀತಿಪಾಠವನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರನ್ನು ತಯ್ಯಾರಿಸುವ ಉದಾತ್ತ ಉದ್ದೇಶದಿಂದ ಈ ಕೆಲಸವನ್ನು ಮಾಡಿರುವನು. ಆ ಗೃಹಸ್ಥನು ಕೇವಲ ಉದಾತ್ತ ಉದ್ದೇಶವನ್ನೇ ಲಕ್ಷ್ಯಗಲ್ಲಿಟ್ಟು ಈ ಔದಾರ್ಯವನ್ನು ತೋರಿಸಿರುವದರಿಂದ ತನ್ನ ಹೆಸರನ್ನು ಸಹ ತಿಳಿಸಿರುವದಿಲ್ಲ. ಈ ಮಾತು ಲಕ್ಷ್ಯದಲ್ಲಿಡತಕ್ಕಂತಹದಿರುವದು.

ಮೆಹರಬಾನ ಡಾಯರೆಕ್ಟರ ಸಾಹೇಬರವರ ಅಪ್ಪಣೆಯ ಪ್ರಕಾರ ಕಳೆದ ಅಕ್ಟೋಬರ ತಿಂಗಳಲ್ಲಿ ಕಮಿಟಿಯವರು ಈ ಕಾಲೇಜದಲ್ಲಿ ನೀತಿಪಾಠದ ಪರೀಕ್ಷೆಯನ್ನು ತೆಗೆದುಕೊಂಡರು. ಪರೀಕ್ಷೆಗೆ ಒಂಬತ್ತು ಮಂದಿ ಉಮೇದವಾರರು ಬಂದಿದ್ದರು; ಮೆ. ನಿ:ಸ್. ಮೆಕಾಫಿಯವರು ಬೇರೆಬೇರೆ ವಿಷಯಗಳನ್ನು ಆರಿಸಿದ್ದರು. ಆದರೆ ನಾನು ಎಲ್ಲ ಉಮೇದವಾರರಿಗೂ ಒಂದೇ ವಿಷಯವನ್ನು ಕೊಟ್ಟರೆ, ನ್ಯಾಯವಾಗುವದೆಂದು "ಗೃಹವ್ಯವಸ್ಥೆ" ಈ ವಿಷಯವನ್ನು ನಿಯುಕ್ತಿಸಿದ್ದೆ ಇದೇ ವಿಷಯವನ್ನು ನಾನು ಆರಿಸಿದ ಉದ್ದೇಶವನ್ನು, ಇಲ್ಲಿ ಹೇಳುವೆನು.

ಗೃಹವು ಸಮಾಜಕ್ಕೂ ರಾಷ್ಟ್ರಕ್ಕೂ ತಳಕಲ್ಲಿನಂತೆ ಇರುವದು; ಮುಂದಿನ ಎಲ್ಲ ತರದ ಪ್ರಗತಿಯು ಗೃಹವನ್ನು ಅಂದರೆ ಕುಟುಂಬವನ್ನು ಅವಲಂಬಿಸಿರುವದು. ಆದ ಕಾರಣ ಚಿಕ್ಕ ಬಾಲಿಕೆಯರಿಗೆ "ಗೃಹವ್ಯವಸ್ಥೆ"ಯ ಬಗ್ಗೆ ನೀತಿ ಪಾಠವನ್ನು ಕೊಟ್ಟರೆ, ಅದು ಅವರ ಮನಸ್ಸಿನಲ್ಲಿ ದೃಢವಾಗಿ ಉಳಿಯುವದೆಂತಲೇ ಈ ವಿಷಯವು ಆರಿಸಲ್ಪಟ್ಟಿತು. ಈ ವಿಷಯವನ್ನು ಕಲಿಸಿದ ೯ ಮಂದಿ ವಿದ್ಯಾರ್ಥಿನಿಯರಲ್ಲಿ, ರೂಥ ಹಣ್ಣೀಕೇರಿ ಇವಳು ಸಾಧಾರಣ ಉತ್ತಮ ಪಾಠವನ್ನು ಕಲಿಸಿದಳೆಂದು, ಕಮಿಟಿಯವರು ನಿರ್ಣಯಿಸಿದರು. ಆ ಪ್ರಕಾರ ಈ ಹೊತ್ತು ಅವಳಿಗೆ ಪದಕವು ಕೊಡಲ್ಪಡುವದು. ಉಳಿದ ವಿದ್ಯಾರ್ಥಿನಿಯರು, ತಮಗೆ ಪದಕವು ಸಿಗಲಿಲ್ಲೆಂದು ನಿರುತ್ಸಾಹಿಗಳಾಗಬಾರದು ಕೇವಲ ಪದಕ ದೊರಕಿಸಿದವರಷ್ಟೇ ನೀತಿವಂತರು, ಶ್ರೇಷ್ಠರು ಎಂದು ತಿಳಿಯಬಾರದು. ಮುಂದೆ ಜಗತ್ತಿನಲ್ಲಿ ನಾನಾಪ್ರಕಾರದ ಕಠಿಣ ಪ್ರಸಂಗಗಳಲ್ಲಿ ಕಾಲುತಪ್ಪಿ ಬೀಳದಂತೆ ಎಚ್ಚರಿಕೆಯಿಂದ ನಡೆದು, ಸೀತೆ ದಮಯಂತಿ ಮೊದಲಾದವರಂತೆ ಕೀರ್ತಿಶಾಲಿಗಳಾಗಲಿಕ್ಕೆ ಯತ್ನಿಸತಕ್ಕದ್ದು"

ಈ ಅರ್ಥದ ಭಾಷಣವನ್ನು ಇನಸ್ಪೆಕ್ಟರ ಸಾಹೇಬರವರು ಮಾಡಿ, ಪದಕವನ್ನು ನೆಹರಬಾನ ಮಿಸ್ ನ್ಯೂಲಂಡ ಲೇಡೀ ಸುಪರಿಂಟೆಂಡೆಂಟರವರ ಕೈಯಿಂದ ರೂಥ ಹಣ್ಣೀಕೇರಿ ಇವಳಿಗೆ ಅಲಂಕರಿಸಿದರು. ಆಬಳಿಕ ಮ. ರಾ. ರಾ. ವೆಂಕಟರಾವ ಮಗಪಾಲ ಇವರು ಇನಸ್ಪೆಕ್ಟರ ಸಾಹೇಬರವರ ಹಾಗು ಸಭೆಗೆ ಬಂದ ಸಭ್ಯಗೃಹಸ್ಥರ ಆಭಾರವನ್ನು ಸಿದರು. ತರುವಾಯ ಪಾನಸುಪಾರಿಯಾಗಿ ರಾಷ್ಟ್ರಗೀತವಾದ ಬಳಿಕ ಸಭೆಯು ಕಲೆಯು ಮುಗಿಯಿತು.

ಪತ್ರವ್ಯವಹಾರ.

---

೧ ಕನ್ನಡ ಛಂದಸ್ಸಿನ ಪುಸ್ತಕವು.

ಮ: ರಾ. ರಾ. ಕನ್ನಡ ಶಾಳಾಪತ್ರಿಕೆಯ ಸಂಪಾದಕರಿಗೆ-

ಮಹಾಶಯರೇ! ಕೆಳಗಿನ ನಾಲ್ಕು ಮಾತುಗಳಿಗೆ ತಮ್ಮ "ಶಾಳಾಪತ್ರಿಕೆ"ಯ ಹೊಸ ಸಂಚಿಕೆಯಲ್ಲಿ ಸ್ಥಳಕೊಡುವಿರೆಂದು ಆಶಿಸುತ್ತೇನೆ. ಈ ವಿಷಯವು ವಿದ್ಯಾರ್ಥಿಗಳಿಗೆ ಎಷ್ಟು ಮಹತ್ವದ್ದಿರುವದೆಂಬದು ಸಂಪಾದಕರಿಗೆ ಗೊತ್ತೇ ಇರುವದು.—

ಈಗಿನ ಕೆಲವು ಕನ್ನಡ ಜನರು ಪ್ರಾಸವಿಲ್ಲದ ಕನ್ನಡ ಕವಿತೆಗಳನ್ನು ರಚಿಸಬೇಕೆಂಬುವ ವಿಚಾರದಲ್ಲಿರುವರು. ಪ್ರಾಸವಿಲ್ಲದ ಕೆಲವು ಕವಿತೆಗಳು "ಕನ್ನಡವಾಮನ" ಎಂಬವರಿಂದ ರಚಿಸಲ್ಪಟ್ಟು ಮೊನ್ನಿನ ವಾಗ್ಭೂಷಣದ ಹೊಸ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿವೆ.

ಇದರಿಂದ ಕನ್ನಡದ ಛಂದಶ್ಶಾಸ್ತ್ರವನ್ನು ಕಲಿಯುವ ವಿದ್ಯಾರ್ಥಿಗಳಿಗೆ ಅನ್ಯಥಾ ಜ್ಞಾನವಾಗಬಹುದು. ಆದುದರಿಂದ ಕೆಳಗಿನ ನಾಲ್ಕು ಮಾತುಗಳನ್ನು ತಮ್ಮೆಡೆಯಲ್ಲಿ ರಿಸುತ್ತೇನೆ.

ಕನ್ನಡ ಛಂದಸ್ಸಿನ ಮುಖ್ಯ ನಿಯಮವೇನು? ಈ ಪ್ರಕಾರದ ಕವಿತೆಗಳನ್ನು ಹಿಂದೆ ನಾವಿರಾರು ವರ್ಷಗಳ ಕೆಳಗೆ ಯಾವನಾದರೂ ರಚಿಸಬೇಕೆಂದು ಕಲ್ಪನೆಯಲ್ಲಿ ಸಹ ತಂದನೋ ಹ್ಯಾಗೆ? ಅಥವಾ ಇಂಥ ಕವಿತೆಗಳನ್ನು ರಚಿಸಲಿಕ್ಕೆ ಈಗಿನ ಕನ್ನಡ ವಿದ್ವಾಂಸರೆಂದೆನಿಸಿಕೊಂಡು ಹೋದವರ ಸಮ್ಮತಿಯು ಇರುವದೋ ಹ್ಯಾಗೆ? ಪ್ರಾಸವಿಲ್ಲದಂಥ ಕವಿತೆಗಳ ಸಮಾವೇಶವು ಕನ್ನಡ ಗ್ರಂಥಗಳೊಳಗೆ ಆಗಬಹುದೋ ಹ್ಯಾಗೆ? ಪುರಾತನದ ಹಾಗೂ ಈಗಿನ ಕನ್ನಡ ವಿದ್ವಾಂಸರು ಪ್ರಾಸವಿಲ್ಲದ ಕವಿತೆಗಳನ್ನು ರಚಿಸಬಾರದೆಂದು ಯಾಕೆ ನಿಯಮಿಸಿದರು? ಆಂಗ್ಲಭಾಷೆಗೂ ಕನ್ನಡ ಭಾಷೆಗೂ ಭೂಮ್ಯಾಕಾಶಗಳಷ್ಟು ಅಂತರವಿದ್ದು, ಆ ಭಾಷೆಯ ಪದ್ಧತಿಯನ್ನು ಕನ್ನಡ ಭಾಷಾಲಕ್ಷಣಗಳಲ್ಲಿ ಸಮಾವೇಶ ಮಾಡಬೇಕೆನ್ನುವದು ಜಾಣತನವೋ, ಮೂಢತನವೊ? ನಮ್ಮ ಪೂರ್ವದ ಕನ್ನಡ ವಿದ್ವಾಂಸರು ಸಂಸ್ಕೃತದಲ್ಲಿ ಪಾರಂಗತರಿದ್ದರೂ, ನಾವಿರಾರು ವರ್ಷಗಳಿಂದ ಕನ್ನಡ ಸಂಸ್ಕೃತಗಳ ಪರಿಚಯವು ಅವರಿಗೆ ಇದ್ದರೂ, ಸಂಸ್ಕೃತದಂತೆ ಕನ್ನಡದೊಳಗಾದರೂ, ಪ್ರಾಸವಿಲ್ಲದ ಕವಿತೆಗಳನ್ನು ರಚಿಸಲಿಕ್ಕೆ ಎಂದೂ ಸಮ್ಮತಿಸಲಿಲ್ಲ. ಹೀಗಿದ್ದ ಇಂಗ್ಲಿಷ ಕನ್ನಡದ ಪರಿಚಯವು ಈ ೨೫ ವರ್ಷಗಳಿಂದೀಚೆಗೆ ಇದ್ದರೂ, ಕನ್ನಡ ಇಂಗ್ಲಿಷ ಭಾಷೆಗಳಿಗೆ ಇಷ್ಟು ಅಂತರವಿದ್ದರೂ, ಆಂಗ್ಲಭಾಷೆಯ "Blank verse" ಅಂದರೆ ಪ್ರಾಸವಿಲ್ಲದ ಕವಿತೆಗಳನ್ನು ಕನ್ನಡದಲ್ಲಿ ಸೇರಿಸಬೇಕೆಂಬ ಅಸಂಬದ್ಧವಾದ ಹಾಗೂ ಶಾಸ್ತ್ರವಿರುದ್ಧವಾದ ಕಲ್ಪನೆಯು ಈಗಿನ ಕೆಲವರ ಮನಸ್ಸಿನಲ್ಲಿ ಬರುವದು ಎಂಥ ದುಃಖದ ಸಂಗತಿಯು? ಪುರಾತನದ ಮಹಾಕವಿಗಳೂ, ಭಾಷಾಭಿಮಾನಿಗಳೂ, ವಿದ್ವಾಂಸರೂ ಪ್ರಾಸವಿಲ್ಲದ ಕವಿತೆಗಳು ಕಾಕಕೋಲಾಹಲವೆಂದು ನಿರ್ಣಯಿಸಿದರು.

ವಸ್ತುಸ್ಥಿತಿಯು ಹೀಗಿದ್ದು, ಪುರಾತನದ ವಿದ್ವಾಂಸರ ಮತದ ವಿರುದ್ಧವಾಗಿಯೂ, ರೂಢಿಯು ವ್ಯಾಕರಣದ ವಿರುದ್ಧವಾಗಿಯೂ, ಭಾಷಾಸಾಂಪ್ರದಾಯದ ವಿರುದ್ಧವಾಗಿ

ಯೂ ರಚಿಸಲ್ಪಡುವ ಕವಿತೆಗಳು ಕನ್ನಡ ಭಾಷೆಯ ಕೊಲೆಯನ್ನು ಮಾಡುವವಲ್ಲದೆ, ಅಲಂಕಾರವಾಗಲಾರವು. ಹಾಗೂ ತನ್ನ ಭಾಷೆಯ ನಿಜವಾದ ಉನ್ನತಿಯ ಸಲುವಾಗಿ ಪ್ರಯತ್ನಿಸುವ ಪ್ರತಿಯೊಬ್ಬ ಕನ್ನಡಿಗನೂ ಹಾಗೂ ಮಾಸಪತ್ರಿಕೆಗಳೂ ಇಂಥ ಕವಿತೆಗಳಿಗೆ ಆಶ್ರಯ ಕೊಡಬಾರದು.

ಛಂದಶ್ಶಾಸ್ತ್ರವೂ, ಭಾಷಾಸಾಂಪ್ರದಾಯಗಳೂ, ವ್ಯಾಕರಣಗಳೂ, ಪ್ರತಿಯೊಂದು ಭಾಷೆಗೆ ಜೀವನ. ಆ ನಿಯಮಗಳ ವಿರುದ್ಧವಾಗಿ ನಡೆಯುಹತ್ತಿದರೆ, ಭಾಷೆಯ ಉನ್ನತಿಯಾಗದೆ, ಭಾಷೆಯು ಹಸಿಗೆಟ್ಟು ಹೋಗುವದು.

ಕನ್ನಡ ಪಂಡಿತರು ಪ್ರಾಸವಿಲ್ಲದೇ ಕನ್ನಡದಲ್ಲಿ ಕವಿತೆಗಳನ್ನು ರಚಿಸಬಾರದೆಂದು ಯಾಕೆ ವಿಧಿಸಿದರು? ಹಾಗೆ ವಿಧಿಸುವದರಿಂದ ಕವಿಗಳಿಗೆ ಜಿಕ್ಕಟ್ಟಾಗುವದೆಂಬ ಕಲ್ಪನೆಯು ಅವರಿಗೆ ಬರಲಿಲ್ಲವೋ ಹ್ಯಾಗೆ? ಎಂಬ ಪ್ರಶ್ನವು ಒರಬಹುದು. ಆದರೆ ಮೊದಲಿನ ಲೋಕೋತ್ತರರಾದ ವಿದ್ವಾಂಸರ ಉನ್ನತವಾದ ಕಲ್ಪನೆಗಳಿಗೂ, ಈಗಿನ ಭಾಷಾ ನೌಂದರ್ಯವನ್ನರಿಯದಂಥ, ಪಂಡಿತರೆನಿಸಿಕೊಳ್ಳಬೇಕೆಂಬ ಹವ್ಯಾಸವುಳ್ಳಂಥ, ಹಾಗೂ ಇಂಥ ತಮ್ಮ ಪಾಂಡಿತ್ಯದ ಒಲದಿಂದ ಭಾಷೆಯ ಸುಧಾರಣೆಯನ್ನು ಮಾಡಬೇಕೆನ್ನುವ ಪಂಡಿತರಿಗೂ ಮಹದಂತರವದೆ. ಆಗಿನ ವಿದ್ವಾಂಸರ ನಾಲಿಗೆಯ ಮೇಲೆ ಭಾಷಾದೇವಿಯು ನರ್ತಿಸುತ್ತಿದ್ದಳು. ಅವರ ಶಬ್ದಸಂಗ್ರಹವೂ, ಭಾಷಾಪರಿಜಯವೂ, ಅತ್ಯಂತವಾಗಿದ್ದುದರಿಂದ ಪ್ರಾಸದ ತ್ರಾಸವು ಅವರಿಗೆ, ಈಗಿನ ಅರ್ಧಪಂಡಿತರಷ್ಟು ಅನಿಸುತ್ತಿದ್ದಿಲ್ಲ. ಜೈಮಿನಿಯೊಂದನ್ನೇ ಓದಿದರೆ ಈ ಮಾತಿನ ನಿರ್ಣಯವು ಆಗಿಹೋಗುವದು. ಛಂದಶ್ಶಾಸ್ತ್ರ ನಿಯಮಿತವಾದ ಪ್ರಾಸವಷ್ಟೇ ಯಾಕೆ? ಅನೇಕತರದ ಪ್ರಾಸಗಳ ಪರ್ವತವನ್ನೇ ಲಕ್ಷ್ಮೀಶನು ರಚಿಸಿದ್ದಾನೆ. ಇಂಥ ಅತ್ಯುಜ್ವಲವಾದ ಕಾವ್ಯಗಳನ್ನು ರಚಿಸುವಾಗ, ಮೊದಲಿನ ವಿದ್ವಾಂಸರ ಮನಸ್ಸಿನಲ್ಲಿ, ಪ್ರಾಸವನ್ನು ಜಿಟ್ಟುಜಿಡಬೇಕೆಂಬ ಕಲ್ಪನೆಯು ಸಹ ಬರಲಿಲ್ಲ. ಆದರೆ ಈಗಿನ ಕೇವಲ, ಜನರ ಜ್ಞಾನವು ಅಗಾಧವು ಕಾಗೆ ಗುಬ್ಬಿಗಳ ಕಥೆಗಳನ್ನು ಕವಿತಾರೂಪವಾಗಿ ರಚಿಸುವಾಗ ಅವರಿಗೆ ಪ್ರಾಸವು ಜಿಕ್ಕಟ್ಟಾಗುವದಂತೆ ಆದುದರಿಂದ ಇನ್ನುಮುಂದೆ ಛಂದಶ್ಶಾಸ್ತ್ರವನ್ನು ತಿದಿ, ಅದರೊಳಗಿಂದ ಪ್ರಾಸವನ್ನು ತೆಗೆದು ಹಾಕುವರಂತೆ. ಲಕ್ಷ್ಮೀಶನಂಥ ಮಹಾಕವಿಗಳು ತಮ್ಮ ಗ್ರಂಥಗಳನ್ನು ರಚಿಸುವಾಗ, ಮುಂದೆ ಪ್ರಾಸವು ನಾಯುವದೆಂದು ತಿಳಿದಿದ್ದರೆ, "ಪ್ರಾಸದ ಸಮಾಧಿ" ಎಂಬ ನುತ್ತೊಂದು ಸಂಧಿಯನ್ನು ತಮ್ಮ ಕಾವ್ಯಕ್ಕೆ ಜೋಡಿಸುತ್ತಿದ್ದರು.

ಶಾಸ್ತ್ರಸಮ್ಮತವಾದ, ಲಕ್ಷಣಗಳಿಂದ ಯುಕ್ತವಾದ ಕವಿತೆಗಳನ್ನು ರಚಿಸುವ ಯೋಗ್ಯತೆ ಇದ್ದರೆ ಕವಿತೆಗಳನ್ನು ರಚಿಸಬೇಕು. ತಮ್ಮಲ್ಲಿ ಅಷ್ಟು ಭಾಷಾಜ್ಞಾನವೂ ಶಬ್ದಸಂಗ್ರಹವೂ ಇಲ್ಲದಿದ್ದರೆ, ಅದರ ಹವ್ಯಾಸಕ್ಕೆ ಯಾಕೆ ಹೋಗಬೇಕು? ಶಾಸ್ತ್ರವಿರುದ್ಧವಾದ ಕಾಗೆ ಗುಬ್ಬಿಗಳ ಕವಿತೆಗಳ ಅವಶ್ಯಕತೆಯು ಕನ್ನಡ ಭಾಷೆಗೆ ಇರುವದಿಲ್ಲ. ಇಂಥ ಕವಿತೆಗಳನ್ನು ಸ್ವೀಕರಿಸುವಷ್ಟು ನಿಕೃಷ್ಟಸ್ಥಿತಿಯು ಕನ್ನಡ ಭಾಷೆಗೆ ಇನ್ನೂ ಪ್ರಾಪ್ತವಾಗಿಲ್ಲ. ಯಾವತ್ತು ಛಂದೋ ನಿಯಮಗಳಿಗೆ ಅನುಸರಿಸಿ, ಲಕ್ಷಣಯುಕ್ತವಾದ ಕವಿತೆಗಳನ್ನು ಬರೆಯುವಂಥವರು, ಕನ್ನಡದಲ್ಲಿ ಇನ್ನೂ ಇರುವರು. ಅವರೆಲ್ಲರೂ ಇಲ್ಲಿಯಂತಾದ ಮೇಲೆ, ಈ ಸುಧಾರಣೆಗಳನ್ನು ಸುಧಾರಕರು ಬೇಕಾದಷ್ಟು ಮಾಡಿಕೊಳ್ಳಲಿ.

ಕವಿತೆಗಳನ್ನು ರಚಿಸಿ ವಿದ್ವಾಂಸರಾಗಬೇಕೆನ್ನುವವರು ಮೊದಲು ಛಂದಶಾಸ್ತ್ರವನ್ನೂ ಹಳೆಗನ್ನಡ ಹೊಸಗನ್ನಡ ವ್ಯಾಕರವನ್ನೂ ಭಾಷಾಲಕ್ಷಣವನ್ನೂ ಅರಿತುಕೊಂಡು ಶಬ್ದಸಂಗ್ರಹವನ್ನು ಮಾಡಿಕೊಳ್ಳಬೇಕು. ಆನಂತರ ಅವರಿಗೆ ಪ್ರಾಸದ ತ್ರಾಸವು ಅನಿಸುವದಿಲ್ಲ. ಯಾವ ಸಾಧನವೂ ಇಲ್ಲದೆ ಒಮ್ಮಿಂದೊಮ್ಮೆ ರಚಿಸಹೋದರೆ, ಪ್ರಾಸಕೊಲ್ಲುವ ಸುಧಾರಣಗಳನ್ನು ಮಾಡಬೇಕೆಂದು ಮನಸ್ಸಿನಲ್ಲಿ ಹುಟ್ಟುತ್ತದೆ.

ಮೊದಲಿನವರು ಪ್ರಾಸವಿಲ್ಲದ ಕವಿತೆಗಳನ್ನು ರಚಿಸಬಾರದೆಂದು ಯಾಕೆ ವಿಧಿಸಿದರು? ಶಬ್ದಸಂಗ್ರಹವೂ ಭಾಷಾಜ್ಞಾನವೂ ಇಲ್ಲದ ಸಾಮಾನ್ಯ ಜನರು ಕಾವ್ಯಗಳನ್ನು ಬರೆಯಲಿಕ್ಕೆ ಅಯೋಗ್ಯರೆಂದು ಅವರು ತಿಳಿಯುತ್ತಿದ್ದರು. ಭಾಷಾಪಾರಂಗತರೇ ಕಾವ್ಯಗಳನ್ನೂ, ಕವಿತ್ವಗಳನ್ನೂ, ರಚಿಸಲಿಕ್ಕೆ ಯೋಗ್ಯರೆಂತಲೂ, ಸಾಮಾನ್ಯರಿಂದ, ಭಾಷೆಯ ಉನ್ನತಿಯಾಗಲಾರದೆಂತಲೂ ಅವರ ಮತವಿತ್ತು. ಈ ಮತವು ತಪ್ಪೆಂದು ಯಾರು ಅನ್ನುವರು? ಕಾವ್ಯಗಳನ್ನೂ ವ್ಯಾಕರಣವನ್ನೂ ಛಂದಸ್ಸನ್ನೂ ಭಾಷಾಲಕ್ಷಣಗಳನ್ನೂ ಬರೆದಿದ್ದ ಪೂರ್ವಜರು ಸಾಮಾನ್ಯ ವಿದ್ವಾಂಸರಿದ್ದಿದ್ದಿಲ್ಲ. ಅಂಥವರೇ ಕನ್ನಡಭಾಷೆಗೆ ಆಧಾರಸಂಭರಾಗಿರುವರು. ಮುಂದಾದರೂ ಅಂಥವರಿಂದೇ ಕನ್ನಡದ ಉನ್ನತಿಯಾಗಬಹುದು. ಪ್ರಾಸವಿಲ್ಲದ ಹಕ್ಕಿಪಕ್ಷಿಗಳ ಕಥೆಯು ಕವಿತೆಗಳಿಂದ ಭಾಷೆಯು ಉನ್ನತಿಯಾಗವದೆಂದು ತಿಳಿಯುವದು ಮೂರ್ಖತನವು.

ಕೇವಲ ಕವಿತಾಸ್ಫೂರ್ತಿಯನ್ನೊಂದನ್ನೇ ವಿಚಾರಮಾಡಿ ಛಂದೋ ನಿಯಮಗಳನ್ನು ಜರೆಯ ಬಿಡುವದಾದರೆ ಪೂರ್ವಜರ ಭಾಷಾಲಕ್ಷಣ ಗ್ರಂಥಗಳಾದರೂ ಯಾತಕ್ಕೆ ಇರಬೇಕು?

ಇಂಥ ಸುಧಾರಕರಿಗೆ ಇನ್ನೊಂದು ಬಿನ್ನಹವುಂಟು; ಅದೇನಂದರೆ:— " ಪ್ರಾಸವಿಲ್ಲದ ಕವಿತೆಗಳನ್ನು ಬರೆಯುವ ಮೊದಲು ಛಂದಶ್ಶಾಸ್ತ್ರವನ್ನೂ, ಪೂರ್ವದ ಸಮಗ್ರ ಕಾವ್ಯಗ್ರಂಥಗಳನ್ನೂ ಒಂದು ಕಡೆಯಲ್ಲಿರಿಸಿ, ಅದರ ಮೇಲೆ ಒಂದು ಭವ್ಯವಾದ ಸಮಾಧಿಯನ್ನು ಕಟ್ಟಿಸಿ, ಆ ಸಮಾಧಿಯ ಮೇಲೆ ತಮ್ಮ ಲೋಕೋತ್ತರವಾದ ಬಿರುದಾವಳಿಯನ್ನು ಹಾಕಬೇಕು. ಅಂದರೆ ನಮ್ಮ ಮುಂದಿನ ಪೀಳಿಗೆಯವರು ಆ ಸ್ಮಾರಕವನ್ನು ನೋಡಿ ಸುಧಾರಕರ ಪಾಂಡಿತ್ಯವನ್ನು ಹೊಗಳುವರು. ಇದಲ್ಲದೆ, ಇಂಥ ಸುಧಾರಕರ ಕೀರ್ತಿಯಾದರೂ, ಚಿರಕಾಲ ಉಳಿಯುವದು."

ಈ ತರದ ಕವಿತ್ವಗಳಿಂದ, ಸಣ್ಣ ಸಣ್ಣ ವಿದ್ಯಾರ್ಥಿಗಳ ಹಾಗೂ, ಅನೇಕ ಜನರ ಮನಸ್ಸಿನಲ್ಲಿ ಅನ್ಯಥಾ ಜ್ಞಾನವಾಗುವದರಿಂದಲೂ ಹಾಗೂ ಛಂದಸ್ಸಿನ ನಿಯಮಗಳ ಬಗೆ ತಿರಸ್ಕಾರ ಬುದ್ಧಿಯು ಉತ್ಪನ್ನವಾಗುವದರಿಂದಲೂ, ಪ್ರತಿಯೊಬ್ಬ ಕನ್ನಡ ವಿದ್ಯಾಭಿಮಾನಿಗಳು ಈ ಕಡೆಗೆ ಚಿತ್ತಕೊಡಬೇಕು.

ತಮ್ಮ ವಿಧೇಯ

ಸಿಂಹ ಭೋಂಡೋ ಮುಳಬಾಗಲ ವಿಜಾಪುರ.

ಪ್ರೋ. ಮಾಣಿಕರಾವ (ಜುಮ್ಮಾದಾದಾ ವ್ಯಾಯಾಮ ಶಾಳಾ, ಬಡೋವೆ) ಇವರ ವ್ಯಾಯಾಮದ ಸಾಮಾನ್ಯ ನಿಯಮಗಳು.

(ಜುಲೈತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು).

(ಲೇಖಕ:— ವಿ. ಎಸ್. ಕಟ್ಟಿ ಅಸಿ. ಮಾಸ್ತರ, ಬೊಮ್ಮನಹಳ್ಳಿ)

ದಂತ (ಹಲ್ಲು).

ಗಟ್ಟಿಯಾದ ಹಲ್ಲುಗಳಿಲ್ಲದ ಎಷ್ಟೋ ಜನರು, ಅಮರಣ ಪರ್ಯಂತರ ದುಃಖವನ್ನು ಅನುಭೋಗಿಸುತ್ತಿರುತ್ತಾರೆ. ಮನುಷ್ಯನ ಆರೋಗ್ಯವನ್ನು ಕಾಯ್ದುಕೊಳ್ಳುವದಕ್ಕೆ ಹಲ್ಲುಗಳು ಮುಖ್ಯ ಸಾಧನಗಳಾಗಿರುತ್ತವೆ. ಹಲ್ಲುಗಳಿದಲೇ ಅರ್ಧ-ಪಚನಕ್ರಿಯೆಯು ನಡೆಯುತ್ತಿರುತ್ತದೆ. ಹಲ್ಲುಗಳನ್ನು ಗಟ್ಟಿಯಾಗಿಯೂ, ಸ್ವಚ್ಛವಾಗಿಯೂ ಇಡುವದಕ್ಕಾಗಿ, ಇತ್ತಿತ್ತಲಾಗಿ ಅನೇಕತರದ ದಂತಮಂಜನಗಳು ಜಾಹೀರಾತುಗಳಲ್ಲಿ ತುಂಬಿ ಬರಹತ್ತಿರುತ್ತವೆ. ಇವುಗಳಲ್ಲಿ ಉತ್ತಮ ಗುಣವುಳ್ಳವುಗಳಾವವೆಂಬದನ್ನು ತಿಳಿದುಕೊಳ್ಳುವದಕ್ಕಾಗಿ ನಮ್ಮಲ್ಲಿ ಶುಲಭಸಾಧನಗಳಿಲ್ಲ. ಈ ಕಾರಣದ ಮೂಲಕ ನಾವು ಮೋಸಹೊಂದಿ, ಬಹುತರ ನಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಇಷ್ಟೆಲ್ಲ ಗೊಂದಲವೇತಕ್ಕೆ? ಶುಲಭವೂ ಸುಖದಾ

ಯುಕ್ತವೂ ಆದ ಬದಾಮಿಯ ಮಂಜನವನ್ನು ಮಾಡಿಕೊಳ್ಳುವದು ಸರ್ವರಿಗೂ ಸಾಧ್ಯವು. ಬದಾಮಿಯ ಸಿಪ್ಪೆಗಳನ್ನು ಸುಟ್ಟು ಪುಡಿಮಾಡಿ, ವಸ್ತ್ರದಲ್ಲಿ ಸೋಸಿ ಇಟ್ಟುಕೊಂಡು, ಆ ಮಂಜನದಿಂದ ಪ್ರತಿನಿತ್ಯ ಹಲ್ಲುಗಳನ್ನು ತಿಕ್ಕಿಕೊಳ್ಳಬೇಕು. ಇದರಿಂದ ಹಲ್ಲುಗಳು ಸ್ವಚ್ಛವಾಗಿ ಶುಭ್ರಕಾಣುವವಲ್ಲದೆ, ಗಟ್ಟಿಯಾಗಿ ಆರೋಗ್ಯದಾಯಕಗಳಾಗುವವು. ಈಗೀಗ ಹಲ್ಲು ತಿಕ್ಕಿಕೊಳ್ಳುವದಕ್ಕಾಗಿ, ಬ್ರೆಶ್‌ಗಳ ಉಪಯೋಗವನ್ನು ಬಹಳ ಮಾಡಿಕೊಳ್ಳಹತ್ತಿರುತ್ತಾರೆ. ಅದನೆ ಕಡಿಮೆ ತರದ ಬ್ರೆಶ್‌ಗಳ ಉಪಯೋಗ ಮಾಡಿಕೊಳ್ಳದೆ, ಉತ್ತಮತರದ ಬ್ರೆಶ್‌ಗಳ ಉಪಯೋಗವನ್ನೇ ಮಾಡಿಕೊಳ್ಳತಕ್ಕದ್ದು. ಬ್ರೆಶ್‌ಗಳನ್ನು ತಕ್ಕೊಂಡು ಒಬ್ಬ ದಂತವೈದ್ಯನ ಕಡೆಯಿಂದ ಪರೀಕ್ಷಿಸಿ, ಉತ್ತಮವಾದ ಬ್ರೆಶ್‌ಗಳೆಂದು ಅಭಿಪ್ರಾಯಪಟ್ಟ ಬ್ರೆಶ್‌ಗಳನ್ನೇ ಉಪಯೋಗಿಸಬೇಕು ಹಲ್ಲುಗಳನ್ನು ಬ್ರೆಶ್‌ಗಳಿಂದ ತಿಕ್ಕಿಕೊಳ್ಳುವದಕ್ಕಿಂತಲೂ ಜಾಲಿ, ಮರಬೆಂಡಲ, ಆಲ ಅಥವಾ ನೆಲ್ಲಿಯಗಿಡದ ಟೊಂಗೆಗಳನ್ನು ಮುರಿದುಕೊಂಡು, ಅವನ್ನು ಬ್ರೆಶ್‌ದಂತೆ ಮಾಡಿ ಹಲ್ಲು ತಿಕ್ಕಿಕೊಳ್ಳುವದು ಬಹು ಹಿತಕರವಾದದ್ದು. आम्रप्लक्षवटित्वानि अपामार्गं शिरीषयोः ॥ कारयेत् प्रातरुत्थाय दन्तधावनम् ॥ १ ॥ ಈ ಗಿಡದ ಕಡ್ಡಿಗಳಿಂದ ಹಲ್ಲುಸುಲಿದುಕೊಂಡ ಮೇಲೆ ದಂತ ಮಂಜನ ತೆಗೆದುಕೊಂಡು, ಸ್ವಚ್ಛವಾಗಿ ಹಲ್ಲು ತಿಕ್ಕಿಕೊಳ್ಳತಕ್ಕದ್ದು. ಹಲ್ಲು ತಿಕ್ಕುವದಾದ ಬಳಿಕ ಆ ಹಲ್ಲುಕಡ್ಡಿಯನ್ನು ಮಧ್ಯದಲ್ಲಿ ಸೀಳಿ, ನಾಲಿಗೆಯನ್ನು ತಿಕ್ಕಿಕೊಳ್ಳುವದಕ್ಕೆ ಉಪಯೋಗಿಸಿಕೊಳ್ಳಬಹುದು. ಕಿರುನಾಲಿಗೆಯ ವರೆಗೆ ಚನ್ನಾಗಿ ಸ್ವಚ್ಛವಾಗಿ ತಿಕ್ಕಿಕೊಳ್ಳತಕ್ಕದ್ದು. (ನಾಲಿಗೆಯನ್ನು ಹೊರಗೆ ಚಾಚಿ ಕಡ್ಡಿಯ ಎರಡು ತುದಿಗಳನ್ನು ಕೈಯಿಂದ ಹಿಡಿದು ಕೊಂಡುಹೊಲಸನ್ನೆಲ್ಲ ಗೀರಿ ತೆಗೆದುಕೊಳ್ಳಬೇಕು.) ನಾಲಿಗೆಯನ್ನು ಸ್ವಚ್ಛವಾಗಿ ತಿಕ್ಕಿಕೊಳ್ಳದಿದ್ದರೆ, ಮುಖದಿಂದ ದುರ್ಗಂಧವು ಹೊರಬೀಳಹತ್ತುತ್ತದೆ. ಬಾಯಿಯನ್ನೆಲ್ಲ ತೊಳೆದುಕೊಳ್ಳುವದಾದಮೇಲೆ, ಸ್ವಚ್ಛವಾದ ವಸ್ತ್ರದಿಂದ ಹಲ್ಲುಗಳನ್ನು ಚನ್ನಾಗಿ ಒರೆಸಿಕೊಳ್ಳತಕ್ಕದ್ದು. ಮುಂಜಾನೆ ಎದ್ದ ಕೂಡಲೆಯೂ, ರಾತ್ರಿಮಲಗುವಾಗಲೂ, ಹಲ್ಲುಗಳನ್ನು ತಿಕ್ಕಿಕೊಳ್ಳುವದು ಬಹು ಉತ್ತಮವು. ರಾತ್ರಿ ಮಲಗುವ ಕಾಲಕ್ಕೆ ನೀರು ಕುಡಿಯುವಾಗ, ಒಂದು ಒಣ ಬೊಬ್ಬರಿಯ ಚೂರನ್ನು ತಿನ್ನಬೇಕು. ಅದರ ಚರಟದಿಂದ ಹಲ್ಲನ್ನು ತಿಕ್ಕಿಕೊಳ್ಳಬೇಕು. ಹಲ್ಲು ಗಟ್ಟಿಯಾಗಿ ಇಡುವದಕ್ಕಾಗಿ ಈ ಪ್ರಯೋಗವು ಬಹಳೇ ಶ್ರೇಷ್ಠವಾದದ್ದು.

ಬ್ರೆಶ್ ಅಥವಾ ಗಿಡದ ಕಡ್ಡಿಗಳು ಸಿಗದ ಪಕ್ಷದಲ್ಲಿ ಬೆರಳಿನಿಂದ ಹಲ್ಲು ತಿಕ್ಕುವದಾದರೆ, ಅಷ್ಟಾವಾಗಿ ತಿಕ್ಕಕೂಡದು. ಹೆಬ್ಬೆರಳಿಂದ ಗೋಲಾಕಾರವಾಗಿ ತಿಕ್ಕಿ

ಳ್ಳುವದು ವಿಹಿತವಾದದ್ದು. ಅಂತರ್ಬಾಹ್ಯ ಒಸಡೆಗಳನ್ನು ಸಹ, ಮಂಜನದಿಂದ
ಕ್ಕಿಕೊಳ್ಳಬೇಕು.

ಬದಾಮಿಯು ಮಂಜನದ ಸಂಬಂಧವಾಗಿ ಮೇಲೆ ಹೇಳಿಯೇ ಇದೆ. ಅನ್ಯತರದ
ಂಜನವೊಂದು ಹಲ್ಲುಗಳನ್ನು ಸದೃಢವಾಗಿ ಇಡುವದಕ್ಕೆ ಬಹಳೇ ಉಪಯೋಗಬೀಳು
ದೆ. ಇದರಿಂದ ಹಲ್ಲುಗಳಲ್ಲಿ ಹೊರಡುವ ರಕ್ತ, ಹಲ್ಲುಗಳ ಸಡಿಲುತನ, ಹಲ್ಲುನೋವು,
ಲ್ಲುಗುರುವು ಮುಂತಾದ ವಿಕಾರಗಳು ಕೂಡಲೇ ಇಲ್ಲದಾಗುವವು. ಆ ಮಂಜನ
ಮಾಡಿಸುವ ಕೃತಿಯು ಹ್ಯಾಗೆಂದರೆ— ಖಡು ೨೦ ತೊಲೆ, ಪಟಿಕ ೧ ತೊಲೆ, ಬಿಳೀ
ಜು ೧ ತೊಲೆ, ಕೇರು ೨ ತೊಲೆ, ಮಾಯುಫಳ ೧ ತೊಲೆ, ಕಪ್ಪರ ೧ ತೊಲೆ, ಯಾ
ಕ್ಕೆ ೧ ತೊಲೆ ಈ ಎಲ್ಲ ಪದಾರ್ಥಗಳನ್ನು ಸಣ್ಣಾಗಿ ಕುಟ್ಟಿ, ವಸ್ತ್ರದಲ್ಲಿ ಸೋಸಿ
ಕ್ಕೊಂಡು, ಆ ಪುಡಿಯನ್ನು ಉಪಯೋಗಮಾಡಿಕೊಳ್ಳತಕ್ಕದ್ದು.

ಅತಿಶಯ ಕೋಪಾವಿಷ್ಟರಾಗುವದರಿಂದಲೂ, ಅತ್ಯಂತ ವಾಚನದಿಂದಲೂ,
ಲಗುವಾಗ ತಲೆಯನ್ನು ಸಮತೋಲವಾಗಿ ಇಟ್ಟುಕೊಳ್ಳದೆ ಹಾಗೆಯೇ ಮಲಗುವದ
ದಲೂ, ತಲೆ ಕೆಳಗೆ ತಲೆಗಿಂಬು ಇಟ್ಟುಕೊಳ್ಳದೆ ಮಲಗುವದರಿಂದಲೂ, ತಲೆಯಲ್ಲಿ
ಕ್ತಸಂಚಯವು ವಿಶೇಷವಾಗಿ, ಅದರ ಯೋಗದಿಂದ ಹಲ್ಲುಶೂಲೆ, ದವಡಿಬಾವು, ಹಲ್ಲು
ರುವು, ಅತಿದಲೆಶೂಲೆ ಮುಂತಾದ ವಿಕಾರಗಳು ಉತ್ಪನ್ನವಾಗುವವು. ಹಲ್ಲುಗಳೆಲ್ಲ
ನ್ದಬಳಿಕ, ಈ ಯೋಗದಿಂದ ಎಷ್ಟೋ ಜನರು ಅಂಧರಾಗಿರುವ ಉದಾಹರಣೆಗಳ
ನೇಕವಾಗಿರುವವು.

ಎಷ್ಟೋ ವೇಳೆ ಹಲ್ಲುಗಳ ಮಧ್ಯದಲ್ಲಿ ಸಿಕ್ಕ ಅನ್ನವು ಹೊರಗೆ ಹೋಗದೆ, ಅಲ್ಲಿ
ೀ ಉಳಿದು, ಬಹಳ ದುಃಖಕೊಡುವದು. ಇಂಥ ಪ್ರಸಂಗದಲ್ಲಿ ೫ ಶೇರು ನೀರು
ಕ್ಕೊಂಡು, ಅದರಲ್ಲಿ ಜಾಲಿಯತೊಗಟೆ ಹಾಗು ಸ್ವಲ್ಪ ಪಟಕಹಾಕಿ ನೀರು 'ಸಳಮಳ'
ನ್ನುವಂತೆ ಕಾಸಿ, ತನಗೆ ಸಹನವಾಗುವಷ್ಟು ಬಿಸಿಯಾಗಿರುವಾಗ, ಆ ನೀರನ್ನು ಬಾಯಿ
ಲ್ಲಿ ಹಾಕಿಕೊಂಡು "ಖುಳು ಖುಳು" ಮಾಡಿ ಮುಕ್ಕಳಿಸಿ ಉಗಳಬೇಕು. (ಬಾಯಿ
ಲ್ಲಿ ಹಾಕಿಕೊಂಡು ನೀರನ್ನು ಗೋಲಾಕಾರವಾಗಿ ತಿರುವಿ ಉಗುಳಬೇಕು) ಅಂದರೆ
ುಗಳಲ್ಲಿ ಸಿಕ್ಕಂಥ ಅನ್ನವು ಹೊರಟು ಹೋಗಿ, ಎಷ್ಟೋ ಸಮಾಧಾನವಾಗುವದು.
ಥ ನೀರನ್ನು ದಿನಕ್ಕೆ ೩-೪ ಸಾರೆ (ಅನ್ನ ಸಿಕ್ಕಾಗಮಾತ್ರ) ಮುಕ್ಕಳಿಸುತ್ತಿರಬೇಕು.

ಎನಾದರೂ ತಿನ್ನುವ ಕಾಲಕ್ಕೆ, ಹಲ್ಲುಗಳಲ್ಲಿ ಸಿಕ್ಕಂಥ ಪದಾರ್ಥಗಳನ್ನು ಟೂಥಪಿ
ದಾಗಲಿ, ಸೂಜಿಯಿಂದಾಗಲಿ ಚುಚ್ಚಿ ಎಂದೂ ತೆಗೆದುಕೊಳ್ಳಬಾರದು. ಸೂಜಿ

ಟಾಚಣಿಗಳ ತುದಿಗಳಿಗೆ ಒಂದು ಪ್ರಕಾರದ ವಿಷಾರ ದ್ರವ್ಯದ ನೀರು ಕುಡಿಸಿರುತ್ತಾ ಅದರ ಪರಿಣಾಮವು ಹಲ್ಲುಗಳ ಮೇಲೆ ತೀವ್ರವೇ ಆಗಿ, ಹಲ್ಲು ಕೆಡುವ ಸಂಭವ ವಿಶೇಷವಾಗಿರುವದು. ಕಡ್ಡಿಗಳಿಂದಾದರೂ ಹೊಲಸು ತೆಗೆದುಕೊಳ್ಳುವದು ಅವಾಯ ವವು.

ಕೈಕಾಲು, ಕೈಕಾಲು ಸದೃಢವಾಗಿ ಇಡುವದಕ್ಕಾಗಿ ನಾವು, ಬೈಠಕ, ನಮಸ್ಕಾರ ಮುಂತಾ ವ್ಯಾಯಾಮವನ್ನು ನಿಯಮಿತತನದಿಂದ ನಿತ್ಯವಾಗಿ ಮಾಡಬೇಕು. ನಾವು ಹಾ ಲೋಡು (ತೂಕ) ಗಳನ್ನು ತಿರುವುವದರಿಂದ ಕೈಗಳಿಗೆ ವ್ಯಾಯ ಮ ಸಿಕ್ಕು, ಅವು ಚಕಚಕಿತವಾಗುವವು. ನ್ನಾಯುಗಳ ನಾ ರ್ಥ್ಯವು ಹೆಚ್ಚಿ, ಆ ಸೊಕ್ಕಿದ ಬಾಹುಗಳ ಸುಂದರತ್ವ [ಶೋಭೆ] ವು ದರ್ಶನೀಯವಾ ವದು. ನಾವು ಕೈಯಲ್ಲಿ ಹಿಡಿದು ತಿರುಗಿಸುವ ಲೋಡುಗಳು, ಅದಷ್ಟು ಹಗುರಾಗಿ ಕ್ಕದ್ದು. ಭಾರವಾದ ಲೋಡುಗಳಿಂದ ಹೆಗಲಸುದುಗಳು ಸ್ವಲ್ಪ ದಿವಸಗಳಲ್ಲಿಯೇ ಕು ಬಿದ್ದಂತಾಗುವವು. ಭಾರವಾದ ಲೋಡುಗಳನ್ನು ತಿರುವುವದರಿಂದ, ಸಾಮರ್ಥ್ಯವು ಹೆಚ ಗಿ ಬಂದು, ಸೊಕ್ಕಿದ ಬಾಹುಗಳಾಗುವವೆಂಬ ಕಲ್ಪನೆಯು ವ್ಯರ್ಥವಾದದ್ದು. ಹಾ ಭ್ರಾಂತಿಮೂಲಕವಾದದ್ದು. ಈ ಕಲ್ಪನೆಯಲ್ಲೇನೂ ಅರ್ಥವಿಲ್ಲ. ಈ ವ್ಯಾಯಾಮ ನ್ನು ಸಾವಕಾಶ ರೀತಿಯಿಂದ ಪೂರ್ಣಶ್ವಸನ ತೆಗೆದುಕೊಳ್ಳುತ್ತ ಮಾಡಬೇಕು. ಅಂಗೈ ಲ್ಲಿಯೂ; ಬೆರಳುಗಳಲ್ಲಿಯೂ ಚನ್ನಾಗಿ ಶಕ್ತಿಬರಬೇಕಾದರೆ, ಮೇಣದ ಅಥವಾ ಎರಿಯ ಮಣ್ಣಿನ ಪ್ರಯೋಗವನ್ನು ಉಪಯೋಗದಲ್ಲಿ ತಂದುಕೊಳ್ಳಬಹುದು. ಮೇಣದ ಅಥವ ಎರಿಯಮಣ್ಣಿನ ಒಂದು ಗುಂಡನ್ನು ಮಾಡಿ, ಅದನ್ನು ಕೈಯಲ್ಲಿ ಇಟ್ಟುಕೊಂಡು, ಅದನ ಅಂಗೈಯಿಂದಲೂ, ಬೆರಳುಗಳಿಂದರೂ ಹಿಚಕುತ್ತಿರಬೇಕು. ಈ ಪ್ರಯೋಗವನ್ನು ನಿಯ ಮಿತತನದಿಂದ ಮಾಡಹತ್ತಲು, ಕೆಲವು ದಿವಸಗಳಲ್ಲಿಯೇ ರೂಪಾಯಿಯ ಮೇಲೆ ಹತ್ತಿರ ಒತ್ತಿ ಅದರ ಮೇಲಿನ ಅಕ್ಷರಗಳನ್ನು ಇಲ್ಲದಂತೆ ಮಾಡಬಹುದು. ಈ ಪ್ರಯೋಗದಿಂ ಬೆರಳುಗಳಲ್ಲಿ ಈ ತರದ ಶಕ್ತಿಯುತ್ಪನ್ನವಾಗುವದು. (ಅನುಭವದಿಂದ ಕಂಡು ಹಿಡಿ ಸಂಗತಿಯಿದು) ಇನ್ನು ಅಂಗೈಶಕ್ತಿಯನ್ನು ಗಣಿಸಿರಿ.

ಕುಸ್ತಿ ಆಡುವವರಿಗೆ ಇದರಿಂದ ಬಹಳೇ ಉಪಯೋಗವಾಗುವದು. ಚಳಿಗಾ ದಿವಸದಲ್ಲಿ ಎಷ್ಟೋ ಜನರ ಕೈಕಾಲು ಒಡೆ (ಬಿರಿ)ಯುತ್ತವೆ. ಒಮ್ಮೊಮ್ಮೆ ದೊಡ್ಡ ದೊ ಡ್ಡ ಬಿರುಕುಗಳಾಗಿ, ಅದರೊಳಗಿಂದ ರಕ್ತವು ಹೊರಬೀಳಹತ್ತುತ್ತದೆ. ಹೀಗಾಗಿದ್ದ ಮಲಗುವಾಗ ಆ ಭಾಗಗಳನ್ನೆಲ್ಲ ಬಿಸಿನೀರಿನಿಂದ ತೊಳೆದು, ಅಮಸೋಲದ ಎಣ್ಣೆಯನು

ಹಚ್ಚಿ ತಿಕ್ಕಬೇಕು. ಅಥವಾ ಔಡಲಎಣ್ಣೆಯಲ್ಲಿ 'ಕರ್ಪೂರಾದ್ಯ' ಔಷಧ ಕೂಡಿಸಿ, ಅದನ್ನು ಬಿರುಕುಗಳಲ್ಲಿ ಹಚ್ಚಿಕೊಳ್ಳಬೇಕು. ಬಿಸಿನೀರಿನಿಂದ ಕೈಕಾಲು ತೊಳೆದುಕೊಂಡ ಕೂಡಲೇ, ಚನ್ನಾಗಿ ತಿಕ್ಕಿ ಬರೆಯಿಸಿಕೊಳ್ಳಬೇಕು. ಅಂದರೆ ಚಳಿಯಲ್ಲಿ ತಿರುಗಾಡಿದರೂ ಕೈಕಾಲು ಬಹಳ ಒಡೆಯಲಿಕ್ಕಿಲ್ಲ. ಸದಾ (ಹನ್ನೆರಡು ತಿಂಗಳು) ಯಾರ ಮನೆಯಲ್ಲಿ ನೀವು ವಾಸಮಾಡಿಕೊಂಡಿರುವದೊ, ಆವರು ಬಿಸಿನೀರಿನ ಉಪಯೋಗವನ್ನೇ ಹೆಚ್ಚಾಗಿ ಮಾಡಿಕೊಳ್ಳತಕ್ಕದ್ದು. ಕೈಕಾಲುಗಳನ್ನು ಬಿಸಿನೀರಿನಿಂದಲೇ ತೊಳೆದುಕೊಳ್ಳಬೇಕು. ರಾತ್ರಿ ಮಲಗುವಾಗ ಕಾಲುಚೀಲಗಳನ್ನು ಹಾಕಿಕೊಂಡು ಮಲಗುವದು ವಿಹಿತವು; ಅಂದರೆ ತೇವಿನ ಬಾಧೆಯು ವಿಶೇಷವಾಗಲಿಕ್ಕಿಲ್ಲ.

ಎದೆ, ಪಕ್ಕೆಲವು, ಹೆಗಲು ಮತ್ತು ಟೊಂಕ ಇವುಗಳಿಗೆ ನಾಮು ನಮಸ್ಕಾರಗಳಿಂದ ಉತ್ತಮವಾದ ವ್ಯಾಯಾಮವು ಸಿಗುತ್ತದೆ. ಎದೆಯನ್ನಷ್ಟೇ ಬಿಳಿಯಿಸುವ ಸಲುವಾಗಿ ಪ್ರತ್ಯೇಕವಾದ ವ್ಯಾಯಾಮವೆಂದರೆ-ಮೂಲೆಗೆ ಕೂಡಿರುವ ಎರಡೂ ಗೊಡೆಗಳಮೇಲೆ ಎರಡು ಕೈಗಳನ್ನಿಟ್ಟು, ಎದೆಯನ್ನು ಒಮ್ಮೆ ಮುಂದೆ ಒಯ್ಯುತ್ತಲೂ ಒಮ್ಮೆ ಹಿಂದೆ ತರುತ್ತಲೂ ಇರಬೇಕು (ಶಿಕ್ಷಕರಿಂದ ತಿಳಿಸಿ ಕೊಳ್ಳಬಹುದು) "ಖಂಬಲಿಯ" ವ್ಯಾಯಾಮ, ಇದು ಮೂರನೇ ಪ್ರಕಾರದ ವ್ಯಾಯಾಮವು.ಇದರಿಂದ ಯಾವತ್ತು ಅವಯವಗಳಿಗೆ ಸರಿಯಾದ ವ್ಯಾಯಾಮವು ದೊರೆಯುವದು ಅದರಲ್ಲಿಯೂ ವಿಶೇಷವಾಗಿ ಉದರಕ್ಕೆ ಹೆಚ್ಚು ಶ್ರಮವು ಬೀಳುವದು. ಇದರಿಂದ ಸ್ಥೂಲ- ದೀರ್ಘೋದರಗಳು ಕೃಶಗೊಂಡು, ಮನುಷ್ಯನ ಅವಯವಗಳಿಗೆ ಸರಿಯಾದ ಸ್ಥಿತಿಯಲ್ಲಿ ಬಂದು ನಿಲುಕುವವು. ಏಳು ಏಳು ಫೂಟು ಉದ್ದವಾವ ಹಾಗು ಕೈಯಲ್ಲಿ ಹಿಡಿಯಲು ಹಾಳತವಾದವೆರಡು ಕೊಬಗಳನ್ನು ತೆಗೆದುಕೊಂಡು, ಭೂಮಿಗೆ ಲಘಕೋನ ಮಾಡಿ (ಯಾತಿಯಾಗಿ) ಮೂರು ಫೂಟು ನೆಲದಲ್ಲಿ ಹುಗಿಯಬೇಕು. ನೆಲದಲ್ಲಿ ಹುಗಿಯಬೇಕು. ಮೇಲುದ ೪ ಫೂಟು ಭಾಗಕ್ಕೆ ಉಸುಕಿನ ಕಾಗದದಿಂದ ತಿಕ್ಕಿ ನುಣುಪು ಮಾಡತಕ್ಕದ್ದು. ಕೊಬಗಳ ತಲೆಯಭಾಗವು, ಅಂದರೆ ಕೈಹಿಡಿಯತಕ್ಕ ಭಾಗವು ಅದಷ್ಟು ನುಣುಪಾಗಿಯೂ, ದುಂಡಗಾಗಿಯೂ ಇರಲಿಕ್ಕೆಬೇಕು. ಎರಡೂ ಕೊಂಬಗಳ ತುದಿಗಳ ಮೇಲೆ ಎರಡು ಕೈಗಳನ್ನಿಟ್ಟು, ಅಪ್ರಮಾಣದಿಂದ ಕಾಲುಗಳನ್ನಾದರೂ ದೂರ ಸರಿಟ್ಟು, ಶರೀರವನ್ನು ಒಂದೇಸವನೆ ಸಮತೋಲವಾಗಿ ಮಾಡಿಕೊಂಡು, ಎದೆಯನ್ನು ಮೆಲ್ಲಮೆಲ್ಲನೆ ಸಾಧ್ಯವಾದಷ್ಟು ಕೆಳಗೊಯ್ದು, ಪುನಃ ಮೇಲೆ ತರತಕ್ಕದ್ದು. ಎದೆಯನ್ನು ಮೇಲಕ್ಕೆ ತರುವಾಗ, ಹಿಂದೆ ಹೋದ ಕಾಲುಗಳನ್ನು ಕ್ರಮ ಕ್ರಮವಾಗಿ

ಎದೆ, ಕೊರಳು, ಹೊಟ್ಟೆ, ಟೊಂಕ, ಪಕ್ಕೆಲವು.

ಮುಂದೆ ತರತಕ್ಕದ್ದು. ಈ ವೇಳೆಯಲ್ಲಿ ಎರಡೂ ಕಾಲುಗಳು ಸರಳವಾಗಿರತಕ್ಕದ್ದ

ಈ ವ್ಯಾಯಾಮದಿಂದ ಉದರಕ್ಕೆ (ಹೊಟ್ಟಿಗೆ) ಒಳ್ಳೇ ಉಪಯೋಗವಾಗುವ ಬಹುತರ ಪೂರ್ಣ ಆರೋಗ್ಯವು ಉದರವನ್ನವಲಂಬಿಸಿರುವದು. ಈ ಉದರದ ವ್ಯಾಯ ಮದಿಂದ ಪಚನಕ್ರಿಯೆಗೆ ಒಳ್ಳೇ ಸಹಾಯವಾಗುವದು ವಾತವಾಗಲಿ, ನೆಣವಾಗ ಬಿಳಿಯಲಿಕ್ಕೆ ಎಷ್ಟು ಮಾತ್ರವೂ ಅಸ್ಪದ ದೊರೆಯಲಿಕ್ಕಿಲ್ಲ. ಈ ವ್ಯಾಯಾಮವು ಬಾಲ ಸ್ತ್ರೀ—ಪುರುಷರಿಗೆ ಒಂದೇ ಸವನೆ ಉಪಯೋಗವುಳ್ಳದ್ದು.

ಕೇವಲ ಉರುಳುವ ವ್ಯಾಯಾಮದಿಂದ ಡೊಳ್ಳು ಹೊಟ್ಟೆಯನ್ನು ಕರಗಿಸಿಕೊ ಬಹುದು. ನೆಲದ ಮೇಲೆ ಗುಡಾರವನ್ನಾಗಲಿ ಕಂಬಳಿಯನ್ನಾಗಲಿ ಹಾಸಿ ಅದರ ಮೇ ಈ ತುದಿಯಿಂದ ಆ ತುದಿಯವರೆಗೆ (ತಲೆ ಹಾಗು ಕಾಲುಗಳನ್ನು ಒಂದೇ ರೇಖೆಯಲ್ಲಿಟ್ಟ ವೇಗವಾಗಿ "ಗುಡು ಗುಡು" ಉರುಳಾಡಬೇಕು. ಮೊದಮೊದಲು ತಲೆತಿರುಗಿದಂ ಗಬಹುದು. ರೂಢಿಯಿಂದ ಬರಬರುತ್ತ ಹಾಗಾಗುವ ಸಂಭವವಿಲ್ಲ. ಉರುಳುವಾ ಕೈಗಳನ್ನು ತೊಡೆಗಳಿಗೆ ನೀಟಾಗಿ ಹಚ್ಚಿಕೊಂಡಿರಬೇಕು. ಅಥವಾ ತಲೆಯಭಾಗ ಕಡೆಗೆ ಚಾಚಿ ಸರಳವಾಗಿಟ್ಟುಕೊಂಡಿರಬೇಕು.

'ಅಗಿಯುವದು ಹಾಗು ಕಟ್ಟಿಗೆ ಕಡಿಯುವದು' ಇವು ಹೊಟ್ಟಿಗೆ ಒಳ್ಳೇ ಉ ಯೋಗಕರವಾದ ವ್ಯಾಯಾಮಗಳು. (ಉದಾಹರಣಾರ್ಥವಾಗಿ ಒಂದು ಸಂಗತಿಯನ ವಿವೇಚಿಸುವದು ಇಲ್ಲಿ ತಕ್ಕದ್ದಾಗಿರುವದು:—ಈಗಿನ ಪ್ರಸಿದ್ಧ ಜರ್ಮನ ಬಾದಶಹನಾ ಕೇಸರನಿಗೆ ಮೊದಲು ಒಳ್ಳೇದೊಡ್ಡ ಡೊಳ್ಳು ಹೊಟ್ಟೆ ಇತ್ತೆಂದೂ, ಅದನ್ನು ಕಳೆದ ಕೊಳ್ಳುವದಕ್ಕಾಗಿ ಡಾಕ್ಟರರ ಅಭಿಪ್ರಾಯವನ್ನು ಕೇಳಲು, ಅವರು ಅವರಿಗೆ ದಿನಾಲ ಕಟ್ಟಿಗೆ ಒಡೆಯುವ ವ್ಯಾಯಾಮ ಮಾಡುವದಕ್ಕೆ ಹೇಳಿದರಂತೆ. ಆ ಬಾದಶಹರ ಹೀನ ಕೆಲಸವೆಂದು ಉಪೇಕ್ಷಿಸದೆ, ಒಳ್ಳೇ ಉತ್ಸಾಹದಿಂದ ಆ ಕಾರ್ಯವನ್ನು ಪ್ರಾರಂ ಭಿಸಿ, ತಮ್ಮ ಗಜಾನನ ಹೊಟ್ಟೆಯಂಥ ಉದರವನ್ನು ಸವೆಸಿಕೊಂಡರಂತೆ. ರಾಜಪುತ್ರ ರು, ಜಗದ್ವಿಖ್ಯಾತ ರಾಜರು. ಹೀಗಿದ್ದು ಎಂಥ ಕಾರ್ಯವನ್ನು ಕೈಕೊಂಡರು ನೋಡಿರಿ! ಒಣ ದುರಭಿಮಾನಕ್ಕೆ ಬಿದ್ದು ಸುಮ್ಮನೆ ಕೂಡಲಿಲ್ಲ! ಈಗ ಆಸುರಿಕ್ಯಾಸ್ಟ್ ಬಿದ್ದು ನೀಚಕಾರ್ಯವನ್ನು ಕೈಕೊಂಡಿರುವರು. ಈ ಮಾತು ಬೇರೆ!)

(ಮುಂದೆಸಾಗುವದು.)

ಸಿದ್ಧನಾಥ ಜ್ಞಾನ ಮಂದಿರ, ನೊರಬ

ಹಸ್ತಶಿಕ್ಷಣ.

ಜಗತ್ತಿನಲ್ಲಿಯ ಎಲ್ಲ ಸುಧಾರಿಸಿದ ರಾಷ್ಟ್ರಗಳ ಶಿಕ್ಷಣಪದ್ಧತಿಯನ್ನು ಪರ್ಯಾಲೋಚಿಸಿ ನೋಡಿದರೆ ಮಾನಸಿಕ ಶಿಕ್ಷಣದೊಡನೆ ಬೇರೆ ಬೇರೆ ಪ್ರಕಾರದ ಕೈಕೆಲಸವನ್ನಾದರೂ ಸುವ್ಯವಸ್ಥಿತವಾಗಿ ಕಲಿಸುವ ಪ್ರಚಾರವಿರುವದೆಂಬಮಾತು ನಿಮ್ಮೆಲ್ಲರಿಗೂ ತಿಳಿದುಬರುವದು. ಮನುಷ್ಯಪ್ರಾಣಿಯು ತನ್ನಲ್ಲಿಯ ಮಾನಸಿಕ, ಶಾರೀರಿಕ, ನೈತಿಕ ಶಕ್ತಿಗಳನ್ನು ಸಂಪೂರ್ಣವಾಗಿ ಬಲಪಡಿಸಿ, ಉತ್ತಮ ರೀತಿಯಿಂದ ಉಪಜೀವನವನ್ನು ಮಾಡಿಕೊಳ್ಳುವದೇ ಶಿಕ್ಷಣವೆನಿಸುವದು. ಪಂಚೇಂದ್ರಿಯಗಳ ಸಹಾಯದಿಂದ ಶಿಕ್ಷಣ ಹೊಂದುವಂಥ ಮನುಷ್ಯನಲ್ಲಿಯ ಮಹತ್ವದ ಅವಯವಗಳಕಡೆಗೆ ನೋಡಿದರೆ, ಅವು ಅವನಿಗೆ ಯಾವರೀತಿಯಿಂದ ಉಪಯುಕ್ತವಾದವಿರುವವು. ಹಾಗೂ ಅವುಗಳ ಸಹಾಯವು ಅವನಿಗೆ ಮಾನಸಿಕ, ಶಾರೀರಕ, ನೈತಿಕ ಬೆಳವಣಿಗೆಯಲ್ಲಿ ಎಷ್ಟರ ಮಟ್ಟಿಗೆ ಆಗಿರುವದೆಂಬದು ಪೂರ್ಣವಾಗಿ ತಿಳಿದು ಬರುತ್ತದೆ. ಈ ಎಲ್ಲ ಅವಯವಗಳಲ್ಲಿ ಅವನಿಗೆ ಕೈಯಿಂದಾದ ಉಪಕೃತಿಗಳನ್ನು ನೋಡಿಕೊಂಡು ಅದರ ಮಹತ್ವವನ್ನು ತಿಳಿದುಕೊಳ್ಳುವಾ.

ಮನುಷ್ಯಪ್ರಾಣಿಯನ್ನು ಇತರಪ್ರಾಣಿಗಳಿಂದ ವಿಂಗಡಿಸಬೇಕಾದರೆ, ಅನೇಕ ಪ್ರಕಾರಗಳಿರುವವು. ಅವುಗಳಲ್ಲಿ ಮನುಷ್ಯನು ಹತ್ಯಾರಗಳನ್ನು ತಯಾರಿಸಿ, ಅವುಗಳನ್ನು ಉಪಯೋಗಿಸುವನೆಂಬ ಅಸಾಧಾರಣ ಧರ್ಮವು ಮನುಷ್ಯಪ್ರಾಣಿಯ ಸುಧಾರಣೆಯ ಇತಿಹಾಸದಿಂದ ಮಹತ್ವವಾದದ್ದೆಂದು ತಿಳಿದುಬರುವದು. ಅರಿಸ್ಟಾಟಲನೆಂಬ ತತ್ವಜ್ಞಾನಿಯು ಎಲ್ಲ ಆಯುಧಗಳಲ್ಲಿ ಮನುಷ್ಯನ ಕೈಯು ಪ್ರಧಾನವಾದದ್ದೆಂದು ಹೇಳಿರುವನು. ಮನುಷ್ಯಪ್ರಾಣಿಯ ಸುಧಾರಣೆಯಲ್ಲಿ ಹಸ್ತದ ಉಪಯೋಗವು ಬಹಳ ಮಟ್ಟಿಗೆ ಆಗಿರುವದು. ಮನುಷ್ಯನು ತನ್ನಲ್ಲಿದ್ದ ಅಸಾಧಾರಣ ಬುದ್ಧಿಯ ಬಲದಿಂದ ತನಗೆ ಬೇಕಾದದ್ದೊಂದು ಆಯುಧವನ್ನು ತಯಾರಿಸಿಕೊಂಡು,

ಕ್ರೂರಪಶುಗಳ ರಕ್ತಾಭಿಲಾಷೆಯನ್ನು ಮುರಿದು, ಬದಿಗೊತ್ತಿ, ಬದುಕಿ ಬಾಳುವನು. ಅನೇಕ ಬಲವುಳ್ಳ ಪದಾರ್ಥಗಳಲ್ಲಿ ಕೆಲಸಮಾಡುವದು ಅವನಿಗೆ ಅವಶ್ಯವಾದದ್ದರಿಂದ ಅದಕ್ಕೆ ಅನುರೂಪವಾದ ಹಾಗೂ ಹದನವಾದ ಆಯುಧಗಳನ್ನೇ ತಯಾರಿಸಿಕೊಂಡು, ಅವುಗಳಿಂದಲೇ ಸೃಷ್ಟಿಯಲ್ಲಿಯ ಸೃಷ್ಟಪದಾರ್ಥಗಳನ್ನು ವಶಮಾಡಿಕೊಂಡನು. ಯಾಂತ್ರಿಕ ಆಯುಧಗಳಿಂದಂತೂ ಅವನ ಪ್ರಭುತ್ವವು ಬಹಳೇ ಹೆಚ್ಚಾಯಿತು. ಶಾಸ್ತ್ರೀಯ ವಿಷಯದಲ್ಲಿ ಉಪಯೋಗಿಸುವ ಯಂತ್ರಗಳೂ ಉಪಕರಣಗಳೂ ಸುಧಾರಿಸಿದ ಆಯುಧಗಳಲ್ಲವೇ? ಅವುಗಳಿಂದಲೇ ಸೃಷ್ಟಿಯಲ್ಲಿ ದೂರದಲ್ಲಿರುವ ಶಕ್ತಿಗಳನ್ನೂ ಪದಾರ್ಥಗಳನ್ನೂ ನೋಡಿ, ಕೇಳಿ, ಅವುಗಳ ಜ್ಞಾನವನ್ನು ಮಾಡಿಕೊಳ್ಳುತ್ತಾ ಬರಲಿಲ್ಲವೇ?

ಈ ರೀತಿಯಾಗಿ ಆಯುಧಗಳು ಪೂರ್ಣತೆಯನ್ನು ಹೊಂದಿದಂತೆ ಅವುಗಳನ್ನು ಉಪಯೋಗಿಸುವ ಕೈಯಾದರೂ ವಿಶಿಷ್ಟ ಕುಶಲತೆಯನ್ನು ಹೊಂದುವದು ಅತ್ಯವಶ್ಯವಾದದ್ದು. ಹಾಗೂ ಈ ತರದ ಕುಶಲತೆಯ ಅವುಗಳಿಂದ ಕೆಲಸ ಮಾಡುತ್ತ ಹೋದಂತೆ ಬಂದೇ ಬರುವದು. ಮನುಷ್ಯನ ಕೈಯಿಂದಾದ ಕೆಲಸವು ಯಂತ್ರಗಳಿಂದಾದ ಕೆಲಸಕ್ಕೆ ಎಂದೂ ಸಮಾಗಲಾರದು. ಆದರೆ ಯಂತ್ರವನ್ನು ಉಪಯೋಗಿಸುವ ಮನುಷ್ಯನು ಉತ್ತಮರೀತಿಯಿಂದ ತಯಾರಾದ ಹೊರತು ಅದರಿಂದ ಉತ್ತಮ ಕೆಲಸವಾಗಲಾರದೆಂಬದು ಸ್ವಲ್ಪವಿಚಾರಮಾಡಿ ನೋಡಿದರೆ, ತಿಳಿಯುವಂತಿದೆ. ನೇಗಿಲ ಹೊಡೆಯಲಿಕ್ಕೆ ಬಂದ ಮನುಷ್ಯನಿಗೆ ನೀವು ಒಂದು ಯಂತ್ರದ ಸಹಾಯದಿಂದ ನೇಯುವದಕ್ಕೆ ಹೇಳಿದರೆ, ಅವನಿಗೆ ಆ ಕೆಲಸವು ಬಾರದು. ಯಾಕಂದರೆ, ಆ ಕೆಲಸ ಮಾಡುವದಕ್ಕೆ ಅವನ ಹಸ್ತಗಳು ತಯಾರಾಗಿರುವದಿಲ್ಲ; ಸುಧಾರಿಸಿದ ಬೇರೆ ಬೇರೆ ಯಂತ್ರಗಳು ತಯಾರಾದಂತೆ ಅವುಗಳಿಂದ ಕೆಲಸ ನಡಿಸುವ ಕೈಯಾದರೂ ಅದರಷ್ಟೆ ಇಲ್ಲವೆ ಅದಕ್ಕೂ ಹೆಚ್ಚು ಸುಧಾರಿಸಿದ್ದಿರಬೇಕಾಗುವದು.

ಮೇಲಿನ ಸಂಗತಿಗಳನ್ನು ತಿಳಿದುಕೊಂಡ ಬಳಿಕ ಶರೀರ ಹಾಗೂ ಮಾನಸಶಾಸ್ತ್ರದ ಹಲವು ತತ್ವಗಳು ಕೈಕೆಲಸದಲ್ಲಿ ತಲೆದೋರುವವೆಂಬ ಸಂಗತಿಯನ್ನು ತಿಳಿದುಕೊಳ್ಳುವದು ಅವಶ್ಯವಾಗುವದು. ಆದ್ದರಿಂದ ಅವು ಗಳನ್ನು ಕುರಿತು ವಿಚಾರಿಸುವಾ. ದೊಡ್ಡ ದೊಡ್ಡ ಸ್ನಾಯುಗಳ ಅನೇಕ ಗುಂಪುಗಳನ್ನು ವಶದಲ್ಲಿಟ್ಟುಕೊಳ್ಳುವದು ಅತಿ ಸುಲಭವಾದದ್ದೆಂದು ಜಗ ತ್ತಿನ ಅನುಭವಕ್ಕೆ ಬಂದಿರುವದು. ಆದರೆ ಕೈಬೆರಳು, ತೋಳು ಮುಂತಾ ದವುಗಳಿಂದ ಆಗುವ ಸ್ಪರ್ಶವೂ ಚಲನೆಯೂ ಅತಿ ಸೂಕ್ಷ್ಮವಾದವಿರು ವವು. ಉದಾಹರಣಾರ್ಥವಾಗಿ ತೋಳಿನಲ್ಲಿಯ ಎಲ್ಲ ಸ್ನಾಯುಗಳ ಸಹಾ ಯದಿಂದ ಒಂದು ಕಟ್ಟಿಗೆಯ ತುಂಡನ್ನು ಕೊಡಲಿಯಿಂದ ಕಡಿಯುವದು ಅತಿ ಸುಲಭವಿರುವದು. ಅದೇ ಮೂರು ಬೆರಳುಗಳಿಂದ ಲೆಕ್ಕಣಿಕೆಯನ್ನು ಹಿಡಿದು ಬರೆಯುವದು ಬಹಳ ಕಠಿಣವಾದದ್ದಿರುವದು. ಮಗುವು ಬರೆ ಯುವದಕ್ಕೆ ಮೊದಲನೆಯಸಾರೆ ಪ್ರಯತ್ನಿಸಿದಾಗ್ಗೆ ಶರೀರದಲ್ಲಿಯ ಎಲ್ಲ ಸ್ನಾಯುಗಳ ಸಹಾಯನ್ನು ಬಹುತರವಾಗಿ ತೆಗೆದುಕೊಳ್ಳುವದು. ಮುದು ಕರು ಬರೆಯುವಕಾಲದಲ್ಲಿ ಸಹ ಕೈಚಲನೆಯ ಕೂಡ ಅವರ ಮೋರೆಯ ಮೇಲಿನ ಸ್ನಾಯುಗಳ ಚಲನೆಯನ್ನಾದರೂ ನೀವು ಅನೇಕ ಸಾರೆ ನೋಡಿ ರಬಹುದು. ಕಚ್ಚಾಕೆಲಸದಲ್ಲಿ ದೊಡ್ಡ ಸ್ನಾಯುಗಳ ಸಮೂಹವೇ ಉಪ ಯೋಗವಾಗುವದು. ಅತಿ ಸೂಕ್ಷ್ಮವಾದ ಕೆಲಸಕ್ಕೆ ಸಣ್ಣ ಸ್ನಾಯುಗಳ ನ್ನು ಸುವ್ಯವಸ್ಥೆಯಿಂದ ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ಕಚ್ಚಾ ಕೆಲಸದಲ್ಲಿ ಬಹಳ ಪುಟ್ಟಗೆ ದೊಡ್ಡ ಸ್ನಾಯುಗಳ ಕೇಂದ್ರಗಳು ಅಲ್ಪ ಪ್ರಮಾಣದಿಂದ ಬೆಳವಣಿಗೆಯನ್ನು ಹೊಂದುವವು. ಅತಿ ಸೂಕ್ಷ್ಮವಾದ ಕೆಲಸದಲ್ಲಿ ಸ್ನಾಯುಗಳ ಚಲನವಲನೆಯು ಸುವ್ಯವಸ್ಥಿತವಾದದ್ದೂ ಉತ್ತಮವಾದದ್ದೂ ಇದ್ದಕಾರಣ ಅವುಗಳ ಕೇಂದ್ರಗಳು ಸರಿಯಾಗಿಯೂ, ಪೂರ್ಣವಾಗಿಯೂ ಬೆಳವಣಿಗೆಯನ್ನು ಹೊಂದುವವು. ಆದ್ದರಿಂದ ಶಾಲೆ ಗಳಲ್ಲಿಯ ಹಸ್ತಶಿಕ್ಷಣದಲ್ಲಿ ಕತ್ತರಿ, ಚಾಕು, ಕರಗಸ, ಉಜ್ಜುಗೊರಡು

ಮುಂತಾದ ಆಯುಧಗಳನ್ನೇ ಉಪಯೋಗಿಸಬೇಕಲ್ಲದೆ ಕೊಡಲಿ ಮುಂತಾದವುಗಳನ್ನು ಉಪಯೋಗಿಸಕೂಡದು.

ಚಲನಾತ್ಮಕವಾದ ಸಣ್ಣ ಸ್ನಾಯುಗಳ ಶಿಕ್ಷಣವು ಚಿಕ್ಕಂದಿನಲ್ಲಿಯೇ ಪ್ರಾರಂಭವಾಗಬೇಕೆಂದು ಚಿಕ್ಕಮಕ್ಕಳ ಬೆಳವಣಿಗೆಯ ಸಂಬಂಧದ ವಿಚಾರದಲ್ಲಿ ಕಂಡುಬಂದಿರುವದು. ಯಾಕಂದರೆ ಹಸ್ತದಲ್ಲಿಯ ಸ್ನಾಯುಗಳ ಚಲನವಲನಗಳನ್ನು ವಶದಲ್ಲಿಟ್ಟುಕೊಳ್ಳುವಂಥ ಮಿದುಳಿನಲ್ಲಿಯ ಕೇಂದ್ರಗಳು ಮಗು ಹುಟ್ಟಿದ ತುಸು ದಿವಸಗಳಲ್ಲಿಯೇ (ಅಂದರೆ ಹುಟ್ಟಿದಂದಿನಿಂದ ೧೭ ನೇ ವಾರದಲ್ಲಿಯೇ) ಬೆಳವಣಿಗೆಯನ್ನು ಹೊಂದುವವು. ಇಲ್ಲದಿದ್ದರೆ ಅಷ್ಟು ಬೆಳವಣಿಗೆಯನ್ನು ಹೊಂದಲಾರವು.

ಹಸ್ತಶಿಕ್ಷಣವು ಚಿಕ್ಕಂದಿನಿಂದಲೇ ಪ್ರಾರಂಭವಾಗಬೇಕೆಂಬದೇ ಮಾನಸಶಾಸ್ತ್ರದ ಅಭ್ಯಾಸದಿಂದ ಕಂಡು ಬಂದಿರುವದು. ಹಾಗೂ ಚಿಕ್ಕ ಮಕ್ಕಳು ಶಾಲೆಗೆ ಹೋಗುವ ಪೂರ್ವದಲ್ಲಿಯೂ, ಹೋದನಂತರ ಒಂದೆರಡು ವರ್ಷಗಳ ವರೆಗೂ ಅದನ್ನು ಅನೇಕ ಆಟಗಳಿಗೆ ಜೋಡಿಸಬಹುದೆಂಬದೂ ಅನುಭವಸಿದ್ಧವಾಗಿರುತ್ತದೆ. ಆದ್ದರಿಂದ ೫ ವರ್ಷದಿಂದ ೧೬ ವರ್ಷದವರೆಗೆ ಹಸ್ತಶಿಕ್ಷಣವನ್ನು ಅವಶ್ಯವಾಗಿ ಕೊಡಬೇಕು. ಈ ಕಾಲಕ್ಕೆ ಈ ತರದ ಶಿಕ್ಷಣವು ಸಿಗದೆ ಇದ್ದರೆ ಹಸ್ತದಲ್ಲಿಯ ಸೂಕ್ಷ್ಮವಾದ ಮಜ್ಜಾತಂತುಗಳು ಬೆಳವಣಿಗೆಯನ್ನು ಹೊಂದುವದಿಲ್ಲ; ಹಾಗೂ ಅವುಗಳಿಗೆ ಸಂಬಂಧಪಟ್ಟ ಮಿದುಳಿನಲ್ಲಿಯ ಕೇಂದ್ರಗಳಾದರೂ ಪುಷ್ಟವಾಗದೆ ನಾಶಹೊಂದುವವು. ಅನೇಕ ಆಯುಧಗಳನ್ನು ಉಪಯೋಗಮಾಡಿ ಶಿಕ್ಷಣವನ್ನು ಹೊಂದಿದಂಥ ಹಸ್ತದ ಚಲನವಲನದ ಮಹತ್ವವು ಭಾಷೆಯ ಬೆಳವಣಿಗೆಯಲ್ಲಿಯೂ ಕೂಡ ಸ್ಪಷ್ಟವಾಗಿ ಕಂಡುಬರುವದು. ಅರ್ವಾಚೀನ ಶಾಸ್ತ್ರಜ್ಞರ ಮತದಂತೆ ಭಾಷೆಯ ಅಭಿವೃದ್ಧಿಯು ಕೈಕೆಲಸದಿಂದಲೇ ಆಗಿರುವದೆಂದೂ, ಮನುಷ್ಯನ ಎರಡೂ ಕೈಗಳಲ್ಲಿಯ ಅಸಮಾನವಾದ ಬೆಳವಣಿಗೆಯನ್ನು ಅವಲಂಬಿಸಿರುವದೆಂದೂ ತಿಳಿಯುತ್ತದೆ. ಜನ

ು ನೂರರಲ್ಲಿ ತೊಂಬತ್ತೊಂಬತ್ತು ಪಾಲು ಬಲಗೈಯನ್ನೇ ಎಲ್ಲ ಕೆಲಸ
ಗಳಲ್ಲಿ ಉಪಯೋಗಿಸುವರು. ಬಹಳ ಶಕ್ತಿಯ ಇಲ್ಲವೆ ಚಾತುರ್ಯದ
ಕೆಲಸವಿದ್ದಲ್ಲಿ ಬಲಗೈಯು ಎಡಗೈಯ ಸಹಾಯವನ್ನು ತೆಗೆದುಕೊಳ್ಳಬೇ
ಕಾಗುವದು. ನೂರರಲ್ಲಿ ಒಬ್ಬಿಬ್ಬರು ಮಾತ್ರ ಎಡಗೈಯ ಉಪಯೋಗ
ವನ್ನು ಮಾಡಿಕೊಳ್ಳುವದು ಕಂಡುಬರುವದು. ಎಡಗೈಯನ್ನೇ ವಿಶೇಷ
ವಾಗಿ ಎಲ್ಲರೂ ಉಪಯೋಗಿಸುವಂತೆ ಶಿಕ್ಷಣಕೊಡಲು ಪ್ರಯತ್ನಪ
ಟ್ಟಾಗ್ಯೂ ಸಾಧ್ಯವಾಗದೆ ಬಲಗೈಯು ಬಿಳವಣಿಗೆಯೇ ಸ್ವಾಭಾವಿಕವಾಗಿ
ಆಗುವದೆಂದು ಲಿಬರ್ಟಟ್ಯಾಡ ಎಂಬವರು ನಿಃಸಂದೇಹವಾಗಿ ಹೇಳಿರು
ವರು. ಈ ರೀತಿಯಾಗಿ ಮನುಷ್ಯನ ಕೈಗಳಲ್ಲಿಯ ಹೆಚ್ಚುಕಡಿಮೆ ಬಿಳವ
ಣಿಗೆಗೆ ಮಹತ್ವದ ಕಾರಣಗಳಿರುವವು. ಮನುಷ್ಯನ ಬಲಗೈಯ ಪ್ರಾಧಾ
ನ್ಯದ ಹಾಗು ಭಾಷಣದ ಸಂಬಂಧದ ಎಲ್ಲ ಸಂಗತಿಗಳ ಕೇಂದ್ರಗಳು
ಮಿದುಳಿನ ಎಡಭಾಗದಲ್ಲಿರುವವೆಂದು ಅರ್ವಾಚೀನ ಮಾನಸಶಾಸ್ತ್ರ
ಜ್ಞರು ಪ್ರಯೋಗಗಳಿಂದ ಕಂಡುಹಿಡಿದಿರುವರು. ಈ ಕಾರಣದಿಂದ
ಭಾಷೆಯ ಬಿಳವಣಿಗೆಗೂ ಬಲಗೈಗೂ ನಿಕಟವಾದ ಸಂಬಂಧವಿರುವದೆಂ
ಬದು ಗೊತ್ತಾಗುತ್ತದೆ. ಅಲ್ಲದೆ ಭಾಷಣಕ್ಕೂ ಕೈಚಲನೆಗೂ ಇದ್ದ ವ್ಯವ
ಹಾರಿಕ ಸಂಗತಿಗಳನ್ನೂ ಧ್ವನಿಯ ಪೆಟ್ಟಿಗೆಗೆ ತಟ್ಟುವ ಹಲವು ರೋಗಗ
ಳನ್ನೂ ಮನದಲ್ಲಿ ತಂದರೆ ಈ ಸಂಬಂಧವನ್ನು ಹೆಚ್ಚು ಪುಷ್ಟೀಕರಿಸು
ವಂತೆ ತೋರುತ್ತದೆ. ಈ ಸಂಗತಿಯಲ್ಲಿ ಇದಕ್ಕೂ ಹೆಚ್ಚು ವಿವರಿಸು
ವದು ಇನ್ನೂ ಪೂರ್ಣಶೋಧವಾಗದ ಮೂಲಕ ಕಠಿಣವಾದದ್ದಿರುವ
ಕಾರಣ ಭಾಷಣದ ಬಿಳವಣಿಗೆಗಾದರೂ ನಮ್ಮ ಕೈಗಳಿಗೆ ಒಂದು ವಿಶಿ
ಷ್ಟಪ್ರಕಾರದ ಕುಶಲತೆಯನ್ನು ಸುವ್ಯವಸ್ಥಿತವಾದ ಶಿಕ್ಷಣದಿಂದ ತಂದು
ಕೊಡುವದು ಅತ್ಯವಶ್ಯವಾದ ಸಂಗತಿಯಾಗಿರುವದು. ಒಟ್ಟಿನಮೇಲೆ
ಹಸ್ತವು ಕೇವಲ ಮನುಷ್ಯನ ಒಂದು ಸಾಮಾನ್ಯವಾದ ಅವಯವವಾಗದೆ
ಇದು ಪಂಚೇಂದ್ರಿಯಗಳಷ್ಟೇ ಮಹತ್ವದ್ದೆಂದೂ ಇಲ್ಲವೆ ಅದು ಆರನೆಯ
ಒಂದು ಇಂದ್ರಿಯವೆಂದೂ ಅವಶ್ಯವಾಗಿ ತಿಳಿಯತಕ್ಕದ್ದು.

ಈ ಪ್ರಕಾರವಾಗಿ ಹಸ್ತದ ಮಹತ್ವವನ್ನೂ, ಅದರಿಂದಾದ ಉಪ
ಕೃತಿಯನ್ನೂ ತಿಳಿದುಕೊಂಡನಂತರ ಅದರ ಬೆಳವಣಿಗೆಯನ್ನು ಮಾಪ
ಕೊಂಡು ಹೆಚ್ಚಿನ ಪ್ರಕಾರದ ಮನಸಿನವಿಕಾಸವನ್ನು ಪಡೆಯುವದು ಯೋಗ್ಯ
ವಲ್ಲನೇ? ಕತ್ತಲೆಯಲ್ಲಿ ಬಹು ದಿನಸ ಅಡಗಿ ಕೊಂಡಂಥ ಈ ಸಂಗತಿಯು
ಈಚೆಗೆ ಬೆಳಕಿನಲ್ಲಿ ಬರಲಿಚ್ಛಿಸುತ್ತಿರುವದು, ಜನರಲ್ಲಿಯ ತಪ್ಪುತಿಳಿ
ವಳಿಕೆಯೇ ಇದರಕಾರಣವಾಗಿರಬಹುದು. ಅಜ್ಞಾನವು ಸಹಿತ ಕೆಲಸಾ
ನಿಜವಾದ ಸಂಗತಿಗಳ ಕಡೆಗೆ ಲಕ್ಷ್ಯವನ್ನು ಎಳೆಯುವದೆಂಬ ಮಾತು ಅಸ
ತ್ಯವಲ್ಲ. ಆದ್ದರಿಂದ ಚಿಕ್ಕಮಕ್ಕಳ ಮಾನಸಿಕ, ಶಾರೀರಿಕ, ನೈತಿಕ ಶಕ್ತಿ
ಗಳು ಬಲಪಟ್ಟು ಉತ್ತಮ ತರದ ನಾಗರಿಕತನ್ನುಂಟುಮಾಡುವಂಥ ಸ
ಸ್ಥಿತಿಯು ಮಂದಿರದಲ್ಲಿಯೇ ಸಾಮಾನ್ಯ ಶಿಕ್ಷಣದ ಉದ್ದೇಶಗಳನ್ನೂ ತತ್
ಗಳನ್ನೂ ಅನುಸರಿಸುವಂಥ ಕೈಕೆಲಸವನ್ನು ಕಲಿಸತಕ್ಕದ್ದು.

ಕೈಕೆಲಸವು ಒಂದು ವಿಷಯವೋ ಅಥವಾ ಪದ್ಧತಿಯೋ ಎಂಬದರ
ಬಗ್ಗೆ ಯುರೋಪ, ಅಮೇರಿಕಾ ಮುಂತಾದ ಸುಧಾರಿಸಿದ ರಾಷ್ಟ್ರಗಳಲ್ಲಿ
ವಾದವು ನಡೆದಿರುವದು. ಇದು ಕೆಲ ವಿಶಿಷ್ಟತತ್ವಗಳನ್ನೂ ಕ್ರಮವನ್ನೂ
ಅನುಸರಿಸಿರುವದರಿಂದ ಪದ್ಧತಿಯೆಂದೇ ಹೇಳಬೇಕಾಗುತ್ತದೆ. ಆದರೆ
ಸಾಮಾನ್ಯ ವಿಷಯಗಳಿಗೆ ಸಹಾಯಕವಾದ ವಿಷಯವೆಂದೂ ಅನೇಕರ
ಅಭಿಪ್ರಾಯವಿರುವದು. ಬೇರೆ ಬೇರೆ ಕಾಲದಲ್ಲಿಯ ಸುಪ್ರಸಿದ್ಧ ಶಿಕ್ಷಣ
ಶಾಸ್ತ್ರಜ್ಞರು ಇದರ ಮಹತ್ವವನ್ನು ಅನೇಕ ಗ್ರಂಥಗಳಲ್ಲಿ ಉಲ್ಲೇಖಿಸಿ
ವರು. ಇದರಿಂದ ಯಾವದೊಂದು ಕೆಲಸದಲ್ಲಿ ಮುಂದಣ ಭಾರವನ್ನು
ವಹಿಸುವ ಸಾಮರ್ಥ್ಯವೂ ಅವಧಾನ ಇಚ್ಛಾಶಕ್ತಿಗಳಿಗೆ ಪ್ರೋತ್ಸಾಹವು
ಉಂಟಾಗುವದು. ಬುದ್ಧಿಯ ಬೆಳವಣಿಗೆಗೂ, ದೊರಕಿಸಿದ ಜ್ಞಾನವು
ಮರೆತು ಹೋಗದೆ ವೃಷವಾಗಿರುವದಕ್ಕೂ ಇದು ಮಹತ್ವದ ಸಾಧನವಾ
ಗಿದೆ. ಇದರಿಂದ ತುಸು ಮಟ್ಟಿಗೆ ಔದ್ಯೋಗಿಕ ಶಿಕ್ಷಣವು ದೊರೆಯುವ
ಲ್ಲದೆ ಮನಸ್ಸಿನ ಅನೇಕ ಶಕ್ತಿಗಳು ಸಂಸ್ಕಾರಹೊಂದಿ ಸಾಮಾನ್ಯ ಶಿಕ್ಷಣ
ತ್ರಿವಿಧವಾದ ಉದ್ದೇಶಗಳು ಕೈಗೂಡುವವು.

ಜಗತ್ತಿನಲ್ಲಿಯ ಯಾವತ್ತು ಕೆಲಸಗಳು ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಕೈಯಿಂದಲೇ ಮಾಡಲ್ಪಡುವವಷ್ಟೇ? ಕೈಯಲ್ಲಿ ವಿಶಿಷ್ಟವಾದ ಕುಶಲತೆಯು ಇದ್ದರೆ ಅವೆಲ್ಲ ಕೆಲಸಗಳು ಉತ್ತಮ ರೀತಿಯಿಂದ ಜರಗುವವು ಇದೊಂದು ಸಂಗತಿಯಿಂದಲೇ ಸಾಮಾನ್ಯ ಶಿಕ್ಷಣದ ಎಲ್ಲ ಶಾಲೆಗಳಲ್ಲಿ ಹಸ್ತಶಿಕ್ಷಣವನ್ನು ಕೊಡಬೇಕೆಂಬದು ಸ್ಪಷ್ಟವಾಗಿ ತೋರುವದು. ದೊಡ್ಡ ದೊಡ್ಡ ಔದ್ಯೋಗಿಕ ಸಂಸ್ಥೆಗಳಿಗೆ ಪ್ರಾರಂಭದಿಂದ ಕೈಕೆಲಸದಲ್ಲಿನುರಿತವರಾದ ಜನರ ಅವಶ್ಯಕತೆಯೇ ವಿಶೇಷವಾಗಿರುವದು. ಮತ್ತು ಹಸ್ತ ಕೌಶಲ್ಯವು ಶಸ್ತ್ರವೈದ್ಯರಿಗೂ ಶಾಸ್ತ್ರಜ್ಞರಿಗೂ ಚಿತ್ರಕಲೆಯಲ್ಲಿ ತೊಡಗಿದವರಿಗೂ ಅವಶ್ಯವಾಗಿ ಬೇಕಾಗುವದು. ಪ್ರತಿಯೊಬ್ಬ ಹುಡುಗನು ಕೆಲವೊಂದು ಮನಸ್ಸಿನ ಸಾಮರ್ಥ್ಯದೊಡನೆ ಶಾಲೆಯನ್ನು ಪ್ರವೇಶಿಸುವನೆಂಬ ಮಾತು ಎಲ್ಲರಿಗೂ ಗೊತ್ತಿರುವದಷ್ಟೇ? ಅಲ್ಲಿ ಕಲಿಸಬಹುದಾದ ಭಾಷಾವಿಷಯ, ಅಂಕಗಣಿತ, ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮುಂತಾದವುಗಳಲ್ಲಿ ಕೆಲವು ವರ್ಷಗಳ ಶಿಕ್ಷಣದಿಂದ ಸಾಕಷ್ಟು ಪ್ರಗತಿಯನ್ನು ಅವನು ಪಡೆಯದಿದ್ದರೆ ಅವನು ಕೇವಲ ನಿರರ್ಥಕವಾದನೆಂದು ತಿಳಿಯಬೇಕೋ ಅಥವಾ ಇವುಗಳೊಡನೆ ಬೇರೆ ಬೇರೆ ತರದ ಕೈಕೆಲಸಗಳನ್ನು ಸೇರಿಸಿ ಅವುಗಳಲ್ಲಿ ಅವನಿಗೆ ಸ್ವಲ್ಪಾದರೂ ಜ್ಞಾನ ಮಾಡಿಕೊಟ್ಟು ಮುಂದೆ ಅದನ್ನೇ ಮುಖ್ಯವಾಗಿ ಕಲಿಸುವಂಥ ಶಾಲೆಗೆ ಹೋಗಹೇಳಿ ಅವನ ಉದರ ನಿರ್ವಾಹವು ನಡೆಯುವಂತೆ ಮಾಡಬೇಕೋ ಎಂಬದನ್ನು ಎಲ್ಲರೂ ಪೂರ್ಣ ವಿಚಾರಿಸಬೇಕು. ಯಾವನೊಬ್ಬ ಹುಡುಗನಿಗೆ ಕೈಕೆಲಸದಲ್ಲಿ ಮುಂಬುದ್ಧಿ ಇದ್ದರೆ, ತಾನು ತಯಾರಿಸಿದಂಥ ಅನೇಕ ಮಾದರಿಗಳನ್ನು ನೋಡಿ, ಸಂತೋಷಹೊಂದಿ ಇತರ ವಿಷಯಗಳಲ್ಲಿಯಾದರೂ ಬಹಳ ಪರಿಶ್ರಮಮಾಡತೊಡಗಿ ಭಾಷಾವಿಷಯ, ಅಂಕಗಣಿತ ಮುಂತಾದವುಗಳನ್ನು ಅವನು ಉತ್ತಮ ರೀತಿಯಿಂದ ಕಲಿಯಬಹುದು. ಕೈಕೆಲಸದಲ್ಲಿ ಅವಶ್ಯವಿದ್ದ ಅಚ್ಚುಕಟ್ಟುತನ, ಸ್ವಚ್ಛತೆ, ಸರಿಯಾಗಿ ಕೆಲಸ ಮಾಡುವ ಪರಿಪಾಠ, ಅಂದವಾಗಿ ತೋರುವಂತೆ ಮಾಡುವ

ಚಟ, ಬೀರೆ ಬೀರೆ ಆಯುಧಗಳಿಂದ ಕೊಟ್ಟ ಪದಾರ್ಥಗಳಲ್ಲಿ ಉಪಯುಕ್ತವಾದ ಸಾಮಾನುಗಳನ್ನು ಲಕ್ಷ್ಯಪೂರ್ವಕ ಮಾಡುವ ವ್ಯವಸಾಯ ಮುಂತಾದ ಸದ್ಗುಣಗಳು ಶಾಲೆಯ ಬೀರೆಕೆಲಸಗಳಲ್ಲಿಯಾದರೂ ಒಡೆದು ತೋರುವವು. ಹಸ್ತ ಶಿಕ್ಷಣದಲ್ಲಿ ಪ್ರತ್ಯಕ್ಷವಾಗಿ ತೋರುವ ಪರಿಣಾಮಕ್ಕಿಂತ ಅಪ್ರತ್ಯಕ್ಷವಾಗಿರುವ ಪರಿಣಾಮವು ಮೇಲಾದದ್ದು.

ಅನೇಕ ವಿಷಯಗಳ ಪರಸ್ಪರ ಸಂಬಂಧದಿಂದ ಮನರಂಜನೆಯೂ ಪರಸ್ಪರ ಸಹಾಯವೂ ಅನೇಕ ವಿಚಾರಗಳನ್ನು ಕೇವಲ ಶಾಬ್ದಿಕವಾಗಿ ವ್ಯಕ್ತಮಾಡುವದಲ್ಲದೆ ಮಾದರಿಗಳಲ್ಲಿ ಅವನ್ನು ಸರಿಯಾಗಿ ಪ್ರತಿರೂಪಿಸುವ ಸಾಮರ್ಥ್ಯವೂ ಉಂಟಾಗುವದು. ಯಾವದೊಂದು ಕೆಲಸಮಾಡುವದರಿಂದ ಉತ್ಸಾಹವು ಹೆಚ್ಚಾಗುತ್ತ ಹೋಗುತ್ತದೆ. ಇದು ಶಿಕ್ಷಣದಲ್ಲಿ ಮಹತ್ವದ ಸಂಗತಿಯಾಗಿರುವದು. ಇದರಿಂದುಂಟಾಗುವ ಸ್ವಾವಲಂಬನವು ಅತಿಶಯ ಮಹತ್ವದ್ದಾಗಿರುವದು. ಹಸ್ತಶಿಕ್ಷಣದಿಂದ ಚಿಕ್ಕಮಕ್ಕಳಲ್ಲಿ ಅವಲೋಕನಶಕ್ತಿಯೂ ಅವಧಾನವೂ ಪೂರ್ಣವೃದ್ಧಿ ಹೊಂದುವದರಿಂದ "ಪೆಸ್ಟಲಾಟ್ಸಿ" ಎಂಬ ಮಹನೀಯರ ಶಿಕ್ಷಣ ಸಂಬಂಧದ ಎಲ್ಲ ಬೇಡಿಕೆಗಳು ಇದರಿಂದಲೇ ಪರಿಪೂರ್ಣತೆಯನ್ನು ಹೊಂದುವವು. ಯಾವದೊಂದು ವಸ್ತುವನ್ನು ಸರಿಯಾಗಿ ಅನುಕರಿಸಿ ಅಚ್ಚುಕಟ್ಟಾಗಿ ತಯಾರಿಸುವದರಿಂದಲೇ ಕೈಕೆಲಸವು ಶಾಲೆಯಲ್ಲಿಯ ಬೇರೆ ವಿಷಯಗಳೊಡನೆ ಸೇರಿಸುವದಕ್ಕೆ ಯೋಗ್ಯವಾಗಿರುವದು. ಆಕಾರಬೋಧ, ಸೌಂದರ್ಯಜ್ಞಾನ, ವರ್ಣಪ್ರೀತಿ, ಒಪ್ಪುವಿಕೆಯ ಪರಿಜ್ಞಾನ, ಇವೇ ಮೊದಲಾದವು ಹಸ್ತ ಶಿಕ್ಷಣದ ಕೆಲಪರಿಣಾಮಗಳು.

ನಮ್ಮ ದೇಶದಲ್ಲಿ ಹೇಳಿಕೊಳ್ಳುವಂಥ ಔದ್ಯೋಗಿಕ ಶಿಕ್ಷಣದ ಸಂಸ್ಥೆಗಳು ಬಹಳ ಕಡಿಮೆ ಇರುವವು. ನಮ್ಮಲ್ಲಿ ದೊರೆಯಬಹುದಾದ ಎಲ್ಲ ಕಚ್ಚಾಮಾಲನ್ನು ಉಪಯೋಗಿಸುವಷ್ಟುಕಾರಖಾನೆಗಳು ಸಹ ಇರುವದಿಲ್ಲ. ಯಾವದೊಂದು ದೇಶದಲ್ಲಿಯ ಉದ್ಯೋಗ ವ್ಯಾಪಾರಗಳು ಹೆಚ್ಚಾಗಬೇ

ವಿದ್ಯಾಪ್ರಾತೆಯ ನೋಟೀಸುಗಳು.

ನೋಟೀಸು ನಂಬರು ೧.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶಪರೀಕ್ಷೆಯು.

೧. ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶಪರೀಕ್ಷೆಯು ೧೯೧೮ ಇಸವಿಯ ದಿಶಂಬರ ತಿಂಗಳ ೪ನೇ ತಾರೀಖು ಬುಧವಾರ ದಿವಸ ೧೧½ ಗಂಟಿಗೆ ಸರಿಯಾಗಿ ಪ್ರಾರಂಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂಗ ಕಾಲೇಜದಲ್ಲಿ ಪರೀಕ್ಷೆಗೆ ಹಾಜರ ಇರಬೇಕು. ಉಮೇದವಾರರ ಹೆಸರು ಹಚ್ಚಿಕೊಳ್ಳುವ ಕೆಲಸವು ದಿಶಂಬರ ೨ನೇ ತಾರೀಖು ಸೋಮವಾರ ೧೧½ ಗಂಟಿಗೆ ಪ್ರಾರಂಭವಾಗುವದು. ಆಸಮಯಕ್ಕೆ ಉಮೇದವಾರರು ಕೆಳಗೆ ಕಾಣಿಸಿದ ಮೂರು ಕಾಗದಗಳನ್ನು ಹೆಸರು ಹಚ್ಚಿಕೊಳ್ಳುವವರ ಕಡೆಗೆ ಕೊಡಲಿಕ್ಕೆ ಬೇಕು.

(೧) ಮುಲ್ಕೀ ಅಥವಾ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೇಟು.

(೨) ಒಳ್ಳೇ ನಡತೆಯ ಬಗ್ಗೆ ಮತ್ತು ತಾವು ಯಾವ ಜಿಲ್ಲೆಗೆ ಹೆಸರು ಹಚ್ಚಿಸತಕ್ಕವರೋ ಆ ಜಿಲ್ಲೆಯಲ್ಲಿ ಕಾಯಂ ವಾಸವುಳ್ಳವರಾಗಿ ಇರುವರೆಂಬ ಬಗ್ಗೆ (ಈ ನೋಟೀಸಿನ ಕೊನೆಯಲ್ಲಿ ಕೊಟ್ಟ ನಮೂನೆಯಂತೆ) ತಾವು ಕಲಿತ ಶಾಲೆಯ ಹೆಡ್‌ಮಾಸ್ತರರ ಸರಟಿಫಿಕೇಟು.

(೩) ಜಾಮೀನ ಪತ್ರ:—ಈ ನೋಟೀಸಿನ ಕೆಳಗೆ ಕೊಟ್ಟ ನಮೂನೆಯಂತೆ ಸಾದಾ ಕಾಗದದ ಮೇಲೆ ಬರೆಯಿಸಿ ಜಾಮೀನದಾರರ ಸಹಿ ಮಾಡಿಸಿ ಅದರ ಕಡೆಯಲ್ಲಿ ಕೊಟ್ಟಿರುವ ಗ್ರಾಮಸ್ಥರ ದಾಖಲೆ ಸಹಿತ ತಯಾರ ಮಾಡಿದ್ದು.

ಮೇಲ್ಕಾಣಿಸಿದ ಮೂರು ದಾಖಲೆಗಳನ್ನು ಹಾಜರ ಮಾಡಿದ ಹೊರತು ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

೨. ಈ ಪರೀಕ್ಷೆಯು ವ್ಹರ್ನ್ಯಾಕ್ಯುಲರ ಫಾಯನಲ್ ಅಂದರೆ ದೇಶಭಾಷೆಯ ೪ನೆಯ ಇಯತ್ತೆಯ ಎಲ್ಲ ವಿಷಯಗಳಲ್ಲಿ ಆಗುವದು. ಚಲೋ ಅಕ್ಷರ ಬರೆಯೋಣ, ಚುದ ಬರಹ, ವಿರಾಮಚಿಹ್ನಗಳ ಉಪಯೋಗವನ್ನು ಸರಿಯಾಗಿ ಮಾಡೋಣ, ಅಚ್ಚು

ಕಟ್ಟುತನವಿರೋಣ, ಈ ಗುಣಗಳು ಕಂಡುಬರುವ ಉಮೇದವಾರರನ್ನು ವಿಶೇಷವಾಗಿ ಆರಿಸಲಾಗುವದು.

೩. ಉಮೇದವಾರರು ದಿಶಂಬರ ೧೫ನೇ ತಾರೀಖಿಗೆ ೧೩ ವರ್ಷ ಸಂಪೂರ್ಣ ಆದವರೂ ೨೨ ವರ್ಷ ಮಿಕ್ಕದವರೂ ಇರಲಿಕ್ಕೆಬೇಕು.

ವಿಶೇಷಸೂಚನೆ:—ಧಾರವಾಡ ಊರಲ್ಲಿ ಅಥವಾ ಕಾಲೇಜದಲ್ಲಿ ಪ್ಲೇಗಬೇನೆಯ ಲಕ್ಷಣಗಳು ತೋರಲಾಗಿ ಕಾಲೇಜದ ವಿದ್ಯಾರ್ಥಿಗಳು ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಳ್ಳಬೇಕೆಂದು ಕಾಲೇಜದ ಡಾಕ್ಟರರಾದ ಸಿವ್ಹಿಲ್‌ಸರ್ಜನ್ ಸಾಹೇಬರವರು ಅಭಿಪ್ರಾಯ ಪಟ್ಟರೆ, ಅದರಂತೆ ಕಾಲೇಜಿನ ವಿದ್ಯಾರ್ಥಿಗಳು ಮೈಲಿಯನ್ನು ಚುಚ್ಚಿಸಿಕೊಳ್ಳಲಿಕ್ಕೆಬೇಕು.

೪. ಉಮೇದವಾರರು ಶರೀರದಿಂದ ನಿರ್ವ್ಯಂಗರು ಅಂದರೆ ವಿಶೇಷವಾಗಿ ಕಣ್ಣು, ಕಿವಿ, ಮತ್ತು ಬಾಯಿ ಈ ಅಂಗಗಳಲ್ಲಿ ನ್ಯೂನತೆಗಳಿಲ್ಲದವರು, ೫ ಫೂಟಗಿಂತ ಹೆಚ್ಚು ಎತ್ತರವಿದ್ದವರು, ಆರಿಸಲ್ಪಡುವರು.

೫. ಉಮೇದವಾರರು ತಾವು ಕಾಯಮಾಗಿ ಇರುವ ಜಿಲ್ಲೆಗೇ ಹೆಸರು ಹಚ್ಚಿಸತಕ್ಕದ್ದು. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾನದ ಡಿ. ಎ. ಇನ್‌ಸ್ಪೆಕ್ಟರರವರ ಪರವಾನಗಿಯನ್ನು ತಂದರೇ ಅವರ ಹೆಸರನ್ನು ಹಚ್ಚಿಕೊಳ್ಳಲಾಗುವದು.

೬. ಮೈ. ಫಾ. ಪರೀಕ್ಷೆಯಲ್ಲಿ ಸೂರಕ್ಕೆ ೪೫ ರಂತೆ ಗುಣಗಳನ್ನು ದೊರಕಿಸಿದ ಉಮೇದವಾರರು ಮಾತ್ರ ತಮ್ಮ ತಮ್ಮ ಜಿಲ್ಲೆಯ ಡಿ. ಎ. ಇ. ಸಾ. ರವರ ಮುಖಾಂತರ ಅರ್ಜಿಗಳನ್ನು ಕಳಿಸಬೇಕು. ಪರಭಾರೆ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಮುಸಲ್ಮಾನ ಕೀಳು ಮುಂತಾದ ಹಿಂದುಳಿದ ಜಾತಿಯವರಿಗೂ ಕಂಟೀನ್ಯೂಏಶನ್ ಅಥವಾ ನಾರ್ಮಲ್‌ಕ್ಲಾಸಿನಲ್ಲಿ ಪಾಸಾದ ಮಾಸ್ತರ ಜನರಿಗೂ ಈ ಗುಣಗಳ ನಿಯಮವು ಹತ್ತುವದಿಲ್ಲ.

೭. ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ತೊಡವ ಹಾಗು ಹಾಸುದ ಅರಿವೆ ಮುಂತಾದ್ದನ್ನು ತರಲಿಕ್ಕೆಬೇಕು. ಪ್ರತಿ ಒಬ್ಬನಿಗೆ ಮೇಲಿನ ಅಂಗಿಗಳು ಅಂದರೆ ಕೋಟುಗಳು ೨, ಒಳಗಿನ ಪೈರಣಗಳು ಅಥವಾ ಬಗಲಬಂಡಿಗಳು ನಾಲ್ಕು ಅವುಗಳಲ್ಲಿ ಒಂದು ಉಣ್ಣಿಯದು ಇರತಕ್ಕದ್ದು] ೧ ಹಚ್ಚಡ, ೧ ಹೊದ್ದುಕೊಳ್ಳುವ ಕಂಬಳಿ ಅಥವಾ ಬ್ಲ್ಯಾಂಕೇಟು, ಹಾಗು ಪುಸ್ತಕ ಮುಂತಾದ್ದನ್ನು ಇಡಲಿಕ್ಕೆ ಒಂದು ತಗಡಿನ ಟ್ರಂಕು ಇರತಕ್ಕದ್ದು.

೮. ಪ್ರತಿಯೊಬ್ಬ ಉಮೇದವಾರನ ಬಳಿಯಲ್ಲಿ ಜಿನ್ ಇಯತ್ತೈಯಿಂದ. ಏನೇ ಇಯತ್ತೈಯವರೆಗೆ ಬೇಕಾಗುವ ಎಲ್ಲ ಹೊಸ ಕ್ರಮಿಕ ಪುಸ್ತಕಗಳೂ, ಏನೇ ಇಪ್ಪು ತ್ತೈಯ ಇತರ ಎಲ್ಲ ಪುಸ್ತಕಗಳೂ ಇರಲಿಕ್ಕೆಬೇಕು.

೯. ಮೇಲೆ ಬರೆದ ಪುಸ್ತಕಗಳಲ್ಲದೆ ಬೇರೆ ಅವಶ್ಯಕ ಪುಸ್ತಕಗಳನ್ನೂ ಚಿತ್ರಕಲೆ ಮುಂತಾದವುಗಳ ಸಾಮಾನುಗಳನ್ನೂ ಕೊಂಡುಕೊಳ್ಳಲಿಕ್ಕೆ ೧೦ ರೂಪಾಯಿಗಳು ಬೇಕಾ ಗುವವು. ಮತ್ತು ಬೋರ್ಡಿಂಗಿನ ಅಡ್ವಾನ್ಸಿನ ಸಂಬಂಧದಿಂದ ೧೦ ರೂಪಾಯಿಗಳು ಬೇಕಾ ಗುವವು. ಆದಕಾರಣ ಪ್ರತಿಯೊಬ್ಬ ಉಮೇದವಾರನು ೨೦ ರೂಪಾಯಿಗಳನ್ನು ಸಂಗಡ ತರಲಿಕ್ಕೆಬೇಕು.

ಪ್ರವೇಶಪರೀಕ್ಷೆಯ ಉಮೇದವಾರರು ಸಂಗಡ ತುಂಬಿ ತರತಕ್ಕ

ಜಾಮೀನ ಪತ್ರದ ನಮೂನೆಯು.

—+೫೫+—

ನಾವು ೧. (ಇಲ್ಲಿ ೧ನೇ ಜಾಮೀನದಾರನ ಹೆಸರು ಬರೆಯುವದು.)

೨. (ಇಲ್ಲಿ ೨ ನೇ ಜಾಮೀನದಾರನ ಹೆಸರು ಬರೆಯುವದು.)

ಈ ಬರಹದ ಮೂಲಕವಾಗಿ—(ಇಲ್ಲಿ ಉಮೇದವಾರನ ಹೆಸರು ಬರೆಯುವದು) ಎಂಬವನಿಗೆ ಜಾಮೀನ ಆಗಿ ಬರಕೊಡುವದೇನಂದರೆ:—ಸದರೀ—(ಇಲ್ಲಿ ಅದೇ ಉಮೇ ದವಾರನ ಹೆಸರು ಬರೆಯುವದು)—ಇವನು ಧಾರವಾಡ ಟ್ರೇನಿಂಗ ಕಾಲೇಜದ ಕೋಡಿಸ ನಿಯಮಗಳ ಪ್ರಕಾರ ನಡೆಯುವದಕ್ಕೆ ತಪ್ಪಿದರೆ ನಾವು ಇಬ್ಬರೂ ಕೂಡಿ ಅಥವಾ ನಮ್ಮ ಲ್ಲಿ ಪ್ರತಿ ಒಬ್ಬರು ಪ್ರತಪ್ರತ್ಯೇಕವಾಗಿ ಬೇರೊಬ್ಬನ ಉಸ್ತೂರು ಹೇಳದೆ ಸರಕಾರಕ್ಕೆ ೫೦೦ (ಮುನ್ನೂರು) ರೂಪಾಯಿಗಳನ್ನು ಕೊಡುವದಕ್ಕೆ ಈ ಲೇಖದಿಂದ ಒಪ್ಪಿಕೊಳ್ಳು ತ್ತೇವೆ.

ತಾ॥ ಮಾಹೆ ಸನ್.

ಸಹಿ. ೧ (ಇಲ್ಲಿ ೧ನೇ ಜಾಮೀನದಾರನ ಸಹಿ).

೨ (ಇಲ್ಲಿ ೨ ನೇ ಜಾಮೀನದಾರನ ಸಹಿ).

ದಾಖಲೆ ಕೊಡುವದೇನಂದರೆ:—ಮೇಲೆ ಸಹಿ ಮಾಡಿದ ಇಬ್ಬರು ಜಾಮೀನ ದಾರರಲ್ಲಿ ಪ್ರತಿ ಒಬ್ಬರು ಬೇರೆ ಬೇರೆಯಾಗಿ (ಇಲ್ಲಿ ಉಮೇದವಾರನ ಪೂರ್ಣ ಹೆಸರು ಬರೆಯುವದು) ಇವನಿಗೆ ೫೦೦ (ಮುನ್ನೂರು) ರೂಪಾಯಿಗೆ ಜಾಮೀನು ಆಗುವದಕ್ಕೆ ಲಾಯಕ್ಕು ಇದ್ದು ಕಬೂಲ ಇದ್ದಾರೆ ತಾ. ಮಾಹೆ ಸನ್

೧. (ಇಲ್ಲಿ ಕೆಲಸ ನೋಡುವ ಗೌಡನ ಸಹಿ).

೨. (ಇಲ್ಲಿ ಕೆಲಸ ನೋಡುವ ಕುಲಕರ್ಣಿಯ ಸಹಿ).

ಒಳ್ಳೇ ನಡತೆಯ ಮತ್ತು ವಾಸಸ್ಥಳದ ಬಗ್ಗೆ ಸರ್ಟಿಫಿಕೇಟು.

ನಾನು (ಇಲ್ಲಿ ಹೆಡ್ ಮಾಸ್ತರನ ಪೂರ್ಣ ಹೆಸರು ಬರೆಯುವದು).

ಶಾಳಾ..... ತಾಲೂಕ .....ಜಿಲ್ಲಾ ..... ಸರ್ಟಿಫಿಕೇಟು ಕೊಡುವದೇನಂದರೆ:—(ಇಲ್ಲಿ ಉಮೇದವಾರನ ಪೂರ್ಣ ಹೆಸರು ಬರೆಯುವದು)—ಈತನು ಒಳ್ಳೇ ನಡತೆಯವನಿದ್ದು ..... ಜಿಲ್ಲೆಯಲ್ಲಿದ್ದ ..... ಎಂಬ ಊರು ಅವನ ಕಾಯಮನಾದ ವಾಸಸ್ಥಳವಿರುತ್ತದೆ.

ಶಾಳಾ. ತಾ. ಜಿಲ್ಲೆ.

ತಾರೀಖು. ಮೂಹೆ ಸನ್.

ಹೆಡ್‌ಮಾಸ್ತರನ ಸಹಿ.

ನೋಟೀಸು ನಂಬರು ೨

ಗಿಗಿನೇ ಇಸವಿಯ ಏಪ್ರಿಲತಿಂಗಳಲ್ಲಿ ಆಗುವ ವ್ಹ. ಫಾ ಪರೀಕ್ಷೆಗೆ ಗಿಗಿಲನೇ ಇಸವಿಯ ಸಪಟಂಬರ ತಿಂಗಳಲ್ಲಿ ಆಗತಕ್ಕ ಪರೀಕ್ಷೆಯಲ್ಲಿ ನಪಾಸಾದ ಉಮೇದವಾರರಿಗಷ್ಟೇ ಕೂಡಲಿಕ್ಕೆ ಬರತ್ತದೆಂಬ ತಪ್ಪುತಿಳುವಳಿಕೆಯು ಅನೇಕರಿಗೆ ಆಗಿರುತ್ತದೆಂಬ ಸಂಗತಿಯು ಕೆಳಗೆ ಸಹಿಮಾಡಿದವರಿಗೆ ಕಂಡುಬಂದಿರುತ್ತದೆ.

ವಿದ್ಯಾಖಾತೆಯ ಅನುಕೂಲತೆಯಗೋಸ್ಕರ ಸದ್ಯಕ್ಕೆ ಸಪಟಂಬರ ತಿಂಗಳಲ್ಲಿ ನಡೆಯುವ ವ್ಹ. ಫಾ. ಪರೀಕ್ಷೆಯು ಇನ್ನು ಮುಂದೆ ಮಾರ್ಚಿ ಅಥವಾ ಏಪ್ರಿಲ ತಿಂಗಳಲ್ಲಿ (ಈ ಎರಡು ತಿಂಗಳಲ್ಲಿ ಯಾವದಾದರೊಂದು ಮುಂದೆ ಗೊತ್ತುಮಾಡಲ್ಪಡುವದು) ಕೆಗೆದುಕೊಳ್ಳಬೇಕೆಂದು ಗೊತ್ತುಮಾಡಲ್ಪಟ್ಟಿದೆ. ಸನ್‌ಗಿಗಿನೇ ಮಾರ್ಚ ಅಥವಾ ಏಪ್ರಿಲ ತಿಂಗಳಲ್ಲಿ ಆಗತಕ್ಕ ಸಪ್ಲಿಮೆಂಟರಿ ವ್ಹ. ಫಾ. ಪರೀಕ್ಷೆಗೆ ಕೂಡಲಿಕ್ಕೆ ಪ್ರತಿವರ್ಷದಂತೆ ನಿಯಮಗಳಿಗನುಸಾರವಾಗಿ ಎಲ್ಲ ಉಮೇದವಾರರೂ ಪಾತ್ರರಿರುವರು.

Office of the Edll. Inspector S. D. K. S. Hungund
Dharwar 8 August 1918 Edll. Inspector, S. D.

ಧಾರವಾಡ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ದೊರೆಯುವ ಮಹಮ್ಮಡನ್ ಲರ್ನರೀ ಫಂಡ ಸ್ಕಾಲರಶಿಪ್ಪಿನ ಬಗ್ಗೆ.

ನೋಟೀಸು ನಂಬರು ೩.

ಮೈ। ಎ. ಇ. ಸಾ. ಜಾ. ರವರ ಹುಕುಂ ನಂಬರ ೩೫೬೬ / ತಳ - ೬ - ೧೮ ನೇ ಪ್ರಕಾರ ತಿಳಿಸುವದೇನಂದರೆ— ೧೯೧೯ನೇ ಇಸವಿಯ ಜನವರಿ ತಿಂಗಳಿಂದ ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ದೊರೆಯತಕ್ಕ ಮಹಮ್ಮಡನ್ ಲರ್ನರೀಫಂಡ ಸ್ಕಾಲರಶಿಪ್ ಪರೀಕ್ಷೆಯು ಈ ಕಾಲೇಜಿನಲ್ಲಿ ಗುರುವಾರ ತಾ. ೧೩ ನೇ ಕ್ಟೋಬರ ೧೯೧೮ನೇ ಇಸವಿಯ ದಿವಸ ಪ್ರಾರಂಭವಾಗುವದು.

ಟ್ರೇ. ಕಾ. ಫಾರಮೆನ್ ಧಾರವಾಡ.
ತಾ॥ ೧೦ - ೯ - ೧೯೧೮ } R. S Kulkarni
ಪ್ರಿನ್ಸಿಪಾಲ.

ನೋಟೀಸು ನಂಬರು ೪.

ವಿದ್ಯಾಖಾತೆಯ ಹುಕುಂ ನಂಬರ ೧೧೪೫ / ೧೪೭೨ನೇ ಪ್ರಕಾರ ತಿಳಿಸುವದೇನಂ ನೆ:— ಮಿ. ಪಿ. ಎಸ್. ಚಂದಾವರಕರ ಹೆಡ್‌ಮಾಸ್ತರ ಗವ್ಹರ್ನಮೆಂಟ ಹಾಯು ಸ್ಕೂಲ ಧಾರವಾಡ ಇವರಿಂದ ಭಾಷಾಂತರಿಸಲ್ಪಟ್ಟ ಭೂಮಿತಿ ಭಾಗ. ೧. ಈ ಪುಸ್ತಕವು ನ್ನಡ ಪ್ರಾಥಮಿಕ ಶಾಲೆಗಳ 'ಟಿಕ್ಸಟ್' ಪುಸ್ತಕವಾಗಿಯೂ, ಭೂಮಿತಿ ಭಾಗ ೨. ಪುಸ್ತಕವು ಕನ್ನಡ ಟ್ರೇನಿಂಗ ಕಾಲೇಜುಗಳ 'ಟಿಕ್ಸಟ್' ಪುಸ್ತಕವಾಗಿಯೂ ಮಂಜೂರು ಮಾಡಲ್ಪಟ್ಟಿರುವವು.

Office of the
Educational Inspector, S. D.
Dharwar, 4th July, 1918. } H. K. Gokhale
For Edubational
Inspector; S. D.

ನೋಟೀಸು–ನಂಬರು ೫.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿದ್ದು

ನಂಬರು.	ಪುಸ್ತಕಗಳ ಹೆಸರು.	ಭಾಷೆ.	ಯಾತರ ಬಗ್ಗೆ ಮಂಜೂರಾಗಿವೆ.	ಬೆಲೆ.	ಶರ
೧	'ಹಲಾತೆ ಹಾರಮಿನ್ ಪಾರಿಫೇನ್'— ಹಾಜೀ ಮಹಮ್ಮದ ಮೊಹನುದ್ದೀನ್ ಇಂಜನೀಯರ ಮುರಾದಾಬಾದ ಯು. ಪ್ರಾಂತ ಇವರು ಬರೆದದ್ದು.	ಉರ್ದು	ಉರ್ದು ಪ್ರಾಥಮಿಕ ಮತ್ತು ಉರ್ದು ಆಂಗ್ಲೋ ಶಾಲೆಗಳ ಇನಾಮಿಗಾಗಿಯೂ, ಲಾಯಬ್ರರಿಗಾಗಿಯೂ.	೯–೦–೦ ೦–೪–೦	ನಕಾಶ ಸಹಿ ,, ಇ
೨	'ಫಿಲಾಸಫಿ ತಾಲೀಮ್' ಅಥವಾ (The science of Education.)—ಮೌಲ್ವಿ ಖ್ವಾಜಾ ಗುಲಾಮುಲ್ ಹುಸೇನ ಇವರಿಂದ ರಚಿತವಾದದ್ದು. **ಪತ್ತೆ:**— ಆನ. ಸೆಕ್ರೆಟರಿ ಅಂಜುಮನ್ ತಾರೀಖೀ ಉರ್ದು, ಔರಂಗಾಬಾದ, ಡೆಕ್ಕನ್.	,,	ಉರ್ದು ಪ್ರಾಥಮಿಕ ಶಾಲೆಗಳ ಮತ್ತು ಟ್ರೇನಿಂಗ ಇನ್‌ಸ್ಟಿಟ್ಯೂಶನ್‌ಗಳ ಲಾಯಬ್ರರಿಗಾಗಿಯೂ, ಇನಾಮಿಗಾಗಿಯೂ.	೩–೦–೦	
೩	"ಮಬಾದೆ ನಾಯಿನ್ಸ್'—ಮುಫಿಹಕ್ ಹುಶೇನಖಾನ ಬಿ. ಎ ಇವರಿಂದ ರಚಿತವಾದದ್ದು. **ಪತ್ತೆ:**— ಆನ ಸೆಕ್ರೆಟರಿ ಅಂಜುಮನ್ ತಾರೀಖೀ ಉರ್ದು ಔರಂಗಾಬಾದ, ಡೆಕ್ಕನ್.	,,	ಉರ್ದು ಪ್ರಾಥಮಿಕ ಶಾಲೆಗಳ ಇನಾಮಿಗಾಗಿಯೂ, ಲಾಯಬ್ರರಿಗಾಗಿಯೂ.	..	
೪	'ರಿಸಾಲೆ ಜಬಾನದಾನಿ'— ಖ್ವಾಜಿ ಮಹಮ್ಮದ ಅಬ್ದುಲ್ ರಫ್ ಇಸರತ ಲಖನೌ, ಇವರಿಂದ ರಚಿತವಾದದ್ದು.	,,	,, ,, ,,	೦–೪..೦	
೫	'ಶಾಸ್ತ್ರೀಯ ಪಾಠಗಳು'— ಎನ್. ವ್ಹಿ. ಕುರಡಿ ಅಸಿಸ್ಟಾಂಟ ಮಾಸ್ತರ ಪ್ರಾಯೋಗಿಕ ಸ್ಕೂಲ ಟ್ರೇನಿಂಗ ಕಾಲೇಜ ಧಾರವಾಡ	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳ ಮತ್ತು ಟ್ರೇನಿಂಗ ಕಾಲೇಜುಗಳ ಉಪಯೋಗಕ್ಕಾಗಿ.	೦–೨–೬	
೬	ಹಬೂ ಬುಲ್ ಕವಾಯಿದೆ ಉರ್ದು'— ಮಹಮ್ಮದ ಹಬೀಬುಲ್ಲಾ ಇಸಲಾಮಿಯಾ ಸ್ಕೂಲ ಮುಂಬಯಿ.	ಉರ್ದು	ಉರ್ದು ಶಾಲೆಗಳ ದೆಸೆಯಿಂದ.	೦–೦–೯	
೭	'ಸರಗುಜಸ್ತ'— ಜೋಹರ ಬೇಗಮ್ ಫೈಜಿ ಫುಜಿ, ಇವರು ರಚಿಸಿದ್ದು.	,,	ಉರ್ದು ಶಾಲೆಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ.	...	

Office of the
Director of Public Instruction

ಕ್ರಮ ಸಂಖ್ಯೆ	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಭಾಷೆ	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿತು.	ಮಂಜೂರು ಮಾಡಿದ ಹುಕುಂ ನಂಬರು.
೧	ಪ್ಲೇಗು ಮತ್ತು ಅದರ ಪ್ರತಿಬಂಧನ.	ಮಿ. ಎಮ್. ಗುರುರಾವ ಬಿನೇವರ್ಗ ಸಬ್ ಅಸಿ|| ಸರ್ಜನ್ ತಾ ತರೀಕೇರಿ, ಜಿಲ್ಲಾ ಕಡೂರ,	ಕನ್ನಡ	ಪ್ರಾಥಮಿಕ ಮತ್ತು ಆಂಗ್ಲೋವರ್ನ್ಯಾಕ್ಯುಲರ ಶಾಲೆಗಳ ಇನಾಮಿಗಾಗಿ,	ಮೆ. ಎ. ಇ. ಸಾ|| ರ ಹುಕುಂ ೩೦೫೪ / ೬-೭-೧೪
೨	ಚಿತ್ತೂರ ಮುತ್ತಿಗೆ.	ಆನ. ಸೆಕ್ರೆಟರಿ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.	,,	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ.	,, ೩೯೯೧ / ೧೫-೭-೧೪
೩	ಬಾಲಭಾರತಮ್.	ಮಿ. ರಾಮಸ್ವಾಮಿ ಅಯ್ಯಂಗಾರ ಹೆಡ್ ಮಾಸ್ತರ ಆಂಗ್ಲೋ ವ್ಹ. ಸ್ಕೂಲ ಮಾಗಡಿ. ಜಿಲ್ಲಾ ಬೆಂಗಳೂರ.	,,	ಪ್ರಾಥಮಿಕ ಮತ್ತು ಸೆಕಂಡರಿ ಸ್ಕೂಲುಗಳ ಇನಾಮಿಗಾಗಿಯೂ ಲಾಯಬ್ರರಿಗಾಗಿಯೂ.	,, ೩೩೩೩ / ೧೩-೭-೧೪
೪	ಕಣಿಗಾಲ ರಾಮಸ್ವಾಮಿ ಇವರ ಚರಿತ್ರೆ.	ಮಿ. ಬಿ. ಪುಟ್ಟಣ್ಣಾ ರಿಟಾಯರ್ಡ ಅಮಲದಾರ, ಸುಣಕಲ್‌ಪೇಟ ಬೆಂಗಳೂರ.	,,	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ.	,, ೪೨೪೭ / ೩-೮-೧೪
೫	ಮಲೇರಿಯಾ ಜ್ವರ ಮತ್ತು ಅದರ ಪ್ರತಿಬಂಧನ	ಮಿ. ಎಮ್. ಗುರುರಾವ ಬಿನೇ ವರ್ಗ ಸಬ್. ಆಸಿ. ಸರ್ಜನ್ ತಾಲೂಕು ತರೀಕೇರಿ, ಜಿಲ್ಲಾ ಕಡೂರ.	,,	ಪ್ರಾಥಮಿಕ ಮತ್ತು ಆಂಗ್ಲೋ ವರ್ನ್ಯಾಕ್ಯುಲರ ಶಾಲೆಗಳ ಲಾಯಬ್ರರಿಗಾಗಿ.	,, ೪೯೯೦ / ೬-೮-೧೪
೬	ರುಕ್ಮಾಂಗದ ನಾಟಕಮ್,	ಮಿ. ಬಿ. ಸಂಪನಾಥ ಅಯ್ಯಂಗಾರ ಹೆ. ಮಾಸ್ತರ ಆಂಗ್ಲೋ ವ್ಹ, ಸ್ಕೂಲ, ಚಿಕ್ಕಮಗಲೂರ, ಜಿಲ್ಲಾ ಕಡ್ಲೂರ, ಮೈಸೂರ ಪ್ರಾಂತ,	,,	ಪ್ರಾಥಮಿಕ ಮತ್ತು ಸೇಕಂಡರೀ ಸ್ಕೂಲುಗಳ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ.	,, ೩೧೦೩ / ೧-೭-೧೪
೭	ಧಾರವಾಡ ಜಿಲ್ಲೆಯ ಮತ್ತು ಮುಂಬಯಿ ಕರ್ನಾಟಕದ ಸಾಮಾನ್ಯ ಮಾಹಿತಿಯ ಭೂಗೋಲವು. ಬೆಲೆ—೩ ಅಣೆ.	ಮಿ. ಅಯ್, ಪಿ. ನಿಂಬಾಳಕರ, ಸ್ಕೂಲ ಮಾಸ್ತರ ನರೇಂದ್ರ ಜಿಲ್ಲಾ ಧಾರವಾಡ.	,,	ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ	,, ೩೩೪೧ / ೧೪-೭-೧೪
೮	ವಿಶ್ವ.	ಮಿ. ಜಿ. ವ್ಹಿ. ಗೋತೆ.	,,	ಪ್ರಾಥಮಿಕ ಮತ್ತು ಸೆಕಂಡರೀ ಸ್ಕೂಲುಗಳ ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ	,, ೩೦೩೮ / ೬-೭-೧೪

Office of the
Edl. Inspector, S. D.
Dharwar 6th July 1918.

K. S. Hugund,
Edl. Inspector, S. D

ನೋಟೀಸು ನಂಬರು ೭.

ಮೈ. ಎಜ್ಯೂ. ಇನ. ನಾ. ರವರ ಹುಕುಂ ನಂಬರ ೬೬೩೦ ತಿ-ಲ-೧೮, ನೇ ಪ್ರಕಾ ತಿಳಿಸುವದೇನಂದರೆ:— ಎಂ. ಸಿ. ಸೋ. ಕುಲಕರ್ಣಿ ಇವರು ಬರೆದ "ಭೂಮಂಡ ಜ್ಯೋಥಿನಿ" ೩ನೇಯ ಅವೃತ್ತಿ (ಮುದ್ರಿಸಲ್ಪಡುತ್ತಿರುವದು.) ಈ ಪುಸ್ತಕದ ಬೆಲೆಯ ಕೆಳಗೆ ಬರೆದಂತೆ ಹೆಚ್ಚಿಸಲ್ಪಟ್ಟಿರುವದು.

ಮೊದಲಿನ ಬೆಲೆ — ೦-೫-೬; ಹೆಚ್ಚಿಸಿದ ಬೆಲೆ: — ೦-೮-೦.

ಟ್ರೇ. ಕಾ. ಧಾರವಾಡ
ತಾ॥ ೧೯-೯-೧೯೧೮

R. S. KULKARNI,
ಪ್ರಿನ್ಸಿಪಾಲ.

ಪುಸ್ತಕ ವಿಮರ್ಶೆ.

ಪ್ರಭಾತ: — ಪದ್ಯರೂಪಿಯಾದ ಈ ಮಾಸಿಕ ಪುಸ್ತಕದ ಮೊದಲನೆಯ ಅಂಕ ಅದರ ಸಂಪಾದಕರಾದ ಶ್ರೀಯುತ ಯಶವಂತರಾವ ಜಠಾರ ಇವರಿಂದ ನಮ್ಮ ಕಡೆ ಅಭಿಪ್ರಾಯಕ್ಕಾಗಿ ಬಂದಿರುವದು.

ವಾಙ್ಮಯದಲ್ಲಿ ಕವಿತೆಗಳು ಕವಿಯ ಕಲ್ಪನಾಚಾತುರ್ಯವನ್ನು ತೋರಿಸಿ, ಸು ಕ್ಷಿತಜನರಿಗೆ ಮನರಂಜನೆಯನ್ನೂ ಬೋಧವನ್ನೂ ಉಂಟುಮಾಡುತ್ತವೆ. ಸದ್ಯದ ಕಾಲ ಶ್ರಮಕ್ಕೆ ತೀವ್ರವಾದ ಸಾಂಪತ್ತಿಕ ಪ್ರತಿಫಲವನ್ನು ಅಪೇಕ್ಷಿಸುವಂಥದಾದ್ದರಿಂದ ಸ ಫಲದ ಗದ್ಯಗ್ರಂಥಗಳಿಗೇ ಇದು ಅನುಕೂಲವಾದದ್ದಾಗಿದೆ. ಆದರೂ ಇಂಥಕ ದಲ್ಲಿ ಈ ಪ್ರಭಾತದ ಪ್ರಕಾಶಕರು ಗುಪ್ತವಾಗಿ ಹುದುಗಿಕೊಂಡಂಥ ಆಧುನಿಕ ಕವಿಗ ತಮ್ಮ ಪ್ರಬಂಧಗಳನ್ನು ಜನರ ಮುಂದೆ ಇಟ್ಟು ಆನಂದಪಡಲಿಕ್ಕೂ ತನ್ಮೂಲಕ ಕೀ ಯನ್ನು ಪಡೆಯಲಿಕ್ಕೂ, ನೂತನಕವಿಗಳ ಮಾರ್ಗದರ್ಶನಕ್ಕೂ ಅನುಕೂಲವಾದ ಮತ್ತು ಇವರೀರ್ವರ ಅನುಭವದಿಂದ ಎಲ್ಲರೂ ಆನಂದಪಡತಕ್ಕಂಥ ಸುಯೋಗವ ತಂದುಕೊಟ್ಟದ್ದಕ್ಕಾಗಿ ಯಶವಂತರಾಯರು ಕರ್ನಾಟಕದ ಜನರನ್ನು ಒಂದುಬಗೆಯಿ ಉಪಕೃತರನ್ನಾಗಿ ಮಾಡಿರುವರೆಂದು ಹೇಳಲು ಅಡ್ಡಿಯಿಲ್ಲ. ಈ ಸ್ತುತ್ಯಕಾರ್ಯಕ್ಕ ನಾವು ಇವರನ್ನು ಅಭಿನಂದಿಸದೆ ಇರಲಾರೆವು.

ಈ ಪ್ರಭಾತವು ಸರ್ವರ ಪ್ರೀತಿಗೆ ಪಾತ್ರವಾಗಿ ದಿನದಿನಕ್ಕೆ ವೃದ್ಧಿಂಗತವಾಗಿ ಇ ರಿಂದ ಅನೇಕ ಮಹತ್ಕಾರ್ಯಗಳು ಜರುಗಲೆಂದು ನಾವು ಹಾರಿಸುವೆವು. ಇದು ಧಾರವಾ ದಲ್ಲಿ ಪ್ರಕಟವಾಗುತ್ತಿದ್ದು ಇದರ ವಾರ್ಷಿಕ ವರ್ಗಣಿಯು ೩ರೂಪಾಯಿ ಇರುವದು.

R. S. Kulkarni.
ವ್ಯವಸ್ಥಾಪಕರ ಶಾಲಾಪತ್ರಕ.

ಶಾಲಾಪತ್ರಕ.

ವರ್ಷ ೫೪ | ನವಂಬರ ಡಿಸೆಂಬರ ೧೯೧೮ | ಸಂಚಿಕೆ. ೧೨೧೩

ಯುದ್ಧದ ಸಮಾಪ್ತಿಯ ವೃತ್ತಾಂತವು.

ಪಶ್ಚಿಮರಣಕ್ಷೇತ್ರ:— ಅಕ್ಟೋಬರದ ಮೊದಲಿನವಾರದಲ್ಲಿ ಬೆಲ್ಜಿಯಮದ ರಾಜನಾದ ಆಲ್ಬರ್ಟ ಮತ್ತು ಸೇನಾಪತಿಯಾದ ದಿಗೂತ ಇವರ ಕೈಕೆಳಗೆ ಬೆಲ್ಜಿಯನ್ ಮತ್ತು ಇಂಗ್ಲಿಷ್ ಸೈನಿಕರು ಫ್ಲಾಂಡರ್ಸ ಪ್ರಾಂತದೊಳಗಿನ ಮುಂಭಾಗದ ಶತ್ರುಗಳ ಪೀಲೆ ಹಲ್ಲೆಯನ್ನು ಮಾಡಿ, ಕೇಸಲ ಳಲ ತಾಸಿನಲ್ಲಿ ಆ ಭಾಗದೊಳಗಿನ ಎತ್ತರವಾದ ಪ್ರದೇಶವನ್ನು ವಶಮಾಡಿಕೊಂಡರು. ಈ ಯುದ್ಧದಲ್ಲಿ ಗಿಂತಿಂತ ಜನ ಜರ್ಮನರು ಸೆರೆಯಾಳುಗಳಾದರಲ್ಲದೆ ೩೫೦ ತೋಪುಗಳು ವಶವಾದವು. ಈ ಜಯದಿಂದ ಲೀಲ ನಗರಿಗೆ ನೀರು ಹಚ್ಚಿದಂತಾಯಿತು. ಎಲ್ಲ ಕಡೆಯಿಂದ ದೋಸ್ತ ಸರಕಾರದವರು ಸುತ್ತು ಗಟ್ಟಿದ್ದರಿಂದ ಶತ್ರುಗಳು ಕೆಂಬ್ರಾಯ ಎಂಬ ರಾಣ್ಯವನ್ನು ಬಿಟ್ಟುಕೊಡಬೇಕಾಯಿತು. ಈ ರೀತಿಯಾಗಿ ಹಿಂಡೆನಬುರ್ಗ ವ್ಯೂಹ ರೇಷೆಯು ಅಸ್ತವ್ಯಸ್ತವಾದಬಳಿಕ ಆ ರೇಷೆಯ ಪೂರ್ವಕ್ಕೆ-ವ್ಹಾಲೇನ್ಸಿನೇಸ-ಹಿರಸಾನ-ಮೇಫಿಅರ್ಸ-ಮಾಟಮೇಡಿ-ಮೆತ್ಸ- ಈ ಪಟ್ಟಣಗಳು ಯಾವ ರೇಲ್ವೆಯ ರೇಷೆಗಳೋ ಆ ರೇಷೆಯ ಮೇಲೆ ದೊಸ್ತ ಸರಕಾರದ ಸೈನ್ಯಕ್ಕೆ ಎದುರಾಗಿ ಇಡೀ ಚಳಿಗಾಲವನ್ನು ಅಲ್ಲಿ ಕಳೆಯಬೇಕೆಂದು ಶತ್ರುಗಳ ಆಲೋಚನೆ ಇತ್ತು. ಆದರೆ ಸಂಯುಕ್ತ ಸೈನ್ಯದ ಯುದ್ಧಕಲಾನಿಪುಣನೂ ಸೂತ್ರಚಾಲಕನೂ ಆದ ಮಾರ್ಷಲ ಫಾಚ-ಎಂಬವನು, ಕಳೆದ ಒಂದೂವರೆ ತಿಂಗಳಲ್ಲಿ ಬ್ರಿಟಿಶ್ ಸೈನ್ಯದ ಮುಖ್ಯಾಧಿಪತಿಯಾದ ಸರ್ ಡಗಲಸ್ ಹೇಗ ವ ತ್ತು ಇತರ ಇಂಗ್ಲಿಷ್, ಫ್ರೆಂಚ, ಅಮೇರಿಕನ್ ಸೇನಾಪತಿಗಳ ಸಹಾಯದಿಂದ ಶತ್ರುಗಳ ಈ ಉದ್ದೇಶವನ್ನು ಮುರಿದು ಹಾಕಿದನು. ಮತ್ತು ಶತ್ರುಗಳು ಯಾವ ಪ್ರಕಾರದ ಶರ್ತುಗಳನ್ನೂ ತೋರಿಸದೆ ನಿರುಪಾಯರಾಗಿ ಶರಣು ಬರುವಂತೆ ಮಾಡಿದನು. ಈ ಚಮತ್ಕಾರಿಕ ಸಂಗತಿಯು ಹೇಗೆ ಸಂಭವಿಸಿತೆಂಬದು ಮುಂದಿನ ಸಂಗತಿಯಿಂದ ಸ್ಪಷ್ಟವಾಗಿ ತಿಳಿಯುವದು.

ಮೊಗಲಿನ ಯುದ್ಧವು ಆದನಂತರ ಸೆಂಟ ಕ್ವೆಂಟೀನದ ಪೂರ್ವಕ್ಕೆ ಲಾಕೇಟೋ ಎಂಬ ಅತ್ಯಂತ ಮಹತ್ವದ ಠಾಣ್ಯವನ್ನು ದೋಸ್ತ ಸರಕಾರದವರು ಕೈವಶ ಮಾಡಿಕೊಂಡರು. ೧೪ನೇ ತಾರೀಖಿನ ದಿವಸ ಫ್ಲಾಂಡರ್ಸ ಪ್ರಾಂತದಲ್ಲಿ ೨೬ ಮೈಲು ಮುಂದೆ ಸಾಗಿ ಬಿಟಿಶ್, ಫ್ರೆಂಚ ಮತ್ತು ಬೆಲ್ಜಿಯನ್ ಸೈನಿಕರು ಶತ್ರುಗಳ ಮೇಲೆ ಅತಿ ಭಯಂಕರ ಹಲ್ಲೆಯನ್ನು ಮಾಡಿ ಶತ್ರುಗಳು ಜೋರಿನಿಂದ ಪ್ರತಿಬಂಧವನ್ನು ಮಾಡುತ್ತಿದ್ದಾಗ್ಯೂ ವಿಜಯವನ್ನು ಸಂಪಾದಿಸಿದರು. ಈ ಭಯಂಕರ ಯುದ್ಧದಲ್ಲಿ ೧೩ ಸಾವಿರ ಜರ್ಮನ್ ಸೈನಿಕರು ಸೆರೆಯಾಳುಗಳಾದರಲ್ಲದೆ ಅಸ್ಟೆಂಡ್ ಬ್ರುಸೆಸ್ ಮತ್ತು ನಾಲ್ಕೈದು ಮಹತ್ವದ ಸ್ಥಳಗಳು ಕೈವಶವಾದವು. ಕೂಡಲೆ ಲೋಕೇಟೋ ಬೋಹೇನ ಈ ೯ ಮೈಲು ಹದ್ದಿನ ಮೇಲೆ ಎರಡನೇ ಹಲ್ಲೆಯಾಯಿತು. ಈ ಹಲ್ಲೆಯಿಂದ ಶತ್ರುಗಳು ಪರಾಜಿತರಾಗಿ ಬಹಳ ಹಿಂದಕ್ಕೆ ಸರಿಯಬೇಕಾಯಿತು. ಅದರ ಹಿಂದಿಂದೇ ದಕ್ಷಿಣದ ಕಡೆಗೆ ಫ್ರೆಂಚ-ಸೈನಿಕರು ಬಿನ್ನು ಹತ್ತಿದ್ದರಿಂದ ಲೇಅನ-ಸಿನೋನೆಗಳನ್ನು ಶತ್ರುಗಳು ಬಿಟ್ಟುಹೋದರು.

ಅಕ್ಟೋಬರ ತಿಂಗಳ ೩೦ನೇ ತಾರೀಖಿನವರೆಗೆ ದೋಸ್ತಸರಕಾರದವರು ಮಹತ್ವದ ಯುದ್ಧ ಮಾಡಲಿಲ್ಲ. ಆದರೆ ನವಂಬರ ಮೊದಲನೇವಾರದಲ್ಲಿ ಒಂದು ಸಾರೆ ಮಾತ್ರ ಶತ್ರುಗಳ ಮೇಲೆ ಮೂರು ದೊಡ್ಡ ಹಲ್ಲೆಗಳನ್ನು ಮಾಡಿದರು. ಸೇನಾಪತಿಗಳಾದ ಬಿಂಗ ಮತ್ತು ಹಾರ್ನ ಇವರ ಕೈಕೆಳಗಿನ ಬ್ರಿಟಿಶ ಸೈನಿಕರು ವ್ಹಾಟೀನ್ನಿನೇಸವನ್ನು ತೆಗೆದುಕೊಂಡು ಮಾಬೇಗದ ಮಾರ್ಗದಿಂದ ಮುಂದೆ ಸ್ವಾರೀ ಮಾಡಿದರು. ಬಲಭಾಗಕ್ಕೆ ಸೇನಾಪತಿಯಾದ ಡಿಬೇನೆಯಾದರೂ ಶತ್ರುಗಳ ಮೇಲೆ ಹರಿದು ಬಿದ್ದನು. ಅದರಿಂದ ಮಧ್ಯಭಾಗದಲ್ಲಿದ್ದಂಥ ಜರ್ಮನ್ ಸೈನಿಕರಿಗೆ ತಾವು ಸುತ್ತುಗಟ್ಟಲ್ಪಡುವೆವೆಂದು ತಿಳಿದು, ಮೇಝಿಯಸ ಮತ್ತು ಮಾಸ್ಸ ಇಲ್ಲಿಯ ಚೋಣಿಯಲ್ಲಿಯ ಜರ್ಮನ್ ಸೈನ್ಯವು ಹಿಂದಕ್ಕೆ ಸರಿಯಿತು. ಮತ್ತ ಕಟ್ಟ ಕಡೆಗೆ ಮಾಸ್ಸ-ಹಿರಸಾಸ-ಮೇಝಿಯರ್ಸ ಈ ರೇಲವೆಯ ಮಾರ್ಗವು ದೋಸ್ತ ಸರಕಾರದವರ ಹಸ್ತಗತವಾಯಿತು. ವ್ಹರ್ಡೂನದ ಉತ್ತರಕ್ಕೆ ಅಕ್ಟೋಬರ ತಿಂಗ ೩೦ನೇ ತಾರೀಖಿನ ದಿವಸ ಸೇನಾಪತಿಯಾದ ಗೋರಾಡನು ಶತ್ರುಗಳ ಮೇಲೆ ಒಳ್ಳೆ ಆವೇಶದಿಂದ ಹರಿದು ಬಿದ್ದನು. ಮತ್ತು ಅದೇ ಹೊತ್ತಿಗೆ ವಿಾಯೂಸದ ಪಶ್ಚಿಮಕ ಸೇನಾಪತಿಯಾದ ಪರ್ಸಿಂಗ ಇವನ ವಶದಲ್ಲಿದ್ದ ಅಮೇರಿಕನ್ ಸೈನಿಕರು ಶತ್ರುಗಳಟೊಕವನ್ನು ಮುರಿದು ನಾಲ್ಕು ಮೈಲು ಮುಂದಕ್ಕೆ ಸಾಗಿ ಬುಝಾನ್ಸಿಯನ್ನು ವಶಮಾಡಿಕೊಡರು. ಆ ಮೇಲೆ ೩ - ೪ ದಿವಸಗಳಲ್ಲಿ ವಿಾಯೂಸದ ಪಶ್ಚಿಮದ ಕಡೆಯ ಯಾವತ್ತೂ ಪ್ರದೇಶವನ್ನು ವಶಮಾಡಿಕೊಂಡು ಅಮೇರಿಕದ ಸೈನ್ಯದವರು ವಿಾಯೂಸ ನದಿಯನ

ಮೂರು ಸ್ಥಳಗಳಲ್ಲಿ ದಾಟಿದರು. ಮತ್ತು ಪೂರ್ವ ತೀರದ ಪ್ರದೇಶದಲ್ಲಿದ್ದ ಶತ್ರುಸೈನ್ಯವನ್ನು ದಬ್ಬಿಬಿಟ್ಟರು. ಇದರ ಪರಿಣಾಮವೇನಾಯಿತೆಂದರೆ, ದೋಸ್ತ ಸೈನ್ಯದ ಚೂಣಿಯು ಸಣ್ಣಾಗಿ ಇತರ ಸ್ಥಳದಲ್ಲಿದ್ದ ಯಾವಒ್ತೂ ಫ್ರೆಂಚ ಸೈನ್ಯಕ್ಕೆ ಹಲ್ಲೆಯನ್ನು ಮಾಡಲು ಅವಕಾಶ ದೊರೆಯಿತು.

ಇಟಾಲಿ: ವಿಲಿಫ್ಹೆ ನದಿಯ ದಂಡೆಯ ಮೇಲೆ ಆಸ್ಟ್ರಿಯನ್ ಸೈನಿಕರು ಒಮ್ಮೆ ಬೆಳ್ಳಿ ತಿಂದು ತಳವೂರಿ ಕೂತಿದ್ದರು. ಆಗಷ್ಟದಿಂದ ಅಕ್ಟೋಬರ ಅಂತ್ಯದವರೆಗೆ ಸಾಕಷ್ಟು ನೆರವನ್ನು ಸಂಪಾದಿಸಿ, ಸ್ವಾರೀ ಮಾಡುವ ಪೂರ್ವಸಿದ್ಧತೆಯು ಜೋರಿನಿಂದ ಆರಂಭವಾಗಿತ್ತು. ೨೭ನೇ ತಾರೀಖಿನ ದಿವಸ ಹಲ್ಲೆಯು ಪ್ರಾರಂಭಿಸಲ್ಪಟ್ಟಿತು. ವಿ-ಲಿಫ್ಹೆ ನದಿಯು ಉಗಮದ ಹತ್ತರ ಮಾಂಟೇಬೋ ದಿಬದ ಮೇಲೆ ಬ್ರಿಟಿಶ್ ಮತ್ತು ಇಟಾಲಿಯನ್ ಸೈನಿಕರು ಆಸ್ಟ್ರಿಯನ್ ಸೈನ್ಯದ ಮೇಲೆ ಭಯಂಕರ ಹಲ್ಲೆಯನ್ನು ಮಾಡಿ ಪೂರ್ಣ ಜಯಹೊಂದಿದರು. ಇತ್ತ ಚೂಣಿಯ ಮಧ್ಯಭಾಗದಲ್ಲಿದ್ದ ಸೈನಿಕರು, ಶತ್ರುಗಳ ಮೇಲೆ ಹರಿಬಿದ್ದು ಅವರನ್ನು ವಿ-ಲಿಫ್ಹೆ ನದಿಯ ಆಚೆಗೆ ಓಡಿಸಿಬಿಟ್ಟರು. ಈ ರೀತಿಯಾಗಿ ಒಂದರಹಿಂದೊಂದು ಹಲ್ಲೆಯನ್ನು ಪ್ರಾರಂಭಿಸಿ ೩ನೇ ತಾರೀಖಿನ ದಿವಸ ಪ್ರಿಂಟಿನೋದಿಂದ ಅಡ್ರಿಯಾಟಿಕ ಸಮುದ್ರದವರೆಗೆ ೫೦ ಮೈಲು ದೋಸ್ತ ಸರಕಾರವು ಶತ್ರುಗಳನ್ನು ಪೂರ್ಣಪರಾಜಿತರನ್ನಾಗಿ ಮಾಡಿ ವಿಲಿಫ್ಹೆ ನದಿಯ ಪೂರ್ವ ದಿಕ್ಕಿನ ಬಹಳ ಸೀಮೆಯನ್ನು ಕೈವಶ ಮಾಡಿಕೊಂಡರು. ಸೈನ್ಯವು ಛಿನ್ನಭಿನ್ನವಾಗಿ ಭಯಂಕರ ಪ್ರಾಣಹಾನಿಯೊದಗಬಹುದು; ಅದನ್ನು ನಿಲ್ಲಿಸಬೇಕು, ಎಂದು ಆಸ್ಟ್ರಿಯನ್ ಸೈನ್ಯದ ಪ್ರತಿನಿಧಿಯು ಯುದ್ಧವನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುವದಕ್ಕಾಗಿ ಇತಾಲಿಯನ್ ಸೈನ್ಯದಲ್ಲಿ ಪ್ರವೇಶಿಸಿದನು. ಮತ್ತು ಮಿತ್ರ ಸಂಘದವರ ಯಾವತ್ತು ಕರಾರುಗಳಿಗೊಪ್ಪಲು, ಯುದ್ಧವು ನಿಲ್ಲಿಸಲ್ಪಟ್ಟಿತು. ಈ ಯುದ್ಧದಲ್ಲಿ ಒಂದು ಲಕ್ಷ ಆಸ್ಟ್ರಿಯನ್ನರು ಸೆರೆಯಾಳುಗಳಾದರಲ್ಲದೆ ಎಷ್ಟೋ ತೋಪುಗಳೂ ಕೈವಶವಾದವು. ಮತ್ತು ಮೂರು ಲಕ್ಷ ಆಸ್ಟ್ರಿಯನ್ ಸೈನಿಕರು ಗಾಯಹೊಂದಿದರು.

ಆಸ್ಟ್ರಿಯಾ: — ಅಕ್ಟೋಬರ ತಿಂಗಳಲ್ಲಿ ಆಸ್ಟ್ರಿಯಾದಲ್ಲಿ ಅಕಸ್ಮಾತ್ತಾಗಿ ದೊಡ್ಡ ರಾಜ್ಯಕ್ರಾಂತಿಯಾಗಿ ಆಸ್ಟ್ರಿಯಾ ರಾಜ್ಯದ ಏಕಛತ್ರಾಧಿಪತ್ಯವು ನಾಶಹೊಂದಿತು. ಬೋಹೇಮಿಯಾ, ಜರ್ಮನ್ ಆಸ್ಟ್ರಿಯಾ, ಹಂಗೇರಿ, ಕ್ರೋಟಿಶಿಯಾ, ರೂಮನ ಹಂಗೇರಿ ಮೊದಲಾದ ಪ್ರಾಂತಗಳು ತಮ್ಮ ಸ್ವಾತಂತ್ರ್ಯವನ್ನು ಪ್ರಸಿದ್ಧಪಡಿಸಿದವು. ಜನರಿಗೆ ಕೂಳುಸಿಗದ್ದರಿಂದ ಕಂಗೆಟ್ಟು ಮನಸಿಗೆ ಬಂದಂತೆ ನಡೆಯಹತ್ತಿದರು. ಬಾದಶಹನಾದ ಕಾರ್ಲನಾ

ದರೂ ರಾಜ್ಯಪದವಿಯನ್ನು ಬಿಟ್ಟುಬಿಟ್ಟನು. ಕಳೆದ ೫೦ ವರ್ಷಗಳಲ್ಲಿ ಇಂಗ್ಲಂಡ ಮತ್ತು ಆಸ್ಟ್ರಿಯಾಗಳಲ್ಲಿ ಪೂರ್ಣ ಸಖ್ಯತ್ವವಿತ್ತು. ಮತ್ತು ಈ ಯುದ್ಧದಲ್ಲಿಯಾದರೂ ಆಸ್ಟ್ರಿಯನ್ನರ ಬ್ರಿಟಿಶ ಸೆರೆಯಾಳುಗಳನ್ನು ಉತ್ತಮರೀತಿಯಿಂದ ನಡಿಸಿಕೊಂಡರು. ಜರ್ಮನಿಯ ಜುಲ್ಮೆಯಿಂದ ಆಸ್ಟ್ರಿಯನ್ನರು ಈ ಯುದ್ಧದಲ್ಲಿ ಸೇರಬೇಕಾಯಿತು. ಈ ಕಾರಣದಿಂದ ಈ ದೇಶದ ಶೋಚನೀಯ ಸ್ಥಿತಿಯನ್ನು ನೋಡಿ ದೋಸ್ತಸರಕಾರಕ್ಕೆ ಇದರ ಬಗ್ಗೆ ಸಹಾನುಭೂತಿಯುಂಟಾಯಿತು. ಮತ್ತು ನವಂಬರ ಮೊದಲನೆ ವಾರದಲ್ಲಿ ಆಸ್ಟ್ರಿಯಾ ಸರಕಾರದವರು ಯಾವತ್ತು ಕರಾರುಗಳಿಗೆ ಒಪ್ಪಿದ್ದರಿಂದ ಅವರೊಡನೆ ನಡಿಸಿದ ಯುದ್ಧವು ನಿಲ್ಲಿಸಲ್ಪಟ್ಟಿತು. ತೀಪ್ರವೇ ಒಪ್ಪಂದವಾಗಿ ರಶಿಯಾ ದೇಶದಂತೆ ಭಯಂಕರ ರಕ್ತಪಾತವಾಗದೆ ಆಸ್ಟ್ರಿಯಾದೇಶದಲ್ಲಿ ಮೊದಲಿನಂತೆ ಯೋಗ್ಯ ರಾಜ್ಯಪದ್ಧತಿಯು ನೆಲೆಗೊಳ್ಳಬಹುದು ಮತ್ತು ಯಾವತ್ತು ಕಡೆಗೆ ಯೋಗ್ಯ ವ್ಯವಸ್ಥೆಯಾಗಬಹುದು. ಹೀಗೆ ಎಲ್ಲರಿಗೂ ಆಶೆಯುಂಟಾಗಿರುವದು.

ಬಾಲ್ಕನ್ ದ್ವೀಪಕಲ್ಪ—ಸಪಟಂಬರ ತಿಂಗಳ ಕಡೆಯಲ್ಲಿ ಬಲ್ಗೇರಿಯಾದೇಶದೊಳಗೆ ಯುದ್ಧವು ನಿಲ್ಲಿಸಲ್ಪಟ್ಟು ದೋಸ್ತಸರಕಾರದ ಸೈನ್ಯದ ಪೂರ್ವಭಾಗವು ನಿರ್ಭಯವಾಗಿ ಹೊಂದಿತು. ಇದರಿಂದ ಅಕ್ಟೋಬರ ತಿಂಗಳಲ್ಲಿ ದೋಸ್ತಸರಕಾರಕ್ಕೆ ವಿಶೇಷ ಪ್ರಗತಿಯುಂಟಾಯಿತು. ಸರ್ಬಿಯನ್ ಮತ್ತು ಫ್ರೆಂಚ ಸೈನಿಕರು ಮೂರನೆಯ ವಾರದಲ್ಲಿ ನಿಸ್ನೋವ್ಹಿ ಬಜಾರ ಮೊದಲಾದ ಸ್ಥಳಗಳನ್ನು ವಶಮಾಡಿಕೊಂಡು ಕೋಟೆಗಳನ್ನು ಕೈವಶಮಾಡಿಕೊಳ್ಳುತ್ತ ಜಿಲಗ್ರೇಡವನ್ನು ತೆಗೆದುಕೊಂಡರು. ಇದೇ ರೀತಿಯಿಂದ ಸರ್ಬಿಯ ದೇಶವನ್ನೆಲ್ಲ ಶತ್ರುಗಳಿಂದ ಬಿಡಿಸಿಕೊಂಡರು. ಹಾಗೆಯೇ ಮಾಂಟಿನಿಗ್ರೋ ಮತ್ತು ಅಲ್ಬೇನಿಯಾ ಪ್ರಾಂತದೊಳಗಿನ ಆಸ್ಟ್ರಿಯನ್ ಸೈನಿಕರನ್ನು ಸೋಲಿಸಿ ಓಡಿಸಿದರು. ಈ ದೇಶದೊಳಗಿನ ಜನರಿಗೆ ಆಸ್ಟ್ರಿಯನ್ನರು ಬಹಳ ಕ್ರೂರತನದಿಂದ ನಡಿಸಿಕೊಂಡಿದ್ದರು. ಈ ಕ್ರೂರತನದಿಂದ ಸಂತಾಪಗೊಂಡ ಪ್ರಜೆಗಳು ಆಸ್ಟ್ರಿಯನ್ ಸಿಪಾಯರನ್ನು ದಿಕ್ಕೆಟ್ಟು ಓಡಿ ಹೋಗುವಂತೆ ಮಾಡಿದರೆಂಬದರಲ್ಲಿ ಆಶ್ಚರ್ಯವಿಲ್ಲ.

ಪ್ಯಾಲೆಸ್ಟಾಯಿನ್—ಸೇನಾಪತಿಯಾದ ಅಲನ್‌ಬಿಯು ಸಪಟಂಬರ ತಿಂಗಳ ೧೯ನೇ ತಾರೀಖಿನ ದಿವಸ ತನ್ನ ದೊಡ್ಡ ಸ್ವಾರಿಯನ್ನು ಆರಂಭಮಾಡಿ ಒಂದೂವರೆ ತಿಂಗಳಲ್ಲಿ ಪೂರ್ಣ ಜಯವನ್ನು ಸಂಪಾದಿಸಿದನು. ಆದ್ದರಿಂದ ಅಕ್ಟೋಬರ ತಿಂಗಳ ೩೧ನೇ ತಾರೀಖಿನ ದಿವಸ ತುರ್ಕರಿಗೆ ಶರಣು ಬರುವ ಪ್ರಸಂಗವೊದಗಿತು. ಜರೂಸಲೇಮದಿಂದ ೨೦ ಮೈಲು ಮುಂದಕ್ಕೆ ಸಾಗಿ ದಾರಿಯಲ್ಲಿ ಅಕ್ಟೋಬರದ ೩೧ನೇ ತಾರೀಖಿನ ದಿವಸ

ಮಸ್ಕಸ, ಬೇರೂಟ ಮೊದಲಾದ ಮಹತ್ವದ ಸ್ಥಳಗಳನ್ನು ಕೈವಶಮಾಡಿಕೊಂಡು ಇಂಗ್ಲಿಷ್ ಮತ್ತು ಹಿಂದೀ ಸೈನಿಕರು ಮೂರು ದೊಡ್ಡ ತುರ್ಕಸೈನ್ಯದ ಗುಂಪಿಗೆ ಪೆಟ್ಟು ಕೊಟ್ಟರು. ಕಡೆಗೆ ಅಲೆಪ್ಪೋ ಪಟ್ಟಣವನ್ನು ವಶಮಾಡಿಕೊಂಡು ಮುಸಲೀಮ ರೇಲವೆ ಯು ಜಂಕಶನವನ್ನು ವಶವಾಡಿಕೊಂಡರು. ಈ ಸ್ಥಳವು ಇಂಗ್ಲಿಷರ ವಶಕ್ಕೆ ಬಂದದರಿಂದ ಸಿರಿಯಾ ಮತ್ತು ಮೆಸೋಪೊಟೋಮಿಯಾ ಈ ದೇಶಗಳ ಸಂಬಂಧವು ಕಡಿದು ಹೋ ಯಿತು. ಈ ಎರಡನೇ ಜಯದ ದೆಸೆಯಿಂದ ಸೇನಾಪತಿಯಾದ ಅಲನ್‌ಬಿಯು ಯುದ್ಧಕಲಾ ನೈಪುಣ್ಯವನ್ನೂ ಗಟ್ಟಿತನವನ್ನೂ ಬ್ರಿಟಿಶ ಮತ್ತು ಹಿಂದೀ ಸೈನಿಕರ ಅಪ್ರತಿಮ ಶೌರ್ಯ ವನ್ನೂ ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ.

ಮೆಸೋಪೊಟೋಮಿಯಾ:—ಸೇನಾಪತಿಯಾದ ಮಾರ್ಸೆಲನು ಅಕ್ಟೋಬರದ ೩೫ನೇ ತಾರೀಖಿನ ದಿವಸ ತನ್ನ ಹಲ್ಲೆಯನ್ನು ಪ್ರಾರಂಭಿಸಿ ಒಂದೇ ವಾರದಲ್ಲಿ ಮೂರು ತುರ್ಕೀ ಸೈನ್ಯಗಳಿಗೆ ನಾಲ್ಕೂ ಕಡೆಯಿಂದ ಸುತ್ತುಗಟ್ಟಿ ಅವರಿಗೆ ಶರಣುಬರುವ ಪ್ರಸಂಗವನ್ನು ತಂದುಕೊಟ್ಟನು. ಈ ಯುದ್ಧದಲ್ಲಿ ೧೦ ಸಾವಿರ ತುರ್ಕಜನರು ಸೆರೆಯಾ ಳುಗಳಾದರಲ್ಲದೆ ಎಷ್ಟೋ ತೋಪುಗಳೂ ಯುದ್ಧ ಸಾಮಗ್ರಿಯೂ ಕೈವಶವಾದವು. ಎಲ್ಲ ಕಡೆಯಲ್ಲಿಯೂ ಪೂರ್ಣಪರಾಜಯವಾಗಿ ಬಹಳ ಹಾನಿಯುಂಟಾದ್ದರಿಂದ ತುರ್ಕರು ದೋಸ್ತರಾಷ್ಟ್ರದವರಿಗೆ ಶರಣು ಬರಬೇಕಾಯಿತು. ಇವರು ದೋಸ್ತಸರಕಾರದವರ ಯಾವತ್ತು ಕರಾರುಗಳಿಗೆ ಒಪ್ಪಿಕೊಂಡದ್ದರಿಂದ ಅವರೊಡನೆ ನಡಿಸಿದ ಯುದ್ಧವು ಅಕ್ಟೋಬರ ೩೫ನೇ ತಾರೀಖಿನ ದಿವಸ ನಿಲ್ಲಿಸಲ್ಪಟ್ಟಿತು.

ಜರ್ಮನರೊಡನೆ ನಡಿಸಿದ ಯುದ್ಧವನ್ನು ತಡೆದು ನಿಲ್ಲಿಸಿದ್ದು:—ತನ್ನ ಸ್ನೇಹಿತರಲ್ಲಿ ಮೂರು ರಾಷ್ಟ್ರದವರು ಒಬ್ಬರ ಹಿಂದೆ ಒಬ್ಬರು ಒಡೆದದ್ದರಿಂದ ಜರ್ಮನಿಗೆ ದೋಸ್ತರಾಷ್ಟ್ರದವರಿಗೆದುರಾಗಿ ನಿಲ್ಲುವದು ಅಶಕ್ಯವಾಯಿತು. ಅಕ್ಟೋಬರ ತಿಂ ಗಳಲ್ಲಿ ಜರ್ಮನಿಯು ಅಂತಃಸ್ಥಿತಿಯಾದರೂ ಬಹಳ ಶೋಚನೀಯವಾದದ್ದಾಯಿತು. ರಶಿಯಾ ದೇಶವನ್ನು ನಾಶಮಾಡುವ ಹೇತುವಿನಿಂದ ಜರ್ಮನಿಯು ಬೋಲಶೇವಿಕ ಪಕ್ಷ ರೂಪಿಯಾದ ರಾಕ್ಷಸನನ್ನು ಉಂಟುಮಾಡಿದ್ದು ಸತ್ಯವು. ಅದನೆ ಅದೇ ರಾಕ್ಷಸನು ಈಗ ಜರ್ಮನಿಯನ್ನು ಪ್ರವೇಶವಾಡಿ ಜರ್ಮನ್ ರಾಷ್ಟ್ರವನ್ನು ನುಂಗಿ ಬಿಡುವನೋ ಏನೋ ಎಂಬ ಅಂಜಿಕೆಯು ಉಂಟಾಗಿರುವದು. ಲುಡೇಂಡಾರ್ಫನು ರಾಜೀನಾಮೆಯನ್ನು ಕೊ ಟ್ಟನು. ಮತ್ತು ಲಷ್ಕರೀ ಪಕ್ಷವು ನಾಮಶೇಷವಾಯಿತು. ಕೈಸರನು ರಾಜ್ಯಪದಕ್ಕೆ

ಮಹಾಯುದ್ಧದ ೧೯೧೪ ಸಪಟಂಬರ ತಿಂಗಳ ಸಂಕ್ಷಿಪ್ತವೃತ್ತವು.

ಪಶ್ಚಿಮ ರಣಭೂಮಿ — ಅಗಸ್ಟ ತಿಂಗಳ ಅಂತ್ಯಭಾಗಕ್ಕೆ ಬೆಲಜಿಯಮ್‌ದ ಇಪ್ರೆಸದ ಉತ್ತರಕ್ಕೆ ಬೆಲ್‌ಜಿಯಮ್ ಸೈನ್ಯದ ವ್ಯೂಹರೇಷೆಯು ಎರಡು ಮೈಲು ಮುಂ ಕ್ಕೆ ಸರಿದಿತ್ತು. ಸೇನಾಪತಿ ಹಾರ್ನ, ಮತ್ತು ಬಿಂಗ ಇವರ ಸ್ಯಾರ್ಪ ನದಿಯ ಮೇಲಿ ದಾಳಿಗಳು ೧೯೧೪ ಇಸವಿಯಕಿಂತ ಈಗ ಳ ಮೈಲು ಹೆಚ್ಚಿಗೆ ಪ್ರಗತಿಯನ್ನು ಮಾಡಿದವ ತಾ. ೨ ಸಪಟಂಬರದ ದಿವಸ ಹಿಂಡೆನಬುರ್ಗ ರೇಷೆಯು ಡೈಕೋರ್ಟ್‌ಕ್ವಿಂಟ ಈ ಭ ಗವನ್ನು ಅತುಲ ಪರಾಕ್ರಮವನ್ನು ತೋರಿಸಿ ಬ್ರಿಟಿಶ ಸೈನಿಕರು ಕೈವಶ ಮಾಡಿಕೊಂಡರು ಶತ್ರುಗಳು ೧೮ ತಿಂಗಳಿಂದ ಈ ಭಾಗದ ದುರಸ್ತಿಯನ್ನು ನಡಿಸಿದ್ದರು; ನಾನಾತರದ ಆ ಪಾಯಗಳಿಂದ ಕೈವಶಮಾಡಿಕೊಳ್ಳಲಿಕ್ಕೆ ಅನಾಧ್ಯವಾಗುವಂತೆ ಮಾಡಿ ಅದರ ರಕ್ಷಣೆ ಗಾಗಿ ಸಾವಿರ ಘೂಟಿನ ರೇಷೆಯ ಮೇಲೆ ೭೦ ಸಾವಿರ ಸೈನ್ಯವನ್ನು ಇಟ್ಟಿದ್ದರು. ಇ ಥ ಕಠಿಣ ಸ್ಥಳದಲ್ಲಿಯೂ ಬ್ರಿಟಿಶರ ಪರಾಕ್ರಮಶಾಲಿಗಳಾದ ಸೈನಿಕರು ಜಗತ್ತಿನೆದುರಿ ತಮ್ಮ ಪರಾಕ್ರಮವನ್ನು ತೋರಿಸಿದರು. ಡುನಾರ್ಡ ಕಾಲುವೆಯನ್ನು ದಾಟಿ ಕೆಂಬ್ರಾ ಯದಿಂದ ೭ ಮೈಲಿನ ಮೇಲೆ ಉಳಿದರು. ಜರ್ಮನರು ಕಾಲುವೆಯನ್ನು ಒಡೆದ ಕಾ ಣ ಆ ಭಾಗವು ಜಲಮಯವಾಗಿದೆ. ಇಲ್ಲಿ ಶತ್ರುಗಳ ಬಹಳ ಹಾನಿಯಾಯಿತು. ಸಾ ರ್ಪ ಭಾಗದಲ್ಲಿ ಸಿಕ್ಕ ಈ ಜಯದಿಂದ ಬ್ರಿಟಿಶರಿಗೆ ಬಹಳ ಲಾಭವಾಯಿತು. ಇಲ್ಲಿ ಶತ್ರು ವು ಮಾಡಿದ ಪ್ರತಿದಾಳಿಗಳಿಂದ ಅವರ ಅವಸಾನವು ಎಷು ಸಂಪೂರ್ಣದಲ್ಲಿ ಬಂದಿದೆ ಎಂಬ ದೂ ತಿಳಿಯಬಂಕು. ಅದರಿಂದ ಬ್ರಿಟಿಶ ಸೈನಿಕರಿಗೆ ಇಮ್ಮಡಿ ಉತ್ಸಾಹವುಂಟಾಗಿದೆ.

ದಕ್ಷಿಣಕ್ಕೆ ಸಾಯಿಸಾನ್ಸದ ವ್ಯೂಹರೇಷೆಯ ಮೇಲೆ ಫ್ರೆಂಚರ ಮೂರು ಸೈನ್ಯಗಳ ಯುದ್ಧ ಮಾಡಿದವು. ಬ್ರಿಟಿಶ ಸೇನಾಪತಿಗಳ ಯುದ್ಧ ಚಾತುರ್ಯದ ಮೂಲಕ ಇಲ್ಲಿ ಜರ್ಮನಿಯ ಸೈನಿಕರು ಸುತ್ತುಗಟ್ಟಲ್ಪಡುತ್ತಿದ್ದರು. ಆದರೆ ಇಡೀ ಪಲಟಣದ ನಾಶವಾಗಿ ಕೊಳ್ಳುವದಕ್ಕಿತ ಹಿಂದೆ ಸರಿಯುವದೇ ಲೇಸೆಂದು ಹಿಮ್ಮೆಟ್ಟಿದರು. ಐಸ್ನೆ ಮತ್ತು ಏಸ್ನೆ ಟ ಈ ನದಿಗಳ ದುರ್ಲಭ ಪ್ರಾಂತದಲ್ಲಿ ತುಮುಲ ಯುದ್ಧಗಳಾದವು. ಶತ್ರುಸೈನ್ಯಕ್ಕೆ ಹೇಳಕೂಡದಷ್ಟು ಹಾನಿಯಾಯಿತು. ಕೇವಲ ಖೈದಿಗಳೇ ಹದಿನೈದು ಸಾವಿರ ಜನರ ಸಿಕ್ಕಿದ್ದರು. ಇಲ್ಲಿ ಜಯದ ಮಾನದಿಂದ ನೋಡಿದರೆ ಬ್ರಿಟಿಶ ಸೈನ್ಯದ ಹಾನಿಯೂ ಬಾ ಳವಾಯಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಭಾಗವು ಬಹಳ ಮಹತ್ವದ್ದಿದ್ದಕ್ಕ ರಣ ಶತ್ರುಸೈನ್ಯದವರು ಬ್ರಿಟಿಶರು ಕಾಯುವ ರೇಷೆಯ ಮೇಲೆಯೇ ಇಪ್ಪತ್ತು ಪಲ

ಣು ಸೈನ್ಯವನ್ನಿಟ್ಟಿದ್ದಾರೆ! ತಮ್ಮ ಕೈಯಿಂದ ಕೆಂಬ್ರಾಯವು ಹೋಗುವದೆಂದು ಯೋಚಿಸಿ ಅದರ ಪ್ರತಿಫಲಕ್ಕಾಗಿ ಬೇರೆ ಕಡೆಗೆ ಶತ್ರುಸೈನ್ಯದವರು ಒಳ್ಳೇ ಜೋರಿನಿಂದ ಪ್ರತಿಕಾರವನ್ನು ನಡಿಸಿದ್ದಾರೆ.

ವ್ಹರ್ಡೂನದ ದಕ್ಷಿಣಕ್ಕೆ ಸೆಂಟಮಿಹಿಲದ ಪ್ರದೇಶದಲ್ಲಿ ಪಶ್ಚಿಮದಿಂದ ಫ್ರೆಂಚರು, ದಕ್ಷಿಣ ದಿಕ್ಕಿನಿಂದ ತನ್ನ ಸೇನಾಸಮೇತನಾದ ಅಮೇರಿಕದ ಸೇನಾಪತಿಯು ಈ ರೀತಿಯಲ್ಲಿ ದಾಳಿಗಳನ್ನು ಮಾಡಿದರು. ಈ ದಾಳಿಯು ೧೨ನೇ ತಾರೀಖಿನ ದಿನ ಪ್ರಾರಂಭವಾಗಿ ಕೇವಲ ೨೭ ತಾಸಿನಲ್ಲಿ ಎರಡೂ ಸೈನ್ಯಗಳು ವಿಜಯಿಗಳಾಗಿ ಕೂಡಿದವು! ಈ ಭಾಗವನ್ನು ಫ್ರೆಂಚರಿಂದ ೪ ವರುಷಗಳ ಕೆಳಗೆ ಜರ್ಮನರು ತಕ್ಕೊಂಡಿದ್ದರು. ಶಲ್ಯರೂಪದಿಂದ ಅಪಮಾನಾಸ್ಪದವಾಗಿದ್ದ ಈ ಪ್ರದೇಶವು ಇಷ್ಟು ಸ್ವಲ್ಪ ವೇಳೆಯ ಪರಾಕ್ರಮದಿಂದಲೇ ಫ್ರೆಂಚರ ಕೈಸೇರಿತು! ಇದರಿಂದ ಜರ್ಮನಿಯ ಲಷ್ಕರದ ಸ್ಥಿತಿಯು ತಿಳಿಯುವಂತಿದೆ. ೧೫೦ ಚೌರಸ ಮೈಲಿನ ಪ್ರದೇಶವು ಸಿಕ್ಕಿತು; ಈ ತ್ರಿಕೋಣಾಕಾರದ ಪ್ರದೇಶದಲ್ಲಿ ೨೫ ಹಳ್ಳಿಗಳೂ ಪುನಃ ಫ್ರೆಂಚರ ಸತ್ತೆಯ ಕೆಳಗೆ ಬಂದವು. ಅಮೇರಿಕನ್ ಸೈನ್ಯದ ಈ ದೊಡ್ಡ ಪರಾಕ್ರಮವನ್ನು ಸಂಯುಕ್ತ ಪಕ್ಷದವರು ಕಂಡು ಆನಂದಭರಿತರಾದರು. ನಮ್ಮ ಸಾರ್ವಭೌಮ ಜಾರ್ಜ ಬಾದಶಹರು ಪ್ರೆಸಿಡೆಂಟ ವಿಲ್ಸನಸಾಹೇಬರಿಗೆ ಅಭಿನಂದನ ದರ್ಶಕ ಸಂದೇಶವನ್ನು ಕಳಿಸಿದರು.

ಹಿಂಡೆನಬುರ್ಗನ ವ್ಯೂಹದ ಭೇದ ಮಾಡುವದು ದುಸ್ತರವಾದದ್ದು. ಯಾಕಂದರೆ ಅದನ್ನು ಅನೇಕರೀತಿಯಿಂದ ಭದ್ರಪಡಿಸಿದ್ದಾರೆ. ಮುಳ್ಳಿನ ಬೇಲಿಗಳೂ, ಕಂದಕಗಳೂ ಭೂಗತ ಸುರಂಗಗಳೂ ಸಂಯುಕ್ತಪಕ್ಷದ ಸೈನಿಕರ ಪ್ರಗತಿಗೆ ಬಾಧಕವಾಗಿವೆ. ಹೀಗಿದ್ದರೂ ಅಮೇರಿಕದ ಸೈನ್ಯದ ಸಹಾಯದಿಂದ ಯುಕ್ತಿಯಿಂದ ಒಮ್ಮೆಲೇ ದಾಳಿಮಾಡುವ ಯುಕ್ತಿಯು ಫಲಪ್ರದವಾಗಹತ್ತಿದೆ. ಈ ಪ್ರಕಾರ ಒಮ್ಮೆಲೇ ದಾಳಿಯನ್ನು ಮಾಡುವದರಿಂದ ಶತ್ರುಸೈನಿಕರಿಗೆ ಅವಸಾನವುಳಿಯದಂತಾಗಿದೆ. ಸೇನಾಪತಿಯವರ ಪ್ರಸ್ತುತ ಘೋರಣವು ಯಶಸ್ವಿಯಾಗಲಿಕ್ಕೆ ಲಾಯಿಡ ಜಾರ್ಜ ಸಾಹೇಬರಿಂದ ನಿರ್ಮಿತವಾದ ಏಳ ಶಂತ್ರೀ ಕಾರಭಾರದ 'ಆರ್ಮಿ' ಕೌನ್ಸಿಲ್ ಇದೇ ಕಾರಣವು.

ಸೆಂಟಮಿಹೆಲ್ ಹಾಗೂ ಅದರ ಉತ್ತರ ಪ್ರದೇಶ ಇವುಗಳ ಭಾಗದಲ್ಲಿ ಅದ ಜರ್ಮನರ ದೈನ್ಯಾವಸ್ಥೆಯ ಲಾಭವನ್ನು ಸಂಯುಕ್ತಪಕ್ಷದವರು ತಕ್ಕೊಳ್ಳದೆ ಇರಲಿಕ್ಕಿಲ್ಲವೆಂದು ಮೊದಲೇ ಊಹಿಸಿದಂತೆ, ಸೇನಾಪತಿ ಫಾಚ್ ಸಾಹೇಬರು ಹ್ಯೀಮ್ಸದಿಂದ ವ್ಹರ್ಡೂನದವರೆಗಿನ ೬೦ ಮೈಲಿನ ರೇಷೆಯ ಮೇಲೆ ಫ್ರೆಂಚ ಅಮೇರಿಕನ ಸೈನ್ಯದ ಸಹಾ

ಯುದಿಂದ ಭೀಕರವಾದ ಸಂಗ್ರಾಮವನ್ನು ಮಾಡಿದರು. ಈ ಹದ್ದು ಶಾಂಪೇನ ಮತ್ತು ಅರಗಾನ ಪ್ರಾಂತದೊಳಗಿಂದ ಹೋಗಿದೆ. ಫ್ರೆಂಚ ಸೇನಾಪತಿಯಾದ ಗೊರಾಡ ಎಂಬವನು ಶಾಂಪೆನದ ಕಡೆಯಿಂದಲೂ, ಅಮೇರಿಕನ ಸೇನಾಪತಿಗಳು ವ್ಹಡೂನದ ಈಶಾನ್ಯ ಭಾಗದಿಂದಲೂ ದಾಳಿಗೆ ಪ್ರಾರಂಭವನ್ನು ಮಾಡಿದರು. ಫ್ರೆಂಚರು ೧೦೦೦ ಜರ್ಮನ ಶಿಪಾಯಿಗಳನ್ನು ಕೈಸೆರೆ ಹಿಡಿದರು; ೧೦೦ ತೋಪುಗಳನ್ನು ತಕ್ಕೊಂಡರು. ೧೫ ಮೈಲು ಹಿಂದಕ್ಕಟ್ಟಿದರು. ಅಮೇರಿಕನರು ೭೦ ಹಳ್ಳಿಗಳನ್ನು ಗೆದ್ದರು; ೮ ಸಾವಿರ ಜನರನ್ನು ಸೆರೆಹಿಡಿದರು. ೧೦೦ ತೋಪುಗಳನ್ನು ತಮ್ಮಕೊಂಡರು. ಈ ಪ್ರದೇಶದ ಜರ್ಮನರ ಮುಖ್ಯ ಶಾಣ್ಯವಾದ ಮೌಂಟಫಾಕಾನವನ್ನು ಹಸ್ತಗತ ಮಾಡಿಕೊಂಡರು.

ತಾ. ೨೪ನೇ ದಿನ ಉತ್ತರ ಸರಹದ್ದಿನ ಮೇಲೆ ಕೆಂಬ್ರಾಯದ ಉತ್ತರಕ್ಕೂ ಪಶ್ಚಿಮಕ್ಕೂ ಮತ್ತು ದಕ್ಷಿಣಕ್ಕೆ ಸೆಂಟಕ್ವೆಂಟಿನದವರೆಗೂ ಒಮ್ಮೆಲೆ ಬ್ರಿಟಿಶ, ಅಮೇರಿಕನ ಸೈನ್ಯದವರು ದಾಳಿಯನ್ನಾರಂಭಿಸಿದರು. ಈ ಭಾಗದ ಹಿಂಡೆನಬುರ್ಗನ ಭಯಂಕರವಾದ ವ್ಯೂಹವನ್ನೊಡೆದು ಶತ್ರುಗಳು ಅಪರಿಮಿತ ಹಾನಿಯನ್ನು ಮಾಡಿದರು. ೨೦೦೦ ಸೆರೆಯಾಳುಗಳೂ ೨೦೦ ತೋಪುಗಳೂ ಬ್ರಿಟಿಶರ ಕೈಗೆ ಸಿಕ್ಕವು! ಬ್ರಿಟಿಶರೂ ಅವರ ಪಕ್ಷದ ಸೈನಿಕರೂ ಈವರೆಗೆ ಕಾದಿ ಹಿಡಿದುಕೊಂಡ ಸ್ಥಳಗಳನ್ನು ಭದ್ರಪಡಿಸಿಟ್ಟು ಶತ್ರುಗಳ ಕೈಸೇರದಂತೆ ವ್ಯವಸ್ಥೆಯಿಡಬೇಕಾಗಿದೆ. ಈ ಸಾರಿಯ ಚಳಿಗಾಲವನ್ನು ಈ ಪ್ರದೇಶದಲ್ಲಿಯೇ ಕಳೆದು, ಬರುವ ವಸಂತಕಾಲಕ್ಕೆ ಮುಂದಿನ ಮಾರ್ಗಕ್ರಮಣ ಮಾಡುವದಿರುತ್ತದೆ. ಶತ್ರುವಿಗೆ ಅನುಕೂಲವಾದ ಈ ಸ್ಥಳವನ್ನು ತಮ್ಮ ಕೈಯಿಂದ ಹೋಗದಂತೆ ವಿಶ್ವಪ್ರಯತ್ನಗಳನ್ನು ಮಾಡಲಿಕ್ಕೆ ಮಿತ್ರಸಂಘದವರು ತಪ್ಪಲಿಕ್ಕಿಲ್ಲ.

ಮಾಸಿಡೋನಿಯಾ— ೧೫ನೇ ತಾರೀಖಿನ ದಿವಸ ಈ ಭಾಗದಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತು. ಈವರೆಗೆ ಈ ಭಾಗದ ಎಲ್ಲ ರಣರಂಗದ ಮೇಲೆ ಶತ್ರುವಿಗೆ ೧೫ ಮೈಲು ಹಿಂದಕ್ಕೆ ಸರಿಯಬೇಕಾಗಿದೆ. ಒಲ್ಗೇರಿಯನ್ ಸೈನ್ಯದ ಆಧಿಪತ್ಯವು ಜರ್ಮನ ಸೇನಾಪತಿಗಳ ಕಡೆಗಿದ್ದರೂ ಅವರಿಗೆ ಸೋಲು ತಪ್ಪಲಿಲ್ಲ. ಸ್ಟುಮ್ ನಿತ್ಸಾದ ಹತ್ತರ ಬ್ರಿಟಿಶ-ಗ್ರೀಕ ಸೈನ್ಯಗಳು ಬಲ್ಗೇರಿಯದಲ್ಲಿ ಸೇರಿದವು. ತನ್ನ ಸೈನ್ಯದ ಈ ಅನವಸ್ಥೆಯನ್ನು ಕಂಡು ಫರ್ಡಿನಂಡನು ಸಾಲೋನಿಕಾಕ್ಕೆ ಒಪ್ಪಂದದ ವಿನಂತಿಯನ್ನು ಮಾಡಿಕೊಳ್ಳಲಿಕ್ಕೆ ವಕೀಲರನ್ನು ಕಳಿಸಿದನು. ಇಲ್ಲಿ ಒಪ್ಪಂದವಾಗಿ ೩೦ನೇ ತಾರೀಖಿಗೆ ಜರ್ಮನರ ಪಕ್ಷದಿಂದ ಬಲ್ಗೇರಿಯವು ಕೆಳಗೆ ಬಿತ್ತು!! ಇದರ ಪರಿಣಾಮಗಳು ಮಹಾಯುದ್ಧದ ಮೇಲೆ ಬಹಳ ತರದಿಂದ ಆಗತಕ್ಕವಿವೆ. ತುರ್ಕಸ್ತಾನಕ್ಕೂ ಇನ್ನು ಮುಂದೆ ಬಲ್ಗೇರಿಯ ಅನು

ರಣವನ್ನೇ ಮಾಡುವದು ಅವಶ್ಯವಾಗಿದೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ತುರ್ಕರಿಗೆ ರಣು ಬರದ ವಿನಃ ಅನ್ಯಗತಿಯಿಲ್ಲ.

ಪಾಲೆಸ್ಟಾಯಿನ್ — ಪಾಲೆಸ್ಟಾಯಿನ ಪ್ರಾಂತದಲ್ಲಿ ಕಳೆದ ೩ ವರುಷಗಳಲ್ಲಿ ಸಂ ಾದಿಸಿದ ಗೇಝಾ ಹಾಗೂ ಜರುಸೆಲೇಮಗಳಲ್ಲಿ ಸೇನಾಪತಿ ಅಲನಬಿಯವರು ತಮ್ಮ ಸೈನಿಕರೊಂದಿಗೆ ಮುಂದಿನ ಸಿದ್ಧತೆಗೋಸುಗ ಹೊಂಚುಹಾಕಿಕೊಂಡು ಕುಳಿತಿದ್ದರು. ಅವರು ಯುಕ್ತಿಯಿಂದ ತಮ್ಮ ಸೈನ್ಯಗಳನ್ನು ಮುಂದೆಕಳಿಸಿ ಒಮ್ಮೆಲೇ ತುರ್ಕರ ಮೇಲೆ ಬಿದ್ದು ಅವರನ್ನು ಕಂಗೆಡಿಸಿ ಓಡಿಸಿದರು. ೫೦ ಸಾವಿರ ಜನರು ಕೈದಿಗಳಾಗಿ ಸಿಕ್ಕರು! ಈ ವಿಜಯದಿಂದ ತುರ್ಕರ ಮೇಲೆ ಬಹಳ ಪರಿಣಾಮವಾಗಿದೆ. ತುರ್ಕರು ಅಡಕೊತ್ತಿನಲ್ಲಿ ಸಿಕ್ಕಂತೆ ಈ ಭಾಗದಲ್ಲಿ ಬ್ರಿಟಿಶ ಸೈನಿಕರ ಕೈಯಲ್ಲಿ ಪೇಚಿನಲ್ಲಿ ಸಿಕ್ಕಿದ್ದಾರೆ. ಜರ್ಮನರು ಇರಾಣ ಆಫಗಾಣಿಸ್ತಾನಗಳ ದ್ವಾರದಿಂದ ಹಿಂದುಸ್ತಾನಕ್ಕೆ ತರಬಹುದಾಗಿದ್ದ ತೊಂದರೆಯು ಈ ಜಯದಿಂದ ನಷ್ಟವಾಗಿ ಹೋಗಿದೆ.

ಈ ಭಾಗದ ಯುದ್ಧದಲ್ಲಿ ಬಂದ ಜಯದ ಶ್ರೇಯಸ್ಸು ಹಿಂದೀ ಸೈನಿಕರಿಗಿದೆ. ಹಿಂದುಸ್ತಾನದ ಸೈನ್ಯದ ಪರಾಕ್ರಮವನ್ನು ಸೇನಾಪತಿಗಳು ಹೊಗಳಿದರು. ಸ್ವತಃ ಬಾದಶಹರು ಈ ಶೂರ ಸೈನಿಕರಿಗೆ ಸಂದೇಶವನ್ನು ಕಳುಹಿ ಬೆನ್ನು ಚಪ್ಪರಿಸಿದರು.

ಒಪ್ಪಂದದ ವಿನಂತಿ — ಜರ್ಮನರು ತಮ್ಮ ಪಕ್ಷವು ಎಲ್ಲಕಡೆಯಲ್ಲಿಯೂ, ಎಲ್ಲ ಬಗೆಯಿಂದಲೂ ಪೇಚಿನಲ್ಲಿ ಸಿಕ್ಕದ್ದನ್ನು ಕಂಡು ಇನ್ನು ಮುಂದೆ ತಮ್ಮ ಪರಿಣಾಮವು ನೆಟ್ಟಗಿಲ್ಲವೆಂದೆಣಿಸಿ ಒಪ್ಪಂದದ ಮಾತುಗಳನ್ನು ನಡಿಸಿದ್ದಾರೆ. ಇಷ್ಟಾದರೂ ಅವರ ಮಾತು ನಿಜವೆಂಬ ತಿಳಿಯಲಿಕ್ಕೆ ತೊಂದರೆಯೇ ಒರುತ್ತದೆ. ಯಾಕಂದರೆ ಇತ್ತ ಜರ್ಮನಿಯ ಸಂಯುಕ್ತಪಕ್ಷದಲ್ಲಿ ಒಡಕು ಹುಟ್ಟಿಸಿ ಜಯವನ್ನು ಸಂಪಾದಿಸಬೇಕೆಂದು ಯತ್ನ ನಡಿಸುವದು, ಅತ್ತ ಆಸ್ಟ್ರಿಯನರ ಕಡೆಯಿಂದ ಶಾಂತಿಪಾತದ ಪ್ರವಚನವನ್ನು ಪ್ರಾರಂಭಿಸುವದು! ಎಷ್ಟು ಪ್ರಯತ್ನಗಳನ್ನು ನಡಿಸಿದರೂ ಕಾಲಗತಿಯು ಮುಂದೆ ತಲೆಯನ್ನು ಬಗ್ಗಿಸಬೇಕಾಗಿದೆ. ಜರ್ಮನಿಯು ಈಗಿನ ಸಂಕಟಸಮಯ ಸ್ಥಿತಿಯಲ್ಲಿ ಬಹಳ ದಿನ ಬದುಕುವಂತಿಲ್ಲ. ಅದಕಾರಣ ಒಪ್ಪಂದವು ಕೀರ ಸನ್ನಿಹಿಸಿದೆಯೆಂದು ಹೇಳಬಹುದು. ಅಕ್ಟೋಬರ ತಿಂಗಳಲ್ಲಿ ಅವುಗಳ ಶರ್ತುಗಳೂ ಹೊರಬೀಳಹತ್ತಿವೆ. ಕಾರಣ ಅವು ಮುಂದಿನ ಅಂಕಿನಲ್ಲಿ ಬರುವವು.

ಸಾಂಪ್ರತ ಮಹಾಯುದ್ಧದ ವರ್ಣನೆಯು.

(ಓಹೀ ಗೋಡೀ ಗುಲಾಬೀಳ । ಸಾಜೀ ನರಾಂಬೀ ।)ಎಂಬ ಮರಾಠೀಪದದಂತೆ.

ಹೇಳಲಾರೆನಯ್ಯೋ! ಹೇಳ-ದಿರಿಲಾರೆನಯ್ಯೋ! । ಕೇಳಿಕೈರಿಸುವರ್ಯಾರಯ್ಯಯ್ಯೋ! ॥
ಖಳ ಕೈಸರನ ದುರಾಶೆಯ ನ್ಯಾಯ । ದಾಳಿಕಾಳಗವಾರ್ತೆಯಯ್ಯಯ್ಯೋ! ॥ಪಲ್ಲ॥
ಹುಡುಗತಪಮೊಳೊಬ್ಬ ಕಪ್ಪಿತ ಸರ್ವೀ । ಹುಡುಗರಿಗೆಲ್ಲರ್ಗೆ ಶಿಕ್ಷೆಯೇ? ॥
ಕಡುಮೂರ್ಖಗಾಸ್ತಿಯೇ ಶನಿಗೆ ಜರ್ಮನಿಯಾ । ಬಡಿವಾರದರಸ ಬೆನ್ನಾಗಿರೇ ॥೧॥
ನ್ಯಾಯವಸ್ಪವ ರಾಜ ಧರ್ಮಜ್ಞಮೂರ್ತಿ । ನೋಯದೆ? ಮನಸು ನಾಭಾವಿಕಂ ॥
ಕಾಯುವಾಜ್ಞಸದುಪದೇಶ ಜಡನಿಗೇ । ಹೇಳುದ ಮುದ್ದಿನಂತಾದುದು ॥೨॥
ನಿರನರಾಧೀ ಬೆಲ್ಜಿಯರ ಮೇಲೆರಗಿ ಫ್ರೆಂ- । ಜರಮೇಲೆ ಕತ್ತಿಯ ನೆತ್ತಲು ॥
ವರಮ ಮಿತ್ರತ್ವದಿ ಕರುಳಿಲ್ಲ ಕರಗೀ । ವರಜಕ್ರವರ್ತಿಗಳೆದ್ದರು !! ॥೩॥
ಕೊಚ್ಚಿ ಬೆಲ್ಜಿಯರ ಕೈಸಿಜ್ಜ ಜನರನು । ಜರ್ಜನು ಸುಟ್ಟರು ವ್ಯರ್ಥದಿ ॥
ಹುಚ್ಚುದುರಾಶೆಯ ಕ್ರೂರಕಾರ್ಯಗಳ । ನೆಪ್ಪು ಬಣ್ಣಿಸಲಶ್ಯಸಹ್ಯವು !! ॥೪॥
ಕನಸು ಮನಸಿನಲ್ಲಿ ನೆನಪುಂಟೆ? ರಣದಾ । ಜನಿಸಿರು ದಾವಾಗ್ನಿ ಮಾಡಲೇಂ? ॥
ದಿನಮಾತ್ರದಲ್ಲಿ ಸೈನ್ಯವನಣೆ ಮಾಡಿ । ಕಣಕನು ವಾಗಬೇಕಾಯಿತು ॥ ೫ ॥
ಸಲಮಾಸ್ತವಿಲ್ಲದ ನಾಸಾಸ್ರಾಜ್ಯಾಧಿಪರಾ । ಕಾರ್ಯಕರ್ತೃತ್ವಕ್ಕೆ ಜೋಡುಂಟೆ? ॥
ಶೌರ್ಯವನೋಡಿ ನಾಲ್ವತ್ತುವರ್ಷದಗುರಿ । ಧೈರ್ಯಚಾತುರ್ಯಕ್ಕೆ ಮಾರಿತು!! ॥೬॥
ದಿನವೆ? ತಿಂಗಳವೆ? ವರ್ಷವೆ? ಸಮದಂಡಿ । ಘನಗುಣ ಬಿನ್ನಣದಿಂದಲಿ ॥
ಬಣ್ಣವ ಬೆಳಿಸಿಕೊಂಡು ಕಾಯುತ್ತಿರುವೈ । ವಿನುತ ಸಂಯುಕ್ತ ರಾಷ್ಟ್ರೀಯರು ॥೭॥
ರಾಜ ಬರ್ಬರರೆಯೆದ್ದ ರಾಜಸ ಸಿಯಾ । ಮಾಜದ ಬುದಗಟ್ಟಿ ಜೀರಲು ॥
ಸೋಪಿಗಳೆ ಸೆಲ್ಲ ರಾಷಸುಸಿಷ್ಯ- । ರಾಜಗದೀಶ್ವರೋತ್ತೇಜರು ॥ ೮ ॥

ಶ್ರೀ ನಾಳ (ನಾದಾ)

ಒಂದೆ ಸತತ ಸೊಕ್ಕವದಿಲ್ಲವೋ । ಸುಣ್ಣದ ಗೊಬ್ಬರ ಹೆಂಣಾ ॥
ಕುದಿಸದೀಕಿ ಸಲದರಂತಾಗುವ । ನಣ್ಣಾ ಕೈಸರ ಭೂಮಾ ॥೧॥
ಧೂರ್ತಸಮುದ್ರದ ಮಾರ್ಗವ ಮರೆತಾ । ತರ್ಜನಮೈತ್ರಿಯ ಬೆಳೆಸೀ ॥
ಚಾತುರ್ಯದಲೀ ದೇಶಕೆ ರೈಲಿಂ- । ದ್ಯತರಲಿರ್ದನು ಸಹಸೀ ॥೨॥
ಕುಂಬಾಸಗಿಡೀನರುಪವು ಜೇಕ್ಕೆ । ಜೊಣ್ಣಗೆ ನಿಮಿಷವು ನಾಕ್ಕೆ ! ॥
ತುಂಬುವ ನಾಲ್ವತ್ತಬುದದ ಸಿದ್ಧತೆ । ನಾಲ್ಕೇ ವರುಷಮೂಳಾಂಶ್ಯೈ ॥೩॥
ಕೃಷ್ಣಿಯೊಳೆಲ್ಲಾ ಸತ್ತೆಯು ಬಯಸುವ । ದುಷ್ಟಹೇತುಸಿದ್ಧಿವುದೇ? ॥
ಕತ್ತೆಯವೋಲತ್ತತ್ತ ಗೈಸ್ಥತಾ । ಮಿತ್ರರು ಸರಿಯದೆ ಜಿಡರೇ? ॥೪॥

೩ ನೇ ಕಾಂತೆಕೇಳು ಪ್ರಮೋದವ ನೇಳ್ದಿನು ಇದರಂತೆ

ಮಿತ್ರ ಕೇಳು ನೀನೀಗಿನ ವಾರ್ತೆಯಾ ॥ ಪಲ್ಲ ॥

ಧಾತ್ರಿಯಲೆಮ್ಮಸಂ । ಯುಕ್ತಸಕ್ಷದ ಮಹಾ । ಕರ್ತವ್ಯದಕ್ಷತೆಯ ರೀತಿಯಾ ॥೧॥
ಇತ್ತಿತ್ತಲಾಗಿ ಜಗ । ತ್ತಿಗೆ ಹೆಸರಾದ । ಮತ್ತಮೇರಿಕದ ಸಹಾಯವು ॥೨॥
ಸೋತವೊಲಾಗಿದ್ದ । ಕೈತಪ್ಪಿಹೋಗಿದ್ದ । ಧಾತ್ರಿಯು ವಶವಾಗಹತ್ತಿತು ॥೩॥
ಜರಮನ್ನಾಪ್ರಿಕದಂತೆ । ವರ ಬುಲ್ಗೇರಿಯವಾಗಿ । ಶರಣು ಬಂದಿವರನ್ನೆ
ಕೂಡಿತು ॥೪॥
ಕೈಸರನಗಲುದ್ದ । ವಿೂಸೆಯು ಕೆಳಗಪ್ಪ । ಸಾಸವಭಟರೀಗ । ತೋರ್ಪರು ॥೫॥
ಹುಡುಗ ಹೆಂಗಸರೊಳ್ಳೇ । ಮುದುಕರು ಸಹಿತಾಗೀ । ಕದನದಿಸೇವೆಯು
ಮಾಳ್ಪರು ॥೬॥
ಹಿಂದೂಜನರು ಸೈನ್ಯ । ತುಡತುಂತದಿಪೋಗಿ । ಗಂಡುಗಲಿಗಳಾಗಿಪೋರ್ವುದು ॥೭॥

೪ ನೇ ಸಖಿತೆ ನೋಪುತೋಪು ಈ ಪದದಂತೆ

ರಾಜನಿಷ್ಠೆಯನ್ನು ತೋರ್ಪ ಸಮಯ ನೋಡಿದು ॥
ರಾಜರಿಂಗೆ ಸಹಾಯವಾಗಿಯುದ್ಧಗೈವುದು ॥ ಪಲ್ಲ ॥

ರಾಜರೀವಿಪತ್ತನೋಡಿನುಲಗೆನಿದ್ದೆಯು ॥ ಭೋಜನದಿಂ ಹಸಿವು ತಣಿವು
ದಿಲ್ಲನ್ಯಾಯವು ॥೧॥
ರಾಣಿಯುವರ ಬೆಳ್ಳಿ ಜುಬಿಲಿ । ಕಾಣಿಕೆಯುಹಣ ॥ ಸೈನಿಕರಕುಮಾರ ಶಿಷ್ಯ ।
ಮಾನಘನಗುಣ ॥೨॥
ಸ್ವಾರ್ಥಪೂಪರಾರ್ಥಪೂ । ಸ್ತುತ್ಯನಿಹಪರಾ । ಶಕ್ತಿಯುಕ್ತಿಮುಕ್ತಿನು ।
ಪತ್ತು ಶುಭಕರ ॥೩॥
ವೀರಭೀಷ್ಮಕರ್ಣಾರ್ಜುನ । ಮುಖ್ಯಸುಭಟರು ॥ ಧೀರಸುಧನ್ಯಾಭಿಮನ್ಯುಪೋರ
ಧನ್ಯರು ॥೪॥
ಹೆಚ್ಚಿವೀರ ಸುತತಿಗಳು । ಕೊಚ್ಚುತರಿಗಳಾ ॥ ನುಚ್ಚುನೂರು ಪುಡಿಯುಗೈವ
ರೊಚ್ಚುಗಿಚ್ಚಲಾ ॥ ೫ ॥
ಶತ್ರುಭಯವ ತೊಲೆದು ನಿ । ಶ್ಚಿಂತರಾಗುವ ॥ ಸುತ್ತುಮುತ್ತು ನಮ್ಮ ಸೀಮ । ಗುತ್ತ
ಬೆಳೆಸುವಾ ॥ ೬ ॥
ತ್ರಿದಶಕೋಟಿನಾವಿರಲ್ಕೆ ಬೆದರಲೇತಕೊ । ಕದನುಸಾರಕವನಕೇಳೆತಡವಿದ್ಯಾತಕೆ॥೭॥
ಮದದಿಬರುವ ಶತ್ರುಸೈನ್ಯಕಡಿದು ಹಾಕುವ ॥ ಕದನದೇವತೆಗಳಸೆಲ್ಲ ತೃಪ್ತಿಪ
ಡಿಸುವಾ ॥ ೮ ॥
ವೈರಿಬಲವು ಕಂಡುನಾವು । ಸಮ್ಮನಿದ್ದರೆ ॥ ಕ್ರೂರರಾಕ್ಷಸಂಗೆ ತುತ್ತುನೋಡಿ
ದಂತೆ ॥೯॥

ಒಂದೆಮನದಲೀಳೆನಮ್ಮ । ಹಿಂದುಸೈನ್ಯವು ॥ ಒಂದೆಕ್ಷಣದಿವಿಜಯಸಿರಿಯು
ಬಂದುಬೆರೆವುದು ॥೧೦॥
ದೇಶಶುದ್ಧಿ, ದೇಶಸಿದ್ಧಿ, । ತೋಷವೃದ್ಧಿಯು ॥ ಈಶ ಲೋಕಸಿದ್ಧಿಯೆಂಬ ಗುಡ್ಡ
ಕಡ್ಡಿಯು ॥ ೧೧ ॥
ರೋಗರುಜನೆಯಿಂದ ನಾಯೆ । ಜೀವವೆಳೆವುದು ॥ ಹಾಗೆ ಜನನ ಮರಣ ಬಂಧನ
ದಲಿ ಬೀಳ್ವುದು ॥ ೧೨ ॥
ಕೋಟಿಯಜ್ಞ ತಪೋಲಭ್ಯ । ನಾಥ ಮೋಕ್ಷವು ॥ ಮಾತು ಮಾತಿನಪಥಿಯಲ್ಲಿ ॥
ಪ್ರಾಪ್ತಿಯಪ್ಪುದು ॥ ೧೩ ॥
ಹುಟ್ಟಿ ಬೆಳೆದು ಸತ್ತುಮಟ್ಟಿ । ಬೂದಿಯಾಗುವ ॥ ಕಟ್ಟಡವಿಯ ಮರಗಳಂತೆಯಿರ
ರುವದೇನಹಾ! ॥ ೧೪ ।
ಚಂದಿರಾರ್ಕವಾಗಿ ಕೀರ್ತಿ । ಚಂದದಿಂದಲಿ ॥ ಸುಂದರಾಕೃತಿಯಲಿ ಮೆರೆವುದೊ
ದು ಬಗೆಯಲಿ ॥ ೧೫ ।
ತನುಮನೋಧನಗಳನರ್ಪಣೆಯು ಗೈವಗೇ ॥ ಗುಣವನೆಲ್ಲ ಕೊಟ್ಟು ಕಾವ । ನವ
ಸುತರಿಗೇ ॥ ೧೬ ।

೯. ಕಿತಿಚಮಗತ ” ಈ ಪುರಾಣ ಪದದಂತೆ

ಇನ್ನಾದರು ಕೊಡುಜಗದೊಡೆಯಾ ವಿಜಯಾ । ನಂದವಾರ್ತೆಯಾ ॥ ಪಲ್ಲ ॥
ಅಷ್ಟಸುಗುಣಯುತ ಸೃಷ್ಟಿಪರೆಮ್ಮಾ । ಶ್ರೇಷ್ಠಪಕ್ಷವನೆ ವಹಿಸಿಹರು ॥
ನೆಟ್ಟಗೆ ಬೋಧಿಸಿ ಹೊಸ ಹೊಸ ಸೈನ್ಯವ । ನೊಟ್ಟು ಮಾಳ್ಪರು
ಬಿಟ್ಟ ಮಗುಚುವೋಲ್ । ಪುಷ್ಟ ಕೈಸರನು । ಪಟ್ಟತಿಂದು ತಿಂದುರೆಸೊಂದು ॥
ತೊಟ್ಟು ತೊಟ್ಟಿಗೇ ತಟ್ಟನೆ ಜೀಳಲು । ಹತ್ತಿರುರ್ವಿಯಾ ॥ ಇನ್ನಾ
ಧಾತ್ರಿಯೊಳೇಸು । ಯುಕ್ತರಾಷ್ಟ್ರದಾ । ಉತ್ತಮ ವಿಜಯಪತಾಕೆಗಳು ॥
ಚಿತ್ರವಿಚಿತ್ರವು । ರತ್ನಪ್ರಭೆಯಲಿ । ಮತ್ತೆರಂಚಿಸಲು
ಸನ್ನುತಮೇರಿ ಪಂಚಮ ಜಾರ್ಜರ । ಚಿನ್ನವಜ್ರಗಳ ಜುಟ್ಟಿಲಿಯವು ॥
ಇನ್ನೂ ಹೆಚ್ಚಿನ ಹೊಸ ಪ್ರಜೆಗಳು ಕಂ । ಡುನ್ನತಿಯು ಪಡಲು
ಹಿಂದೂ ಸೈನಿಕ ತುಡದ ಶೌರ್ಯವು । ಕಂಡು ಬಂಮ ನಮ್ಮರಸರಿಗೇ ॥
ಒಂದೊಂದೇ ಹೊಸ ಹಕ್ಕನು ಕೊಡುವಂ । ತಿಂದುದಯಿಪರಲು
ದೇಶ ದೇಶದಲಿ ಶಾಂತತೆಯಾಗೀ । ಸೂಸುವದುರ್ಧರದುಭಿಕ್ಷ ॥
ನಾಸಿರ ಮುಂಡದಡಿಗೆ ತಾನಾಗಿ । ದೇಶದಿಸುಭಿಕ್ಷ ॥ ಇನ್ನಾದರು

ವೆ. ಪ. ಹೆಗಡೆ, ಬಾಡ.

೪॥ ಮಾ॥ ಶಾಲಾ ನಂ. ೧. ಅಂಕೋಲಾ.

ಅಪೂರ್ಣಾಂಕ ಭಾಗಾಕಾರ

೩ ನೆಯಪಾಠ

(೧೯೧೫ ಅಕ್ಟೋಬರ ಸಂಚಿಕೆಯಿಂದ ಮುಂದೆ ಸಾಗಿದ್ದು.)

ವಿಷಯ	ಕ್ರಮ
೧ ಹಿಂದಿನವಿಯಮದ ಪುನರಾವರ್ತನೆ.	೧. ಹಿಂದೆ ಕಲಿತ ನಿಯಮವನ್ನು ಚನ್ನಾಗಿ ದೃಢಿಮಾಡಿಸುವದು. $\frac{ಸ}{ಗ} \div \frac{ಳ}{ಗ}$ ಇಲ್ಲಿ ಸಾಧಾರಣ ಛೇದವು ೧೭, ೧೯ ಇವುಗಳ ಗುಣಾಕಾರವಿರುತ್ತದೆ. ಈ ಗುಣಾಕಾರವನ್ನು ತೆಗೆಯ ವಕಾರಣವಿಲ್ಲ. ಆದ್ದಂದ ಗುಣಾಕಾರ ಮಾಡಿದ್ದೇವೆ. ಅದು ಎನ್ಹೋಬಂದದೆ ಎಂದು ತಿಳಿಯೋಣ. ಗುಣಾಕಾರವನ್ನು ಪ್ರತ್ಯಕ್ಷ ತೆಗೆಯುವದು ಅವಶ್ಯವಿಲ್ಲೆಂದು ಉದಾಹರಣೆಗಳ ಮೇಲಿಂದ ತಿಳಿಸಬೇಕು.
೨. ನಿಯಮವನ್ನು ಸೂಚಿಸಿ ಕೊಡುವದು.	೨. ಗುಣಾಕಾರಕ್ಕೆ ೧೭ರಿಂದ ಭಾಗಿಸಿದರೆ ಎಷ್ಟು ಬರುತ್ತದೆ? ಆ ಮೇಲೆ ಏನುಮಾಡಬೇಕು? ಮೊದಲನೇಅಂಶವು ಎಷ್ಟುಒಂತು? ಗುಣಾಕಾರಕ್ಕೆ ೧೯ರಿಂದಭಾಗಿಸಿದರೆ ಎಷ್ಟು ಬರುತ್ತದೆ? ಮುಂದೆ ಏನುಮಾಡಬೇಕು? ಎರಡನೇ ಅಂಶವು ಎಷ್ಟುಒಂತು? ಮುಂತಾದ ಪ್ರಶ್ನೆಗಳಿಂದ ಸ, ೧೯ ಇವುಗಳನ್ನು ಗುಣಿಸಿದರೆ ಉತ್ತರದ ಅಂಶವು ಬರುತ್ತದೆ. ಳ, ೧೭ ಇವುಗಳನ್ನು ಗುಣಿಸಿದರೆ ಉತ್ತರದ ಛೇದವುಬರುತ್ತದೆ. ಎಂಬದನ್ನು ಹುಡುಗರಿಂದ ಹೊರಡಿಸಬೇಕು. $\frac{ಸ}{ಗ} \div \frac{ಳ}{ಗ}$ ಸಕ್ಕೆ ೧೯ರಿಂದ ಗುಣಿಸಬೇಕಾಗುವದರಿಂದಲೂ, ೧೭ ಕ್ಕೆ ಳ ರಿಂದ ಗುಣಿಸಬೇಕಾಗುವದರಿಂದಲೂ ಗಸ್ಸಿ ಕ್ಕೆ ಗಳ್ಳಿ ರಿಂದ ಗುಣಿಸಬೇಕು ಎಂಬಂತಾಯಿತು. ಆದ್ದರಿಂದ ಗಸ್ಸಿ ಕ್ಕೆ ಗಳ್ಳಿ ದಿಂದ ಭಾಗಿಸಬೇಕಾದರೆ ಗಸ್ಸಿ ಕ್ಕೆ ಗಳ್ಳಿ ದಿಂದ ಗುಣಿಸಬೇಕು. $= \frac{ಸ \times ೧೯}{ಳ \times ೧೭}$ $= ಗಸ್ಸಿ \times ಗಳ್ಳಿ$ ಎಂದು ತಿಳಿಸಿಕೊಡಬೇಕು.

S R. Tatti.

ಸಾಮಾನ್ಯ (ವ್ಯವಹಾರಿಕ) ಅಪೂರ್ಣಾಂಕಗಳ ಗುಣಾಕಾರ.

ವಿಷಯ.	ಕ್ರಮ.
೧. ಯಾವ ದೊಂದು ಪರಿಮಾಣದ ಇಚ್ಛಿತ ಭಾಗವನ್ನು ತೆಗೆಯುವದು.	೩೦ ರೂ. × ೫/೬ ಇದರ ಅರ್ಥವನ್ನೂ ೩೦ ರೂಪಾಯಿಯ ಐದು-ಆರನೆಯ ಅಂಶ ಎಂದು ಮಾಡಲಿಕ್ಕೆ ಕಲಿಸಬೇಕು. ಈ ಅರ್ಥವು ಇಂಥ ಉದಾಹರಣೆಗಳಿಂದ ಲಕ್ಷ್ಯದಲ್ಲಿ ಬರುವದು. ೩೦ ರೂ. = ೧ ರೂ. × ೩೦. ೨ ರೂ. = ೧ ರೂ. × ೨ ೧/೬ ರೂ. = ೧ ರೂ. × ೧/೬ ೫/೬ ರೂ. = ೧ ರೂ. × ೫/೬ ∴ ೧ ರೂ. × ೫/೬ ಅಂದರೆ ಐದು-ಆರನೆಯ ಅಂಶ ರೂಪಾಯಿ ಅರ್ಥಾತ್ ಒಂದು ರೂಪಾಯಿಯ ಐದು-ಆರನೆಯ ಅಂಶ. ಇದರಂತೆ ೩೦ ರೂ × ೫/೬ ಅಂದರೆ ೩೦ ರೂಪಾಯಿಯ ಐದು-ಆರನೆಯ ಅಂಶ. ಐದು-ಆರನೆಯ ಅಂಶ ಇದರ ಅರ್ಥವು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿದಿದ್ದರೆ ೩೦ ರೂಪಾಯಿಯ ಐದು-ಆರನೆಯ ಅಂಶ ಇದರ ಬೆಲೆಯನ್ನೂ ತೆಗೆಯುವಲಿಕ್ಕೆ ಕಠಿಣವಾಗಲಾರದು. ೩೦ ರೂಪಾಯಿಯ ಆರನೆಯ ಭಾಗ ಎಷ್ಟು? ೩೦ ರೂ ÷ ೬ = ೫ ರೂ. ಇಂಥ ಐದು ಭಾಗಗಳನ್ನು ತಕ್ಕೊಂಡರೆ ಎಷ್ಟಾಗುತ್ತದೆ? ೫ ರೂ × ೫ = ೨೫ ರೂ. ಯಾವ ದೊಂದು ಸಂಖ್ಯಾ ರೂಪದ ಇಚ್ಛಿತ ಭಾಗವನ್ನು ತೆಗೆಯಬೇಕಾದರೆ ಒಂದು ಭಾಗಾಕಾರವನ್ನೂ ಒಂದು ಗುಣಾಕಾರವನ್ನೂ ಮಾಡಬೇಕೆಂದು ಹುಡುಗರು ಬೇಗನೆ ತಿಳಿಯಲಿ.
೨. ಒಂದು ಅಪೂರ್ಣಾಂಕಕ್ಕೆ ಒಂದು ಪೂರ್ಣಾಂಕದಿಂದ ಗುಣಿಸುವದು.	ಭೋದವು ಭಾಗಗಳ ಹೆಸರು ಅಳಿಯುವದೆಂಬದನ್ನು ಹುಡುಗರಿಗೆ ಪುನಃ ಸೆನಪಿಗೆ ತಂದುಕೊಡಬೇಕು. ಇದಕ್ಕಾಗಿ ೨/೩ × ೫ ಇಂಥ ಲೆಕ್ಕಗಳನ್ನು ಕೆಳಗೆ ತೋರಿಸಿದಂಥ ಸುಲಭವಾದ ಪೆಟ್ಟಿಗೆಯಿಂದ ತಿಳಿಸುತ್ತ ಹೋಗಬೇಕು. ಅವಶ್ಯವಿದ್ದರೆ ಅಕ್ಕಸಿಗಳ ಸಹಾಯವನ್ನು ತಕ್ಕೊಳ್ಳಬಹುದು. ಲೆಕ್ಕಗಳನ್ನು ಮಾಡುವಾಗ ಭಾಗಗಳ ಹೆಸರುಗಳನ್ನು ಮೊದಲಿಗೆ ಸಂಪೂರ್ಣವಾಗಿ ಬರೆಯಿಸಬೇಕು. (ಅ) ಪದಾರ್ಥಗಳ ಹೆಸರುಗಳು:

ವಿಷಯ.	ಕ್ರಮ.
	೨ ಪಣ್ಣು × ೫ = ೧೦ ಪಣ್ಣು.
	(ಬ) ಬೆಲೆಯ ಪರಿಮಾಣಗಳ ಹೆಸರುಗಳು
	೨ ದುಡ್ಡು × ೫ = ೧೦ ದುಡ್ಡು.
	(ಕ) ಸಂಖ್ಯೆಗಳನ್ನು ತೋರಿಸುವ ಹೆಸರುಗಳು
	೨ ಡಜನು × ೫ = ೧೦ ಡಜನು.
	(ಡ) ಭಾಗಗಳನ್ನು ತೋರಿಸುವ ಹೆಸರುಗಳು
	೨ ಅರ್ಧ × ೫ = ೧೦ ಅರ್ಧ
	೨ ಪಾವು × ೫ = ೧೦ ಪಾವು
	೨ ಅರ್ಧಪಾವು × ೫ = ೧೦ ಅರ್ಧಪಾವು
	ಅರ್ಧಪಾವು ಅಂದರೆ ಎಂಟನೆಯ ಅಂಶ.
	೨ ಎಂಟನೆಯ ಅಂಶ × ೫ = ೧೦ **ಎಂಟನೆಯ ಅಂಶ**
	೨ **ಮೂರನೆಯ** ಅಂಶ × ೫ = ೧೦ **ಮೂರನೆಯ ಅಂಶ**
	$\frac{೨}{೩} \times ೫ = ೧೦\frac{೨}{೩}$.
೩ ಒಂದು ಅಪೂರ್ಣಾಂಕಕ್ಕೆ ಒಂದು ಅಪೂರ್ಣಾಂಕದಿಂದ ಭಾಗಿಸುವದು.	ಇದರಲ್ಲಿ ಎರಡು ಪೆಟ್ಟುಗಳನ್ನು ಮಾಡಿಕೊಳ್ಳಬೇಕು. (೧) **ಕೊಟ ಅಪೂರ್ಣಾಂಕದ ಅಂಶಕ್ಕೆ ಕೊಟ್ಟ ಪೂರ್ಣಾಂಕದಿಂದ ಭಾಗಹೋಗುವ ಉದಾಹರಣೆಗಳು.** (೨) **ಹಾಗೆ ಭಾಗಹೋಗದೆ ಇದ್ದ ಉದಾಹರಣೆಗಳು.** ಇದನ್ನು ಹೇಗೆ ಕಲಿಸಬೇಕೆಂಬದು ಕೆಳಗಿನ ಎರಡು ಉದಾಹರಣೆಗಳಲ್ಲಿ ಸಂಕ್ಷೇಪದಿಂದ ತೋರಿಸಿದೆ.
	ಉದಾ. ೧. $\frac{೬}{೭} \div ೩ = \frac{೨}{೭}$.
	$\frac{೬}{೭}$ಕ್ಕೆ ೩ ರಿಂದ ಭಾಗಿಸುವಾಗ ೬ ಪದಾರ್ಥಗಳಿಗೆ ನಾವು ೩ರಿಂದ ಭಾಗಿಸುತ್ತೇವೆಂಬ ಕಲ್ಪನೆಯು ಹುಡುಗರ ಮನಸ್ಸಿನಲ್ಲಿ ಸೇರುವದು ಬಹಳ ಕಷ್ಟ. ಇದಕ್ಕಾಗಿ ಸುಲಭವಾದ ಕಲ್ಪನೆಯಿಂದ ಕಠಿಣವಿದ್ದದ್ದಕ್ಕೆ ನಾಗು ಎಂಬ ಪ್ರಯತ್ನವನ್ನು ಲಕ್ಷದಲ್ಲಿಟ್ಟು ಮೇಲೆ **ಎರಡನೇ ಪೆಟ್ಟಿ**ನಲ್ಲಿ ತೋರಿಸಿದ ವಿವರಣೆಯ ಕ್ರಮವನ್ನೂ ಅನುಸರಿಸಬೇಕು.
	ಉದಾ ೨. $\frac{೬}{೭} \div ೩ = \frac{೬೦}{೭೦} \div ೩ = \frac{೨೦}{೭೦}$.
	ಈ ರೀತಿಯು ಹುಡುಗರಿಗೆ ತಿಳಕೊಳ್ಳಲಿಕ್ಕೆ **ಬಹಳ ಸುಗಮವಿರುವದರಿಂದ** ಶಿಕ್ಷಕನು ಇದನ್ನು ಲಕ್ಷ್ಯದಲ್ಲಿಡಬೇಕು.

ವಿಷಯ.	ಕ್ರಮ.
೪. ಒಂದು ಅಪೂರ್ಣಾಂಕಕ್ಕೆ ಮತ್ತೊಂದು ಅಪೂರ್ಣಾಂಕದಿಂದ ಗುಣಿಸುವದು.	ಎರಡನೇ ಮೂರನೇ ಮೆಟ್ಟುಗಳಲ್ಲಿ ವಿವರಿಸಿದ ಕೆಲಸಗಳು ಹುಟ್ಟುಗರಿಗೆ ಚನ್ನಾಗಿ ಬರುವತನಕ ರೂಢೀ ಮಾಡಿಸಿ ಆಮೇಲೆ ಅಪೂರ್ಣಾಂಕಗಳ ಗುಣಾಕಾರಕ್ಕೆ ಸಾಗಬೇಕು. ಕಲಿಸುವ ಪದ್ಧತಿಯು ಕೆಳಗಿನ ಉದಾಹರಣೆಯ ಮೇಲಿಂದಲೂ ಹಿಂದಿನ ಮೆಟ್ಟುಗಳ ಧೋರಣದ ಮೇಲಿಂದಲೂ ತಿಳಿಯುವದು. ಉದಾ. $\frac{೩}{೫}$ ರೂ. × $\frac{೪}{೫}$ = $\frac{೩}{೫}$ ರೂಪಾಯಿಯ $\frac{೪}{೫}$ = $\frac{೩}{೫}$ ರೂ. ÷ ೪ × ೪ = $\frac{೧೨}{೨೦}$ ರೂ. ÷ ೪ × ೪ = $\frac{೧೨}{೨೦}$ ರೂ. × ೪ = $\frac{೪೮}{೨೦}$ ರೂ.
೫. ಗುಣಾಕಾರದ ಯಾಂತ್ರಿಕ ಪ್ರಶ್ನೆಗಳು.	ಎಂಟು ಹತ್ತು ಗುಣಾಕಾರದ ಲೆಕ್ಕಗಳನ್ನು ಅವುಗಳ ಉತ್ತರ ಸಹಿತವಾಗಿ ಕ. ಹ. ಯ ಮೇಲೆ ಬರೆದು, ಕೊಟ್ಟ ಅಪೂರ್ಣಾಂಕಗಳ ಅಂಶಗಳಿಗೂ ಉತ್ತರದ ಅಂಶಕ್ಕೂ ಅದರಂತೆ ಕೊಟ್ಟ ಅಪೂರ್ಣಾಂಕಗಳ ಛೇದಗಳಿಗೂ ಉತ್ತರದ ಛೇದಕ್ಕೂ ಯಾವ ತರದ ಸಂಬಂಧ ವಿರುತ್ತದೆಂಬದನ್ನು ವಿದ್ಯಾರ್ಥಿಗಳಿಗೆ ನಿರೀಕ್ಷಿಸಲಿಕ್ಕೆ ಹಚ್ಚಬೇಕು. ಅದರ ಮೇಲಿಂದ ಗುಣಾಕಾರದ ನಿಯಮವನ್ನು ಅವರಿಂದ ಹೇಳಿಸಬೇಕು. **ಟೀಪು** ಈ ಟಿಪ್ಪಣಿಗಳಲ್ಲಿ ಸಂಗ್ರಹಿಸಿದ ವಿಷಯವನ್ನು ಎರಡು ಮೂರು ಪಾಠಗಳಾಗಿ ವಿಭಾಗಿಸಿಕೊಳ್ಳಬಹುದು.

S. R. Tatti.

ಶಿಕ್ಷಣದ ಧ್ಯೇಯವು ಯಾವದು?

ಯಾವದೊಂದು ಉದ್ಯೋಗವನ್ನು ಮಾಡುವ ಮನುಷ್ಯನು ಆ ಉದ್ಯೋಗದ ಸಂಬಂಧದಿಂದ ಎರಡು ಪ್ರಕಾರದ ಜ್ಞಾನವನ್ನು ಸಂಪಾದಿಸಬೇಕಾಗುವದು. (೧) ಆ ಉದ್ಯೋಗದ ಸಂಬಂಧದ ತಾತ್ವಿಕಜ್ಞಾನ (೨) ವ್ಯಾವಹಾರಿಕ ಜ್ಞಾನ. ನಮ್ಮ ದೇಶದ ಒಕ್ಕಲಿಗರು ತಮ್ಮ ಉದ್ಯೋಗವನ್ನು ಪರಂಪರೆಯಿಂದ ನಡೆಯುತ್ತ ಬಂದ ಸಾಂಪ್ರದಾಯಗಳಂತೆ ಮಾಡುವರು; ಅದರಿಂದ ವ್ಯವಹಾರವು ಸಾಗುವದು. ಆದರೆ ಅವರಿಗೆ ತತ್ಸಂಬಂಧದ ತಾತ್ವಿಕಜ್ಞಾನವು ಇಲ್ಲದ್ದರಿಂದ ಅವರು ಅಲ್ಪ ಶ್ರಮದಿಂದ ಬಹು ಫಲವನ್ನು ಮಾಡಿಕೊಳ್ಳಲಾರರು. ಒಕ್ಕಲತನದ ಮಟ್ಟುಗಳಲ್ಲಿಯೂ, ಗೊಬ್ಬರಗಳಲ್ಲಿಯೂ, ಸೈರುಗಳನ್ನು ಬೆಳಿಸುವ ಕ್ರಮದಲ್ಲಿಯೂ ಕಾಲಕ್ಕನುಸರಿಸಿ ಯೋಗ್ಯವಾದ ಸುಧಾರಣೆಗಳನ್ನು ಮಾಡಿಕೊಳ್ಳಲರಿಯರು. ಇದೇ ಪ್ರಕಾರ ಶಿಕ್ಷಣದ ಹೋರೆಯನ್ನು ಕೈಕೊಂಡಂಥ ಶಿಕ್ಷಕರಿಗೆ ಶಿಕ್ಷಣವೆಂದರೇನು? ಶಿಕ್ಷಣದ ಧ್ಯೇಯವು ಯಾವದು? ಶಿಕ್ಷಣದ ಬೇರೆ ಬೇರೆ ಅಂಗಗಳು ಯಾವವು? ಮಾನಸಿಕ ಶಕ್ತಿಗಳೆಂದರೆ ಯಾವವು? ಅವು ಬೆಳವಣಿಗೆ ಹೊಂದುವ ಕ್ರಮವು ಯಾವದು? ಇತ್ಯಾದಿ ಅನೇಕ ಸಂಗತಿಗಳ ಜ್ಞಾನವು ಬೇಕಾಗುವದು. ಇದು ಶಿಕ್ಷಣದ ತಾತ್ವಿಕ ಜ್ಞಾನವು. ಇನ್ನು ಆ ತತ್ವಗಳನ್ನು ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಉಪಯೋಗಿಸುವದು, ಅಂದರೆ ಪ್ರತ್ಯಕ್ಷವಾಗಿ ವರ್ಗಕ್ಕೆ ಕಲಿಸುವದು, ಆ ಕಾಲಕ್ಕೆ ಬರುವ ತೊಂದರೆಗಳನ್ನು ನೀಗುವದು, ಹುಡುಗರ ಯೋಗ್ಯತೆಗೆ ಅನುಸಾರವಾಗಿ ವಿಷಯಗಳಿಗೆ ಸುಲಭರೂಪವನ್ನು ಕೊಡುವದು, ಶಿಕ್ಷಣದಲ್ಲಿ ತರತರದ ಉಪಕರಣಗಳನ್ನು ಉಪಯೋಗಿಸುವದು ಇವೆಲ್ಲ ಸಂಗತಿಗಳು ಶಿಕ್ಷಣದ ವ್ಯಾವಹಾರಿಕ ಜ್ಞಾನದಲ್ಲಿ ಸೇರುವವು. ಈ ಜ್ಞಾನಕ್ಕೆ ಶಿಕ್ಷಣದ ಕಲೆ ಎಂತಲೂ ಹೆಸರು ಕೊಡಬಹುದು. ಈ ತರದ ವ್ಯಾವಹಾರಿಕ ಜ್ಞಾನವು ಶಿಕ್ಷಣಶಾಸ್ತ್ರದ ಪುಸ್ತಕಗಳನ್ನು ಓದುವದಕ್ಕಿಂತ ಅನುಭವಿಕರಾದ ಶಿಕ್ಷಕರ ಶಿಕ್ಷಣವನ್ನು ನೋಡುವದರಿಂದ ಚನ್ನಾಗಿ ಆಗುವದು. ಅದಕ್ಕೆ ತಾತ್ವಿಕ ಜ್ಞಾನದ ಜೋಡು ಸಿಕ್ಕರಂತೂ ಕಬ್ಬಿನ ಮೇಲೆ ಜೀನು ಇಕಿದಂತೆ ಆಗುವದು. ಅನುಭವಿಕರಾದ ಶಿಕ್ಷಕರು ಬರೆದಿಟ್ಟ ಗ್ರಂಥಗಳನ್ನು ಓದುವದರಿಂದಲೂ ಅವರ ಕೂಡ ಸಂಭಾಷಣವನ್ನು ಮಾಡುವದರಿಂದಲೂ ಅವರ ವ್ಯಾಖ್ಯಾನಗಳನ್ನು ಕೇಳುವದರಿಂದಲೂ ಆದ ಜ್ಞಾನವನ್ನು ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಉಪಯೋಗಿಸುವದರಿಂದ ಶಿಕ್ಷಣದ ನಿಜವಾದ ತಾತ್ವಿಕ ಜ್ಞಾನವು ಆಗುವದು. ವ್ಯವಹಾರಕ್ಕೆ ಉಪಯೋಗವಿಲ್ಲದ ತಾತ್ವಿಕ ಜ್ಞಾನವು ನಿರರ್ಥಕವಾದದ್ದು.

ಸೃಷ್ಟಿಕರ್ತನಾದ ಪರಮೇಶ್ವರನು ಮನುಷ್ಯಮಾತ್ರರಿಗೆಲ್ಲ ಶರೀರವನ್ನೂ ಇಂದ್ರಿಯಗಳನ್ನೂ ಮನಸನ್ನೂ ಕೊಟ್ಟಿದ್ದಾನೆ. ಕೈಕಾಲು ಮುಂತಾದ ಕರ್ಮೇಂದ್ರಿಯಗಳು ಮನಸಿನ ಇಚ್ಛೆಯ ಮೇರೆಗೆ ನಾನಾಪ್ರಕಾರದ ಕೆಲಸಗಳನ್ನು ಮಾಡುತ್ತವೆ. ಕಣ್ಣು, ಕಿವಿ ಮೊದಲಾದ ಜ್ಞಾನೇಂದ್ರಿಯಗಳು ಬಾಹ್ಯಜಗತ್ತಿನ ಜ್ಞಾನವನ್ನು ಮನಸಿಗೆ ಮಾಡಿಕೊಡುತ್ತವೆ. ಮನಸು ಈ ಜ್ಞಾನವನ್ನೆಲ್ಲ ಸಂಗ್ರಹಿಸಿಟ್ಟುಕೊಂಡು ಅದರ ಸಹಾಯದಿಂದ ಸುಖದುಃಖಗಳನ್ನು ಹೊಂದಿ ನಾನಾ ಪ್ರಕಾರದ ಕಲ್ಪನೆಗಳಿಂದಲೂ ಅನುಮಾನಗಳಿಂದಲೂ ವಿಚಾರಗಳಿಂದಲೂ ನಿರ್ಣಯಗಳನ್ನು ತೆಗೆದು ಕರ್ಮೇಂದ್ರಿಯಗಳಿಂದ ಕೆಲಸವನ್ನು ಮಾಡಿಸಿಕೊಳ್ಳುತ್ತಿರುವದು. ನಾವು ತಿನ್ನುವ ಆಹಾರವು ನಮ್ಮ ಶರೀರದೊಳಗಿನ ನೀರೆ ಬೀರೆ ಅವಯವಗಳಲ್ಲಿ ಪಚನ ಹೊಂದಿ ರಕ್ತವಾಗುವದು. ಅದು ನಮ್ಮ ಅನಿಯಂತ್ರಿತವಾದ ಶ್ವಾಸೋಚ್ಛ್ವಾಸದಿಂದ ಶುದ್ಧವಾಗಿ ಶರೀರಾವಯವಗಳನ್ನೂ ಇಂದ್ರಿಯಗಳನ್ನೂ ಮಿದುಳನ್ನೂ ಪೋಷಿಸುವದು. ಹಾಗು ಅಭಿವೃದ್ಧಿಪಡಿಸುವದು. ಶರೀರದ ಈ ಎಲ್ಲ ಕಾರ್ಯಗಳನ್ನು ಸುಯಂತ್ರಿತವಾಗಿ ನಡೆದ ಒಂದು ಸಾಮ್ರಾಜ್ಯದ ಕಾರ್ಯಗಳಿಗೆ ಹೋಲಿಸಬಹುದು. ಈ ಸಾಮ್ರಾಜ್ಯಕ್ಕೆ ಮನಸು ಅರಸನಂತೆ ಇರುವದು. ಜ್ಞಾನೇಂದ್ರಿಯಗಳೂ ಮಿದುಳೂ ಕೂಡಿ ಅರಸನಿಗೆ ಆಲೋಚನೆಯನ್ನು ಹೇಳುವ ಪ್ರಾಮಾಣಿಕ ಮಂತ್ರಿಮಂಡಲದಂತೆ ಇರುವವು. ಕರ್ಮೇಂದ್ರಿಯಗಳೂ ಪಾಚಕಾವಯವಗಳೂ ಪ್ರಾಮಾಣಿಕರಾದ ಸೇವಕರಾಗಿರುತ್ತಾರೆ. ಅರಸನು ಈ ಮಂತ್ರಿಗಳ ಹಾಗು ಸೇವಕರ ಸಹಾಯದಿಂದ ಸಾಮ್ರಾಜ್ಯದ ಹಿತಕ್ಕಾಗಿ ದೊಡ್ಡದೊಡ್ಡ ಕೆಲಸಗಳನ್ನು ಮಾಡುವನು. ಇದರಿಂದ ನಮ್ಮ ಶರೀರಕ್ಕೆ ಹಲವು ಬಗೆಯ ಕಾರ್ಯಗಳನ್ನು ಮಾಡುವ ಶಕ್ತಿಗಳು ಬರುತ್ತವೆ. ಬಾಲ್ಯದಲ್ಲಿ ಈ ಶಕ್ತಿಗಳು ಅಂಕುರರೂಪವಾಗಿ ಇರುತ್ತವೆ. ಇವುಗಳನ್ನು ಪ್ರಯತ್ನಾಶವಾಗಿಯಾಗಿ, ಕ್ರಮಕ್ರಮವಾಗಿಯೂ, ಬೆಳಿಸಿದರೆ ಇವು ಒಳ್ಳೇ ವಿಕಾಸವನ್ನು ಹೊಂದುವವು. ಜಟ್ಟಿಗಳು ಕಸರತ್ತು ಮಾಡಿ, ತಮ್ಮ ಸ್ನಾಯುಗಳ ಶಕ್ತಿಯನ್ನು ಬೆಳಿಸುವರು; ಪ್ರೊ. ರಾಮಮೂರ್ತಿ, ಸ್ಯಾಂಡೋ ಮೊದಲಾದವರು ತಮ್ಮ ಅದ್ಭುತವಾದ ಶಾರೀರಿಕ ಶಕ್ತಿಯಿಂದ ವಿಲಕ್ಷಣವಾದ ಕೆಲಸಗಳನ್ನು ಮಾಡಿ ತೋರಿಸುವರು; ಭಾಸ್ಕರಾಚಾರ್ಯ, ಸರ ಐಸಾಕ್‌ನ್ಯೂಟನ್ ಮೊದಲಾದವರು ತಮ್ಮ ಅಲೌಕಿಕವಾದ ಬುದ್ಧಿಸಾಮರ್ಥ್ಯದಿಂದ ನಾನಾಪ್ರಕಾರದ ಶೋಧಗಳನ್ನು ತೆಗೆದರು, ಎಡಿಸನ್ನನು ಫೋನೋಗ್ರಾಫ ಎಂಬ ಯಂತ್ರವನ್ನು ಗೊತ್ತುಹಚ್ಚಿದನು. ಗೌತಮಬುದ್ಧ, ತುಕಾರಾಮ ಕೌಂಟಟೋಲೆಸ್ಟೋಯ ಮೊದಲಾದ ಸತ್ಪುರುಷರು ತಮ್ಮ ಮನೋವೃತ್ತಿಗಳನ್ನು ವ್ಯವ

ಳಿಗೊಳಿಸಿ ವಸುಧೈವ ಕುಟುಂಬಕ ವೃತ್ತಿಯನ್ನು ಪಡೆದು ತಮ್ಮ ಉದಾತ್ತವಾದ ಆಚರ ಣೆಯಿಂದ ಜಗತ್ತನ್ನು ಆಶ್ಚರ್ಯಪಡಿಸಿದರು.

ಮೇಲೆ ಹೇಳಿದ ಮಹನೀಯರ ಚರಿತ್ರೆಗಳನ್ನು ಓದುವದರಿಂದ ಇಂಥ ಅಲೌಕಿಕ ಸಾಮರ್ಥ್ಯವು ಅವರಲ್ಲಿ ಹೇಗೆ ಬಂದಿತು ಎಂಬ ಪ್ರಶ್ನೆವು ನಮ್ಮ ಮನಸಿನಲ್ಲಿ ಬರುವದು. ದೇವರು ಇವರಿಗೆ ಇತರರಿಂದ ಭಿನ್ನವಾದ ಶರೀರವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ಕೊಟ್ಟಿರುವದಿಲ್ಲ. ಮತ್ತು ಬಾಲ್ಯದಲ್ಲಿ ಇವರೆಲ್ಲರೂ ಇತರರಂತೆಯೇ ಇದ್ದರು. ದೇವರು ಪ್ರತಿಯೊಬ್ಬನ ಶರೀರದಲ್ಲಿ ಶಾರೀರಿಕಶಕ್ತಿ ಬೌದ್ಧಿಕಶಕ್ತಿ, ಉದಾತ್ತವಾದ ಮನೋವೃತ್ತಿ ಇವ್ರಗಳನ್ನು ಅಂಕುರರೂಪವಾಗಿ ಇಟ್ಟಿರುತ್ತಾನೆ. ಶಿಕ್ಷಣದಿಂದ ಅವು ವಿಕಾಸಹೊಂದುವವು. ಶಾರೀರಿಕ ಮಾನಸಿಕ ಶಕ್ತಿಗಳನ್ನು ಸಮತೋಲಾಗಿಯೂ ಪ್ರಮಾಣಕ್ಕೆ ಸರಿಯಾಗಿಯೂ ಬೆಳಿಸುವದಕ್ಕೆ ವಿಕಾಸಗೊಳಿಸೋಣ ಅನ್ನುತ್ತಾರೆ. ಚಿಕ್ಕ ಮಕ್ಕಳಲ್ಲಿ ಅಂಕುರರೂಪವಾಗಿ ಇರುವ ಈ ಶಕ್ತಿಗಳನ್ನು ಶಕ್ಯವಿದ್ದಷ್ಟು ಮಟ್ಟಿಗೆ ವಿಕಾಸಗೊಳಿಸುವದು ಶಿಕ್ಷಕನ ಮುಖ್ಯವಾದ ಒಂದು ಕರ್ತವ್ಯವಾಗಿರುತ್ತದೆ. ದಿನಾಲು ಗರಡೀಸಾಧಕವನ್ನು ಮಾಡುವದರಿಂದ ಸಾವಕಾಶವಾಗಿಯೂ ಕ್ರಮಕ್ರಮವಾಗಿಯೂ ನಮ್ಮ ಶಾರೀರಿಕ ಶಕ್ತಿಗಳು ಬೆಳೆದು ವಿಕಾಸ ಹೊಂದುವವು. ಮಾನಸಿಕ ಶಕ್ತಿಗಳಿಗಾದರೂ ಇದೇ ನಿಯಮವು ಹತ್ತುವದು. ಅವುಗಳಿಗೂ ಹಿತಕರವಾದ ತಕ್ಕ ವ್ಯಾಯಾಮವನ್ನು ಕೊಟ್ಟರೆ, ಅವು ವಿಕಾಸಹೊಂದುವವು. ಇಲ್ಲದಿದ್ದರೆ ಅವು ಕುಗ್ಗಿಹೋಗುವವು.

ಮಕ್ಕಳು ಇಹಲೋಕದ ಬಾಳುವೆಗೆ ತಕ್ಕನರಾಗುವಂತೆ, ದೇವರು ಅವರಲ್ಲಿ ಅಂಕುರ ರೂಪವಾಗಿ ಇಟ್ಟ ಶಕ್ತಿಗಳಿಗೆ ಯೋಗ್ಯವೂ ಹಿತಕರವೂ ಆದ ವ್ಯಾಯಾಮವನ್ನು ಕೊಡುವದೇ ಶಿಕ್ಷಣವು.

ನಮ್ಮ ಹಲವು ಜಗೆಯ ಕರ್ತವ್ಯಗಳನ್ನು ಜರಗಿಸುವದಕ್ಕೂ ಜಗತ್ತಿನೊಳಗಿನ ಶುದ್ಧಾನಂದವನ್ನು ಅನುಭವಿಸುವದಕ್ಕೂ ನಮ್ಮಲ್ಲಿ ಪಾತ್ರತೆಯು ಬರಬೇಕಾದರೆ ಮೇಲೆ ಹೇಳಿದ ಮೂರೂ ತರದ ಶಕ್ತಿಗಳು ಪೂರ್ಣವಾಗಿ ವಿಕಾಸಹೊಂದುವಂತೆ ನಮಗೆ ಶಿಕ್ಷಣವು ಅವಶ್ಯವಾದದ್ದು.

ಸಂಸಾರದಲ್ಲಿ ನಮಗೆ ಶರೀರ ಸಂಪತ್ತು ಎಷ್ಟು ಅವಶ್ಯವಾದದ್ದೆಂಬದನ್ನು ಬೇರೆ ಹೇಳಿಸುವ ಅವಶ್ಯಕತೆ ಇಲ್ಲ. ಅಶಕ್ತರೂ ಜೀನಿಯ ಕೊಳಕರೂ ಆಗಿರುವವರಿಂದ ಯಾವ ಕಾರ್ಯಗಳೂ ಆಗುವದಿಲ್ಲ. ಅವರು ಪರರಿಗೆ ಭಾರವಾಗಬೇಕಾಗುವದು.

ಅವರಿಗೆ ಈ ಜಗತ್ತಿನೊಳಗಿನ ಸುಖಗಳು ದೊರಕುವದಿಲ್ಲ. ಪರಿಪರಿಯ ಕಷ್ಟಗಳನ್ನು ಮಾತ್ರ ಅನುಭವಿಸಬೇಕಾಗುವದು. ಎಷ್ಟೋ ದೇಶಹಿತದಕ್ಷರಾದ ಶ್ರೀಮಂತರೂ ವಿದ್ವಾಂಸರೂ ಶರೀರಸಂಪತ್ತು ಇಲ್ಲದ ಮೂಲಕವಾಗಿ ಅಕಾಲದಲ್ಲಿ ಮರಣಹೊಂದುವದರಿಂದ ದೇಶಕ್ಕೆ ಬಹು ದೊಡ್ಡ ಹಾನಿಯು ಸಂಭವಿಸುವದು. ಮನುಷ್ಯನ ಬುದ್ಧಿಯು ಎಷ್ಟು ತೀಕ್ಷ್ಣವಿದ್ದಾಗ್ಯೂ ಮನೋವೃತ್ತಿಗಳು ಎಷ್ಟು ಉದಾತ್ತವಿದ್ದಾಗ್ಯೂ ಶರೀರಸಂಪತ್ತೊಂದು ಇಲ್ಲದಿದ್ದರೆ ಅನೇಕರಿಂದ ಏನೂ ಪ್ರಯೋಜನವಾಗುವದಿಲ್ಲ. ಎಲ್ಲ ಪ್ರಕಾರದ ಸಂಪತ್ತಿಗಿಂತ ಶರೀರಸಂಪತ್ತು ಅತಿ ಶ್ರೇಷ್ಠವಾದದ್ದು. ಆದಕಾರಣ ಪ್ರತಿಯೊಬ್ಬ ಮನುಷ್ಯನು ಶರೀರಸಂಪತ್ತನ್ನು ಗಳಿಸಲಿಕ್ಕೆ ಬೇಕು. ಶಾರೀರಿಕ ಕಾರ್ಯಗಳು ಚನ್ನಾಗಿ ನಡೆದು ಅದು ಸದೃಢವೂ ನಿರೋಗಿಯೂ ಆಗುವಂತೆ ಮಾಡುವದೂ, ಶರೀರಾವಯವಗಳಲ್ಲಿ ಅಂಕುರರೂಪವಾಗಿ ಇರುವ ಶಕ್ತಿಗಳನ್ನು ಕೆಲಸಕ್ಕೆ ಹಚ್ಚಿ ಅವುಗಳ ವಿಕಾಸಗೊಳಿಸುವದೂ ಶಿಕ್ಷಕನ ಮೊದಲನೇ ಕರ್ತವ್ಯವಾಗಿರುತ್ತದೆ.

ಮನುಷ್ಯನ ಬುದ್ಧಿಸಾಮರ್ಥ್ಯಗಳು ವಿಕಾಸಹೊಂದದಿದ್ದರೆ ಅವನ ಜೀವಿತವು ವ್ಯರ್ಥವಾಗುವದು. ಜಗತ್ತಿನಲ್ಲಿ ಮನುಷ್ಯಪ್ರಾಣಿಗೆ ಅತನ ಬುದ್ಧಿಸಾಮರ್ಥ್ಯದಿಂದಲೇ ಶ್ರೇಷ್ಠತ್ವವು ಪ್ರಾಪ್ತವಾಗುವದು. ಬುದ್ಧಿವಂತನಾದ ಮನುಷ್ಯನು ತನ್ನ ಬುದ್ಧಿಯ ಬಲದಿಂದ ಸ್ವಂತದ ಕಲ್ಯಾಣವನ್ನು ಮಾಡಿಕೊಳ್ಳುವನಲ್ಲದೆ ತನ್ನ ಕುಟುಂಬದ, ತನ್ನ ಸಮಾಜದ, ತನ್ನ ದೇಶದ ಹಿತವನ್ನೂ ಸಾಧಿಸುವನು. ಈಗಿನ ಕಾಲದ ಮನುಷ್ಯನ ಬಾಳುವೆಯ ಸೌಕರ್ಯಕ್ಕೆ ಹಿಂದಿನ ಕಾಲದ ಜನರ ಬುದ್ಧಿಸಾಮರ್ಥ್ಯದ ಫಲಗಳೇ ಕಾರಣಗಳಾಗಿರುತ್ತವೆ. ಮನುಷ್ಯನು ತನ್ನ ಆಯುಷ್ಯವನ್ನು ಸುಖದಿಂದ ಕಳೆಯಲಿಕ್ಕೂ ತನ್ನ ಹಾಗು ತನ್ನನ್ನು ಅವಲಂಬಿಸಿದ ಜನರ ಚರಿತಾರ್ಥವನ್ನು ಸಾಗಿಸಲಿಕ್ಕೂ ಪ್ರತಿಯೊಬ್ಬ ಮನುಷ್ಯನಿಗೆ ಬುದ್ಧಿಯು ಬೇಕು. ಆದಕಾರಣ ಬುದ್ಧಿಸಾಮರ್ಥ್ಯಗಳನ್ನು ವಿಕಾಸಗೊಳಿಸುವದು ಶಿಕ್ಷಕನ ಎರಡನೇ ಕರ್ತವ್ಯವಾಗಿರುತ್ತದೆ.

ಶರೀರಸಂಪತ್ತು ಬುದ್ಧಿಸಂಪತ್ತು ಇವೆರಡಕ್ಕಿಂತಲೂ ಶೀಲವು ಬಹಳ ಮಹತ್ವವಾದದ್ದು; ಸದೃಢವಾದ ಶರೀರವೂ, ತೀಕ್ಷ್ಣವಾದ ಬುದ್ಧಿಯೂ ಇದ್ದು ಒಳ್ಳೇ ಶೀಲವು ಇರದಿದ್ದರೆ, ಅವನು ತನ್ನ ಶಾರೀರಿಕ, ಬೌದ್ಧಿಕ ಶಕ್ತಿಗಳನ್ನು ಪರರನ್ನು ಮೋಸಗೊಳಿಸುವದರಲ್ಲಿಯೂ, ನಾಶಮಾಡುವದರಲ್ಲಿಯೂ ಉಪಯೋಗ ಮಾಡಿಕೊಳ್ಳುವ ಸಂಭವವುಂಟು. ಸುಸ್ವಭಾವವಿಲ್ಲದ ಮನುಷ್ಯನ ಬೌದ್ಧಿಕ, ಶಾರೀರಿಕ ಶಕ್ತಿಗಳು ಹೆಚ್ಚಿದ್ದಷ್ಟು ಅವನಿಂದ ಸಮಾಜಕ್ಕೆ ಭೀತಿಯು ಹೆಚ್ಚಿರುವದು. ಶೀಲದಿಂದಲೇ ಮನುಷ್ಯನಿಗೆ ಮನು

ಸ್ವತ್ವವು ಪ್ರಾಪ್ತವಾಗಿರುವದು. ಇಲ್ಲದಿದ್ದರೆ ಅವನಷ್ಟು ಭಯಂಕರವಾದ ಪ್ರಾಣಿಯು ಈ ಜಗತ್ತಿನಲ್ಲಿ ಬೇರೆ ಯಾವದೂ ಇರಲಾರದು. ಶೀಲವಂತನಾದ ಮನುಷ್ಯನು ತನ್ನಿಂದ ಪರರಿಗೆ ಯತ್ಕಿಂಚಿತ್ತಾದರೂ ಹಾನಿಯಾಗದಂತೆ ವರ್ತಿಸುವನು. ಎಲ್ಲರೊಂದಿಗೂ ಸಹಾನುಭೂತಿಯಿಂದಲೂ ಮಮತೆಯಿಂದಲೂ ನಡಕೊಳ್ಳುವನು; ಯಾವಾಗಲೂ ಸಾರ್ವತ್ರಿಕ ಕಲ್ಯಾಣವನ್ನು ಚಿಂತಿಸುವನು.

ಈ ತರದ ಶೀಲವು ಕೇವಲ ಮಾನಸಿಕ ಶಿಕ್ಷಣದಿಂದ ಬರಲಾರದು. ಚಿಕ್ಕಂದಿನಿಂದ ಒಳ್ಳೇ ರೂಢಿಗಳು ಹತ್ತಲಿಕ್ಕೆಬೇಕು. ಸತ್ಯಮಾತಾಡುವದು, ಪರರ ಬಗ್ಗೆ ಸಹಾನುಭೂತಿಯನ್ನು ತಾಳುವದು, ಗುರುಹಿರಿಯರ ಆಜ್ಞಾಪಾಲನವನ್ನು ಮಾಡುವದು, ಆತ್ಮಸಂಯಮನದಿಂದ ನಡೆಯುವದು, ತನ್ನ ಕರ್ತವ್ಯಗಳನ್ನು ಹೊತ್ತು ಹೊತ್ತಿಗೆ ವ್ಯವಸ್ಥೆಯಿಂಪಲೂ, ಪ್ರಾಮಾಣಿಕತನದಿಂದಲೂ ಮಾಡುವದು ಇವೇ ಮೊದಲಾದ ಸದ್ಗುಣಗಳು ಚಿಕ್ಕಂದಿನ ಅಭ್ಯಾಸದಿಂದಲೇ ಪ್ರಾಪ್ತವಾಗುವವು. ಮನುಷ್ಯನು ರೂಢಿಗಳ ಸೇವಕನೆಂದು ಹೇಳಬಹುದು. ಒಮ್ಮೆ ನಾವು ರೂಢಿಗಳಿಗೆ ಅಂಕಿತರಾದೆವೆಂದರೆ ಈ ಯಜಮಾನನು ನಮ್ಮನ್ನು ಬಲಾತ್ಕಾರದಿಂದ ತನ್ನ ಇಚ್ಛೆಯಂತೆ ನಡೆಯಿಸಿಕೊಳ್ಳುವನು. ಈ ತರದ ಒಳ್ಳೇ ಚಟಗಳು ಅಥವಾ ರೂಢಿಗಳು ಹುಡುಗರಿಗೆ ಹತ್ತಬೇಕಾದರೆ ಶಾಲೆಯಲ್ಲಿ ಶಿಸ್ತು ನೆಲೆಗೊಳ್ಳಲಿಕ್ಕೆಬೇಕು. ಶಿಕ್ಷಕರೂ ಪಾಲಕರೂ ಕನಿಷ್ಠಪಕ್ಷಕ್ಕೆ ಹುಡುಗರ ಎದುರಿಗಾದರೂ ಸದಾಚರಣೆಯಿಂದ ನಡೆದು ಹುಡುಗರಿಗೆ ಒಳ್ಳೇ ರೂಢಿಗಳನ್ನು ಹಚ್ಚಲಿಕ್ಕೆ ಪ್ರಯತ್ನಮಾಡಲಿಕ್ಕೆ ಬೇಕು.

ಚಿತ್ರಕಲೆ, ಬಡಿಗತನ, ಕಮ್ಮಾರಿಕೆ, ಹೊಲಿಗೆ, ಹೆಣಿಕೆ, ಕಸೂತಿ ಮೊದಲಾದ ವುಗಳಿಂದ ನಮ್ಮ ಕೈಯೊಳಗಿರುವ ಶಕ್ತಿಗಳು ಬಲಹೊಂದುವವು. ಇವುಗಳ ವ್ಯವಸಾಯಕ್ಕೆ ಹಸ್ತಶಿಕ್ಷಣವೆಂಬ ಹೆಸರು ಇದು ಶಾರೀರಿಕ ಶಿಕ್ಷಣದ ಒಂದು ಅಂಗವಾಗಿರುವದು. ಇದರಿಂದ ಮನೋರಂಜನವೂ ವಿಶ್ರಾಂತಿಯೂ ಆಗುವದು. ಈ ವಿಷಯಗಳ ಶಿಕ್ಷಣದಿಂದ ಮಾನಸಿಕ ಶಿಕ್ಷಣಕ್ಕೆ ಬಹಳ ಸಹಾಯವಾಗುವದು. ಇಂದ್ರಿಯಗಳ ಶಕ್ತಿಯು ಬೆಳೆಯುವದು. ಹಸ್ತಶಿಕ್ಷಣವು ವ್ಯವಹಾರಕ್ಕೆ ಬಹಳ ಉಪಯುಕ್ತವಾದದ್ದು. ಆದಕಾರಣ ಇದರಲ್ಲಿ ಕೌಶಲ್ಯವನ್ನು ಪಡೆದರೆ ಬೇಕಾದಷ್ಟು ಧನವು ಸಿಗುವದು.

ಹಸ್ತವ್ಯವಸಾಯವನ್ನು ಮಾಡುವದು ಕೀಳತನವೆಂದು ನಮ್ಮೊಳಗಿನ ಪ್ರತಿಷ್ಠಿತ ಜನರು ತಿಳಿಯುತ್ತಾರೆ. ಅದು ತೀರ ತಪ್ಪು. ಫ್ರೋಬೆಲ್, ಮಾಂಟೆಸರಿ ಮೊದಲಾದವರ ಚಿಕ್ಕಮಕ್ಕಳ ಶಿಕ್ಷಣಕ್ರಮವು ಹಸ್ತವ್ಯವಸಾಯಗಳನ್ನೇ ಅವಲಂಬಿಸಿರುವದು.

ಈ ಮೇರೆಗೆ ಮನುಷ್ಯನು ಇಹಲೋಕದ ಬಾಳುವೆಗೆ ತಕ್ಕವನಾಗಬೇಕಾದರೆ ಶಾರೀರಿಕ ಶಿಕ್ಷಣವನ್ನು ಹೊಂದಿ ಸದೃಢವಾದ ಶರೀರವುಳ್ಳವನೂ ನಿರೋಗಿಯೂ ಆಗಲಿಕ್ಕೆ ಬೇಕು; ಬೌದ್ಧಿಕಶಿಕ್ಷಣವನ್ನು ಹೊಂದಿ ತೀಕ್ಷ್ಣವೂ ವಿಶಾಲವೂ ಆದ ಬುದ್ಧಿಯುಳ್ಳವನಾಗಲಿಕ್ಕೆಬೇಕು. ನೈತಿಕಶಿಕ್ಷಣವನ್ನು ಹೊಂದಿ ಸುಶೀಲನಾಗಲಿಕ್ಕೆಬೇಕು. ಕೈಗಳನ್ನೂ ಕಣ್ಣುಗಳನ್ನೂ ಸರಿಯಾಗಿ ಉಪಯೋಗ ಮಾಡಲಿಕ್ಕೆ ಕಲಿಯಬೇಕು. ಈ ಪ್ರಕಾರ ಸರ್ವಾಂಗ ಪರಿಪೂರ್ಣವಾದ ಮನುಷ್ಯನೇ ಏನೇ ಶತಮಾನದ ನಾಗರಿಕನು. ಇಂಥ ನಾಗರಿಕರನ್ನು ಉಂಟು ಮಾಡುವದೇ ಸದ್ಯದ ಶಿಕ್ಷಣದ ಧ್ಯೇಯವಾಗಿರುವದು.

ಮೇಲಿನ ವಿವೇಚನದಿಂದ ಶಿಕ್ಷಣವೆಂದರೇನು? ಶಿಕ್ಷಣದ ಧ್ಯೇಯವು ಯಾವದು? ಅದರ ಅಂಗಗಳು ಯಾವವು? ಎಂಬದು ಸ್ಪಷ್ಟವಾಯಿತು.

ಇನ್ನು ಮೇಲೆ ಹೇಳಿದ ಶಿಕ್ಷಣದ ಧ್ಯೇಯವು ಕೊನೆಗಾಣಬೇಕಾದರೆ ಯಾವ ಪದ್ಧತಿಯಿಂದ ಶಿಕ್ಷಣವು ನಾಗತಕ್ಕದ್ದೆಂಬ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವೆನು.

ವಿಷಯಗಳ ಜ್ಞಾನವೂ ವಿಷಯಗಳನ್ನು ಕಲಿಸುವ ಜ್ಞಾನವೂ ಭಿನ್ನವಾಗಿರುವವು. ಸಂಪೂರ್ಣವಾಗಿ ಅಂಕಗಣಿತವನ್ನು ಕಲಿತ ಮನುಷ್ಯನು ಚಿಕ್ಕಮಕ್ಕಳಿಗೆ ಅಂಕಿಮಗ್ಗಗಳನ್ನು ಸುಗಮವಾಗಿ ಕಲಿಸಲಾರನು. ಚಿಕ್ಕಮಕ್ಕಳ ಶಿಕ್ಷಕನಿಗೆ ವಿಷಯಜ್ಞಾನದಷ್ಟೇ ವಿಷಯವನ್ನು ಕಲಿಸುವ ಜ್ಞಾನವು ಅಂದರೆ ಶಿಕ್ಷಣದ ಪದ್ಧತಿಯ ಜ್ಞಾನವು ಹೆಚ್ಚು ಅವಶ್ಯವಾದದ್ದು. ಶಿಕ್ಷಕನು ಒಂದೊಂದು ವಿಷಯವನ್ನು ಕುರಿತು ಬಹಳ ಜ್ಞಾನವನ್ನು ಸಂಪಾದಿಸಿರಬೇಕು; ಹುಡುಗರಿಗೆ ಹಲವು ಸಂಗತಿಗಳನ್ನು ಹೇಳಿಕೊಡಲಿಕ್ಕೆ ಬರುತ್ತಿರಬೇಕು; ಅಂದರೆ ಅವನು ಒಳ್ಳೇ ಶಿಕ್ಷಕನೆಂದು ವಾಡಿಕೆಯಾಗಿ ಜನರು ಅನ್ನುವರು. ಯಾಕಂದರೆ ಇಂಥ ಶಿಕ್ಷಕನು ಹೇಳಿದ ಅನೇಕ ಸಂಗತಿಗಳನ್ನು ಹುಡುಗರು ನೆನಪಿನಲ್ಲಿಟ್ಟುಕೊಂಡು ಪರೀಕ್ಷೆಯಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಕೊಡಲು ಸಮರ್ಥರಾಗುವರು. ಅದರಿಂದ ಜನರು ಹಾಗೆ ತಿಳಿಯುವದು ಸ್ವಾಭಾವಿಕವು. ಆದರೆ ಹುಡುಗನು ವಿಷಯವನ್ನು ಎಷ್ಟು ಕಲಿತನೆಂಬದನ್ನು ನೋಡುವದಕ್ಕಿಂತ ಒಂದೊಂದೇ ಸಂಗತಿಯನ್ನು ಹ್ಯೇಗೆ ಕಲಿತಿರುವನೆಂಬದನ್ನು ನೋಡುವದು ಹೆಚ್ಚು ಮಹತ್ವವಾದ ಸಂಗತಿಯಾಗಿರುವದು. ಈ ಸಂಗತಿಯು ಸ್ಪಷ್ಟವಾಗಿ ತಿಳಿಯುವದಕ್ಕಾಗಿ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.

ನಮ್ಮ ಶರೀರ ಸಾಮರ್ಥ್ಯವು ಬೆಳೆಯಬೇಕಾಗಿದೆ ಎಂದು ಕಲ್ಪಿಸುವಾ. ಅದಕ್ಕಾಗಿ ನಾವು ಸ್ವತಃ ಸಾಮು ತೆಗೆಯಬೇಕು; ಜೋಡಿ ಡಂಬೆಲ್ಸಗಳನ್ನು ಕೈಯಲ್ಲಿ ಹಿಡಿದು

ಸಾಲು ಅದರ ಎಕ್ಸರಸಾಯಿಜಗಳನ್ನು ಮಾಡಲಿಕ್ಕೆಬೇಕು. ಅಂದರೆ ಶರೀರದ ಬೇರೆ ಬೇರೆ ಸ್ನಾಯುಗಳಿಗೆ ಸ್ವತಃ ವ್ಯಾಯಾಮವನ್ನು ಕೊಡಲಿಕ್ಕೆಬೇಕು. ಹೀಗೆ ಮಾಡದ ಡಂಬೆಲ್ಸಗಳ ಒಂದು ಜೋಡಿಯನ್ನು ಯಾವಾಗಲೂ ಕಿಸೆಯಲ್ಲಿಟ್ಟುಕೊಂಡು ಶಾರೀರಿಕ ಶಕ್ತಿಯನ್ನು ತೋರಿಸುವ ಪ್ರಸಂಗ ಬಂದಾಗ ಆ ಡಂಬೆಲ್ಸಗಳನ್ನು ಹೊರಗೆ ತೆಗೆದು ತೋರಿಸಿದರೆ ಶಾರೀರಿಕ ಶಕ್ತಿಗಳ ಬೆಳವಣಿಗೆಯು ಹೇಗೆ ಕಂಡುಬರಲಾರದೊ ಅದೇ ಪ್ರಕಾರ ಬುದ್ಧಿಸಾಮರ್ಥ್ಯಗಳು ವಿಕಾಸಹೊಂದಬೇಕಾದರೆ ಹುಡುಗರು ಸ್ವತಃ ವಸ್ತುಗಳನ್ನು ಅವಲೋಕನ ಮಾಡಿ ಜ್ಞಾನಸಂಪಾದನ ಮಾಡಬೇಕ್ಕದ್ದು. ಮತ್ತು ಸ್ವಂತವಿಚಾರಗಳಿಂದ ನಿರ್ಣಯಗಳನ್ನು ತೆಗೆಯುವ ರೂಢಿಯನ್ನು ಮಾಡಿಕೊಳ್ಳತಕ್ಕದ್ದು. ಹೀಗೆ ಮಾಡದೆ ಶಿಕ್ಷಕನು ತಾನು ವಿಚಾರಮಾಡಿ ತೆಗೆದುಂಥ ಅಥವಾ ಪುಸ್ತಕದಲ್ಲಿ ಬರೆದುಂಥ ಅನೇಕ ಸಂಗತಿಗಳನ್ನು ಹುಡುಗರಿಗೆ ಹೇಳಿಕೊಡುವದು, ಅವರು ಅವುಗಳನ್ನು ನೆನಪಿನಲ್ಲಿಟ್ಟುಕೊಂಡ ಪರೀಕ್ಷೆಯ ಕಾಲಕ್ಕೆ ಅವುಗಳನ್ನೇ ತಿರುಗಿ ಹೇಳಿಬಿಡುವದು ಈ ಪದ್ಧತಿಯಿಂದ ಬೌದ್ಧಿಕ ಶಿಕ್ಷಣದ ಉದ್ದೇಶವು ಸಫಲವಾದಂತಾಗುವದೋ? ಹುಡುಗರು ಹೀಗೆ ಎಷ್ಟು ಸಂಗತಿಗಳನ್ನು ಕಲಿತು ನೆನಪಿನಲ್ಲಿಟ್ಟರೂ ಅವುಗಳಿಂದ ವಿಚಾರಶಕ್ತಿಗೆ ಚಾಲನೆಯು ದೊರೆಯುವದಿಲ್ಲ. ಕಾರಣ ಅದು ವಿಕಾಸಹೊಂದುವದಿಲ್ಲ. ಆ ಹುಡುಗನು ಕೇವಲ ಅಜ್ಞಾನದ ಭಾರವಾಹಕವಾಗುತ್ತಾನೆ. ಶಾಲೆಯಲ್ಲಿ ಕಲಿಸಲ್ಪಡುವ ಎಷ್ಟೋ ವಿಷಯಗಳು ಹುಡುಗರಿಗೆ ಮುಂದಿನ ಆಯುಷ್ಯದಲ್ಲಿ ಬಹಳ ಕ್ವಚಿತ್ತಾಗಿ ಉಪಯೋಗಬೀಳುವವು. ಹೀಗಿದ್ದು ಆ ವಿಷಯಗಳನ್ನು ಕಲಿಸುವ ಉದ್ದೇಶವೇನಿರಬಹುದು? ಆ ಹುಡುಗರ ಅವಲೋಕನ ಶಕ್ತಿಯು ಬೆಳೆಯಬೇಕು; ಅವರಿಗೆ ಕಾರ್ಯಕಾರಣ ಸಂಬಂಧವು ತಿಳಿಯಬೇಕು; ಸ್ವತಂತ್ರವಾಗಿ ವಿಚಾರ ಮಾಡುವ ಚಟಹತ್ತಬೇಕು, ಅದರಿಂದ ಸೃಷ್ಟಿಕರ್ತನಾದ ಪರಮೇಶ್ವರನ ಚಾತುರ್ಯವೂ ಮಹಿಮೆಯೂ ತಿಳಿಯಬೇಕು. ಈ ಮೊದಲಾದ ಉದ್ದೇಶಗಳು ಇರುವವು.

ಉದ್ದೇಶಗಳು ಸಫಲವಾಗುವಂತೆ ವಿಷಯಗಳನ್ನು ಕಲಿಸುವ ಪದ್ಧತಿಯು ಯೋಚಿಸಲ್ಪಡತಕ್ಕದ್ದು. ಈಗ ಕಲಿಸುವ ವಿಷಯಗಳನ್ನು ಬಿಟ್ಟು ಬೇರೆ ವಿಷಯಗಳಿಂದಲೂ ಮೇಲಿನ ಉದ್ದೇಶಗಳನ್ನು ಸಫಲಗೊಳಿಸಬಹುದು. ಆದರೆ ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ಉಪಯುಕ್ತವಾದ ವಿಷಯಗಳು ನಿಯಮಿಸಲ್ಪಟ್ಟಿರುವವು. ಈ ವಿಚಾರದಿಂದ ವಿಷಯಜ್ಞಾನಕ್ಕಿಂತ ಆ ಜ್ಞಾನವನ್ನು ಸಂಪಾದಿಸುವ ಪದ್ಧತಿಯು ಹೆಚ್ಚು ಮಹತ್ವವಾದದ್ದೆಂಬದು ಸ್ಪಷ್ಟವಾಗುವದು. ತಕ್ಕ ಪದ್ಧತಿಯಿಂದ ಬೌದ್ಧಿಕಶಕ್ತಿಗಳು ವಿಕಾಸಹೊಂದಿದ ಮೇಲೆ ಅವಕ್ಕೆ ಸಾಧನೀಭೂತಗಳಾದ ಭೂಗೋಲ, ಗಣಿತ ಮೊದಲಾದ

ವಿಷಯಗಳ ಹಲಕೆಲವು ಭಾಗವು ಮರೆತುಹೊದರೂ ಅಡ್ಡಿಯಿಲ್ಲ. ಉದಾಹರಣಾರ್ಥವಾಗಿ— ಹಿಂದುಸ್ತಾನದ ಭೂಗೋಲವನ್ನು ಕಲಿಯುವ ಇಬ್ಬರು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳೋಣ. ಅದರಲ್ಲಿ ಒಬ್ಬನು ಹಿಂದುಸ್ತಾನದ ಪ್ರತಿಮೆಯನ್ನೂ ನಕಾಶವನ್ನೂ ಸ್ವತಃ ನಿರೀಕ್ಷಿಸಿ ಪ್ರಾಕೃತಿಕ ಸ್ವರೂಪವನ್ನು ಮಳೆಬೆಳೆಗಳನ್ನು ಉದ್ಯೋಗ ವ್ಯಾಪಾರಗಳನ್ನು ಅವುಗಳ ಪರಸ್ಪರ ಸಂಬಂಧವನ್ನು ವಿಚಾರಮಾಡಿ ಕಲಿತನೆಂದು ತಿಳಿಯೋಣ. ಶಿಕ್ಷಕನು ಈ ವಿದ್ಯಾರ್ಥಿಗೆ ಕೊಂಕಣಪ್ರಾಂತದಲ್ಲಿ ಹೆಚ್ಚು ಮಳೆ ಬೀಳುವ ಕಾರಣವನ್ನೂ ಅಯೋಧ್ಯಾಪ್ರಾಂತದಲ್ಲಿ ದಟ್ಟವಾದ ಜನವಸತಿಯು ಇರುವ ಕಾರಣವನ್ನೂ ಮುಂಬಯಿ, ಹುಬ್ಬಳ್ಳಿ ಮೊದಲಾದ ಪಟ್ಟಣಗಳು ಬೆಳವಣಿಗೆ ಹೊಂದುವ ಕಾರಣಗಳನ್ನೂ ವಿಚಾರ ಮಾಡಲಿಕ್ಕೆ ಹಚ್ಚಿ ಕಲಿಸಿರುವನು. ಮತ್ತೊಬ್ಬ ವಿದ್ಯಾರ್ಥಿಯು ಈ ಎಲ್ಲ ಸಂಗತಿಗಳನ್ನು ಪುಸ್ತಕದಲ್ಲಿ ಬರೆದಂತೆ ಪಾಠಮಾಡಿ ಕಲಿತಿರುವನು. ಕಾಲಾಂತರದ ಮೇಲೆ ಈ ಉಭಯತರೂ ಕಲಿತ ವಿಷಯದಲ್ಲಿ ಬಹಳ ಭಾಗವು ಮರೆತು ಹೋಗುವದು. ಆದರೆ ಮೊದಲನೇ ಹುಡುಗನಲ್ಲಿ ಭೂಗೋಲ ಕಲಿಸುವದರಿಂದ ಉತ್ಪನ್ನವಾದ ಜಿಜ್ಞಾಸೆಯೂ ಚಿಕಿತ್ಸಕಬುದ್ಧಿಯೂ ಕಾರ್ಯಕಾರಣ ಸಂಬಂಧವನ್ನು ವಿಚಾರಮಾಡುವ ರೂಢಿಯೂ ಮಾತ್ರ ಎಂದೂ ನಷ್ಟವಾಗುವದಿಲ್ಲ. ಎರಡನೇ ಹುಡುಗನ ಮಾನಸಿಕಶಕ್ತಿಗಳ ವಿಕಾಸವಿಲ್ಲದ್ದರಿಂದ ಅವನ ಶ್ರಮವು ಮಾತ್ರ ವ್ಯರ್ಥವಾಯಿತು. ಅವನ ಸ್ಮರಣಶಕ್ತಿಯು ಒಳ್ಳೇ ಜಾಗ್ರತವಾಗಿದ್ದರೆ ಕೇಳಿದಾಗ ಕಲಿತ ಸಂಗತಿಗಳನ್ನು ಅವನು ಅಕ್ಷರಶಃ ಅಂದು ತೋರಿಸಬಹುದು. ಆದರೆ ಅದರಿಂದ ಪ್ರಯೋಜನವೇನು? ಸಾರಾಂಶ ಬುದ್ಧಿಗೆ ತಕ್ಕ ವ್ಯಾಯಾಮವು ದೊರೆತು ಅದು ವಿಕಾಸ ಹೊಂದಿದ ಮೇಲೆ ಈ ತರದ ಶಿಕ್ಷಣಕ್ಕೆ ಸಾಧನವಾದ ವಿಷಯಗಳು ಮರೆತು ಹೋದರೂ ಅಡ್ಡಿಯಿಲ್ಲ. ಮುಖ್ಯವಾಗಿ ಬುದ್ಧಿಗೆ ಸಂಸ್ಕಾರವಾದರೆ ತೀರಿತು.

ಎಷ್ಟೋ ಪಾಲಕರೂ ಶಿಕ್ಷಕರೂ ವಿದ್ಯಾರ್ಥಿಗಳು ಪ್ರತಿ ವರ್ಷ ಪರೀಕ್ಷೆಯಲ್ಲಿ ಪಾಸಾಗಬೇಕೆಂದು ಅಪೇಕ್ಷಿಸುವರು. ಅವರು ಪರೀಕ್ಷೆಯೇ ಶಿಕ್ಷಣದ ಧ್ಯೇಯವೆಂದು ತಿಳಿಯುವರು. ಪರೀಕ್ಷೆಯಲ್ಲಿ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಯಿಂದ ಶಿಕ್ಷಕನ ಯೋಗ್ಯತೆಯನ್ನು ನಿರ್ಣಯಿಸುವರು. ಹುಡುಗರಿಗೆ ವಿಷಯವು ತಿಳಿದಿರಲಿ ತಿಳಿಯದಿರಲಿ, ಅವರ ಬುದ್ಧಿಗೆ ತಕ್ಕ ಸಂಸ್ಕಾರವು ಆಗಿರಲಿ ಆಗದಿರಲಿ, ಪರೀಕ್ಷೆಯ ಪೂರ್ವ ಹಲಕೆಲವು ಸಂಗತಿಗಳನ್ನು ಪಾಠಮಾಡಿ ಅವರು ಪಾಸಾದರೆಂದರೆ ವಿದ್ಯಾರ್ಥಿಗಳ ಹಾಗು ಶಿಕ್ಷಕರ

ಕರ್ತವ್ಯಗಳು ಮುಗಿದವು. ಈ ಪದ್ಧತಿಯು ಶಿಕ್ಷಣದಿಂದ ವಿದ್ಯಾರ್ಥಿಗಳ ಸ್ಮರಣಶಕ್ತಿಯು ಮಾತ್ರ ಬೆಳೆಯುವದು. ಅದರ ಹೊರತು ಮನಸಿನ ಯಾವ ಶಕ್ತಿಗಳೂ ವಿಕಾಸಹೊಂದುವದಿಲ್ಲ. ಅದರಿಂದ ಹುಡುಗರ ಆನಂದೋಲ್ಲಾಸಗಳು ನಷ್ಟವಾಗುವವು. ಅವರ ಸ್ವಾಭಾವಿಕ ಕುತೂಹಲವೂ, ಚಟುವಟಿಕೆಯೂ ಇಲ್ಲದಂತಾಗುವವು. ಪರೀಕ್ಷೆಯು ಹೇಗೆ ಪಾಸಾಗುವದೆಂಬ ಹೃದ್ರೋಗವು ಹತ್ತಿಬಿಡುವದು. ಎಷ್ಟೋ ಸಂಗತಿಗಳನ್ನು ಹಗಲಿರಳು ಶ್ರಮಬಟ್ಟು ಪಾಠಮಾಡಿಟ್ಟಾಗ್ಯೂ ಪರೀಕ್ಷೆಯಲ್ಲಿ ಹೊಸ ಪ್ರಶ್ನೆಗಳು ಬಿದ್ದವೆಂದರೆ ವಿಚಾರ ಮಾಡಿ ಆ ಪ್ರಶ್ನೆಗಳ ಉತ್ತರವನ್ನು ಬರೆಯುವ ನಃಮರ್ಥ್ಯವಿಲ್ಲದ್ದರಿಂದ ನಾಪಾಸಾಗುವ ಪ್ರಸಂಗವು ಒದಗುವದು. ಅದರಿಂದ ಶ್ರಮವು ವ್ಯರ್ಥವಾಗಿ ಶರೀರಪ್ರಕೃತಿಯು ಮಾತ್ರ ನಷ್ಟವಾಗುವದು. ವಿಚಾರಶಕ್ತಿಯು ಇಲ್ಲದ್ದರಿಂದ ಅವರು ಗತಾನುಗತಿಕರೂ ದೈವವಾದಿಗಳೂ ಆಗುವರು. ಇಂಥವರು ತಮ್ಮ ಮುಂದಿನ ಆಯುಷ್ಯದಲ್ಲಿ ಏದಾವ ದೊಡ್ಡ ಕಾರ್ಯವನ್ನು ಮಾಡುವರು? ಈ ಮೇರೆಗೆ ಚಿಕ್ಕಂದಿನ ಬಹು ಬೆಲೆಯುಳ್ಳ ಆಯುಷ್ಯವು ಯಾವ ಶಾಲೆಯಲ್ಲಿ ವ್ಯರ್ಥವಾಗಿ ಕಳೆಯಲ್ಪಟ್ಟಿತೋ ಆ ಶಾಲೆ, ಯಾವ ಶಿಕ್ಷಣಪದ್ಧತಿಯಿಂದ ತಮ್ಮ ಮಾನಸಿಕ ಶಕ್ತಿಗಳೆಲ್ಲ ಕುಗ್ಗಿ ಶರೀರಪ್ರಕೃತಿಯು ನಷ್ಟವಾಯಿತೋ ಆ ಶಿಕ್ಷಣಪದ್ಧತಿ, ಆ ಶಿಕ್ಷಕ ಇವರ ಬಗ್ಗೆ ಹುಡುಗರು ಪ್ರಬುದ್ಧರಾದ ಮೇಲೆ ಎಷ್ಟು ಪೂಜ್ಯಬುದ್ಧಿಯನ್ನು ತೋರಿಸಬಹುದು? ಈ ತರದ ಶಿಕ್ಷಣವನ್ನು ಹೊಂದುವದಕ್ಕಿಂತ ನಾಲೆಗೆ ಹೋಗದೆ ಯಾವದೊಂದು ಉದ್ಯೋಗವನ್ನು ಕೈಕೊಂಡು ಅನುಕರಣದಿಂದ ಆ ಉದ್ಯೋಗದ ಜ್ಞಾನವನ್ನು ಸಂಪಾದಿಸಿ ಮನಃಪೂರ್ವಕವಾಗಿ ಪ್ರಯತ್ನಮಾಡಿದ್ದರೆ, ಅವರು ಎಷ್ಟೋ ಕರ್ತೃತ್ವಶಾಲಿಗಳಾಗಿ ಜಗತ್ತಿನಲ್ಲಿ ಯಶಪಡೆಯಬಹುದಾಗಿತ್ತು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಂಬಂಧದಿಂದ ವಿಚಾರಮಾಡಿದರೆ, ಕೇವಲ ಪಾಠಮಾಡಿ ಕಲಿತ ವಿದ್ಯಾರ್ಥಿಗಳಿಗಿಂತಲೂ ಮಾನಸಿಕಶಕ್ತಿಗಳ ವಿಕಾಸಹೊಂದುವಂತೆ ಕಲಿತ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಮೇಲೆ ಬರುವರೆಂಬದಕ್ಕೆ ಸಂದೇಹವಿಲ್ಲ. ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆಹೊಂದಬೇಕೆಂಬೊಂದೇ ಧ್ಯೇಯವನ್ನು ಮುಂದಿಟ್ಟುಕೊಂಡು ಶಿಕ್ಷಣವನ್ನು ಸಾಗಿಸಿದರೆ ಶಿಕ್ಷಣದ ಬೇರೆ ಅಂಗಗಳಾದ ಶರೀರಪ್ರಕೃತಿ, ಸ್ವಭಾವರಚನೆ ಇವುಗಳ ಕಡೆಗೆ ವಿಶೇಷವಾಗಿ ಲಕ್ಷ್ಯಕೊಡಲಿಕ್ಕಾಗುವದಿಲ್ಲ. ಹುಡುಗರು ಒಳ್ಳೇ ಬುದ್ಧಿವಂತರಾಗುವದಕ್ಕಿಂತ ಸ್ವಭಾವದಿಂದ ಒಳ್ಳೆಯವರೂ, ಶರೀರದಿಂದ ಸದೃಢರೂ, ನಿರೋಗಿಗಳೂ ಆಗುವದು, ಬಹಳ ಮಹತ್ವದ ಸಂಗತಿಯಾಗಿರುತ್ತದೆ. ಜಗತ್ತಿನ ಬಾಳುವೆಯಲ್ಲಿ ಯಶವು ಬುದ್ಧಿಸಾಮರ್ಥ್ಯಕ್ಕಿಂತ ಶರೀರ ಪ್ರಕೃತಿ ಹಾಗು ಸುಸ್ವಭಾವ ಇವುಗಳನ್ನು ವಿಶೇಷವಾಗಿ

ಅವಲಂಬಿಸಿರುವದು. ಈ ವಿಚಾರದಿಂದ ಸದ್ಯದ ಪರಿಸ್ಥಿತಿಯಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೂ, ವಸತಿಗೃಹಗಳೂ ಅವುಗಳ ಮೇಲಿ ಮಾದರಿಯ ಶಿಕ್ಷಕರ ಮೇಲ್ವಿಚಾರಣೆಯೂ ಎಷ್ಟು ಅವಶ್ಯವಾಗಿರುವವೆಂಬದು ಗೊತ್ತಾಗುವದು.

ನಾರಾಂಶ, ಒಳ್ಳೇ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಶರೀರಸಂಪತ್ತಿಯೂ ವಿಚಾರ ಶಕ್ತಿಯೂ ಬೆಳವಣಿಗೆ ಹೊಂದುವಂತೆಯೂ, ಅವರಿಗೆ ಒಳ್ಳೇ ರೂಢಿಗಳು ಹತ್ತಿ ಅವರು ಸುಶೀಲರಾಗುವಂತೆಯೂ, ಅವರು ತಮ್ಮ ಮುಂದಿನ ಆಯುಷ್ಯದಲ್ಲಿ ಮಾಡತಕ್ಕ ಕರ್ತವ್ಯಗಳನ್ನೂ ಕಣ್ಣು ಕಿವಿಗಳನ್ನೂ ಕೈಕಾಲುಗಳನ್ನೂ ಸರಿಯಾಗಿ ಉಪಯೋಗಿಸಿ ವ್ಯವಸ್ಥೆಯಿಂದ ಮಾಡುವ ಸಾಮರ್ಥ್ಯವುಳ್ಳವರಾಗುವಂತೆಯೂ ಮನಃಪೂರ್ವಕವಾಗಿ ಯತ್ನ ಮಾಡುವನು; ಅದರೆ ವಿದ್ಯಾರ್ಥಿಗಳು ಪುಸ್ತಕದೊಳಗಿನ ಹಲಕೆಲವು ಸಂಗತಿಗಳನ್ನು ಪಾಠ ಮಾಡಿ ಪರೀಕ್ಷೆಯಲ್ಲಿ ಪಾಸಾಗಬೇಕೆಂದು ಅವನು ಎಂದೂ ಅಪೇಕ್ಷಿಸುವದಿಲ್ಲ ಇಂಥ ಶಿಕ್ಷಕನ ಬಗ್ಗೆ ಅವನ ವಿದ್ಯಾರ್ಥಿಗಳು ಪ್ರೇಮಾದರಗಳುಳ್ಳವರಾಗಿ ಕೃತಜ್ಞತೆಯಿಂದ ಅಮರಣ ಪೂಜ್ಯಬುದ್ಧಿಯನ್ನು ವ್ಯಕ್ತಪಡಿಸುವರೆಂಬ ಮಾತಿಗೆ ಸಂದೇಹವಿಲ್ಲ ಇಂಥ ಶಿಕ್ಷಕರು ವಿದ್ಯಾರ್ಥಿಗಳ ಸುಕೃತದಿಂದಲೇ ಲಭಿಸುವರು. ಮಾಸಿಡೋನಿಯಾ ಅರಸನಾದ ಫಿಲಿಪ್ಪನು, ದೊಡ್ಡ ಸಿಕಂದರನು ಹುಟ್ಟಿದಾಗ ಅರಿಸ್ಟಾಟಲನಿಗೆ ನಿನ್ನಂಥ ಶಿಷ್ಯನು ಜೀವದಿಂದಿರುವಾಗ ನನಗೆ ಮಗನು ಹುಟ್ಟಿದ್ದರಿಂದ ನಾನೂ ನನ್ನ ಮಗನೂ ಋಣಿರೆಂದು ತಿಳಿಯುತ್ತೇವೆ ಎಂದು ಪತ್ರವನ್ನು ಬರೆದಿದ್ದನಂತೆ.

ತ. ನಾ. ಅವಿಮಾನಭಾವಿ.

ಪ್ರೊ. ಮಾಣಿಕರಾವ (ಜುಮ್ಮಾದಾದಾ ವ್ಯಾಯಾಮಶಾಲಾ, ಬಡೋದೆ) ಇವರ ವ್ಯಾಯಾಮದ ಸಾಮಾನ್ಯನಿಯಮಗಳು.

(ಬರೆದು ಬಂದದ್ದು.)

—————:o:—————

(ಅಕ್ಟೋಬರ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಗಡಿಣಾಧಕ ಮಾಡುವ ಸ್ಥಳದೊಳಗಿನ ಮಣ್ಣು, ಕುಸ್ತಿಯಾಡಿಯಾಡಿ ಗಟ್ಟಿಯಾಗಿ ಕುಳಿತಿದ್ದರೆ, ಅದನ್ನು ಸಲಿಕೆಯಿಂದ ಅಗಿದು ತೆಗೆಯುವದು; ಈ ಮುಂತಾದ ವ್ಯಾಯಾಮಗಳು ಹೊಟ್ಟೆಯ ಸಲುವಾಗಿ ಬಹಳ ಉಪಯುಕ್ತವಾದವುಗಳು. ಯಾವ ಮನೆಯ ಮುಂಭಾಗದಲ್ಲಿಯೂ, ಹಾಗು ಹಿಂಭಾಗದಲ್ಲಿಯೂ ತೋಟವನ್ನು ಮಾಡಿಕೊಂಡಿರುವರೋ ಅವರು ಪ್ರತಿದಿನ ತೋಟದೊಳಗೆ ಹೋಗಿ ನಿಯಮಿತವೇಳೆಯಲ್ಲಿ ಕೆಲಸ ಮಾಡುತ್ತಲಿದ್ದರೆ ಒಳ್ಳೇ ಲಾಭವಾಗುವದು.

ನಖದಿಂದ ಬೆರಳುಗಳಿಗೆ ಒಂದು ತರದ ಶೋಭೆಯುಂಟಾಗಿರುವದು. ಈ ಉಗುರೊಳಗಿನ ಭಾಗವು ಅತಿ ಸೂಕ್ಷ್ಮವಾದದ್ದಾಗಿರುವದು. ಅದಕ್ಕೆ ಸೂಜಿ ಅಥವಾ ಅದರಂಥ ಬೇರೆ ಪದಾರ್ಥಗಳು ತಾಕಿದ್ದಾದರೆ ಸೊಯ್ಯಹತ್ತಿ ಎಷ್ಟೋ ವೇಳೆಯವರೆಗೆ ದುಃಖವನ್ನುಂಟುಮಾಡುತ್ತದೆ.

ನಖ

ಉಗುರಿನಲ್ಲಿ ಮಲ (ಹೊಲಸು) ಸಂಚಯವಾಗದಂತೆ ಎಚ್ಚರಗೊಳ್ಳಬೇಕು. ಅದನ್ನು ಸೀಲಿಂದಪ್ಪೀಲೆ ತೆಗೆದು ಹಾಕುತ್ತಿರಬೇಕು. ಉಗುರಿನಲ್ಲಿ ಮಲವು ಸಂಚಿತವಾದರೆ 'ಉಗುರುಸುತ್ತಿನಂಥ' ಕೆಟ್ಟ ರೋಗಗಳು ಬೆರಳುಗಳಲ್ಲಿ ಉಂಟಾಗಿ ಬಹಳ ತಾಪವನ್ನುಂಟುಮಾಡುತ್ತವೆ. ಉಗುರಿನಿಂದ ತುರಿಸಿಕೊಳ್ಳಬಾರದು ಹಾಗು ಕೆದರಬಾರದು. ಇದರಂತೆಯೇ ಬಹಳ ಬಿಗಿಯಾಗಿ ಕುಳಿತಿರುವ ಮುಚ್ಚಳ ಮುಂತಾದವುಗಳನ್ನು ಉಗುರಿನಿಂದ ಕತ್ತಿತೆಗೆಯಲಿಕ್ಕೆ ಪ್ರಯತ್ನಿಸಬಾರದು. ನಾಪಿಕರ ಕಡೆಯಿಂದ ಉಗುರುಗಳನ್ನು ಹತ್ತಿಯಾಗಿ ಎಂದೂ ತೆಗೆಯಿಸಿಕೊಳ್ಳಬಾರದು.

ನಮ್ಮ ತ್ವಚೆಯಲ್ಲಿ ಅನೇಕ ಛಿದ್ರಗಳಿರುತ್ತವೆ. ಆ ಛಿದ್ರಗಳೊಳಗಿಂದ ಶರೀರದೊಳಗಿನ ಹೊಲಸೆಲ್ಲ ಹೊರಗೆ ಬರುತ್ತಿರುತ್ತದೆ. ಮಲವು ಹೊರಗೆ ಬಂದ ಕೂಡಲೇ ಆ ಛಿದ್ರಗಳೆಲ್ಲ ಮುಚ್ಚಿ ಹೋಗುವವು. ಈ ಕಾರಣದ ಮೂಲಕವಾಗಿಯೇ ಸ್ನಾನದ ಆವಶ್ಯಕತೆಯು ವಿಶೇಷವಾಗಿರುವದು. ಸ್ನಾನ ಮಾಡಿದ ಕೂಡಲೇ ಈ ಮಲವೆಲ್ಲ ತೊಳೆದು ಹೋಗಿ, ಆ ಛಿದ್ರಗಳು ಮತ್ತೆ ತೆರೆಯುವವು. ಆ ಛಿದ್ರಗಳನ್ನು ನಾವು ತೊಳೆಯದಿದ್ದರೆ, ಅಲ್ಲಿ ಮಲಸಂಚಯವಾಗಿ ನಾನಾಪ್ರಕಾರದ ರೋಗಗಳನ್ನುಂಟು ಮಾಡುವದು. ಸ್ನಾನಮಾಡುವಾಗ ಪ್ರತಿಯೊಂದು ಅವಯವಗಳನ್ನು ಚನ್ನಾಗಿ ತಿಕ್ಕಿಕೊಳ್ಳತಕ್ಕದ್ದು. ಉರುಟು ಬಣ್ಣ–ವಸ್ತ್ರದಿಂದ ಸ್ವಚ್ಛವಾಗಿ ಒರೆಯಿಸಿಕೊಳ್ಳತಕ್ಕದ್ದು. ಅಂದರೆ ಆ ಛಿದ್ರಗಳು ತೆರೆಯುವದಕ್ಕೆ ಒಳ್ಳೇ ಅನುಕೂಲವಾಗುವದು. ನಮ್ಮ ಹಿಂದೂ ಧರ್ಮಶಾಸ್ತ್ರದಲ್ಲಿ ಸ್ನಾನದ ಪದ್ಧತಿಯನ್ನು ಸೇರಿಸಿದ್ದು ಇದಕ್ಕಾಗಿಯೇ.

ತ್ವಚ

ಈ ಛಿದ್ರಗಳನ್ನು ಬಂದು ಇಡುವದರಿಂದ ವಿಪರೀತ ಪರಿಣಾಮವೇನಾಗುವದೆಂಬದನ್ನು ಪರೀಕ್ಷಿಸುವದಕ್ಕಾಗಿ 'ಪಿರಿಸೀ ಅರ್ಡಿ' ಎಂಬ ಹೆಸರಿನ ತಜ್ಞ ಡಾಕ್ಟರನೋರ್ವನು ನಾಯಿ, ಬೆಕ್ಕು, ಮೊಲ ಇವುಗಳ ಮೇಲೆ ಒಂದು ಪ್ರಯೋಗವನ್ನು ಮಾಡಿ ನೋಡಿದನು. ಅವನು ಈ ಪ್ರಾಣಿಗಳ ಶರೀರಕ್ಕೆಲ್ಲ ಘಟ್ಟಿಯಾದ ಬಣವನ್ನು ದಪ್ಪಾಗಿ ಕೊಟ್ಟನು. ಹಾಗು ಅವುಗಳನ್ನು ಬಿಟ್ಟುಬಿಟ್ಟನು. ಅವುಗಳ ಮೇಲೆ ಮೊದಲನೇ ದಿವಸ ಈ ಲೇಪನದ ಪರಿಣಾಮವು ವಿಶೇಷವಾಗಲಿಲ್ಲ. ಅವು ಮೊದಲಿನಂತೆಯೇ

ತಿನುಂಡು ತಿರುಗಿದವು. ಆದರೆ ಎರಡನೇ ದಿವಸ ಹುಚ್ಚು ಹಿಡಿದವುಗಳಂತೆ ಮಾಡತೆ. ಡಗಿದವು! ಮೂರನೇ ದಿವಸ ಎಚ್ಚರದಪ್ಪಿ ಬಿದ್ದವು.

ಇಲ್ಲಿಯವರೆಗೆ ಶರೀರದೊಳಗಿನ ಅವಯವಗಳ ಸಂಬಂಧವಾಗಿ ವಿಚಾರ ಮಾಡಿದ್ದಾಯಿತು. ಇನ್ನು ಮನುಷ್ಯನ ಆರೋಗ್ಯಕ್ಕೆ ಬಾಹ್ಯ ಕಾರಣಗಳಾದ

೧ ಹವೆ ೩ ಅನ್ನ, ೫ ವ್ಯಸನಪರಾಙ್ಮುಖತೆ, ೭ ಕ್ಷೌರ (ಶ್ಮಶ್ರು)
೨ ನೀರು, ೪ ನಿದ್ದೆ, ೬ ಉಡಿಗೆತೊಡಿಗೆಗಳು, ೮ ವ್ಯಾಯಾಮ ಹಾಗ
ಮೈ ತಿಕ್ಕಿಕೊಳ್ಳೋಣ ಇವುಗಳ ಬಗ್ಗೆ ಸಾಧಾರಣ ವಿಚಾರ ಮಾಡಿದರೆ ಈ ಲೇಖನ ಮುಗಿದಂತಾಗುವದು.

(ಮುಂದೆ ನಾಗುವದು)

ಪ್ರಾಚೀನಕಾಲದ ಮುಸಲಮಾನರ ಉದಾರತೆಯೂ ಭರತಖಂಡದ ಮೇಲಿನ ಪ್ರೀತಿಯೂ.

——[೦]——

(ಲೇಖಕ—K. ರಾ. ಸ. ಭಟ್ಟ, ತೃತೀಯೋಪಾಧ್ಯಾಪಕ, ಶಾಲಾ ಹೆಗಡೆ.)

ಮುಸಲ್ಮಾನರು ಅನುರಾಗದಿಂದಲೂ, ಅವಿಶ್ರಾಂತಶ್ರಮದಿಂದಲೂ ಹಿಂದುಗಳ ಭಾಷೆ ಮತ್ತು ವಿದ್ಯೆಗಳನ್ನು ಕಲಿತ ರೀತಿಯೂ, ಅವುಗಳಲ್ಲಿ ಸಂಪಾದಿಸಿದ ಅಧಿಕಾರವೂ ಇತಿಹಾಸದಲ್ಲಿ ಸ್ಪಷ್ಟಾಕ್ಷರಗಳಿಂದ ವರ್ಣಿತವಾಗಿರುತ್ತವೆ.

ಅಬುಮಾಅಶಾನ ಫಾಲಾಕಿಯು ೧೦ ವರ್ಷಗಳವರೆಗೆ ಹಿಂದೂದೇಶದಲ್ಲಿದ್ದು ಸಂಸ್ಕೃತಭಾಷೆಯನ್ನೂ, ಹಿಂದೂಶಾಸ್ತ್ರವನ್ನೂ ಕಲಿತನು. ಅಬುರಾಯಹಾನ ಬೇರೂಣಿಯು ೧೫ ವರ್ಷ ಈ ದೇಶದಲ್ಲಿದ್ದು ಸಂಸ್ಕೃತ ಭಾಷೆಯಲ್ಲಿ ಅಸಾಧಾರಣ ಅಭಿಜ್ಞತೆಯನ್ನು ಪಡೆದನು. ಹಿಂದುಗಳ ಜ್ಯೋತಿಷ, ದರ್ಶನ ಮುಂತಾದ ಶಾಸ್ತ್ರಗಳ ಸಂಬಂಧವಾಗಿ ಜಗದ್ವಿಖ್ಯಾತವಾದ " ಕೇತಾಬುಲ್ ಹಿಂದು " ಎಂಬ ಗ್ರಂಥವನ್ನು ರಚಿಸಿದನು. ಫಿರೋಜಶಹನು ಹಿಂದೂಗ್ರಂಥಗಳನ್ನು ಅನುವಾದಿಸಲಿಕ್ಕೆ ಆದೇಶಿಸಿದನು. ಅಕಬರನ ದರ್ಬಾರದಿಂದ ಸಂಸ್ಕೃತಗ್ರಂಥಗಳನ್ನು ಭಾಷಾಂತರಿಸಲಿಕ್ಕೆ ಉತ್ಸಾಹವು ಕೊಡಲ್ಪಟ್ಟಿತ್ತು. ರಾಜಕುಮಾರ ಡಾನಿಯಲನು ಹಿಂದೂ ಭಾಷೆಯ ಮೇಲೆ ಅತಿಶಯ ಅನುರಾಗವುಳ್ಳವನಿದ್ದನು. ಅಬಾದ ಚಿತಗ್ರಾಮಿಯು ಹಿಂದುಗಳ ಅಲಂಕಾರಶಾಸ್ತ್ರವನ್ನನುಸರಿಸಿ ಅನೇಕ

ಪುಸ್ತಕಗಳನ್ನು ಬರೆಸಿದನು. ಕಾಶೀಮ ಫೇರಸ್ತನು "ಏಖ್‌ತಿಯಾರಾತೆ ಕಾಸೇಮೀ" ಎಂಬ ಗ್ರಂಥವನ್ನು ಬರೆದು ಹಿಂದುಗಳ ಆಯುರ್ವೇದ ಶಾಸ್ತ್ರವನ್ನು ಫಾರ್ಸಿಭಾಷೆಯಲ್ಲಿ ಭಾಷಾಂತರಿಸಿದನು. ಇವೆಲ್ಲವೂ ಅತಿ ಪುರಾತನ ಕಾಲದ ಮಾತುಗಳಾಗಿ ಹೋದವು. ಭರತಖಂಡದ ಮುಸಲ್ಮಾನ ಅಧೀಶ್ವರರಲ್ಲಿ ಸಾಮ್ರಾಟ್ ಅಕಬರನು ಮಾತ್ರ ಎಲ್ಲಕ್ಕೂ ಹೊದಲು ಹಿಂದೂ ವಿದ್ವಾಂಸರಿಗೆ ಆಶ್ರಯಕೊಟ್ಟನು. ಮತ್ತು ಸಂಸ್ಕೃತಭಾಷೆಯ ಗ್ರಂಥಗಳನ್ನು ಅನುವಾದ ಮಾಡಲಿಕ್ಕೆ ಉತ್ಸಾಹಪನ್ನಿತ್ತನೆಂದು ಅನೇಕರ ಭಾವನೆಯಿರುತ್ತದೆ. ಆದರೆ ಅಕಬರನಿಗಿಂತ ನೂರಾರು ವರ್ಷಗಳ ಪೂರ್ವದಲ್ಲಿ ಆಗಿಹೋದ ಕಾಶ್ಮೀರಾಧಿಪತಿ 'ಸುಲ್ತಾನ ಜಾಯೇನ-ಉಲ್-ಅಬೇದಿನ' ಎಂಬುವನು ಇದನ್ನು ಎಲ್ಲಕ್ಕೂ ಮೊದಲು ಆರಂಭಿಸಿದ್ದನು. ಜಿಜಿಯಾ ಕರವನ್ನೂ, ಗೋಹತ್ಯವನ್ನೂ ನಿಲ್ಲಿಸಿದವರಲ್ಲಿ ಸಹ ಇವನೇ ಮೊದಲನೆಯವನು.

"ತಾರೀಖೆ ಫೇರಿಸ್ತಾ" ಎಂಬ ಗ್ರಂಥದಲ್ಲಿ 'ಸುಲ್ತಾನ ಜಾಯೇನ-ಉಲ್-ಅಬೇದಿನ'ನ ಸಂಬಂಧವಾಗಿ ಬರೆದಿರುವದೇನಂದರೆ—

"ಇವನು ಹಿಂದೂ ದೇವಾಲಯಗಳ ಸಲುವಾಗಿ ದೇವೋತ್ತರ (ದೇವತ್ರ= ಓಯಾಕ್‌ಫ್) ವನ್ನು ಕೊಡುತ್ತಿದ್ದನು. ಜಿಜಿಯಾಕರವನ್ನು ತೆಗೆದುಹಾಕಿದನು. ಗೋಹತ್ಯವನ್ನು ನಿಲ್ಲಿಸಿದನು. ಫಾರ್ಸೀ, ಹಿಂದೀ, ತಿಬೇತೀ ಮುಂತಾದ ಭಾಷೆಗಳ ವ್ಯುತ್ಪತ್ತಿಯುಳ್ಳವನಾಗಿದ್ದನು. ಈ ಯಾವತ್ತೂ ಭಾಷೆಗಳಲ್ಲಿ ಸುಲಭವಾಗಿ ಕಥೋಪಕಥನವನ್ನು ನಡಿಸುತ್ತಿದ್ದನು. ಇವನ ಆದೇಶದಿಂದ ಅರಬೀ, ಫಾರ್ಸೀ ಭಾಷೆಯ ಅನೇಕ ಗ್ರಂಥಗಳು ಹಿಂದೀ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟವು. ಇದರಂತೆಯೇ ಹಿಂದೂ ಗ್ರಂಥಗಳಾದರೂ ಫಾರ್ಸೀ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟವು. ಭಾರತದಲ್ಲಿ ವಿಖ್ಯಾತವಾದ ಮಹಾಭಾರತ'ವಾದರೂ ಅವನ ಆದೇಶದಿಂದಲೇ ಅನುವಾದಿತವಾಯಿತು. ಕಾಶ್ಮೀರ ದೇಶದ ಇತಿಹಾಸವಾದ 'ರಾಜತರಂಗಿಣಿ'ಯು ಸಹ ಇವನ ಕಾಲದಲ್ಲಿಯೇ ಬರೆಯಲ್ಪಟ್ಟಿತು. ಆದರೆ ಅನುವಾದಿಸಲ್ಪಟ್ಟ ಮಹಾಭಾರತದ ಭಾಷೆಯು ಪ್ರಾಂಜಲವಾಗಿಲ್ಲೆಂದು ತಿಳಿದು ಅಕಬರನು ವಿಶುದ್ಧವಾದ ಭಾಷೆಯಲ್ಲಿ ಅವನ್ನು ಮತ್ತೊಮ್ಮೆ ಭಾಷಾಂತರಮಾಡಿಸಿದನು. ಇವನಿಂದಲೇ ರಾಜತರಂಗಿಣಿಯಾದರೂ ಫಾರ್ಸೀ ಭಾಷೆಯಲ್ಲಿ ಬರಿಸಲ್ಪಟ್ಟಿತು."

ಹಿಂದುಗಳನ್ನು ಉಚ್ಚತಮ ರಾಜಕಾರ್ಯದಲ್ಲಿ ನಿಯೋಜಿಸುವದು ಮಾತ್ರ ಅಕಬರನ 'ಅವಿಷ್ಕಾರ"ವಿದ್ದಿಲ್ಲ. ದಕ್ಷಿಣದ ವಿಖ್ಯಾತ ಬಾದಶಹನಾದ ಇಬ್ರಾಹಿಮ್ ಆದಲಶ

ಹನು ಸಾಮ್ರಾಟ್ ಅಕಬರನಿಗಿಂತ ೨೦-೨೨ ವರ್ಷಗಳ ಪೂರ್ವದಲ್ಲಿ ಸಿಂಹಾಸನಾರೂಢನಾಗಿದ್ದನು. ಇವನು ತನ್ನ ರಾಜ್ಯದ ಯಾವತ್ತೂ ಕಾರ್ಯಗಳನ್ನು ಹಿಂದುಗಳಿಗೇ ಕೊಟ್ಟಿದ್ದನು. ಇಷ್ಟೇ ಯಾಕೆ ಆಫೀಸಿನಲ್ಲಿ ಸಹ ಫಾರ್ಸೀ ಭಾಷೆಯ ಬದಲು ಹಿಂದೀ ಭಾಷೆಯನ್ನು ಉಪಯೋಗಿಸಬೇಕೆಂದು ಅಪ್ಪಣೆ ಮಾಡಿದ್ದನು. ಫೇರಸ್ತಾಗ್ರಂಥದಲ್ಲಿ ಯಾದರೂ ಇದರಂತೆಯೇ ಹೇಳಲ್ಪಟ್ಟಿರುತ್ತದೆ. ಆದರೆ ಇಬ್ರಾಹಿಮ ಆದಲನು ಅಕಬರ ನುಷ್ಠವನಾಗಿದ್ದಿಲ್ಲ. ಪರಂತು ಅಂಧಭಕ್ತ (ಯಾವನೊಬ್ಬ ವ್ಯಕ್ತಿಯ ಇಲ್ಲವೆ ವಿಷಯದ ದೋಷಗುಣಜ್ಞಾನ ಶೂನ್ಯನಾಗಿ ಆದರಲ್ಲಿ ಶ್ರದ್ಧಾವಂತನಾಗುವದು A staunch advocate) ನಾಗಿದ್ದನು ಎಂಬದು ಮಾತ್ರ ಸ್ಮರಣೆಯಲ್ಲಿಡತಕ್ಕ ಸಂಗತಿಯಾಗಿದೆ.

ಜಾಯೇನ-ಉಲ್-ಆಬೇದೀನ, ಇಬ್ರಾಹಿಮ ಆದಲ, ಫಿರೋಜಶಹ, ಅಬುವಾ ಅಶಾನಫಾಲಾಕೇ, ಅಬು ರಾಯಹಾನ ಬೀರುಣೀ, ಗೋಲಾಮ ಅಲ್ಲಿ, ಅಜಾದ ಮೊದಲಾದವರು ಹಿಂದೂ ಭಾಷಾ-ಸಾಹಿತ್ಯಗಳ ಯಾವ ಸೇವೆಯನ್ನು ಮಾಡಿದರೋ ಅದು ಭರತಖಂಡದ ಇತಿಹಾಸದಲ್ಲಿ ಅತುಲನೀಯವು. ಆದರೆ ಹಿಂದುಗಳು ಮಾತ್ರ ಮುಸಲಮಾನ ಭಾಷಾ-ಸಾಹಿತ್ಯಗಳ ಸೇವೆಯನ್ನು ಅವರ ನೂರರಲ್ಲೊಂದುಪಾಲು ಆದೀಕೆ ಸಾವಿರದಲ್ಲೊಂದುಪಾಲು ಸಹ ಮಾಡಲಿಲ್ಲವೆಂದರೆ ಅತಿಶಯೋಕ್ತಿಯೆನಿಸದು.

ಮುಸಲ್ಮಾನರು ಬರೇ ಹಿಂದುಗಳ ಸಾಹಿತ್ಯ, ದರ್ಶನ ಮುಂತಾವುಗಳಿಗೆ ಮಾತ್ರ ಸಮಾದರವನ್ನೂ, ಸನ್ಮಾನವನ್ನೂ ಮಾಡಿದರೆಂತಲ್ಲ; ಅವರು ಹಿಂದು ದೇಶವಾದ ಭರತಖಂಡವನ್ನಾದರೂ ಶ್ರದ್ಧಾದೃಷ್ಟಿಯಿಂದಲೇ ನೋಡುತ್ತಿದ್ದರು.

'ಮುಸಾಲೆಕುಲ ಅಬ್‌ನಾರ' ಎಂಬ ಪುಸ್ತಕದಲ್ಲಿ ಬರೆದಿರುವದೇನೆಂದರೆ:—

"ಭರತ ಖಂಡವು ಮಹಿಮಾನ್ವಿತವಾದ ಬಹಳ ದೊಡ್ಡ ದೇಶವು. ಇದರ ವಿಸ್ತೃತಸೀಮಾ, ವಿಪುಲಐಶ್ವರ್ಯ, ವಿಶಾಲಸೈನ್ಯ, ಅತುಲನೀಯ ರಾಜ್ಯಶಾಸನ ಪದ್ಧತಿ ಇವನ್ನು ಸರಿಗಟ್ಟುವ ದೇಶವೇ ಇಲ್ಲ.'

"ಯಾವ ದೇಶದ ಸಮುದ್ರದಲ್ಲಿ ಮುತ್ತುಗಳೂ, ಭೂಮಿಯಲ್ಲಿ ಸ್ವರ್ಣವೂ, ಪರ್ವತದಲ್ಲಿ ವಜ್ರ-ಪದ್ಮರಾಗಗಳೂ, ಅಧಿತ್ಯಕೆಯಲ್ಲಿ (table-land) ಅಗುರು ಕರ್ಪೂರಗಳೂ, ಖಣಿಯಲ್ಲಿ ಪಾರಜ ಕಬ್ಬಿಣ ಸೀಸಗಳೂ ಸಿಗುವವೋ ಮತ್ತು ಯಾವ ದೇಶದ ಅರಣ್ಯದಲ್ಲಿ ಆನೆ, ಗಂಡಕ ಮುಂತಾದ ಪ್ರಾಣಿಗಳು ಬೆಳೆಯುವವೋ, ಯಾವ ದೇಶದ ಜನರು ಧಾತುಗಳಿಂದ ನಾನಾತರದ ಆಯುಧಗಳನ್ನು ಮಾಡಬಲ್ಲರೋ, ಯಾವ ದೇಶದ ಸಂಸತ್ತೂ, ಸೈನ್ಯವೂ ಅಗಣ್ಯವೋ; ಯಾವ ದೇಶದ ರಾಜನು ನ್ಯಾಯಪರಾಯಣನೋ,

ಆ ದೇಶವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ ಸರಿ. ಭರತಖಂಡದ ವಿಸ್ತಾರ ವರ್ಣನೆಯನ್ನು ಬರೆಯಹೋದರೆ ಒಂದು ಬಹು ದೊಡ್ಡ ಗ್ರಂಥವಾಗಬಹುದು. (ಹಾಜಿರಾತುಲ ಕೋಡ್‌ಸ್ ೩೭೮, ೩೭೯ ಪಾನು)

ಮುಸಲ್ಮಾನರು ಕೇವಲ ಭರತಖಂಡವನ್ನು ಪ್ರೀತಿಸಿ ಅದರ ಗೌರವ (ಸನ್ಮಾನ) ವನ್ನು ಕಾಯುವದರಿಂದ ಮಾತ್ರ ಸಂತುಷ್ಟರಾಗಲಿಲ್ಲೆಂಬದು ಮುಸಲ್ಮಾನ ಗ್ರಂಥಗಳಿಂದ ತಿಳಿದು ಬರುತ್ತದೆ. ಮತ್ತು ಅವರು ಹಿಂದುಸ್ಥಾನದ ಗೌರವವನ್ನು ಸಪ್ರಮಾಣ ಸಿದ್ಧ ಗೊಳಿಸುವದಕ್ಕಾಗಿ ಬಹು ಪ್ರಯತ್ನ ಬಟ್ಟು ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ.

ಬೆಲ್‌ಗ್ರಾಮಿಯು ತನ್ನದೊಂದು ಗ್ರಂಥದಲ್ಲಿ ಉಪಕ್ರಮಣಿಕೆಯನ್ನು ಬರೆಯುವಾಗ

'ಸ್ವರ್ಗಕ್ಕಿಂತಲೂ ಹೆಚ್ಚು ಗೌರವವನ್ನು ಹೊಂದಿದ ಭರತಖಂಡದ ವರ್ಣನೆಯನ್ನು ಅನೇಕ ಗ್ರಂಥಗಳ ಸಹಾಯದಿಂದ ಬರೆಯುತ್ತೇನೆ' ಎಂದು ಹೇಳಿರುವನು.

ಒಬ್ಬ ಕವಿಯು ಹೇಳುವದೇನಂದರೆ:—

'ಈ ಭರತಖಂಡವು ಸ್ವರ್ಗದ ಶ್ರೇಷ್ಠತಮ ವಿನಿಮಯವು. ನೋಡಿರಿ! ಆದಮನು ಸ್ವರ್ಗದಿಂದ ಈ ಭರತಖಂಡದಲ್ಲಿ ಪತಿತನಾದನು.

ಇನ್ನೊಬ್ಬನು " ಭರತಖಂಡದ ಉದ್ಯಾನವು ಸ್ವರ್ಗಕ್ಕಿಂತ ಹೆಚ್ಚು ಮನೋರಮವಾಗಿರದಿದ್ದರೆ ಆದಮನು ಸ್ವರ್ಗಸುಖವನ್ನೂ ಐಶ್ವರ್ಯವನ್ನೂ ಪರಿತ್ಯಜಿಸಿ ಈ ಭರತಖಂಡಕ್ಕೆ ಯಾಕೆ ಬರುತ್ತಿದ್ದನು? ಎಂದಿರುವನು.

ಇವೆಲ್ಲ ಸಂಗತಿಗಳು ನಿಜವಿರಲಿ, ನಿಜವಿರದಿರಲಿ; ಮುಸಲ್ಮಾನರು ಭರತಖಂಡವನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬದೂ, ಹಿಂದೂಜನರ ವಿದ್ಯೆ, ಶಾಸ್ತ್ರಗಳ ಸಂಬಂಧವಾಗಿ ಅವರ ಮನೋಭಾವವು ಯಾವ ರೀತಿಯದಿತ್ತೆಂಬದೂ ಸ್ಪಷ್ಟವಾಗಿ ತಿಳಿಯುವಂತಿದೆ.

ಶೇಖ ಅಲ್ಲಿ ರುನ್ನೀ ಎಂಬುವನು ತನ್ನ ಗ್ರಂಥದಲ್ಲಿ ಅಂದುದೇನಂದರೆ—" ಎಲ್ಲಕ್ಕೂ ಮೊದಲು ಯಾವ ದೇಶದಲ್ಲಿ ಗ್ರಂಥಗಳು ಉದಯಿಸಿದವೋ ಮತ್ತು ಯಾವ ದೇಶದಲ್ಲಿ ಜ್ಞಾನೋದಯವಾಯಿತೋ ಆ ದೇಶವೇ ಈ ಭರತಖಂಡವು. "

ದಾರ್ಶನಿಕ ಜಮಾಲ ಉದ್ದೀನ ಫೇಕ್ತಿಯು " ಸಕಲ ಜಾತಿಗಳು ಬಹುಕಾಲದವರೆಗೆ ಭರತಖಂಡವನ್ನು ಜ್ಞಾನದ ಖಣಿಯೆಂದೂ, ನ್ಯಾಯ, ರಾಜನೀತಿಗಳ ನಿರ್ಝರವೆಂದೂ ಸ್ವೀಕರಿಸುತ್ತ ಬಂದಿವೆ " ಎಂದಿರುವನು.

ಅದರಂತೆಯೇ ಬೆಲ್‌ಗ್ರಾಮಿಯಾದರೂ "ಅಂಕ, ಸಂಗೀತ ಶಾಸ್ತ್ರಗಳಲ್ಲಿ ಭಾರತ ವಾಸಿಗಳೇ ಅಗ್ರಗಣ್ಯರು. ಅವರು ಈ ಎರಡೂ ಶಾಸ್ತ್ರಗಳಲ್ಲಿ ಅನುಪಮ ಬುದ್ಧಿಶಾಲಿಗಳಾಗಿದ್ದರು. ಇವರಿಗಿಂತ ಹೆಚ್ಚಿನ ಬುದ್ಧಿಶಾಲಿಗಳು ಇರುವ ಸಂಭವವಿಲ್ಲ; ಅನ್ಯದೇಶಸ್ಥರೆಷ್ಟೋ ಜನರು ಅಂಕಶಾಸ್ತ್ರದ ನಿಯಮಗಳನ್ನು ಹೆಚ್ಚಾಗಿ ಭಾರತವಾಸಿಗಳಿಂದಲೇ ಕಲಿತುಕೊಂಡರು. ಹಿಂದೂ ಅಲಂಕಾರಶಾಸ್ತ್ರವನ್ನು ಹುಟ್ಟಿಸುವವರಲ್ಲಿ ಸಹ ಅರಬರ ಇಲ್ಲವೆ ಫಾರ್ಸಿಗಳ ಸಹಾಯವನ್ನು ಬೇಡಲಿಲ್ಲ; ಇದರ ಕಾರಣವೇನಂದರೆ—ಭರತಖಂಡದಲ್ಲಿ ಯಾವ ಯುಗದಲ್ಲಿ ಜ್ಞಾನಚರ್ಚೆಯು ನಡೆದಿತ್ತೊ ಅದನ್ನು ನಿರ್ಣಯಿಸುವದಕ್ಕೆ ಇತಿಹಾಸವು ಸಮರ್ಥವಿರುವದಿಲ್ಲ" ಎಂದು ಹೇಳಿರುವನು.

ಸುಲ್ತಾನ ಫಿರೋಜಶಹನು ಹಿಜರಿ ೭೫೫ನೇ ವರ್ಷ ಸಿಂಹಾಸನಕ್ಕೆ ಬಂದನು. ಇವನು ಒಮ್ಮೆ ದಂಡೆತ್ತಿ ಹೋಗುವಾಗ ಬಂದು ಜ್ವಾಲಾಮುಖಿಗೆ ಬಂದು ಮುಟ್ಟಿದನು ಅವನು ಅಲ್ಲಿರುವ ಪುಸ್ತಕಾಲಯವನ್ನು ನೋಡಿ ಆಶ್ಚರ್ಯಚಕಿತನಾದನು. ಇದೇ ಸಂಬಂಧವಾಗಿ ಒಂದು ಗ್ರಂಥದಲ್ಲಿ ಹೇಳಿರುವದೇನಂದರೆ:—

'ಆ ಜ್ವಾಲಾಮುಖಿಯಲ್ಲಿ ಪ್ರಾಚೀನ ಬ್ರಾಹ್ಮಣ ಪಂಡಿತರು ಬರೆದ ಅನೇಕ ವ್ಯಸ್ತಕಗಳ ಸಾಧನವು ಕಂಡುಬಂತು. (೧೩೦೦ ಪುಸ್ತಕಗಳು). ಸುಲ್ತಾನನು ಬ್ರಾಹ್ಮಣಪಂಡಿತರಿಂದ ಅವನ್ನು ಓದಿಸಿ ತಿಳಿದುಕೊಂಡನು. ಮತ್ತು ಗ್ರಂಥಗಳ ಭಾವ, ವಿಷಯಗಳನ್ನು ನೋಡಿ ಅತಿಶಯ ಸಂತುಷ್ಟನಾದನು. ಈ ಭಾವಗಳು ಎಲ್ಲರಿಗೂ ಸುಲಭವಾಗಿ ತಿಳಿಯುವಂಥವಿರುವದರಿಂದ ಕೆಲವು ಪುಸ್ತಕಗಳನ್ನು ಫಾರ್ಸಿ ಭಾಷೆಯಲ್ಲಿ ಬರೆಯಲಿಕ್ಕೆ ಅವನು ಆಜ್ಞೆಮಾಡಿದನು. ಇದಲ್ಲದೆ ಒಂದು ದರ್ಶನಶಾಸ್ತ್ರದ ಪುಸ್ತಕವನ್ನಾರಿಸಿಕೊಂಡು ಅದನ್ನು ಪದ್ಯರೂಪವಾಗಿ ಅನುವಾದ ಮಾಡಿಸಿದನು. 'ಕೇತಾಬೆ ಫಿರೋಜಶಾಹೀ' ಎಂದು ಅನುವಾದದ ಹೆಸರು. ಸುಲ್ತಾನನು ಇದನ್ನೋದಿ ಆನಂದಪಟ್ಟನು. ಮತ್ತು ಅನುವಾದಕನಿಗೆ ಬಂಗಾರ-ಬೆಳ್ಳಿಗಳ ಬಹಳ ಧಾನ್ಯಗಳನ್ನೂ, ಒಂದು ಜಹಾಗೀರನ್ನೂ ಕೊಟ್ಟನು. ಈ ಗ್ರಂಥದ ವಿಷಯಗಳನ್ನನುಸರಿಸಿ ಸುಲ್ತಾನನ ಸಭೆಯಲ್ಲಿ ಆಗಾಗ್ಗೆ ಚರ್ಚೆಯು ನಡೆಯುತ್ತಿತ್ತು.

ಹಿಂದೂಸಾಹಿತ್ಯ, ಶಾಸ್ತ್ರಗಳನ್ನು ಸಮಾಲೋಚಿಸಿ ನೋಡಿದರೆ ಮುಸಲಮಾನರು ಕಾಫರರೆಂದು ನಿಂದಿಸಲ್ಪಡಲಿಕ್ಕೆ ಅಯೋಗ್ಯರೆಂದು ಕಂಡುಬರುವದು.

ಹಸ್ತಶಿಕ್ಷಣ

(ಅಕ್ಟೋಬರ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಕಾದರೆ, ಅಲ್ಲಿಯ ಜನರಲ್ಲಿ ಹಸ್ತಕುಶಲತೆಯೂ ಶೋಧಕಬುದ್ಧಿಯೂ ಅನೇಕ ಸಾಮಾನುಗಳನ್ನು ಅಂದವಾಗಿಯೂ ಅಚ್ಚುಕಟ್ಟಾಗಿಯೂ ತಯಾರಿಸುವ ಸಾಮರ್ಥ್ಯವೂ ಬಹಳ ಇರಬೇಕಾಗುವದು. ಇವೆಲ್ಲ ಗುಣಗಳು ಹಸ್ತಶಿಕ್ಷಣದಿಂದ ಅಭಿವೃದ್ಧಿಹೊಂದುವವು. ಆದ್ದರಿಂದ ಇದನ್ನು ಶಾಲೆಗಳಲ್ಲಿ ಕಲಿಸಲಾರಂಭಿಸಿದರೆ, ಯಾವದೊಂದು ದೇಶದ ಔದ್ಯೋಗಿಕ ಪರಿಸ್ಥಿತಿಯು ಸುಧಾರಿಸುವದು.

ಹಸ್ತಶಿಕ್ಷಣವು ಸೋಮಾರಿತನಕ್ಕೆ ಅವಕಾಶಕೊಡದೆ ಕೆಲಸ ಮಾಡುವವರಿಗೆ ವಿಶ್ರಾಂತಿಯನ್ನುಂಟುಮಾಡುವದು. ಈ ಕಾರಣದಿಂದ ಇದೊಂದು ಸೊಗಸಾದ ಹಾಗೂ ಅತಿಶ್ರೇಷ್ಠವಾದ ವಿಶ್ರಾಂತಿದಾಯಕ ವಿಷಯವಾಗಿರುವದು. ಇದರಿಂದ ಇಚ್ಛಾಶಕ್ತಿಯು ಅಭಿವೃದ್ಧಿಹೊಂದುವದು. ವಿದ್ಯಾರ್ಥಿಗಳು ಕಠಿಣವಾದ ಕೆಲಸಗಳಿಂದ ಹೇಗೆ ಪಾರಾಗಬೇಕೆಂಬದನ್ನು ತಿಳಿದುಕೊಳ್ಳುತ್ತಾರೆ. ಬಹಳ ದಿವಸಗಳ ವರೆಗೆ ಇದೇ ತರದ ಕೈಕೆಲಸವು ನಡೆಯಬಹುದಾದ ಕಾರಣ ಯಾವದೊಂದು ಕೆಲಸದಲ್ಲಿ ಸ್ಥೈರ್ಯವೂ, ಅದರಿಂದ ಸಹನಶೀಲತೆಯೂ, ತಾಳ್ಮೆಯೂ ಬಹಳಮಟ್ಟಿಗೆ ನೆಲೆಗೊಳ್ಳುವವು. ಇವುಗಳ ಉಪಯೋಗವು ಶಾಲೆಯಲ್ಲಿಯ ಬೇರೆ ಅನೇಕ ಕೆಲಸಗಳಲ್ಲಿ ಆಗುವದು. ಸ್ವಭಾವಘಟನೆಯಲ್ಲಂತೂ ಕೈಕೆಲಸವು ಅತಿ ಬಲವಾದ ಸಾಧನವಾಗಿರುವದು. ಇದರಲ್ಲಿ ಅವಧಾನವೂ ಚಿತ್ತೈಕಾಗ್ರತೆಯೂ ಬಹಳಮಟ್ಟಿಗೆ ಬೆಳೆಯುವವು. ಶಿಕ್ಷಣಕ್ಕೆ ಉಪಯುಕ್ತವಾದ ಕೈಕೆಲಸದಿಂದ ಆನಂದವು ಉಂಟಾಗುತ್ತದೆ. ಈ ತರದ ಪ್ರತ್ಯಕ್ಷ ಲಾಭದಾಯಕ ಸಂಗತಿಯಿಂದ ಸಮಾಧಾನಕರವಾದ ಪರಿಣಾಮಗಳು ಉಂಟಾಗುವವೆಂದು ಕಂಡುಬರುತ್ತದೆ. ಹುಡುಗರು ಕೈಕೊಂಡ ಕೆಲಸದಿಂದ ಅವರಿಗೆ ಮನರಂಜನೆಯು ಪೂರ್ಣವಾದರೆ ಅವರು ಬಹಳ ಜಾಗ್ರತೆಯುಳ್ಳವರಾಗುವರು. ಈ ಸಂಗತಿಯು ಬಹುತರ ಎಲ್ಲ ತರದ ಕೈಕೆಲಸಗಳಲ್ಲಿ ಕಂಡುಬರುವದಲ್ಲದೆ ವ್ಯಕ್ತಿತ್ವವು ಒಡೆದುತೋರುವದು. ಕೆಲವು ದಿವಸಗಳನಂತರ ಇದೇ ಸ್ವಭಾವದ ದ್ಯೋತಕವಾಗುವದು. ಯಾವದೊಂದು ನಿಜವಾದ ವಸ್ತುವನ್ನು ತಯಾರಿಸುವದರಲ್ಲಿ ಉತ್ತಮತರದ ನೀತಿಶಿಕ್ಷಣವು ದೊರೆಯುವದು. ಯಾಕಂದರೆ ಆ ವಸ್ತುವಿನ ಆಕಾರ, ಅಳತೆ ಮುಂತಾದವುಗಳಲ್ಲಿ ಯಾವ ತರದ ಮೋಸವನ್ನು ಮಾಡಲಿಕ್ಕೆ

ಬರುವದಿಲ್ಲ; ಹೆಚ್ಚು ಕಡಿಮೆಯಾದ ಅಳತೆಗಳಿದ್ದರೆ ಅದು ಕೂಡಲೆ ಬೈಲಿಗೆ ಬರುವದು. ಇದರ ಹೊರ್ತು ಯಾವದೊಂದು ಕೆಲಸದಲ್ಲಿ ಇಂತಿಷ್ಟೇ ಕುಶಲತೆಯು ಬಂತೆಂಬದನ್ನು ಹುಡುಗರಾಗಲಿ ಹುಡುಗಿಯರಾಗಲಿ ತಿಳಿದುಕೊಳ್ಳಲಿಕ್ಕೆ ಬರುತ್ತದೆ. ವಿದ್ಯಾರ್ಥಿಗಳು ಲೆಕ್ಕಗಳನ್ನಾಗಲಿ ಅರ್ಥವಿವರಣೆಯನ್ನಾಗಲಿ ಪಾಟಿಯ ಮೇಲೆ ಮಾಡಿ, ಇಟ್ಟುಕೊಂಡು ಶಿಕ್ಷಕನು ತಪ್ಪು ಅಥವಾ ಸರಿ ಎಂದು ಹೇಳುವವರೆಗೆ ಸುಮ್ಮನೆ ಕೂಡ್ರಬೇಕಾಗುವದು. ಆದರೆ ಕೈಕೆಲಸದಲ್ಲಿ ವಿದ್ಯಾರ್ಥಿಯು ಮಾಡಲಿಯು ಸಿದ್ಧನಾದ ಕೂಡಲೆ ಅದನ್ನು ಪರೀಕ್ಷಿಸಿ ತೆಗೆದಿಟ್ಟ ಆಕೃತಿಗೆ ಸರಿಯಾಗಿರುವನೋ ಇಲ್ಲವೋ ಎಂಬದನ್ನು ಸ್ವಂತ ತಿಳಿದುಕೊಳ್ಳಲಿಕ್ಕೆ ಬರುವದು. ಶಿಕ್ಷಕನಾದರೂ ನಿಜವಾಗಿ ಅದನ್ನು ನೋಡಿ, ಉತ್ತಮ ಅಥವಾ ಮಧ್ಯಮವೆಂದು ಹೇಳುತ್ತಿದ್ದಾಗ್ಯೂ ವಿದ್ಯಾರ್ಥಿಯು ಯಾರ ಸಹಾಯವಿಲ್ಲದೆಯೂ ತನ್ನ ಆ ಪ್ರಗತಿಯನ್ನು ಅರಿತುಕೊಳ್ಳಲಿಕ್ಕೆ ಬರುತ್ತದೆ. ಆದ್ದರಿಂದಲೇ ಕೈಕೆಲಸವು ಮಹತ್ವದ್ದೂ ಹುರಿದುಂಬಿಸುವಂಥದೂ ಆಗಿರುವದು. ಹಸ್ತಶಿಕ್ಷಣದಿಂದುಂಟಾಗುವ ಇವ್ಹೇ ಮಾನಸಿಕ, ನೈತಿಕ, ಹಾಗೂ ಶಾರೀರಿಕ ಲಾಭಗಳನ್ನು ತುಸುಹೊತ್ತು ಮನದಲ್ಲಿ ನೆನೆದರೆ ಅದನ್ನು ಸಾಮಾನ್ಯಶಿಕ್ಷಣ ಸಿಗುವ ಶಾಲೆಗಳಲ್ಲಿ ಅವಶ್ಯವಾಗಿ ಕೊಡಬೇಕೆಂಬದು ಗೊತ್ತಾಗುತ್ತದೆ.

ಕೈಕೆಲಸಗಳಲ್ಲಿ ಅನೇಕ ಪ್ರಕಾರಗಳಿರುವವು. ಅವುಗಳಲ್ಲಿ ಚಿತ್ರಕಲೆಯು ಪ್ರಾಚೀನಕಾಲದಿಂದ ಬಹಳ ಪ್ರಸಿದ್ಧವಿರುವದು. ವ್ಯವಹಾರದಲ್ಲಿಯೂ ಸಾಮಾನ್ಯವಾಗಿ ಎಲ್ಲಿ ವಿಷಯಗಳ ಅಭ್ಯಾಸದಲ್ಲಿಯೂ ಅದರ ಅವಶ್ಯಕತೆಯು ವಿಶೇಷವಾಗಿರುವದು. ಅನೇಕ ವಿಚಾರಗಳನ್ನು ಒಟ್ಟುಗೂಡಿಸಿ ಮೂರುನಾಲ್ಕು ಚಿತ್ರಗಳಿಂದ ವ್ಯಕ್ತಪಡಿಸಬಹುದು. ಅತಿ ಮನೋರಂಜನವಾಗುವಂಥ ಕಾದಂಬರಿಗಳನ್ನು ಕೇವಲ ಚಿತ್ರಗಳಿಂದ ರಚಿಸಬಹುದು. ಶಾಲೆಯಲ್ಲಿ ಕಲಿಸಬಹುದಾದ ಕೈಕೆಲಸಗಳಲ್ಲಿ ಇದನ್ನು ಅವಶ್ಯವಾಗಿ ಸೇರಿಸತಕ್ಕದ್ದು. ಇದರಲ್ಲಿ ಅತಿ ಸೂಕ್ಷ್ಮವಾದ ಕೆಲಸ ಮಾಡುವದಿರುವದರಿಂದ ಸೂಕ್ಷ್ಮಸ್ಥಾಯಿಗಳ ಬೆಳವಣಿಗೆಯಾಗಿ ಮಿದುಳಿನಲ್ಲಿಯ ಅಯಾ ಮಹತ್ವದ ಕೇಂದ್ರಗಳು ಬಲಪಟ್ಟಾಗ್ಯೂ ಶಾರೀರಿಕ ದೃಷ್ಟಿಯಿಂದ ನೋಡಿದರೆ ತುಸು ಅನಾಯಾಸಕಾರಕವಾಗಿರುವದು. ದೂರದಲ್ಲಿಯ ಪದಾರ್ಥಗಳ ಚಿತ್ರಗಳನ್ನು ತೆಗೆಯುವಾಗ ಅನೇಕ ಹುಡುಗರು ಅರ್ಧ ಕಣ್ಣು ಮುಚ್ಚಿ ಅದರ ಅಂತರ, ಎತ್ತರ, ಅಗಲ, ಪಿಡ ಮುಂತಾದವುಗಳ ಅಳತೆಯನ್ನು ತೆಗೆದುಕೊಳ್ಳುವದನ್ನು ನಾವು ದಿನಾಲು ನಮ್ಮ ಶಾಲೆಗಳಲ್ಲಿ ನೋಡುವದಿಲ್ಲವೇ? ಆದ್ದರಿಂದ ಈ ತರದ ಕೊರತೆಯನ್ನು ದೂರಮಾಡಿ ಚಿಕ್ಕಮಕ್ಕಳಿಗೆ ಸಮೀಪದಲ್ಲಿಯ ಇಲ್ಲವೆ ಎಡಗೈಯಲ್ಲಿ ಹಿಡಿ

ದಂಥ ವಸ್ತುಗಳ ಚಿತ್ರವನ್ನು ತೆಗೆಯಿಸಿ ನೇತ್ರಗಳಿಗೂ ಶರೀರಕ್ಕೂ ಅಪಾಯವಾಗದಂತೆ ಶಿಕ್ಷಕರು ಜಾಗರೂಕರಾಗಿ ಈ ಪುರಾತನಕಲೆಯಲ್ಲಿ ಚಿಕ್ಕಮಕ್ಕಳ ಪ್ರಗತಿಯಾಗುವಂತೆ ಮಾಡಬೇಕು. ಇದರ ಹೊರತಾಗಿ ಕಿಂಡರಗಾರ್ಟನ್ನಿನ ವ್ಯವಸಾಯಗಳು, ದಪ್ಪಕಾಗದ ಕಟ್ಟಿಗೆ, ಲೋಹ ಮುಂತಾದವುಗಳಲ್ಲಿಯ ಕೆಲಸ, ಅರ್ಡ್ಯಂದ ಮಾದರಿಗಳನ್ನು ಮಾಡುವದು, ಬೆತ್ತದಿಂದ ಹೆಣೆಯುವದು, ನೇಯುವದು, ಹೊಲಿಯುವದು ಮುಂತಾದ ಇನ್ನೂ ಅನೇಕ ಪ್ರಕಾರಗಳಿರುವವು. ಅದ್ದರಿಂದ ಇವುಗಳಲ್ಲಿ ಚಿಕ್ಕಮಕ್ಕಳ ಯೋಗ್ಯತೆಗೆ ಅನುಕೂಲವಾಗುವಂಥವನ್ನೂ ಮಾನಸಿಕ, ನೈತಿಕ, ಶಾರೀರಿಕ ಬೆಳವಣಿಗೆಗೆ ಯೋಗ್ಯವಾ ದಂಥವನ್ನೂ ಆರಿಸಿಕೊಂಡು ಬೇರೆ ಅನೇಕ ವಿಷಯಗಳೊಡನೆ ಅವುಗಳಲ್ಲಿಯ ಪರಸ್ಪರ ಸಂಬಂಧವನ್ನು ಪೂರ್ಣವಾಗಿ ಕಾಯ್ದುಕೊಂಡು ಸರಾಗವಾಗಿ ಕಲಿಸಬೇಕು. ಚಿಕ್ಕ ಮಕ್ಕಳ ಶಿಕ್ಷಣದಲ್ಲಿ ಬಹಳ ಅನುಭವಿಕರಾದ ಶಿಕ್ಷಕರ ಅಭಿಪ್ರಾಯವು ಕಾಗದ ಹಾಗೂ ಕಟ್ಟಿಗೆಯಲ್ಲಿಯ ಕೆಲಸವೇ ಅತ್ಯುತ್ತಮವಾದದ್ದೆಂದು ಇರುವದು. ಇದಕ್ಕೂ ಪೂರ್ವದಲ್ಲಿ ಕಿಂಡರಗಾರ್ಟನ್ನ ಪದ್ಧತಿಯು ಮೇರೆಗೆ ಅನೇಕ ಕೆಲಸಗಳನ್ನು ಬಾಲಕರಿಂದ ಮಾಡಿಸಿ ತಿಳುವಾದ ಕಾಗದಗಳನ್ನು ಕತ್ತರಿಸುವ ಹಾಗೂ ಮಡಚುವ ವ್ಯವಸಾಯಗಳನ್ನು ಸದಯಾಂತಃಕರಣಿಯಾದ ಶಿಕ್ಷಕನು ಕಲಿಸಿ ಕೋಮಲವಾದ ಹಸ್ತದಲ್ಲಿಯ ಮಜ್ಜಾತಂತುಗಳಿಗೆ ತುಸು ಸಾಮರ್ಥ್ಯವನ್ನು ತಂದುಕೊಟ್ಟಿರಬೇಕು. ಹಿಂದೆ ಹೇಳಿದ ದಪ್ಪಕಾಗದ ಹಾಗೂ ಕಟ್ಟಿಗೆಯಲ್ಲಿಯ ಕೆಲಸವು ಸ್ಲಾಯಿಡ ಪದ್ಧತಿಯಿಂದ ಸಾಗಬೇಕು. ಸ್ಲಾಯಿಡ ಪದ್ಧತಿಯ ಕೈಕೆಲಸವು ಕೇವಲ ಶಿಕ್ಷಣದ ಮಹತ್ವದ ತತ್ವಗಳನ್ನು ಒಳಕೊಂಡದ್ದೂ ಆಗಿರುವದಲ್ಲದೆ ಸಾಧ್ಯವಿದ್ದಮಟ್ಟಿಗೆ ಪ್ರತಿಯೊಬ್ಬ ಹುಡುಗನಿಗೆ ಪ್ರತ್ಯೇಕವಾಗಿ ಕೆಲಸ ಕೊಡುವಂಥದೂ ಆಗಿರುವದು. ಸಾಮಾನ್ಯಶಿಕ್ಷಣದ ಉದ್ದೇಶವೇ ಇದರ ಉದ್ದೇಶವಾಗಿರುವದು. ಸ್ಲಾಯಿಡವು ಶಾಲೆಗಳಲ್ಲಿ ನಡೆಯಬಹುದಾದ ಔಪಪತ್ತಿಕ ಭಾಗವನ್ನೂ ಕಾರಖಾನೆಗಳಲ್ಲಿ ನಡೆಯಬಹುದಾದ ಕರ್ತವ್ಯಭಾಗವನ್ನೂ ಒಟ್ಟುಗೂಡಿಸುವ ಸಾಧನವಾಗಿರುವದು. ಇಲ್ಲಿಯ ಆಯುಧಗಳೇ ಪುಸ್ತಕಗಳು. ಇಲ್ಲಿ ತಯಾರಿಸಲ್ಪಡುವ ವಸ್ತುಗಳ ನಿಜವಾದ ಸ್ವರೂಪವೇ ಅಲ್ಲಿಯ ತಾತ್ವಿಕ ನಿಯಮಗಳು. ಸ್ಲಾಯಿಡದ ಅನೇಕ ಸುಪರಿಣಾಮಗಳು ಬಹಳ ಮಹತ್ವವಾದವಿರುವದರಿಂದಲೂ ಹಸ್ತ-ನೇತ್ರಗಳನ್ನೂ ಮನಸ್ಸನ್ನೂ ಏಕಕಾಲಕ್ಕೆ ವಿಕಾಸಗೊಳಿಸುವದರಿಂದಲೂ ಇದು ಸಾಮಾನ್ಯ ಶಾಲೆಗಳಲ್ಲಿ ದೊರೆಯಬಹುದಾದ ಶಿಕ್ಷಣಕ್ಕೆ ಒಳ್ಳೇ ಅನುಕೂಲವಾಗಿರುವದು. ಈ ವಿದ್ಯೆಯ ಕೆಲಸವು ನಮ್ಮಲ್ಲಿಯ ಜನರ ಮನಸ್ಸನ್ನು ಎಳೆದುಕೊಂಡಿಲ್ಲ; ನಮ್ಮ ಭಾವೀಪ್ರಜೆಗೆ ಇನ್ನೂ

ಇದರ ಮಹತ್ವವು ಚನ್ನಾಗಿ ತಿಳಿದಿಲ್ಲ; ಇದು ಈಚೆಗೆ ಇಲ್ಲಿ ಪ್ರಾರಂಭವಾದ ಕೆಲಸವು. ಕೆಲಸದ ಕಾಲದಲ್ಲಿ ಒಂದು ವಿಶಿಷ್ಟಪ್ರಕಾರದಿಂದ ಕೂಡ್ರುವದು, ಸುಯಾಗಿ ಕೆಲಸ ಮಾಡುವದು, ಸ್ವಚ್ಛತೆ, ಸೌಂದರ್ಯ ಮುಂತಾದವುಗಳ ಕಡೆಗೆ ಲಕ್ಷ್ಯವನ್ನು ಪೂರೈಸುವದು ನಮ್ಮ ಹುಡುಗರ ವ್ಯವಸಾಯವು ಆಗಿಲ್ಲ; ಅದ್ದರಿಂದ ಆ ತರದ ಕೆಲಸದಿಂದ ಪ್ರಾರಂಭವಲ್ಲಿ ತುರು ತೊಂದರೆಯುಂಟಾದಾಗ್ಯೂ ಅದನ್ನು ಸಹಿಸಿಕೊಂಡು ಕೆಲಸಮಾಡುತ್ತಹೋದರೆ ಸಾಮಾನ್ಯಶಿಕ್ಷಣದ ತ್ರಿವಿಧ ಲಾಭಗಳು ವಿಶೇಷವಾಗಿ ತಲೆದೋರುವವು.

ಅರ್ಜಿನಿಂದ ಮಾದರಿಗಳನ್ನು ಮಾಡುವದಾದರೂ ಶಾಲೆಗಳಲ್ಲಿಯ ಉಪಯುಕ್ತವಾದ ಕೆಲಸವಾಗಿರುವದು. ಆದರೆ ಇದು ಕಟ್ಟಿಗೆಯಲ್ಲಿಯ ಕೆಲಸದಷ್ಟು ಮಹತ್ವದ್ದಾಗಲಾರದು. ಈಚೆಗೆ ಪ್ರಕೃತಿವಿಮರ್ಶೆ, ತೋಟದಲ್ಲಿಯ ಕೆಲಸ ಮುಂತಾದ ಮಹತ್ವದ ವಿಷಯಗಳನ್ನು ಶಾಲೆಯಲ್ಲಿ ಕಲಿಸಲಾರಂಭಿಸಬೇಕು ಎಂದು ಯತ್ನಮಾಡುತ್ತಲಿದ್ದಾರೆ. ಇದಾದರೂ ಒಂದು ಕೈಕೆಲಸದ ಭಾಗವಾಗಿರುವದೆಂಬದು ನಿಜ. ಆದರೆ ಇದರಲ್ಲಿ ಗುದ್ದಲಿ, ಸಲಿಕೆ ಮುಂತಾದ ಆಯುಧಗಳನ್ನು ಉಪಯೋಗಿಸಬೇಕಾಗಿರುವದರಿಂದ ಸೂಕ್ಷ್ಮಸ್ನಾಯುಗಳ ಬೆಳವಣಿಗೆಯು ವಿಶೇಷವಾಗಿ ಆಗುವದಿಲ್ಲಾದಕಾರಣ ಕೈಕೆಲಸದ ಸುಪರಿಣಾಮಗಳು ಬಹಳಮಟ್ಟಿಗೆ ಕಾಣುಬರುವದಿಲ್ಲ; ಪ್ರಕೃತಿವಿಮರ್ಶೆಯಲ್ಲಿ ಎಲ್ಲ ಶಾಸ್ತ್ರೀಯ ವಿಷಯಗಳ ಸಾರವು ದೃಷ್ಟಿಗೆ ಬೀಳುವದು. ಆದ್ದರಿಂದಲೇ ಇದನ್ನು ಇತರ ವಿಷಯಗಳೊಡನೆ ಮಾನಸಿಕ ಶಿಕ್ಷಣದಲ್ಲಿ ಅವಶ್ಯವಾಗಿ ನಮ್ಮ ದೇಶದ ಬಾಲಕರಿಗೆ ಪರಿಸ್ಥಿತಿಯನ್ನು ಪೂರ್ಣವಾಗಿ ಲಕ್ಷ್ಯದಲ್ಲಿ ತುದು ಕಲಿಸತೊಡಗಬೇಕು.

ಹಿಂದೆ ವಿವರಿಸಿದ ಅನೇಕ ಸಂಗತಿಗಳಿಂದ ಕೈಕೆಲಸವು ಬಹಳ ಮಹತ್ವದ್ದೆಂದು ಕಂಡುಬಂದರೂ ಇದುವರೆಗೆ ಹಿಂದುಸ್ಥಾನದಲ್ಲಿ ಯಾವ ತರದ ಕೈಕೆಲಸವೂ ಶಾಲೆಗಳಲ್ಲಿ ನೆಲೆಗೊಂಡಂತೆ ತೋರುವದಿಲ್ಲ; ಕಿಂಡರಗಾರ್ಟನ್ನದ ಪರಿಣಾಮವೇನಾಯಿತೆಂಬದು ನಿಮ್ಮೆಲ್ಲರಿಗೂ ವಿದಿತವಾದ ಸಂಗತಿಯೇ ಇರುವದು. ಇದು ಆ ಪದ್ಧತಿಯ ದೋಷವಲ್ಲ ಇಲ್ಲವೆ ಅದನ್ನು ಶೋಧಮಾಡಿದವನ ದೋಷವಲ್ಲ. ಚಿಕ್ಕಮಕ್ಕಳ ಶಿಕ್ಷಕರ ಪಾಲಿಗೆ ಈ ದೋಷವು ಬಂದೊದಗುವದು. ಅದ್ದರಿಂದ ಇದನ್ನು ಕಲಿಸುವ ಶಿಕ್ಷಕನು ಚಿಕ್ಕಮಕ್ಕಳ ಸ್ವಭಾವವನ್ನರಿತವನಿರಬೇಕು. ಶಿಕ್ಷಣದ ವ್ಯಾಪಕವಾದ ಉದ್ದೇಶಗಳನ್ನೂ ತತ್ವಗಳನ್ನೂ ಪೂರ್ಣವಾಗಿ ಮನವರಿಕೆ ಮಾಡಿಕೊಂಡಂಥವನಿರಬೇಕು. ಶಿಕ್ಷಣಕಲೆಯಲ್ಲಿ ಬಹಳಮಟ್ಟಿಗೆ ಪರಿಣತನಾಗಿರಬೇಕು. ಅಂದರೆ ಕಿಂಡರಗಾರ್ಟನ್ನಪದ್ಧತಿಯ

ಕೆಲಸ, ಸಾಯಿಡಪದ್ಧತಿಯ ಕಾಗದ ಇಲ್ಲವೆ ಕಟ್ಟಿಗೆಯಲ್ಲಿಯು ಕೆಲಸ, ಅರ್ಲಿನಲ್ಲಿಯ ಕೆಲಸ, ಪ್ರಕೃತಿನಿಮರ್ಶೆ ಮುಂತಾದವುಗಳಲ್ಲಿ ಯಾವದೇ ಆಗಲಿ, ಅದರಿಂದ ಉತ್ತಮ ತರದ ಲಾಭಗಳು ಕೈಗೂಡಿ ಭಾವೀ ಪ್ರಜರಾದ ಬಾಲಕರ ಕಲ್ಯಾಣವಾಗುವದೆಂದು ನಿಃಸಂದೇಹವಾಗಿ ಹೇಳಬಹುದು.

B. S. Purohit.

ಮಹಾಯುದ್ಧದ ಕಾರಣಗಳು.

೧ನೇ ವ್ಯಾಖ್ಯಾನ

ಇಪ್ಪತ್ತುವರ್ಷಗಳಿಂದ ಜರ್ಮನಿಯಲ್ಲಿ ನಡೆದ ಪ್ರಸಿಯನ್ನರ ಏರಿಕೆಯೇ ಮಹಾಯುದ್ಧದ ನಿಜವಾದ ಕಾರಣವಾಗಿರುವದು. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಜರ್ಮನಿಯು ದೊಡ್ಡ ರಾಷ್ಟ್ರಗಳ ಮಾಲಿಕೆಯಲ್ಲಿದ್ದಿಲ್ಲ. ಅನೇಕ ಚಿಕ್ಕ ಸಂಸ್ಥಾನಗಳೂ, ಪ್ರಸಿಯಾ ಆಸ್ಟ್ರಿಯ ಎಂಬೆರಡು ದೊಡ್ಡ ಸಂಸ್ಥಾನಗಳೂ ಇದರಲ್ಲಿ ಸಮಾವೇಶವಾಗಿದ್ದವು. ಎಲ್ಲ ಸಂಸ್ಥಾನಗಳೂ ಸ್ವತಂತ್ರವಾಗಿದ್ದವು. ಆಸ್ಟ್ರಿಯವು ದೊಡ್ಡ ಸಂಸ್ಥಾನವಿದ್ದು ಅದರ ಅಧಿಸ್ಥಾನದಲ್ಲಿ ಇತರ ಸಂಸ್ಥಾನಗಳಿದ್ದವು. ಪ್ರಸಿಯವೇ ಮಹತ್ವದ್ದಾಗಿ ಅದರ ಕೆಳಗೆ ಎಲ್ಲ ಸಂಸ್ಥಾನಗಳೂ ಉಳಿಯಬೇಕೆಂಬದೇ ಅಲ್ಲಿಯ ಅಧಿಪತಿಯ ಉದ್ದೇಶವಾಗಿತ್ತು. ಜರ್ಮನಿಯ ಪ್ರಸಿದ್ಧ ಮಂತ್ರಿಯಾದ ಪ್ರಿನ್ಸ ಬಿಸ್ಮಾರ್ಕನ ಆಳಿಕೆಯಲ್ಲಿ (೧೮೧೫-೧೮೯೫) ಸದ್ಯದ ಜರ್ಮನಿಯ ನೆಲಗಟ್ಟು ಪ್ರಾರಂಭವಾಯಿತು. ಇವನ ಪೂರ್ವದಲ್ಲಿ ಜರ್ಮನಿಯು ಯುದ್ಧಶಾಸ್ತ್ರದಲ್ಲಿ ಪ್ರವೀಣತೆಯನ್ನು ಪಡೆದಿದ್ದಿಲ್ಲ. ಮಧ್ಯಕಾಲದಲ್ಲಿಯೂ ಹದಿನೆಂಟನೆಯ ಶತಮಾನದ ಕೊನೆಯವರೆಗೂ ಚಿಕ್ಕ ಪುಟ್ಟ ಬಡದಾಟಗಳು ಅನೇಕ ಸಂಸ್ಥಾನಗಳ ನಡುವೆ ನಡೆಯುತ್ತಿದ್ದರೂ ಯುರೋಪದ ರಾಷ್ಟ್ರಗಳ ಕೂಡ ಕಲಹವೆಸಗಿದಾಗ್ಗೆ ಒಕ್ಕಟ್ಟಿಲ್ಲದ ಮೂಲಕ ಭಯಂಕರಸ್ವರೂಪವನ್ನು ಎಂದೂ ತಾಳಲಿಲ್ಲ. ಪ್ರಸಿಯಾ-ಆಸ್ಟ್ರಿಯಾಗಳಲ್ಲಿ ತಕ್ಕಮಟ್ಟಿಗೆ ಉತ್ತಮ ತರದ ಸೈನ್ಯವಿತ್ತು; ಅದರೂ ಹೊಟ್ಟೇಕಿಚ್ಚಿನ ಮೂಲಕ ಯುರೋಪದ ಯುದ್ಧಗಳಲ್ಲಿ ಪ್ರತಿಸ್ಪರ್ಧಿಯಾಗಿ ಹೋರಾಡುತ್ತಿದ್ದವು.

ಬಿಸ್ಮಾರ್ಕನ ಆಳಿಕೆಯಲ್ಲಿ ಈ ಪರಿಸ್ಥಿತಿಯೆಲ್ಲ ಬದಲಾಯಿತು. ಮೊಟ್ಟಮೊದಲು ಜರ್ಮನೀರಾಜ್ಯದ ಅಧಿಪತ್ಯವು ಪ್ರಸಿಯಾಕ್ಕೆ ಸಿಗಬೇಕೆಂದೂ ಒಕ್ಕಟ್ಟಾದ ಎಲ್ಲ ಸಂಸ್ಥಾ

ನಗಳು ಅತಿ ಬಲಿಷವಾದ ಸಾಮ್ರಾಜ್ಯವಾಗಬೇಕೆಂದೂ ಪ್ರಯತ್ನಿಸಿದನು. ಸಮರಾಂಗಣದಲ್ಲಿ ಪ್ರಸಿಯಾವು ಆಸ್ಟ್ರಿಯಕ್ಕಿಂತ ಒಲಿಷವಾಗಿರುವದೆಂಬದು ಅವನಿಗೆ ಮೊದಲೇ ತಿಳಿದಿತ್ತು. ಆದರೂ ಎಲ್ಲ ತಯಾರಿಯನ್ನು ಮಾಡಿದ ಬಳಿಕ ಪ್ರಸಿಯವು ಮುಖ್ಯ ಸಂಸ್ಥಾನವಾಗುವದೆಂದೂ ಆಸ್ಟ್ರಿಯವು ಎರಡನೆಯ ದರ್ಜೆಯದಾಗುವದೆಂದೂ ಅವನಿಗೆ ಮನವರಿಕೆಯಾಯಿತು. ಪ್ರಸಿಯಾ ಆಸ್ಟ್ರಿಯಾಗಳ ಸ್ವಾಮಿತ್ವವು ಮುಖ್ಯವಾಗಿ ಜರ್ಮನಿಯ ಉತ್ತರ ದಕ್ಷಿಣ ಭಾಗಗಳಲ್ಲಿದ್ದಾಗ್ಯೂ ಅಯಾಸವಿಲ್ಲದೆ ೧೮೬೬ನೇ ಇಸವಿಯಲ್ಲಿ ಕಲಹವನ್ನೆಬ್ಬಿಸಿ ಸ್ಯಾಡೋವಾ ಎಂಬ ಯುದ್ಧದಲ್ಲಿ ಆಸ್ಟ್ರಿಯನ್ನರನ್ನು ತುಸು ದಿವಸಗಳಲ್ಲಿ ಬಿಸ್ಮಾರ್ಕನೂ ಸೋಲಿಸಿ ಪ್ರಸಿಯವೇ ಜರ್ಮನ್ನರ ಮುಖ್ಯ ಸಂಸ್ಥಾನವಾಗಿರತಕ್ಕದ್ದೆಂದು ಗೊತ್ತು ಮಾಡಿದನು. ಅಂದಿನಿಂದ ಜರ್ಮನಿಯ ಚಿಕ್ಕ ಚಿಕ್ಕ ಸಂಸ್ಥಾನಗಳೂ ಪ್ರಸಿಯಾದ ಬೆಂಬಲವನ್ನು ಕಟ್ಟಿದವು. ಸದ್ಯದ ಜರ್ಮನಿಯೆಂಬ ಬೇರೆ ರಾಷ್ಟ್ರವಾಯಿತು. ಆಸ್ಟ್ರಿಯವು, ಬೇರೆಯೇ ಉಳಿಯಿತು.

ಬಿಸ್ಮಾರ್ಕನು ಫ್ರೆಂಚರ ಕೂಡ ಯುದ್ಧಮಾಡಿ ಜಯಪಡೆದು ತಾನು ಸ್ಥಾಪಿಸಿದ ಹೊಸರಾಜ್ಯವನ್ನು ದೃಢಪಡಿಸಿದನು. ಆಗ್ಗೆ ಫ್ರಾನ್ಸದಲ್ಲಿ ತೀನೇ ನೆಪೋಲಿಯನ್ನನು ಆಳುತ್ತಿದ್ದನು. ಅನೇಕ ಕಲಹಗಳು ಅಂತರ್ಗತ ಕ್ರಾಂತಿಗಳು ಅಲ್ಲಿ ಬಹಳವಾದ ಮೂಲಕ ಅರಸನಿಗೆ ಆ ರಾಜ್ಯವನ್ನು ಆಳುವದು ಕಷ್ಟಮಯವಾಗಿತ್ತು. ಜರ್ಮನಿಯ ಕೂಡ ಯುದ್ಧವನ್ನು ಹೂಡಿ ಜಯವನ್ನು ಪಡೆದರೆ ರಾಜ್ಯಪದವು ಚಿರಕಾಲದವರೆಗೆ ಉಳಿಯುವದೆಂದು ನೆಪೋಲಿಯನ್ನನು ಭಾವಿಸಿದನು. ಇದೇ ಬಿಸ್ಮಾರ್ಕನಿಗೆ ಈ ಕಾಲಕ್ಕೆ ಇಷ್ಟವಾದದ್ದಾಗಿತ್ತು. ೧೮೭೦ನೇ ಇಸವಿಯಲ್ಲಿ ಬಿಸ್ಮಾರ್ಕನಿಂದಲೇ ಈ ಕಲಹವು ಉದ್ಭವಿಸಿತು. ಪ್ರಸಿಯನ್ನರ ಸೈನ್ಯವು ಫ್ರೆಂಚ ಸೈನ್ಯಕ್ಕಿಂತ ಉತ್ತಮವಾಗಿದ್ದ ಕಾರಣ ಬಿಸ್ಮಾರ್ಕನಿಗೆ ಪೂರ್ಣ ಜಯವು ದೊರೆಯಿತು. ಫ್ರೆಂಚರು ೨೦ ಕೋಟಿ ಪೌಂಡುಗಳನ್ನು ಅಲಸೇಸ ಲೋರೇನ ಎಂಬೆರಡು ಪ್ರಾಂತಗಳನ್ನು ಜರ್ಮನ್ನರಿಗೆ ಕೊಡಬೇಕಾಯಿತು. ಈ ಜಯದ ಮೂಲಕ ಜರ್ಮನಿಯಲ್ಲೆಯ ಎಲ್ಲ ಸಂಸ್ಥಾನಗಳೂ ಬಹಳ ಮಟ್ಟಿಗೆ ಒಕ್ಕಟ್ಟಾಗಿ ಪ್ರಸಿಯಾದ ಅರಸನೇ ಜರ್ಮನೀ ಸಾಮ್ರಾಜ್ಯದ ಬಾದಶಹನಾಗಬೇಕೆಂದು ಗೊತ್ತಾಯಿತು. ಸಾಮ್ರಾಜ್ಯದ ಆಡಳಿತದ ನಿಯಮಗಳಿಂದ ಪ್ರಸಿಯಾಕ್ಕೆ ಮುಖ್ಯಪದವೂ ಬಾದಶಹನಿಗೆ ಸ್ವತಂತ್ರವಾದ ಬಹಳ ಹಕ್ಕುಗಳೂ ದೊರತವು. ಹಾಗೂ ಪ್ರಜಾ ಅಧಿಕಾರಗಳೇನೂ ರಾಜ್ಯವ್ಯವಸ್ಥೆಯಲ್ಲಿದ್ದಿಲ್ಲ.

ಈ ರೀತಿಯಾಗಿ ಬಿಸ್ಮಾರ್ಕನು ಜರ್ಮನಿಯನ್ನು ಹುತ್ತಿನಿಂದ ಎಬ್ಬಿಸಿ ಯುರೋಪದ ರಾಷ್ಟ್ರಗಳಲ್ಲಿ ಅತಿಬಲಿಷ್ಠವಾದ ರಾಷ್ಟ್ರವನ್ನು ಮಾಡಿದನು. ಆದರೆ ದುರ್ದೈವದಿಂದ

ಅವನ ರಾಜನೀತಿಯು ಪ್ರಜರಿಗೆ ಘಾತಕವಾಗಿತ್ತು. ಬಿಸ್ಮಾರ್ಕನು ತೀರ ಕ್ರೂರನಾದ ರೂ ನಿಜವಾದ ಮುತ್ಸದ್ದಿಯ ಸೌಮ್ಯತ್ವವು ಅವನಲ್ಲಿ ಒಡೆದು ತೋರುತ್ತಿತ್ತು. ಉಳಿದ ಯಾವ ಯುರೋಪದ ರಾಷ್ಟ್ರದವರೂ ಜರ್ಮನಿಯ ಮೇಲೆ ನಾಗಿಬರದಷ್ಟು ಅದನ್ನು ಬಲಿಷ್ಠವಾಗಿ ಮಾಡುವದಷ್ಟೇ ಬಿಸ್ಮಾರ್ಕನಿಗೆ ಬೇಕಾಗಿತ್ತು. ಹಾಗೂ ಜಗತ್ತಂತೂಒತ್ತ ಟ್ಟಿಗಿರಲಿ ಯುರೋಪದ ಆಧಿಪತ್ಯದ ಕಡೆಗೆ ಸಹಿತ ಅವನ ಇಚ್ಛೆಯಿದ್ದಿಲ್ಲ. ಎಲ್ಲರೂ ತಮ್ಮ ತಮ್ಮ ರಾಷ್ಟ್ರಗಳಲ್ಲಿ ಸುಖಸಮಾಧಾನದಿಂದಿರುವದು ಅವನ ಬಯಕೆಯಾಗಿತ್ತು. ಆದರೆ ಜರ್ಮನ್ನರು ಅವರಿಗಾದ ಜಯದಿಂದ ಮದಾಂಧರಾಗಿದ್ದರು. ಹಾಗೂ ಫ್ರಾಂ ಕೋ ಪ್ರಸಿಯನ್ನ ಯುದ್ಧವೆಸಗಿದಾಗಾದರೂ ಬಿಸ್ಮಾರ್ಕನ ಸಹವ್ಯವಸಾಯಿಗಳ ಚಿತ್ತವು ಸ್ವಾಸ್ಥ್ಯದಲ್ಲಿದ್ದಿಲ್ಲ. ಪ್ರಸಿಯಾದ ಯುದ್ಧ ಮಂತ್ರಿಯಾದ ಬ್ರಾನ್ಸಾರ್ಟ್‌ವಾನಸೆಲೆಂಡಾರ್ಫ ಎಂಬವನು ಆ ಕಾಲದಲ್ಲಿ ಅಂದದ್ದೇನಂದರೆ:—

ಜಗನ್ನಿಯಾಮಕನ ಪ್ರೇರಣೆಯಿಂದ ನಾವು ಪ್ರಾರಂಭಮಾಡಿದಂಥ ಸುಧಾರಣೆಯು ಕೆಲಸವನ್ನು ಎಂದೂ ಮರೆಯಬಾರದು. ಪ್ರಸಿಯವು ಸದ್ಯದ ಜರ್ಮನಿಯು ಅಂಕುರ ನಾಗಿದ್ದಂತೆ ಸದ್ಯದ ಜರ್ಮನಿಯು ಮುಂದೆ ಪಶ್ಚಿಮದಲ್ಲಿ ಉಂಟಾಗುವ ಸಾಮ್ರಾಜ್ಯವ ಅಂಕುರವಾಗಿರುವದು. ಹಾಗು ರೂಪರೂ ಸಂಶಯದಲ್ಲಿ ಉಳಿಯಬಾರದೆಂಬ ಬಗ್ಗೆ ನಾವು ಇವತ್ತಿನಿಂದ ಇಲ್ಲಿ ಪ್ರಕಟಮಾಡುವದೇನಂದರೆ— ಖಂಡದ ಭಾಗವಾಗಿದ್ದ ನಮ್ಮ ರಾಷ್ಟ್ರಕ್ಕೆ ಸಮುದ್ರದ ಮೇಲಿನ ಅಧಿಕಾರವಿರುವದು. ಕೇವಲ ಉತ್ತರ ಸಮುದ್ರದ ಮೇಲಷ್ಟೇ ಅಲ್ಲ. ಆದರೆ ಭೂಮಧ್ಯ ಹಾಗು ಅತ್ಲಾಂತಿಕ ಮಹಾಸಾಗರದ ಮೇಲೆಯೂ ಇರುವದು. ಆದ್ದರಿಂದ ನಾವು ಪ್ರತಿಯಾದ ಸುತ್ತಲೂ ಇದ್ದಂಥ ಪ್ರಾಂತಗ ಳನ್ನು ಒಂದೊಂದಾಗಿ ಆಕ್ರಮಿಸಿಕೊಳ್ಳುವ ನಮ್ಮ ಉದ್ದೇಶವಿರುವದು. ನಾವು ಕ್ರ ಮವಾಗಿ ಡೆನ್ಮಾರ್ಕ, ಹಾಲಂಡ, ಬೆಲ್ಜಿಯಮ, ಸ್ವಿತ್ಸರಲಂಡದ ಉತ್ತರಭಾಗ, ಟ್ರಿಯೆಸ್ಟ ಮತ್ತು ವೇನಿಸ ಮುಂತಾದವುಗಳನ್ನು ಆಕ್ರಮಿಸಿಕೊಳ್ಳುವೆವು. ಕೊನೆಗೆ ಸೊಂಬರ ನದಿ ಯಿಂದ ಲಾಯರ ನದಿಯವರೆಗೆ ಫ್ರಾನ್ಸದ ಉತ್ತರ ಭಾಗವನ್ನು ಕೈವಶಮಾಡಿಕೊಳ್ಳುವೆ ವು. ಈ ಕಾರ್ಯಕ್ರಮವನ್ನು ನಾವು ಏನೂ ಅಂಜಿಕೆಯಿಲ್ಲದೆ ಎಲ್ಲರಿಗೆ ತಿಳಿಸುವೆವು.

ಪ್ರಜರ ಮನಸಿನ ಸಮತೆಯು ಎಳ್ಳಷ್ಟಾದರೂ ಇದ್ದಿಲ್ಲ. ಬಿಸ್ಮಾರ್ಕನು ತಾನು ಯಸಿದ್ದನ್ನೆಲ್ಲ ಕೊನೆಗಾಣಿಸಿಬಿಟ್ಟಿದ್ದನು. ಆದರೆ ಜರ್ಮನ್ನರಿಗೆ ಅಷ್ಟರಿಂದ ಸಮಾ ಧಾನವಾಗಿದ್ದಿಲ್ಲ. ಯುರೋಪದ ರಾಷ್ಟ್ರದವರು ಜರ್ಮನ್ನರ ಸಮ್ಮತಿಯನ್ನು ಪ್ರತಿ

ಯೊಂದು ಸಂಗತಿಯಲ್ಲಿ ತೆಗೆದುಕೊಳ್ಳುವಷ್ಟು ಪ್ರಾಶಸ್ತ್ಯವನ್ನೂ ಯುರೋಪಖಂಡದಲ್ಲಿ ಬಲಾಢ್ಯವಾದಂಥ ಸೈನ್ಯವನ್ನು ಮಾಡಿಕೊಟ್ಟಿದ್ದನು. ಇವೆಲ್ಲ ಮಹತ್ವದ ಸಂಗತಿಗಳು ಮೂಲಾಕ್ಷರಗಳೆಂದೂ ಯುರೋಪದಲ್ಲಿಯು ಪ್ರಾಶಸ್ತ್ಯದ ಅರ್ಥವು ಅದರ ಅಧಿಪತ್ಯವೇ ಎಂದೂ ಅಲ್ಲಿಯ ಅಧಿಪತ್ಯವು ಜಗತ್ತಿನ ಅಧಿಪತ್ಯದ ಮೊದಲನೆಯ ಪಾವಟಿಗೆಯಾಗಿರುವದೆಂದೂ ಜರ್ಮನ್ನರು ಭಾವಿಸಿದ್ದರು. ಜರ್ಮನಿಯ ಸರಕಾರದವರು ಜನರ ಈ ತರದ ಸ್ವಭಾವವನ್ನು ಬಹಳ ಮಟ್ಟಿಗೆ ಬೆಳಿಸಿ ಅವರಿಗೆ ನಾನಾರೀತಿಯಿಂದ ಉತ್ತೇಜನ ಕೊಡಹತ್ತಿದರು. ಸಾಲೆ, ವಿಶ್ವವಿದ್ಯಾಲಯ, ವಾಙ್ಮಯ, ರಂಗಸ್ಥಳ ಮುಂತಾದವುಗಳಲ್ಲಿ ಬಿಸ್ಮಾರ್ಕನ ವಿಚಾರಗಳು ಪುರಾತನವೆಂದೂ ನಿರುಪಯುಕ್ತವಾಗಿರುವವೆಂದೂ ನಂಬಲು ಪ್ರಜರು ಬೋಧಿಸಲ್ಪಟ್ಟರು. ಜರ್ಮನಿಯಲ್ಲಿಯ ಪ್ರತಿಯೊಬ್ಬ ಹುಡುಗನಿಗೆ ಬಾಲ್ಯಾವಸ್ಥೆಯಿಂದ ರಾಷ್ಟ್ರದ ಮುಖ್ಯ ವೈಭವವು ಯುದ್ಧಕಲೆಯೆಂದೂ ಜಗತ್ತನ್ನೇ ಗೆಲ್ಲುವದು ಜರ್ಮನಿಗೆ ವಿಧಿಸಲ್ಪಟ್ಟಿರುವದೆಂದೂ ಪ್ರತಿಯೊಂದು ರಾಷ್ಟ್ರದಲ್ಲಿ ಜರ್ಮನ್ನರ ಸುಧಾರಣಾಪದ್ಧತಿ, ವಾಙ್ಮಯ, ಆಡಳಿತ ಮುಂತಾದವುಗಳ ವಿಚಾರಗಳನ್ನು ಸೇರಿಸುವವಿರುವದೆಂದೂ ತಿಳಿಸಿ ಹೇಳುತ್ತಿದ್ದರು.

ಈ ತರದ ರಾಜನೀತಿಗನುಸಾರವಾದ್ದರಿಂದ ಜರ್ಮನಿಯು ಜಗತ್ತಿನ ಶಾಂತತೆಗೆ ಭಂಗತಂದಂತಾಯಿತು. ಜರ್ಮನಿಯ ವಿರುದ್ಧ ಯಾರೂ ಸಾಗಿ ಹೋಗಬೇಕೆಂದು ಬಯಸಿದ್ದಿಲ್ಲವೆಂಬದೇನೋ ಮಹತ್ವದ ಸಂಗತಿಯಲ್ಲ. ಜರ್ಮನಿಯೇ ಇತರ ರಾಷ್ಟ್ರಗಳ ಮೇಲೆ ಸಾಗಿ ಬಂತು. ಬಹಳ ದಿವಸಗಳಿಂದ ಅಲ್ಲಿ ಬಹಳ ದೊಡ್ಡ ಸೈನ್ಯವಿತ್ತು. ೧೯೦೫ನೇ ಇಸವಿಯಿಂದ ದೊಡ್ಡ ಪ್ರಮಾಣದಿಂದ ಹಡಗುಪಡೆಯನ್ನು ತಯಾರಿಸಲುಪ್ರಾರಂಭಿಸಿತು. ಇವುಗಳ ಸಹಾಯದಿಂದ ಮನಬಂದಂತೆ ಪರರಾಷ್ಟ್ರಗಳ ಸ್ವಾತಂತ್ರ್ಯವನ್ನೂ ಹಕ್ಕುಗಳನ್ನೂ ಭಂಗಪಡಿಸುವದಕ್ಕೆ ಸಿದ್ಧವಾಗಿ, ಯಾರಾದರೂ ತನ್ನನ್ನು ಹಿಡಿದು ನಿಲ್ಲಿಸುವಷ್ಟು ಧೈರ್ಯದಿಂದ ಬಂದರೆ ಅವರನ್ನು ಮುರಿದು ಬಿಡಬೇಕೆಂಬ ನಿಶ್ಚಯವಾಯಿತು. ಈ ತರದ ರಾಜನೀತಿಯನ್ನು ಇತರ ರಾಷ್ಟ್ರದವರು ಯಾವ ರೀತಿಯಿಂದ ಊಹಿಸಿದರೆಂಬದನ್ನು ೧೯೧೧ನೇ ಇಸವಿಯ ನವಂಬರ ತಿಂಗಳ ೧೭ನೇ ತಾರೀಖಿನ ದಿವಸ ಕಾಮನ್ಸರ ಸಭೆಯಲ್ಲಿ ಸರ್ ಎಡ್ವರ್ಡ ಗ್ರೇ ಇವರು ಮಾಡಿದ ಭಾಷಣದಿಂದ ತಿಳಿದುಕೊಳ್ಳಬಹುದು.

"ಯಾವ ದೇಶವಾದರೂ ಜರ್ಮನಿಯ ಕೂಡ ಕಲಹವನ್ನು ಕೆಣಕಿ ತೆಗೆಯಲಿಕ್ಕಿಲ್ಲವೆಂಬದಕ್ಕೆ ಜರ್ಮನ್ನರ ಸಾಮರ್ಥ್ಯವೇ ಸಾಕ್ಷಿಯಾಗಿದೆ. ಈ ಪ್ರಕಾರದ ಅಶ್ವಸಂರಕ್ಷ

ಇದ ಬಗ್ಗೆ ಜರ್ಮನ್ನರು ಅಹಂಕಾರಪಡಬಹುದು. ಇದರ ಹೊರತಾಗಿ ಯಾವದೊ
ದು ರಾಷ್ಟ್ರದಲ್ಲಿ ಬಲಾಢ್ಯವಾದ ಸೈನ್ಯವೂ, ಹಡಗುಪಡೆಯೂ, ಇವುಗಳನ್ನು ಇನ್ನೂ ಹೆ
ಚ್ಚು ಬೆಳೆಸುವ ಪ್ರಯತ್ನವೂ ಇದ್ದರೆ, ಪರರ ಮೇಲೆ ದಾಳಿಯೆತ್ತಿಹೋಗುವ ಇಚ್ಛೆಯಿ
ಲ್ಲದ ಬೇರೆ ರಾಷ್ಟ್ರದವರ ಮನಸಿನಲ್ಲಿಯೂ ಸ್ವಾಭಾವಿಕವಾದ ಅಂಜಿಕೆಯನ್ನು ದೂರ
ಮಾಡುವದಕ್ಕೆ ಕೈಲಾದ ಮಟ್ಟಿಗೆ ಆ ರಾಷ್ಟ್ರದವರು ಪ್ರಯತ್ನಮಾಡಬೇಕು. ಆದರೆ
ಪರರ ಮೇಲೆ ದಾಳಿಮಾಡಬೇಕೆಂಬ ಉದ್ದೇಶವು ಜರ್ಮನಿಯವರದಿರುವದೆಂದು ನಾ
ನು ನಂಬಲಾರೆ. ಜರ್ಮನಿಯ ಸುತ್ತುಮುತ್ತಲಿನ ರಾಷ್ಟ್ರದವರೂ ನಾವೂ ಜರ್ಮನ್ನರ
ಸರಿಸಮಾನಸ್ಕಂದರಾಗಿರಬೇಕೆಂಬದೇ ನಮ್ಮ ಕೋರಿಕೆಯು. ”

ಇಷ್ಟರಿಂದ ತಿಳಿಯುವದೇನಂದರೆ ಚಿಕ್ಕ ರಾಷ್ಟ್ರಗಳ ಹಕ್ಕುಗಳ ವಿರುದ್ಧವಾಗಿರು
ವಂಥ ಭೂತದಯೆ, ನ್ಯಾಯ ಮುಂತಾದವುಗಳನ್ನು ಲೆಕ್ಕಿಸದಂಥ ಹಾಗೂ ಕಾಡುಜನರ
ಕಾಲಕ್ಕನುಸಾರವಾಗುವಂಥ ರಾಜನೀತಿಯನ್ನು ಜರ್ಮನ್ನರು ಮನಮುಟ್ಟಿ ಅನುಸರಿಸಿದ್ದ
ಹಿಂಬದು ಯುರೋಪದಲ್ಲಿಯ ಬೇರೆ ರಾಷ್ಟ್ರದವರಿಗೆ ನಂಬಿಗೆಯಾಗಿದ್ದಿಲ್ಲ. ಆದರೆ ತುಸು
ವಸಗಳಲ್ಲಿಯೇ ಈ ಮೋಸವು ಹೊರಬಿತ್ತು.

ಈ ಅವಧಿಯಲ್ಲಿ ಜರ್ಮನಿಯ ಸರಕಾರದವರು ಪ್ರಜರಲ್ಲಿ ಒಕ್ಕಟ್ಟನ್ನುಂಟುಮಾಡಿ
ಉತ್ತಮ ಪ್ರಕಾರದ ತಿದ್ದುಪಡೆಯನ್ನು ಹಾಕಿಕೊಟ್ಟು ಜಗತ್ತನ್ನೇ ಕೈವಶಮಾಡಿಕೊಳ್ಳುವದು
ಜರ್ಮನಿಯ ಮಹತ್ವದ ಕೆಲಸವಿರುವದೆಂದು ಅವರಿಗೆ ಬೋಧಿಸುತ್ತಿದ್ದರು. ಅಂಜಿಕೆಯೇ
ಇದರ ಬೀಜಮಂತ್ರವಾಗಿತ್ತು.

ಪ್ರಸಿಯರಾಜ್ಯವೆಂಬ ಕಟ್ಟಡದ ಬಂಧನವು ಅಂಜಿಕೆಯದೆಂದು ಹೇಳಬಹುದು. ಶಾ
ಲೆಗಳಲ್ಲಿಯ ಚಿಕ್ಕಮಕ್ಕಳಿಗೂ, ಕವಾಯಿತು ನಡೆಯುವ ಮೈದಾನದಲ್ಲಿಯ ಸೈನಿಕರಿಗೂ, ಅಧಿ
ಕಾರಸ್ಥರಿಗೂ ವಸಾಹತು ಹಾಗು ಪ್ರಸಿಯಾದ ಸುತ್ತುಮುತ್ತಲು ಇರುವ ಪಟ್ಟಣದಲ್ಲಿಯ
ಜನರಿಗೂ ಈ ಅಂಜಿಕೆಯ ಪದ್ಧತಿಯು ಗೊತ್ತಿರುವದು. ರಾಜಕಾರಣದಲ್ಲಿಯೂ ಅಂತ
ರ್ವ್ಯವಸ್ಥೆಯಲ್ಲಿಯೂ ವ್ಯಾಪಾರೋದ್ಯೋಗಗಳಲ್ಲಿಯೂ ಸೈನ್ಯ ಹಾಗು ಹಡಗುಪಡೆಯ
ವ್ಯವಸ್ಥೆಯಲ್ಲಿಯೂ ಇದು ಬಿಡೆದು ತೋರುತ್ತಿತ್ತು. ಒಟ್ಟಿನಮೇಲೆದೊಡ್ಡಸ್ತಿಕೆ, ಶಿಸ್ತು, ಅನೀತಿ
(ತನ್ನ ಪಾಲಿಗೆ ದೊಡ್ಡಸ್ತಿಕೆ, ತನ್ನ ಪರಿಚಾರಕರಲ್ಲಿ ಶಿಸ್ತು–ಉಳಿದವರಲ್ಲಿ ಅನೀತಿ.) ಇವೇ
ಈ ಅಂಜಿಕೆಯ ಪರಿಣಾಮಗಳು.

ಈ ಪ್ರಕಾರವಾಗಿ ಜರ್ಮನ್ನರು ತಮ್ಮ ಜನರನ್ನು ತಯಾರ ಮಾಡುವ ಕಾಲದಲ್ಲಿ ಇಂಗ್ಲಿಷರು ಸಾಮಾಜಿಕಸುಧಾರಣೆಯಲ್ಲಿ ತೊಡಗಿದ್ದರು. ಜರ್ಮನ್ನರು ಪ್ರಜರ ಹಿತಗಳನ್ನು ಲೆಕ್ಕಿಸದೆ ಅವುಗಳಿಗೆ ಬಂಧನವನ್ನು ಮಾಡುವ ಕಾಲದಲ್ಲಿ ಇಂಗ್ಲಿಷರು ಪ್ರಜರ ಹಿತವನ್ನು ಆಲೋಚಿಸುತ್ತಿದ್ದರು. ಜರ್ಮನಿಗು ಮುತ್ಸದ್ದಿಗಳು ಇವುಗಳ ಕಡೆಗೆ ನೋಡದೆ ಇಂಗ್ಲಂಡ ದೇಶವನ್ನೂ ಬ್ರಿಟಿಷ ಸಾಮ್ರಾಜ್ಯವನ್ನೂ ತಿರಸ್ಕರಿಸಹತ್ತಿದರು. ಹಾಗು ಬೇಕಾದಾಗ ಜಗತ್ತಿನ ಮೇಲೆ ತಮ್ಮ ಅಧಿಕಾರವು ನಡೆಯುವದೆಂದು ಕಲ್ಪಿಸುತ್ತಿದ್ದರು. ವ್ಯಾಪಾರದ ನೆವದಿಂದ ಜರ್ಮನಿಯು ತನ್ನ ಸಾಮಾನುಗಳನ್ನೂ ವ್ಯಾಪಾರದ ಪದ್ಧತಿಯನ್ನೂ ಅನೇಕ ದೇಶಗಳಲ್ಲಿ ಹರಡಿಬಿಟ್ಟಿತು. ಜರ್ಮನಿಯ ಕೈಗಾರಿಕೆಗಳೂ ವ್ಯಾಪಾರವೂ ಬಹಳ ಬೆಳೆದವು. ಧನಸಂಪತ್ತಿಯು ಮಿತಿಮೀರಿ ಹೋಯಿತು. ಹಾಗು ಯಾರೂ ತನ್ನ ವಿರುದ್ಧ ನಾಗಿಬರಲಾರರೆಂಬ ಬಗ್ಗೆ ಹೆಮ್ಮೆಯು ಹಿಡಿಸಲಾರದಷ್ಟು ಆಗಿತ್ತು. ಪ್ರಸಂಗ ಬಂದರೆ ತಾನೇ ಪರರ ಮೇಲೆ ನಾಗಿ ಹೋಗುವಷ್ಟು ತಯಾರಿಯು ಬಹಳ ಮಟ್ಟಿಗೆ ಆಗಿತ್ತು.

ಇಷ್ಟರಲ್ಲಿ ಪರರ ಮೇಲೆ ನಾಗಿಹೋಗುವ ಪ್ರಸಂಗವು ಆಸ್ಟ್ರಿಯಾದ ದ್ವಾರದಿಂದ ಬಂದೊದಗಿತು. ಸ್ಯಾಡೋವಾ ಎಂಬ ಯುದ್ಧವಾದಂದಿನಿಂದ ಆಸ್ಟ್ರಿಯಾದ ಬಲವು ತೀರ ಕುಗ್ಗಿತ್ತು. ಆದರೂ ಜರ್ಮನ್ನರು ತಮ್ಮ ಹಿತಕ್ಕಾಗಿ ಆಸ್ಟ್ರಿಯನ್ನರ ಬೆನ್ನು ಕಟ್ಟಿದ್ದರು. ೧೯೧೪ನೇ ಇಸವಿಯಲ್ಲಿ ಬೋಸ್ನಿಯಾ ಹರ್ಝಗೋವಿನಾ ಎಂಬ ಪ್ರಾಂತಗಳನ್ನು ಆಕ್ರಮಿಸಲು ಆಸ್ಟ್ರಿಯನ್ನರಿಗೆ ಜರ್ಮನ್ನರು ಉತ್ತೇಜನಕೊಟ್ಟರು. ಸ್ಲಾವ್ಹ ಜನರ ಪಕ್ಷಪಾತಿಯಾದ ರಶಿಯವು ಒಂದು ವೇಳೆ ಅಡ್ಡ ಬಂದರೆ ನಾವು ಸಹಾಯವಾಡುವೆವೆಂದು ಜರ್ಮನ್ನರು ಅಭಿವಚನವನ್ನು ಕೊಟ್ಟಿದ್ದರು. ಆಸ್ಟ್ರಿಯಾದ ಮಹತ್ವಾಕಾಂಕ್ಷೆಗಳಿಗೆ ಸರ್ವಿಯಾವು ಅಡ್ಡಿಯಾಗಿತ್ತು. ಹಾಗೂ ಜರ್ಮನಿ ಮತ್ತು ಆಸ್ಟ್ರಿಯಾದವರು ತುರ್ಕಸ್ತಾನಕ್ಕೆ ಹೋಗುವ ಮಾರ್ಗದಲ್ಲಿ ಸರ್ವಿಯಾವು ಇದ್ದ ಕಾರಣ ಈ ಚಿಕ್ಕದೇಶವನ್ನು ಮುರಿದು ಬಿಡಬೇಕೆಂದು ಇಬ್ಬರ ಮನಸಿನಲ್ಲಿಯೂ ಬಹಳ ದಿವಸಗಳಿಂದ ಇತ್ತು. ಆದರೆ ೧೯೧೪ನೇ ಇಸವಿಯ ಜೂನ ತಿಂಗಳ ೨೮ನೆಯ ತಾರೀಖಿನ ದಿವಸ, ಬೋಸ್ನಿಯಾ ಪ್ರಾಂತದ ರಾಜಧಾನಿಯಾದ ಸೆರಾಜೆವ್ಹೋ ಎಂಬ ಪಟ್ಟಣದಲ್ಲಿ ಆಸ್ಟ್ರಿಯಾದ ರಾಜಪುತ್ರನ ಕೊಲೆಯಾಯಿತು. ಇದನ್ನು ಸರ್ವಿಯಾದವರೇ ಮಾಡಿಸಿದರೆಂದು ಊಹಿಸಿ ಆಸ್ಟ್ರಿಯನ್ನರು ಸರ್ವಿಯಾ ಸರಕಾರಕ್ಕೆ ಒಂದು ಸಂದೇಶಪತ್ರವನ್ನು ಕಳುಹಿಸಿದರು. ರಶಿಯನ್ನರೂ

ಇಂಗ್ಲಿಷರೂ, ಫ್ರೆಂಚರೂ ಬಹಳ ಮಟ್ಟಿಗೆ ಶಾಂತತೆಗಾಗಿ ಜೋಡಾಡಿದರೂ ಸಾಧ್ಯವಾಗಲಿಲ್ಲ. ಯುದ್ಧವು ಹೂಡಿತು. ಸರ್ಬಿಯನ್ನರ ಸಹಾಯಕ್ಕೆ ರಶಿಯನ್ನರೂ ಫ್ರೆಂಚರೂ ಒಂದರು. ಜರ್ಮನ್ನರು ಆಸ್ಟ್ರಿಯಾದ ಪಕ್ಷವನ್ನು ಹಿಂದೆ ಗೊತ್ತಾದ ಮೇರೆಗೆ ಹಿಡಿದರು. ಫ್ರಾನ್ಸಿನ ಮೇಲೆ ತುಸು ದಿವಸಗಳಲ್ಲಿ ಮುಗಿಬೀಳಬೇಕೆಂಬ ಇಚ್ಛೆಯಿಂದ ಬೆಲ್ಜಿಯಮದೊಳಗಿಂದ ನುಗ್ಗಿ ಜರ್ಮನ್ನರು ಬರಹತ್ತಿದರು. ಇದು ಇಂಗ್ಲಿಷರಿಗೆ ಸಹನವಾಗಲಿಲ್ಲ. ಆದ್ದರಿಂದ ನ್ಯಾಯಪಕ್ಷಪಾತಿಗಳಾದ ಇಂಗ್ಲಿಷರು ಚಿಕ್ಕ ರಾಷ್ಟ್ರಗಳ ಸ್ವತಂತ್ರತೆಯನ್ನು ಕಾಯ್ದುಕೊಳ್ಳಬೇಕೆಂದು ಈ ಮಹಾಯುದ್ಧದಲ್ಲಿ ಕೂಡಗಿದರು.

B. S. Purohit.

ಧಾರವಾಡ ಗಂಡು ಹುಡುಗರ ಟ್ರೇನಿಂಗ ಕಾಲೇಜಿನ ೧೯೧೪ನೇ ಇಸವಿಯ ವಾರ್ಷಿಕ ಪರೀಕ್ಷೆಯ ಪರಿಣಾಮವು.

—[೦]—

೩ನೆಯ ವರ್ಷ.

ಧಾರವಾಡ ಜಿಲ್ಲೆ.

೨೫ ರೂ. ಸರ್ಟಿಫಿಕೇಟ ಪಡೆದವರು.

೧. ಭಂಡಿವಾಡ. ಶಿ. ಫ. ೨. ಕುಲಕರ್ಣಿ ರ. ಲ. ೩. ಸವಸಿ. ದೇ. ಚೆ. ೪. ಮಾಸನಕಟ್ಟಿ. ಕೋ. ವಿ.

೨೦ ರೂ. ಸರ್ಟಿಫಿಕೇಟ ಪಡೆದವರು.

೧. ಪವಾರ. ಲ. ಗೋ, ೨. ಜೋಶಿ. ಕೃ. ಸು, ೩. ಸಾಂಸಿಮಠ. ಫ. ಹ. ೪. ಮುಲ್ಲಾ. ಮ. ಬಾ. ೫. ಜೋಶಿ. ಸೂ. ಚಿ, ೬. ಗ್ರಾಮಪುರೋಹಿತ. ತಿ. ಚ. ೭. ನಾತಿಗೇರ. ಬಿ. ಪಿ.

ಬೆಳಗಾವ ಜಿಲ್ಲೆ.

೨೫ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ಕಾನಗೋ. ಗ. ಶ್ರೀ. ೨. ಜೋಶಿ. ಶ. ಬಾ.

೨೦ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ಪಾಟೀಲ, ರಾ. ದೇ. ೨. ಮುಲ್ಲಾ. ಅ. ಅ, ೩. ಗಲಗಲಿ ಕೇ. ರ
೪. ಹಿರೇಮಠ ಗು. ಚ, ೫. ಕುಲಕರ್ಣಿ ರ. ಗು.

ವಿಜಾಪುರ ಜಿಲ್ಲೆ.

೩೫ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ಹೂಯಿಲಗೋಳ. ಪ್ರ. ಭಿ.

೨೦ ರೂ. ಸರ್ಟಿಫಿಕೇಟ ಪಡೆದವರು.

೧. ಕನ್ನೂರ. ಗು. ನಾ. ೨. ಗುಮಾಸ್ತೆ. ಲ. ಭಿ. ೩. ಕುಲಕರ್ಣಿ. ಗು. ಅ.
೪. ಕುಲಕರ್ಣಿ. ಶ. ಕಾ. ೫. ಕಟ್ಟಿ. ಕ. ಕೋ. ೬. ಪಾಟೀಲ. ಹ. ರಾ.

ಕಾರವಾರ ಜಿಲ್ಲೆ

೨೫ ರೂ. ಸರ್ಟಿಫಿಕೇಟ ಪಡೆದವರು.

೧. ಉಗ್ರು. ಗ. ರಾ.

೨೦ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ಶಟ್ಟಿ. ಅ. ಮು. ೨. ನಾಯಿಕ. ಡೆ. ಡಿ. ೩. ನಾಯಿಕ. ರಾ. ಸಾ.

ರಾಮದುರ್ಗ ಸಂಸ್ಥಾನ

೨೦ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ನರಗುಂದ. ಶ್ರೀ. ರಾ.

ಹೊರಗಿನಿಂದ ಪರೀಕ್ಷೆಗೆ ಕುಳಿತವರು.

೨೦ ರೂಪಾಯಿ ಸರ್ಟಿಫಿಕೇಟ ಪಡೆದವರು.

೧. ಸುಂಕದ. ಮು. ಹ. ೨. ಕುಲಕರ್ಣಿ. ರಾ. ನಾ. ೩. ಹೂನೂರ. ರಾ. ನಾ
೪. ಗಲಗಲಿ. ಕೃ. ಸು. ೫. ದಂಬಳ. ರಾ. ಸೆ. ೬. ಕುಲಕರ್ಣಿ. ಮ. ಗು.
೭. ಮುತಾಲೀಕ. ಗೋ. ಬಾ. ೮. ಕುಲಕರ್ಣಿ. ವಾ. ಅ.

ವಾರ್ಷಿಕ ಪರೀಕ್ಷೆಯ ಪರಿಣಾಮವು.

೨ನೆಯ ವರ್ಷ.

ಧಾರವಾಡ ಜಿಲ್ಲೆ.

೩ನೇ ವರ್ಷಕ್ಕೆ ಆರಿಸಲ್ಪಟ್ಟವರು.

೧. ರಾ. ತ. ಮತದ ೨. ಬ. ಮು. ಉಕ್ಕುಂದ ೩. ಹ. ರಾ. ಶಿಗ್ಗಾವಿ.
೪. ಹು. ಬ. ಕೊಪ್ಪಳ ೫. ಕೊ. ಗ. ಬಸಪ್ಪಯವರ ೬. ಕ. ಬ. ಅಂಗಡಿ.
೭. ತಿ. ಬ. ಪಾಟೀಲ ೮. ಚ. ಮು. ಲಿಂಗಧಳ್ಳಿ ೯. ಗೋ. ಗು. ಕುಲಕರ್ಣಿ
೧೦. ಭೀ. ಕೃ. ಕುರಂದವಾಡ.

ಪಾಸಾದವರು.

೧. ಮೆ. ಸಿ. ಹಿರೇಮಠ ೨. ಹ. ಭೀ. ಕೆಳಗಡಿ ೩. ಮ. ಚಿ. ಜೋಶಿ
೪. ಶ. ಮಾ. ಪಾಟೀಲ ೫. ರ. ಪಾ. ಮಾನವಿ ೬. ಗ. ರು. ನಾಡಿಗೇರ
೭. ಮ. ಮೊ ಅಕ್ಕಿ ೮. ಈ. ಬಿ. ಮುಮ್ಮಿಗಟ್ಟಿ ೯. ಚ. ಲಿ. ಮತ್ತಿಗಟ್ಟಿ
೧೦. ರಾ. ವೆ. ಬೆಟಗೇರಿ ೧೧. ಸಿ. ದು ಆರೇರ ೧೨. ಅ. ಚ. ಕಾಗದಗಾರ
೧೩. ಮಾ. ಲಿ. ಉಮರಾಣಿ ೧೪. ವಿ ಶ್ರೀ. ಚಪಟಿ ೧೫. ನಾ ನ. ಜವಳಿ.
೧೬. ಶಿ. ಬ. ಪಾಟೀಲ ೧೭. ಅ. ಕೆ. ವಝು ೧೮. ಅ. ರ. ಬಾಳೂರ ೧೯. ಚ.
ಮ. ಮಕಾನದಾರ ೨೦. ಅ. ಕಾ. ಕಾಜಿ ೨೧. ಅ. ಚ. ಕನಕಗಿರಿ ೨೨. ಭಿ.
ಶ. ಜೋಶಿ ೨೩. ಫ. ಬ. ಉಸ್ಪಾರ ೨೪. ದ್ಯಾ. ದು. ಬಾರಕಿ ೨೫. ರಾ. ಸ್ವಾ. ಅವಿ
೨೬. ಲಿ. ಚ. ಪಾಟೀಲ ೨೭ ಕೃ ಮೂ. ಹುರಳೀಕೊಪ್ಪಿ ೨೮. ದೇ. ನಾ. ಪಾಟೀಲ
೨೯. ಶಿ. ಜ. ಕಜ್ಜರಿ ೩೦. ಶೇ. ಕೊ. ಮಿಷ್ಟಿ ೩೧. ಅ. ಮೊ. ನಾಯಿಕ

ಸಂಸ್ಥಾನದವರು. (ನಿರಜ ಸೀನಿಯರ)

ವಿ. ಚ. ಕೆರಿವಡಿಮಠ [ಪಾಸ]

ಸಾಂಗಲೀ ಸಂಸ್ಥಾನ

ಹ. ಕ. ಕಪಲಟ್ಟಿ [ಪಾಸ]

ಜಮಖಂಡಿ ಸಂಸ್ಥಾನ.

ಹ. ಗೋ. ಕಿಲ್ಲೇದಾರ [ಪಾಸ] ರು. ಬ. ಭೂಷಣ್ಣವರ [ಪಾಸ]

ಹೊರಗಿನಿಂದ ಬಂದವರು.

ಧಾ ಜಿಲ್ಲಾ— ವೆ. ಬಾ. ಅಂಚಿ [ಪಾಸ]

ಬೆಳಗಾವ ಜಿಲ್ಲಾ— ಮೆ. ಧ. ಮೊಗದುಮ [ಪಾಸ] ಭೀ. ವೆ. ಸಾವುಕಾರ [ಪಾಸ]

ಕಾರವಾರ ಜಿಲ್ಲಾ— ಬೊ. ತಿ. ನಾಯಿಕ. [ಪಾಸ]

ಬೆಳಗಾವ ಜಿಲ್ಲೆ. (೩ನೇ ವರ್ಷ)

೩ನೇ ವರ್ಷಕ್ಕೆ ಆರಿಸಲ್ಪಟ್ಟವರು.

೧ ದಾ. ಅ. ಕುಲಕರ್ಣಿ. ೨ ಸ. ರಾ. ಕುಲಕರ್ಣಿ. ೩ ರಾ. ಫ. ಪಾಟೀಲ
೪ ಅ. ಯು. ಮಾಲವಣಕರ.

ತೇರ್ಗಡೆ ಹೊಂದಿದವರು

೧ ಗು. ಅ. ಮಾಹುಲಿ. ೨ ನಾ. ಹ. ಶೇಡಬಾಳ. ೩ ಶ್ರೀ. ವೆ. ಹಾಲಗಿ.
೪ ಗೋ. ಬಾ. ತಡಕೋಡ. ೫ ಮ. ರಾ. ನಾಲೀಮಠ. ೬ ಪಿ. ಭಾ. ಭಾಟಿ
೭ ಶ. ಶಿ. ಗಂಗಣ್ಣವರ. ೮ ಬ. ಕ. ಕೋಳಿ. ೯ ಮ. ಜೀ. ಪುರಂಧರೆ
೧೦ ಸಿ. ಬ. ಮತಪತಿ. ೧೧ ದ. ಹ. ನಿಪ್ಪತ ದೇಶಪಾಂಡೆ. ೧೨ ಚ. ಗ. ಕೆರಿಮ
೧೩ ಕೇ. ವಿ. ಜೋಶಿ. ೧೪ ಹ. ಅ. ಕುಲಕರ್ಣಿ. ೧೫ ಭೀ. ಬಾ. ಗಲಗಲಿ
೧೬. ರಾ. ಹ. ಕುಲಕರ್ಣಿ. ೧೭ ಲ. ಹ. ಯರಗಟ್ಟಿ. ೧೮ ಚ. ಮ. ಧುಸದಾ
೧೯. ರಾ. ಅ. ಕುಲಕರ್ಣಿ. ೨೦ ವೆ. ಕೃ. ಕಿತ್ತೂರ. ೨೧ ನಾ. ಶಾ. ಮರಾ
೨೨. ರು. ಬ. ಹೊಳಿಹಡಗಲಿ. ೨೩ ಅ. ಹ. ಗಣಾಚಾರಿ.

ವಿಜಾಪುರ ಜಿಲ್ಲೆ

೩ನೆಯ ವರ್ಷಕ್ಕೆ ಆರಿಸಲ್ಪಟ್ಟವರು-

೧. ವೆ. ಕೃ. ಅಗರಖೇಡ. ೨. ದು. ಶ. ಕುಕನೂರ. ೩. ಶಿ. ಬ. ಮನಗೊಂ
೪. ವೆ. ರಾ. ಹಲಸಂಗಿ. ೫. ದಾ. ಪ. ಕುಲಕರ್ಣಿ. ೬. ಬಾ. ರಾ. ಹುಶೇನಭಾರ

ತೇರ್ಗಡೆ ಹೊಂದಿದವರು.

೭. ಗು. ಗೋ. ಕುಲಕರ್ಣಿ ೮. ಕೃ. ಜಿ. ಜೋಶಿ. ೯. ಶಿ. ಬ. ಹಿರೇಮಠ
೧೦. ಸ. ಗು. ಹೊಕರಾಣಿ. ೧೧. ರಾ. ಬೈ. ಹಲಕುರ್ಕಿ. ೧೨. ರಾ. ಮು. ಪದಕಿ
೧೩. ಲಿ. ದ. ಜೋಶಿ, ೧೪. ಮ. ಭೀ. ಕುಲಕರ್ಣಿ. ೧೫. ಮಾ ಅ. ಗೊಳಸಂಗಿ
೧೬. ಭೀ. ಗೋ. ಕುಲಕರ್ಣಿ ೧೭. ಗು. ವಿ. ಚಿತ್ತವಾಡಿಗಿ ೧೮. ವೇ. ಕೃ. ಬಾಡಗಂಡಿ
೧೯. ಸ. ಫ. ಪಾಟೀಲ. ೨೦ ಗೋ. ರಾ. ಗುಮಾಸ್ತದೇಸಾಯಿ. ೨೧. ಶ. ಫ. ಮು
ನೂರ. ೨೨. ರಾ. ವೆ. ಗುಡೂರ. ೨೩. ಅ. ಲಿ. ಮೂಲಿಮನಿ ೨೪. ಮ ರಾ
ಜಮಾದಾರ ೨೫. ಮು. ತ. ಮುರನಾಳ. ೨೬ ನಿ. ಬ. ದೇಸಾನಿ. ೨೭. ವೆ. ಕೃ. ಪದಕಿ
೨೮. ರಾ. ಪೊ. ಗೋಸೇಕಾರ. ೨೯ ಸ. ಕೃ. ಎಡವಣ್ಣವರ ೩೦. ಹ. ದು
ದುಂಡರಡ್ಡಿ. ೩೧. ಬ. ಸಿ. ಮತದ, ೩೨ ಬ. ಕ ಮತಪತಿ, ೩೩ ಸ. ಕ. ಓತಿಗೇರಿ
೩೪. ಮ. ತೊ. ಬೆಳ್ಳಿಗಿ

ಕಾರವಾರ ಜಿಲ್ಲೆ.

೩ನೆಯ ವರ್ಷಕ್ಕೆ ಆರಿಸಲ್ಪಟ್ಟವರು.

೧. ಗ. ದು. ಫ್ಡಳೇಕರ ೨. ಗ. ಶ್ರೀ. ಕೂರ್ಸ

ಪಾಸಾದವರು.

೩. ಪು. ಪಾ. ನಾಯಿಕ ೪. ಗೋ. ಶಿ. ಶೆಟ್ಟಿ ೫. ವಿ. ಲ. ಸೋಂದಾ ೬. ವಾ. ರಾ. ನಾಯಿಕ ೭. ಹೊ. ವಿ. ಶೆಟ್ಟಿ ೮. ಕ. ಶಿ. ಹೆಗಡೆ ೯. ದೆ. ಗೋ. ನಾಯಿಕ ೧೦. ನಾ ಕ. ಪಂಡಿತ ೧೧. ರಾ. ಧಾ. ಚಮಗಾರ ೧೨. ಹು. ಸೈ. ಸೈಯದ ೧೩. ಪ. ಮು. ಸಮಸಗಿ ೧೪. ರಾ. ಪು. ಕಾವ.ತ ೧೫. ಏ. ಸು. ಶೆಟ್ಟಿ.

೧ನೆಯ ವರ್ಷ

ಧಾರವಾಡ ಜಿಲ್ಲೆ

ಪಾಸಾದವರು.

೧. ಕುಲಕರ್ಣಿ. ಪ. ಮಾ. ೨. ಕವಲಿ. ಜ.ಯ. ೩. ಕಟ್ಟಿ ಚ. ಫ. ೪. ರಾಯದುರ್ಗ. ಭೀ. ರಾ. ೫. ತಿಮ್ಮಾಪೂರ ಕೃ. ಗು. ೬ ಬಿಜಾಪೂರ ನ್ಯಾ ಕೊ. ೭. ಹುಲಮನಿ. ಸೋ. ಶ್ರೀ. ೮. ಪಾಗಾದ ಭೀ. ಲಿಂ. ೯. ಗುಡಾರದ. ಹ. ಹ. ೧೦. ಕನಕವಾಡ. ರಾ. ಹ. ೧೧. ಕುಲಕರ್ಣಿ. ಶಿ. ದ. ೧೨. ಜೋಶಿ. ಮ. ನ. ೧೩. ಹುರಕಡ್ಲಿ. ಅ. ನಾ. ೧೪. ಚಿಮ್ಮಲಗಿ. ರಂ. ಗೋ. ೧೫. ತಮ್ಮಿನಕಟ್ಟಿ. ಅ. ಮ್ಮ ೧೬. ಹುಬ್ಬಿ. ಶಿ. ದೊ. ೧೭. ದೊಡ್ಡಮನಿ. ಹ. ನ. ೧೮. ಬುಕ್ಕಿಟ್ಟಗಾರ ಅ. ಮ. ೧೯. ತಿಮಲಾಪೂರ. ನಾ. ದೊ. ೨೦. ಕಾಜಿ ದೊ. ಫ. ೨೧. ಅಡಕಾವ ಚ. ಭ. ೨೨. ಗಬ್ಬಿರ. ರಾ. ರು. ೨೩ ಇಚ್ಛಂಗಿಮಠ. ಗ. ಅ. ೨೪. ಕಾಂಬಳಿ. ಲಿಂ. ಮ. ೨೫. ಲಾಳಸಿಂಗಿ ಜ. ಅ. ೨೬. ಕವತಾಳ ಸ. ರಾ. ೨೭. ಕಟ್ಟಿಮನಿ ಬೋ. ರಾ. ೨೮ ಸವರಣಾಯಿ ರಾ. ಹ. ೨೯. ಶೆಟ್ಟಿ. ಬೋ. ರಾ. ೩೦. ನವಲಗುಂದ. ಶಿ. ಅ. ೩೧ ಹಿರೇಮಠ. ಗ. ಕ. ೩೨. ಹೂಗಾರ. ವೀ. ಸಿಂ. ೩೩ ಜೋಶಿ. ಸೋ. ವಿ. ೩೪. ಹಿರೇಮಠ. ಚ. ಚ. ೩೫. ಒಳ್ಳಾರಿ ಅ. ದಾ. ೩೬. ವ್ಯಾಟಿ. ಕೃ. ನ. ೩೭ ಕುಲಕರ್ಣಿ. ಹ. ನ. ೩೮. ಹೆಬ್ಬಳ್ಳಿ ಈ. ಬ ೩೯ ಕಾಡಪ್ಪನವರ. ರು. ಬ. ೪೦ ಯಲ್ಲಪ್ಪಗೌಡರ. ಪ. ಅ. ೪೧. ಮನಸೂರ. ಶ್ರೀ. ವೆಂ. ೪೨. ಬಳ್ಳಾರಿ. ರಾ. ನಾ. ೪೩. ಪುರಾಣೀಕ ಧೀ. ವ ೪೪. ಪದಕಿ. ಹ. ಕೃ. ೪೫. ಹಂಡಿ. ರಾ. ಮೋ. ೪೬ ಗಲಗಲಿ. ವಾ. ದಾ. ೪೭. ಕುಂದಗೋಳ ಪ. ಮ. ೪೮. ಇಂಡಿ ವೀ. ದಾ. ೪೯. ಮಣಕವಾಡ. ಬಿ. ಫ. ೫೦. ಕುಲಕರ್ಣಿ. ಶೇ. ರಾ. ೫೧. ಕುಷ್ಟಗಿ. ಹ. ಶ್ರೀ. ೫೨. ಕೊಂಬಳಿ. ದೊ. ರಿ. ೫೩. ಚಕ್ಕಾತಿ. ಹೊ. ಮ. ೫೪ ಜನಳಿ. ಅ. ಯಾ. ೫೫. ಕಿಲ್ಲೇದಾರ ಖಿ. ಮ. ೫೬. ಗಾಯಕವಾಡ. ಹ. ಮು.

ಬೆಳಗಾಂವ ಜಿಲ್ಲೆ.

೧ ಅಗಳಗಟ್ಟಿ. ರಾ. ಶ್ರೀ. ೨ ಜೀಳಗಿ. ಕಾ. ಟೋ. ೩ ಅಣ್ಣಾನಾಯಿಕ. ತ. ವಿ.
೪ ಚಿಕ್ಕಮಠ. ಗಿ. ಮ. ೫ ಲೋಕಾಪೂರ. ಶ್ರೀ. ರ. ೬ ಭಾಗಣ್ಣವರ. ವೆ. ನ.
೭ ಮುಹಿಸಿ. ಶಾ. ನ. ೮ ಮುಹಾಜನ. ಗ. ದ ೯ ಯಮಕನಮರಡಿ. ದ. ಶ.
೧೦ ಕಟ್ಟಿ. ಗು ಗೋ. ೧೧ ನಾಡಗೌಡ. ದಾ. ಮ ೧೨ ಅಹೇರಸಿಂಗ ಅ ಭ.
೧೩ ಚಾಂದಸಾನವರ. ಅ. ಕ. ೧೪ ಗಾಣಿಗೇರ ಮ, ಅ. ೧೫ ಉಪಾಧ್ಯ ಹ. ಪ್ರ.
೧೬ ಹರ್ಲಾಪೂರ. ಬ. ಸಿ. ೧೭ ಮಠದ ಶ. ರು. ೧೮ ಶೇಡಬಾಳಕರ. ಭಾ. ಗೋ.
೧೯ ಗೋಠೀಖಾನ ಅ. ಶಾ ೨೦ ಕರಿಗಾರ. ಬ. ಘ. ೨೧ ಮೊಖಾಸಿ ಲಿ. ಸ.
೨೨ ಕುಲಕರ್ಣಿ ರ. ಶ್ರೀ. ೨೩ ಉಪ್ಪಾರ ಗು. ಗೋ. ೨೪ ಉಪ್ಪಾರ. ನಿ. ಯ.
೨೫ ಕೋರೀಮಠ ಗು. ಶಿ. ೨೬ ನಗಾರ್ಜಿ ಮ ಇ. ೨೭ ಮಗದುಮ್ಮ ಸಿ. ಸಿ
೨೮ ಮುಲ್ಲಾ. ಅ. ಇ. ೨೯ ಧಮ್ಮಣಗಿ. ಅ. ಸಿ ೩೦ ಪಾಟೀಲ. ಶಿ. ಬ.
೩೧ ವಸ್ತದ. ವೀ. ಶಿ. ೩೨ ವಿಭೂತಿ. ಶಿ. ಗು. ೩೩ ವಕ್ಕುಂದ ಮ, ಇ.

ವಿಜಾಪೂರ ಜಿಲ್ಲೆ.

೧ ಕೆರೂರ. ಹ. ಕೃ. ೨ ಬಡಿಗೇರ. ಶ. ಶಿ ೩ ನಾಡಗೌಡ. ಗು. ಮ
೪ ಜೋಶಿ. ಹ. ಬಾ. ೫ ಪುರಂದರ. ಭೀ. ವಾ. ೬ ತಿಪ್ಪಣ್ಣನವರ. ಪ. ಶಿ.
೭ ಬುರ್ಲಿ. ಬಿ. ಮೆ. ೮ ಹರಿದಾಸ. ಗು. ಅ. ೯ ಕೊಪ್ಪ. ಪ. ಬ.
೧೦ ಸಂಕಣ್ಣನವರ ಶಿ. ಬ. ೧೧ ಕಟ್ಟಿ ನಾ. ಕೃ. ೧೨ ಕೇಶನೂರ. ಶ್ರೀ. ಪಾ.
೧೩ ಜುಳಕಟ್ಟಿ. ಬ. ಸ. ೧೪ ಗ್ರಾಮಪುರೋಹಿತ. ಶ್ರೀ. ೧೫ ಹುನ್ನೂರ. ರಾ. ಸು.
೧೬ ಹಂಡಿ. ಸ. ವಿ. ೧೭ ಸಟ್ಟರ. ಸ. ದೇ. ೧೮ ಡಫೇದಾರ. ಇ. ಅ.
೧೯ ಹುನಗುಂದ. ಅ. ಅ. ೨೦ ಪಿರೇಮಠ. ಗು. ಬಿ. ೨೧ ಕುಲಕರ್ಣಿ. ನಾ. ಹ.
೨೨ ತಿಮ್ಮಸಾಗರ. ಕೊ ರ. ೨೩ ನಾಗರಬಾವಡಿ. ಮು. ಅ. ೨೪ ಗುವಾಸ್ತೆ. ಗೀ. ಭೀ.
೨೫ ಅಮೀನಗಡ. ನಾ. ಗೋ. ೨೬ ಆಜಿಗೇರ. ಶಿ. ಹು. ೨೭ ಜೋಶಿ. ನಾ. ಭೀ.
೨೮ ನಿಂಬರಗಿ. ಅ. ಶ್ರೀ. ೨೯ ಪಾಟೀಲ. ಗು ಬ. ೩೦ ಮಠದ. ಗು. ವಿ.
೩೧ ಹಡಪದ. ಬ. ಈ. ೩೨ ಗೊಳಸಂಗಿ ಭ. ಬ. ೩೩ ವಾಲಿ. ಸಿ. ಸಿ.
೩೪ ನಿಂಬರಗಿ. ಧೋ. ಶ್ರೀ. ೩೫ ಕಲ್ಲಮನಿ. ಸ. ಅ. ೩೬ ಹೊನವಾಡ ಗ. ಬ.
೩೭ ಬೇನಾಳ. ಶಿ. ರಾ. ೩೮ ದೇಶಪಾಂಡೆ. ಶ್ರೀ. ಗು. ೩೯ ಕುಲಕರ್ಣಿ. ಶ್ರೀ. ಬಾ.
೪೦ ಚಿಕ್ಕೋಡಿ. ಹ. ಭ. ೪೧ ಯಮಪೋಲಿ. ಮು. ಸಿ. ೪೨ ಅಗ್ನಿಹೋತ್ರಿ. ರ ಶ.
೪೩ ಹುದ್ದಾರ ಗೋ. ನಾ.

ಧಾರವಾಡ ಜಿಲ್ಲೆ

೧ ಕುಂಭೇಶ್ವರ ಗ. ನಾ. ೨ ನೇತ್ರಾವಳಿ. ಶ್ರೀ. ಗುಂ. ೩ ಹೆಗಡೆ. ಪ. ಗ. ೪ ಬಾಣಾವಲೀಕರ. ಭಾ. ಸು. ೫ ಐಗಳ. ಕೃ. ಹ. ೬ ಹೆಗಡೆ. ರಾ. ಗೋ. ೭ ಗಾವಕರ. ಗ. ಕೃ. ೮ ಶಾನಭಾಗ. ಶೇ. ಗ. ೯ ಸಿಸೀಕರ. ನಾ. ಅ. ೧೦ ಭಂಡಾರಿ. ನೇ. ಲಿ. ೧೧ ಮಾನಗೆ. ಕೇ. ನ. ೧೨ ಹರಿದಾಸ. ರಾ. ಗೋ. ೧೩ ದೇಸಾಯಿ. ಮು. ಬಾ. ೧೪ ಸಾಳೇ ಹತ್ತಲ ದೇ. ಮ. ೧೫ ಮುಲ್ಲಾ ಶೇ. ಪೀ. ೧೬ ನಾಯಿಕ. ಗ. ಭ.

ರಾಮದುರ್ಗ ಸಂಸ್ಥಾನ

೧ ಹಿರೇಮಠ ಶಿ. ಶಿ.

ಸಾಂಗಲಿ ಸ್ಟೇಟ

೧ ಹಿರೇಮಠ ಗು. ಚ.

ಮಿರಜ (ಸೀನಿಯರ)

ಹೊಂಬಳ ಭೀ. ರಾ. ೨ ಕನಳವಾಡ. ಪೀ. ಹು.

ಜಮಖಂಡಿ ಸ್ಟೇಟ

೧ ಕುಲಕರ್ಣಿ. ರಾ. ಕೃ.

ಮಿರಜ (ಜೂನಿಯರ)

ಶೆಗ್ಗಿನಮನಿ ರು. ಬ.

ಹೊರಗಿನವರು ಪಾಸಾದವರು.

೧ ವಾಳವೇಕರ ಹ. ಬಾ. ೨ ನಾಯಿಕ. ಚ. ಅ. ೩ ಪಾಟೀಲ ಚ. ಬ. ೪ ಹೂನೂರ. ಬ. ಗೋ ೫ ಪಲಮಣ್ಣನವರ. ಪ. ಮ. ೬ ಭಾವಿಕಟ್ಟಿ ವೆ. ಬಾ. ೭ ನಾಯಿಕ ವೆ. ಶಿ. ೮ ಭಟ್ಟ ನಾ. ನಾ.

ಟ್ರೇ. ಕಾ. ಧಾರವಾಡ
೧೯-೧೧-೧೯೧೮ } R. S. KULKARN
ಪ್ರಿನ್ಸಿವಾಲ

ಯುದ್ಧ ಮಂತ್ರಿಯಾದ ಲುಂಶೆಂಡಾರ್ಫನು ಪ್ರಾಣ ಹೋದರೂ ಚಿಂತೆಯಿಲ್ಲ. ಮುಂದೆ ಇಟ್ಟ್ಟೆ ಕಾಲನ್ನು ಹಿಂದಕ್ಕಿಡಲಿಕ್ಕಿಲ್ಲವೆಂದು ನಿಶ್ಚಯಿಸಿ ನಡೆಯುವ ವರ್ಷದಲ್ಲಿ ಯುದ ವನ್ನು ಸುರುವು ಇಟ್ಟದ್ದು ಅಕ್ಷಮ್ಯವಾದ ಳನೇ ದೊಡ್ಡ ತಪ್ಪು. ಜರ್ಮನೀ ದೇಶದೊ ಳಗಿನ ಜರ್ಮನ್ ರಾಷ್ಟ್ರವು ಒಂದು ಲಷ್ಕರೀ ಯಂತ್ರದಂತೆ ಆದದ್ದರಿಂದಲೂ ತಮ್ಮ ದಂ ಡಿನ ಸಿದ್ಧತೆಯ ಸಲುವಾಗಿ ಯಾರಿಗೆ ಎಷ್ಟೇ ಹಾನಿ ಸಂಭವಿಸಿದರೂ ಅದನ್ನು ಎಲ್ಲರೂ ಸಹಿಲಿಕ್ಕೇ ಬೇಕೆಂಬ ಸೈನ್ಯದ ಧೋರಣವಿದ್ದದರಿಂದಲೂ ಇಂಥ ದೊಡ್ಡ ತಪ್ಪುಗಳಾಗ್ಗು ವದು ಸ್ವಾಭಾವಿಕವೇ ಸರಿ.

ಬಲಿಷ್ಠನ ಪಕ್ಷವೇ ಸತ್ಯವಾದದ್ದು; ಅದೇ ಧರ್ಮವು, ಈ ಪ್ರಕಾರ ತಿಳುವಳಿ ಕೆಯು ಜರ್ಮನಿಯೊಳಗಿನ ಸತ್ತಾಧಾರಿಗಳಾದ ಪಕ್ಷದವರ ಮನಸಿನಲ್ಲಿ ಉತ್ಪನ್ನವಾದ ದ್ದರಿಂದ ದೇಶದೊಳಗಿನ ಯಾವತ್ತು ವಿದ್ಯಾಪೀಠಗಳಲ್ಲಿಯೂ ಇದೇ ತತ್ವವು ಪ್ರಾಯ ಸ್ಥರ ಮನಸಿನಮೇಲೆ ಬಿಂಬಿಸುವ ಕ್ರಮವು ಅವಿಚ್ಛಿನವಾಗಿ ಎಷ್ಟೋ ದಿವಸಗಳಿಂದ ನಡೆದಿತ್ತು. ಇದಲ್ಲದೆ ಪಶುವೃತ್ತಿಗೆ ಒಪ್ಪುವಂಥ ಜುಲುಮೆ, ಕ್ರೂರತನ, ಮೊದ ಲಾದ ಗುಣಗಳನ್ನು ತೋರಿಸುವ ಸಿಗ್‌ಫ್ರಿಡ್ ಹೆಗನ ಮುಂತಾದ ಪೌರಾಣ ದೇವತೆ ಗಳ ಹೆಸರುಗಳನ್ನು ಪಶ್ಚಿಮಕ್ಷೇತ್ರದಲ್ಲಿಯೆ ತಮ್ಮ ಕೋಟೆಯ ಬುರುಜುಗಳಿಗೆ ಜರ್ಮನ ಅಧಿಕಾರಸ್ಥರು ಕೊಟ್ಟಿದ್ದರು. ಈ ಪ್ರಕಾರದ ಕಾಡುಧರ್ಮದ ಉಪಾಸಕರಾದ ಹಿಂಡೆ ನಬುರ್ಗ, ಲೋಡೆಂಡಾರ್ಫ, ಮ್ಯಾಕೆನ್‌ಸನ್ ಇವರು ಜಗತ್ತಿನ ಸ್ವಾತಂತ್ರ್ಯಕ್ಕೆ ಭಂಗ ತಂದರು. ಮತ್ತು ಜರ್ಮನ್ ಪ್ರಜೆಗಳಿಗೆ "ಅಪ್ಪಗಳಿರಾ, ದೇವರಿಗೆ ನೀವೇ ಪ್ರಿತಿಯ ಮಕ್ಕಳಾಗಿರುವಿರಿ. ನೀವು ಸಾಧಾರಣವಲ್ಲ ಶಿಖರವನ್ನೇರಿರುವಿರಿ ಆದಕಾರಣ ಇಡೀಜಗ ತ್ತಿನಲ್ಲಿ ನಿಮ್ಮದೇ ಸಾಮ್ರಾಜ್ಯವಾಗಲಿಕ್ಕೆಬೇಕು. ಇಂಗ್ಲಂಡವು ನಿಮ್ಮ ಇಚ್ಛೆಗೆ ಅಡ ಬರುವದು. ಅಡಿಗಡಿಗೆ ನಿಮ್ಮ ಮಾರ್ಗದಲ್ಲಿ ವಿಘ್ನವನ್ನುಂಟು ಮಾಡುವದು. ಆದ್ದರಿಂದ ಅದು ನಿಮ್ಮ ಕಡುಹಗೆಯೆಂದು ತಿಳಿಯಿರಿ. ಆದಕಾರಣ ಆ ದೇಶವನ್ನು ಕಾಲಿನಿಂದ ಒರಿಸಿ ಚೆಲ್ಲಲಿಕ್ಕೆಬೇಕು." ಎಂದು ಕಲಿಸಿದರು. ಲಾರ್ಡ ರಾಬರ್ಟ್ಸ್ ಮೊದಲಾದ ಎಷ್ಟೋ ಇಂಗ್ಲಿಷ ಮುತ್ಸದ್ದಿಗಳಿಗೆ ಜರ್ಮನಿಯು ಸಂಗಡ ಯುದ್ಧವು ಸಂಭವಿಸುವದೆಂದು ಕಳೆದ ಹತ್ತು ವರ್ಷಗಳಲ್ಲಿ ತಿಳಿದು ಹೋಗಿತ್ತು. ಈ ವೃದ್ಧನು ಯುದ್ಧವು ಪ್ರಾರಂಭವಾಗುವ ಪೂರ್ವದಲ್ಲಿ ಎಷ್ಟೋ ವರ್ಷ ಮುಂಚಿತವಾಗಿ ಈ ಭಾವೀ ಸಂಕಟದ ಸೂಚನೆಯನ್ನು ಬ್ರಿಟಿಶರಾಷ್ಟ್ರಕ್ಕೆ ಕಂಠಶೋಷವಾಡಿ ಹೇಳಿದ್ದನು. ಆದರೆ ಅವನ ಮಾತನ್ನು ಕೇಳುವ ವಾರು. ಎಷ್ಟೋ ಜನರು ಅವನ ಸದುದ್ದೇಶಗಳನ್ನು ತಿಳಿಯದೆ ಇಲ್ಲದ ಸಂಶಯಗಳನ

ಕೆಗೆದರು. ಬೇರೆ ಎಷ್ಟೋ ಅರಣ್ಯಪಂಡಿತರು ಅವನನ್ನು ಹುಚ್ಚನೆಂದು ಬಗೆದರು. ೧೯೧೯ನೇ ಇಸವಿಯಲ್ಲಿ ಅಗಾದೀರ ಪ್ರಕರಣದಲ್ಲಿ ಮಾತ್ರ ಜರ್ಮನಿಯ ನಿಜವಾದ ಸ್ವರೂಪವು ಬೈಲಿಗೆ ಬಂತು. ಆದರೂ ಇಂಗ್ಲಂಡಕ್ಕೆ ಎಚ್ಚರಿಕೆಯು ಹುಟ್ಟಲಿಲ್ಲ. ಈ ನಿದಾಶೀನ್ಯದ ಪರಿಣಾಮವು ಇಸವಿ ಸನ್ ೧೯೧೪ರಲ್ಲಿ ಜರ್ಮನಿಯು ಯುದ್ಧಸನ್ನದ್ಧವಾಗಿ ಕೊಂಬು ಊದಿದಾಗ ಇಂಗ್ಲಂಡಕ್ಕೆ ಅದೇ ಯುದ್ಧದ ತಯಾರಿಯನ್ನು ಪ್ರಾರಂಭ ಮಾಡುವ ಪ್ರಸಂಗವನ್ನು ತಂದುಕೊಟ್ಟಿತು.

ಪ್ರಸಂಗ ಬಂದಕೂಡಲೆ ಗಡಿಬಿಡಿಯಿಂದ ಯುದ್ಧವನ್ನು ಕೈಕೊಂಡಾಗ್ಯೂ ಅಡರಲ್ಲಿ ಬ್ರಿಟಿಶ ಸಾಮ್ರಾಜ್ಯದವರು ಉತ್ಕೃಷ್ಟವಾಗಿ ಕೆಲಸ ಮಾಡಿ ತೋರಿಸಿದರು ಬ್ರಿಟಿಶಹಡಗು ಪಡೆಯು ದೊಸ್ತರಾಷ್ಟ್ರಗಳ ಸೈನ್ಯಕ್ಕೆ ತಮ್ಮ ಮೊದಲಿನ ಕೀರ್ತಿಗನುರೂಪವಾಗಿ ಸಹಾಯವನ್ನು ಮಾಡಿತು. ಸೋಮದ ಯುದ್ಧವಾದ ಬಳಿಕ ಆವ ಬ್ರಿಟಿಶಸೈನ್ಯದ ಘನ ಘಟನೆಯಿಂದ ಜಗತ್ತಿನೊಳಗಿನ ಯಾವತ್ತು ಸೈನ್ಯಗಳಿಗಿಂತಲು ಅದಕ್ಕೆ ಹೆಚ್ಚು ಸಾಮರ್ಥ್ಯವು ಉತ್ಪನ್ನವಾಯಿತು. ಕಳೆದ ಮೂರು ತಿಂಗಳಲ್ಲಿ ಯುದ್ಧದ ದೊಡ್ಡ ಹೊರೆಯು ಇವ್ಮ ಮೇಲೆಯೇ ಬಿದ್ದಾಗ್ಯೂ ಬ್ರಿಟಿಶ ಸೈನ್ಯವು ಅದನ್ನು ಸಹಿಸಿಕೊಂಡು ಶತ್ರುಸೈನ್ಯವನ್ನು ಸಂಪೂರ್ಣವಾಗಿ ಹಣ್ಣು ಮಾಡಿತು. ಮತ್ತು ಲೋಕದಲ್ಲಿ ತಮ್ಮ ಕೀರ್ತಿಯನ್ನು ಚಿರಾಮರವಾಗುವಂತೆ ಮಾಡಿತು. ಜಗತ್ತಿನೊಳಗಿನ ಎಲ್ಲ ರಣಕ್ಷೇತ್ರಗಳಲ್ಲಿ ಆಸ್ಟ್ರೇಲಿಯನ್, ಕ್ಯಾನೇಡಿಯನ್, ಇಂಗ್ಲಿಷ, ಸ್ಕಾಚ್, ಐಯರಿಶ್, ಹಿಂದೀ ಮೊದಲಾದ ಎಲ್ಲ ಪಂಡುಗಳು ಯುದ್ಧಮಾಡಿದವು ಮತ್ತು ಕಟ್ಟಕಡೆಗೆ ವಿಜಯವನ್ನು ಸಂಪಾದಿಸುವಲ್ಲಿ ಸಾಮ್ರಾಜ್ಯವು ಒಳ್ಳೇ ಮಹತ್ವದ ಕಾರ್ಯವನ್ನು ಜನುಗಿಸಿದು ಇಂದಿಗೆ ನಾಲ್ಕು ವರುಷಗಳ ಪೂರ್ವದಲ್ಲಿ ಹೆಸರಿಗೆ ಮಾತ್ರ ಇದ್ದ ಸೈನ್ಯವು ಈ ಮಹಾಯುದ್ಧದಲ್ಲಿ ಕೆಲಸಮಾಡಿದ್ದು ಬಹಳ ಅಭಿಮಾನಾಸ್ಪದ ಸಂಗತಿಯಾಗಿದೆ. ಮಹಾಯುದ್ಧದ ನಾಲ್ಕೈದಾಲು ವರ್ಷಗಳ ಅವಧಿಯಲ್ಲಿ ಬ್ರಿಟಿಶ ಸಾಮ್ರಾಜ್ಯದಲ್ಲಿ ಲಾಯಿಡ್‌ಜಾರ್ಜ್, ಬಾಲ್ಫೋರ್, ಕಾರ್ಡಚೆಮ್ಸ್‌ಫರ್ಡ್, ಸರಹೂಜಿನ್, ಸರ ರಾಬರ್ಟ್‌ಬೋಲ್ಡನ್, ಜನರಲ್ ಸ್ಮಟ್ಸ್ ಈ ರಾಜಕಾರ್ಯ ಧುರಂಧರ ಮುತ್ಸದ್ದಿಗಳು ಹೆಸರಿಗೆ ಬಂದರು. ಜೇಲಿಕೋ, ಬೀಟ್ಟಿ, ಈ ಕಾರ್ಯದಕ್ಷರೂ ಬುದ್ಧಿವಂತರಾದ ಹಡಗುಪಡೆಯ ಅಧಿಕಾರಿಗಳೂ ಹೆಸರಾದರು. ಕಾರ್ಡಕಿಚನರ, ಸರಡಗಲನ್, ಹೆಗ್, ರಾಲಿನ್‌ಸನ್, ಬಿಂಗ, ಹಾರ್ನ, ರಾಬರ್ಟ್‌ಸನ್, ಪಸ್ಕೋ, ಅಲ್ಲನ್‌ಬಿ ಈ ಕಡುಗಲಿಗಳು ತಮ್ಮ ಅಪ್ರತಿಮವಾದ ಯುದ್ಧಕೌಶಲ್ಯವನ್ನು ತೋರಿಸಿ ಒಳ್ಳೇ ಹೆಸರು ಪಡೆದರು. ಮತ್ತು ಬ್ರಿಟಿಶ ವಿಮಾನಿಗಳೂ ನಾವಿಕರೂ ಸಮ

ರಾಂಗಣದಲ್ಲಿ ಒಳ್ಳೇ ಶೌರ್ಯದಿಂದ ಕಾದಿದರು. ಬೇರೆ ಎಲ್ಲ ದೇಶದೊಳಗಿನ ಸೈನಿಕ
ಗಿಂತ ಬ್ರಿಟಿಶಸೈನ್ಯದೊಳಗಿನ ದಂಡಿನ ಅಧಿಕಾರಿಗಳು ಹೆಚ್ಚು ಉಪಯೋಗಬಿದ್ದರ
ಇದರಿಂದ ಈ ವೀರರು ಎಷ್ಟು ಮನಃಪೂರ್ವಕವಾಗಿಯೂ ದೃಢನಿಶ್ಚಯದಿಂದಲ
ಯುದ್ಧಮಾಡಿದರೆಂಬದು ಯಾರಿಗಾದರೂ ತಿಳಿಯುವಂತಿರುವದು.

ಉಪಸಂಹಾರ:—ಈ ಪ್ರಕಾರ ಈ ಘನಘೋರವಾದ ಮಹಾಯುದ್ಧದ ಸಮ
ಪ್ತಿಯಾಯಿತು. ಈ ಯುದ್ಧರೂಪ ಯಜ್ಞದ ಹೋಮಕುಂಡದಲ್ಲಿ ಸುಮಾರು ೧ ಕೋ
ಮಾನವೀ ಪ್ರಾಣಿಗಳ ಆಹುತಿಯಾಯಿತು. ದೈವಿಕಯೋಜನೆಯು ವಿಲಕ್ಷಣವಾಗಿ
ವದು. ಯುದ್ಧದ ತಾತ್ಕಾಲಿಕ ಪರಿಣಾಮವು ಎಷ್ಟೋ ಅನಿಷ್ಟವಾದಾಗ್ಯೂ ದೂರದೃ
ಯಿಂದ ವಿಚಾರಮಾಡಿ ನೋಡಿದರೆ ಒಟ್ಟಿನ ಮೇಲೆ ಈ ಯುದ್ಧದ ಪರಿಣಾಮವು ಹಿತ
ವಾಗುವದೆಂದು ನಮ್ಮ ನಂಬಿಗೆಯುಂಟು. ಇವತ್ತಿನವರೆಗೆ ಪಾಶ್ಚಾತ್ಯದೇಶದಲ್ಲಿ ಐಹಿ
ಸುಖದ ಬೆನ್ನುಹತ್ತಿ ತೊಳಲಿ ಬಳಲುವ ಸಮಾಜವು ಇನ್ನು ಮುಂದೆ ಎಚ್ಚರಿಕೆ ಹೊಂ
ಆಧ್ಯಾತ್ಮಿಕ ಉನ್ನತಿಯ ಮಾರ್ಗವನ್ನು ಸ್ವೀಕರಿಸತೊಡಗುವದು. ಈ ಯುದ್ಧದ ಸಮ
ಪ್ತಿಯ ತರುವಾಯ ಬ್ರಿಟಿಶಸಾಮ್ರಾಜ್ಯವು ಹೆಚ್ಚು ವಿಸ್ತೃತವಾದದ್ದೂ ಬಲವಾದದ್ದ
ಆಗುವದು. ಮತ್ತು ಅದರ ಎಲ್ಲ ಘಟಕಾವಯವಗಳಲ್ಲಿ ಪರಸ್ಪರ ಪ್ರೇಮಭಾವವೂ, ಬ
ಧುತ್ವವೂ, ಸಮತೆಯೂ, ಸಹಿಷ್ಣುತೆಯೂ ಬೆಳೆದು ಅವುಗಳ ಪರಸ್ಪರ ಸಂಬಂಧವು ಈ
ದ್ದದ್ದಕ್ಕಿಂತಲೂ ಹೆಚ್ಚು ದೃಢವಾಗುವದು. ಈ ಯುದ್ಧದಲ್ಲಿ ಬಡ ಹಿಂದುಸ್ತಾನವು ಕೈಲಾ
ಮಟ್ಟಿಗೆ ಸ್ವಾರ್ಥತ್ಯಾಗಮಾಡಿ ಒಳ್ಳೇ ಮಹತ್ವದ ಕಾರ್ಯಭಾರವನ್ನು ನೆರವೇರಿಸಿದ
ಇಡೀ ಜಗತ್ತಿಗೆ ಗೊತ್ತಾಗಿರುತ್ತದೆ. ಕಟ್ಟಕಡೆಗೆ ಇನ್ನು ಮುಂಚೆ ಇಡೀ ಜಗ
ನ್ನಲ್ಲಿ ಚಿರಕಾಲ ಶಾಂತತೆಯು ಉಳಿಯಲಿ. ಸ್ವಾತಂತ್ರ್ಯ, ನ್ಯಾಯ, ಪ್ರೇಮ ಇವುಗ
ಸಾಮ್ರಾಜ್ಯವು ಸ್ಥಾಪಿತವಾಗಿ ಬ್ರಿಟಾನಿಯಾದ ಏಕಛತ್ರಾಧಿಪತ್ಯದ ಕೆಳಗೆ ಹಿಂದುಸ್ತಾ
ಸಾಮ್ರಾಜ್ಯವು ಒಂದು ಘಟಕವೆಂದೆನಿಸಿಕೊಂಡು ಎಲ್ಲ ಪ್ರಕಾರದ ಉನ್ನತಿಯನ್ನು ಹೊ
ದಲಿ ಎಂದು ದಯಾಳುವಾದ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ಈ ಲೇ
ವನ್ನು ಮುಗಿಸುವೆನು.

ಯುದ್ಧವನ್ನು ನಿಲ್ಲಿಸುವದಕ್ಕಾಗಿ ಮಾಡಿಕೊಂಡ ಮುಖ್ಯ ಕರಾರುಗಳು.

ಯುದ್ಧ ಮುಗಿಸುವದಕ್ಕಾಗಿ ಜರ್ಮನಿಯು ಕೂಡ ಮಾಡಿಕೊಂಡ ಕರಾರುಗಳ
ಒಟ್ಟಿಗೆ ೩೫ ಇರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ಕೊಡುತ್ತೇವೆ.

೧. ಜರ್ಮನಿಯು ಇಡೀ ಬೆಲ್ಜಿಯಮ್ ಹಾಗು ಫ್ರಾನ್ಸ್‌ದೇಶಗಳನ್ನು ತೆತವುಮಾಡಿ ಅಲ್ಸೆಸ್ ಹಾಗು ಲಾರೆನ್ಸ್ ಪ್ರಾಂತಗಳನ್ನು ಫ್ರಾನ್ಸ್‌ಕ್ಕೆ ಕೊಡತಕ್ಕದ್ದು. ಹ್ರಾಯಿನ್ ನದಿಯ ಅಚೆದಂಡೆಯ ಜರ್ಮನೀ ದೇಶದಸೀಮೆಯನ್ನು ಒಪ್ಪಂದವಾಗುವತನಕ ದೋಸ್ತ ರಾಷ್ಟ್ರಗಳ ಅಧೀನದಲ್ಲಿಡತಕ್ಕದ್ದು. ಮತ್ತು ಬಲಗಡೆಯ ದಂಡೆಯ ಕೆಲವು ಸೀಮೆಯನ್ನೂ ಕೆಲವು ದಿವಸಗಳ ಮಟ್ಟಿಗೆ ತಟಸ್ಥ ರಾಷ್ಟ್ರಗಳ ಅಧೀನಕ್ಕೆ ಕೊಡತಕ್ಕದ್ದು. (ಈ ಕರಾರಿನಿಂದ ದೋಸ್ತರಾಷ್ಟ್ರದವರಿಗೆ ಬೇಕಾದಾಗ ಜರ್ಮನಿಯ ಮೇಲೆ ಸ್ವಾರೀಮಾಡಲಿಕ್ಕೆ ಶಕ್ಯವಿರುವದು.)

೨. ಅಯ್ದು ಸಾವಿರ ಜಂಗೀ ತೋಪುಗಳನೂ, ೩೦ ಸಾವಿರ ಮಾರ್ಟರ ತೋಪುಗಳನ್ನೂ, ಅಷ್ಟೇ ಯಾಂತ್ರಿಕ ತೋಪುಗಳನ್ನೂ ದೋಸ್ತರಾಷ್ಟ್ರದವರ ಸ್ವಾಧೀನ ಮಾಡತಕ್ಕದ್ದು. (ಇಷ್ಟೆಲ್ಲ ತೋಪುಗಳನ್ನು ಕೊಟ್ಟಬಳಿಕ ಜರ್ಮನಿಯು ತೋಪ ಖಾನೆಯು ಎಷ್ಟು ಬಲಹೀನವಾಯಿತೆಂಬದನ್ನು ಹೇಳಲವಶ್ಯವಿಲ್ಲ.) ಯುದ್ಧೋಪ ಯುಕ್ತವಾದ ೩೦ ಸಾವಿರ ವಿಮಾನಗಳನ್ನು ದೋಸ್ತರಾಷ್ಟ್ರದವರಿಗೆ ಕೊಡ ತಕ್ಕದ್ದು. (ಇಷ್ಟು ವಿಮಾನಗಳು ಕಳೆದು ಹೋದ ಮೇಲೆ ಪಾಪ ಬಡ ಜರ್ಮನಿ ಯು ವಾತಾವರಣದಲ್ಲಿ ಚಳವಳಿಯನ್ನು ಎಬ್ಬಿಸುವ ಬಗೆಯಾವದು!)

೩. ಉತ್ತಮ ಪ್ರತಿಷ್ಠ ೨೦ ಯುದ್ಧದ ಹಡಗುಗಳನ್ನೂ ೩೦ ಕ್ರೂಝುರುಗಳನ್ನೂ ಯಾವತ್ತೂ ಟಾರ್ಪೆಡೋಗಳನ್ನೂ ಎಷ್ಟೋ ವ್ಯಾಪಾರದ ಸಾಮಾನುಗಳನ್ನೂ ಬ್ರಿಟಿಶ ಹಡಗುಪಡೆಯ ಅಧೀನಕ್ಕೆ ಕೊಡತಕ್ಕದ್ದು. (ಈ ಕಲಮು ಅಮಲಿನಲ್ಲಿ ಬಂದಮೇಲೆ ಜರ್ಮನಿಯ ಬಳಿಗೆ ಹಡಗುಪಡೆಯು ಎಷ್ಟು ಶಿಲ್ಕು ಉಳಿಯುವದು.)

೪ ಅಯ್ದು ಸಾವಿರ ರೇಲ್ವೆ ಎಂಜಿನುಗಳನ್ನೂ ಒಂದೂವರೆ ಲಕ್ಷ ಡಬ್ಬಿಗಳನೂ ದೋಸ್ತರಾಷ್ಟ್ರಕ್ಕೆ ಕೊಡತಕ್ಕದ್ದು. (ಈ ಕರಾರಿನಿಂದ ತನ್ನ ಸೈನ್ಯವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುವದು ದುಸ್ತರವಾಗುವದು.)

ಸಾರಾಂಶ—ಲಷ್ಕರೀ ದೃಷ್ಟಿಯಿಂದಲೂ, ಸಾಂಪತ್ತಿಕ ದೃಷ್ಟಿಯಿಂದಲೂ ಎಷ್ಟೋ ವಸಗಳ ವರೆಗೆ ಜರ್ಮನೀ ದೇಶವು ಬಲಹೀನವಾಗಿರಬೇಕಾಯಿತು. ಮತ್ತು ಮನಸ್ಸಿ ದ್ದಿದ್ದರೂ ಪುನಃ ಯುದ್ಧವನ್ನು ಸುರುವು ಮಾಡುವ ಶಕ್ತಿಯು ಇಲ್ಲದಂತಾಗುವದು. ದಕಾರಣ ಒಪ್ಪಂದದ ಕಾಲಕ್ಕೆ ದೋಸ್ತರಾಷ್ಟ್ರಗಳ ಯಾವತ್ತು ಕರಾರುಗಳನ್ನು ಜರ್ಮ ನಿಯು ತುಟಿಬಿಚ್ಚಿ ಮಾತಾಡದೆ ಒಪ್ಪಿಕೊಳ್ಳಬೇಕಾಗುವದೆಂಬದು ಸ್ಪಷ್ಟವದೆ.

ಪ ಕ್ಷ ಪ್ಯ ವ ಡಾ ರ ಪ್ಪ.

(೧)

ಶ್ರೀಯುತ ಸಂಪಾದಕ ಕನ್ನಡ ಶಾಲಾಪತ್ರಿಕ ಧಾರವಾಡ ಮಹನೀಯ

ಸನ್ನಿಧಿಗೆ-

ನ. ವಿ. ವಿ. ಈ ಕೆಳಗಿನ ಲೋಕಹಿತ ಸಂಗತಿಯನ್ನು ತಮ್ಮ ಜಗನ್ಮಾನ್ಯ ಪತ್ರಿಕೆಯಲ್ಲಿ ಪ್ರಕಟಪಡಿಸಬೇಕಾಗಿ ಪ್ರಾರ್ಥಿಸುವೆನು.

ಶ್ರೀಮತಿ ವೀರವ್ವನವರ ಔದಾರ್ಯ.

ರಾ॥ ಬ॥ ರುದ್ರಗೌಡ ಅರಟಾಳ ಇವರ ಸಹೋದರಿ ಶ್ರೀಮತಿ ವೀರವ್ವಾ ಭ್ರಕಾ ಬಸಪ್ಪಗೌಡಾ ಪಾಟೀಲ ಹಬಕದ ಹೊನ್ನೀಹಳ್ಳಿ ಬಿ. ಧಾರವಾಡ ಇವರು ಲಿಂಗಾಯತ ಸಮಾಜದ ಸ್ತ್ರೀ ಶಿಕ್ಷಣದ ಪ್ರಸಾರಕ್ಕಾಗಿ ೧೫೦೦ ರೂಪಾಯಿಗಳ ಪ್ರಾಮಿಸರಿ ನೋಟಗಳನ್ನು ಧಾರವಾಡ ಲಿಂಗಾಯತ ಫಂಡ ಅಸೋಸಿಯೇಶನ್ನದವರ ವಶಕ್ಕೆ ಕೊಟ್ಟಿರುತ್ತಾರೆ. ಈ ನೋಟುಗಳು ೩॥ ರೂಪಾಯಿಯ ಬಡ್ಡಿಯವಿದ್ದು ಈ ಬಡ್ಡಿಯ ಹಣದಿಂದ ಶ್ರೀಮತಿ ವೀರವ್ವನವರ ಹೆಸರಿನದೊಂದು ಶಿಷ್ಯವೃತ್ತಿಯು ಸ್ಥಾಪಿಸಲ್ಪಟ್ಟಿದೆ. ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಜೋಡಿಸಿರುವ ಕನ್ಯಾಶಾಲೆಯಲ್ಲಿ ೫ನೇ ಇಯತ್ತೆಯಲ್ಲಿ ೧ನೇ ನಂಬರ ತೇರ್ಗಡೆ ಹೊಂದಿ, ಕಾಲೇಜಕ್ಕೆ ಹೋಗಿ ಅಭ್ಯಾಸಿಸುವ ವಿದ್ಯಾರ್ಥಿನಿಗೆ ಈ ಶಿಷ್ಯವೃತ್ತಿಯು ಕೊಡಲ್ಪಡುವದು. ಸ್ತ್ರೀ ಶಿಕ್ಷಣದ ಮಹತ್ವವನ್ನು ಕಂಡು ಆದರ ಉತ್ತೇಜನಾರ್ಥವಾಗಿ ಈ ಶಿಷ್ಯವೃತ್ತಿಯನ್ನು ಸ್ಥಾಪಿಸಿದ್ದಕ್ಕಾಗಿ ಶ್ರೀವೀರವ್ವನವರು ಉದಾಹರಣೆಯು ಪೊದಲನೆಯುದಾಗಿದ್ದಲ್ಲದೆ ಎಷ್ಟೋ ಶ್ರೀಮಂತ ಮನೆತನದ ಸ್ತ್ರೀ ಸಮಾಜಕ್ಕೆ ಅನುಕರಣೀಯವಾಗಿದೆ. ಈ ಬಗೆಯು ಮೇಲ್ಕಾರದ ಉದಾಹರಣೆಯನ್ನು ಹಾಕಿಕೊಟ್ಟಿದ್ದಕ್ಕಾಗಿ ಸಮಸ್ತ ವೀರಶೈವರು ಅವರಿಗೆ ಋಣಿಯಾಗಿದ್ದಾರೆ. ಶ್ರೀಮತಿ ವೀರವ್ವನವರ ಈ ಔದಾರ್ಯ ಬುದ್ಧಿಯು ಅಭಿನಂದನೀಯವಾಗಿದೆ.

ಕಿತ್ತೂರ.
ತಾ॥ ಗೋಕಾಕ

ಬ. ಚ. ಕಂಬಿ.
ಸ್ಕೂ. ಮಾ. ಕಿತ್ತೂರ ನಂ. ೧.

ಗುರುವರ್ಯ ಶಾಲಾ [illegible] ಕನ್ನಡ ಶಾಲಾಪತ್ರಿಕ ಎಡಿಟರವರ

ಸನ್ನಿಧಿಗೆ—

ಕುಡುಸಲಿ ಶಾಲಾ ಹೆ. ಮಾಸ್ತರರ ವಿನಯ ವಿನಂತಿ ಕೆಳಗೆ ಬರೆದ ಸಂಗತಿಯನ್ನು ತಮ್ಮ ಅಂದವಾದ ಶಾಲಾಪತ್ರಿಕದಲ್ಲಿ ಮುದ್ರಿಸುವ ಮೆ. ಆಗಬೇಕೆಂದು ಬೇಡಿಕೊಳ್ಳುತ್ತೇನೆ

ಪತ್ರವ್ಯವಹಾರ

ತಾ. ೭-೯-೧೯೧೮ ಇಪ್ಪತ್ತಿ ದಿವಸ ನಮ್ಮ ಶಾಲೆಯಲ್ಲಿ ಮೆ. ೫ನೇ ಅ. ಡೆ. ಎ. ಇನಸ್ಪೆಕ್ಟರ ಜಿಲ್ಹಾ ಧಾರವಾಡ ಖಾವಂದರವರ ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭವು ಒಳ್ಳೇ ಸಂಭ್ರಮದಿಂದ ನೆರವೇರಿತು.

ಊರೊಳಗಿನ ಸಭ್ಯಗೃಹಸ್ಥರಾದ ಶಾಂತಲಿಂಗಯ್ಯ ವೀರಯ್ಯ ಬೆಲ್ಲದ ಎಂಬವರು ತಮ್ಮ ಸ್ವಂತ ಖರ್ಚಿನಿಂದ ಹೆಚ್ಚಿನ ಇನಾಮಿನ ಒಡವೆಗಳನ್ನು ತರಿಸಿ ಪಾಸಾದ ಎಲ್ಲ ವಿದ್ಯಾರ್ಥಿಗಳಿಗೆ ಇನಾಮು ದೊರೆಯುವಂತೆ ವ್ಯವಸ್ಥೆ ಮಾಡಿದರು.

ಈ ಗ್ರಾಮದ ಪೋಲೀಸ ಪಾಟೀಲರಾದ ದೊಡ್ಡಗೌಡಾ ಹನಮಪ್ಪಗೌಡಾ ಎಂಬವರು ತಮ್ಮ ಸ್ವಂತ ಖರ್ಚಿನಿಂದ ೧೦೦ ರೂಪಾಯಿಯ ಒಂದು ಗಡಿಯಾರವನ್ನು ಶಾಲೆಯ ಉಪಯೋಗಕ್ಕಾಗಿ ಸಮಾರಂಭದ ಕಾಲಕ್ಕೆ ಕೊಟ್ಟರು.

ಶಾಲೆಯ ಪಂಚರೂ ಊರೊಳಗಿನ ಸಭ್ಯಗೃಹಸ್ಥರೂ ರೈತ ಜನರೂ ಕೂಡಿ ಈ ಮೊದಲೇ ೪೨೫ ರೂಪಾಯಿ (ವರ್ಗಣಿ) ಯನ್ನು ಹಿರೇಕೇರೂರ ತಾಲೂಕ ತಿಜೋರಿಗೆ ಹೊಸ ಶಾಲೆಯನ್ನು ಕಟ್ಟುವದರ ಸಲುವಾಗಿ ಭರಣಾ ಮಾಡಿಸಿದ್ದು ಈಗ ಪುನಃ ಈ ಬರಗಾಲ ದಿವಸದಲ್ಲಿಯೇ ಈ ಹೊತ್ತು ೩೦೧ ರೂಪಾಯಿ ವರ್ಗಣಿ ರೋಖ ವಸೂಲ ಮಾಡಿ ಹನಮಪ್ಪ ಅಡಿವೆಪ್ಪ ಸ್ಕೂಲಪಂಚ ಇವರ ಕಡೆಗೆ ಇಟ್ಟು ಈ ಎರಡೂ ಹಣ ಕೂಡಿಸಿ ಹೊಸ ಸಾಲೆಯನ್ನು ನಾವೇ (ಊರವರೇ) ಕಟ್ಟಿಕೊಳ್ಳುತ್ತೇವೆ. ತೀವ್ರ ಪರವಾನಗಿಯನ್ನು ಕೊಡಬೇಕೆಂದು ಮೆ॥ ಡೆ॥ ಎ॥ ಇನಸ್ಪೆಕ್ಟರ ಜಿಲ್ಹಾ ಧಾರವಾಡ ಸಾಹೇಬರವರ ಕಡೆಗೆ ವಿನಂತಿ ಮಾಡಿಕೊಂಡಿರುತ್ತಾರೆ.

ಮೆ. ೫ನೇ ಅ॥ ಡೆ॥ ಎ॥ ಇ॥ ಜಿಲ್ಲಾ ಧಾರವಾಡ ಸಾಹೇಬರವರು ಸಾಲೆಯ ಸ್ಥಿತಿಯನ್ನೂ ಈ ಸಭ್ಯಗೃಹಸ್ಥರ ಔದಾರ್ಯವನ್ನೂ ನೋಡಿ ಆನಂದಭರಿತರಾದರು. ಚಿಕ್ಕ ಬಾಲ ಬಾಲಕಿಯರು ರಾಷ್ಟ್ರ ಗೀತವನ್ನು ಅಂದ ಮೇಲೆ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲ್ಪಟ್ಟಿತು. ನೆರೆದ ಸಭ್ಯ ಗೃಹಸ್ಥರಿಗೆ ತಾಂಬೂಲ ಕೊಟ್ಟನಂತರ ಸಭಾ ವಿಸರ್ಜನೆಯಾಯಿತು. ಪತ್ರ ವಿಸ್ತಾರಕ್ಕೆ ಕ್ಷಮೆ ಇರಲಿ.

ಕುಡುಪಲಿ
ತಾ: ಕೋಡ
ತಾ. ೧೦-೯-೧೮.

ತಮ್ಮ ವಿಧೇಯ
ದ. ಶ್ರೀ ಕುಲಕರ್ಣಿ
ಹೆ॥ ಮಾ॥ ಕುಡುಪಲಿ.

ಶ್ರೀಯುತ ಗುರುವರ್ಯ ಎಡಿಟರ ಕನ್ನಡ ಶಾಲಾಪತ್ರಕ ಇವರ ಸನ್ನಿಧಿಗೆ—

ಸವಿನಯ ವಿನಂತಿ—ಶಾಲಾ ಐನಾಪೂರ ತಾಲೂಕ ಅಥಣಿ ಜಿಲ್ಹಾ ಬೆಳಗಾಂವ ಇಲ್ಲಿಯ ಸರಕಾರಿ ಶಾಲೆಯಿಲ್ಲಿಯ ಹೆಡ್ ಮಾಸ್ತರ ಜೀವಾಜಿ ಭೀಮರಾವ ಕುಲಕರ್ಣಿ ಇವರು ಈ ಊರ ಶಾಲೆಯ ಅಭಿವೃದ್ಧಿಯ ದೆಶೆಯಿಂದ ಬಹಳೇ ಸಾಹಸ ಮಾಡಿ ವರ್ಗಣಿ ಕೂಡಿಸಿ ಶಾಸ್ತ್ರೀಯ ಸಾಮಾನುಗಳನ್ನೂ ಬೇರೆ ಉಪಕರಣದ ಸಾಮಾನುಗಳನ್ನೂ ತರಿಸಿರುವರು. ಇಂಥ ಕಾಲದಲ್ಲಿ ಶಾಲೆಯ ಉತ್ತೇಜನಾರ್ಥವಾಗಿ ವರ್ಗಣಿ ಕೊಟ್ಟದ್ದು ಊರವರಿಗಾದರೂ ಶ್ರೇಯಸ್ಕರವಾದ ಸಂಗತಿಯು ಆದದರಿಂದ ವರ್ಗಣಿ ಕೊಟ್ಟ ಸಭ್ಯ ಗೃಹಸ್ಥರ ಹೆಸರುಗಳನ್ನು ತಮ್ಮ ಶಾಲಾಪತ್ರಕದಲ್ಲಿ ಮುದ್ರಿಸೋಣವಾಗಬೇಕೆಂದು ಪ್ರಾರ್ಥಿಸುವೆನು.

ಮದತ ಮಾಡುವದಕ್ಕಾಗಿ ಹಣ ಕೊಟ್ಟವರ ಯಾದಿಯು.

೧	ಮ. ರಾ. ರಾ.	ಗ್ರಾಮಸ್ಥ ಐನಾಪೂರ	೧೦	೦	೦
೨	,,	ರಂಗೋ ಭೀಮರಾವ ಸಂಗೋರಾಮ	೧೦	೦	೦
೩	,,	ಬಾಬಾಚಾರ್ಯ ವೆಂಕಟಾಚಾರ್ಯ ಮಾಹುಲಿ	೧೦	೦	೦
೪	,,	ತಮಣಾಚಾರ್ಯ ರಾಘವೇಂದ್ರಾಚಾರ್ಯ ಮಾಹುಲಿ	೭	೦	೦
೫	,,	ಕೃಷ್ಣಾಜಿ ಪಾಂಡುರಂಗ ಕುಲಕರ್ಣಿ	೬	೦	೦
೬	,,	ನಾರಾಯಣ ರಾಘವೇಂದ್ರ ಕುಲಕರ್ಣಿ	೬	೦	೦
೭	,,	ಬಳವಂತರಾವ ಕುಲಕರ್ಣಿ ಸತ್ತೀಕರ	೫	೦	೦
೮	,,	ಕೃಷ್ಣರಾವ ಹಣಮಂತರಾವ ಹುಯಿಲಗೋಳ	೫	೦	೦
೯	,,	ಸೇಮಣ್ಣಾ ಪಾಟೀಲ	೪	೦	೦
೧೦	,,	ಅಪ್ಪಣ್ಣ ಅಯ್ಯಪ್ಪ ರಡ್ಡಿ	೪	೦	೦
೧೧	,,	ಭಾವು ಲಖಗೌಡ ಪಾಟೀಲ	೩	೦	೦
೧೨	,,	ಸತ್ಯಪ್ಪ ನಿಂಗಪ್ಪ ನಿಕಮ	೩	೦	೦
೧೩	,,	ಮಹಾದು ತಿಪ್ಪಣ್ಣ ಕಲಶೆಟ್ಟಿ	೨	೦	೦
೧೪	,,	ಸಿದಗೌಡ ಪಾಸಗೌಡ	೨	೦	೦
೧೫	,,	ಶ್ರೀನಿವಾಸ ನಾರಾಯಣ ಪತಕಿ	೨	೦	೦
೧೬	,,	ವಿನಾಯಕ ಭಾಸ್ಕರ ಜೋತಿ	೨	೦	೦
೧೭	,,	ಲಖಗೌಡ ಪಾಟೀಲ	೨	೦	೦

೧೮	,,	ಸದಾಶಿವ ಬನಾಜಿ ಭಿಡೆ	೨	೦	೦
೧೯	,,	ನಿಂಗಪ್ಪ ಕಲ್ಲಪ್ಪ ಖಟಾವಿ	೨	೦	೦
೨೦	,,	ಶೇಷೋ ಶ್ರೀನಿವಾಸರಾವ ಮುತಾಲೀಕ	೨	೦	೦
೨೧	,,	ಮಲಗೌಡ ಗಿರಿಗೌಡ ಪಾಟೀಲ	೨	೦	೦
೨೨	,,	ಗೋವಿಂದ ಕೇಶವರಾವ ಮುತಾಲೀಕ	೨	೦	೦
೨೩	,,	ಕೃಷ್ಣಾಜಿ ರಾಜಾರಾಮ ಪತಕಿ	೨	೦	೦
೨೪	,,	ಮಧ್ವರಾವ ದಾತಾರ	೨	೦	೦
೨೫	,,	ನಾರಾಯಣ ಕೃಷ್ಣ ಮುತಾಲೀಕ	೨	೦	೦
೨೬	,,	ಕಲ್ಯಾಣದಾಸ ಬಾಳಾರಾಮ ಗುಜ್ಜರ	೨	೦	೦
೨೭	,,	ಗೋಪಾಳಾಚಾರ್ಯ ವೇಣಾಚಾರ್ಯ ಕಟ್ಟಿ	೧	೦	೦
೨೮	,,	ಗೋವಿಂದ ಜೀವಾಜಿ ಕುಲಕರ್ಣಿ	೧	೦	೦
೨೯	,,	ಶಿವರುದ್ರಪ್ಪ ಸೊಲ್ಲಾಪೂರ	೧	೦	೦
೩೦	,,	ಲಕ್ಷ್ಮಣಪ್ಪ ಕಲಶೆಟ್ಟಿ	೧	೦	೦
೩೧	,,	ಕೃಷ್ಣಪ್ಪ ಧೋಂಡಪ್ಪ ಪತ್ತಾರ	೧	೦	೦
೩೨	,,	ಗೋವಿಂದ ಸದಾಸಿವ ಕುಲಕರ್ಣಿ	೧	೦	೦
೩೩	,,	ಖಂಡೋ ಗೋವಿಂದ ಕುಲಕರ್ಣಿ	೧	೦	೦
೩೪	ರಾವಸಾ॥	ಇನಾಮದಾರ ಸುಟ್ಟಪ್ಪಟ್ಟೀಕರ	೧	೦	೦
೩೫	ಮ. ರಾ.	ವಿನಾಯಕರಾವ ಟಕಲೆ	೧	೦	೦
೩೬	,,	ರಂಗೋ ತಮ್ಮಾಜಿ ಮುತಾಲೀಕ	೧	೦	೦
೩೭	,,	ರಂಗಪ್ಪಾ ಜೀವಪ್ಪ ಪತ್ತಾರ	೧	೦	೦
೩೮	,,	ಸಿದ್ದಪ್ಪಾ ನರಸಪ್ಪಾ ಹಚ್ಚೀಬಟ್ಟಿ	೧	೦	೦
೩೯	,,	ತಾತ್ಯಾ ಮಚ್ಛಿಪ್ಪ ಕಾಡಾಪೂರ	೧	೦	೦
೪೦	,,	ಶ್ರೀಮಂತ ಅಣ್ಣಪ್ಪ ಬೋಗಾರ	೧	೦	೦
೪೧	,,	ಗಿರಿಮಲ್ಲಪ್ಪ ಸಂಗಪ್ಪ ಗಾಣಿಗೇರ	೧	೦	೦
೪೨	,,	ವಿಷ್ಣು ರಾಮಚಂದ್ರ ಜೋಸಿ	೧	೦	೦
೪೩	,,	ಮಲ್ಲಪ್ಪ ಅಣ್ಣಾ ಕರಾಳಿ	೧	೦	೦
೪೪	,,	ಗುಂಡೋ ದತ್ತಾತ್ರಯ ಜೋಸಿ	೧	೦	೦
೪೫	,,	ಗಣಪತರಾವ ಜೋಸಿ	೧	೦	೦
೪೬	,,	ಸಿದ್ದಪ್ಪ ಬಿನ್ನಪ್ಪ ಕುಂಭಾರ	೧	೦	೪೦
೪೭	,,	ಅಮಗೌಡ ಮಲಗೌಡ ಪಾಟೀಲ	೧	೦	೦
೪೮	,,	ಅನಂತಾಚಾರ್ಯ ಹಟ್ಟೀಹೊಳಿ	೧	೦	೦
೪೯	,,	ಶ್ರೀನಿವಾಸರಾವ ಮುತಾಲೀಕ ವೈದ್ಯ	೧	೦	೦

೫೦	,,	ನರಸಿಂಪಾಚಾರ್ಯ ಶ್ರೀನಿವಾಸಾಚಾರ್ಯ ಕಟ್ಟಿ	೧	೦	೦
೫೧	,,	ನಾರಾಯಣಾಚಾರ್ಯ ಕೃಷ್ಣಾಚಾರ್ಯ ಮಂಗಸೂಳಿ	೧	೦	೦
೫೨	,,	ಮಲ್ಲಪ್ಪ ಗಾಣಿಗೇರ	೧	೦	೦
೫೩	,,	ಪಾರೀಸ ಏಶವಂತ ಉಪಾಧ್ಯೆ	೧	೦	೦
೫೪	,,	ಯಶವಂತ ದಾದಾ ಪಾಟೀಲ	೧	೦	೦
೫೫	,,	ವಿರೂಪಾಕ್ಷಪ್ಪಾ ಬಸಲಿಂಗಪ್ಪಾ ಕರಾಳಿ	೧	೦	೦
೫೬	,,	ಪಾರೀಸಪ್ಪಾ ಗುಂಡಾಳಿ	೧	೦	೦
೫೭	,,	ರುದ್ರಯ್ಯಾ ವಿರೂಪಾಕ್ಷಯ್ಯಾ ಹಿರೇಮಠ	೧	೦	೦
೫೮	,,	ಶಿವರಾಪಾ ನಾಗಪ್ಪಾ ಪತ್ತಾರ	೧	೦	೦
೫೯	,,	ಪೀರಸಾಹೇಬ ಸಿಕ್ಕಲಗಾರ	೧	೦	೦
೬೦	,,	ಪರಸಪ್ಪಾ ಹೂವಣ್ಣಾ ಅಪರಾಜ	೧	೦	೦
೬೧	,,	ಮುರಲೀಧರ ಅನಂತ ಮರಾಠೆ	೧	೦	೦
ಒಂದು ರೂಪಾಯಿಗಿಂತ ಕಡಿಮೆ ಬಂದ ಒಟ್ಟು ಹಣ			೫೯	೮	೯
			೧೭೬	೦	೯

ಶಾಲಾ– ಐನಾಪೂರ
ಜಿಲ್ಲಾ– ಬೆಳಗಾಂವ
ತಾ॥ ೭ - ೧೦ - ೧೯೧೮

G. B. Kulkarni

Head Master Ainapur.

ಪತ್ರಗಳ ಸಾರಾಂಶ.

——:[೦]:——

೧. ಐನಾಪೂರ (ಜಿಲ್ಲಾ ಬೆಳಗಾವ) ಇಲ್ಲಿಯ ಶಾಳಾ ತಾಲೂಕ ಲೋಕಲ್‌ಬೋರ್ಡ ಮೆಂಬರರಾದ ಶ್ರೀ. ಚನ್ನವ್ವಾ ಬಸವಣ್ಣಪ್ಪಾ ಹಂದ ಇವರು ತಮ್ಮ ಶಾಲೆಗೆ ಬಂದು ಹುಡುಗರನ್ನು ಪರೀಕ್ಷಿಸಿ ೨ ರೂ. ಇನಾಮು ಕೊಟ್ಟ ರೆಂದು ತಿಳಿಸುತ್ತಾರೆ.

೨. ಹುನಗುಂದ (ಜಿಲ್ಲಾ-ವಿಜಾಪೂರ) ಇಲ್ಲಿಯ ಶಾಳಾಮಾಸ್ತರರು ತಮ್ಮ ಊರ ಶಾಲೆಯನ್ನು ಊರಜನರೇ ವರ್ಗಣಿಯಿಂದ ಕಟ್ಟಿಸಲಿಕ್ಕೆ ಪ್ರಾರಂಭಿಸಿದ್ದರು. ೩ ವರ್ಷಗಳಾದರೂ ಮುಗಿಯದೆ ಮಾಡಿಸಿದ ಕೆಲಸ ಸಹಿತ ಮಳೆಯಿಂದ ಕೆಡುವ ಪ್ರಸಂಗ ಬಂದಿತ್ತು. ಇದನ್ನು ನೋಡಿ ಶ್ರೀಮಂತ ಮಲ್ಲಪ್ಪಗೌಡಾ ಪರವತಗೌಡಾ ಸರನಾಡ ಗೌಡರ ಇವರು ಉದಾರ ಮನಸಿನಿಂದ ೪೦ ರೂಪಾಯಿ ಕೊಟ್ಟು ಶಾಲೆಯನ್ನು ಪೂರ್ಣ ಕಟ್ಟಿಸಿಕೊಟ್ಟರು, ಎಂದು ತಿಳಿಸುತ್ತಾರೆ. ತಮ್ಮ ಊರ ಶಾಲೆಯ ಮೇಲೆ ಪ್ರೀತಿ ತೋರಿಸಿ, ಈ ಪ್ರಕಾರ ಧನ ಸಹಾಯ ಮಾಡಿದ ಶ್ರೀ. ಸರನಾಡಗೌಡರ ಇವರನ್ನು ನಾವು ಪೂರ್ಣವಾಗಿ ಅಭಿನಂದಿಸುವೆವು.

೩. ಮಾಕನೂರ (ತಾಲೂಕ-ರಾಣೇಬೆನ್ನೂರ) ಇಲ್ಲಿಯ ಓರ್ವ ಶಿಕ್ಷಣ ಹಿತೇಚ್ಛುವಾದ ಚಿಕ್ಕೋ ರಾಮಚಂದ್ರ ಜೋಶಿ ಇವರು ಊರ ಸದ್ಗೃಹಸ್ಥರು ಶಾಲೆಯ ಉಪಕರಣಗಳ ಬಗ್ಗೆ ೬ ರೂ. ಫಂಡು ಕೂಡಿಸಿ ಕೊಟ್ಟಿರುವರೆಂದು ತಿಳಿಸುತ್ತಾರೆ.

೪. ಅಂಕೋಲಾ - ಇಲ್ಲಿಯ ಶಾಳಾಮಾಸ್ತರ ವೆ. ಪ. ಹೆಗಡೆ ಇವರು ಅಲ್ಲಿಯ ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಮೆಂಬರರಾದ ಮ. ರಾ. ದಾನಪ್ಪಾ ಪಾಂಡುರಂಗಪ್ಪಾ ರಾಮಪ್ಪೆ ಎಂಬವರು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚುವ ಬಗ್ಗೆ ೫ ರೂ. ಕೊಟ್ಟರೆಂದು ತಿಳಿಸುತ್ತಾರೆ.

೫. ಗಾಡಗೊಳಿ (ತಾಲೂಕ-ರೋಣ) -- ಇಲ್ಲಿಯ ಶಾಳಾ ಮಾಸ್ತರರು, ಮಿ. ಮಲ್ಲಪ್ಪಾ ಮಿನಪ್ಪಾ ನಾಯಿಕ ಇವರು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚುವ ಬಗ್ಗೆ ೧ ರೂ. ಕೊಟ್ಟರೆಂದು ತಿಳಿಸುತ್ತಾರೆ.

೬. ನಿಡಗುಂದಿ (ಜಲ್ಹಾ-ವಿಜಾಪೂರ) ಇಲ್ಲಿಯ ಗರ್ಲಸ್ಕೂಲ ಮಾಸ್ತರರು ಮಿ. ಸಿವಲಿಂಗಪ್ಪಾ ಅಲೂರ ಇವರು ತಮ್ಮ ಶಾಲೆಯ ವಿದ್ಯಾರ್ಥಿನಿಯರಿಗೆ ೮ ರೂಪಾಯಿ ಇನಾಮು ಕೊಟ್ಟರೆಂದು ತಿಳಿಸುತ್ತಾರೆ.

೭. ಕಾಖಂಡಿಕಿ (ಜಿಲ್ಹಾ-ವಿಜಾಪೂರ) ಇಲ್ಲಿಯ ಶಾಳಾ ಮಾಸ್ತರರು ತಮ್ಮ ಗ್ರಾಮದ ಶ್ರೀ. ಗು. ಭಾಗವ್ವಾ ಕೋಂ ಕಟ್ಟಿಪ್ಪಾ ಪಾಟೀಲಣಿ ಇವರು ಶಾಲೆಯ ಉಪಯೋಗಕ್ಕಾಗಿ ೧೫ ರೂ. ಗಳನ್ನ ಕೊಟ್ಟಿರುವರೆಂದು ತಿಳಿಸುತ್ತಾರೆ ಈ ಮಹನೀಯಳ ಉದಾರ ಗುಣವು ಸ್ತುತ್ಯವಾದದ್ದು.

೮. ಶಿವಣಗಿ (ಜಿಲ್ಹಾ-ವಿಜಾಪೂರ) ಇಲ್ಲಿಯ ಶಾಳಾಮಾಸ್ತರರು ತಮ್ಮ ಶಾಲೆಯಲ್ಲಿ ಮೆ. ೨ನೇ ಅಸಿ॥ ಡಿವೂಟಿ ಎಜ್ಯು॥ ಇನಸ್ಪೇಕ್ಟರ ಕೊಪ್ಪರ ಸಾಹೇಬರ ಅಧ್ಯಕ್ಷತೆಯ ಕೆಳಗೆ ಆದ ಸಮಾರಂಭದಲ್ಲಿ ಮಿ. ಚನವೀರಯ್ಯಾ ಮರಿ ೮ ರೂ ಮಿ. ಶಿವಲಿಂಗಪ್ಪಾ ಢಂಕರಿ ೮ ರೂ. ಮಿ. ಲಕ್ಷ್ಮವ್ವಾ ರಡ್ಡೇರ ೮ ರೂ. ಮಿ. ಬಾಲಪ್ಪಾ ಉಪ್ಪಾರ ೮ ರೂ. ಮಿ. ವಾಸುದೇವರಾವ ಕುಲಕರ್ಣಿ ೬ ರೂ. ಮಿ ಚನಬಸವಪ್ಪಾ ಜಿಜರಗಿ ೫ ರೂ. ಮಿ. ಬಸವಪ್ಪಾ ಮಾಶಾಳ ೫ ರೂ. ಮಿ ಮಲಕಪ್ಪಾ ಜಮಖಂಡಿ ೫ ರೂ. ಮಿ. ಚನವೀರಪ್ಪಾ ಹಂಚಿನಾಳ ೪ ರೂ. ಮಿ. ರಾಜೇಸಾಬ ಚಟ್ಟರಕಿ ೪ ರೂ. ಮಿ. ಮಖ್ತುಮ ಪಟೇಲ ಬಗಲಿ ೨ ರೂ. ಮಿ. ಹಸನಸಾಹೇಬ ಚಟ್ಟರಕಿ ೨ ರೂ. ಮಿ. ಮುತ್ತಣ್ಣಾ ಕರ್ನಾಳ ೨ ರೂ. ಮಿ. ಕಾಶೀಮಸಾಹೇಬ ಧವಳಗಿ ೨ ರೂ. ಮಿ. ಕೃಷ್ಣವ್ವಾ ಇಂಚೂರ ೨ ರೂ. ಮಿ. ವಿಠೋಬಾ ಸಾಳೇರ ೨ ರೂ. ಮಿ ಸುಲೇಮಾನಸಾಹೇಬ ಚಟ್ಟರಕಿ ೧ ರೂ. ಮಿ. ಖಾದಿರಸಾಹೇಬ ಮೊಖಾತಿ ೧ ರೂ. ಈ ಪ್ರಕಾರ ೬೫ ರೂ ನಾಯಿಗಳನ್ನು ಶಾಲೆಯ ಉಪಕರಣಕ್ಕಾಗಿ ಕೂಡಿಸಿ ಕೊಟ್ಟರೆಂದು ತಿಳಿಸುತ್ತಾರೆ. ತಮ್ಮ ಶಾಲೆಯ ಅಭ್ಯುದಯಕ್ಕಾಗಿ ಚಿಂತಿಸುವ ಮೇಲೆ ಒರೆದ ಸದ್ಗೃಹಸ್ಥರನ್ನು ನಾವು

ವಿದ್ಯಾಖಾತೆಯ ನೋಟೀಸುಗಳು.

-(೧)-

ಮೆ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್‌ಶನರವರ ಹುಕುಂ ಪ್ರಕಾರ ತಿಳಿಸುವದೇನಂದರೆ—ಮಿ. ರಂಗಪ್ಪಾ ಶಾಳಾಮಾಸ್ತರ ಮೊಳಕಾಲಮುರಿ ಡಿಸ್ಟ್ರಿಕ್ಟ ಚಿತ್ತಲದುರ್ಗ (ಮೈಸೂರ ಸಂಸ್ಥಾನ) ಇವರು ರಚಿಸಿದ ನಿರಾಲಸ್ಯಾಬೋಧಕವೆಂಬ ಪುಸ್ತಕವು ವ್ಹರ್ನ್ಯಾಕ್ಯೂಲರ ಬುಕ್‌ಕಮಿಟಿಯವರ ಬಹುಮತಾನುಸಾರವಾಗಿ ಡಿಪಾರ್ಟಮೆಂಟಲ್ ಉಪಯೋಗದ ದೆಶೆಯಿಂದ ಅಯೋಗ್ಯವೆಂದು ಠರಾಯಿಸಲ್ಪಟ್ಟಿರುವದು.

Office of the
Educational Inspector, S D.
23 April 1918.

K. S. Hungund

Inspector, S. D.

ನೋಟೀಸು.

(೨)

ಮೆ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕಶನರವರ ಹುಕುಂ ಪ್ರಕಾರ ತಿಳಿಸ್ವವದೇನಂದರೆ— ಮಿ. ರಾಮರಾವ ಅನವಟ್ಟಿ ಇವರು ಬರೆದ ಮಹಾಪುರುಷ ಚರಿತ್ರ ಭಾಗ ೧ (ಕೋಲಂಬಸ, ವಾಸಿಂಗಟನ್, ಸೆಕ್ಸಪೀಯರ, ನೆಪೋಲಿಯನ್ ಬೋನಾ ವಾರ್ಟ ಮತ್ತು ಸಾಕ್ರೆಟೀಸ) ಎಂಬ ಪುಸ್ತಕವು ವ್ಹರ್ನ್ಯಾಕ್ಯುಲರ ಬುಕ್‌ಕಮಿಟಿಯ ಮೆಂಬರರ ಬಹುಮತದ ಪ್ರಕಾರ ಡಿಪಾರ್ಟಮೆಂಟಲ್ ಉಪಯೋಗದ ಬಗ್ಗೆ ಅಯೋಗ್ಯವೆಂದು ನಿರ್ಣಯಿಸಲ್ಪಟ್ಟಿರುವದು.

Office of the
Educational Inspector S. D.
24 April 1918.

K. S. Hungund

Inspector, S. D.

ನೋಟೀಸು.

(೩)

ಮೆ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್‌ಶನರವರ ಪತ್ರನಂಬರ ೩೯೬೮ ೩೦-೯-೧೯೧೭ ನೆಯದರೊಳಗಿನ ಅವತರಣ "ಮಿಡಲ್ ಹಾಗು ಹಾಯಸ್ಕೂಲ ಸ್ಕಾಲರಶಿಪ್ಪ ಪರೀಕೆಗಳು ಇನ್ನು ಮುಂದೆ ಜನವರಿ ತಿಂಗಳಲ್ಲಿ ಆಗತಕ್ಕದ್ದು."

"ಮಿಡಲ್ ಸ್ಕೂಲ ಸ್ಕಾಲರಶಿಪ್ಪದ ನಿಯಮಗಳಲ್ಲಿ ಮೇಲೆ ಕಾಣಿಸಿದ ಹೆಚ್ಚು ಕಡಿಮೆಯು ಸರಕಾರದ ಮಂಜೂರಿಯ ಬಗ್ಗೆ ತೀರ್ಮ ಕಳಿಸಲ್ಪಡುವದು."

ಟ್ರೇನಿಂಗಕಾಲೇಜ ಫಾರಮೆನ್
ಧಾರವಾಡ
೨೮-೧೦-೧೯೧೮.

R. S. Kulkarni

ಪ್ರಿನ್ಸಿಪಾಲ.

ನೋಟೀಸು.

(೪)

ಮೆ. ಡಾಯರೇಕ್ಟರ ಆಫ್, ಪಬ್ಲಿಕ್, ಇನಸ್ಟ್ರಕ್ಶನರವರ ಹುಕುಂ ಪ್ರಕಾರ ತಿಳಿಸುವದೇನಂದರೆ:—ಮಿ. ಕೆ. ಜಿ. ಗೆಜ್ಜಿಕೃತ ಪ್ರೊ. ಗೋಖಲೆ ಇವರ ಕನ್ನಡ ಅಂಕಗಣಿತ ಭಾಗ ೧. ಈ ಪುಸ್ತಕದ ಬೆಲೆಯು ೪ ಆಣೆ ಇದ್ದದ್ದು ಹೆಚ್ಚಿಸಿ ೫ ಆಣೆ ಮಾಡಲ್ಪಟ್ಟಿರುವದು.

Office of the
Educational Inspector, S. D.
Dharwar, 22nd August, 1918

H. K. Gokhale.
for Educational
Inspector, S. D.

ನೋಟೀಸು.

(೫)

೧೯೧೯ನೇ ಇಸವಿಯ ಅಗಷ್ಟ ೩೧ನೇ ತಾರೀಖಿನ ದಿವಸ ತಯಾರಿಸಿದ ಲಾಯ್ಬ್ರರಿ ಮತ್ತು ಇನಾಮಿನ ಪುಸ್ತಕಗಳ ಪಟ್ಟಿಯ ೩೫ನೇ ಪುಟದಲ್ಲಿ ಅನುಕ್ರಮ ನಂಬರ ೧೦೭೪ರಲ್ಲಿ ಮುದ್ರಿಸಿದ ಮಿ. ರಾ. ಹ. ದೇಶಪಾಂಡೆ ಕೃತ ಚರಿತ್ರಸಂಗ್ರಹವೆಂಬ ಪುಸ್ತಕದ ಬೆಲೆಯು ೮ ಆಣೆ ಇರದೆ ೧ ರೂ. ಇರುತ್ತದೆ.

Office of the
Educational Inspector S. D.
27-8-1918.

H. K. Gokhale
for Educational
Inspector S. D.

ನೋಟೀಸು.

(೬)

ಮೆ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನರವರ ಪತ್ರ ನಂಬರ $\frac{೭೯೬೬}{೩೦-೯-೧೮}$ ನೆಯದರೊಳಗಿನ ಅವತರಣ "ವ್ಹರ್ನ್ಯಾಕುಲರ ಸ್ಕೂಲ ಫಾಯನಲ್ ಪರೀಕ್ಷೆಯು ಇನ್ನು ಮುಂದೆ ಪ್ರತಿವರುಷ ಎಪ್ರಿಲ ತಿಂಗಳ ಮೊದಲನೇ ವಾರದಲ್ಲಿ ಆಗತಕ್ಕದ್ದು. "

೧೯೧೯ನೇ ಇಸವಿಯ ಎಪ್ರಿಲ ತಿಂಗಳಲ್ಲಿ ಆಗತಕ್ಕ ಸಪ್ಲಿಮೆಂಟರಿ ವ್ಹ. ಫಾ. ಪರೀಕ್ಷೆಗೆ ಕೂಡಲಿಕ್ಕೆ ಪ್ರತಿವರುಷದಂತೆ ನಿಯಮಗಳಿಗನುಸಾರವಾಗಿ ಎಲ್ಲ ಉಮೇದವಾರರೂ ಪಾತ್ರರಿರುವರು. "

30-10 1918.

H. K. GOKHALE.
For Educational Inspector.

ನೋಟೀಸು.

(೭)

ಮೆ. ಡಾಯರೇಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನರವರ ಮಂಜೂರಿ ಹುಕುಂ ಪ್ರಕಾರ ತಿಳಿಸುವದೇನಂದರೆ:— ಮಿ. ಕೆ. ಬಿ. ಗೆಜ್ಜಿಕೃತ ಪ್ರೊ. ಗೋಖಲೆ ಇವರ ಕನ್ನಡ ಅಂಕಗಣಿತ ಭಾಗ ೨ ನಾಲ್ಕನೆಯ ಆವೃತ್ತಿ ಇದರ ಬೆಲೆಯು ಕೆಳಗೆ ಬರೆದಂತೆ ಹೆಚ್ಚಿಸಲ್ಪಟ್ಟಿರುವದು.

ಮೊದಲಿನ ಬೆಲೆಯು ೦-೮-೦ ಹೆಚ್ಚಿಸಿದ ಬೆಲೆಯು ೦-೧೦-೦

Office of the Educational Inspector S. D.
24 April 1918

K. S. HUNGUND,
Educational Inspector, S. D.

ನೋಟೀಸು.

(೮)

ಮೆ. ಡಿರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನರವರ ಹುಕುಂ ಪ್ರಕಾರ ತಿಳಿಸುವದೇನಂದರೆ:— ಮಿ ಎಮ್. ಟಿ. ವಲ್ಲಭ ಅಯ್ಯಂಗಾರ ಇವರು ರಚಿಸಿದ ವೇಶ್ವೆ ನಾರಾಯಣರಾವ ಎಂಬ ಪುಸ್ತಕವು ಡಿಪ್ಹಿಜನಲ್ ವ್ಹರ್ನ್ಯಾಕ್ಯುಲರ ಬುಕ್ ಕಮಿಟಿಯ ಬಹುಮತಾಭಿಪ್ರಾಯದ ಪ್ರಕಾರ ಶಾಲೆಗಳ ಉಪಯೋಗಕ್ಕೆ ಅಯೋಗ್ಯವೆಂದು ನಿರ್ಣಯಿಸಲ್ಪಟ್ಟಿರುತ್ತದೆ.

Office of the Educational Inspector S. D.
Dharwar 3 October 1918.

H. K. GOKHALE,
for Educational Inspcetor, S. D.

ನೋಟೀಸು.

(೯)

ಮಿ. ಪಿ. ಎಸ್ ಚಂದಾವರಕರ ಇವರು ಕನ್ನಡದಲ್ಲಿ ಭಾಷಾಂತರ ಮಾಡಿದ ಹೊಸ ಭೂಮಿತಿ ಭಾಗ ೧. ಬೆಲೆ ೭ ಆಣೆ. ಈ ಪುಸ್ತಕವು ಕನ್ನಡ ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿಯೂ, ಹೊಸ ಭೂಮಿತಿ ಭಾಗ ೨. ಬೆಲೆ ೧೪ ಆಣೆ. ಈ ಪುಸ್ತಕವು ವ್ಹರ್ನ್ಯಾಕ್ಯುಲರ ಟ್ರೇನಿಂಗ ಕಾಲೇಜುಗಳ ಉಪಯೋಗಕ್ಕಾಗಿಯೂ ಮಂಜೂರ ಮಾಡಲ್ಪಟ್ಟಿರುವದು.

Office of the Director of Public Instruction. Poona
7th November 1918.

K. S. Vakil
for Director of Public Instruction.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ

ತ್ರೈವಾಸಿಕ ಪತ್ರ.

QUARTERLY

OF THE

District Sanitary Association

DHARWAR.

ಸಂಪುಟ ೭ } ಆಕಟಂಬರ ೧೯೧೮. } ನಂ[illegible] ೧.

Printed at the "BELGAUM-SAMACHAR" Press
by H. B. Samant, Belgaum
and published by- Rao Bahadur G. R. Balekundri,
Hon. Secretary District Sanitary Association, Dl

1918.

ಸ್ಥಾಪಕರು ಮತ್ತು ಪ್ರಸ್ತುತ ಅಧ್ಯಕ್ಷರು
ಉತ್ಪಾದಕರೂ ಮೊದಲನೇ ಅಧ್ಯಕ್ಷರಾದ

ಮೆ॥ ಇ. ಮೆಕಾವಲೆ, ಸಾಹೇಬ ಬಹಾದ್ದೂರ್,
ಐ.ಸಿ.ಎಸ್.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ ೬ ನೇ ವಾರ್ಷಿಕ ರಿಪೋರ್ಟಿನ ಸಾರಾಂಶ

(೧೯೩೭-೧೯೩೮.)

ಅಧ್ಯಕ್ಷರೇ ಮ ಸಭ್ಯ ಗ್ರಹಸ್ಥರೇ —

ಸನ್ ೧೯೩೭ನೇ ಇಸವಿಯ ಜುಲೈ ತಿಂಗಳ ೩೧ನೇ ತಾರೀಖಿಗೆ ಮುಗಿಯುವ ವರ್ಷದ ಅವಧಿಯಲ್ಲಿ ಈ ಅಸೋಸಿಯೇಶನದಿಂದಾದ ಕೆಲಸಗಳ ರಿಪೋರ್ಟನ್ನು ತಮ್ಮ ಎದುರಿಗಿಡಲು ನಮಗೆ ಆನಂದವಾಗುತ್ತದೆ.

೨. ಅಸೋಸಿಯೇಶನದ ಮುಖ್ಯ ಉದ್ದೇಶಗಳೆಂದರೆ:- ಸಾಮಾನ್ಯವಾಗಿ ಆರೋಗ್ಯ ವಿಷಯಕವಾದ ಸಂಗತಿಗಳ ಸಂಬಂಧದಿಂದ ಸುಶಿಕ್ಷಿತ ಜನಪದವನ್ನು ನಿರ್ಮಾಣ ಮಾಡುವದು: ಸ್ವಚ್ಛತೆ ಮತ್ತು ಆರೋಗ್ಯ ಶಾಸ್ತ್ರಗಳ ಸಂಬಂಧವಾದ ಜ್ಞಾನವನ್ನು ವಿಶೇಷತಃ ರೋಗಪ್ರತಿಬಂಧಕ ಉಪಾಯಗಳ ತಿಳವಳಿಕೆಯನ್ನು ಎಲ್ಲ ವರ್ಗದ ಜನಸಮೂಹದಲ್ಲಿ ವ್ಯಾಖ್ಯಾನಗಳ ಮುಖಾಂತರವಾಗಿಯೂ ಪ್ರತ್ಯಕ್ಷ ಪ್ರಯೋಗಗಳಿಂದಲೂ ಬಿಂಬಿಸುವದು; ಆರೋಗ್ಯ ಶಾಸ್ತ್ರ ವಿಷಯಕವಾದ ಜ್ಞಾನಾಭಿವೃದ್ಧಿಯಾಗುವಂತೆ, ಅಥವಾ ಅಸೋಸಿಯೇಶನದ ಕಾರ್ಯ ನಿರ್ವಹಣೆಯಾಗುವಂತೆ ಮನಮುಟ್ಟಿ ಪ್ರಯತ್ನ ಮಾಡುವವರಿಗೆ ಇನಾಮುಗಳನ್ನೂ ಪದಕಗಳನ್ನೂ, ಸರ್ಟಿಫಿಕೇಟುಗಳನ್ನೂ, ಕೊಟ್ಟು ಆರೋಗ್ಯ ಶಾಸ್ತ್ರವನ್ನು ಅಭಿವೃದ್ಧಿಗೊಳಿಸುವದು ಮತ್ತು ಈ ವಿಷಯಕವಾದ ಲೋಕಾಭಿರುಚಿಯನ್ನು ವರ್ಧಮಾನಗೊಳಿಸುವದು: ಮತ್ತು ಹಳ್ಳಿಗಳಲ್ಲಿ ಇದೇ ವಿಷಯಕವಾಗಿ ಚರ್ಚಿಸುವ ಮಾತು ಕತೆ, ಸುಲಭ ವ್ಯಾಖ್ಯಾನ ಮುಂತಾದವುಗಳ ವ್ಯವಸ್ಥೆಯನ್ನು ಮಾಡುವದು.

೩ ಮುಂಬಯಿಯ ಸ್ಯಾನಿಟರಿ ಅಸೋಸಿಯೇಶನದ ಪದ್ಧತಿಯನ್ನನುಸರಿಸಿ ಇಲಾಖೆಯ ಇತರ ಭಾಗಗಳಲ್ಲಿ ಸ್ಥಾಪಿತವಾದ ಇಂಥ ಅಸೋಸಿಯೇಶನ್ನಗಳಲ್ಲಿ ಇದೇ ಮೊದಲನೇದಾಗಿದೆ. ಮತ್ತು ಆಗ ಈ ಜಿಲ್ಲೆಯ ಕಲೆಕ್ಟರರಾಗಿದ್ದ ಮೆ॥ ಇ. ಮೆಕಾನಕೀ ಸಾಹೇಬರವರು ಇದರ ಉತ್ಪತ್ತಿಗೆ ಕಾರಣವಾಗಿದ್ದಾರೆ. ಸನ್ ೧೯೩೭ನೇ ಇಸವಿ ಜುಲೈ ೧೯ನೇ ತಾರೀಖಿನ ದಿನದ ಇದರ ನೋಂದಣಿಯಾಗಿದೆ

೪. ಅಸೋಸಿಯೇಶನದ ಕೆಲಸಗಳು ೩೦ ಜನ ಮೆಂಬರರ ಒಂದು ಸೆಂಟ್ರಲ್ ಕಮೀಟಿಯಿಂದ ಜರಗಿಸಲ್ಪಡುತ್ತವೆ. ಈ ಕಮೀಟಿಯಲ್ಲಿ ೧೫ ಜನ ಎಕ್ಸಅಫಿಸಿಯೋ ಮೆಂಬರರು ಇರುತ್ತಾರೆ. ಅಸೋಸಿಯೇಶನದ ಎಲ್ಲ ಮೆಂಬರರು ಕೂಡಿ ಉಳಿದ ೧೫ ಜನರನ್ನು ಆರಿಸುತ್ತಾರೆ. ಸದ್ಯದ ಕಮೀಟಿಯಲ್ಲಿ ಸರಕಾರೀ ಅಧಿಕಾರಿಗಳೂ ಅಧಿಕಾರಿಗಳಲ್ಲದವರೂ ಮೆಂಬರರಾಗಿದ್ದು, ಇದರಲ್ಲಿ ಎಲ್ಲ ಜಾತಿಯ ಮತ್ತು ಉದ್ಯೋಗದ ಜನರ ಸಮಾವೇಶವಾಗಿದೆ. ಈ ಬಿಲ್ಡಿಂಗ್ ಕಟ್ಟಿಕ್ಟರರು ಇದಕ್ಕೆ ಎಕ್ಸಅಫಿಸಿಯೋ ಅಧ್ಯಕ್ಷರು ಮತ್ತು ಸಿಮ್ಲಿಲ್ ಸರ್ಜನರು ಸೆಂಟ್ರಲ್ ಕಮೀಟಿಯ ಎಕ್ಸಅಫಿಸಿಯೋ ಚೇರಮನ್ನರು ಆಗಿರುತ್ತಾರೆ ಅಸೋಸಿಯೇಶನದ ನಿಯಮಗಳಿಗೂ ಉಪನಿಯಮಗಳಿಗೂ ಅನುಸಾರವಾಗಿ ಕಮೀಟಿಯ ಕಾಲಕ್ಕೆ ಕೆಲಸಗಳು ಜರಗುತ್ತವೆ. ಮತ್ತು ವಿಷಯುಗಳ ಕೊನೆಯ ನಿರ್ಣಯವು ಕಮೀಟಿಯ ಬಹು ಮತಾನುಸಾರವಾಗಿ ಮಾಡಲ್ಪಡುತ್ತದೆ ಅಸೋಸಿಯೇಶನದ ಲೆಟ್ಟರ್ ಪತ್ರಗಳನ್ನು ಮೂರು ತಿಂಗಳಿಗೊಂದು ಬಾರಿ ಪರಿಶೋಧಿಸಿ. ಅದಕ್ಕೆ ಸಲ್ಲತಕ್ಕ ಮತ್ತು ಸಂದಿದ ಎಲ್ಲ ಹಣವು ಲೆಟ್ಟರ್ ಪತ್ರಗಳಲ್ಲಿ ಯೋಗ್ಯ ರೀತಿಯಿಂದ ನಿರ್ದಿಷ್ಟವಾಗಿರುವದೆಂಬದನ್ನು ನೋಡುವದಕ್ಕೆ ಇಬ್ಬರು ಮೆಂಬರರು ಅಡಿಟರರಾಗಿ ನೇಮಿಸಲ್ಪಡುತ್ತಾರೆ. ಪೋಸ್ಟ್ ಆಫೀಸ ಸೇವ್ಹಿಂಗ್ಸ ಬ್ಯಾಂಕಿನಲ್ಲಿ ಅಸೋಸಿಯೇಶನದ ಖಜೀನದಾರನ ಹೆಸರಿನಿಂದ ಖಾತೆ ಇಟ್ಟಿದ್ದು, ಹೆಚ್ಚಿನ ರಕಮು ಅಲ್ಲಿ ಠೇವು ಇಡಲ್ಪಡುವದು. ಮುಂಬಯಿ ಸ್ಯಾನಿಟರೀ ಅಸೋಸಿಯೇಶನದಿಂದ ದೊರೆಯಬಹುದಾದ ಸಹಾಯ ಮತ್ತು ಉಪಯುಕ್ತ ಸೂಚನೆಗಳ ಲಾಭವು ನಮ್ಮ ಅಸೋಸಿಯೇಶನಕ್ಕೆ ಆಗಬೇಕೆಂಬ ಉದ್ದೇಶದಿಂದ ಅಸೋಸಿಯೇಶನ್ನದ ಸನ್ಮಾನಿತ ಕಾರ್ಯದರ್ಶಿಗಳು ಅದರ ಲಾಯಿಫ ಮೆಂಬರರಾಗಿರುತ್ತಾರೆ. ಸನ್ ೧೯೬೦ ನೇ ಇಸವಿಯ, ೨೧ ನೇ ಆಕ್ಟಿನ ಪ್ರಕಾರ ಅಸೋಸಿಯೇಶನವು ರಜಿಸ್ಟರ ಮಾಡಲ್ಪಟ್ಟಿದೆ "ಪ್ಯಾಮ್‌ಫ್ಲೆಟ್ ಕಮೀಟಿ" ಎಂಬ ಒಂದು ಸಬ್ಬ ಕಮೀಟಿಯು ನೇಮಿಸಲ್ಪಟ್ಟಿದೆ. ಅಸೋಸಿಯೇಶನ್ನದಿಂದ ಲೋಕೋಪಯೋಗಕ್ಕಾಗಿ ಪ್ರಸಿದ್ಧವಾಗುವ ಹಸ್ತಪತ್ರಿಕೆಗಳನ್ನು ಪರಿಶೋಧಿಸುವದು ಈ ಕಮೀಟಿಯು ಕೆಲಸವಾಗಿದೆ

೫. ಸೆಕ್ರೆಟರಿಗಳಿಗೆ ಸಾಹಾಯ್ಯಕವಾಗಿ ಒಬ್ಬ ಕಾರಕೂನನ್ನೂ, ಒಬ್ಬ ತಿಜಾರಿಯನ್ನೂ ಹೀಗೆ ಇಬ್ಬರು ನೇಮಿಸಲ್ಪಟ್ಟಿರುತ್ತಾರೆ.

೬. ಈ ಜಿಲ್ಲೆಯು ರೂಢ ಭಾಷೆಯಾದ ಕನ್ನಡದಲ್ಲಿ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಸಿದ್ಧಮಾಡುವ ವ್ಯವಸ್ಥೆಯಾಗಿದೆ. ಇದರಲ್ಲಿ ಬೇರೆ ಬೇರೆ ರೋಗಗಳ ಮೇಲೆಯೂ ಆರೋಗ್ಯ ಶಾಸ್ತ್ರದ ಮೇಲೆಯೂ ಹಳ್ಳಿಗಾಡ ಜನರಿಗೆ ಉಪಯೋಗವಾಗುವಂಥ ಬೇರೆ ಬೇರೆ ವಿಷಯಗಳ ಮೇಲೆಯೂ ವೈದ್ಯವಿದ್ಯಾ ಪರಿಣತರಿಂದಲೂ ಜೇರೆ ಜನರಿಂದಲೂ ಬರೆಯಲ್ಪಟ್ಟ ಚಿಕ್ಕ ಚಿಕ್ಕ ಲೇಖನಗಳು ಪ್ರಕಟಿಸಲ್ಪಡುತ್ತವೆ. ವರ್ಷಕ್ಕೆ ೮ ಆಣೆಯಿಂದ ೫ ರೂಪಾಯಿ ಗಳವರೆಗೆ ವರ್ಗಣಿಯನ್ನು ಕೊಟ್ಟು ಅಸೋಸಿಯೇಶನದ ಮೆಂಬರರಾಗುವ ಪ್ರತಿಯೊಬ್ಬರಿಗೆ ಈ ತ್ರೈಮಾಸಿಕದ ಒಂದು ಪ್ರತಿಯು ಪುಕ್ಕಟೆಯಾಗಿ ಕಳಿಸಲ್ಪ ಡುತ್ತದೆ. ಜಿಲ್ಲೆಯೊಳಗಿನ ಎಲ್ಲ ಹಳ್ಳಿಯ ಶಾಲೆಗಳಿಗೂ ಇದರ ಪ್ರತಿಗಳು ಪುಕ್ಕಟೆಯಾಗಿ ಕಳಿಸಲ್ಪಡುತ್ತವೆ. ಆ ಶಾಲೆಗಳ ಮಾಸ್ತರರು, ಮೆ॥ ಪೆಪ್ಪೂಪೆ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರವರು ದಯವಾಡಿ ಅಪ್ಪಣೆ ಕೊಟ್ಟ ಮೇರಿಗೆ, ತಮ್ಮ ಶಾಲೆಯ ಹುಡುಗರಿಗೂ ಮತ್ತು ಸಂಜೆಯಮುಂದೆ ಶಾಲೆಯಲ್ಲಿ ಅಥವಾ ಗುಡಿಯಲ್ಲಿ ಅಥವಾ ಚಾವಡಿಯಲ್ಲಿ ಸ್ವಾಭಾವಿಕವಾಗಿ ಕಲೆತು ತಮ್ಮ ವಿರಮಕಾಲವನ್ನು ಕಳೆಯ ಬಯಸುವ ಅಶಿಕ್ಷಿತ ಜನರಿಗೂ ಈ ತ್ರೈಮಾಸಿಕ ದೊಳಗಿನ ಲೇಖನಗಳನ್ನು ಓದಿ ತಿಳಿಸಿ ಹೇಳಬೇಕಾಗುತ್ತದೆ. ಸ್ಥಾನಿಕ ಅಭಿಮಾನ ಭಾವನೆಯನ್ನು ಜಾಗೃತಪಡಿಸಿ ಅದು ಸ್ಥಿರವಾಗಿ ನಿಲ್ಲುವಂತೆ ಮಾಡಬೇಕೆಂದು ಐದಾರು ಮೈಲುಗಳ ಪರಿಘದಲ್ಲಿರುವ ಹಳ್ಳಿಗಳ ಒಂದು ಗ್ರೂಪಿನಂತೆ ಇಡೀ ಜಿಲ್ಲೆಯು ವಿಭಾಗಿಸಲ್ಪಟ್ಟಿದ್ದು ಪ್ರತಿ ಒಂದು ಗ್ರೂಪಿಗೆ ಒಬ್ಬ ಸನ್ಮಾನಿತ ಲೋಕಲ್ ಸೆಕ್ರೇಟರಿಯು ನೇಮಿಸಲ್ಪಟ್ಟಿದ್ದಾನೆ. ಅವನ ಕರ್ತವ್ಯಗಳು ನಿಬಂಧನೆಗಳಿಂದ ನಿಷ್ಕರ್ಷಿಸಲ್ಪಟ್ಟವೆ. ತಮ್ಮ ಹಳ್ಳಿಯ ಆರೋಗ್ಯ ವಿಷಯಕವಾದ ಕೊರತೆ ಗಳನ್ನು ತಿಳಿದು ನೋಡಿ ಅವುಗಳ ನಿವಾರಣೆಗೆ ಅವಶ್ಯಕವಾದ ಉಪಾಯಗಳನ್ನು ಕೈಕೊಳ್ಳುವ ಕುರಿತು ಆ ಹಳ್ಳಿಯಲ್ಲಿಯ ೫ ಕ್ಕಿಂತ ಕಡಿಮೆ ಇಲ್ಲದಷ್ಟು ಜನರ ನೊಂದು ಶಾಖಾ ಕಮೀಟಿಯನ್ನು ಅಲ್ಲಿಯವರು ಮಾಡಿಕೊಂಡು ತಮ್ಮ ಹಳ್ಳಿಯು ಯಾವ ಗ್ರೂಪಿನೊಳಗಿರುವದೋ ಆ ಗ್ರೂಪಿನ ಲೋಕಲ್ ಸೆಕ್ರೇಟರಿಯು ವಿಚಾರ ದಿಂದ ತಮ್ಮ ಕೆಲಸಗಳನ್ನು ನಾಗಿಸಬೇಕೆಂಬ ಏರ್ಪಾಡುಮಾಡಿದೆ. ಈ ಗ್ರಾಮ ಕಮೀಟಿಗೆ ಅಲ್ಲಿಯ ಗೌಡನು ಜೇರಮನ್‌ನಾಗಿರಬಕ್ಕದ್ದು. ತನ್ನ ಗ್ರೂಪಿ ನೊಳಗಿನ ಪ್ರತಿ ಒಂದು ಹಳ್ಳಿಯ ಕೊಂಕುಕೂರತೆಗಳು ಮತ್ತು ಅಲ್ಲಿ ನಡೆಯುವ ಕೆಸಲವು ಪ್ರತಿಯೊಬ್ಬ ಲೋಕಲ್ ಸೆಕ್ರೇಟರಿಗೆ ತಿಳಿಯಬೇಕೆಂದು ಅವನು ತನ

ಪ್ರತಿಯೊಂದು ಗ್ರಾಮ ಕಮಿಟಿಯೊಳಗಿಂದ ಒಬ್ಬೊಬ್ಬ ಮೆಂಬರನನ್ನು ಆರಿಸಿ ಕೊಡುವ ತನ್ನ ಗ್ರೂಪಿನ ಕಮಿಟಿಯೊಂದನ್ನು ಮಾಡಿಕೊಳ್ಳುತ್ತಾನೆ. ಎಲ್ಲ ಲೋಕಲ್ ಸೆಕ್ರೆಟರಿಗಳಿಗೆ ಮಾರ್ಗದರ್ಶಕವಾಗುವಂತೆ ಅವರೊಳಗಿನೊಬ್ಬನು ಆ ತಾಲೂಕಿನ ಅಥವಾ ಮಹಾಲಿನ ಚೀಫಮನ್‌ನಾಗಿ ನೇಮಿಸಲ್ಪಡುತ್ತಾನೆ. ಇವನ ಕರ್ತವ್ಯಗಳು ನಿಬಂಧನೆಗಳಲ್ಲಿ ಗೊತ್ತು ಮಾಡಲ್ಪಟ್ಟಿರುತ್ತವೆ. ತಾಲೂಕಿನ ಅಥವಾ ಮಹಾಲಿನ ಚೀಫಮನ್‌ನು ತನ್ನ ಕಾರ್ಯಕ್ಷೇತ್ರದಲ್ಲಿ ನಡೆದ ಯಾವತ್ತೂ ಸಂಗತಿಗಳ ರಿಪೋರ್ಟನ್ನು ಪ್ರತಿ ಮೂರು ತಿಂಗಳಿಗೆ ವ್ಯವಸ್ಥಾಪಕ ಸಭೆಯವರಿಗೆ ಒಪ್ಪಿಸುತ್ತಾನೆ ಮತ್ತು ವ್ಯವಸ್ಥಾಪಕ ಸಭೆಯವರು ಇಡೀ ಬಿಲ್ಡಿಯಲ್ಲಿ ಆ ತೈ್ರಮಾಸಿಕದಲ್ಲಾದ ಕೆಲಸದ ರಿಪೋರ್ಟನ್ನು ಅಸೋಸಿಯೇಶನ್ನಿನ ತೈ್ರಮಾಸಿಕದಲ್ಲಿ ಜಮಾ ಖರ್ಚಿನ ಪತ್ರಿಕೆಯೊಂದಿಗೆ ಪ್ರಸಿದ್ಧ ಮಾಡುತ್ತಾರೆ. ಇದರ ಹೊರತು ಸರಕಾರದವರು ಅಸೋಸಿಯೇಶನ್ನಿನ ಪ್ರಾರ್ಥನೆಯನ್ನು ಮನ್ನಿಸಿ ಒಬ್ಬ ಅಸಿಸ್ಟಂಟ ಸರ್ಜನನನ್ನು ಅಸೋಸಿಯೇಶನಿನ ಕೆಲಸಕ್ಕಾಗಿ ಅನುಗೃಹ ಪೂರ್ವಕ ಕೊಟ್ಟಿರುತ್ತಾರೆ. ಈ ಅಸಿಸ್ಟಂಟ ಸರ್ಜನನ ಸಂಬಳವನ್ನು ಸರಕಾರದವರೇ ಕೊಡುತ್ತಾರೆ. ಇವರ ಡೆಪ್ಯುಟೇಶನ್ನಿನ ಖರಾವನ್ನೆವನ್ನೂ ಪ್ರವಾಸ ಭತ್ತೆಯನ್ನೂ ಮಾತ್ರ ಅಸೋಸಿಯೇಶನವು ಕೊಡುತ್ತದೆ. ಇವರು ಇಡೀ ಬಿಲ್ಡಿಯ ಎಲ್ಲ ಭಾಗಗಳಲ್ಲಿ ಸಂಚಾರ ಮಾಡಿ ಜನರಲ್ಲಿ ಆರೋಗ್ಯವಿಷಯಕವಾದ ಜ್ಞಾನಾಭಿವೃದ್ಧಿಯಾಗುವಂತೆ ವ್ಯಾಖ್ಯಾನಗಳನ್ನು ಕೊಡುತ್ತಾರೆ. ಮತ್ತು ಈ ಅವರ ವ್ಯಾಖ್ಯಾನಗಳು ಸಪ್ರಯೋಗವಾಗಿ ಜನರಿಗೆ ಹೆಚ್ಚು ಪ್ರಿಯವಾಗಬೇಕೆಂಬ ಉದ್ದೇಶದಿಂದ ಎರಡು ಮ್ಯಾಜಿಕ ಲ್ಯಾಂಟರ್ನಗಳೂ ಬೇರೆ ಬೇರೆ ರೋಗಗಳ ಮೂಲವನ್ನು ತೋರಿಸುವ ಹಾಗು ಸಾಮಾನ್ಯ ಜ್ಞಾನವನ್ನುಂಟುಮಾಡಿಕೊಟ್ಟು ಮನೋರಂಜನವಾಗುವಂತೆ ಮಾಡುವ ಸುಮಾರು ೨೦೦ ಪ್ರಕಾರದ ಚಿತ್ರಗಳೂ ಅಸೋಸಿಯೇಶನ್ನಿನಿಂದ ಇವರಿಗೆ ಕೊಡಲ್ಪಟ್ಟಿವೆ. ಅಶಿಕ್ಷಿತರಾದ ಹಳ್ಳಿಗಾಡ ಜನರ ಮನೋರಂಜನವಾಗಿ ಅವರು ತಮ್ಮ ವ್ಯಾಖ್ಯಾನಗಳನ್ನು ಕೇಳುವದಕ್ಕೆ ಕಲೆಯುವಂತೆ ಮಾಡಬೇಕೆಂದು ಇವರಿಗೆ ಒಂದು ಗ್ರಾಮೊಫೋನವನ್ನು ಕೊಂಡುಕೊಟ್ಟಿದೆ. ಇವರ ವ್ಯಾಖ್ಯಾನದ ಕಾಲಕ್ಕೆ ಮ್ಯಾಜಿಕ ಲ್ಯಾಂಟರ್ನದ ಪ್ರಯೋಗವನ್ನು ಮಾಡಿಸುವದಕ್ಕೆ ಒಬ್ಬ ಆಪರೇಟರನನ್ನೂ ಒಬ್ಬ ಸಿಪಾಯಿಯನ್ನೂ ಈ ಅಸಿಸ್ಟಂಟ ಸರ್ಜನ್ನರ ಸಹಾಯಕ್ಕಾಗಿ ಕೊಟ್ಟಿದೆ. ವೈದ್ಯವಿದ್ಯಾಫೀನಿಗಳಲ್ಲದ ಗೃಹಸ್ಥರೂ, ಲೋಕಲ್ ಸೆಕ್ರೆಟರಿಗಳೂ ಮುಂತಾದವರು ಕೂಡ

ಹಲಕೆಲವು ವ್ಯಾಖ್ಯಾನಗಳನ್ನು ಅಲ್ಲಲ್ಲಿ ಆಗಾಗ್ಗೆ ಕೊಡುತ್ತಾರೆ. ಮಲೇರಿಯಾ ಎಂಬ ಸೀತಜ್ವರಕ್ಕೆ ಕ್ವಿನಾಯಿನದ ಚಿಕಿತ್ಸೆ, ಮಾರಿಕಾ ಜೀನಿಗೆ ಪರಮ್ಯಾಂಗನೇಟ ಆಫ ಪೋಟ್ಯಾಶದ ವಡೆಗಳ ತಾತ್ಕಾಲಿಕ ಉಪಯೋಗ, ನೀರು ಸ್ವಚ್ಛ ಮಾಡುವದಕ್ಕೆ ಅದರ ಉಪಯೋಗ, ಇವುಗಳ ಸಂಬಂಧದಿಂದ ಜನರಲ್ಲಿ ವಿಶ್ವಾಸ ಉಂಟಾಗುವಂತೆ ಮಾಡುವದಕ್ಕೆಂದು ಮಧ್ಯವರ್ತಿಗಳಾದ ಹಳ್ಳಿಗಳಲ್ಲಿ ಕೆಲವು ಲೋಕಲ್ ಸೆಕ್ರೆಟರಿಗಳ ಹತ್ತರ ಹಾಗೂ ಬೇರೆ ಸದ್ಗೃಹಸ್ಥರ ಹತ್ತರ ವಡೆಗಳನ್ನೂ, ಪುಡಿಯನ್ನೂ ಇಟ್ಟು ಶಕ್ಯವಾದ ಮಟ್ಟಿಗೆ ಪ್ರಯತ್ನ ಮಾಡಿದೆ. ಕ್ವಿನಾಯಿನದ ವಡೆಗಳು ಮೂಲ ಬೆಲೆಗೆ ಮಾರಲ್ಪಡುತ್ತವೆ ಮತ್ತು ಪರಮ್ಯಾಂಗನೇಟ ಆಫ ಪೋಟ್ಯಾಶದ ವಡೆಗಳೂ ಪುಡಿಗಳೂ ಬೆಲೆಯಿಲ್ಲದೆ ಕೊಡಲ್ಪಡುವವು.

೭ ಅಸೋಸಿಯೇಶನದ ಕಾರ್ಯನಿರ್ವಾಹ ಪದ್ಧತಿಯು ಹೀಗೆ ಇರುತ್ತದೆ. ಇನ್ನು ಅಸೋಸಿಯೇಶನದ ಸ್ಥಿತಿಯು ಹ್ಯಾಗೆ ಇರುವದೆಂದರೆ:- ಇಂದಿಗೆ ಅಸೋಸಿಯೇಶನದಲ್ಲಿ ೨೩ ಜನ ಲಾಯಿಫ ಮೆಂಬರರು ೩೬೦ ಜನ ಆರ್ಡಿನರೀ ಮೆಂಬರರು ಇರುತ್ತಾರೆ. ಹೋದ ವರ್ಷ ಇಷ್ಟೇ ಜನ ಲಾಯಿಫ್ ಮೆಂಬರರೂ ಗಿಲಳಳ ಜನ ಆರ್ಡಿನರೀ ಮೆಂಬರರು ಇದ್ದರು. ಅಂದರೆ ಈ ವರ್ಷದಲ್ಲಿ ಅಸೋಸಿಯೇಶನಕ್ಕೆ ೧೩೫ ಜನ ಮೆಂಬರರು ಹೆಚ್ಚಿಗೆ ದೊರೆತಂತಾಯಿತು. ಈ ಸಾರೆಯ ಒಟ್ಟು ಉತ್ಪನ್ನವು ೩೩೬೧ ರುಪಾಯಿ, ಹೋದ ಸಾರೆ ೨೦೫೮ ರುಪಾಯಿ, ಈ ಸಾರೆಯ ಖರ್ಚು ೨೪೭೦ ರುಪಾಯಿ, ಈ ಅಂಕಿಗಳ ಮೇಲಿಂದ ನೋಡಿದರೆ ಹೋದ ವರ್ಷಕ್ಕಿಂತ ಈ ಸಾರೆ ೧೩೦೩ ರುಪಾಯಿ ಉತ್ಪನ್ನವು ಹೆಚ್ಚಾಗಿ ವೆಚ್ಚವು ಮಾತ್ರ ೧೪೬೫ ರುಪಾಯಿಗಳಿಂದ ಕಡಿಮೆಯಾಗಿರುವದೆಂದು ಕಂಡುಬರುವದು. ಹೀಗಾಗಲಿಕ್ಕೆ ಕಾರಣವೇನಂದರೆ ಹೋದ ವರ್ಷ ಛಾಪನಾವಳಿ ಅಡಚಣಿ ಮೂಲಕ ತೈಮಾಸಿಕಗಳನ್ನು ಹೊರಡಿಸುವದು ಆಗಲಿಲ್ಲ. ಹೋದ ವರ್ಷದ ಅಖೈರದಲ್ಲಿ ಹೊರಡಿಸಿದ ತೈಮಾಸಿಕದ ಜಾಬಸು ಖರ್ಚು ಮಾತ್ರ ೧೯೧೧-೧೯ ನೇ ಸಾಲಿನ ಲೆಖ್ಖದಲ್ಲಿ ಹಿಡಿಯಲ್ಪಟ್ಟಿದೆ. ಈ ಸಾರೆಯ ವರ್ಷದ ಕೊನೆಯ ಶಿಲ್ಕು ೫೯೩೫ ರುಪಾಯಿ, ಅಂದರೆ ಹೋದ ಸಾರೆಯ ೫೦೩೭ ರುಪಾಯಿಗಳ ಕೊನೆಯ ಶಿಲ್ಕಿಗಿಂತ ೯೯೮ ರುಪಾಯಿಗಳಿಂದ ಹೆಚ್ಚಾಗಿರುವದು. ಈ ನಗದು ಶಿಲ್ಕಿನ ಹೊರತು ಅಸೋಸಿಯೇಶನದ ಆಸ್ತಿಯು ಬೆಲೆಯು ೧೫೦೬ ರುಪಾಯಿಯಾಗಿದೆ. ಇದರಿಂದ ಅಸೋಸಿಯೇಶನದ ಒಟ್ಟು ಆಸ್ತಿಯು ೭೪೩೫ ಇದ್ದು ಹೋದ ವರ್ಷಕ್ಕಿಂತ ೯೬೮ ರುಪಾಯಿಗಳಿಂದ ಬೆಳೆದಿರುವದೆಂಬದು ಸ್ಪಷ್ಟವಾಗುತ್ತದೆ. ಜಮಾ ಖರ್ಚಿನ ತಪಶೀಲು

ತೋರಿಸುವ ವಿಸ್ತೃತವಾದ ಪಟ್ಟಿಯು "ಅ" ಪರಿಸಿಷ್ಟದಲ್ಲಿಯೂ ಮುಂದಿ ವರ್ಷದ ಜಮಾಖರ್ಚಿನ ಅಂದಾಜು ಪತ್ರಿಕೆಯು "ಬ" ಪರಿಸಿಷ್ಟದಲ್ಲಿಯು ಕೊನೆಗೆ ಜೋಡಿಸಲ್ಪಟ್ಟಿವೆ. ವಟ್ಟಿನ ಮೇಲೆ ಮೆಂಬರರ ಸಂಖ್ಯೆಯು ವಿಚಾರದಿ ದಲೂ ನಾಂಪತ್ತಿಕ ಪರಿಸ್ಥಿತಿಯು ವಿಚಾರದಿಂದಲೂ ಅಸೋಸಿಯೇಶನವು ಸವ ಧಾನಕರವಾಗಿ ಪ್ರಗತಿಯನ್ನು ಹೊಂದಿರುವದೆಂದು ಸಂತೋಷ ಪೂರ್ವಕವಾ ಇಲ್ಲಿ ಉಲ್ಲೇಖಿಸ ಬಹುದಾಗಿದೆ.

೮ ವ್ಯವಸ್ಥಾಪಕ ಸಭೆಯು ನಾಲ್ಕು ಸಾರೆ ಕೂಡಿ ಒಟ್ಟಿಗೆ ೫೩ ವಿಷಯು ಗಳು ಚರ್ಚಿಸಲ್ಪಟ್ಟವು ಸಭೆಗೆ ಬಂದಿದ್ದ ಮೆಂಬರ ಜನರ ಸರಾಸರಿ ಸಂಖ್ಯೆಯು ೭ ಇತ್ತು.

೯ ಜಿಲ್ಲೆಯಲ್ಲಿ ಪ್ಲೇಗ ಜೀನೆಯು ಪ್ರಾರಂಭವಾದಾಗ್ಯೂ ಅದು ಅಷ್ಟು ಜೋರಿನಿಂದ ಹಬ್ಬಲಿಲ್ಲ ಜನರು ಪ್ಲೇಗಿನ ಮೈಲೀ ತೆಗೆಸಿಕೊಂಬೋದು, ಊರು ಬಿಡೋದು ಅನುಕರಿಸಿದ್ದರಿಂದ ಅದು ವಿಶೇಷ ಹಬ್ಬಲಿಲ್ಲ. ಕಾಲರಾ ಜೀನೆಯು ಮಾತ್ರ ವಿಶೇಷ ಜೋರಿನಿಂದ ಇಡೀ ಜಿಲ್ಲೆಯ ತುಂಬಾ ಹಬ್ಬಿತ್ತು. ಆದರೆ "ಪರಮ್ಯಾಂಗನೇಟ ಆಫ ಪೊಟ್ಯಾಶ"ದಿಂದ ನೀರು ಶುದ್ಧ ಮಾಡಿದ್ದರಿಂದಲೂ ಹಾಗೂ ಗುಳಿಗೆಗಳನ್ನು ಕೊಟ್ಟದ್ದರಿಂದಲೂ ಅದರ ಬೆಳವಣಿಗೆಗೆ ಅಸ್ಪದಸಿಗ ಲಿಲ್ಲ. ಮಲೇರಿಯಾ ಎಂಬ ಜ್ವರವು ಮಲ್ಲಾಡ ತಾಲೂಕಗಳಲ್ಲಿ ನಾಲಾಬಾದಿಯುಂತೆ ಶುರುವು ಇತ್ತು. ಈ ಬಗ್ಗೆ ೪೭೦೦೦ ಕ್ವಿನಾಯಿನ ಗುಳಿಗೆಗಳನ್ನು ಅಸೋಸಿಯೇಶ ನವು ಪುಕಟ ಹಂಚಿತು ಹಾಗೂ ೪೫೦೦೦ ಗುಳಿಗೆಗಳನ್ನು ಮೂಲಕಿಮ್ಮತ್ತಿಗೆ ಮಾರಿತು ಇದಲ್ಲದೆ ಈ ಜೀನೆಯು ವಿಶೇಷ ಇದ್ದ ಹಳ್ಳಿಗಳಿ ಸಬ್ಬ ಅಸಿಸ್ಟಂಟ ಸರ್ಜನರು ಹೋಗಿ, ಅಲ್ಲಿಯ ನಾಲೆಯು ಹುಡುಗರಿಗೆ ಕ್ವಿನಾಯಿನ ಗುಳ ಗೆಗಳನ್ನು ಕೊಡುತ್ತಿದ್ದರು. ಗದಗ ತಾಲೂಕ ಲಕ್ಕುಂಡಿ ಗ್ರಾಮದಲ್ಲಿ ಈ ಜ್ವರವು ವಿಶೇಷ ಜೋರಿನಿಂದ ಹಬ್ಬಿದಾಗ್ಯೆ ಈ ಅಸೋಸಿಯೇಶನ್ನವು ಪುಕಟ ಕೊಟ್ಟ ಕ್ವಿನಾಯಿನ ಗುಳಿಗೆಗಳಿಂದ ಗದಗ ತಾಲೂಕ ಡಿ ಸ್ಯ್ಯಾ.ಅ. ಚೇರಮನ್ನರಾದ ಮಿ. ಮಹಾದೇವರಾವ ಕುಲಕರ್ಣಿ ಮತ್ತು ಮಿ. ಬಸಲಿಂಗಪ್ಪಾ ಕುಲಕರ್ಣಿ ನಾ॥ ಲಕ್ಕುಂಡಿ ಇವರು ಮೆ. ಡೆವೊಟೆ ಸ್ಯಾನಿಟರಿ ಕಮಿಶನರ ಸಾಹೇಬ ಬಾ॥ ರವರ ಅನುಮತಿಯ ಪ್ರಕಾರಾ ಒಳೇ ಸಹನತ್ತಿನಿಂದ ಓಡಾಡಿ ಈ ಜೀನ

ಮುಂದ ಸೀಡಿತರಾದ ಅಲ್ಲಿಯು ಜನರನ್ನು ಉಳಿಸಿಕೊಂಡರು, ಆಗ್ಯೆ ಗದಗಿನಲ್ಲಿರುವ ಡಾಕ್ಟರರು ಸಹ ಒಳ್ಳೇ ಮೆಹನತು ಮಾಡಿದರು. ಅಲ್ಲಿ ಈಗ ಒಂದು ಸ್ಯಾನಿಟರಿ ಕಮೀಟಿ ಸ್ಥಾಪನೆಯಾಗಿದೆ.

೧೦ ನಾರಿನ ಜೀನೆ:— ರಾಣೆಬೆನ್ನೂರ ಕೋಡ ತಾಲೂಕಗಳಲ್ಲಿ ಈ ಜೀನೆಯು ಹಬ್ಬಿತ್ತು. ಇದಕ್ಕೆ ಏನು ಮಾಡಜೀಕೆಂಬೋಬಗ್ಯೆ ಇನ್ನೂ ಮುಂಬಯಿ ಡಾಕ್ಟರರ ಕೂಡ ಚರ್ಚಾ ನಪೆಡದೆ. ನಮ್ಮ ಅಸೋಸಿಯೇಶನದ ಡಾಕ್ಟರರಾದ ಮಿ. ಕಾಮತ ಇವರು ಮಲ್ಲಾಡ ತಾಲೂಕಗಳಿಗೆ ಹೋಗಿ ಅಲ್ಲಿ ಈ ಜೀನೆ ಹ್ಯಾಗೆ ಅಗುತ್ತದೆ ಎಂಬೋದನ್ನು ಜನರಿಗೆ ಮ್ಯಾಜಿಕ್‌ಲ್ಯಾಂಟರ್ನದ ಪ್ರಯೋಗಗಳಿಂದ ತೋರಿಸಿ ತಿಳಿಸಿ ಹೇಳಿ, ಇದು ಅಗದಂತೆ ಜನರು ಏನು ಉಪಾಯ ಮಾಡಜೀಕೆಂಬದನ್ನು ತಿಳಿಸಿಹೇಳಿದರು. ಇವರು ಒಟ್ಟು ೪೩ ಹಳ್ಳಿಗಳಲ್ಲಿ ೫೩ ಪ್ರಯೋಗಗಳನ್ನು ಮಾಡಿ ತೋರಿಸಿದರು

೧೧ ಶಾಲಾ ಖಾತೆಯು ಅಸಿಸ್ಟಂಟ ಡೆಪುಟಿಯವರಾದ ರಾ. ರಾ. ಅಂಕಲಗಿ, ಪರ್ವತೀಕರ, ಮಸೋಳಿ ವ ದೇಶಪಾಂಡೆ ಇವರು ತಾವು ಹೋದಲ್ಲಿ ಜನರಿಗೆ ಉಪದೇಶಪರ ವ್ಯಾಖ್ಯಾನಗಳನ್ನು ಆರೋಗ್ಯತೆಯು ವಿಷಯವಾಗಿ ಕೊಟ್ಟಿದ್ದರಿಂದ ಅವರ ಆಭಾರವನ್ನು ಈ ಸಂಸ್ಥೆಯು ಆದರಪೂರ್ವಕವಾಗಿ ನುನ್ನಿಸುತ್ತದೆ. ಇದೇ ಪ್ರಕಾರ ಫಿರ್ತಿಯ ಮೇಲೆ ಇರತಕ್ಕ ಕಾಮದಾರ ಜನರು ಹಾಗೂ ಲೋಕಲ್ ಸೆಕ್ರೆಟರಿಗಳು ದರಸಾಲಾಖಾದಿಯಂತೆ ವ್ಯಾಖ್ಯಾನ ಕೊಟ್ಟರು. ಡಾಕ್ಟರ ಜನರು ವ್ಯಾಖ್ಯಾನ ಕೊಟ್ಟರೆ ಎಷ್ಟು ಉಪಯೋಗವಾಗುತ್ತದೆ, ಅಷ್ಟು ಜನರ ವ್ಯಾಖ್ಯಾನಗಳಿಂದ ನೀಗುವದಿಲ್ಲ, ಹಾಗೂ ಈಗ ಇರೋ ಒಬ್ಬ ಡಾಕ್ಟರನಕಡಿಯಿಂದ ಇಡೀ ಜಿಲ್ಲೆಯ ಕೆಲಸ ನೀಗುವಂತೆ ಇಲ್ಲ. ಹೀಗೆ ನಮ್ಮ ನಜರಿಗೆ ಬಂದಿದ್ದು ಒಬ್ಬಿಬ್ಬ ಹೆಚ್ಚಿನ ಡಾಕ್ಟರರನ್ನು ನೇಮಿಸಜೀಕಂದರೆ ಲಫಾಯಿ ನಿಮಿತ್ತ ಶಿಗುವಂತೆ ಇಲ್ಲ. ಕಾರಣ ತಾಲೂಕಿನ ದವಾಖಾನೆಗಳಲ್ಲಿ ಇರುವ ಡಾಕ್ಟರ ಜನರು ತಮ್ಮ ಕೆಲಸದ ಬಗ್ಯೆ ಹಳ್ಳಿಗಳ ಮೇಲೆ ಹೋದಾಗ್ಯೆ ಈ ಕೆಲಸ ಮಾಡುವಿರೋ ಹ್ಯಾಗೆ ಅಂತಾ ಕೇಳಲು ಅವರುಅದಕ್ಕೆ ಕಬೂಲ ಮಾಡಿರುತ್ತಾರೆ. ಅವರಿಗೆ ಒಂದು ಮ್ಯಾಜಿಕ ಲ್ಯಾಂಟರ್ನ ಕೊಂಡು ಕೊಡ್ಮಜೀಕಾಗುವದು. ಈ ಬಗ್ಯೆ ತಾಲೂಕಿನಲ್ಲಿ ವರ್ಗಣೆಯಾಗಿ ಈಗ ಕೋಡ ತಾಲೂಕಿನವರು ಒಂದು ಮ್ಯಾಜಿಕ ಲ್ಯಾಂಟರ್ನ ಖರೀದಿ ಮಾಡಿರುತ್ತಾರೆ. ರೋಣ

ಪ ನವಲಗುಂದ ತಾಲೂಕಿನವರು ಬಂದೊಂದು ಕೊಳ್ಳಪೆಯೆಂದು ಒಪ್ಪಿಕೊಂಡು ದ್ದಾರೆ. ಈ ಪ್ರಕಾರ ಮಾಡಲಕ್ಕೆ ಇತರ ತಾಲೂಕಿನವರು ಅನುಕರಣ ಮಾಡುವರೆಂದು ನಂಬುತ್ತೇವೆ.

೧೨. ಈ ಅಸೋಸಿಯೇಶನದವರು ಈ ವರ್ಷ ಇನ್ನೊಂದು ಮಹತ್ವದ ಕೆಲಸ ಮಾಡಿರುತ್ತಾರೆ. ಅದೇನಂದರೆ:— ದರಬಂದು ತಾಲೂಕಿನ ಸ್ಥಳದಲ್ಲಿ ಒಂದು ವರ್ಗ ತೆಗೆದು (ಫಸ್ಟ್ ಏಡ ಕ್ಲಾಸ) ಅಲ್ಲೀ ಹಳ್ಳಿಹಳ್ಳಿಗಳಲ್ಲಿ ಜನರಿಗೆ ಯಾವದೇ ಅಕಸ್ಮಿತ ಅಪಘಾತವಾಗಲು ಆ ಆ ಪ್ರಸಂಗಕ್ಕೆ ಅನುಸರಿಸಿ ತಾತ್ಕಾಲಿಕ ಉಪಚಾರ ಮಾಡುವದನ್ನು ಕಲಿಸುವ ಬಗ್ಗೆ ವ್ಯವಸ್ಥೆ ಮಾಡಿದೆ. ಇಂಥಾ ವರ್ಗ ಜಾರಿಯಿಂದ ನಡೆದಿರುವದಿಲ್ಲ ಆದರೂ ಈ ವರ್ಷ ಇಡೀ ಬೆಳ್ಳಿಯಲ್ಲಿ ೧೫೦ ಜನರು ಕಲಿತರು. ಈ ವರ್ಷ ಪರೀಕ್ಷೆ ತೆಗೆದುಕೊಂಬೋ ಬಗ್ಗೆ ಸಪ್ಟಂಬರ ತಿಂಗಳಲ್ಲಿ ಧಾರವಾಡಕ್ಕೆ ಕರಿಸುವ ವಿಚಾರ ನಡೆದಿತ್ತು. ಆದರೆ ಆ ಪ್ರಕಾರದ ಶಿಕ್ಷಣ ಪೂರಾ ಮುಗಿಯುವ ವರೆಗೆ ತಹಕೂಪ ಮಾಡಬೇಕಾಯಿತು. ಮುಂದೆ ಆಗತಕ್ಕ ಇಂಥ ಪರೀಕ್ಷೆಯಲ್ಲಿ ಪಾಸಾಗುವ ಪ್ರತಿ ಒಬ್ಬ ವಿದ್ಯಾರ್ಥಿ ಬಗ್ಗೆ ಈ ವರ್ಗವನ್ನು ನಡೆಸಿದಂಥ ಪ್ರತಿಬಬ್ಬ ಡಾಕ್ಟರನಿಗೆ ೫ ರೂಪಾಯಿಯಿಂತೆ ಇನಾಮು ಕೊಡುವದನ್ನು ಗೊತ್ತು ಮಾಡಿರುತ್ತದೆ. ಈ ತರಹದ ಶಿಕ್ಷಣದಿಂದ ಬಹಳ ಉಪಯೋಗವಾಗುತ್ತದೆಂಬೋ ವಿಷಯದಲ್ಲಿ ಯುನುನೂರ ಜಾತ್ರಿಗೆ ನವಲಗುಂದ ತಾಲೂಕ ದವಾಖಾನೆಯ ಡಾ. ಸಲಗರ ಇವರು ಮಿ॥ ಶಿದ್ಧಾಂತಿ ತಾಲೂಕಾ ಜೀರಮನ್ನ ನವಲಗುಂದ ಇವರ ಸಹಾಯದಿಂದ ತಮ್ಮಲ್ಲಿ ಇಂಥ ವರ್ಗದಲ್ಲಿ ಕಲಿತ ಹುಡುಗರನ್ನು ತೆಗೆದುಕೊಂಡು ಹೋಗಿ ಅಲ್ಲಿಯ ಜನರಿಗೆ ಯಾವತರದ ಸಾಹಾಯವನ್ನು ಮಾಡಿದರು ಎಂಬದನ್ನು ಯುನುನೂರ ಮ್ಯುನಿಸಿ ಪಾಲಿಟಿ ಪ್ರೈಸಿಡೆಂಟರು ತಮ್ಮ ರಿಪೋರ್ಟಿನಲ್ಲಿ ವ್ಯಕ್ತಪಡಿಸಿದ್ದಾರೆ.

೧೩. ಅಸೋಸಿಯೇಶನವು ಸ್ಥಾಪಿತವಾದಾಗಿನಿಂದ ಸರಕಾರದವರು ಅದಕ್ಕೆ ಆಗಿಂದಾಗ್ಗೆ ಕೊಡುತ್ತ ಬಂದಿರುವ ಉತ್ತೇಜನಕ್ಕೆ ಮಿಗಿಲಾಗಿಯೂ ವಿಶೇಷವಾದ ಸಹಾಯವನ್ನು ಮಾಡಿದ್ದಕ್ಕಾಗಿ ಅದು ಅವರಿಗೆ ಸದಾ ಕೃತಜ್ಞವಾಗಿರುವದು. ಒಬ್ಬ ಅಸಿಸ್ಟಂಟ ಸರ್ಜನನನ್ನು ಅಸೋಸಿಯೇಶನ್ನಿನ ಕೆಲಸಕ್ಕೆ ಕೊಟ್ಟು ಈಗಿನ ಯುದ್ಧದ ಕಾಲದಲ್ಲಿ ಡಾಕ್ಟರ ಜನರ ಕೊರತೆಯು ಬಹಳವಾಗಿ ಇದ್ದಾಗ್ಯೂ ಅವರನ್ನು ಇಲ್ಲಿಯೇ ಅಸೋಸಿಯೇಶನದ ಕೆಲಸಕ್ಕೆ ಬಿಟ್ಟಿದ್ದರಿಂದ

ಜನರ ಕಲ್ಯಾಣವನ್ನೂ ಹಿತವನ್ನೂ ಪ್ರತ್ಯಕ್ಷವಾಗಿ ಸಂಬುಧಿಸಿರುವ ಸಂಗತಿಗಳಲ್ಲಿ ಸರಕಾರದವರು ಹ್ಯಾಗೆ ಮನಮುಟ್ಟಿ ಸಾಹಾಯ ಮಾಡುತ್ತಾರೆಂಬದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗೆ ಅಸಿಸ್ಟಂಟ ಸರ್ಜನರ ಸಂಬಳದ ಸ್ವರೂಪದಿಂದ ಅಸೋಸಿಯೇಶನಕ್ಕೆ ಸರಕಾರದವರಿಂದ ಪ್ರತಿ ವರ್ಷ ೧೫೦೦ ರುಪಾಯಿಗಳ ಗ್ರಾಂಟು ದೊರೆಯುತ್ತದೆ. ಬೆಳ್ಳೆಯಲ್ಲಿರುವ ಅನೇಕ ದವಾಖಾನೆಗಳ ಸಬ್ಬ ಅಸಿಸ್ಟಂಟ ಸರ್ಜನರನ್ನು ಇನಾಕ್ಯುಲೇಶನ್ನಿನ ಕೆಲಸಕ್ಕೆ ಕರೆಯ ಬಹುದೆಂದು ಪ್ಲೇಗಿನ ಮೂಲಕವಾಗಿ ಮುಚ್ಚಲ್ಪಟ್ಟಿದ್ದ ಸಾಲೆಗಳ ಶಿಕ್ಷಕರನ್ನು ಇನಾಕ್ಯುಲೇಶನ ಮುಂತಾದವುಗಳಿಂದಾಗುವ ಲಾಭಗಳನ್ನು ಜನರಿಗೆ ತಿಳಿಸಿ ಹೇಳುವದಕ್ಕೆ ಕರೆಯಬಹುದೆಂದು ಸರಕಾರದವರು ಮಂಜೂರಿಯನ್ನು ಕೊಟ್ಟಿದ್ದಾರೆ. ಪರಪ್ಯಾಂಗನೇಟ ಆಫ್ ಪೊಟ್ಯಾಶದ ಗುಳಿಗೆಗಳನ್ನು ಬೆಲೆಯಿಲ್ಲದೆ ಜನರಿಗೆ ಹಂಚುವದಕ್ಕಾಗಿಯೂ ಸರಕಾರದವರು ಅನುಗ್ರಹಪೂರ್ವಕವಾಗಿ ಕೊಟ್ಟಿರುತ್ತಾರೆ.

೧೪. ಅಸೋಸಿಯೇಶನದ ಎಕ್ಸ. ಆಫಿಸಿಯೋ ಅಧ್ಯಕ್ಷರು ಮೆ॥ ಕತೆಷ್ಟರ ಸಾಹೇಬ ಬಾಹಾದ್ದೂರ ಹಾಗೂ ಸೆಂಟ್ರಲ್ ಕಮೀಟಿ ಎಕ್ಸ ಆಫಿಸಿಯೋ ಚೇರಮನ ಮೆ॥ ಸಿವ್ಹಿಲ್ ಸರ್ಜನ ಸಾಹೇಬ ಬಾ॥ ಇವರಿಗೆ ಅವರವರ ಕೆಲಸಗಳು ಬಹಳ ಇದ್ದಾಗ್ಯೂ ಕೂಡಾ ನಮ್ಮ ಸಂಸ್ಥೆಯ ಕೆಲಸಕ್ಕೆ ಅವರು ಬಹಳೇ ಮದತ ಆದ್ದರಿಂದ ಅವರ ಅಭಿನಂದನವನ್ನು ಮನ್ನಿಸಲಿಕ್ಕೆ ಈ ಸಂಸ್ಥೆಯು ಅಸಮರ್ಥವದೆ. ಇದರಂತೆ ಶಾಲಾಖಾತೆಯ ವತಿಯಿಂದ ಮಿ॥ ಪೆರೂರ ಡಿ॥ ಎ॥ ಇನಸ್ಪೆಕ್ಟರ ಇವರು ತಮ್ಮ ಅಸಿಸ್ಟಂಟರ ವ ಶಾಲಾ ಮಾಸ್ತರರ ಸಹಾಯದಿಂದ ನಮ್ಮ ಸಂಸ್ಥೆಯ ಬಗ್ಗೆ ಆ ಖಾತೆಯಿಂದ ಏನು ಮದತು ಆದೀತು ಎಂಬುವದನ್ನು ಪ್ರತ್ಯಕ್ಷ ಮಾಡಿತೋರಿಸಿರುತ್ತಾರೆ.

೧೫: ಬೇರೆ ಬೇರೆ ಪ್ರಾಂತಗಳ ಸ್ಯಾನಿಟರಿ ಕಮಿಶನರರ ಸಭೆಯು ಕೂಡಿದಾಗ್ಯೆ ಅವರು ಪ್ರತಿ ಒಂದು ಪ್ರಾಂತದಲ್ಲಿ ಅಲ್ಲಲ್ಲಿಯ ಸಾರ್ವಜನಿಕ ಆರೋಗ್ಯ ರಕ್ಷಣೆಗ್ಹಾಗಿ ಒಂದು ಸ್ವತಂತ್ರ ಖಾತೆ ನಿರ್ಮಾಣ ಮಾಡಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಶಿಫಾರಸ ಮಾಡಿರುತ್ತಾರೆ. ಇದನ್ನು ಈ ಸರಕಾರದ ವಿದ್ಯಾ ಖಾತೆಯ ಸೆಕ್ರೆಟರಿಗಳಾದ ಮಿ॥ ಶ್ಯಾರ್ಪ ಸಾಹೇಬರವರು, ಎಲ್ಲ ಪ್ರಾಂತಿಕ ಸರಕಾರದವರ ನಜರಿಗೆ ತಂದು ಕೊಟ್ಟು ಆರೋಗ್ಯ ಖಾತೆಯನ್ನು ಬೇಗ ಸ್ಥಾಪಿಸಬೇಕೆಂದು ಸೂಚನೆ ಮಾಡಿರುತ್ತಾರೆ. ಇದೇ ಸಂಧಿಯನ್ನು ಸಾಧಿಸಿ ನಮ್ಮ ಆನ

ರೇಬಲ್, ರಾವಬಾಹಾದ್ದೂರ ವೆಂಕಣ ನಾಯಿಕ ರಾಜೆಬಿನ್ನೂರ ಇವರು ಜೂಲೈ ೨೯ ನೇ ತಾರೀಪಿನ ದಿವಸ ಕೂಡಿದ ಕಾಯಿದೆ ಕೌನ್ಸಿಲ್‌ದಲ್ಲಿ ಭಾಷಣ ಮಾಡಿ ನಮ್ಮ ಸರಕಾರದ ಲಕ್ಷವನ್ನು ಎಳದಿದ್ದಾರೆ. '' ಹಳ್ಳಿ ಹಳ್ಳಿ '' ಆರೋಗ್ಯ ರಕ್ಷಣೆ ವಿಷಯವಾಗಿ ಮೊದಲೇ ಸಂಸ್ಥೆಯನ್ನು ಸ್ಥಾಪಿಸಿ ಪ್ರಯತ್ನ ನಡೆಸಿದ ನಮ್ಮ ಈ ಜಿಲ್ಲೆಯಲ್ಲಿ ಮೊದಲು ' ಆರೋಗ್ಯ ಟಾಕೆಯ ' ಸ್ವತಂತ್ರ ಪ್ರಯೋಗವನ್ನು ಮಾಡಿ ನೋಡಬೇಕೆಂದು ಸರಕಾರಕ್ಕೆ ರಾವಬಾಹದ್ದೂರವರು ಅತ್ಯಂತ ಆಗ್ರಹ ಪೂರ್ವಕ ಸೂಚನೆ ಮಾಡಿದ್ದಾರೆ. ರಾವಬಾಹದ್ದೂರವರ ಈ ಸೂಚನೆಗೆ ನಾವೆಲ್ಲರೂ ಅಂತಃಕರಣಪೂರ್ವಕ ಒಪ್ಪಿಗೆಯನ್ನು ಕೊಡಬೇಕೆಂದು ಬೇರೆ ಹೇಳುವ ಕಾರಣವಿಲ್ಲ.

೧೬. ಈ ಸಂಸ್ಥೆಯು ಸ್ಥಾಪನವಾಗಿ ೬ ವರ್ಷಗಳಂತೂ ಮುಗಿದವು. ಒಂದೇ ವರ್ಷದ ಅಂಕಿಗಳಿಂದ ಇಂಥ ಅಸೋಸಿಯೇಶನದ ಕೆಲಸದ ಮಹತ್ವವು ತಿಳಿಯುವದು ಅಸಾಧ್ಯವಿದೆ. ಮತ್ತು ಈ ವರ್ಷದ ಅವಧಿಯಲ್ಲಿ ಇದರಿಂದ ಲೋಕೋಪಯೋಗ ಕೆಲಸವು ಎಷ್ಟರಮಟ್ಟಿಗೆ ಆಗಿರುತ್ತದೆಎಂಬದನ್ನು ತಿಳಿದು ನೋಡುವದು ಅಸಾಧ್ಯವಾದಿರ್ಯೂ ಕೂಡಾ ಈ ಸಂಸ್ಥೆಯು ತಾನು ಮಾಡತಕ್ಕ ಪ್ರಯತ್ನಗಳನ್ನು ಅಂತಃಕರಣಪೂರ್ವಕ ಮಾಡಿದಿಯೋ ಇಲ್ಲವೋ ಎಂಬದನ್ನು ನೋಡುವದಕ್ಕೆ ನಾಕದೆ. ಇದರ ಮಧ್ಯದಲ್ಲಿ ಲಷ್ಠಾಯಿ ಸುರುವಾದರೂ ಅದು ತನ್ನ ಸಂಖ್ಯಾ ಬಲವನ್ನೂ ಸಾಂಪತ್ತಿಕ ಸಾಮರ್ಥ್ಯವನ್ನೂ ಕಾಯ್ದುಕೊಂಡಿರುವದಷ್ಟೇ ಅಲ್ಲದೆ ಪ್ರತಿವರ್ಷ ಇವುಗಳನ್ನು ಹೆಚ್ಚಿಸುತ್ತಾ ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸುತ್ತ ನಡೆದರೆ. ಮೊದಲನೇ ವರ್ಷ ೪೯ ಜನ ಲೋಕಲ್ ಸೆಕ್ರೇಟರಿಗಳನ್ನು ನೇಮಿಸಿಕೊಂಡು ಕೆಲಸ ಮಾಡಿತು. ಈ ವರ್ಷ ೨೦೦ ಸಾರ್ವಜನಿಕ ಹಿತಬುದ್ಧಿಯುಳ್ಳ ಗೃಹಸ್ಥರು ಈ ಲೋಕೋಪಕಾರಕ ಕೆಲಸದಲ್ಲಿ ಸನ್ಮಾನಿತ ಲೋಕಲ್ ಸೆಕ್ರೇಟರಿಗಳಾಗಿ ಕೆಲಸ ಮಾಡುತ್ತಿರುವರು. ಇವರುಗಳಲ್ಲಿ ಎಷ್ಟೋ ಜನರು ತಾಲೂಕ ಮತ್ತು ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳ ಹಾಗು ಮ್ಯುನಿಸಿಪಾಲಿಟಿಗಳ ಮೆಂಬರರೂ, ಆನರರೀ ಮ್ಯಾಜಿಸ್ಟ್ರೇಟರೂ, ಪೆನಶನ್ ಪಡೆದ ಅಧಿಕಾರಿಗಳೂ, ಪದವೀಧರರೂ, ಮತ್ತು ಘನವಂತರಾದ ಬೇರೆ ಸದ್ಗೃಹಸ್ಥರೂ ಇರುವರು. ಈ ಅಸೋಸಿಯೇಶನವು ಸಂಪಾದಿಸಿದ ಲೋಕಪ್ರೀತಿಯನ್ನು ಅದರ ಉಪಯುಕ್ತತೆಯನ್ನೂ, ತೋರಿಸಿಕೊಡುವದಕ್ಕೆ ಇದೊಂದೇಸಂಗತಿಯು ನಾಕಾಗಬಹುದೆಂದು ತೋರುತ್ತದೆ. ಈ ಅವಧಿಯಲ್ಲಿ ಪ್ಲೇಗ ಪ್ರತಿಬಂಧಕ ಉಪಾಯ

ವಾದ ಇನಾಕ್ಯುಲೇಶನ್‌ವನ್ನು ಮತ್ತು ಕ್ವಿನಾಯಿನದ ಚಿಕಿತ್ಸೆಯನ್ನು ಇದು ಲೋಕಪ್ರಿಯ ಮಾಡಿತು. ಸಾರ್ವಜನಿಕದವರಲ್ಲಿ ಆರೋಗ್ಯದ ಅಭಿರುಚಿಯು ಹುಟ್ಟುವಂತೆಯೂ ಅಸೋಸಿಯೇಶನ್ನವು ದಿನದಿನಕ್ಕೆ ಅಭಿವೃದ್ಧಿಯನ್ನು ಹೊಂದಿ ಅದರ ಉಪಯುಕ್ತತೆಯು ಹೆಚ್ಚಾಗಬೇಕೆಂಬ ಆಕಾಂಕ್ಷೆಯು ನೆಲೆಗೊಳ್ಳುವಂತೆಯೂ ಅವರಲ್ಲಿ ಜ್ಞಾನಪ್ರಸಾರವನ್ನು ಮಾಡುವದೇ ಅಸೋಸಿಯೇಶನದ ಮೂಲ ಉದ್ದೇಶವಾಗಿದೆ. ಈ ಧ್ಯೇಯವು ತಕ್ಕಮಟ್ಟಿಗಾದರೂ ಸಾಧ್ಯವಾಗಿರುವದು ಅಸೋಸಿಯೇಶನದ ಕಾರ್ಯ ಕರ್ತೃತ್ವದ ಅಪ್ರತ್ಯಕ್ಷವಲದ ಪರಂತು ಅತ್ಯಂತ ಮಹತ್ವದ್ದಾದ ಪರಿಣಾಮವಾಗಿದೆ. ಅಸೋಸಿಯೇಶನಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಸೂಚನೆಗಳು ಬುದ್ಧಿವಂತರಾದ ಬಹುಜನರಿಂದ ನಮ್ಮ ಕಡೆಗೆ ಬಂದಿರುವದರಿಂದ ಈ ಸಂಗತಿಯು ಸ್ಪಷ್ಟವಾಗಿ ತಿಳಿದು ಬರುತ್ತದೆ. ಹೆಚ್ಚೆಚ್ಚು ಸ್ಯಾನಿಟರಿ ಕಮಿಟಿಗಳು ಸ್ಥಾಪನವಾಗುತ್ತಿರುವದು ಅಸೋಸಿಯೇಶನದಿಂದ ಏರ್ಪಡಿಸಲ್ಪಟ್ಟ ವ್ಯಾಖ್ಯಾನಗಳಿಗೂ, ಸಭೆಗಳಿಗೂ ಬಹು ಜನರು ಕೂಡುವದು, ತಾಲೂಕ ಮತ್ತು ಮಹಾಲಿನ ಸ್ಥಳಗಳಲ್ಲಿ ವಾರ್ಷಿಕ ಸಭೆಗಳಾಗಿ ಇಡೀ ವರ್ಷ ಮಾಡಿದ ಕೆಲಸದ ಸಿಂಹಾವಲೋಕನ ಮಾಡುವದೂ, ಇವೆಲ್ಲವುಗಳು ನಿಜವಾಗಿಯೂ ಆರೋಗ್ಯರಕ್ಷಣೆಯಕಡೆಗೆ ಜನರಚಿತ್ತವು ಹೊರಳಿರುವದೆಂಬದನ್ನು ತೋರಿಸಿಕೊಡುವ ಲಕ್ಷಣವಾಗಿವೆ. ಸದ್ಗೃಹಸ್ಥರೇ, ಈ ಪರಿಣಾಮವು ತಮ್ಮಿಂದ ಉಂಟಾಗಿದೆ. ತಮ್ಮ ಅಂತಃಕರಣಪೂರ್ವಕವಾದ ನಿಸ್ವಾರ್ಥವಿರಹಿತ ಪರಿಶ್ರಮದಿಂದಲ್ಲದೆ ಅಸೋಸಿಯೇಶನಕ್ಕೆ ಇಷ್ಟು ಯಶಸ್ಸು ದೊರೆಯುತ್ತಿದ್ದಿಲ್ಲ ಮತ್ತು ತನಗಾಗಿ ಮಾಡಿದ ಉತ್ತಮ ಕಲಸವನ್ನು ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಳ್ಳುವದರಲ್ಲಿ ಅಸೋಸಿಯೇಶನವು ಯಾವಾಗಲೂ ತತ್ಪರವಾಗಿರದಿದ್ದರೆ ಅದಕ್ಕೆ ಕರ್ತವ್ಯ ಪರಾಂಙ್ಮುಖತೆಯ ದೋಷವು ತಟ್ಟದಿರದು. ಇದೇ ಉದ್ದೇಶದಿಂದ ಹೋದ ವರ್ಷದಂತೆ ಈ ಸಾರೆಯೂ ಕೆಲವು ಜನರಿಗೆ ಪದಕಗಳನ್ನೂ, ಸರಟೀಫಿಕೇಟುಗಳನ್ನೂ ಬೇರೆ ಇನಾಮುಗಳನ್ನೂ ಕೊಡುವದನ್ನು ಗೊತ್ತುಪಡಿಸಿದೆ. ಈಬಗೆಯ ಪಾರಿತೋಷಕಗಳನ್ನು ಹೊಂದುವವರ ಅಭಿನಂದನವನ್ನು ಮಾಡುವದಲ್ಲದೆ, ಅಸೋಸಿಯೇಶನದ ಕಾರ್ಯಸಾಧನದಲ್ಲಿ ಇದೇಪ್ರಕಾರ ಮನಮುಟ್ಟಿ ಉದ್ಯೋಗ ಮಾಡಿ, ಈ ಮಾದರಿಯ ಸನ್ಮಾನವನ್ನು ಪಡೆಯಬೇಕೆಂಬ ಲವಲವಿಕೆಯು ಬೇರೆಯವರಲ್ಲಿಯೂ ಹುಟ್ಟುವಂತೆ ಎಲ್ಲರೂ ಪ್ರಯತ್ನಿಸುವರೆಂಬ ಆಶೆಯನ್ನು ಕಳೆದ ವರ್ಷದಂತೆಯೇ ಈಗಾದರೂ ಅಸೋಸಿಯೇಶನವು ವ್ಯಕ್ತಪಡಿಸುತ್ತದೆ.

ಇಂಥ ಬಹುಮಾನಗಳಿಗೆ ಯೋಗ್ಯರಾಗುವಂತೆ ವಿಶೇಷವಾಗಿ ಉತ್ತಮ ಕೆಲಸ ಮಾಡಿದವರು ಇನ್ನು ಅನೇಕರಿರುವರೆಂಬದನ್ನು ಅಸೋಸಿಯೇಶನವು ಬಲ್ಲದು. ಆದರೆ ಅಸೋಸಿಯೇಶನದ ಸಾಂಪತ್ತಿಕ ಪರಿಘವನ್ನು ಬೆಳಿಸುವದು ಶಕ್ಯವಾಗಿಲ್ಲದ ಮೂಲಕ ಋಣವೆಚ್ಚವಾಗುವಂಥ ಯಾವಸನ್ಮಾನವನ್ನಾದರೂ ಮುಂದಿನ ಪ್ರಸಂಗಗಳಿಗೆ ಹಿಂದಿಡಬೇಕಾಗುತ್ತದೆ

೧೩. ಈಗಿನ ವ್ಯವಸ್ಥಾಪಕ ಸಭೆಯು ಮತ್ತು ಕಾರ್ಯಕಾರಿ ಅಧಿಕಾರಿಗಳ ಕಾರ್ಯನಿರ್ವಾಹದ ಅವಧಿಯು ಅಸೋಸಿಯೇಶನದ ನಿಯಮಗಳ ೧೧ ನೇ ನಿಯಮಾನುಸಾರ ಮೂರು ವರ್ಷಗಳದಾಗಿದೆ. ಈ ಅವಧಿಯು ಮುಗಿದದರಿಂದ ಈಗ ಅವರು ನಿವೃತ್ತರಾಗುತ್ತಾರೆ. ಮತ್ತು ತಾವೆಲ್ಲರೂ ಈಗ ತಮ್ಮೊಳಗಿನ ಜನರನ್ನು ಆರಿಸಿ ಬೇರೆ ವ್ಯವಸ್ಥಾಪಕ ಸಭೆಯನ್ನು ಗೊತ್ತುಪಡಿಸಬೇಕಾಗಿದೆ. ಯಾವದಾದರೊಂದು ಹೊಸ ಕಾರ್ಯವನ್ನು ಸ್ವಾಭಾವಿಕವಾಗಿಯೇ ಅವರಿಸಿರುವ ಬಹುಬಗೆಯ ಜನಾನುಕೂಲತೆಗಳಿದ್ದರೂ ಈಗ ಅಸೋಸಿಯೇಶನವು ಇರುವ ಪರಿಸ್ಥಿತಿಗೆ ಅದನ್ನು ತಂದು ಮುಟ್ಟಿಸುವದಕ್ಕೆ ಅವಶ್ಯಕವಾದ ಯಾವ ಪರಿಶ್ರಮದಲ್ಲಿಯೂ ಏನೂ ಕೊರತೆ ಉಂಟಾಗಲಿಲ್ಲವೆಂಬದಾಗಿ ಈಗಿನ ವ್ಯವಸ್ಥಾಪಕ ಸಭೆಗೆ ಆತ್ಮವಿಶ್ವಾಸಪೂರ್ವಕವಾದ ಸಮಾಧಾನವುಂಟಾಗಿದೆ. ತಮ್ಮೆಲ್ಲರಿಂದ ದೊರೆತ ಅಂತಃಕರಣಪೂರ್ವಕವಾದ ಸಾಹಾಯಕ್ಕಾಗಿ ವ್ಯವಸ್ಥಾಪಕ ಸಭೆಯವರು ತಮಗೆ ಕೃತಜ್ಞತೆಗಳನ್ನು ಸಮರ್ಪಿಸುವರಲ್ಲದೆ, ಈ ಚಿಕ್ಕ ಮಗುವನ್ನು ತಮ್ಮದಯಾರ್ದ್ರ ಪೋಷಣೆಗೆ ಸಮರ್ಪಿಸಿ, ಅದಕ್ಕೆ ದೀರ್ಘಾಯುಷ್ಯವೂ, ಅತ್ಯಂತ ಮಹತ್ವದ ಲೋಕಕಲ್ಯಾಣವನ್ನೊಳಗೊಂಡಿರುವ ಅದರ ಕಾರ್ಯನಿರ್ವಾಹಲ್ಲಿ ಸಂಪೂರ್ಣವಾದ ಯಶಸ್ಸು ದೊರೆಯುವಂಥ ಉರ್ಜಿತ ಪರಿಸ್ಥಿತಿಯೂ ಉಂಟಾಗಲೆಂಬ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾರೆ.

ಧಾರವಾಡ,
ತಾ॥ ೧೩ನೇ ಆಕ್ಟೋಬರ
೧೯೧೯ ಇಸವಿ

ಗೋಪಾಳ ರಾಮಚಂದ್ರ ಬಾಳೇಕುಂದ್ರಿ,
ಆನರರೀ ಸೆಕ್ರೆಟರಿ,
ಧಾರವಾಡ ಡಿ. ಸ್ಯಾನಿಟರೀ ಅಸೋಸಿಯೇಶನ

ಪ್ರೆಸಿಡೆಂಟರ ಅಭಿಪ್ರಾಯಗಳು.

ಸಭ್ಯ ಗೃಹಸ್ಥರೇ,

ಈಗ ರಾವಬಾಹದ್ದೂರ ರೊದ್ದ ಇವರು ಓದಿ ತೋರಿಸಿದ ಬಹಳ ವಿಸ್ತೃತವಾದ ರಿಪೋರ್ಟಗಿಂತ - ಹೆಚ್ಚಿಗೆ ಹೇಳುವದಿರುವದಿಲ್ಲ. ಆದರೂ ಅಸೋಸಿಯೇಶನವು ಸಮಾಧಾನಕರ ಪ್ರಗತಿಯನ್ನು ಹೊಂದಿದ್ದಕ್ಕೆ ಅದನ್ನು ಅಭಿನಂದಿಸುತ್ತೇನೆ. ಹೋದ ವರ್ಷ ಅಸೋಸಿಯೇಶನದ ಮೆಂಬರರ ಸಂಖ್ಯೆಯೂ ಅದರ ಆದಾಯವೂ ಕಡಿಮೆಯಾದದ್ದಕ್ಕೆ ನಾನು ಟೀಕೆ ಮಾಡಿದ್ದೆನು, ಮತ್ತು ಮೆಂಬರರನ್ನು ಹೆಚ್ಚಿಗೆ ದೊರಕಿಸಿ ಸಂಘದ ಉಪಯುಕ್ತ ಕಾರ್ಯವನ್ನು ಬೆಳಿಸುವದಕ್ಕೆ ನೀವೆಲ್ಲರೂ ಪ್ರಯತ್ನ ಮಾಡುವಿರೆಂದು ಆಶಿಸಿದ್ದೆನು. ಈ ವರ್ಷ ಮೆಂಬರರ ಸಂಖ್ಯೆಯು ಬಹಳ ಹೆಚ್ಚಾಗಿರುವದರಿಂದ ಆ ಸನ್ನ ಆಶೆಯು ಸಂಪೂರ್ಣ ಕೊಸೆಗೊಂಡಿರುವದು, ಇನ್‌ಫ್ಲುಯೆಂಝಾ ಬೇನೆಯು ಎಲ್ಲಕಡೆಗೆ ಉಗ್ರಸ್ವರೂಪದಿಂದ ಹಬ್ಬುತ್ತಲಿರುವ ಈ ಕಾಲದಲ್ಲಿ ಇಂಥ ಅಸೋಸಿಯೇಶನವು ಇರುವದು ಅತ್ಯುತ್ತಮವಾದ ಸಂಗತಿಯಾಗಿದೆ. ಆದರೆ ಅದು ತನಗೆ ಶಕ್ಯವಾದ ಸರ್ವಸಾಧನಗಳಿಂದ ಇಂಥ ಕಠಿಣ ಪ್ರಸಂಗಗಳಲ್ಲಿ ವೈದ್ಯಖಾತೆಯ ಅಧಿಕಾರಿಗಳ ಅಭಿಪ್ರಾಯದಂತೆ ನಡೆಯುವದಕ್ಕೆ ಜನರಿಗೆ ಉಪದೇಶಮಾಡಿ ಹಾಗು ಅವರ ಮನಸ್ಸು ಒಲಿಸಿ ರೋಗವನ್ನು ನಿವಾರಿಸುವ ಪ್ರಯತ್ನವನ್ನು ಮಾಡಬೇಕು. ಸುದೈವದಿಂದ ಲೆ. ಕ. ಫುಕ್ಸರಂಥ ಶಿಫ್ಟಿಲ್‌ಸರ್ಜನರು ನಮ್ಮಲ್ಲಿದ್ದು ಅವರೇ ಈ ಸಂಘದ ವ್ಯವಸ್ಥಾಪಕ ಸಭೆಯ ಚೇರಮನ್‌ರಿರುವರು, ಮತ್ತು ಈ ವಿಷಯವಾಗಿ ಅವರು ಏನು ಹೇಳುತ್ತಾರೆಂಬದನ್ನು ಕೇಳುವದೇ ಈಗಿನ ಮಹತ್ವದ ಕೆಲಸವಾಗಿರುವದೆಂದು ನಾನು ತಿಳಿಯುತ್ತೇನೆ. ನಾವು ಅತಿ ಸುಲಭವಾದ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬದನ್ನು ಹೇಳುವದಕ್ಕೆ ಅವರು ದಯಮಾಡಿ ಒಪ್ಪಿಕೊಂಡಿದ್ದಾರೆ, ಆದದರಿಂದ ನಾನು ಸದ್ಯಕ್ಕೆ ನಿಮ್ಮ ವೇಳೆಯನ್ನು ಹೆಚ್ಚಿಗೆ ತೆಗೆದು ಕೊಳ್ಳದೆ ಲೆ. ಕ. ಫೂಕ್ಸರವರು ಮಾಡುವ ವ್ಯವಹಾರ್ಯ ಉಪದೇಶವನ್ನು ಕೇಳುವದರಲ್ಲಿ ನಮ್ಮ ವೇಳೆಯು ಸದ್ವ್ಯಯ ಮಾಡಿದೆವೆಂದು ಸಮಾಧಾನ ಹೊಂದಿ ಸಭೆಯು ಕೆಲಸವನ್ನು ಮುಗಿಸುವದಕ್ಕೆ ಅವಕಾಶವನ್ನುಂಟುಮಾಡಿಕೊಡುತ್ತೇನೆ ಆದರೂ ಸನ್ಮಾನಿತ ಕಾರ್ಯದರ್ಶಿಗಳು ಮತ್ತು ಬೇರೆ ಅಧಿಕಾರಿಗಳು ಈ ವರ್ಷ ಮಾಡಿದ ಅಪೂರ್ವ ಕೆಲಸ

ಕ್ಕಾಗಿ ಅವರ ಅಭಿನಂದನ ಮಾಡದೆ ನಾನು ನನ್ನ ಭಾಷಣವನ್ನು ಮುಗಿಸಲಾ
ರೆನು. ನಮಗೆ ನಮ್ಮ ಕೆಲಸದಲ್ಲಿ ಸಹಾಯ ಮಾಡುವದಕ್ಕೆ ಹೆಚ್ಚು ಜನ
ಡಾಕ್ಟರರು ದೊರೆಯಬೇಕೆಂದು ನಾನು ಬಯಸುತ್ತೇನೆ. ಆದರೆ ದುರ್ದೈವದಿಂದ
ಯುದ್ಧದ ಮೂಲಕವಾಗಿ ಯೋಗ್ಯತಾ ಸಂಪನ್ನ ಜನರು ದೊರೆಯುವದಿಲ್ಲ
ಮುಂದಿನ ವರ್ಷದ ಸಭೆಯ ಕಾಲಕ್ಕೆ ಕೂಡುವ ಮೊದಲೇ ನ್ಯಾಯವಾದ ಮತ್ತು
ಚಿರಕಾಲ ಬಾಳುವ ಶಾಂತತೆಯು ನೆಲೆಗೊಂಡು ಈಗ ನಮಗೆ ಉಂಟಾಗುವ
ಎಡರುತೊಡರುಗಳೆಲ್ಲ ಸರ್ವಾತ್ಮನಾ ದೂರಾಗಲೆಂದು ಸದಭಿಲಾಷೆಯನ್ನು
ವ್ಯಕ್ತ ಪಡಿಸೋಣ.

ಇ. ಜೆ. ಟರ್ನರ
ಕಲೆಕ್ಟರ ಮತ್ತು ಪ್ರೆಶಿಡೆಂಟ ಡಿ. ಸ್ಯಾ. ಅ
ಧಾರವಾಡ.

ಅ. ಪರಿಶಿಷ್ಟ.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರೀ ಅಸೋಸಿಯೇಶನದ ೧೯೧೫ನೇ ಇಸವಿಯ ಜುಲೈ ತಿಂಗಳ ೩೧ನೇ ತಾರೀಖಿಗೆ ಮುಗಿಯುವ ವರ್ಷದ ಬಗ್ಗೆ ಲೆಖ್ಖಪತ್ರದ ಗೋಷವಾರೆಯು ಪತ್ರಿಕೆಯು.

ಜಮಾ.				ಖರ್ಚು.			
ತಪಶೀಲು.	ರಕಮು.			ತಪಶೀಲು.	ರಕಮು.		
	ರು.				ರು.		
೧೯೧೪ನೇ ಇಸವಿಯ ೧೩ನೇ ಆಗಸ್ಟದ ದಿವಸ ಶಿಲ್ಲ	೫೦೩೬	೧೪	೬	ಕಚೇರಿಯ ಬಾಬತ್ತು. ೨೦ ರುಪಾಯಿ ಕಾಯಂ ಕಾರಕೂನನ ೧೯೧೪ನೇ ಜುಲೈ ತಿಂಗಳ ೧ನೇ ತಾರೀಖಿನಿಂದ ೧೯೧೫ನೇ ಇಸವಿ ಮೇ ೧೯ನೇ ತಾರೀಖಿನವರೆಗೆ ಮತ್ತು			
ವರ್ಗಣಿ:—							
ಸಾಧಾರಣ ಮೆಂಬರ ಜನರಿಂದ ...	೩೦೭೬	೮	೦	ಮೇ ೨೧ನೇ ತಾರೀಖಿನಿಂದ ಜೂನ ೩೧ನೇ			
ಪೋಸ್ಟ ಬ್ಯಾಂಕಿನಲ್ಲಿ ಇಟ್ಟ ಡಿವಾಯಿಟ್ಟಿನ ಮೇಲಿನ ಬಡ್ಡಿ	೧೫೮	೩	೧	ತಾರೀಖಿನವರೆಗೆ ಪಗಾರು ವ ಅವನ ಪ್ರಿವ್ಹಿಲೇ ಜ ರಜೆಯ ಭತ್ತೆ, ಆಗಷ್ಟ ೧ನೇ ತಾರೀಖಿನಿಂದ			
ಕ್ಷಿನಾಯಿನ ಲೆಖ್ಖದಿಂದ ಸಾಲಾ ತೆಗೆದು ಕೊಂಡಿದ್ದು	೬೦	೨	೦	೧೯೧೫ನೇ ಇಸವಿಯ ಎಪ್ರೀಲ ೩೦ನೇ ತಾರೀಖಿನವರೆಗೆ ೨ ರುಪಾಯಿಯಂತೆ ಮತ್ತು ೩ ರುಪಾಯಿಯಂತೆ ೧೯೧೫ನೇ ಇಸವಿಯ ಮೇ ೧೯ನೇ ತಾರೀಖಿನಿಂದ ಜೂನ ೩೦ನೇ ತಾರೀಖಿನ			
ವ್ಯಾಖ್ಯಾತರಿಗೆ ಅಗಾವು ಕೊಟ್ಟದ್ದು ಪರತ..	೫೦	೦	೦				
ಕ್ಷಿನಾಯಿನ್ನದ ರಕ್ಕಂ ತಪ್ಪು ಜಮಾ ಆದದು	೨೫೧೪	೧೪	೦				

೨೦	೫	೬
೨೨	೮	೦
೮೫	೮	೦
೮೮	೧	೦
		೧೨೨

ಜಮಾ.				ಖರ್ಚು.			
ತಪಶೀಲು.		ರಕಮು.		ತಪಶೀಲು.		ರಕಮು.	
೨ ಹಿತ್ತಾಳೆಯ ಶಿಪಾಯಿಯು ಬಿಲ್ಲಿ	೩-೮ ೦			ವ್ಯಾಬಿಕಲ್ಯಾಂಟರ್ನದ ಪ್ರಯೋಗದ ಬಾ॥ ಸಂಬಳಾ ಮುಂತಾದದ್ದು.			
೪ ಕಟಗಿಯ ಬ್ಲಾಕ್ಸ ...	೩೬-೯-೦			ವ್ಯಾಪ್ಯಾಸ ಕೊಡುವ ಅ॥ ಸರ್ಜನರಿಗೆ ಡಿಪ್ಯೂಟೇಶನ ಅಲಾವುನ್ಸ	೬ಲಳ ೧೦ ಲ		
೪ ಕೀಲಿಗಳು ...	೪ ೦ ೦			೮ ರುಪಾಯಿಯ ಶಿಪಾಯಿಯ ಪಗಾರಾ ಮಾಗಾಯಿ ಭತ್ತೆ ಸಹಿತಾ,	೧೦೦-೧೪-೬		
೩ ತೇಗಿನ ಪೆಟಿಗಿ, ೧ ಡೀಲಕಟಿಗಿ ಪೆಟಿಗಿ, ೨ ದೇವದ್ವಾರ ಕಟಿಗಿ ಪೆಟಿಗಿ ಮತ್ತು ನ್ಲಾಯಿಡ ಹಾಕುವ ಪೆಟಿಗಿ ...	೪೯ ೬ ೦			೧೦ ರು॥ ಅಪರೇಟರನ ಪಗಾರಾ ಮಾಗಾಯಿ ಭತ್ತೆ ಸಹಿತಾ	೧೨೪-೧೪-೭	೯೧೧	೭ ೯
೧ ಔಷದ ಸಂಗ್ರಹದ ಪೆಟಿಗಿ	೧೯೪ ೬ ೦			ವ್ಯಾಪ್ಯಾತರ ಪ್ರವಾಸ ಭತ್ತೆ...	೫೮೦-೦ ೦	೬೪೬	೬ ೩
೧ ಪಂಚ ...	೫ ೦-೦			ಅಪರೇಟರನ ಪ್ರವಾಸ ಭತ್ತೆ...	೬೬-೬-೩		
ಒಟ್ಟು	೧೫೦೬-೧೪-೦			ಸಾಮಾನುಗಳ ಬಾಡಿಗಿ ...	...	೧೩೫	೪ ೬
ಅಂತು ಒಟ್ಟು ಜಮಾ	೭೪೫೫-೧-೧೦			ಕಿರಕೋಲು ...	...		
೧೯೧೬-೧೭ ನಾಲಿನಅಖೈರಕ್ಕೆ	೬೫೭೪-೭-೯						
ಒಟ್ಟು ...		೫೫೬೦	೧೫ ೧				
ಒಟ್ಟು ಬೇರೀಜು ...		೬೪೯೭	೧೩ ೭				

ಬಳಿಗೆ ಮತ್ತು ಹಾಸಲು ಕಲ್ಲು ಕ

ತಪಶೀಲು.

೦- ೮-೬ ನಿಂತರಕಂ

೧೧೨.೦ ರೇಲ್ವೆಪಾರ್ಸಲ ಖರ್ಚು

೪- ೦೦ ನಾಲ್ಕು ಟೀನ ಗ್ರಾಮೊಫೋನೋ ಸೂಜಿಗಳು

೦- ೨.೦ ಸ್ಟೋಪ ಪಿನ್ನ

೦- ೮-೦ ಜನರೇಟರ ದುರಸ್ತಿನ ಜಾ॥

೫- ೦.೦ ಬಂದು ಕಂದೀಲು

೨- ೦೦ ಗ್ಯಾಸ ಬರ್ನರು

೧೧೪-೩ ಇತರ ಖರ್ಚು.

೬೩ ಪೌಂಡು ರ್ಯಾಲ್ ಶಿಯಂ ಕಾರಬಾಯಿಡ	೬೩-೨-೦			
ವ್ಯಾಖ್ಯಾತರಿಗೆ ಮುಂಗಡ ಕೊಟ್ಟದ್ದು ಮತ್ತು ತಿರುಗಿ ಬಂದದ್ದು	೫೦ ೦.೦			
ಗಾಡಿಹಾಸಲು ಬಾಡಿಗಿ ಮುಂ ತಾದದ್ದು	೧೩ ಲ ೩	೧೨೬	೧೦	೩
ಅಂತು ಖರ್ಚು ರುಪಾಯಿ ಎರಡು ಸಾವಿರದಾ ನಾಲ್ಕುನೂರಾ ಅರವತ್ತೊಂಬತ್ತು ರೂ ಒಂಭತ್ತು ಆಣೆ ಒಂಭತ್ತು ಪೈ.		೨೪೬೯	೯	೯
೧೯೧೮ ನೇ ಇಶ್ವಿ ಜುಲೈ ತಿಂಗಳ ೩೧ ನೇ ತಾರೀಖಿಗೆ ಶಿಲ್ಕು ಅಂತು ಐದು ಸಾವಿರದಾ ಒಂಭತ್ತುನೂರಾ ಇಪ್ಪತ್ತೈಂಟು ರುಪಾಯಿ ಮೂರು ಆಣೆ ಹತ್ತು ಪೈ.		೫೯೨೭	೩	೧೦
ಪಟ್ಟು ಜಮಾ		೮೪೯೩	೧೩	೩

ಲೆಪ್ಪವನ್ನು ತಯಾರ ಮಾಡಿದವರು.
ಎಸ್ ಎಚ್ ರಾಯಚೂರ
ಕಾರಕೂನ.

ತಪಾಸ ಮಾಡಿದವರು.
ಬಿ ಆರ ಬಾಳೇಕುಂದ್ರಿ,
ಆನರರಿ ಸೆಕ್ರೆಟರಿ,
ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ

ಧಾರವಾಡ ಡಿಸ್ಟ್ರಿಕ್ಟ್ ಸ್ಯಾನಿಟರಿ ಅಸೋಸಿಯೇಶನದ ಪಕ್ಷ ನೀವು ನೇಮಿಸಿದ ಪ್ರಕಾರ ಸಂಸ್ಥೆಗೆ ಒಂದಕ್ಕಿಂತ ಹೆಚ್ಚು ಬಂಡಿಯ
ರಕವುಗಳು ಲೆಕ್ಕಕ್ಕೆ ಹತ್ತಿರುತ್ತವೆಂದು ತಪಾಸುಮಾಡಿ ನಿಮ್ಮ ಬರೋಬರಿ ಇದ್ದಬಗ್ಗೆ ಸರಟೀಫಿಕೇಟು ಕೊಟ್ಟಿದ್ದೇವೆ

ಧಾರವಾಡ,
೧೯೩೦ನೇ ಇ.

ಎಸ್. ಎಸ್. ಕಮುಲಾಪೂರ,
ಆನರರಿ ಆಡಿಟರ
ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ.

ಬ. ಪರಿಶಿಷ್ಟ.

ಧಾರವಾಡ ಜಿಲ್ಲೆ/ತಾಲ್ಲೂಕು ಆಸ್ಪತ್ರೆಗಳಲ್ಲಿ ೧೯೧೯ ನೇ ಸಂಸ್ಥರ ಖಾಯತ್ತು ಅಂದಾಜು ಪಟ್ಟಿ ಕೆಯ್ಯು.

ಜಮಾ.		ಖರ್ಚು.		
ಕಳೆದ ಸಾಲು ಮೇಣಗಿ ...	೩೦೦೦	ಕಛೇರಿಯ ಖಾಯತ್ತು.		
ಪ್ರೊವಿನ್ಶಿಯಲ್ ಹಾಸ್ಪಿಟಲ್ ಫಂಡಿನಿಂದ ಬರಿಯದು ...	೧೪೦	೧೦ ರುಪಾಯಿಯು ಒಪ್ಪಿ ಕಾರಕೂನ ...	೩೦೦	೧೨೮
೮೫೦೦ ಮಾಲಿಯೇ ಖಾಂಡಿ	೪೫	೧೫ ರುಪಾ ಒಪ್ಪಿ ಹೆಚ್ಚಾಗಿಯೇ ಕಾರಕೂನ	...	...
೫ ಸೇರಿಯ ಖಾಡಿ	...	೮ ರುಪಾ ಒಪ್ಪಿ ಕಿಷಾಯಿ ಮಾಡುವ	೧೦೦	೬೫
ಕಟಿಕಾಲ್ಗಳು ...	೧೦	ಜುತ್ತಿ ಸಹಿತಾ ...	...	...
		ಹುಡಾದ ಜುತ್ತಿ ...	...	೨೮
		ಸಾದಿವಾಳ ...	...	೧೯೧
		ಪ್ರೊವಿನ್ಶಿಯಲ್ ಹಾಸ್ಪಿಟಲ್ ಫಂಡಿನ	೬೦೦	೧೦೪
		ಸ್ಕಂಪೌಂಡ ಖರ್ಚು ...	೧೦೦೦	೪೫
		ಸ್ಥಳಿಕ ಸಂಸ್ಥೆ ಇಂದ ಸಂಬಳವು	೧೫	...
		ಸ್ಥಳಿಕ ಬರಿಯದು ...	೧೦೦	...
		ಜುತ್ತಿಗೆ ಕೊಂಡ ಮಾಡಿದ ಬಗ್ಗೆ ಖರ್ಚು.		

ವಾರ್ಷಿಕ ಸಭೆಯ ಖರ್ಚು ...	೧೫	೧೫	೧೫
ಕಿರಕೋಳ ಖರ್ಚು	೪೧	೩	೧೩
ವ್ಯಾಖ್ಯಾನದ ಖರ್ಚು.			
ಭತ್ತೆ	೧೮೦೦	೬೩೫	೧೦೬೨
ಪ್ರವಾಸ ಭತ್ತೆ ... —	೬೦೦	೫೮೦	೮೦೫
೮ ರು॥ ಒಬ್ಬ ಶಿಪಾಯಿ ಮಾಗಾಯಿ ಭತ್ತೆಸಹಿತ	೧೨೦	೧೦೧	೯೬
ಶಿಪಾಯಿಯ ಭತ್ತೆ ವ ರೇಲ್ವೆ ಖರ್ಚು ...	೮೦	...	...
೧೦ ರು॥ ಒಬ್ಬ ಆಪರೇಟರನ ಮಾಗಾಯಿ ಭತ್ತೆಸಹಿತ	೧೪೦	೧೨೫	೧೨೦
ಆಪರೇಟರನ ಪ್ರವಾಸ ಭತ್ತೆ ...	೮೦	೬೬	೭೭
ಸಾಮಾನುಗಳ ಮಾಡಗಿ... ...	೧೫೦	೧೩೫	೧೨೧
ಡೆಡ್ಡಿ ನ್ಯಾಟಕು ಸಾಮಾನುಗಳ ಖರೀದಿ ..	೧೦	೫	...
ಕಿರಕೋಳು	೧೦೦	೭೨	೪೬
ಅಕಲ್ಪಿತ ಖರ್ಚು	೧೦೦	...	...
ಒಟ್ಟು ಖರ್ಚು ...	೪೬೭೨	೨೩೧೫	೩೬೯೯
ವರ್ಷದ ಅಖ್ಖೆರಕ್ಕೆ ಉಳಿಯುವ ಶಿಲ್ಕು...	೪೪೫೧	...	...
ಒಟ್ಟು ಜೀರೀಜು ...	೯೧೭೩	...	...

ಜೀರೀಜು ...	೩೧೯೫	೩೨೦೫	೨೦೫೩
ದಿನ ವರ್ಷದ ಶಿಲ್ಕಿನ ಜಮಾ...	೫೯೨೮	...	...
ಒಟ್ಟು ಜೀರೀಜು ...	೯೧೭೩	...	...

ಧಾರವಾಡ,
೩॥ ೧೩-೧೦-೧೯೧೮.

ಜಿ. ಆರ. ಬಾಳೇಕುಂದ್ರಿ,
ಆನರರಿ ಸೆಕ್ರೆಟರಿ, ಡಿ. ನ್ಯಾ. ಅ.

ಸನ್ ೧೯೧೭-೧೮ನೇ ಸಾಲಿನಲ್ಲಿ ಅಸೋಸಿಯೇಶನದಿಂದ ಬಹುಮಾನ ಹೊಂದಿದ ಸದ್ಗೃಹಸ್ಥರ ಯಾದಿಯು.

ಬೆಳ್ಳಿ ಪದಕಗಳನ್ನು ಹೊಂದಿದವರು

೧. ಮಿ॥ ಆರ್. ಬಿ. ಹೆಬಳೆ, ಅನಲ ಕಾರಕೂನ ಧಾರವಾಡ.
೨. ,, ಹಣಮಂತಗೌಡಾ ಪಾಟೀಲ ಲೊ. ಸೆ. ಕೊಣ್ಣೂರ.
೩. ,, ಅಡಿವೆಪ್ಪಾ ದೊಡ್ಡಶಿವಲಿಂಗಪ್ಪಾ ಕುಬಸದ ತಾಲೂಕ ಜೇರಮನ ಕೊಡ
೪. ,, ಮಾಹಾದೇವ ಶಿವಾಜಿ ಕುಲಕರ್ಣಿ, ತಾಲೂಕ ಜೇರಮನ ಗದಗ.
೫. ,, ಎಚ್. ಜಿ. ದೇಶಪಾಂಡೆ, ಅ॥ ಪೆ॥ ಎ॥ ಇನಸ್ಪೆಕ್ಟರ ಧಾರವಾಡ.
೬. ,, ಪ್ಹಿ. ಆರ್. ಮನೋಳಿ, ಅ॥ ಪೆ॥ ಎ॥ ಇನಸ್ಪೆಕ್ಟರ ಧಾರವಾಡ.

ಸರಟೇಫಿಕೀಟುಗಳನ್ನು ಹೊಂದಿದವರು.

೧. ಮಿ॥ ಸೋಮಪ್ಪಾ ಪೋಲೀಸ ಪಾಟೀಲ, ಅಮ್ಮಿನಭಾವಿ.
೨. ,, ರಾಘವೇಂದ್ರಾಚಾರ್ಯ ಐರಣಿ, ಲೊ॥ ಸೆ॥ ಐರಣಿ.
೩. ,, ಬಸಲಿಂಗಪ್ಪಾ ಕುಲಕರ್ಣಿ, ಲೊ॥ ಸೆ॥ ಹಲ್ಯಾಪೂರ.
೪. ,, ಗುರನಾಥ ಶಿವಾಜಿ ಕುಲಕರ್ಣಿ, ಲೊ॥ ಸೆ॥ ಅಳಗವಾಡಿ.
೫. ,, ಗುರಶಿದ್ಧಪ್ಪಾ ಅಡಿವೆಪ್ಪಾ ಅಂಗಡಿ, ಲೊ॥ ಸೆ॥ ಸೂಡಿ.
೬. ,, ಶಿವಪ್ಪಾ ಕುಲಕರ್ಣಿ, ಸರಕಲ್ ಇನಸ್ಪೆಕ್ಟರ, ಮುಂಡರಗಿ.
೭. ,, ಪ್ಹಿ. ಆರ್. ಕುಲಕರ್ಣಿ, ಹೆಡ್ಡ ಮಾಸ್ತರ ಜಕ್ಕಲಿ.
೮. ,, ಎಮ್. ಬಿ. ಪಾಟೀಲ, ಶಾಲಾ ಮಾಸ್ತರ ಧುಂಡಸಿ.
೯. ,, ಎಲ್. ಜೀ. ನಾಡಗೀರ, ಶಾಲಾ ಮಾಸ್ತರ ಕೋಣ
೧೦. ,, ಕೇ. ಎನ್. ಇಂಗಳಗಿ, ಸೊರಟೂರ ಗೆಂಡುಹುಡುಗರ ಶಾಲೆಯ ಮಾಸ್ತರ.

ARS15 APP90

1919 ಮತ್ತು 1920ರ

ಸಂಪ್ರದಾಯ ಚರಿತ್ರೆ ಮಾಲೆಯ ಮೊದಲ ಸಂಪುಟ

ಕರ್ನಾಟಕ ಸಂಘ ಶಿವಮೊಗ್ಗ